# ಕನ್ನಡ ಕಸ್ತೂರಿ

ಪ್ರಧಾನ ಸಂಪಾದಕರು : ಡಾ ಎಮ್. ಜಿ. ಕಟ್ಟಿ



ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ
ರ್ಯಾಂಗ್ಲರ ಡಿ. ಸಿ. ಪಾವಟೆ, ಎಮ್.ಎ. ( ಕ್ಯಾಂಟಬ್ )

# ಜೀವನ ಶಿಕ್ಷಣ


— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಎಮ್. ಜಿ. ಹಂದ್ರಾಳ, ಬಿ.ಎ.(ಆನರ್ಸ),ಎಮ್.ಈಡಿ.,ಡಿ.ಬಿ.ಈಡಿ ,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾ

ಪ್ರಧಾನ ಸಂಪಾದಕರು : ಶ್ರೀ ಎಮ್. ಜಿ. ಕಟ್ಟಿ, ಬಿ.ಎ.(ಆನರ್ಸ), ಬಿ.ಟಿ.,ಡಿ.ಬಿ.ಈ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾ

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾ

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.;ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾ
(ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ
ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ಕಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂ



ಸಂಪುಟ ೯೫ ಆಗಸ್ಟ ೧೯೫೯ ಸಂಚಿಕೆ ೪


## — ಪರಿವಿಡಿ —


| | | | |
|---|---|---|---|
| ೧ | ಸಂಪಾದಕೀಯ | .... | |
| ೨ | ಮನರಂಜನ ಕಾರ್ಯಕ್ರಮಗಳ ಸಂಘಟನೆ | .... | ಶ್ರೀ ಆರ್. ಎಸ್. ಸೂರ್ಯವಂಶಿ<br>ಶ್ರೀ ಎಸ್. ಎಸ್. ನಾಡಕರ್ಣಿ |
| ೩ | ಭಾಷೆಯೂ ತನ್ನ ಮನಸ್ಸಿನ ಭಾವನೆಯನ್ನು ತಿಳಿಸುವ ಸಹಜ ಪ್ರವೃತ್ತಿಯೂ | .... | ಶ್ರೀ ತಟ್ಟಿ ಶಾಮರಾಯರು |
| ೪ | ಜೀವನ ಶಿಕ್ಷಣ ಶಾಲೆಗಳಲ್ಲಿ ಮೌಲ್ಯಗಳನ್ನು ಅಳೆಯುವ ಒರೆಗಳು | .... | — |
| ೫ | ಜೀವನ ಶಿಕ್ಷಣ ಶಾಲೆಗಳಲ್ಲಿ ಮೌಲ್ಯಮಾಪನ | .... | ಶ್ರೀ ಎನ್. ವ್ಹಿ. ಥೊಬ್ಬಿ |
| ೬ | ಮೈಸೂರು ರಾಜ್ಯದ ಹೊಸ ಅಭ್ಯಾಸ ಪತ್ರಿಕೆ | .... | ಶ್ರೀ ಎಚ್. ಜಿ. ಜೋತಿ |
| ೭ | ವನ ಮಹೋತ್ಸವ | .... | ಶ್ರೀ ಮ. ಬ. ಶ್ಯಾಡಗುಪ್ಪಿ |
| ೮ | ೧ನೆಯ ವರ್ಗದ ಮಕ್ಕಳಿಗೆ ಓದುಕಲಿಸುವದು | .... | ಶ್ರೀ ರಾ. ಭಿ. ಸೊನಗಾರ |
| ೯ | ಹಾಜರಿ ಸುಧಾರಣೆಗಾಗಿ - ಶಿಸ್ತವೃತ್ತಿಗಳು | .... | ಕುಮಾರಿ ಸುಶೀಲಾ ಹುಲಸೋಗಿ |
| ೧೦ | ಜೀವನ ಶಿಕ್ಷಣ ಪ್ರಪಂಚದಲ್ಲಿ ವಾರ್ತೆಗಳು | .... | — |

# ಸಂಪಾದಕೀಯ

## [೧] ಪ್ರಗತಿ ಪತ್ರಿಕೆಗಳು :—

ಜೂನ ಸಂಚಿಕೆಯಲ್ಲಿ ಅಂದಾಜು ಪತ್ರಿಕೆಗಳನ್ನು ಕುರಿತು ವಿಚಾರಗಳನ್ನು ಶಿಕ್ಷಕರಿದುರಿಗೆ ಇಡಲಾಗಿತ್ತು. ಈಗ ಶಾಲೆಗಳಲ್ಲಿ ಅಭ್ಯಾಸವು ಭರದಿಂದ ಸಾಗಿವೆ. ಆದ್ದರಿಂದ ಬಾಲಕರ ಪ್ರಗತಿಯನ್ನು ತಿಳಿದುಕೊಳ್ಳುವದು ಅವಶ್ಯವಾದುದು.

ದೈನಂದಿನ ಕಾರ್ಯಕಲಾಪಗಳಲ್ಲಿ ಬಾಲಕರು ಭಾಗ ವಹಿಸಿದ ಬಗ್ಗೆ, ಪ್ರತಿದಿನ ಅವರು ಮೂಲೋದ್ಯೋಗದಲ್ಲಿ ಮಾಡಿದ ಬೇರೆ ಬೇರೆ ಕಾರ್ಯಾಂಗಗಳ ಬಗ್ಗೆ, ಬಾಲಕರು ಹಾಜರಿ, ಪ್ರಾರ್ಥನೆ, ಸಫಾಯಿ, ಆಟ, ದಿನಾಚರಣೆ ಮತ್ತು ಗುಂಪುವಾರ ಕಾರ್ಯ ಇವುಗಳಲ್ಲಿ ತೋರಿದ ಆಸ್ಥೆ (ಅದು ನೈಜವಾಗಿದೆಯೋ, ಢಾಂಬಿಕವಾಗಿದೆಯೋ) ಮೊದಲಾದವುಗಳ ಬಗ್ಗೆ, ಅದಲ್ಲದೆ ಅಪ್ರತ್ಯಕ್ಷವಾಗಿ ಕಾರ್ಯಗಳಲ್ಲಿ ಕಂಡು ಬರುವ ಬಾಲಕರ ಶಾರೀರಿಕ, ಮಾನಸಿಕ, ಬೌದ್ಧಿಕ ಮತ್ತು ನೈತಿಕ ಯೋಗ್ಯತೆ ಮೊದಲಾದವುಗಳನ್ನು ಕುರಿತು, ದೈನಂದಿನ ಅಭ್ಯಾಸದಲ್ಲಿ ಬಾಲಕರು ತೋರಿಸಿದ ಪ್ರಗತಿ, ತಾವು ಮಾಡಿದ ತಪ್ಪುಗಳನ್ನು ಶಿಕ್ಷಕರು ತಿದ್ದಿಕೊಟ್ಟನಂತರ ಅವುಗಳನ್ನು ಸರಿಯಾಗಿ ಲಕ್ಷದಲ್ಲಿ ಇಡಲಿಕ್ಕೆ ಬಾಲಕರು ಮಾಡಿದ ಪ್ರಯತ್ನಗಳು ಮತ್ತು ಪ್ರಗತಿ, ಉಜಳಣಿ ಕಾರ್ಯದಲ್ಲಿ ಬಾಲಕರು ತೋರಿಸಿದ ಪ್ರಗತಿ, ಬಾಲಕರು ಬೇರೆ ಬೇರೆ ವಿಷಯಗಳ ಅಭ್ಯಾಸಕ್ಕಾಗಿ ಬರೆಹಗಳ ಪುಸ್ತಕಗಳನ್ನು ನಿರೀಕ್ಷಿಸಿ ಅದರಲ್ಲಿ ಕಂಡುಬಂದ ಪ್ರಗತಿ ( ಇಲ್ಲಿ ಬಾಲಕರು ಸ್ವತಃ ಪರಿಶ್ರಮ ವಹಿಸಿ ಬರೆಯುವರೋ, ಅಥವಾ ಎರಡನೆಯವರಿಂದ ನಕಲು ಮಾಡಿದರೋ ನೋಡಬೇಕು. ) ಮತ್ತು ಬೇರೆ ಬೇರೆ ವಿಷಯಗಳಲ್ಲಿ ( ಪುಸ್ತಕೀಯ ಮತ್ತು ಪ್ರಾಯೋಗಿಕ) ಬಾಲಕರು ವಾರದ ಮತ್ತು ಮಾಸಿಕ ಪರೀಕ್ಷೆಗಳಲ್ಲಿ ತೋರಿಸಿದ ಪ್ರಗತಿ, ಈ ಪ್ರಕಾರ ಬಾಲಕರಿಗೆ ಭಾರವೆನಿಸದಂತೆ ಹೆಜ್ಜೆ ಹೆಜ್ಜೆಗೆ ಅವರ ಪ್ರಗತಿಯನ್ನು ನಿರೀಕ್ಷಿಸಿ ನಿರ್ದಿಷ್ಟ ಕ್ರಮದಲ್ಲಿ ಶಿಕ್ಷಕರು ಲಕ್ಷಗೊಟ್ಟು ವಿವರಗಳನ್ನು ಮತ್ತು ಗುಣಗಳನ್ನು ಬರೆದಿಡುತ್ತ ಸಾಗಬೇಕು. ಅಂದರೆ ವಾರ್ಷಿಕ ಪರೀಕ್ಷೆ ಒಂದು ಭೂತವಾಗಲಾರದು. ಈ ಎಲ್ಲ ದೈನಂದಿನ ಸಣ್ಣ ಸಣ್ಣ ಕಾರ್ಯಗಳಲ್ಲಿಯ ಪ್ರಗತಿಯ ವಿವರಗಳು ವಾರ್ಷಿಕ ಪರೀಕ್ಷೆಯ ಪ್ರಗತಿಯನ್ನು ಅಳೆಯಲು ಎರಡನೆಯ ಸಾಧನವಾಗುತ್ತವೆ.

ಬಾಲಕರಿಗೆ ತಾವು ಸರಿಯಾಗಿ ಸಾಗುತ್ತಿದ್ದೇವೆ, ಶಿಕ್ಷಕರು ಕೊಟ್ಟ ಸೂಚನೆಗಳನ್ನು ಅನುಸರಿಸಿ ಹೆಚ್ಚಿನ ಪ್ರಗತಿಯನ್ನು ತೋರಿಸಬೇಕು ಎಂಬ ಆಸ್ಥೆ ಸ್ಥಿರವಾಗಿ ನೆಲಿಸುವದು; ಪ್ರತಿದಿನ ಮಾಡಿದ ಕಾರ್ಯಗಳ ಬಗ್ಗೆ ಗೌರವ ನೆಲಿಸುವದು. ಕೇವಲ ವಾರ್ಷಿಕ ಪರೀಕ್ಷೆಗೆ ಮಹತ್ವಕೊಟ್ಟರೆ ದೈನಂದಿನ ಕಾರ್ಯಗಳಿಗೆ ಮಹತ್ವವು ಕಡಿಮೆಯಾಗಿ ಅಭ್ಯಾಸದ ಬಂಡಿಯು ಒಗ್ಗಾಲಿ ಹಿಡಿದು, ಪ್ರಗತಿಯ ಸ್ಥಿರತೆ ತಪ್ಪುವದು. ದೈನಂದಿನ ಕಾರ್ಯಗಳ ಪ್ರಗತಿಯ ವಿವರಗಳನ್ನು ಲಕ್ಷಗೊಟ್ಟು ನಿರೀಕ್ಷಿಸಿ ನಮೂದಿಸುತ್ತ ಸಾಗುವದರಿಂದ ಹಲವಾರು ಶೈಕ್ಷಣಿಕ ಲಾಭಗಳಿವೆ. ಶಿಕ್ಷಕರು ತಪ್ಪುಗಳನ್ನು ಮಾಡುವ ಬಾಲಕರಿಗೆ ಪ್ರತಿದಿನ ಸೂಚನೆಗಳನ್ನು ಕೊಟ್ಟು, ತಿದ್ದಲು ಸಾಧ್ಯವಾಗುವದು.

ಹೀಗೆ ಶಿಕ್ಷಕರು ಬಾಲಕರ ಕಾರ್ಯಗಳನ್ನು ನಿರೀಕ್ಷಿಸಿ, ಅವರಿಗೆ ಸೂಚನೆಗಳನ್ನುಕೊಟ್ಟು, ಅವುಗಳಲೀ ಅವರ ಕಾರ್ಯಗಳಲ್ಲಿ ತಿದ್ದುಪಡಿಗಳನ್ನು ಮಾಡಿಸಿ ಪ್ರಗತಿ ಹೆಚ್ಚಿದ್ದನ್ನು ಮನಗಂಡರೆ, ಬಾಲಕರಿಗೂ, ಶಿಕ್ಷಕರಿಗೂ ಎಷ್ಟೊಂದು ಆನಂದವಾಗುತ್ತಿದೆ ಎಂಬುದನ್ನು ಶಿಕ್ಷಕರಾದವರೇ ಬಲ್ಲರು. ಶಿಕ್ಷಕರು ಮಾತ್ರ ಈ ನಿರೀಕ್ಷಣೆಯ ಕಾರ್ಯವನ್ನು ಶ್ರಮವಹಿಸಿ ದಿನಂಪ್ರತಿ ಬೇಸರಿಯದೆ ಸೂಕ್ಷ್ಮ ನಿರೀಕ್ಷಣೆಯಿಂದ ಸಾಗಿಸಿ, ಪ್ರಗತಿಯ ವಿವರಗಳನ್ನು ಇಡಬೇಕು. ಹೀಗೆ ಮಾಡಿದಾಗ ವಾರ್ಷಿಕ ಪರೀಕ್ಷೆಯಲ್ಲಿ ಕಂಡು ಬರುವ ಪ್ರಗತಿಗೆ ಬೆಲೆ ಬರುವದು. ದೈನಂದಿನ ಪ್ರಗತಿ, ವಾರ್ಷಿಕ ಪ್ರಗತಿ ಇವುಗಳಲ್ಲಿ ಒಂದು ನಿರ್ದಿಷ್ಟ ಅಧಿಕ ಸಂಬಂಧವಿದ್ದುದು ಕಂಡು ಬರುವದು,

ಹೀಗೆ ಮಾಡಿದಾಗ ಆಲಸ್ಯತನಕ್ಕೆ (ಶಿಕ್ಷಕರಿಗೂ ಬಾಲಕರಿಗೂ) ಆಸ್ಪದ ಕೊಡೆಯುವದಿಲ್ಲ. ಈ ಪ್ರಕಾರ ಶ್ರಮವಹಿಸಿದ ಬಾಲಕರಲ್ಲಿ ಕಂಡು ಬಂದ ಪ್ರಗತಿಗೆ ಬೆಲೆ ಬರುವದು. ಶಿಕ್ಷಕರ ಗೌರವ ಹೆಚ್ಚುವದು. ಬಾಲಕರ ಯೋಗ್ಯತೆಯನ್ನು ಶಿಕ್ಷಕರು ಸ್ಪಷ್ಟವಾಗಿ ತಿಳಿದು ಕೊಳ್ಳುವರು.

ಹೀಗೆ ಸಾಗಿದಾಗ ಶಿಕ್ಷಕರ ಬಗ್ಗೆ ಪಾಲಕರು ಸಹ ಗೌರವ ತಾಳುವರು. ಹೀಗಾದಾಗಲೇ ಶಾಲೆಯು ಬಾಲಕರ ಸರ್ವತೋಮುಖ ಬೆಳವಣಿಗೆಯನ್ನು ಸಾಧಿಸುವ ಗರಡೀ ಮನೆ ಆಗುವದು. ಆದ್ದರಿಂದ ಶಿಕ್ಷಕರು ಮೇಲ್ವಿಚಾರಕರ ಮಾರ್ಗದರ್ಶನದಲ್ಲಿ ಬಾಲಕರ ದೈನಂದಿನ ಕಾರ್ಯಗಳಲ್ಲಿ ಕಂಡು ಬಂದ ಪ್ರಗತಿಯನ್ನು ನಮೂದಿಸುವ ಬಗ್ಗೆ ಬೇರೆ ಬೇರೆ ಪತ್ರಿಕೆಗಳನ್ನು ಇಡುವದು ಎಷ್ಟೊಂದು ಅವಶ್ಯವಾದುದು. ಮತ್ತು ದೈಕ್ಷಣಿಕ ಬೆಲೆಯುಳ್ಳದ್ದೆಂಬುದನ್ನು ಇಲ್ಲಿ ವಿವರಿಸಲಾಗಿದೆ.

## [೨] ರಾಷ್ಟ್ರೀಯ ದಿನಗಳು :—

ಅ ] ಲೋಕಮಾನ್ಯ ಟಿಳಕರ ಪುಣ್ಯತಿಥಿ :—

ಆಗಷ್ಟ ೧. ಲೋಕಮಾನ್ಯ ಟಿಳಕರು 'ಸ್ವರಾಜ್ಯವೇ ನನ್ನ ಜನ್ಮ ಸಿದ್ಧ ಹಕ್ಕು" ಎಂದು ಘೋಷಿಸಿದರು. ಕಾರಾಗೃಹದಲ್ಲಿದ್ದಾಗ 'ಗೀತಾ ರಹಸ್ಯ' ಎಂಬ ಅಮೌಲ್ಯ ಗ್ರಂಥವನ್ನು ಬರೆದರು. ಗಣಿತ, ಸಂಸ್ಕೃತ ಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿದ್ದರು. ರಾಷ್ಟ್ರೀಯ ಹಬ್ಬಗಳ ಸಂಸ್ಥಾಪಕರು. ಈ ವಿಧವಾಗಿ ಲೋಕಮಾನ್ಯ ಟಿಳಕರ ಪರಿಚಯವನ್ನು ಬಾಲಕರಿಗೆ ಈ ಸಂದರ್ಭದಲ್ಲಿ ಮಾಡಿಕೊಡಬೇಕು.

ಬ ] ರವೀಂದ್ರರ ಪುಣ್ಯತಿಥಿ :— ಆಗಷ್ಟ ೭. ಈ ದಿನವನ್ನು ಆಚರಿಸುವಾಗ ರವೀಂದ್ರರ ಕೃತಿಗಳ ಪರಿಚಯವು ಬಾಲಕರಿಗೆ ಆಗುವಂತೆ ಕಾರ್ಯಗಳನ್ನು ಏರ್ಪಡಿಸಬೇಕು. ರವೀಂದ್ರರು ಜಗತ್ತಿಗೆ ಮಾನ್ಯರಾದ ಕವಿಗಳು, ಭಾರತೀಯರು, ಶಿಕ್ಷಣ ಪ್ರಪಂಚದಲ್ಲಿ ಹೊಸ ದೃಷ್ಟಿಯನ್ನು ತೋರಿಸಿ ಶಾಂತಿನಿಕೇತನದಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು. ಇತ್ಯಾದಿ ಸಂಗತಿಗಳನ್ನು ಬಾಲಕರಿಗೆ ತಿಳಿಸಬೇಕು.

ಕ ] ಸ್ವಾತಂತ್ರ್ಯ ದಿನೋತ್ಸವ :— ಆಗಷ್ಟ ೧೫. ಈ ದಿನದ ಮಹತ್ವವು ಹಲವಾರು ಮುಖಗಳಿಂದ ಬಾಲಕರಿಗೆ ತಿಳಿದು ಬರುವಂತೆ ದೈಕ್ಷಣಿಕ ಯೋಜನೆಗಳನ್ನು ಕೈಕೊಳ್ಳಬಹುದು. ಭಾರತ ರಾಷ್ಟ್ರೋದ್ಧಾರಕರ ಬಗ್ಗೆ ಪರಿಚಯ ಮಾಡಿಕೊಡಬೇಕು. ರಾಷ್ಟ್ರಗೀತೆಯನ್ನು ಪ್ರತಿಯೊಬ್ಬ ಬಾಲಕನು ಚನ್ನಾಗಿ ಅನ್ನಲು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ರೂಢಿ ಮಾಡಿಸಬೇಕು. ಇಂಥ ದಿನಗಳ ಆಚರಣೆಯಿಂದ ಸಾಮುದಾಯಿಕ ರೀತಿಯಲ್ಲಿ ಜಾಗ್ರತಿ ಹೆಚ್ಚುವದು.

---

## ಅಭಿನಂದನೆಗಳು

ನಮ್ಮ ಜೀವನ ಶಿಕ್ಷಣ ಮಾಸಪತ್ರಿಕೆಯ ಸಂಪಾದಕ ಮಂಡಲದ ಸದಸ್ಯರಾದ ಶ್ರೀ ಶ್ಯಾಮರಾವ ತಟ್ಟಿಯವರು "ಆರ್ಯ ದ್ರಾವಿಡ ಭಾಷೆಗಳ ಸಂಬಂಧ" ಎಂಬ ವಿಷಯದ ಮೇಲೆ ಸಂಶೋಧನಾತ್ಮಕ ಪ್ರಬಂಧವನ್ನು ಬರೆದು ಅದನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದವರು ಅವರ ಈ ಕಾರ್ಯವನ್ನು ಪರೀಕ್ಷಿಸಿ ಅವರಿಗೆ ಎಮ್. ಎ. (ಸಂಶೋಧನದಿಂದ) ಪದವಿಯನ್ನು ದಯಪಾಲಿಸಿದ್ದಾರೆ.

ಶ್ರೀ ತಟ್ಟಿ ಶ್ಯಾಮರಾಯರು ಸೇವಾನಿವೃತ್ತರಾದ ಮೇಲೆ ಸಹ ಶಾಂತರೀತಿಯಿಂದ ಸತತ ಪ್ರಯತ್ನದಿಂದ ವಿದ್ಯಾವ್ಯಾಸಂಗ ಮಾಡುತ್ತ ಎಮ್. ಎ. ಪದವಿಯನ್ನು ಪಡೆದುದಕ್ಕಾಗಿ ಜೀವನ ಶಿಕ್ಷಣ ಸಂಪಾದಕ ಮಂಡಲದವರು ಅವರಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಾರೆ.

ಪ್ರಧಾನ ಸಂಪಾದಕರು.

---

## — ಬಿನ್ನಹ —

ಪ್ರತಿ ತಿಂಗಳು ೧೫ನೆಯ ದಿನಾಂಕಕ್ಕೆ "ಜೀವನ ಶಿಕ್ಷಣ" ಪತ್ರಿಕೆಯ ಸಂಚಿಕೆಗಳನ್ನು ನಿಮ್ಮ ನಿಮ್ಮ ವಿಳಾಸಕ್ಕೆ ಕಳುಹಿಸಲಾಗುತ್ತಿದೆ. ಇದರಲ್ಲಿ ಏನೂ ವ್ಯತ್ಯಯ ಬರಲಾರದು. ಹೀಗಿದ್ದೂ ಪತ್ರಿಕೆಗಳು ನಿಮಗೆ ತಲುಪದಿದ್ದಲ್ಲಿ ಸ್ಥಳಿಕ ಅಂಚೆ ಅಧಿಕಾರಿಗಳಿಗೆ ತಪ್ಪದೇ ಬರೆದುಕೊಳ್ಳಬೇಕು.

—ಪ್ರಧಾನ ಸಂಪಾದಕರು

# ಮನರಂಜನ ಕಾರ್ಯಕ್ರಮಗಳ ಸಂಘಟನೆ

ಲೇಖಕರು : ಶ್ರೀ ಆರ್. ಎಸ್. ಸೂರ್ಯವಂಶಿ, ಬಿ. ಎ. (ಆನರ್ಸ) ಡಿ. ಇಡಿ.
ಶ್ರೀ ಎಸ್. ಎಸ್. ನಾಡಕರ್ಣಿ, ಬಿ. ಎಸ್‌ಸಿ. (ಆನರ್ಸ) ಡಿ.ಇಡಿ.

ಈಜೆಗೆ ಶಾಲಾ ಜೀವನದಲ್ಲಿ ಮನರಂಜನೆಯ ಕಾರ್ಯಕ್ರಮಗಳು ಅಗ್ರಸ್ಥಾನವನ್ನು ಪಡೆದಿರುತ್ತವೆ. ಆದರೆ ಮನರಂಜನೆಯ ಕಾರ್ಯಕ್ರಮಗಳನ್ನು ಮಾಡುವದೆಂದು ಕೇವಲ ಮುಖಕ್ಕೆ ಬಣ್ಣವನ್ನು ಬಳೆದುಕೊಂಡು ಮನಬಲ್ಲಂತೆ ಕುಣಿದಾಡಿ ಮತ್ತು ಮಾತನಾಡಿ ಪ್ರೇಕ್ಷಕರನ್ನು ನಗಿಸಿದರೆ ಅದು ಮನರಂಜನ ಕಾರ್ಯಕ್ರಮ ವಾಗುವದಿಲ್ಲ. ಅವುಗಳನ್ನು ಆದಷ್ಟು ಶೈಕ್ಷಣಿಕ ದೃಷ್ಟಿಯಿಂದ ಏರ್ಪಡಿಸಿರಬೇಕು.

ಮಕ್ಕಳಲ್ಲಿ ನಾಟಕ ಪ್ರವೃತ್ತಿಯು ಸರ್ವಸಾಧಾರಣ ವಾಗಿ ಇದ್ದೇ ಇರುತ್ತದೆ. ಅದ್ದರಿಂದ ಮಕ್ಕಳಲ್ಲಿದ್ದ ಸುಪ್ತ ಶಕ್ತಿಯನ್ನು ಮಗುವಿನ ವೈಯಕ್ತಿಕ ಬೆಳವಣಿಗೆಗಾಗಿ ಮತ್ತು ಎರಡನೆಯವರ ಸಂತೋಷಕ್ಕಾಗಿ ಸದುಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಅಂತಹ ಹುದುಗಿದ ಶಕ್ತಿಯನ್ನು ಬೆಳವಣಿಗೆ ಮಾಡಲು ಯೋಗ್ಯವಾದ ವಾತಾವರಣದ ಅವಶ್ಯಕತೆ ಎನಿಸುತ್ತದೆ. ಇದು ಕಾರಣ ಮಕ್ಕಳ ಮನರಂಜನ ಕಾರ್ಯಕ್ರಮಗಳು ಈ ದೆಸೆಯಲ್ಲಿ ಸುಪ್ರಸಂಗವೆಂದು ಹೇಳಬಹುದು.

ಪ್ರತಿಯೊಬ್ಬ ಮಗುವಿನಲ್ಲಿ ವಿಶೇಷವಾದ ಶಕ್ತಿಯು ಅಡಗಿರುತ್ತದೆ. ಆದ್ದರಿಂದ ಅಂತಹ ಎಲ್ಲ ಮಕ್ಕಳನ್ನು ಮುಂದೆ ತಂದು ಅವರಲ್ಲಿದ್ದ ಶಕ್ತಿಯನ್ನು ಪುಷ್ಟೀಕರಿಸುವದು ಶಿಕ್ಷಕರ ಆದ್ಯ ಕರ್ತವ್ಯವಲ್ಲದೆ ಶಿಕ್ಷಣದ ಮುಖ್ಯ ಉದ್ದೇಶವೂ ಆಗಿರುತ್ತದೆ.

ಶಾಲೆಯಲ್ಲಿಯ ಇಂಥ ಚಟುವಟಿಕೆಗಳಿಂದ ನಮಗೆ ಅನೇಕ ಶೈಕ್ಷಣಿಕ ಲಾಭಗಳಾಗುತ್ತವೆ. ಅವು ಈ ಕೆಳಗಿನಂತೆ ಇರುತ್ತವೆ :—

ಇಂತಹ ಚಟುವಟಿಕೆಗಳಿಂದ ಮಕ್ಕಳ ಸಹಜ ಪ್ರವೃತ್ತಿಗಳ ಉಪಾತ್ತೀಕರಣ ಮಾಡಲು ಸಾಧ್ಯ ವಾಗುತ್ತದೆ. ಮಕ್ಕಳಲ್ಲಿ ತಾವು ಮಾಡಿದ ಕೆಲಸವನ್ನು ಪುನಃ ಪುನಃ ಮಾಡಿ ಆನಂದ ಪಡೆಯುವ ಪರಿಪಾಠ ವಿರುತ್ತದೆ. ತಾವು ಹೇಳಿದ ಸಂಗತಿಗಳನ್ನು, ಕಥೆಗಳನ್ನು, ಹಾಡುಗಳನ್ನು ಮಾತುಗಳನ್ನು ಮತ್ತೆ ಮತ್ತೆ ಹೇಳವದು ಅವರಿಗೆ ಬಹಳ ಸೇರುತ್ತದೆ. ಹೀಗೆ ಮಾಡುವದರಿಂದ ಅವರಿಗೆ ಒಂದು ತರದ ಆನಂದವಾಗುತ್ತದೆ. ಮತ್ತು ಸ್ವಪ್ರತಿಷ್ಠಾಪನೆಯನ್ನು ಮಾಡಿಕೊಳ್ಳಲು ಅನುಷ್ಠ ಆಗುತ್ತದೆ. ಇದರಿಂದ ಮಕ್ಕಳಿಗೆ ಮಹಾ ಪ್ರಯೋಜನ ವಿರುತ್ತದೆ. ಆಡಿದ ಮಾತುಗಳನ್ನು, ಸಂಗತಿಗಳನ್ನು ಮತ್ತೆ ಮತ್ತೆ ಅನ್ನುವದರಿಂದ ತಾವೂ ಕೂಡಾ ಉತ್ತಮವಾಗಿ ಮಾತಾಡಬಲ್ಲೆವು, ಹಾಡಬಲ್ಲೆವು ಮತ್ತು ಅಭಿನಯ ಮಾಡಬಲ್ಲೆವು ಎಂಬ ಭಾವನೆಯುಂಟಾಗುವದು. ಇದರಿಂದ ಮಾತುಗಾರಿಕೆ, ಹಾಡುಗಾರಿಕೆ ಮತ್ತು ಅಭಿನಯಗಳನ್ನು ಸುಧಾರಿಸಿಕೊಳ್ಳಬಹುದು. ನಾಟಕವು ಒಂದು ಕಲೆ ಇರುವದು. ಅದ್ದರಿಂದ ಈ ಕಲೆಯನ್ನು ಹಸ್ತಗತಮಾಡಿಕೊಳ್ಳಬೇಕಾಗಿದ್ದರೆ ಅದನ್ನು ನಾವು ಸರಿಯಾಗಿ ರೂಢಿ ಮಾಡಿಕೊಳ್ಳಬೇಕಾಗುತ್ತದೆ. ಪ್ರತ್ಯಕ್ಷ ಭಾಗವಹಿಸಿ ಅನುಭವ ಪಡೆಯಬೇಕಾಗುತ್ತವೆ.

ಎರಡನೆಯದಾಗಿ ಇಂಥ ಕಾರ್ಯಕ್ರಮಗಳಿಂದ ಗುರುಗಳ ಮಕ್ಕಳ ನಡುವೆ ಹೆಚ್ಚು ಸಂಬಂಧವನ್ನು ತರಲು ಬರುತ್ತದೆ. ಇದೊಂದು ಉತ್ತಮವಾದ ಶೈಕ್ಷಣಿಕ ಲಾಭವೆನ್ನಬಹುದು. ಈ ಪ್ರಸಂಗವಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಕೂಡಿಯೇ ಇರಬೇಕಾಗುತ್ತವೆ. ಮತ್ತು ಕೂಡಿಯೇ ಕೆಲಸ ಮಾಡಬೇಕಾಗುತ್ತದೆ. ಇದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯು ತಮ್ಮ ಗುರುಗಳನ್ನು ಚನ್ನಾಗಿ ಅರಿತುಕೊಳ್ಳಬಲ್ಲನು. ಅದರಂತೆ ಗುರುಗಳೂ ಕೂಡ ಮಕ್ಕಳ ಒಲವು-ನಿಲವುಗಳನ್ನು ಚನ್ನಾಗಿ ಅಭ್ಯಾಸ ಮಾಡಬಲ್ಲರು. ಮತ್ತು ಅಭಿರುಚಿಯ ಪ್ರಕಾರ ಯೋಗ್ಯ ಮಾರ್ಗದರ್ಶನ ಮಾಡಬಲ್ಲರು.

ಮೂರನೆಯದಾಗಿ ಮಕ್ಕಳಿಗೆ ನೈತಿಕ ತರಬೇತಿಯನ್ನು ಕೊಡಲು ಉತ್ತಮವಾದ ವಾತಾವರಣವೆನ್ನಬಹುದು. ಗುರುಗಳ ಸಂಪರ್ಕದಲ್ಲಿ ಮಕ್ಕಳು ಇದ್ದು, ಬಿದ್ದು, ಅವರ ಕೂಡ ಒಂದಾಗಿ ಬೆರೆತು ಬೆಳೆದು ಬರುವದರಿಂದ ಯಾವದು ಕೆಟ್ಟದು ಯಾವದು

ಒಳ್ಳೆಯದು ಎಂಬುದನ್ನು ತಿಳಿದು ನೈತಿಕ ಭಾವನೆಗಳು ತಾವಾಗಿಯೇ ಬೆಳೆದು ಬರುತ್ತವೆ. ಅದರಂತೆ ರಂಗ ಮಂಟಪದ ಮೇಲೆ ಆದರ್ಶ ಮಹನೀಯರ ಮತ್ತು ಮಹಿಳೆಯರ ಜೀವನವನ್ನು ಪ್ರತ್ಯಕ್ಷ ಮಾಡಿ ತೋರಿಸುವದರಿಂದ ಮಕ್ಕಳು ನೋಡಿ, ಕೇಳಿ, ಮಾಡಿ, ತಮ್ಮ ವರ್ತನೆಯನ್ನು ತಾವಾಗಿಯೇ ಸುಧಾರಿಸಿಕೊಳ್ಳುತ್ತಾರೆ. ಮತ್ತು ಉದಾತ್ತ ಧ್ಯೇಯಗಳನ್ನು ಇಟ್ಟುಕೊಳ್ಳಲು ಪ್ರಯತ್ನ ಮಾಡುತ್ತಾರೆ. ಇದರಿಂದ ಮಕ್ಕಳು ಪ್ರಗತಿ ಪಥದಲ್ಲಿ ಸಾಗುತ್ತಾರೆ.

ಇದರಂತೆಯೇ ನಾವು ಮಕ್ಕಳಿಗೆ ಸಾಮಾಜಿಕ ತರಬೇತಿಯನ್ನು ಕೊಡಲಿಕ್ಕೆ ಬರುತ್ತದೆ. ಕಾರ್ಯಕ್ರಮದ ಪೂರ್ವದಲ್ಲಿ ರಂಗಮಂಟಪದ ಯೋಜನೆ, ಪೂರ್ವತಯಾರಿಕೆ ಮತ್ತು ಪಾತ್ರಕ್ಕೆ ತಕ್ಕಂತೆ ಬೇಕಾಗುವ ಉಡುಪುಗಳನ್ನು ಸಂಗ್ರಹಿಸುವಿಕೆ ಇವೆಲ್ಲ ಕೆಲಸಗಳಲ್ಲಿ ಅನೇಕ ಮಕ್ಕಳ, ಅನೇಕ ಕಲಾವಂತ ಮಕ್ಕಳ ಮತ್ತು ಶಾಲೆಯ ಸಾಹಿತ್ಯ ಮಂಡಳದವರ ಸಹಕಾರ ಮತ್ತು ಸಹಾನುಭೂತಿಯು ಅತ್ಯವಶ್ಯವಾಗಿ ಬೇಕಾಗುತ್ತದೆ. ಈ ಪ್ರಕಾರ ಮಕ್ಕಳಿಗೆ ಸ್ವಾಭಾವಿಕವಾಗಿಯೇ ಸಾಮಾಜಿಕ ತರಬೇತಿಯನ್ನು ಕೊಟ್ಟಂತಾಗುತ್ತದೆ.

ನಾಲ್ಕನೆಯದಾಗಿ ವೈಕ್ಷಣಿಕ ವಿವಿಧ ವಿನೋದಾವಳಿಗಳಿಂದ ಬಿಡುವಿನ ವೇಳೆಯ ಸದುಪಯೋಗ ಮಾಡಿಕೊಳ್ಳಲು ಬರುತ್ತದೆ. ಆಫೀಸಿನಲ್ಲಿ ದುಡಿಯುವ ಕಾರಕೂನರು, ಗಿರಣಿಯಲ್ಲಿ ಕೆಲಸ ಮಾಡುವ ಕೂಲಿಕಾರರು, ವ್ಯಾಪಾರಸ್ಥರು, ಹೀಗೆ ಅನೇಕರು ತಮ್ಮ ದುಡಿಮೆಯ ನಂತರ ಮನರಂಜನೆಗಾಗಿ ಹಾತೊರೆಯುತ್ತಾರೆ. ಪ್ರತಿಯೊಬ್ಬ ಮಾನವನಲ್ಲಿ ಈ ತರದ ಆಸಕ್ತಿ ಇದ್ದೇ ಇರುವದು ಸಹಜವಿರುತ್ತದೆ. ಕಾರಣ ಅವರು ಅವೈಕ್ಷಣಿಕ ಚಟುವಟಿಕೆಗಳಲ್ಲಿ ವೈಕ್ಷಣಿಕ ಚಟುವಟಿಕೆಗಳಲ್ಲಿ ಮನಸ್ಸು ತುಂಬಾ ಹಾಕಬೇಕು. ಮತ್ತು ಕಲೆಗಳನ್ನು ಬೆಳೆಸಿಕೊಳ್ಳಬೇಕು. ಅವರು ಚಿತ್ರ ಕಲೆಯಲ್ಲಿ ಮನಸ್ಸು ಹಾಕಬಹುದು. ವಾದ್ಯಗಳನ್ನು ಬಾರಿಸುವದರಲ್ಲಿ ತಲ್ಲೀನರಾಗಬಹುದು. ರಾಗಗಳ ರೂಢಿ ಮಾಡಿಕೊಳ್ಳಬಹುದು. ಈ ಪ್ರಕಾರ ಲಲಿತ ಕಲೆಗಳಲ್ಲಿ ಮನಸ್ಸು ಹಾಕಬಹುದು.

ಐದನೆಯದಾಗಿ ನಾಟಕದ ಕಲೆಯಿಂದ ಬಾಲಕರ ಶಬ್ದಸಂಗ್ರಹವು ವಿಕಾಸಗೊಳ್ಳುತ್ತದೆ. ಉತ್ತಮವಾಗಿ ಮಾತಾಡಲು ಕಲಿಯುವರು. ಸತ್ಯವನ್ನು ನುಡಿಯಲು ಕಲಿಯುವರು. ಮತ್ತು ಮಕ್ಕಳಲ್ಲಿ ಸಂಗೀತದ ಅಭಿರುಚಿ ಹುಟ್ಟಿಸಬಹುದು. ನೃತ್ಯ ಕಲೆಯನ್ನು ಅವರಲ್ಲಿ ಬೇರೂರಿಸಬಹುದು. ಇದರಿಂದ ನಾಟಕದ ಕಲೆಗೆ ನಿಜವಾದ ಪ್ರೋತ್ಸಾಹ ಕೊಟ್ಟಂತೆ ಆಗುತ್ತದೆ.

ಈ ಪ್ರಕಾರ ನಮಗೆ ಅನೇಕ ಲಾಭಗಳಾಗುತ್ತವೆ. ಆದ್ದರಿಂದ ಮನರಂಜನ ಕಾರ್ಯಕ್ರಮಗಳನ್ನು ನಾವು ಅವಶ್ಯವಾಗಿ ಸಂಘಟನೆ ಮಾಡಬೇಕಾಗಿರುತ್ತದೆ. ಅವುಗಳನ್ನು ನಾವು ಈ ಕೆಳಗಿನಂತೆ ಸಂಘಟಿಸಬಹುದು.

ಶಾಲೆಯಲ್ಲಿ ನಾವು ರಾಷ್ಟ್ರೀಯ ಮತ್ತು ಸಾಮಾಜಿಕ ಹಬ್ಬಗಳನ್ನು, ಪುಣ್ಯತಿಥಿಗಳನ್ನು, ಜಯಂತಿಗಳನ್ನು ಆಚರಿಸುತ್ತೇವೆ. ಇಂಥ ಸಂದರ್ಭದಲ್ಲಿ ಮಕ್ಕಳ ಸಲುವಾಗಿ ಮನರಂಜನ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಇಂಥಲ್ಲಿ ಚಿಕ್ಕ ಚಿಕ್ಕ ಏಕಾಂಕ ನಾಟಕಗಳು, ಅಣಕ, ಸಾಮೂಹಿಕ ನೃತ್ಯ, ಸಾಭಿನಯ ಗೀತೆಗಳು, ವಿವಿಧ ವಾದ್ಯಗಳನ್ನು ಬಾರಿಸುವದು, ಹಂತಿಯ ಹಾಡುಗಳು, ಬೀಸು ಕಲ್ಲಿನ ಹಾಡುಗಳು, ಲಾವಣಿಗಳು, ಜನಪದ ಗೀತೆಗಳು ಹೀಗೆ ಅನೇಕ ನಾನಾ ವಿವಿಧ ರೀತಿಯಿಂದ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಚಿಕ್ಕ ಮಕ್ಕಳ ನಾಟ್ಯೀಕರಣಕ್ಕೆ, ನೀತಿ ಕಥೆಗಳು ಪ್ರದರ್ಶನಕ್ಕೆ ಬಹಳ ಹಿತಕಾರಿಯಾಗಿವೆ. ರಂಗಮಂಟಪದ ಮತ್ತು ಪಾತ್ರಗಳಿಗೆ ಅವಶ್ಯವೆನಿಸುವ ಸಾಧನ-ಸಲಕರಣೆಗಳನ್ನು ಆದಷ್ಟು ಬೆಳೆಸುತ್ತ ಹೋಗಬಾರದು. ಆದಷ್ಟು ಏಕಾಂಕ ನಾಟಕಗಳನ್ನು ಮಾಡಿಸುವದು ಬಹಳ ಉಚಿತ. ಇದರಿಂದ ನಾಟಕದ ಅಭ್ಯಾಸಕ್ಕೆ ಬಹಳ ವೇಳೆಯು ತಗಲುವದಿಲ್ಲ. ಅಲ್ಲದೇ ಸಾಧನ-ಸಲಕರಣೆಗಳು ಅಷ್ಟೊಂದು ಬೇಕಾಗುವದಿಲ್ಲ. ಉದಾತ್ತ ಧ್ಯೇಯವುಳ್ಳ ಏಕಾಂಕಗಳನ್ನು ಮಾತ್ರ ಪ್ರದರ್ಶನಕ್ಕೆ ತರಬೇಕು. ಇಂಥ ನಾಟಕಗಳು ಶಾಲಾ ಮಕ್ಕಳಿಗೆ ರುಚಿಸುವಂತವು ಇರಬೇಕು. ಈ ಮಾತು ಬಹಳ ಮಹತ್ವದ್ದು ಇರುತ್ತದೆ. ಇದೇ ಪ್ರಕಾರ ಪಾತ್ರಗಳನ್ನು ಹಂಚುವಾಗ ಪಾತ್ರಕ್ಕೆ ತಕ್ಕಂತೆ ಮಕ್ಕಳ ಆಯ್ಕೆಯನ್ನು ಮಾಡಬೇಕು. ಇಲ್ಲಿ ಇನ್ನೊಂದು ನೆನಪಿಡುವ ಸಂಗತಿಯೆಂದರೆ ಶಿಕ್ಷಕರು ಕೇವಲ ಕೆಲಸವೇ ಮಕ್ಕಳಿಗೆ ಪ್ರೋತ್ಸಾಹಿಸಬಾರದು. ಯಾವತ್ತೂ ಮಕ್ಕಳಿಗೆ ಅನುವು ಮಾಡಿಕೊಡಬೇಕು.

ಕವರ ಮೂರನೆಯ ಪುಟಕ್ಕೆ

# ಭಾಷೆಯೂ ತನ್ನ ಮನಸ್ಸಿನ ಭಾವನೆಯನ್ನು ತಿಳಿಸುವ ಸಹಜಪ್ರವೃತ್ತಿಯೂ

ಲೇಖಕರು : ಶ್ರೀ ತಟ್ಟಿ ಶ್ಯಾಮರಾಯರು, ಎಮ್. ಎ.

ತನ್ನ ಬಾಳಿನ ರೀತಿಯನ್ನು ಅಭಿವ್ಯಕ್ತಮಾಡುವದು ಮನುಷ್ಯನ ಸಹಜವಾದ ಪ್ರವೃತ್ತಿಗಳಲ್ಲಿ, ಸ್ವಭಾವದ ಗುಣಗಳಲ್ಲಿ ಒಂದಾಗಿದೆ. ಇದನ್ನು ಸ್ವಾಭಿವ್ಯಕ್ತಿಯ ಪ್ರವೃತ್ತಿ ಎಂದು ಕರೆಯೋಣ. ಮನುಷ್ಯನು ಈ ಸ್ವಾಭಿವ್ಯಕ್ತಿಯ ಕೆಲಸವನ್ನು ಪರ್ಯಾಯದಿಂದ ನಡೆಯಿಸುವ ಕ್ರಿಯೆಯೆ ಬೇರೊಂದು ರೂಪವನ್ನು ಬೆಳಿಸಿಕೊಂಡಿದ್ದಾನೆ. ನಿಜವಾದ ಸ್ವಾಭಿವ್ಯಕ್ತಿಯ ಪ್ರಯೋಜನವಾವುದು ? ಭೌತಿಕ ಜಗತ್ತಿನಲ್ಲಿ ಚಿರಕಾಲ ಉಳಿಯುವ ಒಂದು ಪರಿಣಾಮವನ್ನುಂಟುಮಾಡುವ ಕೃತಿಯೇ ಸ್ವಾಭಿವ್ಯಕ್ತಿಯ ಪ್ರಯೋಜನ. ಇಂತಹ ಸ್ವಾಭಿವ್ಯಕ್ತಿಯ ಅಥವಾ ಸ್ವಪ್ರಕಾಶನದ ಸೂಕ್ಷ್ಮವಾದ ಒಂದು ಪ್ರತಿನಿಧಿಯೇ ಭಾಷೆಯಾಗಿದೆ. ಹೇಗೆಂದರೆ ಬಾಯಿಯ ಮಾತಿನ ಕೆಲವು ಚಲನವಲನಗಳು ವಿನಾಶಕ ಅಥವಾ ವಿಧಾಯಕ ಸ್ವರೂಪದ ನಿಜವಾದ ಸ್ವಾಭಿವ್ಯಕ್ತಿಯ ಬಯಕೆಯನ್ನೇ ಪ್ರತಿನಿಧೀಕರಿಸುತ್ತವೆ. ಹೀಗೆ ಸ್ವಾಭಿವ್ಯಕ್ತಿಗೆ ಪ್ರತಿಯಾಗಿ ಭಾಷೆಯು ನಿಂತಿದೆ; ಪ್ರಾಣಿಗಳು ಕೇವಲ ಮಾಡಬಲ್ಲವು. ಮನುಷ್ಯರು ಮಾಡುವದರ ಬಗೆಗೆ ಮಾತನಾಡಬಲ್ಲರು. ಮಾಡುವದರ ಬದಲಾಗಿ, ಮಾಡುವದನ್ನು ಬಿಟ್ಟು, ಮಾತನಾಡಲೂ ಬಲ್ಲರು.

ಈ ಸಂಪತ್ತು ಸಹಜ ಸ್ವಭಾವದ ಒಂದು ಕಾಣಿಕೆಯಾಗಿದ್ದು ಅದರಿಂದ ಒಂದು ಬೌದ್ಧಿಕ ಪ್ರಯೋಜನವಿದೆ.

ಸಹಜ ಸ್ವಭಾವದ ಒಂದು ಅವಶ್ಯಕತೆಯಿಂದ ಅದು ಉದ್ಭವಿಸುತ್ತದೆ. ಯಾವ ಪ್ರವೃತ್ತಿಯು ಒಂದು ಜನ ಸಮೂಹದ ಭಾವನೆಗಳಲ್ಲಿ ಒಂದಾಗಿ ಬೆರೆಯುವಂತೆ ನಮ್ಮನ್ನು ಪ್ರೇರಿಸುವದೋ ಅದೇ ನಮ್ಮ ಭಾವೋದ್ರೇಕಗಳನ್ನು ಇತರರಿಗೆ ತಿಳಿಸುವದಕ್ಕೂ ಇತರರಿಂದ ಅವನ್ನು ನಾವು ತಿಳಿದುಕೊಳ್ಳುವದಕ್ಕೂ ಪ್ರೇರಿಸುತ್ತದೆ. ಇದರಿಂದ ಪ್ರತ್ಯಕ್ಷ ಜನಸಮುದಾಯದ ಭಾವನೆಯ ಸೂಕ್ಷ್ಮ ಸ್ವಭಾವವು ಇಲ್ಲದೆ ಇರುವಾಗಲೂ, ಮಾನವನು ಸಾಮೂಹಿಕ ಭಾವಪರವಶತೆಯನ್ನು ಅನುಭವಿಸಬಲ್ಲನು. ಭಾವನೆಗಳನ್ನು ಅಭಿವ್ಯಕ್ತಮಾಡುವ ಈ ಪ್ರವೃತ್ತಿಯು ಇತರ ಪ್ರಾಣಿಗಳಲ್ಲಿಯೂ ಕಂಡುಬರುವದು; ಆಗ ಅವು ತಮ ಸಂತಾಪ, ಆನಂದ, ಕ್ರೋಧಗಳನ್ನು ಸುಸ್ಪಷ್ಟ ವರ್ಣಗಳಲ್ಲದ ಕೂಗುಗಳಿಂದ ವ್ಯಕ್ತಮಾಡುವವು. ಮನುಷ್ಯನು ಯಾವದಾದರೊಂದು ಜಯವನ್ನು ಸಂಪಾದಿಸಿದಾಗ ಅದನ್ನು ತನ್ನ ಗೆಳೆಯರಿಗೆ ಹೋಗಿ ಹೇಳಬೇಕೆನ್ನುವ ಪ್ರವೃತ್ತಿಯಂತೆ ಈ ಪ್ರಾಣಿಗಳ ಪ್ರವೃತ್ತಿಯೂ ಇರುವದು.

ಪ್ರಾಣಿಗಳ ಭಾವನೆಯ ಅಭಿವ್ಯಕ್ತಿಯ ಸಹಜ ಸುಲಭವಾದ ರೂಪವನ್ನು ಮಾನವನು ಅದಕ್ಕಿಂತಲೂ ಅತಿ ಸಂಕೀರ್ಣವಾದ ವಿಚಾರದ ಅಭಿವ್ಯಕ್ತಿರೂಪವಾಗಿ ಮಾರ್ಪಡಿಸಿಕೊಂಡಿದ್ದಾನೆ. ಭಾವನೆಯ ಅಭಿವ್ಯಕ್ತಿಯು ಕ್ರಿಯೆಯು ನಡೆದಾಗಲೇ ಅದಕ್ಕೆ ಸಮಸವಾಗಿ ಇರುವದು; ಆದರೆ ಒಂದು ವಿಚಾರದ ಅಭಿವ್ಯಕ್ತಿಯೆಂದರೆ ಕೃತಿಯನ್ನು ಮುಂದಕ್ಕೆ ತಾಕುವದೇ ಆಗಿರುವದಲ್ಲದೆ ಅದು ಕ್ರಿಯಾತ್ಮಕ ಪ್ರವೃತ್ತಿಯನ್ನು ಇನ್ನೊಂದು ಮಾರ್ಗದಲ್ಲಿ ಹರಿಯುವಂತೆ ಮಾಡುವದು.

ಈ ಮಾರ್ಗಪರಿವರ್ತನದಿಂದ ಮೂರು ಉದ್ದೇಶಗಳು ಸಾಧಿಸುವವು. ಕೃತಿಯನ್ನು ಮುಂದೆತಾಕುವ ಸಾಧನವೊಂದು ಸಿಕ್ಕುವದರಿಂದ ಕೃತಿಗೆ ಪೂರ್ವಭಾವಿಯಾಗಿ ಮನುಷ್ಯನು ಆಲೋಚನೆ ಕೈಕೊಳ್ಳಬಲ್ಲನು; ಸಂಭಾವ್ಯವಾದ ಕೃತಿಗಳನ್ನೂ ಅವುಗಳ ಪರಿಣಾಮಗಳನ್ನೂ ಚಿತ್ರಿಸುವ ನಾಣ್ಯಗಳ ಚಲನವನ್ನು ಮನುಷ್ಯನಿಗೆ ಈ ಭಾಷಾಭಿವ್ಯಕ್ತಿಯು ಒದಗಿಸಿ ಅವನ ವಿಚಾರಕ್ಕೆ ಉಪಯೋಗಬೀಳುವನು, ಮೂರನೆಯದಾಗಿ ಭಾವನೆಗಳ ಅಭಿವ್ಯಕ್ತಿಯಿಂದ ಭಾವನೆಗಳ ಒಕ್ಕೂಟವು ಉಂಟಾಗುವಂತೆ ವಿಚಾರಗಳ ಅಭಿವ್ಯಕ್ತಿಯಿಂದ ವೈಚಾರಿಕ ಐಕಮತ್ಯವು ಸಾಧಿಸುವದು. ಈ ವಿಚಾರದ ಪ್ರಸಾರದಿಂದ ಜನರು ಪರಸ್ಪರ ಸಹಕರಿಸಬಲ್ಲರು; ಇದೇ ಸಮಾಜದ ನೆಲೆಗಟ್ಟು.

**ಮಾತೃಭಾಷೆ :**

ತನ್ನ ಕೆಲವು ಸಹಜ ಪ್ರವೃತ್ತಿಗಳ ತೃಪ್ತಿಯ ಹಿನ್ನೆಲೆಯಲ್ಲಿ ಮಗುವು ತನ್ನ ತಾಯ್ನುಡಿಯನ್ನು ಕಲಿತು ಕೊಳ್ಳುವದು. ಅರ್ಥವಿಲ್ಲದ ಕೂಗಾಟದಿಂದಲೂ ತೊದಲ್ನುಡಿಗಳಿಂದಲೂ ಮಗುವು ವರ್ಣೋಚ್ಚಾರದ ಆರಂಭದ ಸಾಧನೆಯನ್ನು ಸಾಧಿಸಿಕೊಳ್ಳುವದು. ಅದು ತನ್ನ ಧ್ವನಿಯೊಂದಿಗೆ ಆಡುತ್ತಿರುವದು. ಮುಂದೆ-ಮುಂದೆ ಕೂಸಿನ ಆಟವು ಅನುಕರಣಾತ್ಮಕವಾಗುವದು. ಈ ಅನುಕರಣವು ಗಿಳಿಯ ಅನುಕರಣದ ಹಾಗೆ. ಅದು ಸರ್ವಸಾಧಾರಣ ಶಬ್ದಧ್ವನಿ ಆಘಾತ, ಇವುಗಳ ಅನುಕರಣವಾಗಿರುವದು. ಅರ್ಥದಕಡೆ ಲಕ್ಷ್ಯವಿರುವದಿಲ್ಲ. ಇದಕ್ಕೂ ಮುಂದೆ ಸಾಗಿದಾಗ ಮಗುವಿನಲ್ಲಿದ್ದ ಸಂಘಪ್ರವೃತ್ತಿಯು ಇತರರ ಭಾವನೆಯೊಂದಿಗೆ ಕೂಡಿಕೊಳ್ಳುವ ಇಚ್ಛೆಯನ್ನು ಹುಟ್ಟಿಸುತ್ತದೆ; ಇದರಲ್ಲಿಯೇ ಆತ್ಮಾಭಿವ್ಯಕ್ತಿಯ ಅಗತ್ಯವೂ ಇತರರ ಮನಸ್ಸನ್ನು ತಿಳಿದುಕೊಳ್ಳುವ ಸಾಮರ್ಥ್ಯವೂ ಅಡಕವಾಗಿನೆ. ಇದಕ್ಕೂ ಹೆಚ್ಚು ಕಷ್ಟಕರವಾದ ಸ್ವಸಂರಕ್ಷಣೆಯ ಪ್ರಯತ್ನಗಳನ್ನು ತಿಳಿಸುವದಕ್ಕೆ ಮಾತು, ಭಾಷೆ ಬೇಕು. ಪರರ ಸುಖ ದುಃಖಗಳಲ್ಲಿ ಸಹಕರಿಸುವ ಸಹಾನುಭೂತಿ ಮತ್ತು ಆತ್ಮ ಸಂರಕ್ಷಣೆ ಈ ಎರಡು ಪ್ರವೃತ್ತಿಗಳಿಗೆ ಪ್ರತಿಕ್ರಿಯಾ ರೂಪವಾಗಿ ಮಗುವು ಹೆಚ್ಚು ಬುದ್ಧಿಪೂರ್ವಕವಾದ ಅನುಕರಣದಿಂದ ಭಾಷೆಯನ್ನು ಕಲಿತುಕೊಳ್ಳುವದರಲ್ಲಿ ತೊಡಗುತ್ತದೆ.

ಭಾಷೆಯ ಬೆಳವಣಿಗೆಗೂ ವಿಚಾರದ ಉಚ್ಚತರ ಮಟ್ಟಕ್ಕೂ ನಿಕಟವಾದ ಸಂಬಂಧವಿರುವದು. ಭಾಷೆಯ ಬಹುತರವಾದ ಭಾಗದಲ್ಲಿರುವ ಸಂಕೀರ್ಣ, ಸಾಮಾನ್ಯ ಕಲ್ಪನೆಗಳು ಸಾಧ್ಯವಾಗುವದು. ಸಮುದಾಯಸೂಚಕ ನಾಮಪದಗಳಿಂದಲೇ, ಸಾರಾಂಶ, ಮಗುವು ಮಾತನಾಡಲಿಕ್ಕೆ ಕಲಿಯುತ್ತಿರುವಾಗಲೇ ವಿಚಾರ ಮಾಡಲಿಕ್ಕೂ ಕಲಿಯುತ್ತಿರುವದು ಎಂದಹಾಗಾಯಿತು.

ಪ್ರಚೋದನೆಗೆ ಸರಿಯಾದ ಒಂದು ಪ್ರತಿಕ್ರಿಯೆಯನ್ನು ತಯಾರು ಮಾಡುವದೇ ವಿಚಾರದ ರೀತಿ. ಲಕ್ಷಾಂತರ ಸಂವೇದನೆಗಳು–ಪ್ರಚೋದನೆಗಳು–ಮಗುವಿಗೆ ಬಂದು ಅಳುಕುವವು. ಅವುಗಳಲ್ಲಿ ಪ್ರತಿಯೊಂದನ್ನೂ ಅನುಕ್ರಮವಾಗಿ ಆ ಮಗುವಿನಿಂದ ಸಾಧ್ಯವಾದ ಕೆಲವೇ ಪ್ರತಿಕ್ರಿಯೆಗಳಿಗೆ ಹೊಂದಿಸಬೇಕಾಗುವದು. ಈ ಹೊಂದಾಣಿಕೆಯ ಫಲಿತಾಂಶವೇ ಒಂದು ಕ್ರಿಯೆಯಾಗಿರುವದು; ಈ ಕ್ರಿಯೆಯ ಸುತ್ತಲೂ ಅದನ್ನು ಪ್ರಚೋದಿಸಿದ ಸ್ಮೃತಿ ರೂಪವಾದ ಸಂವೇದನೆಗಳು ಸಂಘಟಿತವಾಗಿವೆ. ಈ ಏಕೀಕೃತ ಸಂವೇದನೆಗಳ ವರ್ಗವು ಒಂದು ಶಬ್ದದಿಂದ, ನಾಮದಿಂದ ನಿರ್ದಿಷ್ಟವಾಗಿರುವದು. ಉದಾ : "ರೊಟ್ಟಿ" ಎಂಬ ಶಬ್ದವು ಕೆಲವು ಉಪಯೋಗಗಳನ್ನೂ, ಕೆಲವು ಪ್ರಯತ್ನಗಳ ದೃಷ್ಟಿಯನ್ನೂ ಸೂಚಿಸುತ್ತದೆ. ಆದರೆ ಅದು ಸೂಚಿಸುವ ವಸ್ತುಗಳು ಕಾಣಲಿಕ್ಕೆ ಬಹು ಭಿನ್ನವಾದ ಅನೇಕ ರೂಪದವಾಗಿರುವವು. ಅವೆಲ್ಲಕ್ಕೂ ಈ ಪ್ರಕಾರದ ಕ್ರಿಯೆಯೇ ಸರಿಯಾಗಿರುವದು.

ಸಮುದಾಯಾತ್ಮಕ ಕಲ್ಪನೆಗಳನ್ನು ಮಾಡಿಕೊಳ್ಳುವ ಕ್ರಮಕ್ಕೆ "ರೂಢ" ನಾಮಗಳಿಂದ ಬಹಳ ಸಹಾಯವಾಗುವದು. ವಸ್ತುಗಳ ಗುಂಪಿನ ಒಂದು ಹೆಸರನ್ನು ಕೇಳಿದೊಡನೆ ಮಗುವು ಮನಸ್ಸಿನಲ್ಲಿ ಆ ಗುಂಪಿನ ಸ್ವರೂಪವನ್ನು ತಿಳಿದುಕೊಳ್ಳಲಿಕ್ಕೆ ಪ್ರೋತ್ಸಾಹನ ಪಡೆಯುವದು. ಹೇಗೆಂದರೆ 'ರೊಟ್ಟಿ' ಎಂಬ ಶಬ್ದವನ್ನು ಮೊದಲು ಒಂದು ಪ್ರಕಾರದ ಪದಾರ್ಥಕ್ಕೆ, ಆ ಮೇಲೆ ಮತ್ತೊಂದು ಪ್ರಕಾರದ ಪದಾರ್ಥಕ್ಕೆ ಹೀಗೆ ಉಪಯೋಗಿಸುವದನ್ನು ಕೇಳಿ ಆ ಭಿನ್ನಪ್ರಕಾರಗಳಲ್ಲಿರುವ ಸಣ್ಣ ಪುಟ್ಟ ಭೇದಗಳನ್ನೂ ಅಲಕ್ಷಿಸಿ ಅವುಗಳಲ್ಲಿರುವ ಸಾಮ್ಯವನ್ನು ಒಂದೇ ರೀತಿಯಾಗಿ ಆ ಪ್ರಕಾರಗಳಿಗೆ ಪ್ರತಿಕ್ರಿಯೆಯನ್ನು ಮಾಡುವ ಸಾಮ್ಯವನ್ನು ಕಂಡುಕೊಳ್ಳುತ್ತದೆ.

ಮಗುವು ಭಾಷೆಯನ್ನು ಕಲಿತುಕೊಳ್ಳುವ ರೀತಿಯ ಈ ಕೆಳಗಿನ ವಿಚಾರವು ತಪ್ಪಾಗಿದೆ : ಮಗುವು ಒಂದು ಶಬ್ದವನ್ನು ಒಂದು ವಸ್ತುವಿಗೆ ಹಚ್ಚಿದ್ದನ್ನು ಕೇಳುವದು; ಕೇಳಿ ಆ ಕಲ್ಪನೆಗೂ ಶಬ್ದಕ್ಕೂ–ಹೆಸರಿಗೂ–ತಳಕು ಹಾಕುತ್ತದೆ. ಎಂಬ ಅವಿಮರ್ಶಾತ್ಮಕ ವಿಚಾರವನ್ನು ಆಗಾಗ್ಗೆ ಅಲ್ಲಲ್ಲಿ ಕೇಳುತ್ತೇವೆ–ಹೀಗೆ ಭಾಷೆಯನ್ನು ಕಲಿಯತ್ತದೆ ಎಂದು ಹೇಳುವದನ್ನು ಕೇಳುತ್ತೇವೆ. ಆದರೆ ಒಂದೇ ಹೆಸರು, ಉದಾ : 'ಪುಸ್ತಕ' ಎಂಬ ಹೆಸರನ್ನು ಅನೇಕಾನೇಕ ಭಿನ್ನಭಿನ್ನ ಪದಾರ್ಥಗಳಿಗೆ ಉಪಯೋಸಬಹುದಾಗಿದೆ. ಈ ಶಬ್ದದ ಅರ್ಥವು ಇದೇ ಎಂದು ಖಂಡಿತವಾಗಿ ಮಗುವಿಗೆ ಹೇಗೆ ಗೊತ್ತಾಗಬೇಕು? 'ಪುಸ್ತಕ' ಎಂಬ ಶಬ್ದದ 'ಸಾರ'ವಾವುದು, ಆ ಜಾತಿಯ ವಸ್ತುಗಳಲ್ಲಿ ಯಾವ ಅಂಶಗಳನ್ನು ತಾತ್ಸಾರಮಾಡಬೇಕು. ಮತ್ತು ಯಾವ ಅಂಶಗಳನ್ನು ನಿರೀಕ್ಷಿಸಬೇಕು–ಹಾಗೆ ಮಾಡಿದರೆ

ಆ ಹೆಸರಿನ ಒಂದು ವಸ್ತುವನ್ನು ಮುಂದೆ ಗುರ್ತುಹಿಡಿಯ ಬಹುದು, ಇದು ಮಗುವಿಗೆ ತಿಳಿಯಬೇಕಾಗುವದು. ಬಣ್ಣವು ಮುಖ್ಯವಾದ ಲಕ್ಷಣವೇ? ಎತ್ತರವಾಗಿ ಹಿಡಿದ ಉದ್ದವಾದ ಆಯತ (ಕಾಟಕೋನ ಚೌಕೋನ)ವೇ? ಸಣ್ಣದಾದ ಅಥವಾ ದೊಡ್ಡದಾದ ಪ್ರಮಾಣವೇ? ಇದಾವುದರ ನಿಶ್ಚಿತವಾದ ಕಲ್ಪನೆಯಿಲ್ಲದೆ ಮಗುವು 'ಪುಸ್ತಕ' ಎಂಬ ಶಬ್ದವನ್ನು ಕೇಳಿದಕೂಡಲೇ ಅದರ ಸರಿಯಾದ ಅರ್ಥದೊಂದಿಗೆ ಅದನ್ನು ಜೋಡಿಸಿ ಕೊಳ್ಳುತ್ತದೆ ಎಂಬ ಮಾತು ತಪ್ಪಾಗುವದು. 'ಪುಸ್ತಕ'ದ ಕಲ್ಪನೆಯು ಇನ್ನೂ ರೂಪಗೊಂಡಿರುವದಿಲ್ಲ.—ಶಬ್ದದ ಪ್ರಯೋಗವೇ ಕಲ್ಪನೆಯ ನಿರೂಪಣೆಗೆ ಪ್ರಚೋದಕವಾಗಿದೆ. 'ಪುಸ್ತಕ' ಎಂಬ ಶಬ್ದವನ್ನು ಅನೇಕ ಭಿನ್ನ ಭಿನ್ನ ವಸ್ತುಗಳಿಗೆ ಹಚ್ಚಿದ್ದನ್ನು ಕೇಳಿ ಪುಸ್ತಕದ ಸಾರ ಭೂತವಾದ ಅಂಶವಾವುದನ್ನು ನಿಧಾನವಾಗಿ ಮಗುವು ತಿಳಿದುಕೊಳ್ಳುವದು; ಅದರ ನಿಜವಾದ ವಿಧಾಯಕ ಉಪಯೋಗವೇನು; ಅರ್ಥವೇನು ಮತ್ತು ಅದರ ತೋರಿಕೆಯಲ್ಲಿದ್ದ ಯಾವ ಗುಣಗಳು ಆ ಪ್ರಯೋಜನದೊಂದಿಗೆ ಹೊಂದಿಕೊಂಡಿವೆ—ಈ ಸಂಗತಿಗಳನ್ನು ಮಗುವು ಕ್ರಮೇಣ ತಿಳಿದುಕೊಳ್ಳುವದು. ಮನಸ್ಸಿನಲ್ಲಿ ಕಲ್ಪನೆಯನ್ನು ಮಾಡಿಕೊಳ್ಳುವ ವಿಧಾನದಲ್ಲಿ ಶಬ್ದವನ್ನು ಪರಿಚಯಮಾಡಿಕೊಳ್ಳುವದು ಒಂದುಭಾಗಮಾತ್ರವಾಗಿದೆ. ಶಬ್ದವನ್ನು ಒಂದು ಜೋಣಿಗೆ ಹೋಲಿಸೋಣ, ಅದರ ಒಂದು ಮಗ್ಗಲನ್ನು ಹಿಡಿದು ಅದರಲ್ಲಿ ಮಾಡಿಕೊಂಡ ಕಲ್ಪನೆಯನ್ನು ಹಾಕಲಿಕ್ಕೆ ಶಬ್ದವು ಒಂದು ಜೋಣಿ ಮಾತ್ರ. ಅಥವಾ ಮಗುವಿಗೆ ತುಂಬಲಿಕ್ಕೆ ಕೊಟ್ಟ ಒಂದು ಹೂಜೆಯಂತೆ ಆ ಶಬ್ದವಿದೆ ಎಂದು ಹೇಳಬಹುದು.

ಶಬ್ದಗಳ ಪ್ರಯೋಗದಿಂದಾರಂಭಿಸಿ ವಾಕ್ಯಗಳ ಪ್ರಯೋಗಕ್ಕೆ ಭಾಷೆಯು ಮಗುವಿನಲ್ಲಿ ಬಿತ್ತರಗೊಳ್ಳುವದು; ಸನ್ನಿವೇಶದಲ್ಲಿಯ ಒಂದಂಶವನ್ನು ಮೊದಲು ಮಗುವು ಎತ್ತಿಕೊಂಡು ಅದು ಜಾತಿ ವಾಚಕ ಒಂದು ವರ್ಗಕ್ಕೆ ಸೇರಿದೆ. ಎಂಬುದನ್ನು ಗುರುತು ಹಿಡಿಯುವದು. ಕೂಸು ಮೊದಲು ಬೊಟ್ಟು ಮಾಡಿ ನಾಯಿ ಎಂದು ಹೇಳುವದು; ಅನಂತರದಲ್ಲಿ ಎರಡು ವರ್ಗಗಳ ಸಂಬಂಧವನ್ನು ಅದು ಅರ್ಥಮಾಡಿಕೊಳ್ಳವದು.—"ನಾಯಿಗಳು ಸಾಕುವ ಪ್ರಾಣಿಗಳು" ಎಂದು ಅಥವಾ ವಸ್ತುಗಳ ವರ್ಗಗಳನ್ನು ಪೃಥಃಕರಿಸಿ ಅವುಗಳಲ್ಲಿರುವ ಇಂದ್ರಿಯ ಗ್ರಾಹ್ಯವಾದ ಅಂಶಗಳನ್ನು ಗೊತ್ತು ಮಾಡುವದು—"ಹುಳುಗಳು ಸಣ್ಣವು" ಎಂದಾಗಲಿ, ಇಲ್ಲವೇ "ಕಡಿಜೀರಿಗೆಗಳು ಅಪಾಯಕರವಾದವು" ಇತ್ಯಾದಿಯಾಗಿ.

ಲಿಖಿತ ಭಾಷೆಯ ಪ್ರವೇಶವು ವಿಚಾರದ ಬೆಳವಣಿಗೆಯಲ್ಲಿ ಒಂದು ದೊಡ್ಡ ಮುಂದಡಿಯಾಗಿದೆ. ಲೇಖನವು—ಬರೆಹವು—ಎರಡು ಮುಖ್ಯ ಅಗತ್ಯಗಳಿಂದ ಅಸ್ತಿತ್ವದಲ್ಲಿ ಬರುವದು; ಒಂದು ಶಾಶ್ವತವಾದ ದಾಖಲೆ ಅಥವಾ ನೋಂದು, ಎರಡು ದೂರದಲ್ಲಿದ್ದವರಿಗೆ ತಿಳಿಸುವ ಅಗತ್ಯ. ಮೊದಲನೆಯ ಸನ್ನಿವೇಶದಲ್ಲಿ ಅದು ಅಲ್ಪವಾದ ಕಾಲ ಮರ್ಯಾದೆಯನ್ನು ಉಲ್ಲಂಘಿಸುವದು. ಎರಡನೆಯ ಸನ್ನಿವೇಶದಲ್ಲಿ ಅದು ದೇಶಮರ್ಯಾದೆಯನ್ನು ಗೆಲ್ಲುವದು. ಅದರ ಹೆಚ್ಚುಕಾಲ ತಾಳಿಕೆಯ ಗುಣದಿಂದ ವಿಚಾರದ ವಿಮರ್ಶಾತ್ಮಕವಾದ ಪರಿಪೂರ್ಣತೆಗೆ ಅದು ಅವಕಾಶವನ್ನು ಉಂಟು ಮಾಡುವ ದೊಡ್ಡ ಕಾರ್ಯವನ್ನು ಮಾಡುತ್ತದೆ.

[ ಮುಂದುವರಿಯುವದು ].


ಪ್ರಾಥಮಿ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

**ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ**

**ಆದರ್ಶ ಚಿತ್ರಕಲಾ**

**(Ideal Drawing)**

**ಲೇ ಎಸ್. ಕೆ. ಜೋಶಿ, ಮತ್ತು**

**ಲೇ ಜಿ. ಡಿ. ವಾಲಿ.**

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. ಬೆಲೆ ೧—೧೨—೦ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ,

**ಜೆ. ನಾಯ್. ರಾಣೆ**

ಪ್ರಕಾಶಕರು, ಬೆಳಗಾಂ, ಕೆನರಾ ಹೇಟ ಪುಣೆ.

# ಜೀವನ ಶಿಕ್ಷಣ ಶಾಲೆಗಳಲ್ಲಿ ಮೌಲ್ಯಗಳನ್ನು ಅಳೆಯುವ ಒರೆಗಳು.

## (ಸಮೂನೆಗಳು)

[ ಫೆಬ್ರುವರಿ ೧೯೫೯ರಲ್ಲಿ ಬೆಳಗಾಂವಿಯೊಳಗೆ ಧಾರವಾಡ ಜೀ. ಬಿ. ಟಿ. ಸಿ. ಯ ಹಳೇ ವಿದ್ಯಾರ್ಥಿಗಳ ವಿಚಾರ ಮಂಥನವು ಜರುಗಿತ್ತು. ಆ ಕಾಲಕ್ಕೆ ಜೀ. ಶಿ. ಶಾಲೆಗಳಲ್ಲಿ ' ಮೌಲ್ಯ ಮಾಪನ ' ಎಂಬ ವಿಷಯವನ್ನು ಕುರಿತು ವಿಶೇಷವಾಗಿ ಚರ್ಚೆಯು ನಡೆಯಿತು. ಚರ್ಚೆಯ ಫಲಿತಾಂಶವಾಗಿ ಜೀ. ಶಿ. ತತ್ವಪ್ರಣಾಲಿಗೆ ಅನುಗುಣವಾದ ಕೆಲವೊಂದು ಒರೆಗಳನ್ನು ರಚಿಸುವ ಕಾರ್ಯವು ಕೈಕೊಳ್ಳಲ್ಪಟ್ಟಿತು. ಅನೇಕ ಸದಸ್ಯರು ಅನೇಕ ರೀತಿಯಿಂದ ಒರೆಗಳನ್ನು ರಚಿಸಿಕೊಟ್ಟಿದ್ದು, ಅವುಗಳಲ್ಲಿ ನೈತಿಕ ಮೌಲ್ಯಗಳನ್ನು ಅಳೆಯುವ ಕೆಲವೊಂದು ಒರೆಗಳು ಈಗಾಗಲೆ ಪದವೀಧರರ ಜೀ. ಶಿ. ಕೇಂದ್ರ ಧಾರವಾಡ ಈ ಸಂಸ್ಥೆಯ ಮುಖಾಂತರ ಹೊರಡಿಸಿದ ವಿಚಾರ ಮಂಥನ ಎಂಬ ಪುಸ್ತಿಕೆಯಲ್ಲಿ ಪ್ರಕಟವಾಗಿವೆ. ಅವುಗಳ ಮಾರ್ಗದರ್ಶನದ ಲಾಭವು ಜೀ. ಶಿ. ದ ಇತರ ಶಿಕ್ಷಕರಿಗೂ ದೊರೆಯಬೇಕೆಂಬ ಆಶೆಯಿಂದ ಅವುಗಳನ್ನೇ ಇಲ್ಲಿ ಮತ್ತೊಮ್ಮೆ ಎತ್ತಿ ಕೊಡಲಾಗಿದೆ. ಅವು ಕೇವಲ ನಮೂನೆಗಳನ್ನು ತೋರಿಸುವವು ಹೊರತು ಅವು ಇನ್ನೂ ಪ್ರಯೋಗದಿಂದ ಪ್ರಮಾಣಿತವಾಗಬೇಕಾಗಿವೆ. ಆದ್ದರಿಂದ ಶಿಕ್ಷಕರು ಇವುಗಳನ್ನು ಪ್ರಯೋಗಕ್ಕೆ ಹಚ್ಚಿನೋಡಿ ಅವುಗಳಲ್ಲಿ ಏನಾದರೂ ಮಾರ್ಪಾಡುಗಳನ್ನು ಮಾಡುವ ಅವಶ್ಯಕತೆ ಎನಿಸಿದಲ್ಲಿ ಅಂಥ ಸೂಚನೆಗಳನ್ನು ಶ್ರೀ ಕೆ. ಬಿ. ತೇರಗಾಂವಕರ ಪ್ರಿನ್ಸಿಪಾಲ ಜೀ. ಬಿ. ಟಿ. ಸಿ. ಧಾರವಾಡ ಅವರ ಕಡೆಗೆ ಕಳಿಸಿಕೊಡಬೇಕು. ಇದರಂತೆ ಹೊಸ ಹೊಸ ಒರೆಗಳನ್ನು ಕೂಡ ರಚಿಸಿ ಅವುಗಳಲ್ಲಿ ಯೋಗ್ಯವಾದವುಗಳನ್ನು ಕಳಿಸಿ ಕೊಡಬೇಕು. ಅಂದರೆ ಮುಂದಿನ ಸಲದ ವಿಚಾರ ಮಂಥನದಲ್ಲಿ ಅವುಗಳನ್ನು ವಿವರವಾಗಿ ಚರ್ಚಿಸಿ ಒಂದು ಸುಸಂಘಟಿತ ರೂಪದಲ್ಲಿ ಇಡಲು ಅನುಕೂಲವಾಗುವದು.

[ ಹೊಸ ಒರೆಗಳನ್ನು ರಚಿಸುವ ಕಾರ್ಯದಲ್ಲಿ ಇಲ್ಲಿ ಪ್ರಕಟಿಸಿದ ಶ್ರೀ ಎನ್. ವ್ಹಿ. ಹೊಬ್ಬಿ ಅವರು ಬರೆದ ಜೀ. ಶಿ. ಶಾಲೆಗಳಲ್ಲಿ ' ಮೌಲ್ಯ ಮಾಪನ ' ಎಂಬ ಲೇಖನವನ್ನು ಓದಿ ಮಾರ್ಗದರ್ಶನ ಪಡೆಯಬಹುದು. ]

---ಸಂಪಾದಕ

**ಒರೆ ನಂ. ೧ :** ಶ್ರಮಗೌರವ ( ತಾತ್ವಿಕ )

ಪೇಟೆಯಿಂದ ಳನೆಯ ವರ್ಗದ ಬಾಲಕನು ಹೆಗಲ ಮೇಲೆ ಹೊತ್ತು ಕೊಂಡು ಬರುವಷ್ಟು ಜೋಳವನ್ನು ತರುವದಿದೆ. ಅದನ್ನು—

೧ ) ಸ್ವತಃ ಹೊತ್ತುಕೊಂಡು ಬರಬಹುದು.

ಅಥವಾ

೨ ) ಒಬ್ಬ ಕೂಲಿಯ ಸಹಾಯದಿಂದ ತರ ಬಹುದು. ನೀವು ಯಾವುದನ್ನು ಮಾಡುವಿರಿ ಎಂಬುದನ್ನು √ ಚಿಹ್ನೆಯಿಂದ ತೋರಿಸಿರಿ. '೧' √ ಕ್ಕೆ ಚಿಹ್ನ ಹಾಕಿದ ವಿದ್ಯಾರ್ಥಿಯಲ್ಲಿ ಶ್ರಮ ಗೌರವದ ಕಲ್ಪನೆ ಇದೆ ಎಂದು ತಿಳಿಯಬಹುದು.

**ಒರೆ ನಂ. ೨ :** ಔದಾರ್ಯ (ತಾತ್ವಿಕ )

ಕೆಳಗಿನ ಮಹಾಭಾರತದ ಪ್ರಸಿದ್ಧ ವ್ಯಕ್ತಿಗಳ ಹೆಸರುಗಳನ್ನು ಕುರಿತು ನಿಮ್ಮ ಮೆಚ್ಚಿಗೆಯ ಕ್ರಮಾಂಕ ಗಳನ್ನು ಕೊಡಿರಿ.

ಅ) ಸಾಮ್ರಾಟ ದುರ್ಯೋಧನ. ಬ) ದಾನಶೂರ ಕರ್ಣ. ಕ) ಕಲಿ ಭೀಮ. ' ಬ ' ಕ್ಕೆ ಮೊದಲನೆಯ ಕ್ರಮಾಂಕ ಕೊಟ್ಟವನಲ್ಲಿ ಔದಾರ್ಯ ಭಾವವು ಬಲ ವಾಗಿದೆ ಎಂದು ತಿಳಿಯಬಹುದು.

**ಒರೆ ನಂ. ೩ :** ತ್ಯಾಗ ಬುದ್ಧಿ ( ತಾತ್ವಿಕ )

ಮಧ್ಯಾಹ್ನದ ಬಿಡುವಿನಲ್ಲಿ ತಿನ್ನಲು ಬುತ್ತಿಯನ್ನು ಗುರುಗಳ ಸೂಚನೆಯ ಮೇರೆಗೆ ತಂದಿದ್ದೇನೆ. ನನ್ನ ಗೆಳೆಯನೊಬ್ಬನು ಅಂದು ಬುತ್ತಿಯನ್ನು ತಂದಿರುವದಿಲ್ಲ. ಆಗ ನಾನು,

೧) ಗುರುಗಳು ಸೂಚಿಸಿದ್ದರೂ ಅವನು ಬುತ್ತಿ ತರುವದಕ್ಕೆ ತಪ್ಪಿರುವದರಿಂದ ತನ್ನ ಪ್ರತಿಫಲವನ್ನು ಭೋಗಿಸಲೆಂದು ಅವನನ್ನು ಬಿಟ್ಟು ನಾನೊಬ್ಬನೇ ಬುತ್ತಿ ತಿನ್ನುವೆ.

೨) ನನಗೆ ಬುತ್ತಿ ಕಡಿಮೆಯಾಗುತ್ತಿದ್ದರೂ, ನನ್ನಂತೆ ಅವನೂ ಹಸಿದಿದ್ದಾನೆಂಬ ಭಾವನೆಯಿಂದ ಇಬ್ಬರೂ ಬುತ್ತಿಯನ್ನು ಹಂಚಿಕೊಂಡು ತಿನ್ನುವೆವು.

ಇದರಲ್ಲಿ ನೀವು ಏನು ಮಾಡುವಿರೆಂಬುದನ್ನು √ ಚಿಹ್ನೆಯಿಂದ ತೋರಿಸಿರಿ. ನಂ. ೨ಕ್ಕೆ √ ಚಿಹ್ನೆ ಹಾಕಿದ ವಿದ್ಯಾರ್ಥಿಯಲ್ಲಿ ತ್ಯಾಗಬುದ್ಧಿ ಇದೆ ಎಂದು ತಿಳಿದುಕೊಳ್ಳಬಹುದು.

ಶ್ರೀ ಎಸ್. ಆರ್. ರೋಹಿಡೆಕರ.

ಶ್ರೀ ಎಮ್. ಎಚ್. ನಾಯಕ.

**ಒರೆ ನಂ. ೪ :** ಸ್ವಚ್ಛತೆ ( ಪ್ರಾಯೋಗಿಕ )

ಮುಂಜಾನೆ ಸಭಾಯಿ ಒಮ್ಮೆ ಮುಗಿಸಿದೆ. ಒಂದು ವರ್ಗದ ಕೋಣೆಯಲ್ಲಿ ಕಾಗದದ ತುಂಡುಗಳು, ಹತ್ತಿಯ ಮತ್ತು ನೂಲಿನ ತುಣುಕುಗಳು ಅಲ್ಲಲ್ಲಿ ಬಿದ್ದು ಕೋಣೆಯು ಪೂರ್ಣ ಮಲಿನವಾಗಿದೆ, ಪರೀಕ್ಷೆ ಮಾಡಬೇಕಾದ ವಿದ್ಯಾರ್ಥಿಗಳನ್ನೆಲ್ಲರನ್ನೂ ಇಂಥ ಕೋಣೆಗೆ ಕರೆದುಕೊಂಡು ಬರಬೇಕು. ಪ್ರತಿಯೊಬ್ಬರಿಗೂ ಒಂದೊಂದು ಸ್ಥಳವನ್ನು ನಿಯಮಿಸಿಕೊಟ್ಟು ಕೂಡ್ರಲು ಹೇಳಬೇಕು.ಆ ಕೋಣೆಯಲ್ಲಿ ಪ್ರತಿಯೊಬ್ಬನಿಗೆ ಒಂದೊಂದು ಬರುವಂತೆ ಆಸನಗಳನ್ನು ಒಂದೆಡೆ ಎದುರಿಗೆ ಕಾಣುವಂತೆ ಇಟ್ಟಿರಬೇಕು. ಒಂದು ಕಸದ ಬುಟ್ಟಿಯನ್ನೂ ಇಟ್ಟಿರಬೇಕು.

ಸ್ವಚ್ಛತೆಯ ಭಾವನೆಯ ದೃಷ್ಟಿಯಿಂದ ಕೆಳಗಿನ ಕ್ರಮದಲ್ಲಿ ವಿದ್ಯಾರ್ಥಿಗಳನ್ನು ವರ್ಗೀಕರಿಸಬಹುದು.

ಅ ) ೧ನೆಯ ಗುಪು:— ತಮ್ಮ ಸ್ಥಳದಲ್ಲಿಯ ಕಸವನ್ನು ಕಸದ ಬುಟ್ಟಿಯಲ್ಲಿ ಚಲ್ಲಿ ಆಸನವನ್ನು ಹಾಕಿ ಕೊಂಡು ಕೂಡ್ರುವವರು.

ಬ ) ೨ನೆಯ ಗುಂಪು :— ಸ್ಥಳವನ್ನು ಸ್ವಚ್ಛ ಮಾಡದೆ ಹಾಗೇ ಆಸನವನ್ನು ಹಾಕಿಕೊಂಡು ಕೂಡ್ರುವವರು.

ಕ ) ೩ನೆಯ ಗುಂಪು :— ತಮ್ಮ ಸ್ಥಳದಲ್ಲಿಯ ಕಸವನ್ನು ಇತರರ ಸ್ಥಳಕ್ಕೆ ಸರಿಸಿ ಆಸನ ಹಾಕಿಕೊಂಡು ಕೂಡ್ರುವವರು.

ಡ ) ೪ನೆಯ ಗುಂಪು :— ತಮ್ಮ ಸ್ಥಳದಲ್ಲಿಯ ಕಸವನ್ನು ಇತರರ ಸ್ಥಳಕ್ಕೆ ಸರಿಸಿ ಆಸನವಿಲ್ಲದೆ ಕೂಡ್ರುವವರು.

ಇ ) ೫ನೆಯ ಗುಂಪು :— ಸ್ಥಳವನ್ನು ಸ್ವಚ್ಛ ಮಾಡದೇ ಆಸನವನ್ನು ಹಾಕಿ ಕೊಳ್ಳದೇ ಕೂಡ್ರುವವರು.

ಮೇಲ್ಕಾಣಿಸಿದ ಗುಂಪುಗಳ ವಿದ್ಯಾರ್ಥಿಗಳಿಗೆ ಕ್ರಮವಾಗಿ ೫, ೪, ೩, ೨, ೧ ರಂತೆ ಗುಣಗಳನ್ನು ಕೊಡಬೇಕು. ಇಂಥಹೊಂದು ಪರೀಕ್ಷಣದಿಂದ ವೈಯಕ್ತಿಕ ಗುಣವನ್ನು ಅಳೆಯಲು ಬರುವದಲ್ಲದೆ ಬೇರೆ ಬೇರೆ ಶಾಲೆಗಳಲ್ಲಿಯ ಅದೇ ಮಟ್ಟದ ಮಕ್ಕಳ ವೈಯಕ್ತಿಕ ಸ್ವಚ್ಛತೆಯ ಭಾವನೆಯನ್ನು ತುಲನೆ ಮಾಡಲು ಬರುವದು.

ಶ್ರೀ ಎನ್. ವ್ಹಿ. ಥೊಬ್ಬಿ

**ಒರೆ ನಂ. ೫ :** ಪ್ರಾಮಾಣಿಕತೆ ( ಪ್ರಾಯೋಗಿಕ )

[ ೩–೪ ನೆಯ ವರ್ಗಗಳಿಗೆ ]

ಪರೀಕ್ಷಕನು ಒಂದು ಸುಂದರ ಗೋಲಿ-ಗುಂಡನ್ನು ಮಕ್ಕಳಿಗೆ ತೋರಿಸಿ, ಇದು ಆಟದ ಬಯಲಿನಲ್ಲಿ ನನಗೆ ಸಿಕ್ಕಿದೆ. ಇದು ಯಾರದಿದೆಯೋ ಅವರು ' ಹೌದು ' ಎಂದೂ, ಯಾರದಲ್ಲವೋ ಅವರು ' ಅಲ್ಲ ' ವೆಂದೂ ಒಂದು ಚೀಟಿಯಲ್ಲಿ ಬರೆದು ನಿಮ್ಮ ನಿಮ್ಮ ಹೆಸರು ಹಾಕಿ ಕೊಡಿರಿ ಎಂದು ಹೇಳಬೇಕು.

" ಹೌದು " ಎಂದವರು ಅಪ್ರಾಮಾಣಿಕರೂ " ಅಲ್ಲ " ಎಂದವರು ಪ್ರಾಮಾಣಿಕರೆಂದೂ ನಿರ್ಧರಿಸ ಬಹುದು.

ಆರ್. ಜಿ. ಕುಕನೂರ

**ಒರೆ ನಂ. ೬ :** ಪ್ರಾಮಾಣಿಕತೆ ( ಪ್ರಾಯೋಗಿಕ )

ಒಂದು ಕೋಣೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯಷ್ಟೇ ಪೆಪರಮೆಂಟ ಇಲ್ಲವೆ ಹಂಜಿಗಳನ್ನು ಗುಂಪಾಗಿ ಇಟ್ಟಿರ ಬೇಕು. ವಿದ್ಯಾರ್ಥಿ ಸಂಖ್ಯೆಯಷ್ಟೇ ವಸ್ತುಗಳಿರುವನೆಂದು

ವಿದ್ಯಾರ್ಥಿಗಳಿಗೆ ಗೊತ್ತಾಗಕೂಡದು. ವಿದ್ಯಾರ್ಥಿಗಳನ್ನು ಒಬ್ಬೊಬ್ಬರನ್ನಾಗಿ ಕೋಣೆಯಲ್ಲಿ ಬಿಡಬೇಕು. ಕೇವಲ ಒಂದು ಪೆಪ್ಪರಮೆಂಟು, ಒಂದು ಹಂಜಿಯನ್ನು ತೆಗೆದು ಕೊಳ್ಳಲು ಸ್ಪಷ್ಟವಾಗಿ ತಿಳಿಸಬೇಕು. ಒಂದು ಬದಿಯಿಂದ ಒಳಗೆ ಹೋಗಿ ಮತ್ತೊಂದು ಬದಿಯಿಂದ ಹೊರಗೆ ಹೋಗುವಂತೆ ವ್ಯವಸ್ಥೆ ಮಾಡಬೇಕು. ಪ್ರತಿಸಲವೂ ಕೋಣೆಯಲ್ಲಿ ಉಳಿದ ಪೆಪ್ಪರಮೆಂಟು, ಹಂಜಿಗಳನ್ನು ಎಣಿಸಬೇಕು. ಎಣಿಸುವದು ವಿದ್ಯಾರ್ಥಿಗಳಿಗೆ ಗೊತ್ತಾಗಬಾರದು ಮತ್ತು ಪರೀಕ್ಷೆ ಮಾಡುವದಾಗಿ ವಾತಾವರಣ ಆದಷ್ಟು ಇರಕೂಡದು. ಸರಿಯಾದ ಸಂಖ್ಯೆಯು ಉಳಿಯದಿದ್ದಲ್ಲಿ ಯಾವ ವಿದ್ಯಾರ್ಥಿಯ ಕಾಲಕ್ಕೆ ಹೀಗಾಗಿದೆಯೋ ಆ ವಿದ್ಯಾರ್ಥಿಯು ಅಪ್ರಾಮಾಣಿಕನೆಂದು ತಿಳಿದು ಕೊಳ್ಳಬಹುದು. ಆ ಕಾಲಕ್ಕೆ ಆ ವಿದ್ಯಾರ್ಥಿಯನ್ನು ಕೇವಲ ಗುರ್ತಿಸಿ ಬಿಡಬೇಕು. ಯಾವ ಚೌಕಸಿ ಮಾಡಕೂಡದು.

ಶ್ರೀಮತಿ ಆಯ್. ಬಿ. ಕುಲಕರ್ಣಿ

**ಒರೆ ನಂ. ೭ :** ಪರೋಪಕಾರ ( ತಾತ್ವಿಕ )

ಮನೆಯಿಂದ ಸಾಲೆಗೆ ವಿದ್ಯಾರ್ಥಿಯು ಹೊರಟಿರುವನು. ವೇಳೆ ಬಹಳವಾಗಿದೆ. ಮಧ್ಯದಲ್ಲಿ ಸ್ವಲ್ಪ ವೇಳೆ ಕಳೆದರೂ ಸಾಲೆಗೆ ತಡವಾಗುವದು. ಇಂಥ ಸಮಯದಲ್ಲಿ ಮಾರ್ಗದೊಳಗೆ ಒಬ್ಬ ಮುಪ್ಪಿನ ಮುದುಕಿಯು ದೊಡ್ಡ ಗಂಟನ್ನು ತಲೆಯ ಮೇಲೆ ಹೊರಿಸಲು ಕೇಳಿಕೊಳ್ಳುವಳು. ಆಗ ಅವನು—

೧ ) ಸಾಲೆಗೆ ತಡವಾಗುವದೆಂದು ಮುದುಕಿಯ ಮಾತುಗಳನ್ನು ಅಲ್ಲಗಳೆದು ಹೋಗಬಹುದು.

೨ ) ಸಾಲೆಗೆ ತಡವಾದರೂ ಅಡ್ಡಿ ಇಲ್ಲ. ಮುದುಕಿಗೆ ಗಂಟನ್ನು ಹೊರಿಸಿ ಹೋಗಬಹುದು.

ಇವುಗಳಲ್ಲಿ ನೀನು ಯಾವುದನ್ನು ಮಾಡುವಿ. ಎಂಬುದನ್ನು ✓ ಚಿಹ್ನೆಯಿಂದ ತೋರಿಸು. ಎರಡನೆಯದಕ್ಕೆ ✓ ಚಿಹ್ನೆ ಹಾಕಿದ ವಿದ್ಯಾರ್ಥಿಯಲ್ಲಿ ಪರೋಪಕಾರ ಭಾವನೆಯು ಬಲವಾಗಿದೆ ಎಂದು ತಿಳಿದುಕೊಳ್ಳಬಹುದು.

ಶ್ರೀ ಎಸ್. ಎ. ಭೋಜ

**ಒರೆ ನಂ. ೮ :** ಆತ್ಮಸಂಯಮನ ( ಪ್ರಾಯೋಗಿಕ )

ವರ್ಗದ ಪ್ರತಿಯೊಬ್ಬ ವಿದ್ಯಾರ್ಥಿಗೆ ೧೦ ರಂತೆ ನೀರಲ ಹಣ್ಣು, ಪೆಪ್ಪರಮೆಂಟುಗಳನ್ನು ಮುಂಜಾನೆ ೧೧ ಘಂಟೆಗೆ ಕೊಟ್ಟು, ೪ ಘಂಟೆಯ ವರೆಗೆ ಅವುಗಳನ್ನು ಸುರಕ್ಷಿತವಾಗಿಟ್ಟು ತಿರುಗಿ ಕೊಡಲು ಹೇಳಬೇಕು. ಆ ವೇಳೆಗೆ ಪ್ರತಿಯೊಬ್ಬರಿಂದ ಎಣಿಸಿ ತಕ್ಕೊಳ್ಳಬೇಕು.

ತಮ್ಮ ಆತ್ಮಸಂಯಮನ ಪ್ರಮಾಣ = ೧೦ × ಉಳಿದ ಹಣ್ಣುಗಳು/ಪೆಪ್ಪರಮೆಂಟುಗಳು.

**ಸೂಚನೆ** :— ಇಂಥದೊಂದು ಪರೀಕ್ಷಣವನ್ನು ಮೂಲೋದ್ಯೋಗ ಚಟುವಟಿಕೆಯನ್ನು ಕೈಕೊಳ್ಳುವದರಲ್ಲಿ ಮಾಡಬಹುದು.

ಶ್ರೀ ಜಿ. ಎಸ್. ಗೋಕರ್ಣ

( ಶ್ರೀ ಕೆ. ಬಿ. ತೇರಗಾಂವಕರ, ಪ್ರಿನ್ಸಿಪಾಲ, ಜೀ. ಬಿ. ಟಿ. ಸಿ. ಇವರ ಒಪ್ಪಿಗೆಯನ್ನು ತೆಗೆದು ಕೊಳ್ಳಲಾಗಿದೆ. )

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

**ಶೇಲಾರ ಕೃತ**

**ಪ್ರಾಥಮಿಕ ಭೂಮಿತಿ**

**[ಕ್ಷೇತ್ರಫಲ ಘನಫಲ ಸಹಿತ]**

೪ ರಿಂದ ೭ ನೇಯ ವರ್ಗದ ವರೆಗಿನ
ವಿಷಯವನ್ನೆಲ್ಲ ಒಳಗೊಂಡಿದೆ.

**ಬೆಲೆ: ೧ರೂ. ೮೫ನೆ ಮಾತ್ರ**

**ದೊರೆಯುವ ಸ್ಥಳ:—**

**ಸಾಯಿ ಪಬ್ಲಿಶಿಂಗ್ ಹಾವುಸ್,**
**ವಿಜಯ ರೋಡ, ಧಾರವಾಡ**

# ಜೀವನ ಶಿಕ್ಷಣ ಶಾಲೆಗಳಲ್ಲಿ ಮೌಲ್ಯಮಾಪನ

ಲೇಖಕರು: **ಶ್ರೀ ಎನ್. ಪಿ. ಹೊಟ್ಟಿ,** B.Sc. (Hons.), M.Ed., D.P.E., D.B.E.
ಪ್ರಾಧ್ಯಾಪಕ, ಜಿ. ಬಿ. ಟಿ. ಸಿ., ಧಾರವಾಡ.

**ಮೌಲ್ಯಮಾಪನದ ಉದ್ದೇಶ :—**

ಶಿಕ್ಷಣದ ಯೋಜನೆಯು ಪರಿಪೂರ್ಣವಾಗ ೀಕಾದರೆ ಮುಖ್ಯವಾಗಿ ಮೂರು ಸಂಗತಿಗಳು ಅವಶ್ಯ. ೧ ) ಧ್ಯೇಯ. ೨ ) ಬೋಧನ ತಂತ್ರ. ೩ ) ಮೌಲ್ಯ ಮಾಪನ. ಈ ಮೂರು ಸಂಗತಿಗಳು ಂದಕ್ಕೊಂದು ಪರಸ್ಪರ ಸಂಬಂಧಿತವಿರುವವು. ಅಂದರೆ ಯಾವದೇ ಶಿಕ್ಷಣದ ಧ್ಯೇಯವನ್ನು ನಿರ್ದಿಷ್ಟ ಪಡಿಸಿದಾಗ ಅದನ್ನು ಮುಟ್ಟುವದಕ್ಕಾಗಿ ಯೋಗ್ಯವಾದ ಮಾರ್ಗವು ೀಕು. ಅರ್ಥಾತ್ ಧ್ಯೇಯಕ್ಕನುಗುಣವಾಗಿ ಮಕ್ಕಳಲ್ಲಿ ೂೀಗ್ಯ ಮೌಲ್ಯಗಳನ್ನುಂಟು ಮಾಡುವ ಬೋಧನ ಂತ್ರವು ಬೇಕು. ಇಂಥದೊಂದು ಬೋಧನ ತಂತ್ರವು ಅಪೇಕ್ಷಿತ ಮೌಲ್ಯಗಳನ್ನು ಮಕ್ಕಳಲ್ಲಿ ಎಷ್ಟರ ಮಟ್ಟಿಗೆ ಹುಟ್ಟಿಸಿದೆ ಎಂಬುದನ್ನು ತಿಳಿದುಕೊಳ್ಳಲಿಕ್ಕೆ ಯೋಗ್ಯ ಮಾಪನಗಳು ಬೇಕು. ಯಾವದೇ ಇಂಥ ಮೌಲ್ಯ ಮಾಪನವನ್ನು ಪ್ರಮಾಣೀಕರಿಸಿದ ಹೊರತು ಉಪಯೋಗಿಸಲಿಕ್ಕಾಗದು. ಮೌಲ್ಯ ಮಾಪನವನ್ನು ಪ್ರಮಾಣೀಕರಿಸಿ ಉಪಯೋಗಿಸಿದಾಗ ಒಂದು ವೇಳೆ ಮಗುವಿನಲ್ಲಿ ತಕ್ಕ ಮೌಲ್ಯಗಳು ಹುಟ್ಟಿರುವದಿಲ್ಲ. ಅಥವಾ ಹುಟ್ಟುತ್ತಿರುವದಿಲ್ಲವೆಂದು ಕಂಡರೆ ಕಲಿಯತಕ್ಕ ಮಗುವಿ ನಲ್ಲಿ ಏನಾದರೂ ದೋಷವಿರಬೇಕು; ಇಲ್ಲವೆ ಬೋಧನ ತಂತ್ರದಲ್ಲಿಯಾದರೂ ದೋಷವಿರಬೇಕು ಎಂದು ಸೂತ್ರಾಗುವದು. ನಂತರ ಯೋಗ್ಯ ಮಾರ್ಪಾಡು ಮಾಡಲಿಕ್ಕೆ ಬರುವದು. ಹೀಗೆ ಮೌಲ್ಯ ಮಾಪಗಳು ಮಕ್ಕಳಲ್ಲಿ ಬೆಳೆದು ಬರುತ್ತಿರುವ ಮೌಲ್ಯಗಳನ್ನು ತಳೆಯಲು ಉಪಯೋಗವಾಗುವವಲ್ಲದೆ ಶಿಕ್ಷಕರಿಗೆ ತಮ್ಮ ಬೋಧನ ಕ್ರಮದಲ್ಲಿ ಮಾರ್ಪಾಡು ಮಾಡುವ ರಿತು, ಬೇಕು-ಬೇಡಗಳನ್ನು ತಿಳಿದು ಕೊಳ್ಳಲು ಸಹಾಯಕಾರಿಯಾಗುವವು. ಅಲ್ಲದೆ ಶಿಕ್ಷಣದ ಧ್ಯೇಯವನ್ನು ಷ್ಟರ ಮಟ್ಟಿಗೆ ಸಾಧಿಸಲಾಗಿದೆ ಅಥವಾ ಸಾಧಿಸಲಾಗು ತ್ತಿದೆ ಎಂಬುದನ್ನು ತಿಳಿದುಕೊಳ್ಳಲು ಸಾಧನಗಳಾಗಿವೆ.

ಇನ್ನು ಮೌಲ್ಯ ಮಾಪಗಳನ್ನು ಯಾವುದೋ ಂದು ಕಾಲ್ಪನಿಕ ತತ್ವವನ್ನಿಟ್ಟುಕೊಂಡು ರಚಿಸಿದರೆ ಅವುಗಳ ನಿಜವಾದ ಉಪಯೋಗವಾಗಲಾರದು. ಅವುಗಳನ್ನು ರಚಿಸುವ ಕರ್ತೃಗಳು ಆಯಾ ಶಿಕ್ಷಣದ ಧ್ಯೇಯಕ್ಕನುಗುಣವಾಗಿರಬೇಕು. ಹೀಗಿರದಿದ್ದ ಪಕ್ಷದಲ್ಲಿ ಅನೇಕ ಸಲ ಆ ಶಿಕ್ಷಣದ ಧ್ಯೇಯ-ಧೋರಣೆಗಳೇ ಟೀಕೆಗೆ ಗುರಿಯಾಗುವವು. ಇಂಥ ಉದಾಹರಣೆಗಳಲ್ಲಿ ಜೀ. ಶಿ. ಯೂ ಒಂದಾಗಿದೆ; ಎಂದು ಹೇಳಿದರೆ ತಪ್ಪಾಗ ಲಿಕ್ಕಿಲ್ಲ. ಜೀವನ ಶಿಕ್ಷಣ ಶಾಲೆಗಳಲ್ಲಿಯ ಮಕ್ಕಳ ಪ್ರಗತಿ ಯನ್ನು ಅಳೆಯುವದಕ್ಕೆ ಪ್ರಚಲಿತವಿರುವ ಮೌಲ್ಯ ಮಾಪಗಳು ಎಷ್ಟರ ಮಟ್ಟಿಗೆ ಜೀವನ ಶಿಕ್ಷಣದ ಧ್ಯೇಯ ವನ್ನೂ, ಬೋಧನ ತಂತ್ರವನ್ನೂ ಅವಲಂಬಿಸಿವೆ ಎಂಬುದನ್ನು ವಿಚಾರಿಸಿದರೆ ಬಹಳಷ್ಟು ನಮಾಧಾನಕರ ಪರಿಸ್ಥಿತಿ ಇರುವದೆಂದು ಹೇಳಲಿಕ್ಕಾಗದು.

**ಜೀ. ಶಿ. ಶಾಲೆಗಳಲ್ಲಿ ಪ್ರಚಲಿತವಿರುವ ಮೌಲ್ಯಮಾಪಗಳ ದೋಷಗಳು :—**

ಮೌಲ್ಯ ಮಾಪನ ಕ್ರಮವು ಅನಾದಿ ಕಾಲದಿಂದ ಒಂದಿಲ್ಲೊಂದು ರೀತಿಯಲ್ಲಿ ನಡೆದು ಬಂದಿದೆ. ಇತ್ತೀಚೆಗೆ ಪ್ರಚಾರದಲ್ಲಿರುವ ಮೌಲ್ಯ ಮಾಪನದ ಕ್ರಮದಲ್ಲಿ ಪರೀಕ್ಷೆಗಳು ಅಗ್ರಸ್ಥಾನವನ್ನು ವಹಿಸಿವೆ. ಆಯಾ ಕಾಲದ ಶಿಕ್ಷಣದ ಧ್ಯೇಯ-ಧೋರಣೆಗಳು ಹಾಕಿಕೊಟ್ಟ ಮೌಲ್ಯಗಳನ್ನು ಅಳೆಯುವದಕ್ಕೆ ಈ ಪರೀಕ್ಷೆಗಳು ತಕ್ಕ ಮಟ್ಟಿಗೆ ಸಹಾಯಕಾರಿಯಾಗಿದ್ದು ಶಿಕ್ಷಣದ ಧ್ಯೇಯ-ಧೋರಣೆಗಳು ಬದಲಾಗುತ್ತ ಬಂದಂತೆ ಪರೀಕ್ಷಾ ಪದ್ಧತಿ ಗಳಲ್ಲಿಯೂ ಎಷ್ಟೋ ಬದಲಾವಣೆಗಳು ಆಗಿದ್ದುಂಟು. ಆದರೆ ಜೀವನ ಶಿಕ್ಷಣ ವ್ಯವಸ್ಥೆಗೆ ಅನುಗುಣವಾಗಿ ಪರೀಕ್ಷೆಗಳಲ್ಲಿ ಮಾರ್ಪಾಡುಗಳು ಎಷ್ಟರಮಟ್ಟಿಗೆ ಆಗಿವೆ ಎಂಬುದು ಸಂಶಯಾಸ್ಪದವಿದೆ. ಇತರ ಪರೀಕ್ಷಾ ಪದ್ಧತಿ ಗಳನ್ನು ಇದ್ದಕ್ಕಿದ್ದಂತೆ ಜೀವನ ಶಿಕ್ಷಣ ಶಾಲೆಗಳಲ್ಲಿಯೂ ಉಪಯೋಗಿಸಿದರೆ ಅವು ದೋಷಯುಕ್ತವಾಗಿ ಪರಿಣಮಿಸು ವದೆಂದು ಬೇರೆ ಹೇಳಬೇಕಾಗಿಲ್ಲ. ಸಾಂಪ್ರದಾಯಿಕ ಶಾಲೆಗಳಲ್ಲಿ ಉಪಯೋಗಿಸುವ ಪರೀಕ್ಷಾ ಪದ್ಧತಿಗಳನ್ನೇ ಸದ್ಯಕ್ಕೆ ಜೀವನ ಶಿಕ್ಷಣ ಶಾಲೆಗಳಲ್ಲಿಯೂ ಬಹು ಮಟ್ಟಿಗೆ ಉಪಯೋಗಿಸಲಾಗಿದೆ ಎನ್ನಬಹುದು. ಈ ಪರೀಕ್ಷಾ

ಪದ್ಧತಿಗಳಲ್ಲಿ ಮೊದಲಿನಿಂದಲೂ ಕೆಲವು ದೋಷಗಳು ಕಂಡು ಬರುತ್ತಿವೆ ಜೀವನ ಶಿಕ್ಷಣ ಪ್ರಣಾಲಿಗಂತೂ ಅವು ಮತ್ತಷ್ಟು ಹೆಚ್ಚಿಗೆ ಅನಿಷ್ಟ ಪರಿಣಾಮವನ್ನುಂಟು ಮಾಡುತ್ತವೆ. ಎಂದು ಹೇಳಬಹುದು ಅವುಗಳಲ್ಲಿ ಮುಖ್ಯವಾದವುಗಳೆಂದರೆ:—

i ] ಸಾಂಪ್ರದಾಯಿಕ ವಿಷಯಗಳಲ್ಲಿ ಸಾಧಿಸಿದ ಪ್ರಗತಿಯನ್ನಷ್ಟೇ ಅಳೆಯಲು ಪ್ರಾಧಾನ್ಯತೆಯನ್ನು ಕೊಡಲಾಗಿದೆ. ಹೀಗೆ ಅಳೆಯುವಾಗ ಕೂಡ ಯಾಂತ್ರಿಕವಾಗಿ ಉಪಯೋಗಿಸುವ ಸ್ಮರಣಶಕ್ತಿಯನ್ನು ತಿಳಿದು ಕೊಳ್ಳುವ ಒರೆಗಳನ್ನೇ ಹೆಚ್ಚಾಗಿ ಉಪಯೋಗಿಸಲಾಗಿದೆ.

ii ] ಮಗುವು ಇಡಿ ವರ್ಷದಲ್ಲೆಲ್ಲ ತನ್ನ ದೈನಂದಿನ ಕಾರ್ಯದಲ್ಲಿ ಎಷ್ಟೇ ಪ್ರಗತಿಯನ್ನು ತೋರಿಸಿದರೂ ಅವನ್ನು ಲಕ್ಷಕ್ಕೆ ತಾರದೆ ಕೇವಲ ವಾರ್ಷಿಕ ಪರೀಕ್ಷೆಯಲ್ಲಿ ಅವನು ತೋರಿಸಿದ ಪ್ರತಿಕ್ರಿಯೆಯ ಮೇಲಿಂದ ಅವನ ಒಟ್ಟು ಶೈಕ್ಷಣಿಕ ಮೌಲ್ಯಗಳನ್ನು ಅಳೆಯುವ ಪರಿಪಾಠವಿದೆ. ಅರ್ಥಾತ್ ವಾರ್ಷಿಕ ಪರೀಕ್ಷೆಗಳಿಗೆ ಪ್ರಾಧಾನ್ಯತೆಯನ್ನು ಕೊಡಲಾಗಿದೆ.

iii ] ಕೆಲವೊಂದು ಕಡೆಗೆ ಬಾಲಕರ ದೈನಂದಿನ ಚಟುವಟಿಕೆಗಳನ್ನು ಅಳೆಯುವದಕ್ಕೆ ಪ್ರಯತ್ನಮಾಡಿದ್ದರೂ ಅವು ಶಾಸ್ತ್ರೋಕ್ತವಾಗಿರುವದಿಲ್ಲ ಮತ್ತು ವಸ್ತುನಿಷ್ಠವಾಗಿರುವದಿಲ್ಲವೆನ್ನಬಹುದು.

iv ] ನೈತಿಕ ಮತ್ತು ಕ್ರಿಯಾತ್ಮಕ ಶಕ್ತಿಗಳನ್ನು ಅಳೆಯುವದಕ್ಕೆ ಸಾಕಷ್ಟು ವಸ್ತುನಿಷ್ಠ ಯೋಜನೆಗಳಿಲ್ಲ.

## ಜೀವನ ಶಿಕ್ಷಣ ಶಾಲೆಗಳಲ್ಲಿರಬೇಕಾದ ಮೌಲ್ಯಮಾಪನದ ತತ್ವಗಳು:—

ಯಾವದೇ ಶಿಕ್ಷಣದ ಮೌಲ್ಯ ಮಾಪನವು ಅದರ ಧ್ಯೇಯ–ಧೋರಣ ಮತ್ತು ಬೋಧನಕ್ರಮಗಳ ಮೇಲೆ ಅವಲಂಬಿಸಿದೆ ಎಂದು ಹಿಂದೆ ಹೇಳಿದೆ. ಜೀ. ಶಿ. ದ ಧ್ಯೇಯ–ಧೋರಣಗಳು ಮತ್ತು ಭೋದನ ತಂತ್ರವು ಸಾಂಪ್ರದಾಯಿಕ ಶಿಕ್ಷಣದಿಂದ ಭಿನ್ನವಾಗಿದೆ ಎಂದು ಗೊತ್ತಿದ್ದ ಸಂಗತಿ. ಅಂದ ಬಳಿಕ ಜೀ. ಶಿ. ಶಾಲೆಗಳಲ್ಲಿ ಇರಬೇಕಾದ ಮೌಲ್ಯಮಾಪಗಳು ಸಾಂಪ್ರದಾಯಿಕ ಶಾಲೆಗಳಲ್ಲಿರುವ ಮೌಲ್ಯಮಾಪಗಳಿಗಿಂತ ಭಿನ್ನವಾಗಿರಬೇಕೆಂಬದು ಸ್ಪಷ್ಟವಾಗುವದು. ಇನ್ನು ಜೀ. ಶಿ. ಶಾಲೆಗಳಲ್ಲಿರಬೇಕಾದ ಮೌಲ್ಯಮಾಪಗಳು ಯಾವ ತತ್ವಗಳನ್ನೊಳಗೊಂಡಿರಬೇಕೆಂಬುದನ್ನು ತಿಳಿದುಕೊಳ್ಳಬೇಕಾದರೆ ಜೀವನ ಶಿಕ್ಷಣವೂ ಮತ್ತು ಸಾಂಪ್ರದಾಯಿಕ ಶಿಕ್ಷಣವೂ ತಮ್ಮ ತಮ್ಮ ಧ್ಯೇಯ–ಧೋರಣ ಹಾಗೂ ಬೋಧನ ಕ್ರಮಗಳಲ್ಲಿ ಯಾವ ಭಿನ್ನತೆಗಳನ್ನು ಪಡೆದಿವೆ ಎಂಬುದನ್ನು ವಿಚಾರಿಸುವದು ಅವಶ್ಯ. ಮೊದಲನೆಯದಾಗಿ ಸಾಂಪ್ರದಾಯಿಕ ಶಿಕ್ಷಣವು ಕೇವಲ ಸಾಂಪ್ರದಾಯಿಕ ವಿಷಯಗಳನ್ನು ಸಾಂಪ್ರದಾಯಿಕ ಪದ್ಧತಿಯಲ್ಲಿ ಕಲಿಸುವದನ್ನು ಇಟ್ಟುಕೊಂಡಿದ್ದರೆ ಜೀವನ ಶಿಕ್ಷಣವು ವೈಶಿಷ್ಟ್ಯ ಪೂರಕವಾಗಿರುವ ಮಗುವಿನ ವಿವಿಧ ಸಾಮಾಜಿಕ ಮುಖಗಳಲ್ಲಿ ಅವನ ಅಖಂಡ ವ್ಯಕ್ತಿತ್ವವು ವಿಕಾಸ ಹೊಂದುವಂತೆ ಮಾಡುದಕ್ಕೆ ಗುರಿಯನ್ನಿಟ್ಟುಕೊಂಡಿದೆ. ಆ ವ್ಯಕ್ತಿಯು ತನ್ನ ಸುತ್ತಣ ಪರಿಸ್ಥಿತಿಯಲ್ಲಿ ಬರುವ ಜೀವನ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಯಶಸ್ಸಿನಿಂದ ಎದುರಿಸಲು ಬೇಕಾಗುವ ಶೀಲ ಸಾಮರ್ಥ್ಯಗಳನ್ನು, ಆಯಾ ಚಟುವಟಿಕೆಗಳನ್ನು ಕೈಕೊಂಡಾಗ ತಲೆದೋರುವ ಕ್ರಿಯೆ ಪ್ರತಿಕ್ರಿಯೆಗಳ ಮೂಲಕ ಪ್ರತ್ಯಕ್ಷ ಅನುಭವ ಪಡೆದುಕೊಂಡೇ, ತಂದುಕೊಳ್ಳುವಂತೆ ಮಾಡುವದರ ಕಡೆಗೂ ಧ್ಯೇಯವನ್ನಿಟ್ಟಿದೆ.

ಎರಡನೆಯದಾಗಿ ಜೀ. ಶಿ. ದ ಬೋಧನ ಕ್ರಮವನ್ನು ನಿಚಾರಿಸಿದರೆ ಅದು ಕೂಡ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಗಿಂತಲೂ ತೀರ ಭಿನ್ನವಾಗಿದೆ ಎಂದು ಕಾಣದೆ ಇರಲಾರೆವು. ಸಾಂಪ್ರದಾಯಿಕ ಪದ್ಧತಿಯು ನಿರ್ದಿಷ್ಟ ಪಡಿಸಿದ ಪಠ್ಯಪುಸ್ತಕಗಳು, ಅಭ್ಯಾಸ ಪತ್ರಿಕೆ, ಇವುಗಳ ಮುಖಾಂತರ ಹೆಚ್ಚಾಗಿ ಕಂಠಪಾಠ ಮಾಡಿಸಿ ಸಾಂಪ್ರದಾಯಿಕ ವಿಷಯಗಳ ಜ್ಞಾನವನ್ನು ಮಾತ್ರ ಕೊಡುವ ಕ್ರಮವನ್ನು ಇಟ್ಟುಕೊಂಡಿದ್ದರೆ, ಜೀ. ಶಿ. ವು ಆಯಾ ಚಟುವಟಿಕೆಗಳನ್ನು ಕೊನೆಗಾಣಿಸುವಾಗ ಮಕ್ಕಳು ಪ್ರಾಸಂಗಿಕವಾಗಿ ಪಡೆಯುವ ವಿಷಯ ಜ್ಞಾನವನ್ನು ಯೋಗ್ಯ ರೀತಿಯಲ್ಲಿ ಸಂಯೋಜಿಸಿ ಅದನ್ನು ಕ್ರಮವಾಗಿ ಉಚ್ಚ ಮಟ್ಟಕ್ಕೆ ಏರಿಸುತ್ತ ಸಮವಾಯ ಪದ್ಧತಿಯಿಂದ ಮಕ್ಕಳು ತಾವಾಗಿಯೇ ಕಲಿಯುವಂತೆ ಮಾಡುವ ಕ್ರಮವೊಂದನ್ನು ಇಟ್ಟುಕೊಂಡಿದೆ. ಮಗುವು ಜೀವನ ಸಮಸ್ಯೆಗಳನ್ನು ಎದುರಿಸುವಾಗ ತನ್ನ ಎಲ್ಲ ಜ್ಞಾನ ಭಾಂಡಾರವನ್ನೂ, ಸಾಮರ್ಥ್ಯವನ್ನೂ, ಕೌಶಲ್ಯಗಳನ್ನೂ ಪರಮಾವಧಿ ಮಟ್ಟದಲ್ಲಿ ಉಪಯೋಗಿಸಿ ಆ ಸಮಸ್ಯೆಯನ್ನು ಪರಿಹಾರ ಮಾಡಲು ಯತ್ನಿಸುವದು. ಈ ಕ್ರಮವನ್ನು ವಹಿಸಿಕೊಂಡಾಗ ಅವನ ಜ್ಞಾನ ಭಾಂಡಾರವು–ಬೌದ್ಧಿಕ, ಕ್ರಿಯಾತ್ಮಕ, ನೈತಿಕ

ಈ ತೆರನಾಗಿ ಸರ್ವಮುಖಗಳಲ್ಲಿಯೂ ಹೆಚ್ಚುತ್ತ ಹೋಗುವದೆಂಬುದರಲ್ಲಿ ಸಂಶಯವಿಲ್ಲ. ಇಂಥದೊಂದು ಭಿನ್ನವಾದ ಕ್ರಮವನ್ನು ಜೀ. ಶಿ. ವು ಇಟ್ಟುಕೊಂಡಾಗ ಕೇವಲ ಬೌದ್ಧಿಕ ಮೌಲ್ಯಗಳನ್ನಷ್ಟೇ ಅಳೆಯುವ ಯೋಜನೆಯನ್ನು ಇಟ್ಟುಕೊಂಡರೆ ಅದು ತೀರ ಸಂಕುಚಿತ ವಾಗುವದೆಂದು ಸ್ಪಷ್ಟವಾಗದೆ ಇರದು. ಬುದ್ಧಿಯು ಇಡೀ ವ್ಯಕ್ತಿತ್ವದ ಒಂದು ಅಂಶಮಾತ್ರ ಇದೆ. ಆದ್ದರಿಂದ ಜೀ. ಶಿ. ದಲ್ಲಿ ಮೌಲ್ಯ ಮಾಪನವು ಮಗುವಿನ ಸರ್ವತೋಮುಖ ವಿಕಾಸವನ್ನು ಅಳೆಯುವಂಥದಿರಬೇಕು. ಅಂದರೆ ಅದು ಮಗುವಿನ ಬೌದ್ಧಿಕ, ಕ್ರಿಯಾತ್ಮಕ, ನೈತಿಕ ಈ ಎಲ್ಲ ಮೌಲ್ಯಗಳನ್ನು ಅಳೆಯಲು ಯೋಗ್ಯವಾಗಿರ ಬೇಕು. ಮತ್ತು ಈ ಮೌಲ್ಯಗಳನ್ನು ಮಗುವು ಕೇವಲ ತಾತ್ತ್ವಿಕವಾಗಿ ಅರಗಿಸಿಕೊಂಡದ್ದನ್ನು ಅಳೆದರೆ ಸಾಲದು. ಆದರೆ ಅವುಗಳನ್ನು ಸ್ವ ಸಂಗಾನುಸಾರವಾಗಿ ಕಾರ್ಯರೂಪಕ್ಕಿಳಿಸುವದಕ್ಕೆ ಅವನು ಎಷ್ಟರಮಟ್ಟಿಗೆ ಅವುಗಳನ್ನು ರಕ್ತಗತಮಾಡಿಕೊಂಡಿರುವನೆಂಬುದನ್ನೂ ಪ್ರಾಯೋಗಿಕ ವಾಗಿ ಅಳೆಯುವದು ಅಷ್ಟೇ ಅವಶ್ಯವಿದೆ. ಆದ್ದರಿಂದ ಪ್ರಾಯೋಗಿಕ ಮೌಲ್ಯಮಾಪವೂ ಇರಬೇಕಾಗುವದು.

ಮಗುವಿನ ಸರ್ವಾಂಗೀಣ ಉನ್ನತಿಯನ್ನು ಅಳೆಯುವ ಅಂಗಗಳ ಮುಖ್ಯಾಂಶಗಳನ್ನು ಕೆಳಗೆ ಕಾಣಿಸಿದಂತೆ ವರ್ಗೀಕರಿಸಬಹುದು.

| ಅ. ಸಂ. | ಮೌಲ್ಯಗಳು | ತಾತ್ತ್ವಿಕ ಅಂಶಗಳು | ಪ್ರಾಯೋಗಿಕ ಅಂಶಗಳು |
|---|---|---|---|
| ೧. | ಬೌದ್ಧಿಕ | ೧) ಅಭ್ಯಾಸ ಪತ್ರಿಕೆಯಲ್ಲಿಯ ವಿಷಯಗಳು(ಸಾಂಪ್ರದಾಯಿಕ ವಿಷಯಗಳು) | ಅಭ್ಯಾಸ ಪತ್ರಿಕೆಯಲ್ಲಿ ಕಾಣಿಸಿದ ಪ್ರಾಯೋಗಿಕ ವಿಭಾಗ. |
| | | ೨) ವ್ಯವಹಾರ ಜ್ಞಾನ | ಸುದ್ದಿ ಹೇಳುವದು, ಮಾತುಗಾರಿಕೆ ಓದು, ಬರೆಹದ ತಂತ್ರಗಳು ಇತ್ಯಾದಿ. |
| ೨. | ಕ್ರಿಯಾತ್ಮಕ | ಇವುಗಳಿಗೆ ಸಂಬಂಧಿಸಿದ ಎಲ್ಲ ಶಾಸ್ತ್ರಗಳು. | ಮುಲೋದ್ಯೋಗ, ಶಾರೀರಿಕ, ಚಟುವಟಿಕೆ, ಸಾಂಘಿಕ ಜೀವನ, ಶ್ರಮದಾನ, ಸ್ವಚ್ಛತೆ, ಆರೋಗ್ಯದ ಚಟುವಟಿಕೆ, ಆಹಾರನಿಯಮ ಚಿತ್ರ–ಕಲೆ, ವಸ್ತುಸಂಗ್ರಹ, ಲಲಿತ ಕಲೆಗಳು ಮತ್ತು ಸ್ವಯಂ ಶಾಸಿತ ಚಟುವಟಿಕೆಗಳು. |
| ೩. | ನೈತಿಕ | ಇವುಗಳಿಗೆ ಸಂಬಂಧಿಸಿದ ನೀತಿಶಾಸ್ತ್ರ. | ಪ್ರಾಮಾಣಿಕತೆ, ಸಹಕಾರ, ದಿಟ್ಟತನ, ವಿಧೇಯತೆ, ಮುಂದಾಳುತನ, ಕರ್ತವ್ಯನಿಷ್ಠೆ, ಸತ್ಯ, ಸ್ವಾವಲಂಬನ ಗೆಳೆತನ, ನಿಯಮಿತತನ, ಶಿಸ್ತು, ತಾಳ್ಮೆ ಸಮತಾಭಾವ, ಪರೋಪಕಾರ, ದೇಶಾಭಿಮಾನ, ಸ್ವಾಭಿಮಾನ, ಔದಾರ್ಯ, ಆತ್ಮ ಸಂಯಮನ ಇತ್ಯಾದಿ. |

ಈ ಎಲ್ಲ ಅಂಶಗಳನ್ನು ಪ್ರತ್ಯೇಕವಾಗಿ ಅಗಲಿ ಸಂಯುಕ್ತ ರೂಪದಲ್ಲಿಯಾಗಲಿ ತಾಂತ್ರಿಕ ಮತ್ತು ಪ್ರಾಯೋಗಿಕವಾಗಿ ಅಳೆಯುವ ಮೌಲ್ಯಮಾಪನಗಳು ಜೀವನ ಶಿಕ್ಷಣದ ನಿಜವಾದ ಮೌಲ್ಯಮಾಪನಗಳೆಂದೆನಿಸುವವು.

## ಉಪಸಂಹಾರ :-

ಮೌಲ್ಯಮಾಪನಗಳನ್ನು ನಿರ್ಮಿಸುವದು ಶಿಕ್ಷಕರನ್ನೂ ಶಿಕ್ಷಣ ತಜ್ಞರನ್ನೂ, ಶಿಕ್ಷಣ ಕಾರ್ಯಕರ್ತರನ್ನೂ ಕೂಡಿಕೊಂಡಿದೆ. ಆ ಮಾಪನಗಳು ನಿಬಂಧರೂಪದ ಪರೀಕ್ಷೆಗಳೇ ಇರಬಹುದು ಅಥವಾ ಸಣ್ಣ ಸಣ್ಣ ಒರೆಗಳಿರಬಹುದು. ನಿಬಂಧ ರೂಪದ ಪರೀಕ್ಷೆಗಳನ್ನು ಓದು, ಬರೆಹದ ತಂತ್ರದಲ್ಲಿ ಸಾಕಷ್ಟು ಪರಿಪೂರ್ಣತೆಯನ್ನು ಹೊಂದಿದವರಿಗೆ ಇಡುವದು ಹೆಚ್ಚು ಒಳಿತು ಎಂದೆನಿಸುವದು. ಜೀ. ಶಿ. ವು ಸದ್ಯಕ್ಕೆ ಪ್ರಾಥಮಿಕ ಮಟ್ಟದಲ್ಲಿ ಮಾತ್ರ ಇರುವದರಿಂದ ಅಲ್ಲಿಯ ಮೌಲ್ಯಮಾಪನಗಳು ಒರೆಗಳ ರೂಪದಲ್ಲಿರುವದು ಹೆಚ್ಚು ಯೋಗ್ಯವೆನಿಸುವದು. ಅಂದರೆ ನಿಬಂಧರೂಪದ ಪರೀಕ್ಷೆಗಳನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕೆಂದಲ್ಲ. ಅವುಗಳನ್ನು ಯೋಗ್ಯ ಕಂಡಲ್ಲಿ ಉಪಯೋಗಿಸಬಹುದು.

ಸದ್ಯಕ್ಕೆ ಬೌದ್ಧಿಕ ಮೌಲ್ಯಗಳನ್ನು ಅಳೆಯುವ ಒರೆಗಳನ್ನು ತಯಾರಿಸುವದರಲ್ಲಿ ಬಹುಮಟ್ಟಿಗೆ ಪ್ರಯತ್ನಗಳಾಗಿವೆ. ಪರರಾಷ್ಟ್ರದ ಶಿಕ್ಷಣ ತಜ್ಞರಾದ ಬೀನೆ, ಬೆಲಾರ್ಡ, ಥಾರ್ನಡಾಯಿಕ ಮೊದಲಾದವರೂ ಭಾರತದಲ್ಲಿ ಡಾ. ವ್ಹಿ. ವ್ಹಿ. ಕಾಮತ, ಪ್ರೊ. ಚಟರ್ಜಿ ಮೊದಲಾದವರೂ ಈ ದಿಶೆಯಲ್ಲಿ ಅನೇಕ ಒರೆಗಳನ್ನು ತಯಾರಿಸಿ ಪ್ರಯೋಗ ಮಾಡಿದ್ದಾರೆ. ಇದರಂತೆ ಕ್ರಿಯಾತ್ಮಕ ಮತ್ತು ನೈತಿಕ ಮೌಲ್ಯಗಳ ಅಂಶಗಳನ್ನು ಅಳೆಯುವ ಒರೆಗಳನ್ನು ತಯಾರಿಸುವ ದಿಶೆಯಲ್ಲಿ ಒಂದೆರಡು ಪ್ರಯತ್ನಗಳು ಆದದ್ದು ಕಂಡುಬರುತ್ತಿದೆ. ಪ್ರೊ. ಎನ್. ಸಿ. ಚಟರ್ಜಿ ಮತ್ತು ಲಿಸ್ಲಿ ವೊಲಿವ್ಹರ ಅವರು ಜೀ. ಶಿ. ವನ್ನು ಪಡೆಯುತ್ತಿರುವ ಮಕ್ಕಳ ಮೌಲ್ಯಗಳನ್ನು ಅಳೆಯುವಾಗ ಕೆಲವೊಂದು ಪರೀಕ್ಷಣಗಳನ್ನು ತಯಾರಿಸಿ ಪ್ರಯೋಗಕ್ಕೆ ಹಚ್ಚಿದ್ದಾರೆ. ಇದಲ್ಲದೆ ಫೆಬ್ರುವರಿ ೧೯೫೯ ರಲ್ಲಿ ಬೆಳಗಾಂವಿಯೊಳಗೆ ಜರುಗಿದ ಧಾರವಾಡ ಜಿ. ಬಿ. ಟಿ. ಸಿ. ಯ ಹಳೇ ವಿದ್ಯಾರ್ಥಿಗಳ ವಿಚಾರ ಮಂಥನ ಕಾಲಕ್ಕೆ ಜೀ. ಶಿ. ರಂಗದಲ್ಲಿ ಉಪಯೋಗವಾಗ ಬಹುದಾದ ಒರೆಗಳ ನಮೂನೆಗಳನ್ನು ತಯಾರಿಸಲು ಯತ್ನಿಸಿದ್ದಾರೆ. ಅವುಗಳನ್ನು ಇನ್ನೂ ಪ್ರಯೋಗಕ್ಕೆ ಹಚ್ಚಿ ಪ್ರಮಾಣೀಕರಿಸುವ ಕಾರ್ಯವು ಮಾತ್ರ ಆಗ ಬೇಕಾಗಿವೆ. ಇಂಥ ಯತ್ನಗಳು ಇನ್ನೂ ಹೆಚ್ಚಾಗಿ ಆಗಬೇಕಾದದ್ದು ಅವಶ್ಯವಿದೆ.

ಜೀವನ ಶಿಕ್ಷಣದಲ್ಲಿ, ಯಾವದೇ ಮಗುವು ತಾನು ಅಳವಡಿಸಿಕೊಂಡ ಮೌಲ್ಯಗಳನ್ನು ಎಷ್ಟರ ಮಟ್ಟಿಗೆ ಪ್ರತ್ಯಕ್ಷ ಕಾರ್ಯರೂಪಕ್ಕೆಳಿಸಬಲ್ಲನೆಂಬುದನ್ನೂ ಪರೀಕ್ಷಿಸಬೇಕಾಗಿರುವದರಿಂದ ಇಂಥ ಒರೆಗಳು ಕೇವಲ ತಾತ್ವಿಕ ವಿಭಾಗದಲ್ಲಿ ರಚಿಸಲ್ಪಡದೆ ಪ್ರಾಯೋಗಿಕ ವಿಭಾಗದಲ್ಲಿಯೂ ಅಷ್ಟೇ ಅವಶ್ಯವಾಗಿ ರಚಿಸಲ್ಪಡ ಬೇಕಾಗಿವೆ. ಒರೆಗಳು ವಸ್ತುನಿಷ್ಠವಾಗಿರಬೇಕೆಂದು ಬೇರೆ ಹೇಳಬೇಕಾಗಿಲ್ಲ. ಯಾಕೆಂದರೆ ಮಕ್ಕಳ ಸರ್ವತೋಮುಖ ವಿಕಾಸಕ್ಕೆ ಸಂಬಂಧಿಸಿದ ಮೌಲ್ಯಗಳನ್ನು ವಸ್ತುನಿಷ್ಠವಾಗಿ ಅಳೆಯುವ ಒರೆಗಳ ಅಭಾವ ಇದ್ದದ್ದೂ ಜೀ. ಶಿ. ದಲ್ಲಿ ಸಾಂಪ್ರದಾಯಿಕ ಪದ್ಧತಿಯ ಮೌಲ್ಯಮಾಪನವನ್ನು ಕೈಕೊಳ್ಳುವದಕ್ಕೆ ಒಂದು ಕಾರಣವಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅಲ್ಲದೆ ಇಡೀ ವರ್ಷ ಸಂಪರ್ಕ ಪಡೆದು ಒಬ್ಬ ಜೀ. ಶಿ. ಶಾಲೆಯ ಶಿಕ್ಷಕನು ಯಾವದೊಂದು ಮಗುವಿನ ಕ್ರಿಯಾತ್ಮಕ ಮತ್ತು ನೈತಿಕ ಮೌಲ್ಯಗಳನ್ನು ನಿರೂಪಿಸಿದರೆ ಅವನ ಅಭಿಪ್ರಾಯವನ್ನು ಆಗಿಂದಾಗ ಒರೆಗೆ ಹಚ್ಚಿ ನೋಡುವದಕ್ಕೆ ತಕ್ಕ ಒರೆಗಲ್ಲುಗಳೂ ಸಾಕಷ್ಟು ಇರುವದಿಲ್ಲವೆಂದು ಹೇಳಬಹುದು. ಇವೆರಡೂ ಕೊರತೆಗಳನ್ನು ಹೋಲಾಡಿಸುವದಕ್ಕಾಗಿ ಜೀ. ಶಿ. ದ ಕಾರ್ಯಕರ್ತರು ಮೇಲೆ ಸ್ಪಷ್ಟ ಪಡಿಸಿದ ತತ್ವಗಳನ್ನೊಳಗೊಂಡ ವಸ್ತುನಿಷ್ಠ ಒರೆಗಳನ್ನು ತಯಾರಿಸುವದರ ಕಡೆಗೆ ಗಮನ ವನ್ನು ಕೊಡುವದು ಅಗತ್ಯವೆನಿಸಿದೆ. ಇಂಥ ಒರೆಗಳನ್ನು ತಯಾರಿಸಿದ ನಂತರ ಅವುಗಳನ್ನು ಪ್ರತ್ಯಕ್ಷ ಒರೆಗೆ ಹಚ್ಚಿ ಪ್ರಮಾಣೀಕರಿಸುವ ಕಾರ್ಯವನ್ನು ಮಾಡುವದೂ ಶಿಕ್ಷಣ ಕಾರ್ಯಕರ್ತರನ್ನು ಕೂಡಿದೆ. ಇಂಥದೊಂದು ಕಾರ್ಯವಾದಾಗ ಮಾತ್ರ ಸದ್ಯಕ್ಕೆ ಜೀ. ಶಿ. ಶಾಲೆಗಳಲ್ಲಿರುವ ಮೌಲ್ಯಮಾಪನದ ಬಿಕ್ಕಟ್ಟು ಬಹುಮಟ್ಟಿಗೆ ದೂರಾಗಿ ಜೀ. ಶಿಕ್ಷಣ ಪ್ರಣಾಲಿಯ ಕಾರ್ಯಾಚರಣೆಯ ನಿಜಾಂಶಗಳನ್ನು ಸರಿಯಾಗಿ ತಿಳಿದುಕೊಳ್ಳಲು ಅನುವು ಮಾಡಿಕೊಡಿಯುವದು.

———

# ಮೈಸೂರು ರಾಜ್ಯದ ಹೊಸ ಅಭ್ಯಾಸ ಪತ್ರಿಕೆ

ಲೇಖಕರು : ಶ್ರೀ ಎಚ್. ಜಿ. ಜೋಶಿ; ಬಿ. ಎ, (ಆನರ್ಸ) ಡಿ. ಬಿ. ಈ.
ಅಧ್ಯಾಪಕರು ಗಂ. ಸ. ಟ್ರೇ. ಕಾ. ಧಾರವಾಡ

ರಾಜ್ಯ ಪುನರ್ಘಟನೆಯ ನಂತರ ನಮ್ಮ ರಾಜ್ಯವು ಅನೇಕ ಹೊಸ ಹೊಸ ಸಮಸ್ಯೆಗಳನ್ನು ಎದುರಿಸಬೇಕಾಯಿತಲ್ಲದೆ ಅವುಗಳನ್ನು ಸಮರ್ಥ ರೀತಿಯಿಂದ ಬಿಡಿಸಲೂ ಬೇಕಾಯಿತು. ರಾಜ್ಯವು ಐದು ವಿಭಿನ್ನರಾಜ್ಯಗಳ ಘಟಕಗಳನ್ನು ಒಳಗೊಂಡು ರಚಿತವಾದುದರಿಂದ ಈ ರಾಜ್ಯದ ಯಾವ ಕ್ಷೇತ್ರವೇ ಇರಲಿ ಅಲ್ಲಿ ಪಂಚ ಮುಖ ಗಳನ್ನೇ ಕಾಣಬೇಕಾಯಿತು. ಈ 'ಪಂಚಮುಖಿ' ಗಳಲ್ಲಿಯೂ ಕೂಡ ಒಂದು ಏಕಾಭಿಪ್ರಾಯವಾಗಲಿ, ಏಕಸೂತ್ರತೆಯಾಗಲಿ ಇರಲಿಲ್ಲಿ. ರಾಜ್ಯದ ನೆಮ್ಮದಿಗೆ ಇದು ಒಳಿತಾದುದಲ್ಲವೆಂದು ಬಗೆದು ರಾಜ್ಯಸೂತ್ರ ಧಾರರು ಮೊದಲು ಸಮೀಕರಣಕ್ಕೆ ಕಟಿಬದ್ಧರಾದರು. ಶಿಕ್ಷಣಪ್ರಪಂಚದಲ್ಲಾದರೂ ಕೂಡ ರಾಜ್ಯದಲ್ಲಿ ಬೇರೆ ಬೇರೆ ಕ್ರಮಗಳು, ಪದ್ಧತಿಗಳು ರೂಢಿಯಲ್ಲಿ ಇದ್ದು ದನ್ನು ಕಂಡು ರಾಜ್ಯ ಸರಕಾರವು 'ಶಿಕ್ಷಣ ಸಮೀಕರಣ ಸಲಹಾ ಸಮಿತಿ' ಎಂಬ ಒಂದು ಸಮಿತಿಯನ್ನು ನಿಯಮಿಸಿತು.

ಈ ಸಲಹಾ ಸಮಿತಿಯು ರಾಜ್ಯದಲ್ಲಿಯ ಪ್ರಾಥಮಿಕ ಶಿಕ್ಷಣವು ಏಳು ವರುಷಗಳದ್ದಿರಬೇಕೆಂದು ಶಿಫಾರಸು ಮಾಡಿತು. ಮದ್ರಾಸ, ಹಳೆಯ ಮೈಸೂರು ವಿಭಾಗ ಗಳಲ್ಲಿ ಎಂಟು ವರುಷದ್ದೂ ಮುಂಬೈಕರ್ನಾಟಕದಲ್ಲಿ ಏಳು ವರುಷದ್ದೂ ಆಗಿದ್ದಿತು. ಈ ವಿಭಿನ್ನತೆಯನ್ನು ಹೋಗಲಾಡಿಸಲು ಪ್ರಾಥಮಿಕ ಶಿಕ್ಷಣವು ರಾಜ್ಯದ ತುಂಬೆಲ್ಲ ಏಳು ವರುಷಗಳದ್ದಿರಬೇಕೆಂದು ಸಮಿತಿಯು ನಿರ್ಧರಿಸಿ ಸರಕಾರಕ್ಕೆ ಸಲಹೆ ನೀಡಿತು. ಸರಕಾರವು ಅದನ್ನು ಅಂಗೀಕರಿಸಿತು. ಹಾಗು ಈ ಏಳು ವರುಷಗಳ ಕಾಲಾವಧಿಗನುಸಾರವಾಗಿ ಏಕರೂಪವಾದ ಒಂದು ಅಭ್ಯಾಸ ಪತ್ರಿಕೆಯನ್ನು ಸಿದ್ಧಗೊಳಿಸುವದಕ್ಕಾಗಿ ೧೪-೩-೧೯೫೭ ರಂದು ಒಂದು ಉಪಸಮಿತಿಯನ್ನು ನಿಯಮಿಸಿತು.

ಪ್ರಾಥಮಿಕ ಶಾಲೆಗಳಲ್ಲಿ ಕಲಿಸಬೇಕಾದ ಬೇರೆ ಬೇರೆ ವಿಷಯಗಳು ಹಾಗು ಅನುಸರಿಸಬೇಕಾದ ಚಟುವಟಿಕೆ ಗಳು. ಇವುಗಳನ್ನು ರೂಪಿಸಲು ಆ ಉಪಸಮಿತಿ ಯಲ್ಲಿಯೇ ಅಂತರ್ಗತವಾದ ಮತ್ತೆ ಬೇರೆ ಬೇರೆ ಉಪ ಸಮಿತಿಗಳನ್ನು ಕೂಡಾ ನಿಯುಮಿಸಲಾಯಿತು. ಈ ಸಮಿತಿಗಳೆಲ್ಲ ಸೇರಿ ರಾಜ್ಯಕ್ಕೊಂದು ಏಳು ವರುಷದ ಪ್ರಾಥಮಿಕ ಶಾಲಾಭ್ಯಾಸ ಕ್ರಮದ ಕರಡು ಅಭ್ಯಾಸ ಪತ್ರಿಕೆಯನ್ನು ಮೇ ೧೯೫೭ ರಲ್ಲಿ ಸಿದ್ಧಗೊಳಿಸಿದವು. ಸರಕಾರವು ಸಿದ್ಧವಾದ ಈ ಕರಡು ಅಭ್ಯಾಸ ಪತ್ರಿಕೆ ಯನ್ನು ಶಿಕ್ಷಣವೇತ್ತರ, ಸಾರ್ವಜನಿಕರ ಅವಗಾಹನೆ ಗಾಗಿ ಪ್ರಕಟಿಸಿ ಅವರಿಂದ ಸಲಹೆ ಸೂಚನೆಗಳನ್ನು ಬರಮಾಡಿಕೊಂಡಿತು. ಬಂದ ಸಲಹೆ ಸೂಚನೆಗಳನ್ನು ಅನುಸರಿಸಿ ರಾಜ್ಯದಲ್ಲಿ ಕೂಡಲೇ ಏಕರೂಪವಾದ ಅಭ್ಯಾಸ ಕ್ರಮವು ಬಳಕೆಯಲ್ಲಿ ಬರಬೇಕೆಂಬ ಉದ್ದೇಶ ದಿಂದ ೧ ಹಾಗು ೨ನೆಯ ವರ್ಗಗಳ ಅಭ್ಯಾಸಪತ್ರಿಕೆ ಯನ್ನು ಸಿದ್ಧಗೊಳಿಸಲಾಯಿತಲ್ಲದೆ, ಅದನ್ನು ಇದೇ ವರುಷ (೧೯೫೯) ಜೂನದಿಂದ ರಾಜ್ಯದಲ್ಲೆಲ್ಲ ಬಳಕೆ ಯಲ್ಲಿ ತರಲಾಗಿದೆ. ಈ ಪರಿಷ್ಕರಣದ ಕಾರ್ಯವನ್ನು ಪ್ರತ್ಯೇಕವಾಗಿ ರಚಿತವಾದ 'ರಾಜ್ಯದ ಶೈಕ್ಷಣಿಕ ಸಂಶೋ ಧನ ಸಂಸ್ಥೆ' ಯೆಂಬ ವಿಭಾಗವು ಕೈಕೊಂಡು ಪೂರ್ಣ ಗೊಳಿಸಿದೆ. ಈ ಸಂಶೋಧನ ಸಂಸ್ಥೆಯ ಡಾಯರೆಕ್ಟ ರರು ನುರಿತ ಶಿಕ್ಷಣ ತಜ್ಞರಾದ ಡಾ. ಸಿದ್ಧಲಿಂಗಯ್ಯ ನವರು ಆಗಿರುವರು.

ಇಂತು ಸಮರ್ಥ ಶಿಕ್ಷಣ ತಜ್ಞರ ಕಮ್ಮಟದಲ್ಲಿ ರೂಪುಗೊಂಡು ಇದೇ ವರುಷ ರಾಜ್ಯದ ತುಂಬೆಲ್ಲ ಬಳಕೆ ಯಲ್ಲಿ ಬಂದ ೧ ಹಾಗು ೨ ನೆಯ ವರ್ಗಗಳ ಅಭ್ಯಾಸ ಪತ್ರಿಕೆಯ ಪರಿಚಯವನ್ನು ಈ 'ಜೀವನ ಶಿಕ್ಷಣ' ವಾಚ ಕರಿಗೆ ಮಾಡಿಕೊಡಲೋಸುಗ ಈ ಲೇಖನ ಮಾಲೆ ಯನ್ನು ಪ್ರಾರಂಭಿಸಲಾಗಿದೆ. ಈ ಪರಿಚಯಕ್ಕೆ ಪ್ರಚೋದನೆಯನ್ನು ಉಂಟು ಮಾಡಿದವರು ಧಾರವಾಡ ಜಿಲ್ಲೆಯ ಶಿಕ್ಷಣಾಧಿಕಾರಿಗಳಾದ ಶ್ರೀಮಾನ್ ಮ. ಗು. ಹಂದ್ರಾಳರವರು. ಶ್ರೀಯುತರು ಈ ಅಭ್ಯಾಸ ಪತ್ರಿ ಕೆಯ ಪರಿಚಯವು ಎಲ್ಲ ಪ್ರಾಥಮಿಕ ಶಿಕ್ಷಕರಿಗೂ

ಕೂಡಲೇ ಆಗಬೇಕೆಂಬ ಹೆಬ್ಬಯಕೆಯುಳ್ಳವರಾಗಿರುವರಲ್ಲದೆ; ಅದರ ಬಗ್ಗೆ ತುಂಬಾ ಆಸ್ಥೆ ಕಳಕಳಿಯುಳ್ಳವರಾಗಿದ್ದಾರೆ. ಈ ಪ್ರಚೋದನೆಗಾಗಿ ಈ ಲೇಖಕನು ಶ್ರೀಯುತರಿಗೆ ತುಂಬಾ ಕೃತಜ್ಞನಾಗಿದ್ದಾನೆ.

## ಅಭ್ಯಾಸಪತ್ರಿಕೆಯ ಗೊತ್ತುಗುರಿಗಳು

'ರಾಜ್ಯದ ಶೈಕ್ಷಣಿಕ ಸಂಶೋಧನೆಯ' ಡಾಯರೆಕ್ಟರರಾದ ಶ್ರೀಮಾನ್ ಸಿದ್ಧಲಿಂಗಯ್ಯನವರು ತಮ್ಮ ಮೊದಲ ಮಾತಿನಲ್ಲಿ ಈ ಅಭ್ಯಾಸ ಪತ್ರಿಕೆಯ ಧ್ಯೇಯವನ್ನು ಕುರಿತು ಹೀಗೆ ಹೇಳಿದ್ದಾರೆ:—

"ಗಾಂಧಿಜಿಯು ಮಗುವಿನ ಶಿಕ್ಷಣವು ಜೀವನಕ್ಕಾಗಿ ಇದೆ; ಅದು ಕೃತಿ ಮೂಲವಾಗಿರಬೇಕಲ್ಲದೆ, ಮಗುವಿನ ಸರ್ವಾಂಗೀಣ ಉನ್ನತಿಯನ್ನು ಸಾಧಿಸುವಂತಿರಬೇಕು. ಮಗು ತಾಯ ಗರ್ಭದಲ್ಲಿ ಮೂಡಿದೊಡನೆಯೇ ಅದರ ಶಿಕ್ಷಣವು ಪ್ರಾರಂಭವಾಗುವದಲ್ಲದೆ, ಅದು ಗೋರಿಗೆ ನಡೆದಾಗಲೇ ಅದರ ಮುಕ್ತ್ಯವಾಗುವದು ಎಂದು ಹೇಳಿರುವರು. ಅಂತೆಯೇ ಅವರು ತಮ್ಮ ಈ ಹೊಸ ಶಿಕ್ಷಣವಾದ ಜೀವನ ಶಿಕ್ಷಣವನ್ನು ಪ್ರಾರಂಭಿಸಿದರು. ಅದು ಇಂದು ರಾಷ್ಟ್ರೀಯ ಶಿಕ್ಷಣವಾಗಿದೆ. ಈ ಜೀವನ ಶಿಕ್ಷಣದ ತತ್ವಗಳು ಜೀವನ ಶಿಕ್ಷಣ ಶಾಲೆಗಳಲ್ಲಿಯೂ ಹಾಗು ಸಾದಾ ಶಾಲೆಗಳಲ್ಲಿಯೂ ಕೂಡ ಬಳಿಕೆಯಲ್ಲಿ ಏಕ ಕಾಲಕ್ಕೆ ಬರಬೇಕೆಂಬ ಧ್ಯೇಯವನ್ನಿಟ್ಟುಕೊಂಡು ಈ ಅಭ್ಯಾಸ ಪತ್ರಿಕೆಯನ್ನು ರಚಿಸಲಾಗಿದೆ" ಎಂದು ಹೇಳಿರುವರು. ಸಾದಾ ಶಾಲೆ ಹಾಗು ಜೀವನ ಶಿಕ್ಷಣ ಶಾಲೆ ಇವುಗಳಲ್ಲಿಯ ಅಂತರವು ಅದಷ್ಟು ಬೇಗ ಅಳಿಯಬೇಕು; ಎರಡೂ ತೆರನಾದ ಶಾಲೆಗಳಲ್ಲಿ ಅಭ್ಯಸಿಸುತ್ತಿರುವ ಮಕ್ಕಳಿಗೆ ಏಕರೂಪವಾದ ಒಂದು ಕ್ರಮವಿರಬೇಕು ಎಂಬುದೇ ಈ ಅಭ್ಯಾಸ ಪತ್ರಿಕೆಯ ಮೂಲ ಗುರಿಯಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ದುಡಿಯುತ್ತಿರುವ ಉಪಾಧ್ಯಾಯರು ಈ ಅಂಶವನ್ನು ಮೊದಲು ಗಮನಿಸಬೇಕು.

ಶ್ರೀಯುತ ಸಿದ್ಧಲಿಂಗಯ್ಯನವರು ಇನ್ನೂ ಒಂದು ಮಾತನ್ನು ಹೇಳಿದ್ದಾರೆ. "ಅಭ್ಯಾಸ ಪತ್ರಿಕೆಯ ರಚನಾ ಕಾರ್ಯವು ಯಾವಾಗಲೂ ಸಂತತವಾದ ಪ್ರಯತ್ನದಿಂದ ಮುಂದುವರಿಯುವಂಥದು. ಅದರ ಪ್ರಯೋಗ, ನಿರೀಕ್ಷಣೆ, ಸುಯೋಜಿತ ಯೋಜನೆ, ಪ್ರಗತಿ-ಪರಿಶೀಲನೆ ಇವುಗಳ ಕಳಹದಿಯ ಮೇಲೆ ಅಭ್ಯಾಸ ಪತ್ರಿಕೆಯು ಕಾಲಕಾಲಕ್ಕೆ ಬದಲಾವಣೆಯನ್ನು ಹೊಂದುವಂತಹದು. ಆ ವಿಷಯದಲ್ಲಿ 'ಇದಮಿತ್ಥಂ' ಎಂದು ಹೇಳುವಂತಿಲ್ಲ. ಆ ದೃಷ್ಟಿಯನ್ನಿಟ್ಟು ಇದರ ಪ್ರಯೋಗ ನಡೆಯಲಿ" ಎಂದು ಅಪೇಕ್ಷಿಸಿದ್ದಾರೆ. ಅವರ ಈ ಅಪೇಕ್ಷೆಯನ್ನು ಉಪಾಧ್ಯಾಯರು ಗಮನದಲ್ಲಿಟ್ಟುಕೊಂಡು ಅಭ್ಯಾಸಪತ್ರಿಕೆಯನ್ನು ಅನುಸರಿಸಬೇಕೆಂದು ಲೇಖಕನು ವಿನಮ್ರಭಾವನೆಯಿಂದ ಕೇಳಿಕೊಳ್ಳುತ್ತಾನೆ.

## ಅಭ್ಯಾಸಪತ್ರಿಕೆಯ ವಿಶಿಷ್ಟ ಲಕ್ಷಣಗಳು

(೧) ಉಪಾಧ್ಯಾಯರು ಮಗುವಿನ ಬೇಡಿಕೆಗನುಸಾರವಾಗಿ ಅಭ್ಯಾಸ ಪತ್ರಿಕೆಯ ವಿಷಯಗಳನ್ನು ಅನುಸರಿಸಿಕೊಂಡು ಹೋಗಲನುವಾಗುವಂತೆ ಮಕ್ಕಳ ವಯೋಮಾನದ ಮನಃಶಾಸ್ತ್ರದ ಕೆಲ ಮೂಲ ತತ್ವಗಳನ್ನು ಪ್ರಾರಂಭದಲ್ಲಿ ಕೊಡಲಾಗಿದೆ.

ಉದಾ:— ೧ ಹಾಗು ೨ನೆಯ ವರ್ಗದ ಪ್ರತಿಯೊಂದು ಮಗವೂ ಅತ್ಯಂತ ಕ್ರಿಯಾಶೀಲನಾಗಿದ್ದು; ಅದು ತನ್ನ ಕೈಯಿಂದ ಏನನ್ನಾದರೂ ಮಾಡಲಪೇಕ್ಷಿಸುತ್ತಿದೆ.

ಇದನ್ನು ಮನದಂದರೆ ಉಪಾಧ್ಯಾಯರಿಗೆ ಮಗುವಿಗೆ ಅಭ್ಯಾಸ ಪತ್ರಿಕೆಯಲ್ಲಿಯ ವಿಷಯವನ್ನು ಹೇಗೆ ಹೊಂದಿಸಿಕೊಳ್ಳಬೇಕೆಂಬ ಸಂಗತಿಯು ಸುಲಭದಲ್ಲಿ ಗೊತ್ತಾಗುತ್ತಿದೆ.

(೨) ಈ ವಯಸ್ಸಿನ ಮಕ್ಕಳ ದೈಹಿಕ ಬೆಳವಣಿಗೆಯು ಜ್ಞಾನೇಂದ್ರಿಯಗಳ ಬೆಳವಣಿಗೆಯು ಎಷ್ಟರಮಟ್ಟಿಗಾಗುತ್ತದೆ; ಹೇಗಾಗುತ್ತದೆ ಎಂಬುದನ್ನು ವಿವರಿಸಲಾಗಿದೆ. ಇದರಿಂದ ಚಟುವಟಿಕೆಗಳ ಪ್ರಕಾರಗಳನ್ನು ಸಂಯೋಜಿಸಲು ಉಪಾಧ್ಯಾಯರಿಗೆ ಅನುಕೂಲವಾಗುವದು.

(೩) ಕೆಲ ಚಟುವಟಿಕೆಗಳನ್ನೂ ಕಾಣಿಸಲಾಗಿದೆ. ಇದರಿಂದ ಜೀವನ ಸನ್ನಿವೇಶಗಳ ಮುಖಾಂತರ ಜ್ಞಾನವನ್ನು ಹೇಗೆ ಮಾಡಿಕೊಡಬಹುದು; ಹಾಗು ಮಗುವಿನ ಅನುಭವವನ್ನೇ ಕೇಂದ್ರವನ್ನಾಗಿ ಮಾಡಿಕೊಂಡು ಶಿಕ್ಷಣವೀಯಬಹುದು ಎಂಬ ಸಂಗತಿಗೆ ಪರಿಚಯವಾಗುವದು.

(೪) ಗುರುಗಳ ಮಾರ್ಗದರ್ಶನಕ್ಕಾಗಿ ಕಲಾವಿಷಯಗಳಲ್ಲಿ ಉದಾಹರಣೆಗಳನ್ನು ಪ್ರೇರಣೆಯ ಪದ್ಧತಿಗಳನ್ನು ಕೊಡಲಾಗಿದೆ.

(೫) ಸಮಾಜಾಭ್ಯಾಸ, ಸಾಮಾನ್ಯವಿಜ್ಞಾನ, ಕಲೆ ಹಾಗು ಮೂಲೋದ್ಯೋಗ ಮೊದಲಾದವುಗಳಲ್ಲಿ ಕೆಲ ವಿಷಯಗಳ ಪುನರುಕ್ತಿ ಕಂಡು ಬರಬಹುದು. ಶೈಕ್ಷಣಿಕ ಚಟುವಟಿಕೆಗಳು ಹಾಗು ವಿಷಯವಾರ ಜ್ಞಾನದ ಸಮನ್ವಯ ಮಾಡಿ ತೋರಿಸಿದುದರಿಂದ ಅದು ಅನಿವಾರ್ಯವಾಗಿದೆ. ಆದರೆ ಉಪಾಧ್ಯಾಯರು ಮಾತ್ರ ಜ್ಞಾನವು ಇಡಿಯಾಗಿಯೇ ಬರುವುದೆಂಬುದನ್ನು ಗಮನದಲ್ಲಿಟ್ಟು ಸಮನ್ವಿತಗೊಳಿಸಬೇಕು.

(೬) ಅಭ್ಯಾಸಪತ್ರಿಕೆಯು ಆದಷ್ಟು 'ಮಗುವೇ ಕೇಂದ್ರವಾಗಿ ಉಳ್ಳುದು' 'ಜೀವನವೇ ಕೇಂದ್ರವಾಗಿ ಉಳ್ಳುದು' ಎಂಬುದಾಗಿ ಮಾಡಲು ಪ್ರಯತ್ನಿಸಲಾಗಿದೆ. ಇದರ ಉದ್ದೇಶವು ಸಾದಾ ಶಾಲೆ, ಮೂಲ ಶಿಕ್ಷಣ ಶಾಲೆ ಇವುಗಳಲ್ಲಿಯ ಅಂತರವನ್ನು ಕಡಿಮೆ ಮಾಡುವುದೇ ಆಗಿದೆ.

(೭) ಸಮಾಜಾಭ್ಯಾಸವು ಹೆಚ್ಚು ಸ್ವಾಭಾವಿಕವೂ, ದೈನಂದಿನ ನಿರೀಕ್ಷಣೆ ಅನುಭವ ಇವುಗಳಿಗೆ ಸಂಬಂಧಿಸಿ ಇರುವಂತೆಯೂ ಆಗಿರಬೇಕೆಂಬ ದೃಷ್ಟಿಯಿಂದ ವಿಷಯ ಗಳನ್ನು ನಿರ್ದೇಶಿಸದೆ ಹೇಳಿಕೆಗಳನ್ನೇ ಕೊಡಲಾಗಿದೆ.

(೮) ಪ್ರಾಥಮಿಕ ಶಾಲೆಗಳ ವಿಷಯದಲ್ಲಿ ಮುಂದು ವರಿದ ಕೆಲ ದೇಶಗಳಲ್ಲಿ ತೋರಿಸುವಂತೆ ಅಭ್ಯಾಸ ಪತ್ರಿಕೆಯಲ್ಲಿ ಅಲ್ಲಲ್ಲಿ ಕೆಲ ಮೂಲಭೂತ ಮಾರ್ಗದರ್ಶಕ ತತ್ವಗಳನ್ನು ಸಂಮಿಶ್ರಗೊಳಿಸಲಾಗಿದೆ. ಇದು ಉಪಾಧ್ಯಾಯರಿಗೂ ಶಿಕ್ಷಣದಲ್ಲಿ ಆಸ್ಥೆತಳೆದ ಪಾಲ ಕರಿಗೂ, ಆಧುನಿಕ ಶಾಲೆಗಳಲ್ಲಿ ಅನುಸರಿಸಲ್ಪಡುತ್ತಿರುವ ಹೊಸ ತಂತ್ರದ ಕಲ್ಪನೆಯನ್ನು ಮಾಡಿಕೊಡಬಹುದೆಂದು ಆಶಿಸಲಾಗಿದೆ.

ಈ ಅಷ್ಟ ವೈಶಿಷ್ಟ್ಯಗಳನ್ನು ಉಪಾಧ್ಯಾಯರು ತಮ್ಮ ಕಣ್ಮುಂದೆ ಇಟ್ಟುಕೊಂಡು ಸಾಗಿದರೆ, ವಿಷಯಾಭ್ಯಾಸ ವನ್ನು ಮಕ್ಕಳಿಗೆ ಮಾಡಿಸುವ ದಾರಿಯಲ್ಲಿ ಬರಬಹುದಾದ ಸಮಸ್ಯೆಗಳ ಪರಿಹಾರವು ತನ್ನಿಂದ ತಾನೇ ಆಗ ಬಹುದಾಗಿದೆ.

## ಅಭ್ಯಸಿಸ ಬೇಕಾದ ವಿಷಯಗಳು

೧ ಹಾಗು ೨ನೆಯ ವರ್ಗಗಳಲ್ಲಿ ಮಕ್ಕಳು ಕೆಳ ಕಾಣಿಸಿದ ವಿಷಯಗಳನ್ನು ಅಭ್ಯಸಿಸ ಬೇಕಾಗುವದು.

೧) ಭಾಷೆ
೨) ಸಾಮಾನ್ಯ ಗಣಿತ
೩) ಸಾಮಾನ್ಯ ವಿಜ್ಞಾನ
೪) ಸಮಾಜಾಭ್ಯಾಸ
೫) ಕಲೆಗಳು–ಇಲ್ಲವೆ ಮೂಲೋದ್ಯೋಗ
೬) ಪ್ರಾಯೋಗಿಕ ಕೆಲಸ
೭) ಶಾರೀರಿಕ ಶಿಕ್ಷಣ

ಈ ಏಳು ವಿಷಯಗಳನ್ನು ಮಕ್ಕಳು ಅಭ್ಯಸಿಸ ಬೇಕಾಗುವದು. ಇವುಗಳಿಗಾಗಿ ಮೀಸಲಿರಿಸಿದ ಅವಧಿಗಳು.

| | | |
|---|---|---|
| ೧) ಭಾಷೆ | ೧೪ | ಅವಧಿಗಳು |
| ೨) ಸಾಮಾನ್ಯ ಗಣಿತ | ೬ | " |
| ೩) ಸಾಮಾನ್ಯವಿಜ್ಞಾನ | ೪ | " |
| ೪) ಸಮಾಜಾಭ್ಯಾಸ | ೪ | " |
| ೫) ಕಲೆಗಳು–ಇಲ್ಲವೆ ಮಲೋದ್ಯೋಗ | ೧೩ | " |
| ೬) ಪ್ರಾಯೋಗಿಕ ಕಾರ್ಯ | ೪ | " |
| ೭) ಶಾರೀರಿಕ ಶಿಕ್ಷಣ | ೬ | " |
| ಒಟ್ಟು | ೫೫ | ಒಂದು ವಾರಕ್ಕೆ |

ಈ ರೀತಿಯಾಗಿ ಆ ಆ ವಿಷಯಗಳಿಗೆ ಅವಧಿಗಳನ್ನು ಮೀಸಲಿರಿಸಲಾಗಿದೆ. ಇಲ್ಲಿ ಪ್ರತಿಯೊಂದು ಅವಧಿಯೂ ೩೦ ನಿಮಿಷದ್ದು ಇರುವದು. ವಾರಕ್ಕೆ ೧ ಹಾಗು ೨ ನೆಯ ವರ್ಗದ ಮಕ್ಕಳು ೨೭|| ತಾಸುಗಳ ಅಭ್ಯಾಸ ವನ್ನು ಮಾಡಬೇಕಾಗುವದು. ೧ ಹಾಗು ೨ನೆಯ ವರ್ಗಗಳನ್ನು ಕಲಿಸುತ್ತಿರುವ ಗುರುಗಳು ಕೂಡಾ ಸೂಟಿ ಯನ್ನು ಹೊರತು ಪಡಿಸಿ ವಾರಕ್ಕೆ ೨೭|| ತಾಸುಗಳ ವರೆಗೆ ಕಲಿಸಬೇಕಾಗುವದು. ಈ ಅಂಶಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಉಪಾಧ್ಯಾಯರು ತಮ್ಮ ಯೋಜನೆಯನ್ನು ಸಿದ್ಧಗೊಳಿಸಿಕೊಳ್ಳಬೇಕು. ಪ್ರಾಯೋ ಗಿಕ ಕಾರ್ಯವೆಂದರೇನು? ಅವುಗಳಿಗಾಗಿ ಮೀಸಲಿರಿಸಿದ ೮ ಅವಧಿಗಳನ್ನು ಹೇಗೆ ಬಳಸಿಕೊಳ್ಳಬೇಕು? ಮೂಲೋದ್ಯೋಗವಿಲ್ಲದ ಶಾಲೆಗಳಲ್ಲಿ ೧೩ ಅವಧಿ ಗಳನ್ನೆಂತು ಬಳಸಿಕೊಳ್ಳಬೇಕು? ಎಂಬ ಎಲ್ಲ ವಿವರ ಗಳನ್ನು ಮುಂದಿನ ಲೇಖನದಲ್ಲಿ ವಿವರಿಸಲಾಗುವದು.

# "ವನ ಮಹೋತ್ಸವ"

ಲೇಖಕರು :— ಶ್ರೀ ಮ. ಬ. ಶ್ಯಾಡಗುಪ್ಪಿ, ದೇವಿಹೊಸೂರ.

ನಮ್ಮ ಭರತಖಂಡವು ಕೃಷಿ ಪ್ರಧಾನವಾದ ದೇಶ. ಕೃಷಿಯ ವ್ಯವಸಾಯದ ತವರೂರು ಹಳ್ಳಿಗಳು. ಇಂಥ ಹಳ್ಳಿಗಳು ನಮ್ಮ ರಾಷ್ಟ್ರದಲ್ಲಿ ೬ ಲಕ್ಷಕ್ಕೂ ಮಿಕ್ಕಿ ಅವೆ. ಈ ಹಳ್ಳಿಗಳೇ ರಾಷ್ಟ್ರದ ಬೆನ್ನೆಲವು. ಹಳ್ಳಿಯ ಸರ್ವಾಂಗೀಣ ಉನ್ನತಿಯೇ ಭಾರತದ ಆರ್ಥಿಕ ಪ್ರಗತಿಯ ನೋಟ. ಈ ಕನಸನ್ನು ನನಸನ್ನಾಗಿ ಮಾರ್ಪಡಿಸಬೇಕಾದರೆ ರಾಷ್ಟ್ರದ ಅಸ್ತಿವಾರದಂತಿರುವ ಹಳ್ಳಿಯ ಪುನರುಜ್ಜೀವನವಾಗಲೇಬೇಕು. ಹಳ್ಳಿಯ ಪುನರ್ರಚನೆಯಂದರೆ ರೈತನ ಜೀವನದ ಮಟ್ಟವನ್ನು ಎತ್ತರಿಸುವದು. ಅತನನ್ನು ಆರ್ಥಿಕ ಮುಗ್ಗಟ್ಟಿನಿಂದ ಮುಕ್ತನನ್ನಾಗಿ ಮಾಡುವದು. ರೈತನಿಗೆ ತನ್ನ ವ್ಯವಸಾಯದಲ್ಲಿ ಸ್ವಾವುಃಖ್ಯವಾಗಿ ಎರಡು ಸಂಗತಿಗಳ ಸಹಾಯ, ಸಹಕಾರ ಅಗತ್ಯ ಹಾಗೂ ಅನಿವಾರ್ಯ. ಅದರಲ್ಲಿ ಒಂದು ಸರಕಾರ (ಸಮಾಜ) ಮತ್ತೊಂದು ನಿಸರ್ಗ. ಇದರಲ್ಲಿ ಮೊದಲನೆಯದು ಸಮಾಜ ಸಿದ್ಧವಾದದ್ದು; ಮಾನವನಿಗೆ ಅಟುಕುವಂತಹದು. ಎರಡನೆಯದು ದೈವದತ್ತವಾದದ್ದು; ಸಮಾಜಕ್ಕೆ ನಿಲುಕದಂಥಹದು. ಇದನ್ನು ನಿಸರ್ಗವೇ ತಂದು ಕೊಡಬೇಕು. ಅದೇ ಅದು ವನಸಂಪತ್ತು! ಅರಣ್ಯಗಳಿದ್ದರೆ ಮಳೆಗರೆಯುತ್ತದೆ. ಮಳೆ ಅಂದರೆ ಅನ್ನ! ಅನ್ನವೆಂದರೆ ಜೀವನ ಎಂಬುದು. ಎಲ್ಲರಿಗೂ ಗೊತ್ತಿದ್ದ ಸಂಗತಿ.

ನಮ್ಮ ದೇಶವು ಮನ್ಸೂನ ಮಳೆಗಾಳಿಗಳು ಬೀಸುವ ಪ್ರದೇಶದಲ್ಲಿ ಬರುತ್ತದೆ. ಈ ಗಾಳಿಗಳು ಋತುಮಾನ ಕ್ರಮಾನುಗುಣವಾಗಿ ಬೀಸುವದರಿಂದ ಆಯಾ ಋತು ಮಾನಕ್ರಮಾನುಸಾರವಾಗಿಯೇ ನಮ್ಮ ಒಕ್ಕಲತನದ ಉತ್ತು-ಬಿತ್ತುಗಳ ಕಾರ್ಯ ಸಾಗಬೇಕು. ಅಂದರೆ ವರ್ಷದ ಕೆಲ ಕಾಲದಲ್ಲಿ ಮಾತ್ರ ನಮ್ಮ ಕೃಷಿ ಕಾರ್ಯವು ಭರದಿಂದ ಸಾಗುವದು. ಇನ್ನುಳಿದ ಕಾಲದಲ್ಲಿ ರೈತರು ಕೆಲಸವಿಲ್ಲದೆ ಕೈಕಟ್ಟಿಕೊಂಡು ಕೂಡ್ರಬೇಕಾಗುವದು. ಈ ಮಳೆ ಗಾಳಿಗಳಾದರೂ ದೇಶದ ಎಲ್ಲ ಭಾಗಗಳಲ್ಲಿ ನಿಶ್ಚಿತ ಮಳೆ ಗರೆಯುತ್ತಿವೆ ಎಂದು ಹೇಳಲು ಬರುವಂತಿಲ್ಲ. ಕೆಲ ಭಾಗದಲ್ಲಿ ಅತಿವೃಷ್ಟಿಯಾಗಿ ಪರಿಣಮಿಸಿದರೆ, ಮತ್ತೊಂದು ಭಾಗದಲ್ಲಿ ಅನಾವೃಷ್ಟಿಯಾಗಿ ಪರಿಣಮಿಸುತ್ತದೆ. ಈ ಅತಿವೃಷ್ಟಿ-ಅನಾವೃಷ್ಟಿಯಿಂದ ದೇಶದ ಒಂದಿಲ್ಲೊಂದು ಭಾಗದಲ್ಲಿ ಬರದ ಭೀಕರತೆಯ ಹಾವಳಿಯು ತಲೆದೋರುವದನ್ನು ನಾವು ಪ್ರತಿ ವರ್ಷದಲ್ಲಿಯೂ ಕಾಣಬಹುದು. ಈ ಅನಿಶ್ಚಿತ ಮಳೆಯಿಂದ ನಾವು ಬಯಸಿದಷ್ಟು ಬೆಳೆಯು ಬಾರದೆ, ಆಹಾರದ ಬಗ್ಗೆ ಸ್ವಾವಲಂಬಿಗಳಾಗದೆ, ಪರರಾಷ್ಟ್ರಗಳ ಕಡೆಗೆ ಹೊರಳಿ ನೋಡಬೇಕಾಗಿದೆ. ಪ್ರತಿವರ್ಷಕ್ಕೂ ನಮ್ಮ ದೇಶದ ಜನಸಂಖ್ಯೆಯ ಪ್ರಮಾಣವು ಹೆಚ್ಚುತ್ತಿದ್ದು; ಆಹಾರ ಧಾನ್ಯಗಳ ಹುಟ್ಟುವಳಿಯಲ್ಲಿ ಮಾತ್ರ ಹೆಚ್ಚಳವು ಕಂಡುಬಾರದೆ, ನಮ್ಮ ಆಹಾರೋತ್ಪಾದನೆಯ ಬಜೆಟ್ಟು ಸರಿಹೋಗದಾಗಿದೆ. ಈ ಸಮಸ್ಯೆಯು ನಾಡಿನ ಮುಂದಾಳುಗಳ ತಲೆಯನ್ನು ತುರಿಸಿಕೊಳ್ಳಲು ಹಚ್ಚಿದೆ. ಅದಕ್ಕಾಗಿ ನಮ್ಮ ಸರಕಾರವು ಸ್ವಾತಂತ್ರ್ಯಪ್ರಾಪ್ತಿಯಿಂದ ಮೊದಲುಗೊಂಡು ಇಲ್ಲಿಯವರೆಗೂ ಅನಂತ ಪರಿಣಾಮ ಕಾರಿ ಬೃಹತ್ ಯೋಜನೆಗಳನ್ನು ಕೈಕೊಂಡಿದೆ; ಕೈಕೊಳ್ಳುತ್ತಲೂ ಇದೆ. ಸರಕಾರವು ಕೈಗೆತ್ತಿಕೊಂಡು ಈ ಕಾರ್ಯಕ್ರಮದಲ್ಲಿ ಅರಣ್ಯ ಪ್ರದೇಶವನ್ನು ವೃದ್ಧಿಗೊಳಿಸುವ ಹಾಗು ಸಂರಕ್ಷಿಸುವ ಮಹಾಕಾರ್ಯವೂ ಒಂದು. ಈ ಕಾರ್ಯಕ್ರಮಕ್ಕೆ ವ್ಯಾಪಕವಾಗಿ ವನ ಮಹೋತ್ಸವ ಕಾರ್ಯಕ್ರಮವೆಂದು ಕರೆಯಲಾಗಿದೆ.

ಈ ವನ ಮಹೋತ್ಸವವನ್ನು ನಾವು ಯಾಕೆ ಆಚರಿಸಬೇಕು? ಅದರಿಂದಾಗುವ ಲಾಭಗಳೇನು? ಎಂಬುದರ ಬಗ್ಗೆ ವಿಚಾರಿಸುತ್ತ ಹೋದಲ್ಲಿ ಅದರ ಹೆಚ್ಚಳವು ನಮಗೆ ಕಂಡು ಬರದೆ ಇರದು. ಗಿಡಗಳು ಭೂಗರ್ಭದಲ್ಲಿ ಬಹು ದೂರದ ವರೆಗೆ ತಮ್ಮ ಬೇರುಗಳ ಶಾಖೋಪಶಾಖೆಗಳನ್ನು ಹರಡಿ ಭೂಮಿಯ ಬಿರುಸುತನವನ್ನು ಕಡಿಮೆ ಮಾಡುವವಲ್ಲದೆ ನೀರು ಒಳಸೇರಲು ಸಾಕಷ್ಟು ಅವಕಾಶ (ಪೊಳ್ಳು) ವನ್ನುಂಟುಮಾಡುತ್ತವೆ. ಬೇರುಗಳು ತಮ್ಮ ನಿಯಮಕ್ರಮಾನುಸಾರವಾಗಿ ಅಧೋಮುಖವಾಗಿ ಬೆಳೆದು ನೀರಿದ್ದ ಕಡೆಗೆ ಸಾಗಿ ಭೂಮಿಯ ಒಡಲಲ್ಲಿ ಒಂದು ತರಹದ ಸ್ವಾಭಾವಿಕ ಜಲಾಶಯವನ್ನು ನಿರ್ಮಿಸುತ್ತವೆ. ಇಂಥ ಜಲಾಶಯದಿಂದ ಸುತ್ತು ಮುತ್ತಲೂ ಮಣ್ಣಿನೊಡನೆ ಜೆರಿತ ನೀರು ಕೇಶಾಕರ್ಷಣ ಶಕ್ತಿಯಿಂದ

ಕಣಗಳಿಂದ ಕಣಕ್ಕೆ ಮೇಲೇರಿ ಭೂಮಿಯ ಮೇಲ್ಭಾಗದಲ್ಲಿರುವ ನಮ್ಮ ಬೆಳೆಗಳಿಗೆ ಹಸಿಯನ್ನು ಒದಗಿಸಿಕೊಡುತ್ತವೆ. ಅಲ್ಲದೆ ಬೇರುಗಳ ಮೊನೆಯಲ್ಲಿ ಒಂದು ತರದ ಆಮ್ಲವಿದ್ದು ಅದು ಭೂಮಿಯಲ್ಲಿರುವ ಬಿರುಸಾದ ಕಲ್ಲಿನ ಧರದ ಮೇಲೆ ತನ್ನ ರಾಸಾಯನಿಕ ಕ್ರಿಯೆ ನಡೆಯಿಸಿ ಮಣ್ಣಿನ ಅಣುಗಳನ್ನಾಗಿ ಮಾರ್ಪಡಿಸುತ್ತದೆ. ಭೂಮಿಯಲ್ಲಿಯ ಮಣ್ಣು ಮಳೆ–ಗಾಳಿಗಳಿಗೆ ಕೊಚ್ಚಿ ಹೋಗದಂತೆ ನಮ್ಮ ಗಿಡಗಳ ಬೇರು-ಬೊಡ್ಡೆಗಳು ತಡೆಹಾಕಿ ಒಂದು ರೀತಿಯ ನೈಸರ್ಗಿಕ ಒಡ್ಡುಗಳಾಗಿಯೇ ಪರಿಣಮಿಸಿವೆ. ಭೂಮಿಯಲ್ಲಿಯ ಬೇರುಗಳು ಒಂದಿಲ್ಲೊಂದು ಕಾರಣದಿಂದ ನಾಶಹೊಂದಿ ಹುಳಿತು–ಕೊಳೆತು ನಮ್ಮ ಬೆಳೆಗಳಿಗೆ ಉಪಯುಕ್ತ ಆಹಾರವಾದ ಸೇಂದ್ರೀಯ ಪದಾರ್ಥ (ಹ್ಯೂಮಸ್) ತನ್ನಿಂದ ತಾನೇ ತಯಾರಾಗುತ್ತದೆ. ಹೀಗೆ ಭೂಮಿಯನ್ನು ಪೊಳ್ಳು ಮಾಡುವದು; ಬೆಳೆಗಳಿಗೆ ಅಪ್ರತ್ಯಕ್ಷವಾಗಿ ನೀರುಣಿಸುವದು; ಹಾಗೂ ಹರಿದು ಹೋಗುವ ಮಣ್ಣನ್ನು ತಡೆಹಿಡಿಯುವದು; ಮತ್ತು ಬೆಳೆಗಳ ಆಹಾರವನ್ನು ಹೆಚ್ಚಿಸುವ ಕಾರ್ಯವನ್ನು ಈ ನಮ್ಮ ಗಿಡಗಳು ನಿರಂತರ ಮಾಡುತ್ತವೆ. ಭೂಮಿಯ ಫಲವತ್ತತೆಯನ್ನು ಕಾಯುತ್ತವೆ. ಈ ಎಲ್ಲ ಕ್ರಮಗಳು ಭೂಮಿಯ ಕೆಳಭಾಗದಲ್ಲಿ ನಡೆದರೆ, ಭೂಮಿಯ ಮೇಲ್ಭಾಗದಲ್ಲಿ ಮತ್ತೊಂದು ಕ್ರಮ ನಡೆಯುತ್ತದೆ.

ಗಿಡದ ಮೇಲ್ಭಾಗದಲ್ಲಿಯ ಕಾಂಡದ ಭಾಗಗಳಾದ ಹರಿ, ಟೊಂಗೆಗಳು ಎಲೆಗಳನ್ನು ಸೂರ್ಯನ ಪ್ರಕಾಶದತ್ತ ಎತ್ತಿ ಹಿಡಿದು ತಮ್ಮ ಸ್ವಂತ ಪೋಷಣೆಯ ಕಾರ್ಯವನ್ನಲ್ಲದೆ ಲೋಕಹಿತದ ಕಾರ್ಯವನ್ನೂ ಮಾಡುತ್ತವೆ. ಎಲೆಗಳು ಗಿಡಗಳ ಅಡುಗೆಯ ಮನೆ ಅಲ್ಲವೇ? ಅಡುಗೆ ತಯಾರಾಗಬೇಕಾದರೆ ಹಸಿ, ಹವೆ, ಉಷ್ಣತೆಗಳ ಅವಶ್ಯಕತೆ ಇಲ್ಲವೇ? ಇವುಗಳನ್ನು ದೊರಕಿಸಿಕೊಳ್ಳಲು ಗಿಡಗಳು ಸ್ವಯಂ ಸಿದ್ಧವಾಗಿ ಕೆಲಸ ಮಾಡುತ್ತವೆ. ಅದಕ್ಕಾಗಿಯೇ ಗಿಡದ ಕಾಂಡವು ಊರ್ಧ್ವಮುಖವಾಗಿ ಬಹು ಎತ್ತರವಾಗಿ ಬೆಳೆದು ವಾತಾವರಣದಲ್ಲಿಯ ಹಸಿಯನ್ನು (ಮೋಡ) ಉಷ್ಣತೆ (ಪ್ರಕಾಶ) ಯನ್ನು ತನ್ನೆಡೆಗೆ ಎಳೆದುಕೊಳ್ಳುತ್ತವೆ. ಅದನ್ನೇ ನಾವು ಮಳೆ ಎಂದು ಕರೆಯುತ್ತೇವೆ! ಈ ಮಳೆಯಿಂದಲೇ ಎಲ್ಲ ಚರಾಚರ ವಸ್ತುಗಳ ಜೀವನದ ನೌಕೆಯು ಸಾಗುತ್ತದೆಂಬದನ್ನು ನಾವೆಲ್ಲರೂ ಬಲ್ಲೆವು! ಗಿಡಗಳ ಉಸಿರಾಟದಲ್ಲಿಯೂ ಒಂದು ರೀತಿಯ ವೈವಿಧ್ಯತೆಯು ಕಂಡು ಬರುವದು. ಪ್ರಾಣಿಗಳ ಉಸಿರಾಟದ ವಿರುದ್ಧಕ್ರಮದಲ್ಲಿ ವನಸ್ಪತಿಗಳ ಶ್ವಾಸೋಚ್ಛ್ವಾಸದ ಕ್ರಿಯೆ ನಡೆಯುವದೆಂಬುದು ನಮಗೆ ಗೊತ್ತಿದ್ದ ಸಂಗತಿಯಲ್ಲವೇ? ಈ ಕ್ರಮದಿಂದ ಹವೆಯಲ್ಲಿಯ ಅಂಗಾರಾಮ್ಲವಾಯು (ಅಂಗಾರ) ಹಾಗೂ ಆಕ್ಸಿಜನ್ (ಪ್ರಾಣವಾಯು) ವಾಯುವಿನ ಪ್ರಮಾಣವು ಹೆಚ್ಚು ಕಡಿಮೆಯಾಗದಂತೆ ಸಾಗಿ ಬಂದುದರಿಂದ ಪ್ರಾಣಿಕೋಟಿ ಬದುಕಿ ಬಾಳಿದೆ!

ಒಂದು ರಾಷ್ಟ್ರದ ಅಥವಾ ರಾಜ್ಯದ ಆರ್ಥಿಕ ಪ್ರಗತಿಯ ಮಟ್ಟದ ಬೆಲೆಯನ್ನು ಕಟ್ಟಬೇಕಾದರೆ ಮೊದಲನೆಯದಾಗಿ ಅಲ್ಲಿ ದೊರೆಯುವ ಖನಿಜ ಪದಾರ್ಥಗಳ ಸೌಕರ್ಯ; ಎರಡನೆಯದಾಗಿ ಅಲ್ಲಿಯ ಅರಣ್ಯ ಸಂಪತ್ತು. ಈ ಅರಣ್ಯ ಹುಟ್ಟುವಳಿಯಿಂದ ನಾವು ದೊಡ್ಡ ದೊಡ್ಡ ಔದ್ಯೋಗಿಕ ಬೃಹತ್ ಉದ್ಯಮಗಳನ್ನು ಸ್ಥಾಪಿಸಬಹುದು; ಗ್ರಾಮೋದ್ಯೋಗಗಳನ್ನು ಕೈಕೊಳ್ಳಬಹುದು; ಕುಶಲ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಬಹುದು, ಕಲಾಕುಶಲತೆಯನ್ನು ಹೆಚ್ಚಿಸಬಹುದು; ಆಹಾರೋತ್ಪಾದನೆಯನ್ನು ದ್ವಿಗುಣಿತಗೊಳಿಸಬಹುದು. ಇಂಥ ಉಪಯುಕ್ತ ಹಾಗೂ ಉತ್ಕೃಷ್ಟ ಹಸಿರಿನ (ಅರಣ್ಯ) ಸಂರಕ್ಷಣೆ ಮಾಡುವದು ಹಾಗು ಬೆಳೆಯಿಸುವದು ನಮ್ಮ ಆದ್ಯ ಕರ್ತವ್ಯವಲ್ಲವೇ? ಈ ವನ ಸಂಪತ್ತಿನಿಂದಲೇ ಜಗತ್ತಿನ ಸಂಸ್ಕೃತಿ ಬೆಳೆದಿದೆ. ಪ್ರಪಂಚವು ಇಷ್ಟು ಸುಂದರವಾಗಿ ಕಾಣುತ್ತದೆ. ಮನೆಯ ಕ್ಷುದ್ರ ಹಾಗೂ ಕ್ಷಣಿಕ ಕಲಸದಿಂದ ಹಿಡಿದು ರಾಷ್ಟ್ರದ ಹಾಗೂ ನಾಡಿನ ಭಾರಿ ಭಾರಿ ಉದ್ಯಮಗಳವರೆಗೂ ಇದೇ ಮೂಲವಲ್ಲವೇ? ಗಿಡಗಳೇ ಇಲ್ಲದಿದ್ದರೆ ಪ್ರಪಂಚವೇ ಭಾರದ ಮರುಭೂಮಿಯಾಗುತ್ತಿತ್ತಲ್ಲದೆ ಮಂಜುಗಡ್ಡೆಯಿಂದ ಆಚ್ಛಾದಿತವಾಗಿ ಪಿಡಂಭೂತಗಳ ರಾಜ್ಯವೇ ಆಗುತ್ತಿತ್ತು.

ಈ ಗಿಡ ನೆಡುವ ಕಾರ್ಯವು ನಮ್ಮ ಭಾರತದಲ್ಲಿ ಇಂದು ನಿನ್ನಿನದಲ್ಲ; ಹಿಂದಿನಿಂದಲೂ ನಡೆದು ಬಂದಿದೆ. ನಾವು ಪುರಾಣದ ಪುಟಗಳನ್ನು ತಿರುಗಿ ಹಾಕುತ್ತ ಹೋದಲ್ಲಿ ಅದರ ಮಹತ್ವವು ಕಂಡು ಬಾರದೆ ಇರದು. ಅಲ್ಲಲ್ಲಿ ಕಂಡು ಬರುವ ತಪೋವನ, ಋಷಿಗಳ ಆಶ್ರಮ, ಉದ್ಯಾನ, ಸರೋವರ ಮೊದಲಾದವುಗಳ ವರ್ಣನೆಯ ಪರಿಚಯವಾಗದೆ

ಇರಲಾರದು. ಪೂರ್ವಜರು ವನಗಳನ್ನು ಪೋಷಿಸುವ ಬೆಳೆಯಿಸುವ ರೀತಿ-ನೀತಿಗಳನ್ನು ಸ್ಮರಣೆಗೆ ತಂದರೆ ನಮಗೆ ಅತ್ಯಂತ ಆಶ್ಚರ್ಯ ಹಾಗೂ ಆನಂದವೆನಿಸುತ್ತದೆ. ಅವರ ಈ ಕಾರ್ಯಕ್ಕೆ ಕೊಟ್ಟ ಮಹತ್ವವನ್ನು ಸೋಸಿ ನೋಡಿದರೆ ಅದು ನಮ್ಮ ಭಾರತೀಯ ಸಂಸ್ಕೃತಿಯ ಪ್ರತೀಕವಲ್ಲದೆ ಮತ್ತಿನ್ನೇನು? ಈಗಲೂ ನಮ್ಮ ಹಳ್ಳಿಗಾಡಿನಲ್ಲಿ ನಾವು ನೋಡುವಂತೆ ಗಿಡ-ಮರಗಳ ಹೆಸರಿನಲ್ಲಿ ನಡೆಯುವ ಪೂಜೆ-ಪುರಸ್ಕಾರಗಳ ಕಾರ್ಯ ಕ್ರಮಗಳು ಮಾನವನಲ್ಲಿ ಭಕ್ತಿ ವಿಶ್ವಾಸಗಳ ಸುಂದರ ಸಮನ್ವಯವನ್ನು ತಂದು ಕೊಡುವ ನಿದರ್ಶನಗಳಾಗಿವೆ.

ಇಂಥ ಪೂಜ್ಯವೂ, ಪರೋಪಕಾರಯುಕ್ತವೂ ಆದ ಈ ಕಾರ್ಯವನ್ನು ನಮ್ಮ ಭಾರತ ಸರಕಾರವು ರಾಷ್ಟ್ರ ದಾದ್ಯಂತ ತನ್ನ ಪ್ರಚಾರ ಕಾರ್ಯವನ್ನು ನಡೆಸಿದೆ; ಅದಕ್ಕಾಗಿ ಹೇರಳ ಹಣವನ್ನು ಖರ್ಚು ಮಾಡಿದೆ. ಮಾಡುತ್ತಲೂ ಇದೆ. ಜನತೆಗೆ ಅದರ ಮಹತ್ವ ತಿಳಿಸಲು ಹಾಗೂ ಸಹಾಯ ನೀಡಲು ಅನೇಕ ಸಂಘ-ಸಂಸ್ಥೆಗಳಿಗೆ ಆದೇಶವಿತ್ತಿದೆ; ಈಯುತ್ತಲೂ ಇದೆ. ಈಚಿದಾಗ್ಯೂ ಈ ಕಾರ್ಯದಲ್ಲಿ ಅಷ್ಟೊಂದು ಹೆಚ್ಚಳವು ಕಂಡು ಬರದು. ಇದಕ್ಕೆ ಕಾರಣ ನಮ್ಮ ಜನತೆಯಲ್ಲಿ ಕಾಣುವ ಅನಾಸಕ್ತಿ ಎಂದು ಹೇಳಬಹುದು. ಜಗತ್ತು ಮುಂದೋಡುವ ಈ ಯುಗದಲ್ಲಿ ನಾವು ಹೀಗೆ ಉದಾಸೀನರಾಗಿ ಕೈಕಟ್ಟಿ ಕೊಂಡು ಕುಳಿತರೆ, ನಮ್ಮ ಕಲ್ಯಾಣವೂ ಆಗದು; ರಾಷ್ಟ್ರದ ಏಳ್ಗೆಯನ್ನು ಹೊಂದಲಾರದು. ಆದ್ದರಿಂದ ಸರಕಾರವು ಹೂಡಿದ ಆಂದೋಲನದಲ್ಲಿ ಸಾರ್ವಜನಿಕರು ಸಹಕರಿಸಿ ಯೋಜನೆಯನ್ನು ಯಶಸ್ವಿಗೊಳಿಸಿ ರಾಷ್ಟ್ರದ ಸರ್ವತೋ ಮುಖ ಪ್ರಗತಿಗೆ ಪಾತ್ರರಾಗುವರೆಂದು ಹಾರೈಸುವೆ.

---

# ೧ನೆಯ ವರ್ಗದ ಮಕ್ಕಳಿಗೆ ಓದು ಕಲಿಸುವದು

ಲೇಖಕರು : **ಶ್ರೀ ರಾ. ಭಿ. ಸೊನಗಾರ,** ಅ. ಮಾ. ಪ್ರಾ. ಸ್ಕೂ. ಗಂ. ಸ. ಟ್ರೇ. ಕಾ. ಧಾರವಾಡ

೧ನೆಯ ವರ್ಗದ ಮಕ್ಕಳಿಗೆ ಓದು ಕಲಿಸುವದರಲ್ಲಿ ಮುಖ್ಯವಾಗಿ ಮೂರು ಪದ್ಧತಿಗಳು ಕಂಡು ಬರುವವು. ಅವು ಯಾವವೆಂದರೆ ಅಕ್ಷರಪದ್ಧತಿ, ಶಬ್ದಪದ್ಧತಿ ಮತ್ತು ವಾಕ್ಯಪದ್ಧತಿ. ಮೊದಲು ಒಂದೊಂದೇ ಮೂಲಾಕ್ಷರವನ್ನು ಪಾಟಿಯ ಮೇಲೆ ಹಾಕಿಕೊಟ್ಟು ಅದನ್ನು ಹಲವಾರು ಸಾರಿ ತೀಡಿಸಿ ಎಲ್ಲ ಮೂಲಾಕ್ಷರಗಳ ಜ್ಞಾನ ಮಾಡಿ ಕೊಡುವದು; ಬಳಿಕ ಬಳ್ಳಿಗಳ ಜ್ಞಾನಮಾಡಿ ಕೊಟ್ಟು ಸುಲಭ ಶಬ್ದಗಳನ್ನೂ ವಾಕ್ಯಗಳನ್ನೂ ಓದಿಸುವದು. ಇದು ಅಕ್ಷರ ಪದ್ಧತಿಯೆನಿಸುವದು. ಅಕ್ಷರ ಪದ್ಧತಿಯಲ್ಲಿಯೇ ಸ್ವಲ್ಪ ಸುಧಾರಣೆಯಾಗಿ, ಅಕ್ಷರ ಗಳನ್ನು ಪಾಟಿಯ ಮೇಲೆ ತೀಡಹಚ್ಚುವದನ್ನು ಬಿಟ್ಟು ಚಿತ್ರಗಳ ಸಹಾಯದಿಂದ ಮೂಲಾಕ್ಷರಗಳ ಜ್ಞಾನ ಮಾಡಿಕೊಡಲಾರಂಭಿಸಿದರು. 'ಅ' ಅಕ್ಷರದ ಜ್ಞಾನ ಮಾಡಿಕೊಡಲಿಕ್ಕೆ ಅಂಬಿಗನದೋ ಅರಸನದೋ ಚಿತ್ರ ತೋರಿಸಿ ಚಿತ್ರದ ಹೆಸರಿನ ಮೊದಲಿನ ಅಕ್ಷರವಾದ 'ಅ'ದ ಜ್ಞಾನ ಮಾಡಿಕೊಡಹತ್ತಿದರು. ಮಗುವು ಚಿತ್ರದ ಸಹಾಯದಿಂದ ಅಕ್ಷರಗಳನ್ನು ಓದುವದು, ಗುರ್ತಿಸುವದು, ಸ್ಮರಣೆಯಲ್ಲಿಟ್ಟುಕೊಳ್ಳುವದು ರೂಢವಾಯಿತು. ಇಲ್ಲಿಯೂ ಸಹ ಮಗುವು ಒಂದೊಂದೇ ಅಕ್ಷರವನ್ನು ಜ್ಞಾನಮಾಡಿ ಕೊಂಡ ಬಳಿಕ ಅಕ್ಷರಗಳನ್ನು ಕೂಡಿಸಿ ಶಬ್ದಗಳನ್ನೂ, ಶಬ್ದಗಳನ್ನು ಹೊಂದಿಸಿ ವಾಕ್ಯಗಳನ್ನೂ ಓದಬೇಕಾಯಿತು. ಆದರೆ ಈ ಪದ್ಧತಿಯು ಮಗುವಿಗೆ ಕಲಿಯುವದಕ್ಕಾಗಲಿ ಶಿಕ್ಷಕನಿಗೆ ಕಲಿಸುವದಕ್ಕಾಗಲಿ ಸುಲಭವೆನಿಸಲಿಲ್ಲ.

ಶಿಕ್ಷಣದಲ್ಲಿ ಸುಧಾರಣೆಯಾದಂತೆ ಶಬ್ದ ಪದ್ಧತಿಯು ಬಳಿಕೆಯಲ್ಲಿ ಬಂದಿತು. ಮಗುವಿಗೆ ಪರಿಚಯವಿದ್ದ ವಸ್ತುಗಳ ಚಿತ್ರಗಳ ಸಹಾಯದಿಂದ ಶಬ್ದಗಳನ್ನು ಮೊದಲು ಓದಿಸಿ ಅವುಗಳೊಳಗಿನ ಅಕ್ಷರ ಜ್ಞಾನಮಾಡಿ ಕೊಡುವದು ರೂಢವಾಯಿತು. ಇಲ್ಲಿಯೂ ಸಹ ಮೊದಲು ಎಲ್ಲ ಮೂಲಾಕ್ಷರಗಳ ಪರಿಚಯ ಮಾಡಿಕೊಟ್ಟ ಬಳಿಕ ಒಂದೊಂದೇ ಗುರುತಿನ ಗುಣಿತಾಕ್ಷರಗಳ ಜ್ಞಾನ ವನ್ನು ಚಿತ್ರಗಳ ಸಹಾಯದಿಂದ ಮಾಡಿಕೊಡಲಾಗಿತ್ತು, ಇದು ಅಕ್ಷರ ಪದ್ಧತಿಗಿಂತ ಬಹುಮಟ್ಟಿಗೆ ಸುಲಭವಾಗಿದ್ದರೂ ಮಗುವಿನ ಒಲವು ಆಭಿರುಚಿಗಳಿಗೆ ತಕ್ಕುದಾಗಿರ ಲಿಲ್ಲ. ಯಾಕೆಂದರೆ ವಿವಿಕ್ಷಿತ ಅಕ್ಷರಗಳ ಪರಿಚಯ ಮಾಡಿಕೊಡಲಿಕ್ಕೆ ಮಗುವಿಗೆ ಪರಿಚಯವಿಲ್ಲದ ಶಬ್ದಗಳನ್ನು ಒತ್ತಾಯದಿಂದ ಕಲಿಸಬೇಕಾಗುತ್ತಿತ್ತು.

ಮೇಲ್ಕಾಣಿಸಿದ ದೋಷಗಳನ್ನು ನಿವಾರಿಸಿ ಮಗುವಿನ ಒಲವು ಅಭಿರುಚಿಗಳಿಗನುಸಾರವಾಗಿ, ಸುಲಭ ರೀತಿಯಲ್ಲಿ ಅಕ್ಷರಜ್ಞಾನದೊಂದಿಗೆ ಓದು ಕಲಿಸುವದಕ್ಕೆ ವಾಕ್ಯ ಪದ್ಧತಿಯೇ ಲೇಸೆಂದು ಶಿಕ್ಷಣ ತಜ್ಞರು ಈ ಪದ್ಧತಿಯನ್ನು ಬಳಕೆಯಲ್ಲಿ ತಂದರು.

ಸೃಷ್ಟಿಯಲ್ಲಿ ಜನಿಸಿದ ಮಗುವು ಸೃಷ್ಟಿ ನಿಯಮಕ್ಕನುಸಾರವಾಗಿಯೇ ಬೆಳೆಯುತ್ತಿರುತ್ತದೆ. ಮಗುವು ಒಂದು ವರ್ಷದ್ದಾಗಲು, ಅಪ್ಪ–ಅವ್ವ, ಅನ್ನ, ಹಾಲು ಮುಂತಾದ ಸುಲಭ ಶಬ್ದಗಳನ್ನು ತನ್ನ ತೊದಲ್ನುಡಿಯಲ್ಲಿ ಆಡಲಾರಂಭಿಸುವದು. ಯಾವ ಮಗುವೂ ಮೊದಲು ಒಂದೊಂದೇ ಅಕ್ಷರವನ್ನು ಆಡಲು ವ್ಯಾರಂಭಿಸುವದಿಲ್ಲ. ಸಾಲೆಗೆ ಬರುವ ಹೊತ್ತಿಗೆ ಮಗುವು ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಮಾತಾಡುವಷ್ಟು ಸಮರ್ಥವಾಗಿರುತ್ತದೆ. ಈಗ ಅದಕ್ಕೆ ಶಬ್ದಗಳಿಗಿಂತ ಪೂರ್ಣವಾದ ಚಿಕ್ಕ ಚಿಕ್ಕ ಮಾತುಗಳು ಹೆಚ್ಚು ಸೇರುತ್ತವೆ. ಈ ಮಾತುಗಳು ಸಹ ಅವನ ನಿತ್ಯದ ಬಳಕೆಯಲ್ಲಿಯವೇ ಇರಬೇಕು. ಮಗುವಿಗೆ ಹೊಸ ಜ್ಞಾನವು ಯಾವಾಗಲೂ ಅದಕ್ಕೆ ಸಂಬಂಧಿಸಿದ ಪೂರ್ವಜ್ಞಾನಕ್ಕೆ ಹೊಂದಿಕೊಂಡಿರುತ್ತದೆ. ಪೂರ್ವಜ್ಞಾನಕ್ಕೆ ಸಂಬಂಧವಿಲ್ಲದ ಹೊಸ ಜ್ಞಾನವನ್ನು ಮನಸ್ಸು ಎಂದೂ ಗ್ರಹಿಸಲಾರದು. ಅಕ್ಷರಜ್ಞಾನದೊಂದಿಗೆ ಓದು ಕಲಿಸಲಿಕ್ಕೆ ಅವನಾಡುವ ಮಾತುಗಳೇ ಪೂರ್ವಜ್ಞಾನ. ಮಾತನಾಡಲು ಬಾರದ ಮೂಕನಿಗೆ ಅಕ್ಷರಜ್ಞಾನ ಮಾಡಿಕೊಡುವದು ಅಸಾಧ್ಯ. ಮಾತುಗಳು ವಾಕ್ಯರೂಪದಲ್ಲಿರುವದರಿಂದ ಮಗುವಿಗೆ ಮೊದಲು ಚಿಕ್ಕ ಚಿಕ್ಕ ವಾಕ್ಯಗಳನ್ನು ಓದಿಸುವದೇ ಸ್ವಾಭಾವಿಕವಾದ ಮಾರ್ಗವು.

ವಾಕ್ಯಪದ್ಧತಿಯ ವಿಷಯಕ್ಕೆ ಪಾಲಕರದಷ್ಟೇ ಅಲ್ಲ; ಎಷ್ಟೋ ಶಿಕ್ಷಕರ ಅಭಿಪ್ರಾಯವು ಸಹ ವಿರುದ್ಧವಾಗಿದೆ. ಬಹಿರಂಗವಾಗಿ ವಿರೋಧ ಮಾಡದಿದ್ದರೂ ಅಂತರಂಗದಲ್ಲಿ ಅದು ನೆಲಸಿದೆ. ತಮಗೆ ತಿಳಿದಂತೆ ಓದು ಕಲಿಸಿ ವರಿಷ್ಠರಿಗೆ ವಾಕ್ಯಪದ್ಧತಿಯನ್ನೇ ಅನುಸರಿಸುತ್ತೇವೆಂದು ಹೇಳುವ ಶಿಕ್ಷಕರು ಇಲ್ಲವೆಂದಲ್ಲ. ಇಂಥವರನ್ನು ನಾವು ದೂಷಿಸಬೇಕೆ? ಇಲ್ಲ; ಎಂದಿಗೂ ಇಲ್ಲ. ವಾಕ್ಯಪದ್ಧತಿಯ ಸರಿಯಾದ ಅರಿವಿಲ್ಲದ ತಮಗೆ ಸರಿದೋರಿದ ಒಂದು ಮಾರ್ಗವನ್ನು ಹಿಡಿದು ಮಗುವಿಗೆ ಅಕ್ಷರಜ್ಞಾನ ಮಾಡಿಕೊಟ್ಟ ಅವರು ದೋಷಾರೋಪಣೆಗೆ ಎಂದೂ ಅರ್ಹರಲ್ಲ.

ಇನ್ನು ವಾಕ್ಯಪದ್ಧತಿಯ ವಿಷಯಕ್ಕೆ ಇರುವ ಆರೋಪವಾದರೂ ಯಾವುದು? "ಮಗುವಿಗೆ ಅಕ್ಷರಜ್ಞಾನವಿಲ್ಲದೆ ಅವನು ಹೇಗೆ ಓದಬಲ್ಲನು? ಇವನು ಬಸವ, ಇವಳು ಕಮಲ ಎಂದು ಓದುವದೆಲ್ಲ ಸುಳ್ಳು, ನಾವು ಹೇಳಿದ್ದನ್ನೇ ನೆನಪಿನಲ್ಲಿಟ್ಟುಕೊಂಡು ಮಗು ಓದುವದು, ಅಕ್ಷರಗಳನ್ನು ಗುರುತಿಸಿ ಓದುವದಿಲ್ಲ" ಎಂಬ ಭಾವನೆ ಕಲಿಸುವವರಲ್ಲಿ ಬರುವದು. ಇಂಥ ಭಾವನೆ ಬರಲಿಕ್ಕೆ ಮುಖ್ಯ ಕಾರಣವೆಂದರೆ ಕಲಿಸುವವರೇ ಮೊದಲು ವಾಕ್ಯ ಪದ್ಧತಿಯಿಂದ ಕಲಿತಿರುವದಿಲ್ಲ. ತಾವು ಮೊದಲು ತಮ್ಮ ಗುರುಗಳಲ್ಲಿ ಅಕ್ಷರಗಳನ್ನು ಪಾಟಿಯ ಮೇಲೆ ತೀಡಿ ಅಕ್ಷರ ಪದ್ಧತಿಯಿಂದ ಕಲಿತದ್ದನ್ನು ನೆನೆದುಕೊಂಡು ಆ ವಾಕ್ಯಪದ್ಧತಿಯನ್ನು ದೂಷಿಸುವರು. ಇಂಥವರಿಗೆ ಸಮಾಧಾನವನ್ನು ಹೇಳಲು ಕೆಳಗೆ ಯತ್ನಿಸಲಾಗಿದೆ.

ನಮ್ಮ ರಾಜ್ಯದ ವಿದ್ಯಾಖಾತೆಯವರು ತಯಾರಿಸಿದ ಈಗಿನ ಗಿನೆಯ ಪುಸ್ತಕದಲ್ಲಿ ವಾಕ್ಯ ಪದ್ಧತಿಯನ್ನೇ ಅನುಸರಿಸಲಾಗಿದೆ. ಮೊದಲನೆಯ ಪಾಠದಲ್ಲಿ 'ಇವನು ಬಸವ, ಇವಳು ಕಮಲ, ಎಂಬೆರಡು ವಾಕ್ಯಗಳಿವೆ. ಶಿಕ್ಷಕರು ಕರೆ ಹಲಗೆಯ ಮೇಲೆ ಬಸವ, ಕಮಲ ಇವರ ಚಿತ್ರಗಳನ್ನು ತೆಗೆದು " ಇವನು ಯಾರು? ಇವಳು ಯಾರು? " ಎಂದು ಪ್ರಶ್ನೆ ಮಾಡಿ 'ಇವನು ಬಸವ, ಇವಳು ಕಮಲ' ಎಂದು ಅನ್ನಿಸಿಕೊಳ್ಳಬೇಕು. ಬಳಿಕ ಕರೆ ಹಲಗೆಯ ಮೇಲೆ ಮಾತುಗಳನ್ನು ಬರೆದು ಓದಿಸಬೇಕು. ಬಳಿಕ ಒಂದೊಂದು ಶಬ್ದವನ್ನು ಗುರುತಿಸಲಿಕ್ಕೆ ಹಚ್ಚಬೇಕು. ನಾಲ್ಕೂ ಶಬ್ದಗಳನ್ನು ಬೇರೆ ಬೇರೆಯಾಗಿ ಬರೆದ ರಟ್ಟುಗಳನ್ನು ತಯಾರಿಸಿ ಅವುಗಳನ್ನು ಗುರುತಿಸಲಿಕ್ಕೂ ವಾಕ್ಯರೂಪದಲ್ಲಿ ಹೊಂದಿಸಲಿಕ್ಕೂ ಮಕ್ಕಳನ್ನು ತೊಡಗಿಸಬೇಕು. ಮಗುವು ಶಬ್ದಗಳನ್ನು ಗುರುತಿಸಬಲ್ಲವನಾದ ಮೇಲೆ ಅವುಗಳೊಳಗಿನ ಅಕ್ಷರಗಳ ಪರಿಚಯ ಮಾಡಿಕೊಡಬೇಕು. ಬಳಿಕ ಅಕ್ಷರ ಪಟಗಳಿಂದ ಶಬ್ದಗಳನ್ನೂ ಕೊನೆಗೆ ವಾಕ್ಯಗಳನ್ನೂ ರಚಿಸಲಿಕ್ಕೆ ತೊಡಗಿಸಬೇಕು. ವಾಕ್ಯಗಳನ್ನೂ ಓದುವದು ಹೆಚ್ಚು ಸ್ವಾಭಾವಿಕವಾದುದರಿಂದ ಅದು ಮಗುವಿಗೆ ಸುಲಭ ವೆನಿಸುವದು. ಶಬ್ದಗಳನ್ನೂ ಅಕ್ಷರಗಳನ್ನೂ ಗುರುತಿಸುವದು ಮಗುವಿಗೆ ತುಸು ಕಠಿಣವೆನಿಸುವದರಿಂದ ಮಗುವು ಬೇಸರವನ್ನು ತೋರಿಸುತ್ತದೆ. ಶಬ್ದಗಳ ಅಥವಾ ಅಕ್ಷರಗಳ ಪಟಗಳನ್ನು ಕೊಟ್ಟು ವಾಕ್ಯರಚಿಸಲು ತೊಡಗಿಸುವದರಿಂದ ವಿಷಯವು ಕ್ರೀಡಾರೂಪವಾಗಿ

ಅವನಿಗಾದ ಬೇಸರವು ದೂರಾಗಿ ಆಡುತ್ತಲೇ ಅಕ್ಷರ ಜ್ಞಾನ ಮಾಡಿಕೊಳ್ಳುವನು. ಚಿಕ್ಕಮಕ್ಕಳಿಗೆ ವಿಷಯವು ಕ್ರೀಡಾರೂಪವಾಗಿ ಸಾಗಬೇಕೆನ್ನುವ ಮಾತಿನ ಗುಟ್ಟಾದರೂ ಇದೇ. ಆರಂಭದಲ್ಲಿ ಇವನು ಬಸವ, ಇವಳು ಕಮಲ ಎಂದು ಓದುವಾಗ ಚಿತ್ರ ಸಹಾಯದಿಂದ ಓದುವನು. ಶಬ್ದಗಳನ್ನು ಗುರುತಿಸಹತ್ತಿದ ಮೇಲೆ ಶಬ್ದಜ್ಞಾನದಿಂದ ಓದುವನು. ಅಕ್ಷರಗಳ ಪರಿಚಯವಾದ ಬಳಿಕ 'ಇ, ವ, ನು' ಈ ಅಕ್ಷರ ಸಮುದಾಯವನ್ನು ನೋಡಿ ಒಮ್ಮೆಲೆ 'ಇವನು' ಎಂದು ಓದುವನು. ಅಕ್ಷರ ಪದ್ಧತಿಯಿಂದ ಕಲಿಸುವದರಿಂದ ಮಕ್ಕಳು 'ಇ–ವ–ನು ಇವನು ಬ–ಸ–ವ ಬಸವ' ಎಂದು ಓದಲಾರಂಭಿಸುವರು. ಇದೇ ಚಟವು ಮೇಲಿನ ತರಗತಿಗಳಲ್ಲಿ ಸಹ ಉಳಯುವ ಸಂಭವವುಂಟು. ವಾಕ್ಯಪದ್ಧತಿಯಲ್ಲಿ ಈ ದೋಷಕ್ಕೆ ಆಸ್ಪದವಿಲ್ಲ. 'ಇ, ವ, ನು' ಈ ಅಕ್ಷರ ಸಮುದಾಯವನ್ನು ನೋಡಿದ ಕೂಡಲೆ 'ಇವನು' ಎಂದು ಒಮ್ಮೆಲೆ ಓದುವನು. ಹೀಗೆ ಒಮ್ಮೆಲೆ ಶಬ್ದಗಳನ್ನು ಓದುವ ರೂಢಿಯನ್ನುಂಟುಮಾಡುವದೇ ಮಹತ್ವದ್ದು.

ಮೇಲಿನ ಎರಡು ವಾಕ್ಯಗಳಿಂದ ಇ, ವ, ನು, ಳು, ಕ,ಮ,ಲ ಈ ಏಳು ಅಕ್ಷರಗಳ ಜ್ಞಾನವಾಗುವದು. ಮುಂದೆ ಇದು ಅಕಳು, ಇದು ಕರು, ಇದು ಅಕಳ ಕರು ಇಂಥ ವಾಕ್ಯಗಳನ್ನು ಚಿತ್ರಸಹಾಯದಿಂದ ಓದಿಸಿ 'ದು, ರು, ಲ' ಈ ಹೊಸ ಅಕ್ಷರಗಳ ಜ್ಞಾನ ಮಾಡಿಕೊಡಬೇಕು. 'ಳ' ಮೂಲಾಕ್ಷರದ ಜ್ಞಾನವಿಲ್ಲದೆ 'ಳು' ಈ ಗುಣಿತಾಕ್ಷರವನ್ನು ಹೇಗೆ ಕಲಿಸಬೇಕು ಎನ್ನುವ ಗೊಡೆವೆಗೆ ಹೋಗಬಾರದು.. ಮಗುವು ಮೊದಲು 'ಳು' ಅಕ್ಷರವನ್ನೇ ಕಲಿಯಲಿ; ಬಳಿಕ ಅಕಳ, ಅಕಳು, ಈ ಶಬ್ದಗಳೊಳಗಿನ ಅಕ್ಷರ ಭೇದವನ್ನು ತಿಳಿಸಿ 'ಳ' ದ ಮುಂದೆ ು ಈ ಗುರುತು ಮಾಡಿದರೆ 'ಳು' ಎಂದು ಅನ್ನಬೇಕೆಂದು ಹೇಳಿ ಕೊಡಬೇಕು; ಇದರಂತೆ 'ರ, ರು, ನ, ನು, ದ, ದು ಈ ಅಕ್ಷರಗಳ ಜ್ಞಾನ ಮಾಡಿಕೊಡಬಹುದು. ಮಗುವು ವಾಕ್ಯಗಳನ್ನು ಓದಿದ ಮೇಲೆ ಅವುಗಳೊಳಗಿನ ಶಬ್ದಗಳನ್ನೂ ಅಕ್ಷರಗಳನ್ನೂ ಗುರುತಿಸಲಿಕ್ಕೇ ಬೇಕು. ಮೊದಲಿನ ಪಾಠಗಳಲ್ಲಿ ಬಂದ ಎಲ್ಲ ಅಕ್ಷರಗಳು ತಿಳಿದ ಮೇಲೆಯೇ ಮುಂದಿನ ಪಾಠಗಳಿಗೆ ಸಾಗಬೇಕೆನ್ನುವ ಹವ್ಯಾಸಕ್ಕೆ ಹೋಗಬಾರದು. ಮೊದಲಿನ ಪಾಠಗಳಲ್ಲಿ ಒಂದೆರಡು ಅಕ್ಷರಗಳ ಸ್ಪಷ್ಟವಾದ ಜ್ಞಾನವಾಗಿರದ್ದರೂ ಮುಂದಿನ ಪಾಠಗಳಲ್ಲಿ ಮಗುವು ಅವುಗಳ ಜ್ಞಾನ ಮಾಡಿಕೊಳ್ಳುವದು. ಹೀಗೆ ೮–೧೦ ಮೂಲಾಕ್ಷರಗಳ ಜ್ಞಾನವಾದ ಕೂಡಲೆ ಉ ಗುರುತಿನ ಗುಣಿತಾಕ್ಷರಗಳನ್ನು ಮೊದಲು ಕಲಿಸಬೇಕು. ಬಳ್ಳಿಗಳ ಕ್ರಮದ ಮೇರೆಗೆ ಮೊದಲು ಆ, ಬಳಿಕ ಇ, ಆಮೇಲೆ ಈ. ಹೀಗೆ ಸಾಗುವದರಲ್ಲಿ ಅರ್ಥವಿಲ್ಲ. ವಾಕ್ಯ ಪೂರ್ಣತೆಗಾಗಿ ಮೊದಲು ಉ ಗುರುತಿನ ಗುಣಿತಾಕ್ಷರಗಳ ಅವಶ್ಯಕತೆ ಹೆಚ್ಚಾಗಿ ತಲೆದೋರುವದರಿಂದ ಮೊದಲು ಉ ಗುರುತಿನ ಅಕ್ಷರಗಳನ್ನು ಕಲಿಸಲಿಕ್ಕೆ ಏನೂ ಅಡ್ಡಿ ಇಲ್ಲ. ನಿಮ್ಮ ಯೋಜನೆಯಂತೆ ಬೇಕಾದ ಗುರುತಿನ ಗುಣಿತಾಕ್ಷರಗಳನ್ನು ಕಲಿಸಬಹುದು. ಆದರೆ ಎಲ್ಲ ಗುರುತಿನ ಗುಣಿತಾಕ್ಷರಗಳನ್ನು ಕಲಿಸಿದ ಮೇಲೆ ಬಳ್ಳಿಗಳ ಕ್ರಮವನ್ನು ನುಸರಿಸಿ ಬರೆಯಲಿಕ್ಕೂ ಓದಲಿಕ್ಕೂ ಕಲಿಸಲಿಕ್ಕೇ ಬೇಕು.

ಬಸವ ಗುಂಡು ಆಡುವನು, ಕಮಲ ಚೆಂಡು ಆಡುವಳು, ಹನುಮ ಓದುವನು, ಕಮಲ ಓದುವಳು' ಇಂಥ ವಾಕ್ಯಗಳನ್ನು ಚಿತ್ರ ಸಹಾಯದಿಂದ, ಉ ಕಾರದ ಅಕ್ಷರಗಳ ಬಳಕೆ ಹೆಚ್ಚಾಗುವಂತೆ ವಾಕ್ಯಗಳನ್ನು ರಚಿಸಿ ಓದಿಸಿ ಅಕ್ಷರ ಜ್ಞಾನವನ್ನು ದೃಢಪಡಿಸಬೇಕು. ಕೇವಲ ಪಠ್ಯ ಪುಸ್ತಕದೊಳಗಿನ ಪಾಠಗಳನ್ನಷ್ಟೇ ಅವಲಂಬಿಸದೆ ಅಕ್ಷರ ಜ್ಞಾನವನ್ನು ದೃಢಪಡಿಸುವದಕ್ಕಾಗಿ ನಿಮ್ಮ ಸ್ವಂತವಾದ ಪೂರಕ ಪಾಠಗಳನ್ನು ರಚಿಸಿಕೊಂಡು ಸಾಗಬೇಕು.

ಹಳೆಯದನ್ನು ಬಿಟ್ಟು ಹೊಸದನ್ನು ಅಂಗೀಕರಿಸುವುದಕ್ಕೆ ಮನಸ್ಸು ಒಮ್ಮೆಲೆ ಒಪ್ಪುವದಿಲ್ಲ. ಅದು ಸ್ವಾಭಾವಿಕವೂ ಆಗಿದೆ. ಹೊಸದನ್ನು ಅಂಗೀಕರಿಸಿ ಮುಂದೆ ಸಾಗುವಾಗ ಅನೇಕ ಎಡರು ತೊಡರುಗಳನ್ನು ಎದುರಿಸಬೇಕಾಗುತ್ತದೆ. ಆದರೆ ಈ ಎಡರು ತೊಡರುಗಳು ಕೊನೆಯ ವರೆಗೆ ಉಳಿಯತಕ್ಕವಲ್ಲ. ಒಮ್ಮೆ ಮನಮುಟ್ಟಿ ಪ್ರಯತ್ನ ಮಾಡಿ ಯಶಸ್ಸನ್ನು ಸಂಪಾದಿಸಿದರೆ ನಿಮ್ಮಲ್ಲಿ ಆತ್ಮವಿಶ್ವಾಸವು ಮೂಡುವದು. ಈ ಆತ್ಮವಿಶ್ವಾಸವೇ ನಿಮ್ಮ ಮುಂದಿನ ಕಾರ್ಯವನ್ನು ಸುಗಮವಾಗಿ ಸಾಗಿಸುವದು.

ಗಿಣಿಯ ವರ್ಗದ ಮಕ್ಕಳಿಗೆ ವಾಕ್ಯ ಪದ್ಧತಿಯಿಂದ ಓದು ಕಲಿಸಲು ಈ ಲೇಖವು ತುಂಬಾ ನೆರವಾಗುವದೆಂದು ನನ್ನ ಭರವಸೆ. ಉತ್ಸಾಹಿ ಶಿಕ್ಷಕ ಶಿಕ್ಷಕಿಯರು ಈ ಪದ್ಧತಿಯನ್ನು ಪ್ರಯೋಗಮಾಡಿ ನೋಡಿ ಪರಿಣಾಮವನ್ನು ನನಗೆ ತಿಳಿಸಿದಲ್ಲಿ ನಾನು ಕೃತಾರ್ಥ.

# ಹಾಜರಿ ಸುಧಾರಣೆಗಾಗಿ ಶಿಷ್ಯವೃತ್ತಿಗಳು

ಲೇಖಕರು :– **ಕು. ಸುಶೀಲಾ ಹುಲಸೋಗಿ, ಅ.ಡೆ.ಎ.ಇ. ಬೆಳಗಾಂವ**

ಭಾರತವು ರಾಜಕೀಯ ಸ್ವಾತಂತ್ರ್ಯವನ್ನು ಪಡೆದು ಹನ್ನೆರಡು ಸಂವತ್ಸರಗಳು ಗತಿಸಿದವು. ಭಾರತದ ಸ್ವಾತಂತ್ರ್ಯ ರವಿಯ ಉದಯದ ಜೊತೆಗೆ ಅನೇಕ ಜಟಿಲ ಸಮಸ್ಯೆಗಳು ದೇಶ ಹಿತ–ಚಿಂತಕರ ಎದುರು ಉದ್ಭವಿಸಿದವು: ಒಂದೆಡೆ ದೇಶದಲ್ಲಿ ಬಡತನ, ಜಾತೀಯತೆ, ಅಸ್ಪೃಶ್ಯತೆ, ರೋಗ ರುಜಿನಗಳು– ತಾಂಡವ ವಾಡುತ್ತಿದ್ದರೆ, ಬೇರೆಡೆ ಅಜ್ಞಾನಾಂಧಕಾರದ ಗಾಢ ನಿದ್ರೆಯಲ್ಲಿ ಭಾರತವು ತನ್ನನ್ನೇ ತಾನು ಮರೆತಿತ್ತು. ದೇಶದಲ್ಲಿ ನಿರಕ್ಷರರ ಸಂಖ್ಯೆ ಸುಮಾರು ೮೦ ರಷ್ಟು ಇದ್ದು, ಅದರಲ್ಲಿ ಸಾಕ್ಷರ ಹೆಣ್ಣು ಮಕ್ಕಳು ಕೇವಲ ಬೆರಳು ಗಳಿಂದ ಎಣಿಸುವಷ್ಟು ಕೂಡ ಇರಲಿಲ್ಲ. ಯಾವದೇ ದೇಶದ ಪ್ರಗತಿ ರಭಸದಿಂದ ಆಗಬೇಕಾದರೆ ದೇಶದ ಎಲ್ಲ ಪ್ರಜೆಗಳಿಗೂ ಶಿಕ್ಷಣ ಅತ್ಯವಶ್ಯ. ಈ ಎಲ್ಲ ಸಮಸ್ಯೆಗಳನ್ನು ದೂರೀಕರಿಸಿ, ಭಾರತದ ಅಭಿವೃದ್ಧಿಯನ್ನು ಸಾಧಿಸಲು ನಮ್ಮ ರಾಷ್ಟ್ರೀಯ ಸರಕಾರವು ಪಂಚವಾರ್ಷಿಕ ಯೋಜನೆಗಳನ್ನು ಕೈಕೊಂಡಿದೆ. ಪಂಚವಾರ್ಷಿಕ ಈ ಎರಡೂ ಯೋಜನೆಗಳಲ್ಲಿ ಶಿಕ್ಷಣಕ್ಕೆ ವಿಶೇಷವಾಗಿ, ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒಂದು ವಿಶಿಷ್ಟವಾದ ಸ್ಥಾನವನ್ನು ಸರಕಾರದವರು ನೀಡಿದ್ದು, ಅಭಿಮಾನದ ಸಂಗತಿಯಾಗಿದೆ.

ಶಿಕ್ಷಣವು ಆತ್ಮ ವಿಕಾಸಕ್ಕೆ ಇರದೆ ಹೊಟ್ಟೆ ತುಂಬಿಕೊಳ್ಳುವ ಒಂದು ಸಾಧನ ಎಂಬ ವಿಚಾರ ನಮ್ಮ ಬಹು ಸಂಖ್ಯಾಕ ಭಾರತೀಯರಲ್ಲಿ ದೃಢವಾಗಿ ಬೇರೂರಿದೆ. ಶಿಕ್ಷಣವು ಹೆಣ್ಣುಮಕ್ಕಳಿಗೆ ಒಂದು ಅನವಶ್ಯಕನಾದ ಸಂಗತಿ ಎಂಬ ಕಲ್ಪನೆ ಅಜ್ಞಾನಿಗಳಾದ ಅನೇಕ ಪಾಲಕರಲ್ಲಿ ಇವೆ. ಬಡತನವೂ ಇದಕ್ಕೆ ಒಂದು ಹಿರಿಯ ಕಾರಣ ವಾಗಿವೆ. ಹೆಣ್ಣುಮಕ್ಕಳನ್ನು ಶಾಲೆಗೆ ಬರಮಾಡಿ ಕೊಳ್ಳುವ ಸಮಸ್ಯೆ ಇನ್ನೂ ಗಡುಚಾಗಿಯೇ ಉಳಿದಿವೆ. ಆದ್ದರಿಂದ ಕೇಂದ್ರ ಸರಕಾರ ಹಾಗೂ ರಾಜ್ಯಸರಕಾರಗಳು ಪ್ರಾಥಮಿಕ ಶಾಲೆಗಳಲ್ಲಿ ಹೆಣ್ಣುಮಕ್ಕಳ ಹಾಜರಿಯನ್ನು ಸುಧಾರಿಸುವದಕ್ಕಾಗಿ, ದ್ವಿತೀಯ ಪಂಚವಾರ್ಷಿಕ ಯೋಜನೆಯ ಅಂಗವಾಗಿ ಕೆಲವೊಂದು ಶಿಷ್ಯವೃತ್ತಿಗಳನ್ನು ಮಂಜೂರು ಮಾಡಿದ್ದಾರೆ. ಈ ಶಿಷ್ಯವೃತ್ತಿಗಳು ಬಟ್ಟೆ, ಪಾಟಿ, ಪುಸ್ತಕ ಇತ್ಯಾದಿಗಳ ರೂಪದಲ್ಲಿ ಕೊಡಲ್ಪಡುತ್ತವೆ.

ಈ ಯೋಜನೆಯ ಅಂಗವಾಗಿ ೧೯೫೭–೫೮ ನೇ ಇಸ್ವಿಯಲ್ಲಿ ಬೆಳಗಾಂವ ಜಿಲ್ಲೆಗಾಗಿ ೧೧೧೧ ಶಿಷ್ಯ–ವೇತನಗಳು ಮಂಜೂರಾಗಿದ್ದು, ಅವುಗಳನ್ನು ಈಗಾಗಲೇ ಹಳ್ಳಿಯ ಶಾಲೆಗಳಲ್ಲಿ ಕಲಿಯುತ್ತಿರುವ ಬಾಲಕಿಯರಲ್ಲಿ ಹಂಚಲಾಗಿದೆ. ೧೯೫೮–೫೯ ನೇ ಇಸ್ವಿಯಲ್ಲಿ ಪುನಃ ೬೪೦ ಶಿಷ್ಯವೇತನಗಳು ಮಂಜೂರಾಗಿದ್ದವು. ಅವುಗಳ ಸಲುವಾಗಿ ಬೆಳಗಾಂವ ಜಿಲ್ಲೆಗಾಗಿ ಒಟ್ಟು ೬೯೫೦ ರೂಪಾಯಿಗಳು ಮಂಜೂರಾಗಿವೆ. ಈ ಶಿಷ್ಯವೃತ್ತಿಗಳನ್ನು ಆಯಾ ವರ್ಗಗಳಿಗೆ ಕೆಳಗೆ ಕಾಣಿಸಿದಂತೆ ಹಂಚಬೇಕೆಂಬ ಆದೇಶವನ್ನು ಸರಕಾರದವರು ಮಾಡಿದ್ದಾರೆ.

| | |
|---|---|
| ೧ ಮತ್ತು ೨ನೇ ವರ್ಗ | ೩+೪ನೇ ವರ್ಗ |
| ೪೯೨೦ ಶಿಷ್ಯವೇತನಗಳು | ೧೧೪೦ ಶಿಷ್ಯವೇತನ |
| ೫+೬ನೇ ವರ್ಗ | ೬+೭ನೇ ವರ್ಗ |
| ೩೩೦ ಶಿಷ್ಯವೇತನ | ೧೦೦ ಶಿಷ್ಯವೇತನ |

ಪ್ರತಿಯೊಂದು ಶಿಷ್ಯವೇತನದ ಬೆಲೆ ಕೆಳಗೆ ಕಾಣಿಸಿದಂತೆ ಇರಬೇಕೆಂದು ಸರಕಾರದವರು ಗೊತ್ತುಮಾಡಿದ್ದಾರೆ.

| | |
|---|---|
| ೧+೨ನೇ ವರ್ಗ | ೩+೪ನೇ ವರ್ಗ |
| ರೂ. ೫ | ರೂ. ೧೦ |
| ೫+೬ನೇ ವರ್ಗ | ೬+೭ನೇ ವರ್ಗ |
| ರೂ. ೧೫ | ರೂ. ೨೦ |

ಈ ಹಣವನ್ನು ಬಟ್ಟೆ ಮತ್ತು ಪುಸ್ತಕಗಳಿಗಾಗಿ ಕೆಳಗಿನಂತೆ ವಿನಿಯೋಗಿಸಬೇಕೆಂದು ಸರಕಾರದವರು ನಿರ್ದಿಷ್ಟ ಮಾಡಿದ್ದಾರೆ.

| | |
|---|---|
| ೧+೨ನೇ ವರ್ಗ | ೩+೪ನೇ ವರ್ಗ |
| ೪ ರೂ. ಬಟ್ಟೆಗಳು | ೭ ರೂ. ಬಟ್ಟೆಗಳು |
| ೧ ರೂ. ಪಾಟಿಪುಸ್ತಕಗಳು | ೩ ರೂ. ಪಾಟಿಪುಸ್ತಕಗಳು |
| ೫+೬ನೇ ವರ್ಗ | ೬+೭ನೇ ವರ್ಗ |
| ೯ ರೂ. ಬಟ್ಟೆಗಳು | ೧೩ ರೂ. ಬಟ್ಟೆಗಳು |
| ೬ ರೂ. ಪಾಟಿಪುಸ್ತಕಗಳು | ೭ ರೂ. ಪಾಟಿಪುಸ್ತಕಗಳು |

ಸರಕಾರದವರು ಈ ಶಿಷ್ಯವೇತನಗಳನ್ನು ಕೊಡಬೇಕಾದರೆ ಕೆಲವೊಂದು ಕರಾರುಗಳನ್ನು ಹಾಕಿದ್ದಾರೆ.

೧) ವಿದ್ಯಾರ್ಥಿನಿಯು ಶಾಲೆಯ ಒಟ್ಟು ದಿನಗಳಲ್ಲಿ ನೂರಕ್ಕೆ (೧೦೦) ೭೫ ರಷ್ಟು ದಿನಗಳವರೆಗೆ ಹಾಜರಿರಬೇಕು.

೨) ವರ್ಗದಲ್ಲಿ ವಿದ್ಯಾರ್ಥಿನಿಯ ಪ್ರಗತಿ ಸಮಾಧಾನಕರವಿರಬೇಕು.

೩) ವಿದ್ಯಾರ್ಥಿನಿಯರ ಪಾಲಕರ ಉತ್ಪನ್ನವು ತಿಂಗಳಿಗೆ ರೂ. ೧೦೦ ಕ್ಕೆ ಮಿಕ್ಕಬಾರದು.

೪) ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಯರಿಗೆ ಪ್ರಾಶಸ್ತ್ಯವನ್ನು ಕೊಡಬೇಕು.

೫) ವಿದ್ಯಾರ್ಥಿನಿಯರು ಮುಂದಿನ ವರ್ಗದಲ್ಲಿ ಅಭ್ಯಾಸವನ್ನು ಮುಂದುವರಿಸುವರು. ಹಾಗೂ ಅವರಿಗೆ ಕೊಟ್ಟ ಬಟ್ಟೆ, ಪಾಟಿ, ಪುಸ್ತಕಗಳನ್ನು ಶಾಲೆಯಲ್ಲಿರುವಾಗ ಉಪಯೋಗಿಸುವರು ಎಂಬುದರ ಬಗ್ಗೆ, ಪಾಲಕರು ಆಶ್ವಾಸನವನ್ನು ಕೊಡಬೇಕು.

೬) ಈ ಶಿಷ್ಯವೃತ್ತಿಗಳು ಹಳ್ಳಿಗಳಲ್ಲಿ ಶಾಲೆಗೆ ಹೋಗುತ್ತಿರುವ ವಿದ್ಯಾರ್ಥಿನಿಯರಿಗೆ ಮಾತ್ರ ಕೊಡಬೇಕು.

ಹೀಗೆ ಸರಕಾರದವರಿಂದ ಶಿಷ್ಯವೇತನಗಳು ಮಂಜೂರಾದ ಕೂಡಲೇ ಬೆಳಗಾಂವ ಜಿಲ್ಲೆಯ ಶಿಕ್ಷಣ ಖಾತೆಯವರು ವಿಶೇಷ ಪ್ರಯತ್ನಪಟ್ಟು ವಿದ್ಯಾರ್ಥಿನಿಯರಿಗೆ ಯೋಗ್ಯ ಬಟ್ಟೆ, ಪುಸ್ತಕಗಳನ್ನು ಕೊಂಡು ಅವುಗಳನ್ನು ಹಂಚುವ ಕೆಲಸದಲ್ಲಿಯೂ ಉತ್ಸಾಹವನ್ನು ತೋರಿದರು.

ಈ ಶಿಷ್ಯವೃತ್ತಿಗಳೆಂದು ಕೊಡಬೇಕಾದ ಬಟ್ಟೆಗಳು ಪುನಿತ್ರವಾದ ಖಾದಿಯ ಬಟ್ಟೆಗಳೇ ಆದುದು ಬೆಳಗಾಂವ ಜಿಲ್ಲೆಯ ವೈಕ್ಷಣಿಕ ಖಾತೆಯ ವೈಶಿಷ್ಟ್ಯವಾಗಿದೆ.

ಕೆಳಗೆ ಕಾಣಿಸಿದ ವಸ್ತ್ರಗಳು ಆಯಾ ವರ್ಗಗಳಿಗೆ ಕೊಡಲ್ಪಟ್ಟವು.

| ೧+೩ನೇ ವರ್ಗಗಳು | ೩+೪ನೇ ವರ್ಗಗಳು |
|---|---|
| ಫ್ರಾಕು, ಕೈಚೀಲ | ಪರಕರ, ಬ್ಲೌಜ |
| ಪಾಟಿ, ಪಠ್ಯಪುಸ್ತಕಗಳು | ಪಾಟಿ, ಪಠ್ಯಪುಸ್ತಕಗಳು |
| ೫+೬ನೇ ವರ್ಗಗಳು | ೬+೭ನೇ ವರ್ಗಗಳು |
| ಸೀರೆ, ಬ್ಲೌಜು | ಸೀರೆ, ಬ್ಲೌಜು |
| ಪಾಟಿ, ಪಠ್ಯಪುಸ್ತಕಗಳು | ಪಾಟಿ, ಪಠ್ಯಪುಸ್ತಕಗಳು |

ಈ ಬಟ್ಟೆಗಳನ್ನು ಹಂಚುವಾಗ್ಗೆ ಅನೇಕ ಹಳ್ಳಿಗಳಲ್ಲಿ ವಿಶೇಷ ಸಮಾರಂಭಗಳನ್ನು ಏರ್ಪಡಿಸಿದ್ದಾಗಿದೆ.

ಇಂಥ ಸಮಾರಂಭಗಳನ್ನು ಏರ್ಪಡಿಸುವಾಗ್ಗೆ ಅಧ್ಯಾಪಿಕೆಯರು ಪ್ರಚಾರ ಕಾರ್ಯವನ್ನೂ ಮಾಡಿರುವುದು ಉಂಟು. ಮುಂಬರುವ ವರ್ಷದಲ್ಲಿ ಶಾಲೆಗೆ ಬರತಕ್ಕ ಬಾಲಕಿಯರೆಲ್ಲರೂ ಶಾಲೆಗೆ ಬರಬೇಕೆಂಬ ಸದಿಚ್ಛೆಯಿಂದ ಶಿಕ್ಷಕಿಯರು ಹಿಂದುಳಿದ ವರ್ಗದ ವಸತಿಗಳಿಗೆ ಹೋಗಿ, ಸರಕಾರದವರು ಕೊಡ ಮಾಡಿದ ಶಿಷ್ಯವೃತ್ತಿಗಳ ಬಗ್ಗೆ ನಿವೇದಿಸಿದ್ದಾರೆ.

ಈ ಶಿಷ್ಯವೃತ್ತಿಗಳನ್ನು ಹಂಚಿದ ಮೇಲೆ ಆದ ಪ್ರತಿಕ್ರಿಯೆಗಳ ಬಗ್ಗೆ ಕೆಲವೊಂದು ಶಾಲೆಗಳ ಮುಖ್ಯಾಧ್ಯಾಪಿಕೆಯರು ಹೀಗೆ ಅಭಿಪ್ರಾಯ ಪಡುತ್ತಿದ್ದಾರೆ.

ಹಾಜರಿ ಸುಧಾರಣೆಯ ಸಲುವಾಗಿ ಕೊಟ್ಟ ಪಾಟಿ, ಮತ್ತು ಪುಸ್ತಕಗಳನ್ನು ಹಂಚಿರುತ್ತೇವೆ. ಹಾಜರಿಯಲ್ಲಿ ಸುಧಾರಣೆಯಾಗಿರುವದು. ಹಿಂದುಳಿದ ವರ್ಗದ ವಿದ್ಯಾರ್ಥಿನಿಯರು ಹೆಚ್ಚು ಹೆಚ್ಚಾಗಿ ಹೆಸರು ಹಚ್ಚಲು ಶಾಲೆಗೆ ಬಂದಿರುವರು.''

"ಈ ಶಿಷ್ಯವೃತ್ತಿಗಳ ಮೂಲಕ ಹಿಂದುಳಿದ ಮತ್ತು ಬಡ ಮಕ್ಕಳ ಪಾಲಕರು ತಮ್ಮ ಮಕ್ಕಳನ್ನು ಆಸ್ಥೆಯಿಂದ ಶಾಲೆಗೆ ಕಳುಹಿಸತೊಡಗಿದ್ದಾರೆ.''

೧೯೫೯–೬೦ ನೆಯ ಸಾಲಿನಲ್ಲಿ ಈ ಶಿಷ್ಯವೃತ್ತಿಗಳು ಇನ್ನೂ ಹೆಚ್ಚು ಪ್ರಮಾಣದಲ್ಲಿ ಮಂಜೂರಾಗಲಿವೆ. ಈ ಶಿಷ್ಯವೃತ್ತಿಗಳು ಹೆಣ್ಣುಮಕ್ಕಳ ಪ್ರಾಥಮಿಕ ಶಿಕ್ಷಣದಲ್ಲಿ ಒಂದು ನವ ಚೈತನ್ಯವನ್ನು ಉಂಟುಮಾಡಿವೆ.

# ಶಾಲೆಗಳಿಗೆ ನೀಡಿದ ಉದಾರ ದೇಣಿಗೆ

| | ಊರು | | ವಿವರಗಳು |
|---|---|---|---|
| ೧ | ಕಲಗುರ್ಕಿ | .... | ಊರ ನಾಗರಿಕರು ೩೬ ರೂ. ೭೫ ನ. ಪೈ. ಸೀರಿನ ಟಾಕಿ, ೧ ತಂಬಿಗೆ, ೨ ಬಟ್ಟಲಗಳನ್ನು ಶಾಲೆಯ ಉಪಯೋಗಕ್ಕೆ ಕೊಟ್ಟಿದ್ದಾರೆ. |
| ೨ | ಶಿರೂರ | .... | ಸಹಕಾರಿ ಅಂಗಡಿಯ ಉದ್ಘಾಟನಾ ಸಮಾರಂಭವು ಶಾಲೆಯಲ್ಲಿ ಸರಪಂಚ ಶ್ರೀ ಮಲ್ಲನಗೌಡ ಪಾಟೀಲ ಇವರಿಂದ ಜರುಗಿತು. ಊರ ಜನರು ಸಹಕಾರಿ ಅಂಗಡಿಗೆ ೫೧ ರೂ. ೨೫ ರೂ.; ಗ್ಲೋಬ, ೨೫ ರೂ. ಬಡ ಹುಡುಗರಿಗೆ ಪಾಟಿ, ಪುಸ್ತಕ ಹೀಗೆ ೧೦೧ ರೂ. ಕೊಟ್ಟಿದ್ದಾರೆ. |
| ೩ | ಗುಳೇದಗುಡ್ಡ | .... | ಲೋ. ಟಿಳಕರ ಪುಣ್ಯತಿಥಿಯನ್ನು ಆಚರಿಸಿತು. ಶಾಲೆಗೆ ಮಹಾತ್ಮರ ಮತ್ತು ಲೋ. ಟಿಳಕರ ದೊಡ್ಡ ಫೋಟೋಗಳನ್ನು ಕೊಡುವದಾಗಿ ಶ್ರೀ ಎಸ್. ಎಮ್. ಶೀಲವಂತರು ತಿಳಿಸಿದರು. |
| ೪ | ಮಾಲದಿನ್ನಿ | .... | ಶ್ರೀಯುತರಾದ ದ. ಬಾ. ಶಿರಗುಪ್ಪಿ, ರಾ. ಭಿ. ಹೊನಕುಪ್ಪಿ, ಯಮನಪ್ಪ ಕಡಕೋಳ ಇವರು ಮಧ್ಯಾನ್ಹದ ಊಟದ ಯೋಜನೆಗೆ ೫ ರೂ. ಯಂತೆ ಸಹಾಯ ಕೊಟ್ಟಿದ್ದಾರೆ. ಶ್ರೀಯುತರುಗಳಾದ ಸಿದ್ದಪ್ಪ ಹೊನಕುಪ್ಪಿ, ಯಲ್ಲಪ್ಪ ತೋಳಿ ಇವರು ಬೇಲಿಗಾಗಿ ಸಹಾಯ ಕೊಟ್ಟಿದ್ದಾರೆ. ಊರ ನಾಗರಿಕರು ಶೈಕ್ಷಣಿಕ ಉಪಕರಣಗಳಿಗೆ ೫೦ ರೂ. ಕೊಟ್ಟಿದ್ದಾರೆ. |
| ೫ | ರೋಣಿಹಾಳ | .... | ಇಲ್ಲಿಯ ಶಿಕ್ಷಕರಾದ ಶ್ರೀ ಎಸ್. ಎಸ್. ಅಂಬೇಕರ ಇವರು ೧೦ ವರ್ಷ ಉತ್ತಮ ಕೆಲಸ ಮಾಡಿದ್ದಕ್ಕಾಗಿ ಇವರಿಗೆ ಶ್ರೀ ಮಲ್ಲಪ್ಪ ದೇಸಾಯಿ ಇವರು ೧೦ ರೂಪಾಯಿ ಬೆಲೆಯ ಒಂದು ಥಾಲನ್ನು ಕೊಟ್ಟು ಗೌರವಿಸಿದ್ದಾರೆ. |
| ೬ | ಸವದತ್ತಿ | .... | ದಿನಾಂಕ ೩೦—೭—೫೯ ರಂದು ತಾಲೂಕ ಮಟ್ಟದ ಪ್ರದರ್ಶನವು ಏರ್ಪಡಿಸಲ್ಪಟ್ಟಿತು. |
| ೭ | ಎಕಲಾಸಪೂರ ತಾ. ಗದಗ | | ಇಲ್ಲಿ ೭ನೆಯ ವರ್ಗವು ಪ್ರಾರಂಭಿಸಲ್ಪಟ್ಟಿದೆ. ಈ. ಶ. ಹಳೇಮನಿ ಇವರು ವರ್ತಮಾನಪತ್ರ ತರಿಸಲು ೧೦ ರೂ. ಕೊಟ್ಟಿದ್ದಾರೆ. |
| ೮ | ಹಣ್ಣಿಗೇರಿ | .... | ಊರ ಪ್ರಮುಖರು ಉಪಕರಣಗಳನ್ನು ಕೊಳ್ಳಲು ೨೫ ರೂ. ದೇಣಿಗೆ ಕೊಟ್ಟಿರುವರು. |
| ೯ | ದೇವಗಿರಿ | .... | ವ್ಹಿ. ಪಿ. ಸಿ. ಯವರು ಶಾಲೆಗೆ ಶಾರೀರಿಕ ಶಿಕ್ಷಣ ಉಪಕರಣ ಕೊಳ್ಳಲು ೧೬೦ ರೂ. ಗಳನ್ನು ಕೊಟ್ಟಿದ್ದಾರೆ. |
| ೧೦ | ಸೀರಲಕೇರಿ | .... | ಶ್ರೀ ಸೋಮನಗೌಡ ಪಾಟೀಲ ಇವರ ಹಸ್ತದಿಂದ ಶ್ರೀ ಮಿರಜಕರ, ಎ. ಡಿ. ಇ. ಆಯ್. ಇವರ ಪ್ರೋತ್ಸಾಹನೆಯಿಂದ ಮಧ್ಯಾನ್ಹದ ಉಪಹಾರ ಯೋಜನೆಯು ಇಲ್ಲಿ ಪ್ರಾರಂಭಿಸಲ್ಪಟ್ಟಿದೆ (೧೪–೭–೫೯). |

| ಊರು | ವಿವರಗಳು |
|---|---|
| ೧೧ ಗಂಗಾವುರ (ನರಗುಂದ).... | ಇಲ್ಲಿ ೫ ನೆಯ ಇ. ಪ್ರಾರಂಭವಾಗಿದೆ. |
| ೧೨ ಸೀಲಜಿ (ರಾಯಬಾಗ ಮಹಾಲು).... | ಇಲ್ಲಿಯ ಉಪಶಿಕ್ಷಣಾಧಿಕಾರಿಗಳಾದ ಶ್ರೀ ಪಾವಟೆ ಚನ್ನಪ್ಪ ನವರು ಸಮಾಜ ಶಿಕ್ಷಣ ಸಭೆಯನ್ನು ಕೂಡಿಸಿದ್ದರು. ಸಹಕಾರಿ ಸಂಘದಿಂದ ವಾಚನಾಲಯಕ್ಕೆ ೩೦ ರೂ. ದೇಣಿಗೆ ಸಿಕ್ಕವು. ಇಂಗು ಬಚ್ಚಲ, ಹೊಗೆಯಾಗದ ಒಲಿ ಇವುಗಳ ಬಗ್ಗೆ ಮಾಹಿತಿ ಮಾಡಿ ಕೊಟ್ಟರು. |
| ೧೩. ಶೀಡಬಾಳ .... | ಇಲ್ಲಿ ಹೆಣ್ಣುಮಕ್ಕಳ ಶಾಲೆಗೆ ಕೆಳಗೆ ಕಾಣಿಸಿದ ಪ್ರಕಾರ ದೇಣಿಗೆ ಕೊಡಲ್ಪಟ್ಟಿದೆ.<br>೧ ಮುಷ್ಟಿಫಂಡಿನಿಂದ ೨೨ ರೂ.<br>೨ ಕು. ಸೌ. ಪುಷ್ಪಾವತಿ ಸಂಗೋರಾಮ ೩೦ ರೂ.<br>೩ ಕು. ಸೌ. ಕಮಲಾಬಾಯಿ ಲೋಕೂರ ೧೫ ರೂ.<br>೪ ಶ್ರೀ ಎಸ್. ವಾಯ್. ನಾಂದ್ರೆ ೫ ರೂ.<br>೫ ಕು. ಸೌ. ಪದ್ಮಾವತಿ ಪಾಟೀಲ ೫ ರೂ.<br>೬ ವಿದ್ಯಾರ್ಥಿನಿಯರು ೭ ರೂ. ೨೫ ನ. ಪೈ.<br>೭ ಮಹಿಳಾ ಮಂಡಳದವರು ೨ ರೂ. ೫೦ ನ. ಪೈ.<br>೮ ಶ್ರೀ ಸಿ. ಎ. ಜಮಖಂಡಿಮಠ ೩೦ ರೂ.<br>೯ ಕು. ಸೌ. ಸೋನೂಬಾಯಿ ಪಾಟೀಲ ೨ ರೂ.<br>೧೦ ಕು. ಸೌ. ಯಮುನಾಬಾಯಿ ಕುಲಕರ್ಣಿ ೧ ರೂ.<br>೧೧ ಊರವರು ೪ ರೂ.<br>೧೨ ವಿವಿಧ ವಿನೋದಾವಳಿಯಿಂದ ೩೦ ರೂ. |
| ೧೪ ಅಮ್ಮಿನಭಾವಿ .... | ೧೪-೭-೫೯ ರಂದು ಗ್ರುಪ್ ಸಮ್ಮೇಲನವಾಯಿತು. ಆ ಕಾಲಕ್ಕೆ ಮೆ|| ಎ. ಇ. ಮತ್ತು ಡಿ. ಎ. ಇ. ಇವರು ಉಪಸ್ಥಿತರಿದ್ದರು. |
| ೧೫ ಹಿರೇನಂದಿಹಳ್ಳಿ .... | ೧೪-೭-೫೯ ರಂದು ಮಾಸಿಕ ಸಮ್ಮೇಲನವಾಯಿತು, ಬೀಟ ಆಫೀಸರ ಶ್ರೀ ಮುರಗೋಡ ಇವರಿಂದ. ಇಲ್ಲಿ ೧೬ ಬಾಲಿಕೆಯರಿಗೆ ಮಧ್ಯಾನ್ಹ ಉಚಿತ ಊಟದ ಯೋಜನೆ ಪ್ರಾರಂಭವಾಗಿದೆ. |
| ಭುಮರಾಣಿ (ಇಂಡಿ) .... | ಇಲ್ಲಿ ೨೫-೭-೫೯ ರಂದು ಸಭೆ ಸೇರಿತ್ತು. ಆಗ ಭಾಗ್ಯೋದಯ ವಾಚನಾಲಯವನ್ನು ಪ್ರಾರಂಭಿಸಿದರು. ಜನರು ದೇಣಿಗೆ ಕೊಟ್ಟರು ಉಚಿತ ಊಟದ ಬಗ್ಗೆಯೂ ಚರ್ಚೆ ಮಾಡಲಾಯಿತು. ಆಶ್ವಾಸನ ದೊರೆತಿದೆ |
| ೧೭ ಬನಹಟ್ಟಿ .... | ಇಲ್ಲಿ ಶಿಕ್ಷಕ ಶಿಕ್ಷಕಿಯರ ಸಭೆ ಕೂಡಿತ್ತು. ಡಿ. ಎ. ಇ. ಇವರ ಉಪಸ್ಥಿತರಿದ್ದರು. ಸಮಾಜ ಶಿಕ್ಷಣ, ಒತ್ತಾಯ ಶಿಕ್ಷಣ, ಜೀವನ ಶಿಕ್ಷಣಗಳ ಬಗ್ಗೆ ಚರ್ಚೆಗಳು ನಡೆದವು. |

| ಊರು | | ವಿವರಗಳು |
|---|---|---|
| ೧೮ | ಮಾಲದಿನ್ನಿ .... | ೨೯-೭-೫೯ ರಂದು ಇಲ್ಲಿ ಕೈತೋಟದ ಉದ್ಘಾಟನೆಯಾಯಿತು ಶ್ರೀ ಎಸ್. ಪ್ಹಿ. ನಾಗಶೆಟ್ಟಿಯವರಿಂದ. |
| ೧೯ | ಕಡಡಿ .... | ಇಲ್ಲಿ ಶಾಲೆಗಾಗಿ ಶ್ರೀ ಯಲ್ಲಪ್ಪ ಬಸಪ್ಪ ಕಣಗಿನಹಾಳ ಇವರು ೧೦ ರೂ.ಯ ಕನ್ನಡಿ ಕೊಟ್ಟಿದ್ದಾರೆ. |
| ೨೦ | ಇಲಕಲ್ಲ .... | ೨೪-೭-೫೯ ರಂದು ಇಲ್ಲಿ ಪಾಲಕ-ಶಿಕ್ಷಕರ ಸಂಘವುಸ್ಥಾಪಿಸಲ್ಪಟ್ಟಿತು; ಶ್ರೀ ಕೆ. ಎಲ್. ಗಡಾದ ಇವರು ಚೇಅರಮನ್ನರಾಗಿದ್ದಾರೆ. |
| ೨೧ | ನೆಸ್ಪಿ .... | ಶಾಲೆಗಾಗಿ ಉದಾರ ದೇಣಿಗೆ—<br>೧ ಶ್ರೀ ಮಳಿಯಪ್ಪ ಹುಲ್ಲತ್ತಿ ೫ ರೂ.<br>೨ ,, ಈಶ್ವರಪ್ಪ ಹುಲ್ಲತ್ತಿ ೫ ರೂ.<br>೩ ,, ತಿರಕಪ್ಪ ಅರಳಿ ೫ ರೂ.<br>೪ ,, ಶಿದ್ದಪ್ಪ ಕಣಗೊಟಗಿ ೪ ರೂ.<br>೫ ,, ಶಿದ್ದಪ್ಪ ಚಳಗೇರಿ ೪ ರೂ.<br>೬ ,, ಚನಬಸಪ್ಪ ಕ್ಷೌರದ ೪ ರೂ.<br>೭ ,, ಈರಪ್ಪ ಕಣಗೊಟಗಿ ೪ ರೂ.<br>೮ ,, ಕರಬಸಪ್ಪ ದಾನಪ್ಪನವರ ೩ ರೂ. ೫೦ ನ. ಪೈ. |

ಈ ಬೆಲೆಬಾಳುವ ಶಾಲೆಗೆ ಉಪಯುಕ್ತವಾದ ವಸ್ತುಗಳನ್ನೂ ರಾಷ್ಟ್ರೀಯ ಮಹಾ ಪುರುಷರ ಫೋಟೋಗಳನ್ನೂ ಕೊಟ್ಟಿದ್ದಾರೆ,

೧ **ವಿಶೇಷ**:— ವನಮಹೋತ್ಸವ, ಪುಣ್ಯತಿಥಿಗಳ ಆಚರಣೆ. ಅರಿವೆ, ಪಾಟಿ, ಪುಸ್ತಕ ಹಂಚುವದು, ಗ್ರುಪ್ ಸಮ್ಮೇಲನ ಇವು ನಿತ್ಯದ ಕಾರ್ಯಗಳಾದುದರಿಂದಲೂ ಮತ್ತು ಸ್ಥಳಾಭಾವದ ಮೂಲಕ ಆ ಬಗ್ಗೆ ಬಂದ ಪತ್ರಗಳ ವಿವರಗಳನ್ನು ಇಲ್ಲಿ ಕೊಟ್ಟಿಲ್ಲ. ಶಿಕ್ಷಕರ ವರ್ಗಾವರ್ಗಿ, ಸಮಾರಂಭ ಈ ಬಗ್ಗೆ ಬಂದ ವಿವರಗಳನ್ನೂ ಕೊಟ್ಟಿಲ್ಲ.

೨ ಅತಿ ಮುಖ್ಯ ಸುದ್ದಿಗಳನ್ನು ಮಾತ್ರ ಪ್ರಸಿದ್ಧಿಗೆ ಕೊಡಬೇಕಾಗಿ ಸೂಚಿಸುತ್ತೇನೆ. (ಪ್ರ. ಸಂಪಾದಕ)

---

## — ಪ್ರಕಟನೆ —

ಪ್ರಾಥಮಿಕ ಶಾಲೆಯ ೨ನೆಯ ವರ್ಗಕ್ಕೆ ಉಚಿತವಾಗಬಲ್ಲ ಒಂದು ಉತ್ತಮ ಗದ್ಯ ಪಾಠವನ್ನು ತಯಾರಿಸುವ ಪ್ರಾಥಮಿಕ ಶಿಕ್ಷಕರಿಗೆ ಓರ್ವ ಶಿಕ್ಷಣಾಭಿಮಾನಿಗಳು ೫ ರೂ. ಬಹುಮಾನವನ್ನು ಕೊಡಲು ನಿರ್ಣಯಿಸಿದ್ದಾರೆ. ಅಪೇಕ್ಷೆಯುಳ್ಳ ಪ್ರಾಥಮಿಕ ಶಿಕ್ಷಕರು ಬರೆದು ಸಂಪಾದಕರು 'ಜೀವನ ಶಿಕ್ಷಣ' ಇವರ ಕಡೆಗೆ ಸಪ್ಟಂಬರ ೧೫ ರೊಳಗಾಗಿ ಕಳುಹಿಸಿಕೊಡಬೇಕು. ನಿರ್ಣಾಯಕರು ಉತ್ತಮವೆಂದು ನಿರ್ಣಯಿಸಿದವರಿಗೆ ಆ ಬಹುಮಾನವನ್ನು ಕೊಡಲಾಗುವದು. ಅವರ ನಿರ್ಣಯವೇ ಕೊನೆಯದು. ಆ 'ಪಾಠವನ್ನು' ಜೀವನ ಶಿಕ್ಷಣದಲ್ಲಿ ಪ್ರಕಟಿಸಲಾಗುವದು. ಪಾಠವು ಜೀವನ ಶಿಕ್ಷಣ ತತ್ವಗಳಿಗೆ, ಮಕ್ಕಳ ವಯೋಮಾನಕ್ಕೆ, ಮನಃ ಶಾಸ್ತ್ರದ ದೃಷ್ಟಿಯಿಂದ ಶೈಕ್ಷಣಿಕ ರೀತಿಯಿಂದ ಬರೆದು ದಾಗಿರಬೇಕು. ಹೆಚ್ಚಿನ ವಿವರಗಳೇನಾದರೂ ಬೇಕಾದಲ್ಲಿ ಸಂಪಾದಕರಿಗೆ ಬರೆದುಕೊಳ್ಳಬಹುದು.

"ಸ್ಪರ್ಧೆಗಾಗಿ" ಎಂದು ಬರೆದು ಕಳಸಬೇಕು.

**ಎಮ್. ಜಿ. ಕಟ್ಟಿ**
ಪ್ರಧಾನ ಸಂಪಾದಕರು.

# ಪ್ರಾ. ಶಾ. ಪ್ರ. ಪ. ಪರೀಕ್ಷೆಯ ಪರಿಣಾಮ ೧೯೫೯

| | ಊರು | ಕುಳಿತವರು | ಪಾಸಾದವರು | ಕಲಿಸಿದ ಗುರುಗಳು |
|---|---|---|---|---|
| ೧ | ಬಳ್ಳೂರ | ೧೯ | ೧೨ | ಶ್ರೀ ಸಿ. ಗೋ. ಪೂಜಾರ |
| ೨ | ಕೊಲ್ಹಾರ | ೧೫ | ೧೩ | ,, ವ್ಹಿ. ಎಂ ಸೇಲಾರ |
| ೩ | ಕುಡಪಲಿ | ೧೫ | ೧೪ | ,, ನಾ. ಭ. ಸುತ್ತಕೋಟ |
| ೪ | ಕೊಂಗವಾಡ | ೬ | ೫ | ,, ವೆಂ. ಕೃ. ಕದಮ |
| ೫ | ಕಲಗುರ್ಕಿ | ೩ | ೨ | ,, ಷ. ಚಂ. ಚೌಕಿಮಠ |
| ೬ | ಸೂಡಿ | ೭ | ೭ | ,, ಶಂ. ಶಿ. ಎಲಿಗಾರ |
| ೭ | ಬೈಲಹೊಂಗಲ ಕ. ಗಂ. ಶಾಲಾ ನಂ.೧ | ೨೫ | ೨೪ | ,, ಎಸ್. ವ್ಹಿ. ಮಲಿಗೆಪ್ಪಗೋಳ |
| | ,, ಜೀ. ಶಿ. ,, | ೨೩ | ೨೨ | ,, ಆರ್. ಎನ್. ಶಹಾಪೂರ |
| | | | | (ಈ ಶಾಲೆಯಿಂದ ಕೇಂದ್ರಕ್ಕೆ ೧,೨ ನಂ. ಬಂದಿದ್ದಾರೆ |
| ೮ | ಬೈಲಹೊಂಗಲ ಕ. ಹೆಂ. ಜೀ. ಶಿ. ಶಾಲಾ | ೨೦ | ೧೯ | ಶ್ರೀಮತಿ ದಾನವ್ವ ಮಲಿಗೆಪ್ಪಗೋಳ |

ಹಿಂದಿನ ಸಂಚಿಕೆಗಳಲ್ಲಿ ಕಲಿಸಿದ ಶಿಕ್ಷಕರ ಬಗ್ಗೆ ಕೆಲವರ ಹೆಸರುಗಳು ತಪ್ಪು ಬಿದ್ದಿವೆಯೆಂದ ಪತ್ರಗಳು ಬಂದುದರಿಂದ ಅವುಗಳ ಬಗ್ಗೆ ಬಂದ ಪತ್ರಗಳ ಪ್ರಕಾರ ಮಾಹಿತಿ ಕೊಡಲಾಗಿದೆ.

| | ಊರು | | ಪ್ರಾ. ಶಾ. ಪ್ರ. ಪ. ಪ. ವರ್ಷವನ್ನು ಕಲಿಸಿದ ಗುರುಗಳ ಹೆಸರು |
|---|---|---|---|
| ೧ | ಸವಣೂರ | .... | ಶ್ರೀ ರೇ. ರೇ. ಪುರಾಣಿಕಮಠ |
| ೨ | ಮಣಕವಾಡ ಶಾಲೆಯಿಂದ ಒಬ್ಬ ವಿದ್ಯಾರ್ಥಿಯು ಉತ್ತಮ ರೀತಿಯಲ್ಲಿ ಗುಣಗಳನ್ನು ಪಡೆದು ಪಾಸಾಗಿದ್ದಾನೆ. | .... | ಶ್ರೀ ಮ. ಫ. ಮಡಿವಾಳರ |
| ೩ | ಸೂಡಿ ಈ ಶಾಲೆಯಿಂದ ಒಬ್ಬ ವಿದ್ಯಾರ್ಥಿ ಮಿಡಲ್ ಸ್ಕೂಲ ಸ್ಕಾ. ಪ. ಯಲ್ಲಿ ನಂಬರ ಪಡೆದಿದ್ದಾನೆ. | .... | ಶ್ರೀ ಬ. ಮ. ಶಿರಗುಂಪಿ |

---

## — ವಿಮರ್ಶೆ —

ಶ್ರೀ ಬಿ. ಎಮ್. ಹೊಸಮನಿ, ಪ್ರಾ. ಶಾ. ಗುರೂಜಿಯವರು (ಶಾಲಾ ವಣ್ಣೂರ, ತಾಲೂಕ ಬೈಲಹೊಂಗಲ) "ಕುಟುಂಬ ಯೋಜನೆ" ಎಂಬ ಏಕಾಂಕವನ್ನು ಹಳ್ಳಿಗಳಲ್ಲಿ ಪ್ರಚಾರ ಮಾಡುವದಕ್ಕಾಗಿ ಬರೆದಿದ್ದಾರೆ. ಈ ಪುಸ್ತಕಕ್ಕೆ ಸಮಾಜ ಶಿಕ್ಷಣಾಧಿಕಾರಿಗಳಿಂದ, ಬಿ. ಡಿ. ಓ. ರಿಂದ, ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದ ಪ್ರೋತ್ಸಾಹನೆ ದೊರೆತಿದೆ. ಪ್ರಾ. ಶಾ. ಶಿಕ್ಷಕರು ಈ ನಾಟಕವನ್ನು ಗ್ರಂಥಕರ್ತರ ಒಪ್ಪಿಗೆ ಪಡೆ ಕೊಂಡು, ಶಿಕ್ಷಕರು ಸ್ವತಃ ಪಾತ್ರವಹಿಸಿ, ಹಳ್ಳಿಗ ಗಾಂಭೀರ್ಯದಿಂದ ಸುಪರಿಣಾಮವಾಗುವಂತೆ ನಯಿಸಿ, ವಿಷಯವು ಹಳ್ಳಿಯ ಜನರಲ್ಲಿ ಮ ವಾಗುವಂತೆ ಪ್ರಯತ್ನ ಮಾಡಿದಲ್ಲಿ ಗ್ರಂಥಕರ್ತರ ಇ ಕೈಗೂಡುತ್ತದೆ. ಮತ್ತು ಅವರು ನಿರ್ಮಿಸಿದ ಕೃ ಫಲ ದೊರೆತಂತಾಗುತ್ತದೆ.

(ಪ್ರ. ಸಂಪಾದಕರ

ನಾಟಕ ಕೇವಲ ಕೆಲವೇ ಮಕ್ಕಳ ಸ್ವತ್ತಾಗಿರಬಾರದು. ಮತ್ತು ಒಂದು ಸಾರಿ ಪಾತ್ರ ಧರಿಸಿದ ಮಗನಿಗೆ ಅದೇ ಪಾತ್ರವನ್ನು ಪುನಃ ಪುನಃ ಕೊಡಬಾರದು. ಯಾಕೆಂದರೆ ಹೀಗೆ ಅದೇ ಪಾತ್ರವನ್ನು ಕೊಡುವದರಿಂದ ಅವನ ನಡತೆಯ ಮೇಲೆ ಪರಿಣಾಮವಾಗುವ ಸಂಭವವಿರುತ್ತದೆ.

ಆದ್ದರಿಂದ ಶಿಕ್ಷಕರ ಮೇಲೆ ಬಹಳ ದೊಡ್ಡ ಹೊಣೆಗಾರಿಕೆ ಇರುತ್ತದೆ. ನಾಟಕಗಳನ್ನು ಆರಿಸುವಾಗ ಉತ್ತಮವಾದ ಕೃತಿಗಳನ್ನೂ ಆರಿಸಬೇಕಾಗುತ್ತದೆ. ಪಾತ್ರಗಳನ್ನು ಮಕ್ಕಳಿಗೆ ಹಂಚುವಾಗ ಯೋಗ್ಯವಾದ ಮಕ್ಕಳ ಆಯ್ಕೆ ಮಾಡಬೇಕಾಗುತ್ತದೆ. ನಾಟಕದ ಪ್ರದರ್ಶನಕ್ಕಾಗಿ ನಾಟಕದ ಅಭ್ಯಾಸ ಮಾಡಿಸಬೇಕಾಗುತ್ತದೆ. ಮತ್ತು ರಂಗ ಮಂಟಪದ ತಯಾರಿ, ಶೃಂಗಾರದ ಕೆಲಸ ಹೀಗೆ ಇವೆಲ್ಲ ಕಾರ್ಯಗಳಲ್ಲಿ ಶಿಕ್ಷಕರ ಪಾತ್ರವು ಬಹಳ ಮುಖ್ಯವಾದದ್ದು. ಮತ್ತು ಬಹಳ ಮಹತ್ವದ್ದು ಇರುತ್ತದೆ. ಎಂದರೆ ಶಿಕ್ಷಕನೂ ಕೂಡ ಒಬ್ಬ ಉತ್ತಮ ಕಲಾವಂತನಿರಬೇಕು. 'He must be a good actor.' ಏನೂ ಇಲ್ಲವೆಂದರೆ ಇಂಥ ಕಾರ್ಯಕ್ರಮಗಳಲ್ಲಿ ಅಭಿರುಚಿಯುಳ್ಳವನಿರಬೇಕಾಗುತ್ತದೆ. ಆದ್ದರಿಂದ ಯಾವತ್ತೂ ಕೆಲಸಗಳನ್ನು ಕೇವಲ ಮಕ್ಕಳಿಗೆ ಒಪ್ಪಿಸಿ ಕೂಡ್ರಬಾರದು. ಅವರಿಗೆ ಯೋಗ್ಯ ಮಾರ್ಗದರ್ಶನ ಮಾಡಬೇಕು.

ಮಕ್ಕಳು ಅನುಕರಣಪ್ರಿಯರಿರುತ್ತಾರೆ. ಅವರು ಮಾಡಿ ಮತ್ತು ಕೇಳಿ ಕಲಿಯುವಂತೆ ಪ್ರತ್ಯಕ್ಷ ನೋಡಿಯೂ ಕಲಿಯುತ್ತಾರೆ. ಆದ್ದರಿಂದ ಕೆಲವು ಸಾರೆ ಶಿಕ್ಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ಉತ್ತಮ ಅಭಿನಯವನ್ನು ಮಾಡಿ ತೋರಿಸುವದರಿಂದ ಅದು ಮಕ್ಕಳ ಮನಸ್ಸಿನ ಮೇಲೆ ಪರಿಣಾಮವಾಗಿ ತಾವೂ ಕೂಡ ಅದರಂತೆ ಅಭಿನಯ ಮಾಡಲು ಕಲಿಯುವರು. ಆದ್ದರಿಂದ ಶಿಕ್ಷಕರು ಪಾತ್ರವಹಿಸುವಾಗ ಬಹಳ ಜಾಗರೂಕರಾಗಿರಬೇಕು.

ಇಂಗ್ಲೆಂಡ, ಅಮೇರಿಕಾ, ರಶಿಯಾ ಮೊದಲಾದ ಮಹಾರಾಷ್ಟ್ರಗಳಲ್ಲಿಯೂ ಕೂಡ ಈ ದಿಶೆಯಲ್ಲಿ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಅದರಂತೆ ನಮ್ಮ ಭಾರತ ಸರಕಾರವೂ ಕೂಡ ಈಚೆಗೆ ಈ ರಂಗದಲ್ಲಿ ಪ್ರೋತ್ಸಾಹ ಕೊಡಹತ್ತಿದೆ. ಇತ್ತೀಚೆಗಾಗಿ ಈ ಕಾರ್ಯಕ್ರಮಗಳಿಗೆ ರಾಷ್ಟ್ರೀಯ ಮಹತ್ವ ಬರಹತ್ತಿದೆ. ರಶಿಯಾ ದೇಶದವರು ಬಾಲಾ ಪಠ್ಯ ವಸ್ತುವಿನಲ್ಲಿ ನಾಟ್ಯ ಕಲೆಗೆ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾರೆ. ಹೀಗೆ ಎಲ್ಲಿಡೆಯಲ್ಲಿಯೂ ಈ ಕಲೆಯ ವಿಕಾಸಕ್ಕೆ ಅಪ್ಪದ ಉಂಟಾಗ ಹತ್ತಿದೆ. ಈಚೆಗೆ ನಮ್ಮ ನವ ಮೈಸೂರ ರಾಜ್ಯದಲ್ಲಿ ನಾಟ್ಯಕಲೆಯಲ್ಲಿ ಶಿಕ್ಷಕರಿಗೆ ತರಬೇತಿಯನ್ನೂ ಕೂಡ ಕೊಡಲು ಪ್ರಾರಂಭಿಸಿದ್ದಾರೆ.

ಆದ್ದರಿಂದ ನಮ್ಮ ಶಾಲೆಯ ಅಂದಾಜು ಪತ್ರಿಕೆಯಲ್ಲಿ ಈ ಕಾರ್ಯಕ್ರಮಗಳಿಗೆ ವಾರದಲ್ಲಿ ಒಂದೆರಡು ಅವಧಿ ನೀಡಲಾಗಿರಬೇಕು. ತಿಂಗಳದ ಅಂದಾಜು ಪತ್ರಿಕೆಯಲ್ಲಿ ಕಾರ್ಯಕ್ರಮಗಳನ್ನೂ ನಿರ್ದಿಷ್ಟ ಪಡಿಸಬೇಕು. ಹೀಗೆ ಇದರಲ್ಲಿಯೂ ಕೂಡ ಒಂದು ವಾರ್ಷಿಕ ಅಂದಾಜು ಪತ್ರಿಕೆ ಅವಶ್ಯವಾಗಿ ತಯಾರಿಸಿರಬೇಕು.

ಕೆಲವು ಸಾರೆ ಕಾರ್ಯಕ್ರಮಗಳನ್ನು ದೊಡ್ಡ ಪ್ರಮಾಣದಲ್ಲಿ ಏರ್ಪಡಿಸಿ ಗ್ರಾಮದ ಜನರಿಗೆ, ಪಾಲಕರಿಗೆ ಆಮಂತ್ರಣ ಕೊಡಬೇಕು. ಇಂಥ ಪ್ರಸಂಗದಲ್ಲಿ ಎಲ್ಲ ಕಾರ್ಯಕ್ರಮಗಳನ್ನೂ ಇಡುವದು ಉಚಿತವಲ್ಲ. ಮೊದಲು ಶಿಕ್ಷಕರು ಕೂಡಿ ಉತ್ತಮ ಕಾರ್ಯಕ್ರಮಗಳ ಆಯ್ಕೆಯನ್ನು ಮಾಡಬೇಕು. ಆ ಕಾರ್ಯಕ್ರಮಗಳಲ್ಲಿ ವೈವಿಧ್ಯತೆ ಇರಬೇಕು. ಅವು ಶಿಕ್ಷಣಿಕ ವಾಗಿರಬೇಕು. ಮಕ್ಕಳಿಗೆ ರುಚಿಸುವಂಥವುಗಳು ಇರಬೇಕು. ಮನರಂಜನೆ ಆಗುವಂಥವುಗಳಿರಬೇಕು. ಯಾವತ್ತೂ ಕಾರ್ಯಕ್ರಮಗಳನ್ನು ಇಡುವದು ಉಚಿತವಲ್ಲ. ಹೆಚ್ಚೆಂದರೆ ಮೂರು ತಾಸಿನ ಕಾರ್ಯಕ್ರಮ ಇಟ್ಟುಕೊಳ್ಳಬೇಕು. ಇದರಿಂದ ಬಾಲಕರಿಗೆ ಮತ್ತು ಪ್ರೇಕ್ಷಕರಿಗೆ ಉತ್ಸಾಹ ಬರುವಂತಿರಬೇಕು.

ಈ ಪ್ರಕಾರ ಶಿಕ್ಷಕರು ಈ ದಿಶೆಯಲ್ಲಿ ಉದ್ದೇಶ ಪೂರ್ವಕವಾಗಿ ಕೆಲಸವನ್ನು ಮಾಡಿದರೆ ಈ ಕಲೆಗೆ ಪ್ರೋತ್ಸಾಹ ಕೊಟ್ಟಂತೆ ಆಗುತ್ತದೆ. ಮತ್ತು ಮಕ್ಕಳಲ್ಲಿ ಕಲೆಯ ಬಗ್ಗೆ ಅಭಿರುಚಿ ಹುಟ್ಟಿಸಿದಂತೆ ಆಗುತ್ತದೆ.

Regd. No. B. 537

ಭಾಗ ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧

( ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು )

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡಿ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧–೩ನೆಯ ಕುಸುಮ ಪಡೆಯಿರಿ
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ಬಂಂ ಪುಟಗಳಲ್ಲಿ.
- ಅಗಷ್ಟ ದಿಂದ ಅಗಷ್ಟಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೩ ಜಿಲೆಯಲ್ಲಿ [ಅಂಚೆಪಿ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪಹಣ ತಮ್ಮ ಶಿಕ್ಷಕ ಮಿ ಏಳ್ಗೆಗೆ ಮೀಸಲು. ಗಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

**ಕಲ್ಯಾಣ ಕನ್ನಡ ಗುಡಿಯ ಕಾಣಿಕೆ**

**ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ**

## "ಶಿಕ್ಷಣ–ಶಿಕ್ಷಕ–ದರ್ಶನ"

**ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು–ಮ ತಡೆಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಸಾಮ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂ ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಂಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ ಪಾವಟಿಯವರು ಮುನ್ನುಡಿ ಬರೆದಂ ಅಮೋಘ ಗ್ರಂಥ.**

**ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ** ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ–ಶಿಕ್ಷಕಿಂ ಬಣ್ಣ ಬಣ್ಣಗಳಲ್ಲಿ ಬಗ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ಬಒಗ ಪುಟಗಳ ಅಮರ ಸಾಹಿತ್ಯ ಗ್ರ **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಅಗಷ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ಜಳಕಾಯಿ, ಎ. ಓ. ಸಾಹೇಬರ ಅಧ್ಯ ಯಲ್ಲಿ ಪ್ರೊ. ಬಿ. ಟಿ. ಸಾಸನೂರ ಇವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿತು.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

**ಸಾದಾ ಪ್ರತಿ ೩ ರೂ. ]** ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. **[ ಸುಂದರ ಪ್ರತಿ ೪ ರ**

**ವಿಳಾಸ :– ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬೆ, ಜಿಲ್ಲಾ:— ವಿಜಾಪುರ.**

Printed by Shri S. F. Kattimani, at Manohar Power Printing Press, Hubli. Edited Published by Sjts. M. G. Katti, B. M. Shintri, S. R. Tatti & Smti. P. A. Bhaskar, at Kannada Jeevan Shikshan Office, Govt. Training College for Men, Dharwar.

# ಜೀವನ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಎಮ್. ಜಿ ಕಟ್ಟಿ

# ಜೀವನ ಶಿಕ್ಷಣ


— ಸಂಪಾದಕ ಮಂಡಲ —

ಸಂಚಾಲಕರು: ಶ್ರೀ ಎಮ್. ಜಿ. ಹಂದ್ರಾಳ, ಬಿ.ಎ.(ಆನರ್ಸ),ಎಮ್.ಈಡಿ.,ಡಿ.ಬಿ.ಈಡಿ ,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು: ಶ್ರೀ ಎಮ್. ಜಿ. ಕಟ್ಟಿ, ಬಿ.ಎ.(ಆನರ್ಸ), ಬಿ.ಟಿ.,ಡಿ.ಬಿ.ಈ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟಿಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ
(ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್,
ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.



ಸಂಪುಟ ೯೫ ಜೂನ ೧೯೫೯ ಸಂಚಿಕೆ ೧


## — ಪರಿವಿಡಿ —


| | | | |
|---|---|---|---|
| ೧ | ಸಂಪಾದಕೀಯ .... | | |
| ೨ | ಜೀವನ ಶಿಕ್ಷಣ ಶಾಲೆಗಳಲ್ಲಿ ಬಾಲಕರ ಸಹಕಾರಿ ಭಾಂಡಾರಗಳ ಸ್ಥಾನ .... | ಶ್ರೀ ಎನ್. ಬಿ. ಮುದಕವಿ | ೩ |
| ೩ | ಗಾಂಧಿಜಿಯವರು ಇಟ್ಟುಕೊಂಡ ವಿದ್ಯಾಭ್ಯಾಸದ ಆದರ್ಶ .... | ಶ್ರೀ ತಟ್ಟಿ ರಾಮರಾಯರು | ೫ |
| ೪ | ಸಹಜತೆಯೂ ಸಂಸ್ಕಾರವೂ .... | ಶ್ರೀ ಶಿಂತ್ರಿ ಬಸಪ್ಪನವರು | ೭ |
| ೫ | ಶಾಲಾ ಜೀವನದಲ್ಲಿ ಆಟಗಳ ಸಂಘಟನೆ .... | ಶ್ರೀ ಆರ್. ಎಸ್. ಸೂರ್ಯವಂಶಿ | ೧೦ |
| ೬ | ಜೀವನ ಶಿಕ್ಷಣ ಶಾಲೆಗಳಲ್ಲಿ ವಾಚನಾಲಯ ಹಾಗೂ ಚರ್ಚಾಕೂಟಗಳ ಸ್ಥಾನ .... | ಶ್ರೀ ಎನ್. ಬಿ. ಮುದಕವಿ | ೧೩ |
| ೭ | ಕಲಿಸುವ ಪಾಠವು ಪರಿಣಾಮಕಾರಿಯಾಗಬೇಕಾದರೆ .... | ಶ್ರೀ ವಾವಟಿ ಚಿನ್ನಪ್ಪನವರು | ೧೬ |
| ೮ | ಸಾಮಾನ್ಯ ಹಾಗೂ ದಶಾಂಶ ಅಪೂರ್ಣಾಂಕಗಳ ವಿಶೇಷ ಪ್ರಯೋಜನ .... | ಶ್ರೀ ತಟ್ಟಿ ರಾಮರಾಯರು | ೧೮ |
| ೯ | ಪ್ರಾಥಮಿಕ ಶಾಲೆಗಳಲ್ಲಿ ಪಂದ್ಯಾಟದ ಯೋಜನೆ .... | ಶ್ರೀ ಶಿ. ಅ ದರೂರ | ೨೨ |
| ೧೦ | ೧೯೫೯ ಏಪ್ರಿಲ್ ತಿಂಗಳಲ್ಲಿ ಜರುಗಿದ ಪ್ರಾ. ಶಾ. ಪ್ರ. ಪ. ಹಾಗೂ ಸ್ಕಾಲರಶಿಪ್ ಪರೀಕ್ಷೆಗಳ ಪರಿಣಾಮದ ಬಗೆಗೆ ಬಂದ ಪತ್ರಗಳ ವಿವರಗಳು .... | | ೨೪ |
| ೧೧ | ಜೀವನ ಶಿಕ್ಷಣ ಪ್ರಪಂಚದಲ್ಲಿ .... | | ಕವರು ೩ |

# ಸಂಪಾದಕೀಯ

## (೧) ವರ್ಷಾರಂಭ

ಒಂದೊಂದು ಉದ್ಯೋಗಕ್ಕೆ ಒಂದೊಂದು ದಿನ ವರ್ಷಾರಂಭದ ದಿನವಾಗಿದೆ.

ಸಾಮಾನ್ಯವಾಗಿ ಶಿಕ್ಷಣಕ್ಷೇತ್ರದಲ್ಲಿ ಜೂನ ತಿಂಗಳ ದಲ್ಲಿಯ ಕೆಲವೊಂದು ದಿನಾಂಕಗಳು ವರ್ಷಾರಂಭದ ದಿನ ಗಳಾಗಿವೆ. ಈ ಸಮಯದಲ್ಲಿ ಬಾಲಕರ ಉತ್ಸಾಹಕ್ಕೆ ಸೀಮೆಯೇ ಇಲ್ಲ. ಕೆಲವರು ಹೊಸದಾಗಿ ಸರಸ್ವತಿಯ ಮಂದಿರ ಪ್ರವೇಶಿಸುವರು. ಕೆಲವರು ಇಯತ್ತೆ ಬದಲಿಸಿ ಮುಂದಿನ ಇಯತ್ತೆಗೆ ಅಡಿ ಇಡುವರು. ಕೆಲವರು ಕೆಳಗಿನ ಪ್ರಾಥಮಿಕದಿಂದ ಮೇಲಿನ ಪ್ರಾಥಮಿಕಕ್ಕೆ ಹೋಗುವರು. ಕೆಲವರು ಮಾಧ್ಯಮಿಕ ಶಾಲೆಯನ್ನು ಪ್ರವೇಶಿಸುವರು. ಕೆಲವರು ಉಚ್ಚ ಶಿಕ್ಷಣ ಮತ್ತು ಬೇರೆ ಬೇರೆ ಹೆಚ್ಚಿನ ಶಿಕ್ಷಣಕ್ಕಾಗಿ ಹೋಗುವವರು. ಹೀಗಾಗಿ ಜೂನ ತಿಂಗಳು ಬೌದ್ಧಿಕ ಕ್ಷೇತ್ರದಲ್ಲಿ ಬದಲಾವಣೆಯ ಕಾಲವಾಗಿದೆ. ನಿಜವಾಗಿಯೂ ಸರಸ್ವತಿಯ ಪ್ರಥಮ ಪೂಜೆ ಜೂನ ತಿಂಗಳಲ್ಲಿ ಆಗಬೇಕು.

ಈ ತರಹದ ಬದಲಾವಣೆಯ ಜೊತೆಗೆ ಪುಸ್ತಕ ಗಳನ್ನು ಕೊಳ್ಳುವದರಲ್ಲಿ ಬಾಲಕರು ಉತ್ಸಾಹಿಗಳಾಗಿರು ತ್ತಾರೆ. ನಿಸರ್ಗದಲ್ಲಿ ಮಳೆಯ ಮೂಲಕ ಸ್ವಲ್ಪ ಥಂಡಿ ಮತ್ತು ರೊಜ್ಜು ಕಾಡುತ್ತಿದ್ದರೂ ಬಾಲಕರು ಹೊಸ ಪಾಟಿ, ಪುಸ್ತಕ ಮತ್ತು ಇತರ ಸಾಮಾನುಗಳನ್ನು ಒಳ್ಳೇ ಹುಮ್ಮಸದಿಂದ ಸಂಗ್ರಹಿಸುತ್ತಾರೆ. ಪಾಲಕರು ತಮ್ಮ ಬಾಲಕರ ಈ ಕಾರ್ಯದಲ್ಲಿ ಬಹು ಹೆಮ್ಮೆಯಿಂದ ಭಾಗ ವಹಿಸುತ್ತಾರೆ.

## (೨) ಶಾಲೆಗಳಲ್ಲಿ ಅಂದಾಜು ಪತ್ರಿಕೆ

ಹಾಗಾದರೆ ಈ ಪ್ರಸಂಗದಲ್ಲಿ ಶಿಕ್ಷಕರು ಹೇಗೆ ಕಾರ್ಯನಿರತರಾಗಿರುತ್ತಾರೆ ಎಂಬುದನ್ನು ನೋಡುವಾ.

ಹೊಸದಾಗಿ ಶಾಲೆಗೆ ಬಂದ ಬಾಲಕರ ಹೆಸರು ಪಚ್ಚಿಕೊಳ್ಳುವದು. ಶಾಲೆಯಲ್ಲಿದ್ದ ಬಾಲಕರನ್ನು ಮೇಲಿನ ಇಯತ್ತೆಗೆ ಕಳಿಸುವದು—ಇದು ಪ್ರಥಮ ನೋಟಕ್ಕೆ ಕಂಡು ಬರುತ್ತದೆ.

ಸ್ವಲ್ಪ ಒಳಗೆ ಇಣಿಕಿದರೆ, ಶಿಕ್ಷಕರು ಇಯತ್ತೆ ಗಳನ್ನು ಹಂಚಿಕೊಳ್ಳುವ ಕಾರ್ಯ ನಡೆದದ್ದು ಕಂಡು ಬರುತ್ತದೆ. ಮುಖ್ಯಾಧ್ಯಾಪಕರು ಈ ಕಾರ್ಯವನ್ನು ಬಹು ಜಾಗರೂಕತೆಯಿಂದ ಮಾಡಬೇಕು.

ನಂತರ ಶಿಕ್ಷಕರು ವಾರ್ಷಿಕ ಅಂದಾಜು ಪತ್ರಿಕೆ, ಮಾಸಿಕ ಅಂದಾಜು ಪತ್ರಿಕೆ, ವಾರದ ಅಂದಾಜು ಪತ್ರಿಕೆ ಮತ್ತು ದೈನಂದಿಕ ಅಂದಾಜು ಪತ್ರಿಕೆಗಳನ್ನು ಬಹು ಆಸ್ಥೆಯಿಂದ ಸೂಕ್ಷ್ಮವಾಗಿ ವಿಚಾರಿಸಿ ತಯಾರು ಮಾಡಿ ಕೊಳ್ಳಬೇಕು. ಅಂದಾಜು ಪತ್ರಿಕೆಯ ನಿರ್ಮಾಣಕ್ಕೆ ಬೇಕಾಗುವ ಎಲ್ಲ ವಸ್ತು ಮತ್ತು ವಿಷಯಗಳನ್ನು ಸಂಗ್ರಹಿಸಬೇಕು. ಅಭ್ಯಾಸ ಪತ್ರಿಕೆ, ಗತಿಸಿದ ವರ್ಷ ಬಾಲಕರು ಕಲಿತಪ್ಪೇನು, ಅದಕ್ಕೆ ಸಂಬಂಧ ಪಟ್ಟ ರಿಕಾರ್ಡುಗಳು, ಪಠ್ಯ ಪುಸ್ತಕಗಳು, ಸೂಟಿ ಪತ್ರಿಕೆ, ತಿಂಗಳದಲ್ಲಿಯ ನೈಸರ್ಗಿಕ ಮತ್ತು ಸಾಮಾಜಿಕ ಘಟನೆ ಗಳು, ಸ್ಥಾನಿಕ ಪರಿಸ್ಥಿತಿ, ಮೂಲೋದ್ಯೋಗದಲ್ಲಿಯ ಚಟುವಟಿಕೆಗಳ ವಿವರಗಳು, ತಮ್ಮ ಶಾಲೆಯಲ್ಲಿ ಬೊಡ್ಡ ಪ್ರವಾಸ, ಚರ್ಚಾಕೂಟ, ಪರೀಕ್ಷೆಗಳು ಇವುಗಳನ್ನು ಹೇಗೆ ಏರ್ಪಡಿಸಬೇಕು. —ಈ ಎಲ್ಲ ಸಂಗತಿಗಳನ್ನು ಗಮನಕ್ಕೆ ತಂದುಕೊಂಡು ಅಂದಾಜು ಪತ್ರಿಕೆಯನ್ನು ತಯಾರಿಸಬೇಕು. ಇಡೀ ಶಾಲೆಯು ಸಾಮೂಹಿಕವಾಗಿ ಆಚರಿಸಬೇಕಾದ ಸಂಗತಿಗಳನ್ನು ಸಾಮೂಹಿಕವಾಗಿ ನಿರ್ಧಾರ ಮಾಡಿಕೊಂಡ ನಂತರ, ಇಯತ್ತೆವಾರ ಯೋಜನೆಯನ್ನು ಮಾಡಿಕೊಳ್ಳಬೇಕು.

ಈ ಪ್ರಕಾರ ತಯಾರು ಮಾಡಿಕೊಂಡ ಅಂದಾಜು ಪತ್ರಿಕೆಯನ್ನು ಕಾರ್ಯದಲ್ಲಿ ಬಹು ನಿಷ್ಠೆಯಿಂದ ತರಬೇಕು. ಆ ಕಾಲಕ್ಕೆ ಬರುವ ಅಡೆ-ತಡೆಗಳನ್ನು ಲಕ್ಷದಲ್ಲಿಡಬೇಕು. ಒಮ್ಮೊಮ್ಮೆ ಅಂದಾಜು ಪತ್ರಿಕೆ ಬಹು ಸುಲಭವಾಗಿ ವೇಳೆಯ ಅಪವ್ಯಯವಾಗಬಹುದು. ಒಮ್ಮೊಮ್ಮೆ ಅದು ಭಾರ ಉಳ್ಳದ್ದಾಗಿ ಕಾರ್ಯಾಂಗಗಳು ಅವಸರದಿಂದ ಸಾಗಬಹುದು. ಒಮ್ಮೊಮ್ಮೆ ವೇಳೆಯನ್ನು ಹೇಗೋ ಕಳೆದು, ಕೊನೆಗೆ ವಿಷಯಗಳನ್ನು ಅವಸರ ದಿಂದ ಸಾಗಿಸಬಹುದು. ಒಮ್ಮೊಮ್ಮೆ ನಮ್ಮ ಯೋಜನೆಯ ಕಲ್ಪನೆಯನ್ನು ಮೀರಿ ಕಾರ್ಯವಿಶೇಷಗಳೂ ಬರಬಹುದು. ಆದ್ದರಿಂದ ಬಹು ಜಾಗ್ರತೆಯಿಂದ ಮತ್ತು ನಿಷ್ಠೆಯಿಂದ ಕೆಲಸಗಳನ್ನು ಮಾಡಿದಾಗ ಶಿಕ್ಷಕನಿಗೆ ಅಂದಾಜು ಪತ್ರಿಕೆ ಯನ್ನು ತಯಾರಿಸುವ ಮತ್ತು ಅದನ್ನು ಕಾರ್ಯದಲ್ಲಿ ಇಳಿಸುವ ಹಿಡಿತ ಸಿಗುವದು. ಆದ್ದರಿಂದ ಶಿಕ್ಷಕರು ಆಲಸ್ಯಕ್ಕೆ ಆಸ್ಪದ ಕೊಡಬಾರದು. ದೇಹಾಲಸ್ಯವಾಗಲಿ, ಅಥವಾ ಮಾನಸಿಕ ಆಲಸ್ಯವಾಗಲಿ ಶಿಕ್ಷಕನನ್ನು ಎಂದೂ

# ಜೀವನ ಶಿಕ್ಷಣ


— ಸಂಪಾದಕ ಮಂಡಲ —

ಸಂಚಾಲಕರು: **ಶ್ರೀ ಎಮ್. ಜಿ. ಹಂದ್ರಾಳ,** ಬಿ.ಎ.(ಆನರ್ಸ),ಎಮ್.ಈಡಿ.,ಡಿ.ಬಿ.ಈಡಿ,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು: **ಶ್ರೀ ಎಮ್. ಜಿ. ಕಟ್ಟಿ,** ಬಿ.ಎ.(ಆನರ್ಸ), ಬಿ.ಟಿ.,ಡಿ.ಬಿ.ಈ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

**ಶ್ರೀಮತಿ ಪಿ. ಎ. ಭಾಸ್ಕರ,** ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

**ಶ್ರೀ ಬಿ. ಎಂ. ಶಿಂತ್ರಿ,** ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

**ಶ್ರೀ ಎಸ್. ಆರ್. ತಟ್ಟಿ,** ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.



**ಸಂಪುಟ ೯೫** **ಜೂನ ೧೯೫೯** **ಸಂಚಿಕೆ ೧**


## — ಪರಿವಿಡಿ —


| | | | |
|---|---|---|---|
| ೧ | ಸಂಪಾದಕೀಯ | .... | |
| ೨ | ಜೀವನ ಶಿಕ್ಷಣ ಶಾಲೆಗಳಲ್ಲಿ ಬಾಲಕರ ಸಹಕಾರಿ ಭಾಂಡಾರಗಳ ಸ್ಥಾನ | .... ಶ್ರೀ ಎಸ್. ಬಿ. ಮುದಕವಿ | ೩ |
| ೩ | ಗಾಂಧಿಜಿಯವರು ಇಟ್ಟುಕೊಂಡ ವಿದ್ಯಾಭ್ಯಾಸದ ಆದರ್ಶ | .... ಶ್ರೀ ತಟ್ಟಿ ಶಾಮರಾಯರು | ೫ |
| ೪ | ಸಹಜತೆಯೂ ಸಂಸ್ಕಾರವೂ | .... ಶ್ರೀ ಶಿಂತ್ರಿ ಬಸಪ್ಪನವರು | ೭ |
| ೫ | ಶಾಲಾ ಜೀವನದಲ್ಲಿ ಆಟಗಳ ಸಂಘಟನೆ | .... ಶ್ರೀ ಆರ್. ಎಸ್. ಸೂರ್ಯವಂಶಿ | ೧೦ |
| ೬ | ಜೀವನ ಶಿಕ್ಷಣ ಶಾಲೆಗಳಲ್ಲಿ ವಾಚನಾಲಯ ಹಾಗೂ ಚರ್ಚಾಕೂಟಗಳ ಸ್ಥಾನ | .... ಶ್ರೀ ಎನ್. ಬಿ. ಮುದಕವಿ | ೧೩ |
| ೭ | ಕಲಿಸುವ ಪಾಠವು ಪರಿಣಾಮಕಾರಿಯಾಗಬೇಕಾದರೆ | .... ಶ್ರೀ ಪಾವಟೆ ಚೆನ್ನಪ್ಪನವರು | ೧೬ |
| ೮ | ಸಾಮಾನ್ಯ ಹಾಗೂ ದಶಾಂಶ ಅಪೂರ್ಣಾಂಕಗಳ ವಿಶೇಷ ಪ್ರಯೋಜನ | .... ಶ್ರೀ ತಟ್ಟಿ ಶಾಮರಾಯರು | ೧೮ |
| ೯ | ಪ್ರಾಥಮಿಕ ಶಾಲೆಗಳಲ್ಲಿ ಪಂದ್ಯಾಟದ ಯೋಜನೆ | .... ಶ್ರೀ ಶಿ. ಅ ದರೂರ | ೨೨ |
| ೧೦ | ೧೯೫೯ ಎಪ್ರಿಲ್ ತಿಂಗಳಲ್ಲಿ ಜರುಗಿದ ಪ್ರಾ. ಶಾ ಪ್ರ. ಪ. ಹಾಗೂ ಸ್ಕಾಲರಶಿಪ್ ಪರೀಕ್ಷೆಗಳ ಪರಿಣಾಮದ ಬಗೆಗೆ ಬಂದ ಪತ್ರಗಳ ವಿವರಗಳು | .... | ೨೪ |
| ೧೧ | ಜೀವನ ಶಿಕ್ಷಣ ಪ್ರಪಂಚದಲ್ಲಿ | .... | ಕವರು ೩ |

# ಸಂಪಾದಕೀಯ

## (೧) ವರ್ಷಾರಂಭ

ಒಂದೊಂದು ಉದ್ಯೋಗಕ್ಕೆ ಒಂದೊಂದು ದಿನ ವರ್ಷಾರಂಭದ ದಿನವಾಗಿದೆ.

ಸಾಮಾನ್ಯವಾಗಿ ಶಿಕ್ಷಣಕ್ಷೇತ್ರದಲ್ಲಿ ಜೂನ ತಿಂಗಳ ದಲ್ಲಿಯ ಕೆಲವೊಂದು ದಿನಾಂಕಗಳು ವರ್ಷಾರಂಭದ ದಿನ ಗಳಾಗಿವೆ. ಈ ಸಮಯದಲ್ಲಿ ಬಾಲಕರ ಉತ್ಸಾಹಕ್ಕೆ ಸೀಮೆಯೇ ಇಲ್ಲ. ಕೆಲವರು ಹೊಸದಾಗಿ ಸರಸ್ವತಿಯ ಮಂದಿರ ಪ್ರವೇಶಿಸುವರು. ಕೆಲವರು ಇಯತ್ತೆ ಬದಲಿಸಿ ಮುಂದಿನ ಇಯತ್ತೆಗೆ ಅಡಿ ಇಡುವರು. ಕೆಲವರು ಕೆಳಗಿನ ಪ್ರಾಥಮಿಕದಿಂದ ಮೇಲಿನ ಪ್ರಾಥಮಿಕಕ್ಕೆ ಹೋಗುವರು. ಕೆಲವರು ಮಾಧ್ಯಮಿಕ ಶಾಲೆಯನ್ನು ಪ್ರವೇಶಿಸುವರು. ಕೆಲವರು ಉಚ್ಚ ಶಿಕ್ಷಣ ಮತ್ತು ಬೇರೆ ಬೇರೆ ಹೆಚ್ಚಿನ ಶಿಕ್ಷಣಕ್ಕಾಗಿ ಹೋಗುವವರು. ಹೀಗಾಗಿ ಜೂನ ತಿಂಗಳು ಬೌದ್ಧಿಕ ಕ್ಷೇತ್ರದಲ್ಲಿ ಬದಲಾವಣೆಯ ಕಾಲವಾಗಿದೆ. ನಿಜವಾಗಿಯೂ ಸರಸ್ವತಿಯ ಪ್ರಥಮ ಪೂಜೆ ಜೂನ ತಿಂಗಳಲ್ಲಿ ಆಗಬೇಕು.

ಈ ತರಹದ ಬದಲಾವಣೆಯ ಜೊತೆಗೆ ಪುಸ್ತಕ ಗಳನ್ನು ಕೊಳ್ಳುವದರಲ್ಲಿ ಬಾಲಕರು ಉತ್ಸಾಹಿಗಳಾಗಿರು ತ್ತಾರೆ. ನಿಸರ್ಗದಲ್ಲಿ ಮಳೆಯ ಮೂಲಕ ಸ್ವಲ್ಪ ಥಂಡಿ ಮತ್ತು ರೊಜ್ಜು ಕಾಡುತ್ತಿದ್ದರೂ ಬಾಲಕರು ಹೊಸ ಪಾಟಿ, ಪುಸ್ತಕ ಮತ್ತು ಇತರ ಸಾಮಾನುಗಳನ್ನು ಒಳ್ಳೇ ಹುಮ್ಮಸದಿಂದ ಸಂಗ್ರಹಿಸುತ್ತಾರೆ. ಪಾಲಕರು ತಮ್ಮ ಬಾಲಕರ ಈ ಕಾರ್ಯದಲ್ಲಿ ಬಹು ಹೆಮ್ಮೆಯಿಂದ ಭಾಗ ವಹಿಸುತ್ತಾರೆ.

## (೨) ಶಾಲೆಗಳಲ್ಲಿ ಅಂದಾಜು ಪತ್ರಿಕೆ

ಹಾಗಾದರೆ ಈ ಪ್ರಸಂಗದಲ್ಲಿ ಶಿಕ್ಷಕರು ಹೇಗೆ ಕಾರ್ಯನಿರತರಾಗಿರುತ್ತಾರೆ ಎಂಬುದನ್ನು ನೋಡುವಾ.

ಹೊಸದಾಗಿ ಶಾಲೆಗೆ ಬಂದ ಬಾಲಕರ ಹೆಸರು ಹಚ್ಚಿಕೊಳ್ಳುವದು. ಶಾಲೆಯಲ್ಲಿದ್ದ ಬಾಲಕರನ್ನು ಮೇಲಿನ ಇಯತ್ತೆಗೆ ಕಳಿಸುವದು—ಇದು ಪ್ರಥಮ ನೋಟಕ್ಕೆ ಕಂಡು ಬರುತ್ತದೆ.

ಸ್ವಲ್ಪ ಒಳಗೆ ಇಣಿಕಿದರೆ, ಶಿಕ್ಷಕರು ಇಯತ್ತೆ ಗಳನ್ನು ಹಂಚಿಕೊಳ್ಳುವ ಕಾರ್ಯ ನಡೆದದ್ದು ಕಂಡು ಬರುತ್ತದೆ. ಮುಖ್ಯಾಧ್ಯಾಪಕರು ಈ ಕಾರ್ಯವನ್ನು ಬಹು ಜಾಗರೂಕತೆಯಿಂದ ಮಾಡಬೇಕು.

ನಂತರ ಶಿಕ್ಷಕರು ವಾರ್ಷಿಕ ಅಂದಾಜು ಪತ್ರಿಕೆ, ಮಾಸಿಕ ಅಂದಾಜು ಪತ್ರಿಕೆ, ವಾರದ ಅಂದಾಜು ಪತ್ರಿಕೆ ಮತ್ತು ದೈನಂದಿಕ ಅಂದಾಜು ಪತ್ರಿಕೆಗಳನ್ನು ಬಹು ಆಸ್ಥೆಯಿಂದ ಸೂಕ್ಷ್ಮವಾಗಿ ವಿಚಾರಿಸಿ ತಯಾರು ಮಾಡಿ ಕೊಳ್ಳಬೇಕು. ಅಂದಾಜು ಪತ್ರಿಕೆಯ ನಿರ್ಮಾಣಕ್ಕೆ ಬೇಕಾಗುವ ಎಲ್ಲ ವಸ್ತು ಮತ್ತು ವಿಷಯಗಳನ್ನು ಸಂಗ್ರಹಿಸಬೇಕು. ಅಭ್ಯಾಸ ಪತ್ರಿಕೆ, ಗತಿಸಿದ ವರ್ಷ ಬಾಲಕರು ಕಲಿತಿದ್ದೇನು, ಅದಕ್ಕೆ ಸಂಬಂಧ ಪಟ್ಟ ರಿಕಾರ್ಡುಗಳು, ಪಠ್ಯ ಪುಸ್ತಕಗಳು, ಸೂಟಿ ಪತ್ರಿಕೆ, ತಿಂಗಳದಲ್ಲಿಯ ನೈಸರ್ಗಿಕ ಮತ್ತು ಸಾಮಾಜಿಕ ಘಟನೆ ಗಳು, ಸ್ಥಾನಿಕ ಪರಿಸ್ಥಿತಿ, ಮೂಲೋದ್ಯೋಗದಲ್ಲಿಯ ಚಟುವಟಿಕೆಗಳ ವಿವರಗಳು, ತಮ್ಮ ಶಾಲೆಯಲ್ಲಿ ದೊಡ್ಡ ಪ್ರವಾಸ, ಚರ್ಚಾಕೂಟ, ಪರೀಕ್ಷೆಗಳು ಇವುಗಳನ್ನು ಹೇಗೆ ಏರ್ಪಡಿಸಬೇಕು. —ಈ ಎಲ್ಲ ಸಂಗತಿಗಳನ್ನು ಗಮನಕ್ಕೆ ತಂದುಕೊಂಡು ಅಂದಾಜು ಪತ್ರಿಕೆಯನ್ನು ತಯಾರಿಸಬೇಕು. ಇಡೀ ಶಾಲೆಯು ನಾಮೂಹಿಕವಾಗಿ ಆಚರಿಸಬೇಕಾದ ಸಂಗತಿಗಳನ್ನು ನಾಮೂಹಿಕವಾಗಿ ನಿರ್ಧಾರ ಮಾಡಿಕೊಂಡ ನಂತರ, ಇಯತ್ತೆವಾರ ಯೋಜನೆಯನ್ನು ಮಾಡಿಕೊಳ್ಳಬೇಕು.

ಈ ಪ್ರಕಾರ ತಯಾರು ಮಾಡಿಕೊಂಡ ಅಂದಾಜು ಪತ್ರಿಕೆಯನ್ನು ಕಾರ್ಯದಲ್ಲಿ ಬಹು ನಿಷ್ಠೆಯಿಂದ ತರಬೇಕು. ಆ ಕಾಲಕ್ಕೆ ಬರುವ ಅಡೆ-ತಡೆಗಳನ್ನು ಲಕ್ಷದಲ್ಲಿಡಬೇಕು. ಒಮ್ಮೊಮ್ಮೆ ಅಂದಾಜು ಪತ್ರಿಕೆ ಬಹು ಸುಲಭವಾಗಿ ವೇಳೆಯ ಅಪವ್ಯಯವಾಗಬಹುದು. ಒಮ್ಮೊಮ್ಮೆ ಅದು ಭಾರ ಉಳ್ಳದ್ದಾಗಿ ಕಾರ್ಯಾರ್ಜಿಗಳು ಅವಸರದಿಂದ ನಾಗಬಹುದು. ಒಮ್ಮೊಮ್ಮೆ ವೇಳೆಯನ್ನು ಹೇಗೋ ಕಳೆದು, ಕೊನೆಗೆ ವಿಷಯಗಳನ್ನು ಅವಸರ ದಿಂದ ಸಾಗಿಸಬಹುದು. ಒಮ್ಮೊಮ್ಮೆ ನಮ್ಮ ಯೋಜನೆಯ ಕಲ್ಪನೆಯನ್ನು ಮೀರಿ ಕಾರ್ಯವಿಶೇಷಗಳೂ ಬರಬಹುದು. ಆದ್ದರಿಂದ ಬಹು ಜಾಗ್ರತೆಯಿಂದ ಮತ್ತು ನಿಷ್ಠೆಯಿಂದ ಕೆಲಸಗಳನ್ನು ಮಾಡಿದಾಗ ಶಿಕ್ಷಕನಿಗೆ ಅಂದಾಜು ಪತ್ರಿಕೆ ಯನ್ನು ತಯಾರಿಸುವ ಮತ್ತು ಅದನ್ನು ಕಾರ್ಯದಲ್ಲಿ ಇಳಿಸುವ ಹಿಡಿತ ಸಿಗುವದು. ಆದ್ದರಿಂದ ಶಿಕ್ಷಕರು ಆಲಸ್ಯಕ್ಕೆ ಆಸ್ಪದ ಕೊಡಬಾರದು. ದೇಹಾಲಸ್ಯವಾಗಲಿ, ಅಥವಾ ಮಾನಸಿಕ ಆಲಸ್ಯವಾಗಲಿ ಶಿಕ್ಷಕನನ್ನು ಎಂದೂ

ಸ್ಪರ್ಶಿಸಬಾರದು. ಶಿಕ್ಷಕರು ಮಕ್ಕಳ ಕಲ್ಯಾಣದಲ್ಲಿ ಯಾವಾಗಲೂ ಎಚ್ಚತ್ತು ಕೆಲಸ ಮಾಡುವ ಚಟವನ್ನು ಸಾಧಿಸಬೇಕು.

ಶಾಲಾ ಪ್ರಾರಂಭದ ದಿನದಂದೇ ಬಾಲಕರಲ್ಲಿ ಪ್ರಗತಿಪರ ಪದ್ಧತಿಗಳು ನೆಲಿಸುವಂತೆ ಶಿಕ್ಷಕರು ಶಾಲೆಯಲ್ಲಿ ಕಾರ್ಯಗಳನ್ನು ಸಾಗಿಸಬೇಕು.

ಪರಿಶೀಲನೆಗಾಗಿ ಶಿಕ್ಷಕರು ವಾರಕ್ಕೊಮ್ಮೆ ಇಲ್ಲವೆ ತಿಂಗಳಿಗೊಮ್ಮೆ ಒಟ್ಟು ಗೂಡಿ ಚರ್ಚೆಮಾಡಿ, ಯೋಜನೆಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕು.

## (೩) ಪ್ರಾಥಮಿಕ ಶಾಲೆಗಳಲ್ಲಿ ಹಿಂದೀ ವಿಷಯದ ಅಭ್ಯಾಸ

ಇತ್ತೀಚೆಗೆ ಪ್ರಾಥಮಿಕ ಶಾಲೆಗಳಲ್ಲಿ ೫, ೬, ೭ನೆಯ ತರಗತ್ತಿಯ ಬಾಲಕರು ಹಿಂದೀ ವಿಷಯವನ್ನು ಕಲಿಯುತ್ತಾರೆ. ಈ ವಿಷಯವು ಹಾಯಸ್ಕೂಲ ಸ್ಕಾಲರಶಿಪ್ ಪರೀಕ್ಷೆಗೆ ಮತ್ತು ಪ್ರಾ. ಶಾ. ಪ್ರ. ಪ. ಪರೀಕ್ಷೆಗೆ ಕಡ್ಡಾಯದ ವಿಷಯವಾಗಿಲ್ಲ. ಇನ್ನು ಸ್ವಲ್ಪೀ ವರ್ಷಗಳಲ್ಲಿ ಹಿಂದೀ ಕಡ್ಡಾಯದ ವಿಷಯವಾಗುವದು. ಆದ್ದರಿಂದ ಶಿಕ್ಷಕರು ಶಾಲೆಗಳಲ್ಲಿ ೫, ೬, ೭ನೆಯ ತರಗತ್ತಿಗಳಲ್ಲಿ ಹಿಂದೀ ವಿಷಯದ ಅಭ್ಯಾಸವು ಮೊದಲಿನಿಂದಲೇ ಚನ್ನಾಗಿ ಸಾಗುವಂತೆ ಲಕ್ಷಕೊಡಬೇಕು. ಶಿಕ್ಷಕರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಹಿಂದೀ ಅಭ್ಯಾಸ ಕ್ರಮದಲ್ಲಿ ಮೇಲಿನ ಪರೀಕ್ಷೆಗಳನ್ನು ಪಾಸಾಗುತ್ತ ಸಾಗಬೇಕು; "ಪ್ರವೇಶಿಕಾ" ಮತ್ತು "ವಿಶಾರದಾ" ಮಟ್ಟಗಳನ್ನು ಸಂಪಾದಿಸಿದಂತೆ ಕಲಿಸುವ ಅರ್ಹತೆ ಹೆಚ್ಚುವದು. ಹಿಂದೀ ಭಾಷೆಯು ಕರ್ನಾಟಕದವರಿಗೆ ಮಾತೃಭಾಷೆಯಿಂದ ಭಿನ್ನವಾದದ್ದು. ಆದ್ದರಿಂದ ಹಿಂದೀ ವಿಷಯವನ್ನು ಕಲಿಸುವ ವಿಧಾನಗಳಲ್ಲಿಯೂ ವೈವಿಧ್ಯವನ್ನು ಮಾಡಿಕೊಂಡು ಶಿಕ್ಷಕರು ಈ ವಿಷಯವನ್ನು ಕಲಿಸಬೇಕು. ಬಾಲಕರು ವಾಕ್ಯ ರಚನೆಯ ಮೇಲೆ ಪ್ರಭುತ್ವವನ್ನು ಸಂಪಾದಿಸುವದು ಮುಖ್ಯವಾದುದು. ಆದ್ದರಿಂದ ಕಲಿಸುವಾಗ ವಾಕ್ಯ ಪದ್ಧತಿಯನ್ನು ಅನುಸರಿಸಬೇಕು. ಸಂಭಾಷಣೆಗಳಲ್ಲಿ ಮತ್ತು ಪ್ರಶ್ನೋತ್ತರಗಳಲ್ಲಿ ಭಾಗವಹಿಸುವದರಿಂದ ಭಾಷೆಯ ರಚನೆಯ ವೈಶಿಷ್ಟ್ಯಗಳು ತಿಳಿದುಬರುವವು. ಆದ್ದರಿಂದ ಪ್ರಶ್ನೆ ಪದ್ಧತಿ ಮತ್ತು ಸಂಭಾಷಣ ಪದ್ಧತಿಗಳನ್ನು ಅನುಸರಿಸಬೇಕು. ಈ ಪ್ರಕಾರ ಹಿಂದೀ ವಿಷಯವನ್ನು ಕಲಿಸುವ ಬಗ್ಗೆ ನಮ್ಮ ಶಿಕ್ಷಕರು ಹೆಚ್ಚು ಲಕ್ಷ ವಹಿಸಬೇಕೆಂದು ನಾವು ಸೂಚಿಸುತ್ತೇವೆ.

## (೪) ಇಂಗ್ಲೀಷ ವಿಷಯದ ಅಭ್ಯಾಸ

ಪ್ರಾಥಮಿಕ ಶಾಲೆಗಳ ಮೇಲಿನ ಇಯತ್ತೆಗಳಲ್ಲಿ ಇಂಗ್ಲೀಷ ವಿಷಯದ ಅಭ್ಯಾಸವು ೧೯೫೫-೫೬ನೆಯ ಸಾಲಿನಿಂದ ಪ್ರಾರಂಭಿಸಲ್ಪಟ್ಟಿದೆ. ಪ್ರಾಥಮಿಕ ಶಾಲೆಗಳಲ್ಲಿ ಎಸ್. ಎಸ್. ಸಿ. ಪಾಸಾದವರು ಇಂಗ್ಲೀಷ ವಿಷಯವನ್ನು ಕಲಿಸುತ್ತಿದ್ದಾರೆ. ಈ ವಿಷಯವು ಪರಭಾಷೆಯಾಗಿರುವದರಿಂದ, ಈ ಭಾಷೆಯ ರಚನೆಯ ವೈಶಿಷ್ಟ್ಯಗಳನ್ನು ಬಾಲಕರು ಸರಿಯಾಗಿ ತಿಳಿದುಕೊಂಡು, ಈ ಭಾಷೆಯಲ್ಲಿ ತಮ್ಮ ವಿಚಾರಗಳನ್ನು ಸರಿಯಾಗಿ ಸ್ಪಷ್ಟ ಪಡಿಸುವ ಸಾಮರ್ಥ್ಯವನ್ನು ಸಂಪಾದಿಸಬೇಕು. ಈ ಧ್ಯೇಯವು ಇಡೇರುವಂತೆ ಶಿಕ್ಷಕರು ಶಾಲೆಗಳಲ್ಲಿ ಇಂಗ್ಲೀಷ ವಿಷಯದ ಅಭ್ಯಾಸವನ್ನು ಸಾಗಿಸಬೇಕು. ಪ್ರಾರಂಭದಿಂದಲೆ ಉಚ್ಚಾರ, ಸ್ಪೆಲಿಂಗ ಮತ್ತು ಶಬ್ದಗಳಲ್ಲಿಯ ಅಕ್ಷರಗಳನ್ನು ಪ್ರಮಾಣ ಬದ್ಧವಾಗಿ ಸುಂದರವಾದ ರೀತಿಯಲ್ಲಿ ಬರೆಯುವದು —ಈ ಸಂಗತಿಗಳ ಕಡೆಗೆ ಶಿಕ್ಷಕರು ಲಕ್ಷ ಕೊಡಬೇಕು.

ನಂತರ ವಿಚಾರಗಳನ್ನು ವಾಕ್ಯಗಳಲ್ಲಿ ಸ್ಪಷ್ಟ ಪಡಿಸುವದು, ಶಬ್ದಗಳ ಸರಿಯಾದ ಅರ್ಥವನ್ನು ತಿಳಿದುಕೊಳ್ಳುವದು, ಮತ್ತು ವಾಕ್ಯರಚನೆಯ ವೈಶಿಷ್ಟ್ಯಗಳನ್ನು ತಿಳಿದುಕೊಳ್ಳುವದು, ಈ ಸಂಗತಿಗಳನ್ನು ಕ್ರಮಬದ್ಧ ರೀತಿಯಲ್ಲಿ ಬಾಲಕರಿಗೆ ತಿಳಿಸಿ ಕೊಡಬೇಕು; ಈ ವಿಷಯವನ್ನು ಕಲಿಸಲಿಕ್ಕೆ ಬೇಕಾಗುವ ಅವಶ್ಯಕ ಚಾರ್ಟುಗಳನ್ನು ತಯಾರಿಸಿಕೊಳ್ಳಬೇಕು. ಈವಿಷಯವನ್ನು ಕಲಿಸುವದು ಹೆಚ್ಚಿನ ಯೋಗ್ಯತೆಯನ್ನು ಸಂಪಾದಿಸುವ ಬಗ್ಗೆ ಶಿಕ್ಷಕರು ಪ್ರಯತ್ನಮಾಡಬೇಕು. ಸನ್ನೀಪದಲ್ಲಿಯ ಮಾಧ್ಯಮಿಕ ಶಾಲೆಗಳ ಶಿಕ್ಷಕರ ಸಹಾಯವನ್ನು ಪಡೆಯುತ್ತಿರಬೇಕು.

## (೫) ಜೀವನ ಶಿಕ್ಷಣ ಪತ್ರಿಕೆಯ ವರ್ಷಾರಂ

ಜೀವನ ಶಿಕ್ಷಣ ಪತ್ರಿಕೆಯು ಶಿಕ್ಷಣದ ಸುಧಾರಣೆಗಾಗಿ ಮನಮುಟ್ಟಿ ಪ್ರಯತ್ನಮಾಡುತ್ತಿದೆ. ಆದ್ದರಿಂದ ಶಿಕ್ಷಣಾಭಿಮಾನಿಗಳು ಮತ್ತು ಶಿಕ್ಷಣ ತಜ್ಞರು ಶಿಕ್ಷಣಕ್ಕೆ ಸಂಬಂಧ ಪಟ್ಟ ವಿಷಯಗಳ ಮೇಲೆ ಲೇಖನಗಳನ್ನು ಬರೆದು ಜೀವನ ಶಿಕ್ಷಣ ಪತ್ರಿಕೆಯಲ್ಲಿ ಮುದ್ರಿಸ

ದಕ್ಕಾಗಿ ಕಳುಹಿಸಿ ಕೊಡಬೇಕೆಂದು ಈ ವರ್ಷಾರಂಭದ (೧೯೫೯-೬೦) ಶುಭದಿನದಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ. ಎಲ್ಲ ಶಿಕ್ಷಕರು ಒಂದೆಡೆ ಕೂಡಿ ಚರ್ಚೆ ಮಾಡಲು ಸಂಧಿದೊರೆಯವದು ಅಪರೂಪ. ಸುಸಂಧಿಯು ದೊರೆತ ನಂತರ ಸಹ ಒಂದೆರಡು ದಿನಗಳಲ್ಲಿ ಎಲ್ಲ ವಿಷಯಗಳ ಮೇಲೆ ಚರ್ಚಿಸಿ ವಿಚಾರಗಳನ್ನು ತಿಳಿದುಕೊಳ್ಳಲಿಕ್ಕೆ ಪ್ರಯತ್ನಿಸಿದರೂ ಆ ಕಾರ್ಯ ಅಷ್ಟೊಂದು ಫಲಕಾರಿಯಾಗಲಿಕ್ಕಿಲ್ಲ, ಪರಿಣಾಮ ಸ್ಥಿರವಾಗಿ ಉಳಿಯಲಿಕ್ಕಿಲ್ಲ.

ಸುದ್ಯೆವದಿಂದ ಜೀವನ ಶಿಕ್ಷಣ ಪತ್ರಿಕೆಯ ಮುಖಾಂತರ ಜ್ಞಾನ ಪ್ರಸಾರ ಮಾಡುವದು, ಮತ್ತು ಶಿಕ್ಷಣ ಶಾಸ್ತ್ರದ ವಿವಿಧಾಂಗಗಳನ್ನು ತಿಳಿದು ಕೊಳ್ಳುವದು ಸಾಧ್ಯವಾಗಿದೆ. ಆದ್ದರಿಂದ ಶಿಕ್ಷಕರು ಜೀವನ ಶಿಕ್ಷಣ ಪತ್ರಿಕೆಯಲ್ಲಿಯ ಲೇಖನಗಳನ್ನು ಓದಿಕೊಂಡು ಶಿಕ್ಷಣದಲ್ಲಿ ಹೆಚ್ಚು ಹೆಚ್ಚು ಪ್ರಗತಿಯನ್ನು ಸಾಧಿಸುವರೆಂದು ಆಶಿಸುತ್ತೇವೆ. ಶಿಕ್ಷಣಾಧಿಕಾರಿಗಳೂ ಉಪಶಿಕ್ಷಣಾಧಿಕಾರಿಗಳೂ ಶಿಕ್ಷಣಾಭಿಮಾನಿಗಳೂ ಶಿಕ್ಷಣ ತಜ್ಞರೂ ಮತ್ತು ಗುರೂಜಿ ಬಾಂಧವರೂ ಈ ಜೀವನ ಶಿಕ್ಷಣ ಪತ್ರಿಕೆಯ ಶಿಕ್ಷಣದಲ್ಲಿ ಪ್ರಗತಿಯನ್ನು ಸಾಧಿಸಲಿಕ್ಕೆ ಹೆಚ್ಚು ಹೆಚ್ಚು ಯೋಗ್ಯತಾ ಸಂವರ್ಧನವಾಗುವಂತೆ ಉಪಯುಕ್ತ ಲೇಖನಗಳನ್ನು ಕಳಿಸಿಕೊಡಬೇಕೆಂದು ಪುನಃ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ.

---

# ಜೀವನ ಶಿಕ್ಷಣ ಶಾಲೆಗಳಲ್ಲಿ ಬಾಲಕರ ಸಹಕಾರಿ ಭಾಂಡಾರಗಳ ಸ್ಥಾನ

ಲೇಖಕರು : ಶ್ರೀ ಎನ್. ಬಿ. ಮುದಕವಿ, ಎ.ಡಿ.ಇ.ಆಯ್., ಹಾವೇರಿ

ಸಕ್ತಿ ಶಿಕ್ಷಣವು ಅಮಲಿನಲ್ಲಿ ಬಂದಂದಿನಿಂದ ಶಿಕ್ಷಣದ ಕ್ಷೇತ್ರವು ವಿಸ್ತಾರವಾಗಿದೆ. 'ಬಾಲಕರ ಸರ್ವಾಂಗೀಣ ಉನ್ನತಿಯನ್ನು ಸಾಧಿಸಬೇಕಾಗಿದೆ. ಈ ಸಾಧನೆಯಲ್ಲಿ ಸರಕಾರವಷ್ಟೇ ಪ್ರಯತ್ನಿಸಿದರೆ ಸಾಲದು. ಶಿಕ್ಷಕರೂ ಗ್ರಾಮಾಧಿಕಾರಿಗಳೂ ಮುನಸಿಪಾಲ್ಟಿಯ ಸದಸ್ಯರೂ ಹಾಗೂ ಸಮಾಜದ ಮುಖಂಡರೂ ಅನೇಕ ಮುಖವಾಗಿ ಪ್ರಯತ್ನಿಸಬೇಕಾಗಿದೆ. ತನು, ಮನ, ಧನಗಳಿಂದ ತಮ್ಮ ಸಹಾಯ ಸಹಕಾರಗಳನ್ನು ಶಾಲೆಯ ಮುಖ್ಯ ಗುರುಗಳಿಗೆ ನೀಡಬೇಕಾಗಿದೆ; ಪ್ರತಿಯಾಗಿ ಮುಖ್ಯ ಗುರುಗಳೂ ತಮ್ಮ ಸೇವಾನಿಷ್ಠೆ, ಕರ್ತವ್ಯಪಾಲನೆಗಳಿಂದ ಅವರ ಆದರ ವಿಶ್ವಾಸಗಳನ್ನು ನಿರಂತರವಾಗಿ ಕಾಯ್ದುಕೊಂಡು ಹೋಗುವ ಭರವಸೆಯನ್ನು ಅವರಿಗೆ ನೀಡಬೇಕಾಗಿದೆ. ಉಪಗುರುಗಳು ತಮ್ಮ ವರವಾಗಿ ಮುಖ್ಯ ಗುರುಗಳು ಜನತೆಗೆ ಕೊಟ್ಟ ಆಶ್ವಾಸನವನ್ನು ಸಫಲಗೊಳಿಸಬೇಕಾಗಿದೆ. ಶಾಲೆಯಲ್ಲಿ ಸಹಕಾರಿ ಭಾಂಡಾರಗಳು ಈ ದಿಶೆಯಲ್ಲಿ ಅಪ್ರತಿಮ ಸೇವೆ ಸಲ್ಲಿಸುವ ಸಂಘಗಳಾಗಬಲ್ಲವು. ಸಾಮಾನ್ಯವಾಗಿ ಅದರ ಉದ್ದೇಶಗಳು ಕೆಳಗಿನಂತಿವೆ.

(೧) ತೀರ ಬಡ ಹುಡುಗರಿಗೆ ಶಾಲೆ ಕಲಿಯಲಿಕ್ಕೆ ಅನುಕೂಲವಾಗುವಂತೆ ಸುಲಭದರದಲ್ಲಿ ಅಥವಾ ಪುಕ್ಕಟೆಯಾಗಿ ಪಾಟಿ-ಪುಸ್ತಕಗಳನ್ನು ಹಂಚುವದು.

(೨) ಅಭ್ಯಾಸಕ್ಕೆ ಅನುಕೂಲವಾಗುವಂತೆ ಶಾಲಾ ವರ್ಷದ ಆರಂಭದಲ್ಲಿ ಯೋಗ್ಯ ಬೆಲೆಗೆ ಪಾಟಿ-ಪುಸ್ತಕಗಳನ್ನು ಒದಗಿಸುವದು.

(೩) ಬಾಲಕನ ಶಿಕ್ಷಣದ ಅವಧಿಯಲ್ಲಿ ಅವನಿಗೆ ಮಿತವ್ಯಯದ ಮಹತ್ವವನ್ನು ಚನ್ನಾಗಿ ಮನವರಿಕೆ ಮಾಡಿಕೊಡುವದು.

(೪) ವಿದ್ಯಾರ್ಥಿಗಳ ಪಾಲಕರಿಗೆ ಮಕ್ಕಳ ಶಿಕ್ಷಣದ ಹೊರೆಯು ಕಡಿಮೆಯಾಗುವಂತೆ ನೋಡಿಕೊಳ್ಳುವದು.

(೫) ಶಾಲಾ ಬಾಲಕನಿಗೆ ಸಹಕಾರೀ ತತ್ವಗಳನ್ನು ಮತ್ತು ಅದರ ಸದುಪಯೋಗವನ್ನು ಪ್ರತ್ಯಕ್ಷವಾಗಿ ತಿಳಿಸಿ ಕೊಡುವದು.

(೬) ಚಿಕ್ಕ ಚಿಕ್ಕ ಹೊಣೆಗಾರಿಕೆಗಳನ್ನು ಅವನ ಮೈಮೇಲೆ ಹಾಕಿ ಬಾಲಕನು ಪ್ರಾಮಾಣಿಕನೂ, ಸತ್ಯ ಶೀಲನೂ ಮತ್ತು ಸುತ್ತಲಿನ ಸಮಾಜಕ್ಕೆ ಹಿತ ಮಾಡು ವಂತಹ ಪ್ರವೃತ್ತಿಯುಳ್ಳವನೂ ಆಗುವಂತೆ ಪ್ರಯತ್ನಿಸು ವದು.

(೭) ಬಾಲಕನು, ತಾನು ತನ್ನ ಸಮಾಜಕ್ಕೆ, ಸಮಾಜವು ತನಗೆ ಹೇಗೆ ಹಿತಮಾಡಬಲ್ಲದು ಎಂಬುದನ್ನು ಪ್ರತ್ಯಕ್ಷ ಕಾರ್ಯ ರೂಪದಿಂದ ತಿಳಿದು ಕೊಳ್ಳುವದು.

(೮) ಶಾಲೆಯು ಬಾಲಕನ ಜೀವನದ ಆರ್ಥಿಕ ಪರಿಸ್ಥಿತಿಯ ಮೇಲೆ ವ್ಯಪಂಚದ ಆರ್ಥಿಕ ಪರಿಸ್ಥಿತಿಯನ್ನು ತಿಳಿಸಿಕೊಡಲಿಕ್ಕೆ ಪ್ರಯತ್ನಿಸುವದು.

(೯) ಬಾಲಕನು ಸ್ವತಂತ್ರವಾಗಿ ತನ್ನ ಮನೆತನದ ಲೆಕ್ಕ-ಪತ್ರಗಳನ್ನಿಟ್ಟು ತಾಯಿತಂದೆಗಳಿಗೆ ಉಪಯೋಗ ಬೀಳುವಂತೆ ಅವನನ್ನು ತರಬೇತುಗೊಳಿಸು ವದು.

(೧೦) ಕಳ್ಳಪೇಟೆಯನ್ನು ತಿರಸ್ಕರಿಸುವ ಪ್ರವೃತ್ತಿ ಯನ್ನು ಹೆಚ್ಚಿಸುವದು ಮತ್ತು ಸಹಕಾರದ ಧ್ಯೇಯ ಧೋರಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಯೋಗ್ಯ ನಾಗರಿಕನಾಗುವಂತೆ ಮಾಡಲು ಪ್ರಯತ್ನಿಸು ವದು ಇತ್ಯಾದಿ.

ಮೇಲೆ ಕಾಣಿಸಿದ ಉದ್ದೇಶಗಳ ಸಫಲತೆಗಾಗಿ ಶಾಲೆಯಲ್ಲಿ ಸಹಕಾರಿ ಭಾಂಡಾರಗಳು ಅವಶ್ಯಕವಾಗಿವೆ. ಕರ್ನಾಟಕದ ಪ್ರಾಥಮಿಕ ಶಿಕ್ಷಣವು ದೇಶದಾದ್ಯಂತ ಅಮಲಿನಲ್ಲಿ ಬಂದಿರುವದರಿಂದ ಹೆಚ್ಚು ಹೆಚ್ಚಾಗಿ ಮಕ್ಕಳು ಶಾಲೆಗೆ ಬರುವದು ಸ್ವಾಭಾವಿಕವಾಗಿದೆ. ಇದರಿಂದ ಪಾಟಿ-ಪುಸ್ತಕ-ಹಾಳಿ, ಪೆನ್ಸಿಲ್ಲುಗಳನ್ನು ಮಾರುವ ಅಂಗಡಿ ಗಳೂ ಅಲ್ಲಲ್ಲಿ ಹೆಚ್ಚಾಗುವದು ಸ್ವಾಭಾನಿಕವು. ಹೆಚ್ಚು ಹಣಗಳಿಸಬೇಕೆಂಬ ಮನುಷ್ಯನ ಸಹಜ ಪ್ರವೃತ್ತಿಯು ಮೂಲಕ ಒಮ್ಮೊಮ್ಮೆ ಹೆಚ್ಚು ಬೆಲೆಯಿಂದ ಮಾರುವ ಸಂಭವವೂ ಉಂಟು. ಎಷ್ಟೋ ಕಡೆಗಳಲ್ಲಿ ಸ್ಕೂಲ ಬೋರ್ಡಿನವರು, ಶ್ರೀಮಂತರು ಶಾಲಾ ಸಂಸ್ಥೆಯವರು ಪುಕ್ಕಟೆಯಾಗಿ ಪಾಟಿ-ಪುಸ್ತಕಗಳನ್ನು ಬಡ ಮಕ್ಕಳಿಗೆ ಹಂಚುವ ಯೋಜನೆಯನ್ನು ಇಟ್ಟು ಕೊಂಡಾಗ ಅದೇ ಬಡ ಮಕ್ಕಳಿಂದ ಕೈಬಿಟ್ಟು ಹೋಗುವ ನಾಲ್ಕೈಂಟು ರೂಪಾಯಿಗಳನ್ನು ಉಳಿಸಿದಂತಾಯಿತು. ಅದೇ ಬಡ ಮಕ್ಕಳಿಂದ ನಾಲ್ಕೈಂಟು ರೂಪಾಯಿ ಲಾಭ ಪಡೆಯ ಬೇಕೆನ್ನುವ ಪ್ರವೃತ್ತಿಯು ದುರಾಶೆಯಲ್ಲದೇ ಮತ್ತೇನು ? ಇದನ್ನು ಅಡೆಗಟ್ಟುವ ಸುಲಭೋಪಾಯವೆಂದರೆ ಶಾಲಾ ಸಹಕಾರಿ ಭಾಂಡಾರಗಳನ್ನು ತೆರೆಯುವದು ಮತ್ತು ಅದರ ಮುಖಾಂತರ ಪಾಟಿ-ಪುಸ್ತಕಗಳನ್ನು ಕೊಳ್ಳುವಂತೆ ಮಾಡುವದು. ಇದರಿಂದ ಪಾಲಕರಿಗೆ ಶಿಕ್ಷಣದ ವೆಚ್ಚವು ಕಡಿಮೆಯಾಗಬಹುದು. ಯೋಗ್ಯ ಪುಸ್ತಕಗಳೂ ದೊರೆಯಬಹುದು.

ಅನೇಕ ಕಡೆಗಳಲ್ಲಿ ಶಾಲಾ ವರ್ಷಾರಂಭದಿಂದ ಆರೇಳು ತಿಂಗಳ ವರೆಗೂ ಪಾಟಿ-ಪುಸ್ತಕಗಳನ್ನು ತರುವ ಕೆಲಸವು ನಡೆದೇ ಇರುವದು. ಈ ತಿಂಗಳಲ್ಲಿ ಕೆಲವು, ಮುಂದಿನ ತಿಂಗಳಲ್ಲಿ ಕೆಲವು, ಹೀಗೆ ನಡೆದದ್ದಾದರೆ ಇದರಿಂದ ಶಿಕ್ಷಕರಿಗೆ ಅಭ್ಯಾಸ ಸಾಗಿಸಲಿಕ್ಕೆ ಆಗುವದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವನ ಉತ್ಸಾಹವೂ ಕುಗ್ಗುವದು. ತಪಾಸಣೆಯ ಕಾಲಕ್ಕೆ ಕೃತಕ ನೆವಗಳನ್ನು ಮುಂದೆ ಮಾಡ ಬೇಕಾಗುವದು. ಶಿಕ್ಷಕನ ಈ ತೊಂದರೆಗಳು ನಿವಾರಣೆಯಾಗಬೇಕಾದರೆ ಶಾಲೆ ಪ್ರಾರಂಭವಾದ ಒಂದು ವಾರದೊಳಗೆ ಎಲ್ಲ ಬಾಲ-ಬಾಲಿಕೆಯರಿಗೆ ಪಠ್ಯ ಪುಸ್ತಕ ಗಳು ಅವರ ಕೈಸೇರುವಂತೆ ಮಾಡುವದು. ಅಜ್ಞಾ ಪಾಲಕರು ಇರುವವರೆಗೆ ಇದು ಸಾಧ್ಯವಾಗದು. ಸಹಕಾರಿ ಭಾಂಡಾರವು ಶಾಲೆಯಲ್ಲಿ ಇದ್ದುದೇ ಆದರೆ ಅದರ ಮುಖಾಂತರ ಈ ಕೊರತೆಯನ್ನು ತುಂಬಿಕೊಳ್ಳಬಹುದು. ವರ್ಗಕ್ಕೆ ಬೇಕಾಗುವ ಪಾಟಿ-ಪುಸ್ತಕಗಳನ್ನು ಬಾಲಕರಿಗೆ ಸಕಾಲದಲ್ಲಿ ಒದಗಿಸಿ ಕ್ರಮೇಣ ಪಾಲಕರಿಂದ ಅದರ ಕ್ರಯ ದೊರಕಿಸಿಕೊಳ್ಳಬಹುದು. ಮೊದಮೊದಲು ಇದು ಸ್ವಲ್ಪ ತೊಂದರೆಯಂತೆ ಕಂಡು ಬಂದರೂ ಮುಂದೆ ಸುಲಭವಾಗಿ ಶಿಕ್ಷಕರಿಗೂ, ಅದರಂತೆ ಪಾಲಕರಿಗೂ ಬಗುರಾಗಿ ಮಗುವಿನ ವಿದ್ಯಾಭ್ಯಾಸವು ಸಲೀಲವಾಗಿ ಸಾಗುವದು. ಪಾಲಕರಿಗೆ ಅನಾವಶ್ಯಕ ಪುಸ್ತಕಗಳನ್ನು ಕೊಳ್ಳುವ ಖರ್ಚು ಉಳಿಯಬಹುದು.

ಒಂದು ಸಾಧಾರಣ ತರಗತಿಯ ಶಾಲೆಯಲ್ಲಿ ೧೫೦ ಮಕ್ಕಳಿರುವರೆಂದು ಕಲ್ಪಿಸಿದರೆ ಅದರ ಭಾಂಡಾರವು ೧೫೦ ರೂಪಾಯಿಗಳನ್ನು ಮಿಕ್ಕಬಾರದು; ಇಷ್ಟು ಹಣವನ್ನು

[೨೧ನೆಯ ಪುಟ ನೋಡಿರಿ]

# ಗಾಂಧಿಜಿಯವರು ಇಟ್ಟುಕೊಂಡ ವಿದ್ಯಾಭ್ಯಾಸದ ಆದರ್ಶ

ಲೇಖಕರು: ಡಾಕ್ಟರ ಸುಬ್ರಹ್ಮಣ್ಯಂ, ಪಿಎಚ್.ಡಿ.
ಅನುವಾದಕರು: ಶ್ರೀ ತಟ್ಟಿ ಶಾಮರಾಯರು, ಬಿ.ಎ.

ಗಾಂಧಿಜಿಯವರ ಅಖಂಡ ಜೀವನವು ಸತ್ಯವನ್ನು ಸಾಕ್ಷಾತ್ಕರಿಸುವ ಸತತವಾದ ಪ್ರಯೋಗ ರೂಪವಾಗಿತ್ತು. ವಿದ್ಯಾಭ್ಯಾಸವು ಆ ಗುರಿಯನ್ನು ಮುಟ್ಟುವ ಅತ್ಯುತ್ತಮ ಸಾಧನಗಳಲ್ಲಿ ಒಂದಾಗಿತ್ತು. ಆಧುನಿಕ ಶೈಕ್ಷಣಿಕ ವಿಚಾರ ಪ್ರಣಾಲಿಯಲ್ಲಿ ತನ್ನ ಪ್ರಭಾವವನ್ನು ಬೀರಿದಂಥ, ಅದರಲ್ಲಿ ಒಂದು ಕ್ರಾಂತಿಯನ್ನೇ ಉಂಟುಮಾಡಿದಂಥ ಆ ಮಹಾತ್ಮನ ವ್ಯಕ್ತಿತ್ವದ ಸಾಕ್ಷಿರೂಪವಾಗಿ ಈ ಪ್ರಯೋಗಗಳು ನಿಂತಿವೆ.

ಅಖಂಡ ದೃಷ್ಟಿಯ (ಗೆಸ್ಟಾಲ್ಟ್) ಮನೋವಿಜ್ಞಾನಿಗಳಂತೆ ಮಹಾತ್ಮಾ ಗಾಂಧಿಯವರು ಜೀವನದ ಸಮಸ್ಯೆಗಳನ್ನು ಸಮಗ್ರ ದೃಷ್ಟಿಯಿಂದ ನೋಡುತ್ತಿದ್ದುದರಿಂದ ಶಿಕ್ಷಣವನ್ನು ಅವರು ಅದೇ ಸಮಗ್ರ ದೃಷ್ಟಿಯಿಂದ ನೋಡಿದರು; ಪರಿಪೂರ್ಣ ವ್ಯಕ್ತಿತ್ವದ ವಿಕಾಸವೇ ಅವರ ಶಿಕ್ಷಣದ ಗುರಿಯಾಗಿತ್ತು. ಮಗುವಿನಲ್ಲಿಯೂ ಮಾನವನಲ್ಲಿಯೂ ದೇಹ, ಮನಸ್ಸು, ಆತ್ಮಗಳಲ್ಲಿ ಗೂಢವಾದ ಅತ್ಯುತ್ತಮವಾದ ಅಂಶವು ಸ್ಫುಟವಾಗಿ ವ್ಯಕ್ತವಾಗುವಂತೆ ಮಾಡುವದೇ ಅವರಿಗೆ ವಿದ್ಯಾಭ್ಯಾಸದ ಅರ್ಥವಾಗಿತ್ತು. ಸಾಕ್ಷರತೆಯು ಶಿಕ್ಷಣದ ಆದರ್ಶವೂ ಅಲ್ಲ, ಅದರ ಆರಂಭವೂ ಅಲ್ಲ. ಪ್ರತಿಯೊಬ್ಬ ಸ್ತ್ರೀ ಪುರುಷರನ್ನು ಸುಶಿಕ್ಷಿತರನ್ನಾಗಿ ಮಾಡುವ ಅನೇಕ ಸಾಧನಗಳಲ್ಲಿ ಅದೊಂದು ಮಾತ್ರವಾಗಿತ್ತು. ಮನಸ್ಸಿನ ಮತ್ತು ಆತ್ಮದ ಪರಮಾವಧಿಯ ವಿಕಾಸವೇ ಗಾಂಧಿಜಿಯವರ ಶಿಕ್ಷಣದ ಆದರ್ಶವಾಗಿತ್ತು; ದೇಹ, ಮನಸ್ಸು, ಆತ್ಮ ಇವುಗಳ ಸಮನ್ವಯವೂ ಸಾಮರಸ್ಯವೂ ಸಮತೋಲವೂ ಅವರ ಗುರಿಯಾಗಿತ್ತೆಂದು ಹೇಳಬಹುದು.

ಶಿಕ್ಷಣದ ಸಮಸ್ಯೆಗಳನ್ನು ಎತ್ತಿಕೊಳ್ಳುವ ಅವರ ರೀತಿಯು ಪರಂಪರೆಯುಳ್ಳ ತಾತ್ವಿಕ ಸಿದ್ಧಾಂತಗಳನ್ನೇ ಬೀರುವ ಧಾರ್ಷ್ಟ್ಯವಾಗಿರಲಿಲ್ಲ. ಅವರು ಯಾವಾಗಲೂ ಕರ್ತವ್ಯವಾದಿಗಳಂತೆ ಮಾತನಾಡದೆ ಅನುಭವದಿಂದ ಮಾತಾಡುತ್ತಿದ್ದರು. ತಾವು ಉಪದೇಶಿಸುವದನ್ನೇ ಅವರು ಆಚರಿಸುತ್ತಿದ್ದರು; ತಾವು ಆಚರಿಸದೇ ಇದ್ದ ಮಾತನ್ನು ಅವರು ಬೋಧಿಸುತ್ತಲೇ ಇರಲಿಲ್ಲ. ಅವರು ಶಿಕ್ಷಣದಲ್ಲಿ ಮಾಡಿದ ಅನೇಕ ಪ್ರಯೋಗಗಳಲ್ಲಿ ಜೀವನ ಶಿಕ್ಷಣ ಯೋಜನೆಯು ಸಾರಭೂತವಾಗಿದೆ; ಅವರ ಶೈಕ್ಷಣಿಕ ವಿಜ್ಞಾನದ ತಿರುಳನ್ನು ಅದು ಒಳಗೊಂಡಿದೆ—ನಿಜವಾದ ಸತ್ಯವಾದ ವಿದ್ಯಾಭ್ಯಾಸವು ವ್ಯವಹಾರಕ್ಕೆಳೆದದ್ದಾಗಿರಬೇಕು, ಸ್ವಾವಲಂಬಿಯಾಗಿದ್ದು ಸಮಾಜ ಪ್ರಗತಿಯ ಉದ್ದೇಶ ಪೂರ್ಣವಾಗಿರಬೇಕು. ಶೈಕ್ಷಣಿಕ ಪುನರ್ರಚನೆಯ ಪ್ರಶ್ನೆಯನ್ನು ಅನುಷ್ಠಾನಶೀಲ ಮಾರ್ಗದವರ (ಪ್ರಾಗ್ಮಾಟಿಸ್ಟ್) ದೃಷ್ಟಿಯಿಂದ ನೋಡಿದ ಭಾರತದ ಶೈಕ್ಷಣಿಕ ಸುಧಾರಕರಲ್ಲಿ ಅವರೇ ಮೊದಲಿಗರು. ಅವರ ವಿಚಾರಕ್ಕೆ ಮಹತ್ವವು ಬಂದಿರುವದಕ್ಕೆ ಮುಖ್ಯ ಕಾರಣವು ವ್ಯಾಪಕವಾದ ಉದ್ದೇಶವನ್ನು ಪ್ರಯೋಜನವನ್ನು ಶಿಕ್ಷಣದಲ್ಲಿ ಸಮಾವಿಷ್ಟ ಮಾಡಿದ್ದೇ ಆಗಿದೆ. ಯಾವ ಪದ್ಧತಿಯು ಖರ್ಚಿನ ಬಾಬತ್ತಿನಲ್ಲಿ ಒಂದು ಮಿತಿಯನ್ನು ಇಟ್ಟುಕೊಳ್ಳಬಲ್ಲದೋ ಹಾಗು ಯಾವ ಪದ್ಧತಿಯು ದೇಶದಾದ್ಯಂತ ವಿಶಾಲವಾಗಿ ವಾಸಿಸಿದ ಹಳ್ಳಿಗರ ಸಮೃದ್ಧ ಜೀವನದ ಬೇಡಿಕೆಗಳಿಗೆ ಹೊಂದಿಕೊಳ್ಳಬಹುದೋ ಅಂಥ ಒಂದು ಪದ್ಧತಿಯನ್ನು ಅಸ್ತಿತ್ವದಲ್ಲಿ ತರಬೇಕಾಗಿತ್ತು ಗಾಂಧಿಜಿಯವರಿಗೆ. ನಮ್ಮ ದೇಶದಲ್ಲಿ ನಡೆಯುತ್ತ ಬಂದ ಶೈಕ್ಷಣಿಕ ಪರಂಪರೆಯಲ್ಲಿ ಅದು ಒಂದು ಹೊಸ ಹಾದಿಯೇ; ಅದರಿಂದ ರಾಷ್ಟ್ರದ ಆಗು-ಹೋಗುಗಳಿಗೆ ವಿದ್ಯಾಭ್ಯಾಸದ ನಿಕಟ ಸಂಬಂಧ ಉಂಟಾಯಿತು. ವಿದ್ಯಾಭ್ಯಾಸವು ದೇಶದಲ್ಲಿಯ ನಿರುದ್ಯೋಗ ಸಮಸ್ಯೆಯ ನಿವಾರಣೆಯ ಸಮಾಜವೇ ಆಗಬೇಕೆಂದು ಅವರು ಬಗೆದರು. ವ್ಯಾವಹಾರಿಕತೆಯನ್ನೂ ಸಾಮಾಜಿಕ ಉದ್ದೇಶವನ್ನೂ ಶಿಕ್ಷಣದಲ್ಲಿ ಪೂರ್ತಿಮಾಡಿ ಸಮಾಜದಕಲ್ಯಾಣಕ್ಕೂ ಸ್ವಾಸ್ಥ್ಯಕ್ಕೂ ಒಂದು ಹಾದಿಯನ್ನು ಹಾಕಿ ಕೊಟ್ಟರು; ಜನರ ಆರ್ಥಿಕ ಉನ್ನತಿಗೂ ಶಿಕ್ಷಣಕ್ಕೂ ಒಂದು ಸಂಬಂಧವನ್ನು ಬೆಳೆಸಿದರು. ಮುಂಚೆ ನಡೆಯುತ್ತಿದ್ದ ಸಾಲೆಗಳಲ್ಲಿಯ ಶಿಕ್ಷಣಕ್ಕೂ ಗೃಹಜೀವನ-ಗ್ರಾಮಜೀವನ

ಗಳಿಗೂ ಯಾವ ಸಂಬಂಧವೇ ಇಲ್ಲದ್ದನ್ನು ಕಂಡು ಗಾಂಧಿಜಿಯವರು ವಿಷಾದ ಪಟ್ಟರು. ಉತ್ಪಾದಕ ಉದ್ಯೋಗದ ಮೂಲಕ ಈ ದೊಡ್ಡ ಲೋಪವನ್ನು ದೂರ ಮಾಡುವದಕ್ಕೆ ಅವರು ಒಂದು ಶೈಕ್ಷಣಿಕ ಮಾರ್ಗವನ್ನು ಹಾಕಿದರು.

ಸ್ವಭಾವ ಸಚ್ಛೀಲಗಳನ್ನು ತಿದ್ದಿ ರೂಪಿಸುವದೂ ಶಿಕ್ಷಣದ ಗುರಿಗಳಲ್ಲಿ ಒಂದಾಗಿರದಿದ್ದರೆ ಆ ಶಿಕ್ಷಣಕ್ಕೆ ಏನೂ ಬೆಲೆ ಇಲ್ಲ; ಜ್ಞಾನದ ಫಲವು ಶೀಲ-ಸಂವರ್ಧನವು. ಈ ಶೀಲ ನಿರೂಪಣೆಯಲ್ಲಿ ಪವಿತ್ರವಾದ ವೈಯಕ್ತಿಕ ಜೀವನವು ಒಂದು ಮುಖ್ಯ ಘಟಕವಾಗಿದೆ. ಸಚ್ಛೀಲವಂತನಾದ ಮನುಷ್ಯನಲ್ಲಿ ದಿಟ್ಟತನ, ಧೈರ್ಯ ಇರಬೇಕೆಂದು ಗಾಂಧಿಜಿಯವರು ಹೇಳುವರು— ಧೈರ್ಯವಿಲ್ಲದ ವಿದ್ಯೆಯು ಮಯಣದ ಗೊಂಬೆಯಂತೆ— ನೋಡಲಿಕ್ಕೆ ಅದು ಮುದ್ದಾಗಿದ್ದರೂ ಒಂದಿಷ್ಟು ಬಿಸಿಯು ತಾಕಿದರಾಯಿತು ಕರಗಿಬಿಡುವದು. ಶಿಕ್ಷಣವು ಧೈರ್ಯವನ್ನೂ ವಿಶ್ವಾಸವನ್ನೂ ಕೊಡಬೇಕಲ್ಲದೆ ಅದು ಕಲಿತವರನ್ನು ಪುಕ್ಕರನ್ನು ಮಾಡಬಾರದು. ಶಾಲೆಯು ಒಂದು ಪವಿತ್ರ ಮಂದಿರವಾಗಿರಬೇಕು—ಅಲ್ಲಿ ಯಾವ ಕೇಳಾದ, ಕುತ್ಸಿತವಾದ, ಹೇಸಿಯಾದ ಸಂಗತಿ ಇರಕೂಡದು. ಶಾಲೆ-ಕಾಲೇಜುಗಳಿಗೆ ಕಾರಖಾನೆಯ ದೃಷ್ಟಾಂತವನ್ನು ಕೊಡುವದಾದರೆ ಅವು ಶೀಲರೂಪಣೆಯ ಕಾರಖಾನೆಗಳಾಗಿರಬೇಕೆಂದು ಹೇಳಬಹುದು. ನಿಜವಾದ ಶಿಕ್ಷಣವು ಮನಸ್ಸನ್ನು ಉದಾತ್ತವಾದುದನ್ನಾಗಿಯೂ ಸಮೃದ್ಧವಾದುದನ್ನಾಗಿಯೂ ಮಾಡಬೇಕಲ್ಲದೆ ಅದು ಗೌರವ ಹೀನವಾಗುವಂತೆ ತುಚ್ಛವಾಗುವಂತೆ ಮಾಡಬಾರದೆಂದು ಗಾಂಧಿಜಿಯವರು ಹೇಳುತ್ತಿದ್ದರು.

ಶಿಕ್ಷಣದಲ್ಲಿ ಸರಳತೆಯೂ ನಿರಾಡಂಬರತೆಯೂ ಇರಬೇಕೆಂದು ಅವರು ಹೇಳುವರು— ಅವು ಶಿಕ್ಷಣಕ್ಕೆ ಸ್ವಾಭಾವಿಕವಾದ ಭೂಷಣಗಳು. ಮೇಲಿನವರು ವಿಧಿಸಿದ ನಿಯಮಗಳಿಗಾಗಿ ಈ ಸರಳ ಜೀವನವನ್ನು ನಡೆಯಿಸಬೇಕೆಂದು ಭಾವಿಸದೆ, ವಿದ್ಯಾರ್ಥಿಗಳು ಈ ಸಾದಾ ಜೀವನ, ಸೂಕ್ಷ್ಮ ವಿಚಾರದ ಆದರ್ಶಕ್ಕೆ ತಾವಾಗಿ ಮೆಚ್ಚುವಂತಾಗಬೇಕು. ಈ ಸರಳತೆಯು ಆತ್ಮದ, ಅಂತರಾತ್ಮದ ದಾರಿದ್ರ್ಯವಲ್ಲ. ಆದರೆ ಮನಸ್ಸಿನ ವೈಶಾಲ್ಯವಾಗಿದೆ. ಶಾಲೆ-ಕಾಲೇಜುಗಳಲ್ಲಿ ಹೊರಜೀವನದ ಸರಳತೆಯನ್ನಾದರೂ ಪಾಲಿಸಲಿಕ್ಕೆ ಕಲಿತರೆ ಮುಂದೆ ಜೀವನದ ಕಷ್ಟದ ಅನುಭವಗಳಿಂದ ಮನಸ್ಸು ಉದಾತ್ತವೂ ವಿಶಾಲವೂ ಆಗಬಲ್ಲದು.

ಗಾಂಧಿಜಿಯವರ ಶಿಕ್ಷಣದ ವಿಚಾರಗಳಿಗೆ ಅವರ ಜೀವನದ ತಾತ್ವಿಕ ವಿಜ್ಞಾನವೂ ಅವರ ಅನುಭವಗಳೂ ಹಿನ್ನೆಲೆಯಾಗಿದ್ದವು. ಶಿಕ್ಷಣವು ಕಲಿಯುವವರು ಮುಂದೆ ಕೈಕೊಳ್ಳಬೇಕೆಂದಿರುವ ಉದ್ಯೋಗಕ್ಕೆ ಮಾತ್ರ ಸಿದ್ಧತೆಯಾಗಿರದೆ, ಅವರ ಇಡಿಯ ಜೀವನದ ಪೂರ್ವ ಸಿದ್ಧತೆಯಾಗಿರಬೇಕು. ಶಾಲೆ-ಕಾಲೇಜುಗಳಿಂದ ಕಲ್ತಿತು ಹೊರಬಿದ್ದ ಆಗಿನ ಕಾಲದ ಯುವಕರು ನೀತಿಯಿಂದಲೂ ಬುದ್ಧಿಯಿಂದಲೂ ಅಸಹಾಯರಾಗಿ ಸಮಾಜದ ಕಲ್ಯಾಣವನ್ನು ಸಾಧಿಸುವದಕ್ಕೆ ಅತ್ಯಂತ ಅಸಮರ್ಥರಾಗಿರುವ ಕರುಣಾಜನಕ ದೃಶ್ಯವು ಅವರ ಅಂತಃಕರಣವನ್ನು ಕೆರಳಿಸಿದ್ದರಿಂದ ಶಿಕ್ಷಣದಲ್ಲಿ ಹೊಸ ಮಾರ್ಗವನ್ನು ಶೋಧಿಸುವದಕ್ಕೆ ಅವರು ಪ್ರವೃತ್ತರಾದರು.

ಗಾಂಧಿಜಿಯವರು ಸ್ವಂತ ಶಿಕ್ಷಣದ ಮಹತ್ವವನ್ನು ಬಹಳ ಒತ್ತಿ ಹೇಳುತ್ತಿದ್ದರು. ಅತ್ಯಂತ ಸಫಲವಾದ ರೀತಿಯಿಂದ ತಮ್ಮ ಶಿಕ್ಷಣವನ್ನು ಅವರು ತಾವೇ ರೂಪಿಸಿಕೊಂಡರು. ಅವರ ಸಮಗ್ರ ಜೀವನವು ಇದಕ್ಕೆ ಸಾಕ್ಷಿಯಾಗಿ ನಿಂತಿದೆ. ಕಲಿಯಬೇಕೆಂಬ ವಿದ್ಯಾರ್ಥಿ ವೃತ್ತಿಯು ಅವರ ಆಯುಷ್ಯದ ಕೊನೆಯ ವರೆಗೂ ಇದ್ದಿತು— ಇದೇ ವಿದ್ಯಾಭ್ಯಾಸದ ಮುಖ್ಯವಾದ ಹಾಗು ಮಹತ್ವದ ಲಕ್ಷಣ. ಶಿಕ್ಷಣವು ತಾಯಿಯ ಗರ್ಭದಲ್ಲಿರುವ ಶಿಶುವಿನಿಂದಲೇ ಪ್ರಾರಂಭವಾಗಿ ವ್ಯಕ್ತಿಯ ಲೋಕಯಾತ್ರೆಯ ಕೊನೆಯ ವರೆಗೂ ನಡೆಯುವದೆಂದು ಅವರ ಅಭಿಪ್ರಾಯವಾಗಿದ್ದಿತು— ಅದೊಂದು ನಿರಂತರವಾದ ಸಂಸ್ಕಾರವಾಗಿದ್ದು ಮ್ಯಾಟ್ರಿಕ್ ಪರೀಕ್ಷೆಗೆ ಅಥವಾ ಡಿಗ್ರಿ ಪರೀಕ್ಷೆಗೆ ಅದು ಮುಗಿಯಿತೆಂದು ಭಾವಿಸಲಿಲ್ಲ. "ಜೀವಿಸುವದಕ್ಕೆ ಕಲಿಯಿರಿ, ಕಲಿಯಲಿಕ್ಕೆ ಜೀವಿಸಿರಿ" ಎಂಬುದೇ ಅವರ ಶಿಕ್ಷಣದ ಆದರ್ಶವಾಗಿದ್ದಿತು. ಗಾಂಧಿಜಿಯವರ ಮಹಾ ವ್ಯಕ್ತಿತ್ವದ ಒಂದು ರಹಸ್ಯವೆಂದರೆ ಇತರರೂ ಜೀವಿಸುವಂತಾಗಲೆಂದು ತಾವು ಕಲಿತದ್ದು.

ಆತ್ಮಸಾಕ್ಷಾತ್ಕಾರವೇ ಶಿಕ್ಷಣದ ಅವರ ಪರಮ ಗುರಿಯು. ಅವರು ಕಾಲಕಾಲಕ್ಕೆ ಮಾಡಿದ ಶೈಕ್ಷಣಿಕ ಪ್ರಯೋಗಗಳಲ್ಲಿ ಭಿನ್ನ ಭಿನ್ನ ಉದ್ದೇಶಗಳು ತೋರುವವೆಂದು ನಮಗೆ ಆಶ್ಚರ್ಯವಾಗಬಹುದು. ಆದರೆ ಈ

ಅಂತರಾತ್ಮವನ್ನು ಸಾಕ್ಷಾತ್ಕರಿಸಿಕೊಳ್ಳುವದೇ ತಮ್ಮ ಅಂತಿಮ ಗುರಿ ಎಂಬುದನ್ನು ಎಂದೂ ಅವರು ಮರೆಯಲಿಲ್ಲ. ಇಷ್ಟಧ್ಯೇಯವನ್ನು ಸಾಧಿಸುವದಕ್ಕೆ ಜೀವಿಸುವ ಒಂದು ಹಾದಿಯಿದೆ—ತಾತ್ವಿಕ ವಿಚಾರಗಳ ಬರಿಯ ಒಂದು ಕಟ್ಟಲ್ಲ. ಗಾಂಧಿಜಿಯವರ ಪ್ರಕಾರ ಆ ಜೀವನದ ಮಾರ್ಗವಾವುದು? ಜೀವನದಲ್ಲಿ ನಿಷ್ಠುರವಾದ ಒಂದು ಸಾಧನವಿರಲಿ; ಅದು ಅನೇಕ ಗುಣಗಳಿಂದ ಕೂಡಿರಬೇಕು —ಲೋಭದಾಹಿತ್ಯ, ಅಸಂಗ್ರಹ, ಅಹಿಂಸೆ, ನಿಜವಾದ ನಿಗರ್ವಿಯ ನಮ್ರ ಭಾವ—ಇಂತಹ ಇನ್ನೂ ಎಷ್ಟೋ ಗುಣಗಳಿಂದ ಕೂಡಿರಬೇಕು. ಈ ಶಾಸನವು ಅನ್ಯರು ಹೇರಿದ್ದಾಗದೆ ಸ್ವಯಂ ವಿಹಿತವಾಗಿರಬೇಕು. ಅದು ದೇಹದಂಡನೆ ಮಾತ್ರವಾಗಿರದೆ ಮನಸ್ಸು ಅಂತಃಕರಣಗಳ ನಿಯಮನವಾಗಿರಬೇಕು ಸತ್ಯದ ಸಾಕ್ಷಾತ್ಕಾರವೇ ಮಹಾತ್ಮಾಜಿಯವರ ಧ್ಯೇಯವಾಗಿದ್ದು, ಅಹಿಂಸೆಯು, ಅದರ ಯಾವತ್ತೂ ವ್ಯಾಪಕವಾದ ಅರ್ಥದಲ್ಲಿ ಆ ಧ್ಯೇಯದ ಸಾಧನವಾಗಿದ್ದಿತು. ಸಾಧ್ಯ-ಸಾಧನಗಳೆರ್ಡಕ್ಕೂ ಅಷ್ಟೇ ಮಹತ್ವವನ್ನು ಕೊಟ್ಟು ಅದರಂತೆ ಆಚರಿಸಿ ತೋರಿಸಿದ ವಿಕ್ರಮ ಸ್ಥಾಪಕರು ಅವರಾಗಿದ್ದರು.

---

# ಸಹಜತೆಯೂ ಸಂಸ್ಕಾರವೂ

**ಲೇಖಾಂಕ ೧**

**ಲೇಖಕರು: ಶ್ರೀ ಶಂತ್ರಿ ಬಸಪ್ಪನವರು,** ಬಿ.ಎ., ಬಿ.ಟಿ.

"ಸಂಸ್ಕಾರವು ಸಹಜತೆಗಿಂತ ಮೇಲು" ಎಂಬ ವಾದವು ಸರ್ವಶ್ರುತವಿದ್ದು ಅದನ್ನು ಎಲ್ಲರು ಒಪ್ಪಿಕೊಳ್ಳುವದುಂಟು. ಪಶುವೃತ್ತಿಯಲ್ಲಿದ್ದ ಮಗುವು ಸಂಸ್ಕಾರದಿಂದಲೇ ಅರ್ಥಾತ್ ಶಿಕ್ಷಣದಿಂದಲೇ ಮಾನವನಾಗಬಲ್ಲದು. ಹುಟ್ಟಿನಿಂದ ಬಂದ ಅರ್ಥಾತ್ ಸಹಜತೆಯಿಂದ ಪ್ರಾಪ್ತವಾದ ಲಕ್ಷಣಗಳನ್ನು ಕಡೆಗಣಿಸಲು ಬರುವಂತಿಲ್ಲ. ಅದೇ ಮೇಳೆಗೆ ಮಗುವಿನ ಪರಿಸ್ಥಿತಿ, ಅದಕ್ಕೆ ಸಿಗುವ ಸಂಸ್ಕಾರ ಮತ್ತು ಅದು ಆವ ವಾತವರಣದಲ್ಲಿ ಬೆಳೆಯುತ್ತಿದೆ, ಮುಂತಾದ ಸಂಗತಿಗಳೂ ಮಹತ್ವಪೂರ್ಣವಾದವುಗಳಾಗಿವೆ. ಹೀಗಾಗಿ, ಸಂಸ್ಕಾರವು ಮೇಲೋ ಸಹಜತೆಯು ಮೇಲೋ ಎಂಬುದರ ಬಗೆಗೆ ತೀವ್ರ ಭಿನ್ನಾಭಿಪ್ರಾಯಗಳಿರುತ್ತಿವೆ. ಅವುಗಳನ್ನವಲೋಕಿಸುವ ದೃಷ್ಟಿಕೋನವು ಮತಭೇದದ ಮೂಲಕಾರಣವಾಗಿರಲು ಸಾಕು. ದೇವದತ್ತ ಲಕ್ಷಣಗಳೇ ಮಾನವನ ವ್ಯಕ್ತಿತ್ವದ ವಿಕಾಸವನ್ನು ಮಾಡಬಲ್ಲವು, ಮತ್ತು ಆತನ ಜೀವನದಲ್ಲಿ ಆತನ ಸ್ಥಾನವನ್ನು ಗೊತ್ತುಪಡಿಸಬಲ್ಲವೆಂಬ ವಾದವನ್ನು ವ್ಯಕ್ತಿತ್ವದ ಬೆಳವಣಿಗೆಯನ್ನು ಮಾಡಿಕೊಳ್ಳಲು ಹುಟ್ಟಿನಿಂದ ಆರೂ ಅಸಮರ್ಥರಿರುವದಿಲ್ಲವೆಂದೂ ಎಲ್ಲರಿಗೆ ಸಮಾನಾವಕಾಶಗಳನ್ನೊದಗಿಸಿ ಕೊಟ್ಟರೆ ಎಲ್ಲರು ಅಷ್ಟೇ ಪ್ರಗತಿಯನ್ನು ಹೊಂದುವರೆಂದೂ ವಾದಿಸುವವರು ಆಹ್ವಾನಿಸುವದುಂಟು. ಯಾಕಂದರೆ, ಎಲ್ಲವು ದೇವದತ್ತ ಲಕ್ಷಣಗಳಿಂದಲೇ ಸಾಧ್ಯವೆಂದು ಒಂದು ವೇಳೆ ಕಲ್ಪಿಸಿದರೆ, ಮಾನವನ ಪ್ರಯತ್ನಕ್ಕೆ ಹಾಗೂ ಪ್ರಗತಿಗೆ ಅಸ್ಪದವೇ ಉಳಿಯುವದಿಲ್ಲ. ಪ್ರಯತ್ನಶೀಲನಾಗಿರುವದು ಮಾನವನ ಜನ್ಮಸಿದ್ಧ ಹಕ್ಕು. ಅದನ್ನು ನಾವು ಅಲ್ಲಗಳೆದಂತಾಗುವದು.

ಜಾತಿಯ ಮೇಲು-ಕೀಳುಗಳನ್ನೆತ್ತಿ ಹಿಡಿಯುವವರು ನಿಸರ್ಗವೇ ಮಾನವರಲ್ಲಿ ವಿಷಮತೆಯ ಬೀಜಗಳನ್ನು ಬಿತ್ತಿದೆಯೆಂದೂ ಅಶಕ್ತರನ್ನು ಸಶಕ್ತರು, ಅಜ್ಞಾನಿಗಳನ್ನು ಜ್ಞಾನಿಗಳು, ಜೇಡಿಗಳನ್ನು ಬಲಿಷ್ಠರು, ಬಡವರನ್ನು ಶ್ರೀಮಂತರು ಆಳುವದನ್ನು ನಿರ್ಣಯಿಸಿದೆಯೆಂದೂ ವಾದಿಸುವರು. ಮಾನವರಲ್ಲಿ ಒಡೆದೆದ್ದು ಕಂಡು ಬರುವ ವ್ಯತ್ಯಾಸಗಳತ್ತ ಜೊಟ್ಟು ಮಾಡಿತೋರಿಸಿ ಅವರಲ್ಲಿಯ ಬೌದ್ಧಿಕ ಹಾಗೂ ನೈತಿಕ ಹೆಚ್ಚು-ಕಡಿಮೆಗಳು ಸ್ವಭಾವಸಿದ್ಧವೆಂದೂ ಅವುಗಳನ್ನು ತರಬೇತದಿಂದ ಇಲ್ಲವೆ ಪರಿಸ್ಥಿತಿಯಿಂದ ಸುಧಾರಿಸುವದು ಅಶಕ್ಯವೆಂದೂ ಪ್ರತಿಪಾದಿಸುವರು. ಅವರು ತಮ್ಮ ಪ್ರತಿಪಾದನೆಯ ಸಮರ್ಥನೆಗೋಸ್ಕರ ಮನೋವಿಜ್ಞಾನಿಗಳ ಬುದ್ಧಿಮಾಪನಗಳನ್ನೂ ಜೀವಶಾಸ್ತ್ರಜ್ಞರು ಕಂಡು ಹಿಡಿದ ತತ್ತ್ವ (ಸ್ತ್ರೀಪುರುಷರಲ್ಲಿದ್ದ ಬಂಧುತ್ವದ ತತ್ತ್ವ)ಗಳನ್ನೂ ಉದಹರಿಸುವರು. ಅಸಮಾನಂಶೀಯತೆಯ ಮೂಲ ಕಾರಣವು ಗರ್ಭಾಣುವಿನ ರಚನೆಯು, ಆದರೆ ಸಂಸ್ಕಾರದ ಲಕ್ಷಣಗಳಲ್ಲವೆಂಬುದು

ಆ ಜೀವ ವಿಜ್ಞಾನಿಗಳ ತತ್ತ್ವಗಳ ಹಾಗೂ ಮನಃಶಾಸ್ತ್ರಜ್ಞರ ಬುದ್ಧಿಮಾಪನಗಳ ಫಲಿತಾಂಶವು ಮಾನವರಲ್ಲಿ ನಿಚ್ಚಳವಾಗಿ ಕಂಡು ಬರುವ ವಿಷಮತೆಗಳು ಅನುವಂಶೀಯವೆಂದೂ ಮಾನವನ ವೈಯಕ್ತಿಕ ಪ್ರಗತಿಗಳಲ್ಲಿ ತಲೆದೋರುವ ಹೆಚ್ಚು-ಕಡಿಮೆಗಳು ಜೀವಾಣುವಿನ ರಚನೆಯಲ್ಲಿ ಹುದುಗಿದ್ದ ವ್ಯತ್ಯಾಸಗಳಿಗೆ ಸಂಬಂಧಿಸಿವೆಯೇ ಹೊರತು ಶಿಕ್ಷಣ ಮತ್ತು ಪರಿಸ್ಥಿತಿಗಳಿಗೆ ಅವು ಸಂಬಂಧಿಸಿಲ್ಲವೆಂದೂ ಅವರು ನಂಬುತ್ತಾರೆ.

ಸುಮಾರು ೭೦ ವರ್ಷಗಳ ಹಿಂದೆ ಸರ್ ಫ್ರಾನ್ಸಿಸ್ ಗಾಲ್ಟನ್ನನು ಬುದ್ಧಿಮತ್ತೆಯ ಅನುವಂಶೀಯತೆಯ ಬಗೆಗೂ ಮಾನವನ ಗುಣವಿಶೇಷಗಳ ಪರಂಪರೆಯ ಬಗೆಗೂ ಈಡೇರಿಸಿದ ಸಂಶೋಧನಗಳನ್ನಿಲ್ಲಿ ಗಣನೆಗೆ ತಂದುಕೊಳ್ಳುವದು ಲೇಸು. ಪ್ರತಿಭಾಸ್ವಿತ ನ್ಯಾಯಾಧೀಶರು, ಮುತ್ಸದ್ದಿಗಳು, ಸೈನ್ಯಾಧಿಕಾರಿಗಳು, ಸಾಹಿತಿಗಳು, ವಿಜ್ಞಾನಿಗಳು, ಕಲೆಗಾರರು, ಧರ್ಮಾಧಿಕಾರಿಗಳು, ಆಟಗಾರರು, ಮುಂತಾದವರ ಜೀವನ ಚರಿತ್ರೆಗಳನ್ನೆಲ್ಲ ಸಂಗ್ರಹಿಸಿ ಆಯಾ ಕ್ಷೇತ್ರಗಳಲ್ಲಿ ಅವರವರ ಮನೆತನಗಳಲ್ಲಿ ಬಹಳಷ್ಟು ಪೂರ್ವಜರು ಬೆಳಗಿದ್ದಾರೆಂಬುದನ್ನು ತೋರಿಸಿದ್ದಾನೆ. ಆದುದರಿಂದ, ತಾನು ಕೈಕೊಂಡ ಈ ಕಾರ್ಯವು ಮೇಧಃಶಕ್ತಿಯ ಅನುವಂಶೀಯತೆಯನ್ನು ಸ್ಥಿರಗೊಳಿಸುವದೆಂದು ಅವನು ನಂಬುತ್ತಾನೆ. ಅವುದಾದರೊಂದು ನಿರ್ದಿಷ್ಟ ಕ್ಷೇತ್ರದಲ್ಲಿ ಹೆಸರುವಾಸಿಗಳಾದ ಜನರು ಆ ಕ್ಷೇತ್ರದಲ್ಲಿಯೇ ಕೀರ್ತಿಯನ್ನು ಪಡಕೊಂಡ ಸಂತತಿಗಳನ್ನು ಹಡೆದಿರುವರೆಂಬುದರ ಆಧಾರದ ಮೇಲಿಂದ ಶ್ರೇಷ್ಠತೆಯ ಮೂಲ ಕಾರಣವು ಪರಂಪರೆಯೆಂಬುದನ್ನು ಸಿದ್ಧಪಡಿಸಲು ಹೆಣಗಾಡುತ್ತಾನೆ. ಬೌದ್ಧಿಕ ಹಾಗೂ ಕಲಾತ್ಮಕ ಹೆಚ್ಚಳವು ಸಾಧಾರಣವಾಗಿ ಅನುವಂಶೀಯವೆಂದು ಅವನು ಪ್ರತಿಪಾದಿಸುತ್ತಾನೆ.

ಸಾದಾ ವ್ಯಕ್ತಿಗಳಲ್ಲಿ ಕಂಡು ಬರುವ ಮಾನಸಿಕ ವ್ಯತ್ಯಾಸಗಳು ಪರಂಪರೆಯಿಂದ ಬಂದಿವೆಯೆಂದು ಮನೋವಿಜ್ಞಾನಿಗಳು ತಮ್ಮ ಬುದ್ಧಿ-ಮಾಪನಗಳಿಂದ ತೋರಿಸಿಕೊಟ್ಟಿದ್ದಾರೆ. ಅವಧಾನದ ಮಟ್ಟ, ಪ್ರತಿಕ್ರಿಯೆಯ ತೀವ್ರತೆ, ನೆನಪಿನ ಶಕ್ತಿ, ರುಚಿ ಇಲ್ಲವೆ ವಾಸನೆ ಇವುಗಳ ವ್ಯತ್ಯಾಸಗಳನ್ನು ಗುರುತಿಸುವದು, ನಿಚ್ಚಳವಾದ ನೋಟ ಮುಂತಾದ ಗ್ರಹಣಶಕ್ತಿಗಳನ್ನಷ್ಟೇ ಹಳೆಯ ಪದ್ಧತಿಗಳಿಂದ ಪರೀಕ್ಷಿಸಿ ನೋಡುತ್ತಿದ್ದರು. ಈಗ ಎಲ್ಲರು ಪ್ರಯೋಗಿಸುವ ಹೊಸ ಪದ್ಧತಿಗಳು ಸಹ ವ್ಯಕ್ತಿ-ವ್ಯಕ್ತಿಗಳಲ್ಲಿ ಕಂಡು ಬರುವ ಮನಸಿನ ವೈಶಿಷ್ಟ್ಯಗಳಲ್ಲಿಯೂ ಪಾತಳಿಗಳಲ್ಲಿಯೂ ಹೆಚ್ಚು-ಕಡಿಮೆಗಳಿವೆಯೆಂದು ಸಿದ್ಧಪಡಿಸಿವೆ. ಆದುದರಿಂದ, ಅವುಗಳ ಸಹಾಯದಿಂದ ಚುರುಕು ಬುದ್ಧಿಯವರಾರು, ಸಾದಾ ಮತಿಗಳಾರು, ಮಂದ ಮತಿಗಳಾರೆಂಬುದನ್ನೀಗ ವರ್ಗೀಕರಿಸಲು ಶಕ್ಯವಾಗಿದೆ. ಮಾನವರಲ್ಲಿ ಕಂಡು ಬರುವ ವಿಷಮತೆಗಳು ಹುಟ್ಟಿನಿಂದ ಬಂದಿವೆಯೆಂಬುದನ್ನು ತೋರಿಸುವದೇ ಈ ತಜ್ಞರ ಹಾಗೂ ಬೇರೆ ಎಷ್ಟೋ ಗ್ರಂಥಕಾರರ ಧ್ಯೇಯವಾಗಿದೆ.

ಮನಸಿನ ಮೇಲ್ಮೈಯು ಅಗಣ್ಣವಿದೆಯೆಂಬುದನ್ನು ಎತ್ತಿ ಹಿಡಿಯಲು ಮತ್ತೊಂದು ಹಂಚಿಕೆಯಿದೆ. ಬಂಧು ಬಳಗದವರದೊಂದು ಸಮೂಹವನ್ನಾಯ್ದುಕೊಂಡು ಅವರೆಲ್ಲರ ಬುದ್ಧಿಪರೀಕ್ಷಣಮಾಡಿ ಅವರಲ್ಲಿ ಬಹಳಷ್ಟು ಜನರು ತೀಕ್ಷ್ಣ ಬುದ್ಧಿಯುಳ್ಳವರಿರುವರೆಂದು ತೋರಿಸುವದುಂಟು. ೧೭ನೆಯ ಶತಮಾನದಲ್ಲಿ ಪ್ರಸಿದ್ಧಿಯನ್ನು ಪಡೆದ ಸದ್‌ಗೃಹಸ್ಥ ರಿಚರ್ಡ ಎಡ್ವರ್ಡ ಮತ್ತು ಅವನ ಚತುರ ಅರ್ಧಾಂಗಿನಿ ಎಲಿಝಬೆಥ್ ಟಟೆಲ್ ಈ ದಂಪತಿಗಳ ಕೀರ್ತಿವೆತ್ತ ಸಂತತಿಗಳ ಮಾದರಿಯ ಉದಾಹರಣೆಯನ್ನು ಬೊಟ್ಟು ಮಾಡಿ ತೋರಿಸುವದುಂಟು. ಅದು ಅಮೇರಿಕದಲ್ಲಿ ಕೂಲಂಕಷವಾಗಿಯೂ ಅಮೂಲಾಗ್ರವಾಗಿಯೂ ಚರ್ಚಿಸಲ್ಪಟ್ಟು ಎಲ್ಲರಿಂದ ಮನ್ನಣೆಯನ್ನು ಪಡೆದಿದೆ. ಆ ಜಗದ್ವಿಖ್ಯಾತ ದಂಪತಿಗಳ ಸಂತತಿಗಳಲ್ಲಿ ಈರ್ವರು ಯುನಾಯಟೆಡ್ ಸ್ಟೇಟ್ಸಿನ ಅಧ್ಯಕ್ಷರಾದರು, ಸಿನೇಟರರ ಸಂಖ್ಯೆಯು ಸಾಕಷ್ಟಿತ್ತು, ಕಾಂಗ್ರೆಸದ ಸದಸ್ಯರಿದ್ದರು ನ್ಯಾಯಾಧೀಶರಿದ್ದರು, ಕಾಲೇಜಗಳ ಅಧ್ಯಕ್ಷರಿದ್ದರು ಪ್ರೊಫೆಸರರಿದ್ದರು, ಧರ್ಮಾಧಿಕಾರಿಗಳಿದ್ದರು, ಗ್ರಂಥಕಾರಿದ್ದರು, ವಕೀಲರಿದ್ದರು ಮತ್ತು ಡಾಕ್ಟರರಿದ್ದರು.

ಮಾನವನ ವ್ಯಕ್ತಿತ್ವದ ಬೆಳವಣಿಗೆಗೆ ಕಾರಣೀಭೂತವಾದ ಹಲವಾರು ಸಂಗತಿಗಳನ್ನು ಚರ್ಚಿಸುವಾಗ ತಾಯಿ ತಂದೆಗಳ ಆರ್ಥಿಕ ಸ್ಥಿತಿಯನ್ನೂ ಸಾಮಾಜಿಕ ದರ್ಜೆಯನ್ನೂ ಕಡೆಗಣಿಸಿಲ್ಲ. ಬೇರೆ ಬೇರೆ ರಂಗಗಳಲ್ಲಿ ಪ್ರತಿಷ್ಠೆಯನ್ನು ಪಡೆದ ವ್ಯಕ್ತಿಗಳು ಸಮಾಜದಲ್ಲಿ ಆರ್ಥಿಕ ಸುಸ್ಥಿತಿ ಮತ್ತು ಹೆಚ್ಚಿನ ದರ್ಜೆಯನ್ನು ಹೊಂದಿದ ಮನೆತನದ ಸಂಗತಿಗಳ

ಗಿರುವರೆಂಬುದನ್ನು ಫ್ರಾನ್ಸ್ ದೇಶದ ಅಲ್ಫಾನ್ಸ್ ಡಿ ಕಾಂಡೋಲ್ ಹಾಗೂ ಇಂಗ್ಲಂಡದ ಕಾರ್ಲ ಪೀಯರ್ಸನ್ ಎಂಬವರು ಅಂಕಿ-ಸಂಖ್ಯೆಗಳ ಕೋಷ್ಟಕಗಳ ಸಹಾಯದಿಂದ ಸ್ಪಷ್ಟಪಡಿಸಿದ್ದಾರೆ. ಇಂಗ್ಲಂಡದ ರಸಾಯನ ಶಾಸ್ತ್ರಜ್ಞರಲ್ಲಿ ಬಹಳಷ್ಟು ಜನರು ಶ್ರೀಮಂತ, ಘನವಂತ ಮತ್ತು ಸುಸಂಸ್ಕೃತ ವರ್ಗಗಳ ಸಂತತಿಯನರಿದ್ದರೆಂದು ಗಾಲ್ಟನ್ನನು ಸೂಚಿಸುತ್ತಾನೆ. ಹ್ಯಾವಲಾಕ್ ಎಲಿಸ್‌ನೆಂಬವನು ಸಾವಿರಕ್ಕೂ ಮಿಕ್ಕಿದ ಬ್ರಿಟನ್ನಿನ ಜಾಣರ ಬಗೆಗೊಂದು ಅಂಕಿ-ಸಂಖ್ಯೆಗಳ ಪರಿಶೀಲನೆಯನ್ನು ಕೈಕೊಂಡು ಅದರಲ್ಲಿ ಶಿಕ್ಕಿಂತ ಹೆಚ್ಚು ಜನರು ದೊಡ್ಡ ದೊಡ್ಡ ಉದ್ದಿಮೆದಾರರ ವರ್ಗಗಳಲ್ಲಿ ಜನಿಸಿರುವರೆಂದೂ ಕೇವಲ ಶಿಷ್ಟಷ್ಟು ಜನರು ಕಾರಕೂನರು, ಒಕ್ಕಲಿಗರು, ಕೂಲಿಕಾರರು ಮುಂತಾದ ಚಿಕ್ಕಪುಟ್ಟ ಧಂದೆಗಳಲ್ಲಿ ಹುಟ್ಟಿದವರೆಂದೂ ಅನುಮಾನಗಳನ್ನು ಹೊರಡಿಸಿದ್ದಾನೆ. ಮಕ್ಕಳ ಬುದ್ಧಿಮತ್ತೆಗೂ ತಂದೆ-ತಾಯಿಗಳ ಉದ್ದಿಮೆಗಳ ದರ್ಜೆಗೂ ಇರುವ ಪರಸ್ಪರ ಸಂಬಂಧವನ್ನೂ ತೋರಿಸಲು ಪ್ರೊಫೆಸರ ಟರ್ಮನ್‌ನೆಂಬವನು ಸಂಶೋಧನವನ್ನು ಕೈಕೊಂಡನು. ಹುಟ್ಟಾ ಜಾಣರೆಂದು ಕಂಡು ಬಂದ ೧೦೦೦ ಮಕ್ಕಳಲ್ಲಿ ನೂರಕ್ಕೆ ಸಿಗಳದಷ್ಟು ಉದ್ದಿಮೆದಾರರ ವರ್ಗದಲ್ಲಿ ಜನಿಸಿದವರೆಂದೂ, ಶಂರಷ್ಟು ಅರ್ಧಮರ್ಧ ಉದ್ದಿಮೆದಾರರ ಮತ್ತು ವ್ಯಾಪಾರಸ್ಥರ ವರ್ಗಗಳಿಗೆ ಸೇರಿದವರೆಂದೂ, ೧೧ಳದಷ್ಟು ಕುಶಲ ಕೂಲಿಕಾರರ ವರ್ಗಕ್ಕೆ ಸಂಬಂಧಿಸಿದವರೆಂದೂ, ೬ಟದಷ್ಟು ಅರ್ಧಮರ್ಧ ಕುಶಲ ಇಲ್ಲವೆ ಅಲ್ಪ ಮಟ್ಟಿಗೆ ಕುಶಲವಿದ್ದ ಕೆಲಸಗಾರರ .ವರ್ಗಗಳಿಂದ ಬಂದವರೆಂದೂ ೦.೧ಷ್ಟು ಸಾದಾ ಕೂಲಿಕಾರರ ಮಕ್ಕಳೆಂದೂ ಕಂಡು ಹಿಡಿದಿದ್ದಾನೆ. ಪ್ರೊಫೆಸರ ಆಸ್ಪರ್ನನ ಅಭಿಪ್ರಾಯವಿಂತಿದೆ— "ಪರಂಪರೆಯು ಪರಿಸ್ಥಿತಿಗಿಂತ ಹೆಚ್ಚು ಸಮರ್ಥವುಳ್ಳದ್ದೂ ದೃಢವಾದದ್ದೂ ಇರುವದೆಂಬುದನ್ನು ನಂಬಲು ಜೀವ ವಿಜ್ಞಾನದ ಆಧುನಿಕ ದೃಷ್ಟಿಯು ನಮ್ಮನ್ನು ಒತ್ತಾಯಿಸುತ್ತಿದೆ." ಪ್ರೊಫೆಸರ ಎಡ್ವರ್ಡ ಎಮ್. ಈಸ್ಟನು ಈ ಪ್ರಕಾರ ಸಾರಿ ಹೇಳುತ್ತಾನೆ— "ಮಾನವನ ಮನಸನ್ನು ತಿದ್ದುವಲ್ಲಿ ಸಂಸ್ಕಾರದ ಕ್ರಮಗಳಿಗಷ್ಟೇ ಮಹತ್ವವನ್ನು ಕೊಟ್ಟಾಗ್ಯೂ ಸಹ ಮನಸಿನ ಸ್ಥಿತಿಯು ಜನ್ಮಸಿದ್ಧವೂ ದೇವದತ್ತವೂ ಆಗಿದೆ" ಎ. ಈ. ವಿಗ್ಯಾಮನ್ನನ ಮತವಿಂತಿದೆ-"ಜಗತ್ತಿನಲ್ಲಿಯ ಎಲ್ಲ ಸುಖ-ದುಃಖಗಳು ಪರಂಪರೆಗೆ ಅಂಟಿಕೊಂಡಿವೆಯೇ ಹೊರತು ಪರಿಸ್ಥಿತಿಗಲ್ಲವೆಂದು ಜೀವ ವಿಜ್ಞಾನವು ನಮ್ಮನ್ನು ಎಚ್ಚರಿಸುತ್ತಿದೆ. ಜನರಲ್ಲಿ ಕಂಡು ಬರುತ್ತಿರುವ ವ್ಯತ್ಯಾಸಗಳು ಗರ್ಭಾಣುವಿನಲ್ಲಿದ್ದ ಹೆಚ್ಚು-ಕಡಿಮೆಗಳನ್ನವಲಂಬಿಸಿವೆ. ನೀವು ಕಿತ್ತು ಹಾಕಬೇಕೆಂದು ಬಯಸುವ ಸಮಾಜದಲ್ಲಿಯ ವರ್ಗಗಳು ನೈಸರ್ಗಿಕವಾಗಿವೆ."

ಹೆಚ್ಚಿನ ಯೋಗ್ಯತೆಯ ಜನರು ಮೇಲ್ತರಗತಿಯ ವರ್ಗಗಳಲ್ಲಿ ಮಾತ್ರ ಸಿಗುವರೆಂದು ವಾದಿಸುವದುಂಟು. ಸಾಮಾಜಿಕ ಹಾಗೂ ಆರ್ಥಿಕ ರಚನೆಯೆಂಬ ನಿಚ್ಚಣಿಕೆಯನ್ನು ಮೇಲಕ್ಕೇರುತ್ತ ನಡೆದಂತೆ ಮಾನವನ ಬುದ್ಧಿಮಟ್ಟವು ಏರುತ್ತ ಹೋಗುವದೆಂದು ಜನರ ಗ್ರಹಿಕೆಯಾಗಿದೆ. ಕೂಲಿಕಾರರು, ಸಂಣ ಸಂಣ ಅಂಗಡಿಕಾರರು, ಹೊಲ ಮಾಡುವ ರೈತರು, ಮುಂತಾದವರ ಬುದ್ಧಿಯು ಕೆಳಮಟ್ಟದ್ದಿರುತ್ತಿದೆ. ಉದ್ದಿಮೆದಾರರು, ದೊಡ್ಡ ದೊಡ್ಡ ವ್ಯಾಪಾರಸ್ಥರು, ಮತ್ತು ಮುಂದಿರುವ ವರ್ಗದವರು, ಮೊದಲಾದವರ ಬುದ್ಧಿಯು ಮೇಲ್ಮಟ್ಟದ್ದಿರುತ್ತಿದೆ. ಈಗಿನ ಮುಖಂಡರಿಂದಲೇ ಮುಂದಾಗ ಬಹುದಾದ ಮುಂಮುಖಂಡರು ಹುಟ್ಟಬಹುದೆಂದು ಜನರು ಅನ್ನುವದುಂಟು. ಬುದ್ಧಿಯನ್ನು ಹೆಚ್ಚಿಸಿಕೊಳ್ಳುವ ಶಕ್ತಿಯು ಹುಟ್ಟಿನಿಂದ ಬಂದಿರುವದೆಂದೂ, ಅನುವಂಶೀಯವೆಂದೂ, ಸಾಮಾಜಿಕ ದರ್ಜೆಗೆ ನಿಕಟ ಸಂಬಂಧವಿಟ್ಟುಕೊಂಡಿದೆಯೆಂದೂ ತೋರಿಸಲು ನಮಗೆ ಸಾಕಷ್ಟು ಪುರಾವೆಗಳಿವೆ" ಯೆಂದು ಪ್ರೊಫೆಸರ ಉಯಿಲ್ಯಮ್ ಮ್ಯಾಕ್‌ಡೂಗಲ್ಲನು ಅನ್ನುತ್ತಾನೆ.

ಜನಾಂಗದ ಹಿರಿಮೆಯನ್ನೆತ್ತಿ ಹಿಡಿಯುವವರು ತಮ್ಮ ಅನುಮಾನಗಳಿಗೆ ಜೀವ ವಿಜ್ಞಾನದ ವಿಭಜನೆಗಳನ್ನೂ ಹುಟ್ಟಿನಿಂದ ಬಂದ ವ್ಯತ್ಯಾಸಗಳನ್ನೂ ತಳಹದಿಯಾಗಿಟ್ಟುಕೊಂಡಿದ್ದಾರೆ. ಮಾನವರಲ್ಲಿ ಹಲವಾರು ನಿರ್ದಿಷ್ಟ ಮಾನಸಿಕ ಹಾಗೂ ಶಾರೀರಿಕ ವಿಷಮತೆಗಳಿರುವದನ್ನು ಅಲ್ಲಗಳೆಯಲು ಶಕ್ಯವಿಲ್ಲದಿದ್ದರೂ ಜನಾಂಗದ ಪ್ರತಿಷ್ಠೆಯ ಬಗೆಗಿದ್ದ ಕಟ್ಟುಕಥೆಯು ಇತ್ತೀತ್ತಲಾಗಿ ಸಂಪೂರ್ಣವಾಗಿ ಮಾಯವಾಗಿದೆ. ಆಜನ್ಮ ಪ್ರಾಧಿಮೆಯನ್ನೆತ್ತಿ ವಾದಿಸುವವರು ಪರಂಪರೆ, ಸಾಮಾಜಿಕ ದರ್ಜೆ ಮತ್ತು ಆರ್ಥಿಕ ಸ್ಥಿತಿ ಇವುಗಳಿಗೆ ಇಲ್ಲದ ಸಲ್ಲದ ಮಹತ್ವವನ್ನು ಕೊಟ್ಟಿರುವರೆಂದು ಅವರ ವಿರೋಧಿಗಳು ಅವರನ್ನು ದೂಷಿಸುವರು; ಮಾತ್ರವಲ್ಲದೆ, ಮಾನವನ ವ್ಯಕ್ತಿತ್ವದ ವಿಕಾಸದಲ್ಲಿ ಮಹತ್ವದ ಪಾತ್ರವನ್ನಾಡುವಂತಹ ಪರಿಸ್ಥಿತಿ,.

ಸಂಸ್ಕಾರ, ಅನುಕೂಲ ಸಂದರ್ಭ, ಮುಂತಾದವುಗಳ ಮಹತಿಯನ್ನು ತಗ್ಗಿಸಿರುವರೆಂದು ಆರೋಪಿಸುವದುಂಟು. ಶ್ರೇಷ್ಠತೆಯು ಹುಟ್ಟಿನಿಂದ ಬರುತ್ತಿದ್ದರೆ, ಪಂಡಿತರ ಹೊಟ್ಟೆಯಿಂದ ಮೂರ್ಖರು ಹುಟ್ಟುತ್ತಿರಲಿಲ್ಲ, ಬಲಶಾಲಿಗಳ ಹೊಟ್ಟೆಯಿಂದ ಹೇಡಿಗಳು ಜನಿಸುತ್ತಿರಲಿಲ್ಲ. ಯೋಗ್ಯತೆಯು ದೇವದತ್ತವಾಗಿದ್ದರೆ, ಸಾಲೆ–ಕಾಲೇಜುಗಳ ಮತ್ತು ವಿಶ್ವವಿದ್ಯಾನಿಲಯಗಳ ಅವಶ್ಯಕತೆಯೇ ಇರುತ್ತಿರಲಿಲ್ಲ.

(ಮುಂದುವರಿಯುವದು)

---

# ಶಾಲಾಜೀವನದಲ್ಲಿ ಆಟಗಳ ಸಂಘಟನೆ

ಲೇಖಕರು : ಶ್ರೀ ಆರ್. ಎಸ್. ಸೂರ್ಯವಂಶಿ, ಬಿ.ಎ. (ಆನರ್ಸ), ಡಿ.ಇಡಿ., ಅ.ಮಾ.ಟಿ.ಸಿ.ಎಮ್., ಧಾರವಾಡ

ನಿತ್ಯ ಜೀವನವು ಸುಖಕರವಾಗಬೇಕೆಂದೂ, ಆನಂದಮಯವಾಗಬೇಕೆಂದೂ ಪ್ರತಿಯೊಬ್ಬ ಮನುಷ್ಯನಲ್ಲಿ ಸ್ವಾಭಾವಿಕವಾದ ಮತ್ತು ಬಲವಾದ ಇಚ್ಛೆ ಇರುತ್ತವೆ. ಆದರೆ ಈ ಸುಖವನ್ನು ಮತ್ತು ಆನಂದವನ್ನು ಅನುಭವಿಸುವ ವಸ್ತುವು ಶರೀರವು ಇರುತ್ತದೆ. ಆಂದ ಮೇಲೆ ಶರೀರವು ಸದೃಢವಾಗಿದ್ದರೆ ಬೇಕಾದಷ್ಟು ಸುಖವನ್ನೂ ಆನಂದವನ್ನೂ ಶಾಂತಿಯನ್ನೂ ಪಡೆಯಬಹುದು. ಸಕಲ ಸಂಪತ್ತು ಇದ್ದು ಶರೀರ ಸಂಪತ್ತು ಇಲ್ಲದೇ ಹೋದರೆ ಸಕಲ ಸಂಪತ್ತನ್ನು ಅನುಭೋಗಿಸುವದೆಂತು? "Health is wealth" ಎಂದು ಆಂಗ್ಲ ಭಾಷೆಯಲ್ಲಿ ಒಂದು ಗಾದೆಮಾತಿದೆ. ಎಂದರೆ "ಆರೋಗ್ಯವೇ ಸಂಪತ್ತು" ಆದ್ದರಿಂದ ಆರೋಗ್ಯದ ಸಂಪತ್ತು ಇಲ್ಲದೇ ಹೋದರೆ ಸಕಲ ಸೌಭಾಗ್ಯ ಇದ್ದೂ ಇಲ್ಲದ ಹಾಗೆಯೇ ಸರಿ. ಮೇಲಾಗಿ "ಶರೀರ ಮಾದ್ಯಂ ಖಲು ಧರ್ಮ ಸಾಧನಂ" ಎಂದು ಹಿರಿಯರು ಹೇಳಿದ್ದಾರೆ. ಎಂದರೆ ಧರ್ಮಸಾಧನಕ್ಕಾದರೂ ಶರೀರದ ಸದೃಢತೆಯು ಬಹಳ ಅವಶ್ಯವಾಗಿದೆ ಎಂಬ ಮಾತನ್ನು ಬೇರೆ ಒತ್ತಿ ಹೇಳಬೇಕಾಗಿಲ್ಲ. ಇದರಂತೆಯೇ "Sound mind in Sound body" ಎಂಬ ಇನ್ನೊಂದು ಗಾದೆ ಇರುತ್ತದೆ. ಎಂದರೆ "ಪುಷ್ಟವಾದ ದೇಹದಲ್ಲಿ ಶಿಷ್ಟವಾದ ಮನಸ್ಸು ನೆಲಿಸಿರುವದು. ಆದ್ದರಿಂದ ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾಗಿದ್ದರೆ ವ್ಯಾಯಾಮ ಮಾಡಬೇಕಾಗುತ್ತದೆ; ಆಟಗಳನ್ನು ಆಡಬೇಕಾಗುತ್ತದೆ, ಮತ್ತು ದೇಹವನ್ನು ಶ್ರಮಿಸಬೇಕಾಗುತ್ತದೆ.

ಪ್ರಾಚೀನ ಕಾಲದಲ್ಲಿ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಜನರು ವ್ಯಾಯಾಮ ಮಾಡಿದರು. ಹೀಗೆ ಮಾಡಿದ್ದರಿಂದ ಅವರ ದೇಹದ ಕೆಲವೊಂದು ಅಂಗಗಳು ಮಾತ್ರ ಬೆಳೆದವು. ಉಳಿದ ಸೂಕ್ಷ್ಮವಾದ ಅವಯವಗಳು ನಿರ್ಬಲ ಮತ್ತು ನಿಸ್ಸತ್ವವಾದವು. ನಿಜವಾಗಿ ಹೇಳುವದಾದರೆ ಇದಕ್ಕೆ ಶಾರೀರಿಕ ಶಿಕ್ಷಣವೆನ್ನುವದಿಲ್ಲ. ಶಾರೀರಿಕ ಶಿಕ್ಷಣವೆಂದರೆ ಶಾರೀರಿಕ ಚಟುವಟಿಕೆಗಳ ಮುಖಾಂತರ ದೊರೆಯುವ ಶಿಕ್ಷಣವನ್ನು ಕೊಡುವದೇ ಇಲ್ಲಿ ಮುಖ್ಯ ಉದ್ದೇಶವಾಗಿರುತ್ತದೆ. ಚಟುವಟಿಕೆಗಳು ಇಲ್ಲಿ ಸಾಧನಗಳಾಗಿವೆ. ಮೇಲಿನಂತೆ ಹೇಳಿದಾಗ ಶಾರೀರಿಕ ಶಿಕ್ಷಣವೆಂದರೆ ಶರೀರವನ್ನು ಸುಸಂಸ್ಕೃತವನ್ನಾಗಿ ಮಾಡುವದು ಎಂಬ ಮಾತು ಸ್ಪಷ್ಟವಿರುತ್ತದೆ. ಮನುಷ್ಯನ ಶರೀರದ ಸಕಲ ಅವಯವಗಳ ಬೆಳವಣಿಗೆ ಆಗಬೇಕು. ಕೇವಲ ಕೆಲವೊಂದು ಇಂದ್ರಿಯಗಳ ವೃದ್ಧಿಯಾಗದೆ ಸೂಕ್ಷ್ಮ ಇಂದ್ರಿಯಗಳ ಬೆಳವಣಿಗೆಯೂ ಸಹ ಆಗಬೇಕು. ಎಂದರೆ ಶರೀರದಲ್ಲಿ ಸಮತೂಕ ಕಾಯ್ದುಕೊಂಡಿರಬೇಕು. ಶರೀರದಲ್ಲಿ ಸುಂದರತನ ತಂದುಕೊಳ್ಳಬೇಕು. ದೇಹದ ಪ್ರತಿಯೊಂದು ಅಂಗವು ಪರಿಪೂರ್ಣವಾಗಿ ಬೆಳೆದರೆ ಶರೀರದ ಸಂಸ್ಕೃತಿ ಆಯಿತೆನ್ನಬಹುದು.

ಇದಲ್ಲದೆ ಶಿಕ್ಷಣದ ರಂಗದಲ್ಲಿ ಆಟಗಳಿಗೆ ಬಹಳಷ್ಟು ಮಹತ್ವ ಇರುತ್ತದೆ. ಹೊಸ ಶಿಕ್ಷಣದಲ್ಲಿಯಂತೂ ಆಟಗಳಿಗೆ ಹೆಚ್ಚಿನ ಪ್ರಾಧಾನ್ಯತೆಯು ದೊರೆತಿದೆ. ಇತ್ತಿತ್ತಲಾಗಿ ಆಟಗಳ ಕೂಗು ಹೆಚ್ಚಾಗಿದೆ. ಮತ್ತು

ಆಟಗಳಿಗೆ ಪ್ರತಿಯೊಂದು ರಾಷ್ಟ್ರವೂ ಪ್ರೋತ್ಸಾಹವನ್ನು ಕೊಡುತ್ತಿದೆ.

ಮಕ್ಕಳು ಮಾಡಿ ಮತ್ತು ನೋಡಿ ಅನುಭವ ಪಡೆಯುವಂತೆ ಆಟಗಳನ್ನು ಆಡಿ ಅನುಭವ ಗಳಿಸುವರು. ಮಕ್ಕಳು ಆಟಗಳನ್ನು ಆಡಿ ಸ್ವತಃ ಅನುಭವ ಪಡೆದು ಶಿಕ್ಷಣವನ್ನು ಪಡೆಯುವರು. ಸ್ವಂತ ಅನುಭವದಿಂದ ಬಂದ ಜ್ಞಾನವು ಮತ್ತು ಅನುಭವ ಸೈಜವಾದದ್ದು, ಯೋಗ್ಯವಾದದ್ದು ಮತ್ತು ಹಿರಿದಾದದ್ದು ಇರುತ್ತದೆ. ಮಕ್ಕಳು ಆಟಗಳನ್ನು ಆಡುತ್ತ ಪಾಠಗಳನ್ನೂ ಕೂಡ ಕಲಿಯುವರು.

ಮಕ್ಕಳಿಗೆ ಆಟಗಳೆಂದರೆ ಬಲು ಹಿಗ್ಗು. ಮಕ್ಕಳು ಯಾವಾಗಲೂ ಕೂಡಿ ಆಡಲು ಬಯಸುವರು. ಹೀಗೆ ಮಕ್ಕಳು ಕೂಡಿ ಆಡುವದರಿಂದ ಅವರಲ್ಲಿ ಅನೇಕ ಉತ್ತಮ ಗುಣಗಳು ಬೆಳೆದು ಬರುತ್ತವೆ. ಆಟಗಳ ಮುಖಾಂತರ ಮಕ್ಕಳಲ್ಲಿ ಶಿಸ್ತು ಮತ್ತು ಸಂಘಟನೆ ಬೆಳೆದು ಬರುತ್ತವೆ. ಸಹಕಾರದಿಂದಲೂ, ಪರಸ್ಪರ ಪ್ರೇಮ ದಿಂದಲೂ ಮತ್ತು ಶಾಂತತನದಿಂದಲೂ ಆಟವಾಡಲು ಕಲಿಯುವರು. ಈ ಪ್ರಕಾರ ಆಟಗಳಿಂದ ಪ್ರವೃತ್ತಿಗಳ ಉಪಾತ್ತೀಕರಣ ಮಾಡಲು ಬರುತ್ತದೆ. ನೈತಿಕ ತರಬೇತು ಮಾಡಲು ಸಾಧ್ಯವಿದೆ. ಈ ಪ್ರಕಾರ ಮಕ್ಕಳ ಶಿಕ್ಷಣದಲ್ಲಿ ಆಟಗಳ ಮಹತ್ವ ಇಷ್ಟೊಂದು ಇದ್ದಾಗ ಆಟಗಳನ್ನು ಸುವ್ಯವಸ್ಥಿತವಾಗಿ ಏಕೆ ಸಂಘಟಿಸಬಾರದೆಂಬ ಪ್ರಶ್ನೆಯು ಸಹಜ ಬರುತ್ತದೆ.

ಆಟಗಳ ಸಂಘಟನೆ ಮಾಡುವದು ಎಂತು ಎಂದು ಕೇಳಿದಾಗ ನಾವು ಹೀಗೆ ಹೇಳಬಹುದು. ಪ್ರತಿ ಯೊಬ್ಬ ಮಗುವಿಗೆ ಪ್ರತಿ ದಿವಸ ಆಟವಾಡಲು ಅನುವು ಮಾಡಿಕೊಡಬೇಕು. ಆಟದ ಬೈಲು ಸಾಕಷ್ಟು ವಿಶಾಲ ವಾಗಿದ್ದರೆ ಒಂದೇ ವೇಳೆಗೆ ಎಲ್ಲ ಮಕ್ಕಳಿಗೆ ಆಟವಾಡಿ ಸುವದು ಯೋಗ್ಯ. ಒಂದು ವೇಳೆ ಶಾಲೆಗೆ ಸ್ಥಳದ ಅನಾನುಕೂಲತೆ ಇದ್ದರೆ ಗುಂಪುಗಳನ್ನು ಮಾಡಿ ಕೆಲವು ಗುಂಪುಗಳು ಮುಂಜಾವಿನಲ್ಲಿ ಆಟವಾಡುವಂತೆ ವ್ಯವಸ್ಥೆ ಮಾಡಬೇಕು. ಉಳಿದ ಗುಂಪಿನವರು ಸಂಜೆಯಲ್ಲಿ ಆಟ ವಾಡುವಂತೆ ನೋಡಿಕೊಳ್ಳಬೇಕು. ಇಂದು ಕೆಲವು ಗುಂಪಿನವರು ಸಂಜೆಯಲ್ಲಿ ಆಟವಾಡಿದರೆ ನಾಳಿನ ಉಳಿದ ಗುಂಪಿನವರು ಸಂಜೆಯಲ್ಲಿ ಆಟವಾಡುವಂತೆ ಆಟದ ಅವಧಿಯನ್ನು ಹಾಕಬೇಕು.

ಇಲ್ಲಿ ನಾವು ಅನುಸರಿಸಬೇಕಾದ ಇನ್ನೊಂದು ಮಹತ್ವದ ಪದ್ಧತಿಯೆಂದರೆ 'ಗೃಹ ಪದ್ಧತಿ' ಮೊದಲಿಗೆ ಆಯಾ ವರ್ಗದಲ್ಲಿ ವರ್ಗದ ಗುರುಗಳು, ಮಕ್ಕಳ ಎತ್ತರ ವನ್ನು ತೆಗೆದುಕೊಳ್ಳಬೇಕಾಗುತ್ತದೆ. ಎತ್ತರದ ಪ್ರಕಾರ ಹಿರಿಯ ಮತ್ತು ಕಿರಿಯ ಗುಂಪುಗಳನ್ನು ಮಾಡಬೇಕು. ಆಯಾ ಗುಂಪುಗಳಿಗೆ ಬೇರೆ ಬೇರೆ ಹೆಸರುಗಳನ್ನು ಕೊಡ ಬೇಕು. ಇದಕ್ಕೆ "ಗೃಹ ಪದ್ಧತಿ" ಎಂದು ಕರೆಯುವದುಂಟು. ಅಂತೂ ಗುಂಪುಗಳನ್ನು ಮಾಡುವಾಗ ಮಕ್ಕಳ ಎತ್ತರ ವನ್ನು ಗಮನಿಸಿ ಗುಂಪುಗಳನ್ನು ರಚಿಸಬೇಕು.

ಪ್ರತಿಯೊಂದು ಗುಂಪಿಗೆ ಒಬ್ಬ ಶಿಕ್ಷಕನನ್ನು ನಿಯಮಿಸಬೇಕು. ಆಟದ ಅವಧಿಯಲ್ಲಿ ಆಯಾ ಶಿಕ್ಷಕರು ತಮ್ಮ ಗುಂಪಿನ ಮಕ್ಕಳನ್ನು ಆಟಗಳನ್ನು ಆಡಲು ಹಚ್ಚ ಬೇಕು. ಆದರೆ ಕೇವಲ ಮಕ್ಕಳಿಗೆ ಆಟ ಆಡಲು ಹಚ್ಚಿ ಶಿಕ್ಷಕರು ಕುಳಿತುಕೊಳ್ಳಬಾರದು. ಆಗಾಗ ಮಕ್ಕಳಿಗೆ ಹುರುಪು ಕೊಡಬೇಕು. ಕೆಲವು ಸೇಳೆ ಪ್ರತ್ಯಕ್ಷ ಆಟ ವಾಡಬೇಕು. ಇದರಿಂದ ಮಕ್ಕಳು ಹುರುಪಿನಿಂದ ಆಟಕ್ಕೆ ಬರುತ್ತಾರೆ. ಮತ್ತು ಆಟಗಳಲ್ಲಿ ತುಂಬಾ ಮನಸ್ಸು ಹಾಕುವರು. ಆದ್ದರಿಂದ ಶಿಕ್ಷಕರು ಮಕ್ಕಳ ಆಟದಲ್ಲಿ ಪ್ರತ್ಯಕ್ಷ ಭಾಗವಹಿಸಬೇಕಾಗುತ್ತದೆ. ಮಾರ್ಗದರ್ಶಕನಾಗಿ ಕೆಲಸ ಮಾಡಬೇಕಾಗುತ್ತದೆ. ಮತ್ತು ಸುವ್ಯವಸ್ಥಿತ ರೀತಿಯಿಂದ ಆಟಗಳನ್ನು ಸಂಘಟಿಸಬೇಕಾಗುತ್ತದೆ. ಹೀಗೆ ಮಾಡುವದರಿಂದ ಆಟಗಳಿಗೆ ಹೆಚ್ಚಿನ ಮಹತ್ವವು ಮತ್ತು ಕಳೆಯು ಬರುತ್ತದೆ.

ಶಿಕ್ಷಕನು ಶಾಲಾ ವಿಷಯಗಳಲ್ಲಿ ನಿಪುಣನಿರುವಂತೆ ಆಟಗಳಲ್ಲಿಯೂ ಕೂಡ ನುರಿತವನಿರಬೇಕು. He must be a good player. ಅವನೊಬ್ಬ ಉತ್ತಮ ಆಟಗಾರನಿರಬೇಕು. ಶಿಕ್ಷಕನು ಆಟದಲ್ಲಿ ಪ್ರತ್ಯಕ್ಷ ಭಾಗವಹಿಸದಿದ್ದರೂ ಆಟದ ಮೇಲ್ವಿಚಾರಣೆ ಬಿಟ್ಟಕರ್ಮವಲ್ಲ. ಶಿಕ್ಷಕನು ವರ್ಗದಲ್ಲಿ ಹೊಣೆಹೊತ್ತು, ದಕ್ಷತೆ ವಹಿಸಿ ದುಡಿಯುವಂತೆ ಆಟದ ಬೈಲಲ್ಲಿಯೂ ಕೂಡ ಹೊಣೆಹೊತ್ತು ದಕ್ಷತೆ ವಹಿಸಿ ದುಡಿಯ ಬೇಕಾಗುತ್ತದೆ.

ಎತ್ತರದ ಪ್ರಕಾರ ಮಕ್ಕಳ ಗುಂಪುಗಳನ್ನು ಮಾಡಿದರೆ ಬೇರೆ ಬೇರೆ ಗುಂಪುಗಳಲ್ಲಿ ಬೇರೆ ಬೇರೆ ವರ್ಗದ ಮಕ್ಕಳೂ ಸೇರಬಹುದು. ಹೀಗಾಗುವದರಿಂದ ಕೆಳಗಿನ

ವರ್ಗದ ಬಾಲಕರು ಹಿರಿಯ ವರ್ಗದ ಬಾಲಕರಿಗೆ ಅಂಜುವ ಸ್ವಭಾವ ಕಡಿಮೆ ಆಗುತ್ತದೆ. ಬೇರೆ ಬೇರೆ ವರ್ಗದ ಬಾಲಕರು ಕೂಡಿಕೊಂಡು ಆಡುವದನ್ನು ಕಲಿಯುವರು. ಇದರಿಂದ ತಮ್ಮ ಗೃಹಗಳ ಬಗ್ಗೆ ಅಭಿಮಾನವನ್ನು ಹುಟ್ಟಿಸಬಹುದು. ಈ ಪ್ರಕಾರ ಶಾಲೆಯ ಆಟಗಳಲ್ಲಿ ಮಕ್ಕಳ ಮನಸ್ಸು ಹಾಕಿಸಬಹುದು.

ಕೆಲವೊಂದು ಸಲ ಆಯಾ ಗುಂಪುಗಳಲ್ಲಿ ಆಟಗಳ ಸ್ಪರ್ಧೆ ಇಡಬಹುದು. ಯಶಸ್ವಿಯಾದ ಗುಂಪುಗಳಿಗೆ ಬಹುಮಾನ ಕೊಡಬಹುದು ಹೀಗೆ ಮಾಡುವದರಿಂದ ಮಕ್ಕಳು ಆಟಗಳಲ್ಲಿ ಹೆಚ್ಚು ಮನಸ್ಸು ಹಾಕಿ ತಮ್ಮ ದೈಹಿಕ ಬೆಳವಣಿಗೆ ಮಾಡಿಕೊಳ್ಳಬಹುದು. ಆಟದಲ್ಲಿ ಅವಧಾನ, ಸ್ಪರ್ಧೆ, ಕಾರ್ಯಸಾಧನೆ ಮುಂತಾದ ಮಾನಸಿಕ ಪ್ರಯೋಜನಗಳಾಗಿ ಅದರಿಂದ ವಿದ್ಯಾಭ್ಯಾಸಕ್ಕೆ ಸಹಾಯಕಾರಿ ಯಾಗುವದು. ಅಲ್ಲದೆ ಆಟಗಳಿಂದ ಸಾಮಾಜಿಕ ನೈತಿಕ ಲಾಭಗಳಾಗುವವು. ಅವರಲ್ಲಿ ಐಕ್ಯಮತ ಬೆಳೆಯುವದು.

ಹಳೆಯ ಶಿಕ್ಷಣದಲ್ಲಿ ಆಟಗಳು ಪಠ್ಯೇತರ ಚಟುವಟಿಕೆಗಳಾಗಿದ್ದವು. ಆಗ ಬೇಸರ ಕಳೆದು ಕೊಳ್ಳಲು ಆಟಗಳನ್ನು ಆಡಿದರು. ಆಟಗಳನ್ನು ಆಡಿಸುವದು ತಮ್ಮ ಹೊಣೆ ಅಲ್ಲವೆಂದು ಶಿಕ್ಷಕರು ಬಗೆದಿದ್ದರು. ಆದರೆ ಹೊಸ ಶಿಕ್ಷಣದ ಪ್ರಕಾರ ಆಟಗಳು ಪೂರಕ ಚಟುವಟಿಕೆಗಳಾಗಿವೆ ಆಟಗಳಿಂದ ಮಕ್ಕಳ ಶೀಲಸಂವರ್ಧನೆ ಆಗುವದು ಆದ್ದರಿಂದ ಆಟಗಳು ಪಠ್ಯವಿಷಯದ ಭಾಗವೆಂದು ತಿಳಿಯಬೇಕು. ಮಕ್ಕಳಲ್ಲಿರುವ ಸಹಜ ಮತ್ತು ಸುಪ್ತ ಶಕ್ತಿಗಳ ಬೆಳವಣಿಗೆ ಮಾಡಿಸಬೇಕು. ಇದೇ ಮಾತನ್ನು ಶ್ರೀ ಮುದಲಿಯಾರ ಸಮಿತಿಯವರು ತಮ್ಮ ವರದಿಯಲ್ಲಿ ಸಾರಿ ಹೇಳಿದ್ದಾರೆ.


ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

**ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ**

## ಆದರ್ಶ ಚಿತ್ರಕಲಾ

( Ideal Drawing )

**ಶ್ರೀ ಎಸ್. ಕೆ. ಜೋಶಿ, ಮತ್ತು**

**ಶ್ರೀ ಜಿ. ಡಿ. ವಾಲಿ.**

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. ಬೆಲೆ ೧—೧೨—೦ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಇದು ಕನ್ನಡದಲ್ಲಿಯೂ ಸಿಗುತ್ತದೆ,

**ಜಿ. ವಾಯ್. ರಾಣೆ**

**ಪ್ರಕಾಶಕರು, ೩೪೩, ಕೆಸಬಾ ಪೇಟ ಪುಣೆ.**



೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

**ಶೇಲಾರ ಕೃತ**

## ಪ್ರಾಥಮಿಕ ಭೂಮಿತಿ

**[ಕ್ಷೇತ್ರಫಲ ಘನಫಲ ಸಹಿತ]**

೪ ರಿಂದ ೭ ನೇಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

**ಬೆಲೆ: ೧ರೂ. ೮ಆಣೆ ಮಾತ್ರ**

ದೊರೆಯುವ ಸ್ಥಳ:—

**ಸಾಯಿ ಪಬ್ಲಿಶಿಂಗ್ ಹಾವುಸ್,**
**ವಿಜಯ ರೋಡ, ಧಾರವಾಡ.**

## ಜೀವನ ಶಿಕ್ಷಣ ಶಾಲೆಗಳಲ್ಲಿ

# ವಾಚನಾಲಯ ಹಾಗೂ ಚರ್ಚಾಕೂಟಗಳ ಸ್ಥಾನ

ಲೇಖಕರು ; ಶ್ರೀ ಎನ್. ಬಿ. ಮುದಕವಿ, ಆ.ಡೆ.ಎ.ಇ., ಹಾವೇರಿ.

ಪ್ರಜಾರಾಜ್ಯದಲ್ಲಿ ಪ್ರಜೆಗಳು ಅಕ್ಷರಸ್ಥರೂ ವಿದ್ಯಾವಂತರೂ ಸುಸಂಸ್ಕೃತರೂ ಆದರೆ ಮಾತ್ರ ಅವರ ವಿಚಾರಗಳೂ ಕೆಲಸಗಳೂ ಮಹತ್ವವನ್ನು ಪಡೆಯುತ್ತವೆ. ವ್ಯವಸಾಯವು ಉತ್ತಮಗೊಳ್ಳುತ್ತದೆ. ದೇಶಬಾಂಧವರಲ್ಲಿ ಪರಸ್ಪರ ಸೌಹಾರ್ದವು ಬೆಳೆದು ಭಾರತೀಯ ಸಮಾಜವು ಹೆಚ್ಚು ಸಂಪನ್ನವೂ ತೇಜಃಶಾಲಿಯೂ ಆಗುವದು. ಈ ಕಾರಣದಿಂದ ಶಾಲಾ ವಾಚನಾಲಯದ ಕಾರ್ಯ ನರ್ವಿಗಳು ತಮ್ಮ ಸಂಸ್ಥೆಗಳ ಮುಖಾಂತರ ಅಕ್ಷರ ಪ್ರಸಾರ, ದೇಶಭಾಷೆ ಮತ್ತು ಮಾತೃಭಾಷೆಯ ಸೇವೆಯನ್ನು ಕೈಕೊಳ್ಳಬೇಕು. ಅಕ್ಷರ ಪ್ರಸಾರವು ಸಫಲವಾಗಬೇಕಾದರೆ ವಾಚನಾಲಯದ ಅನುಕೂಲತೆ ಇರಬೇಕು. ಭಾಷಾ ಪ್ರೇಮವು ಹುಟ್ಟಿ ಬೆಳೆಯಬೇಕಾದರೆ ಅದರ ಜ್ಞಾನವಾಗಬೇಕು. ಎಂಬುದನ್ನು ನಾವು ತಾತ್ವಿಕವಾಗಿ ಒಪ್ಪಿದರೆ ವಾಚನಾಲಯದ ಅವಶ್ಯಕತೆ ನುನದಟ್ಟಾಗುವದು. ಶಾಲಾ ವಾಚನಾಲಯದ ಕಾರ್ಯ ನರ್ವಿಗಳು ತಮ್ಮ ಕಮೀಟಿಗಳಲ್ಲಿ (ಕಾರ್ಯಕಾರೀ ಮಂಡಲ) ಗೌರವ ಸದಸ್ಯರನ್ನು ಆರಿಸುವಾಗ ಅವರ ಹೆಸರನ್ನು ನರ್ಚಸ್ಸಿನ ಮೇಲೆ ಆರಿಸದೆ ನಿಜವಾದ ಸೇವಾಕಾಂಕ್ಷೆಯುಳ್ಳ ಜನರನ್ನು ಆರಿಸಿಕೊಳ್ಳಬೇಕು. ಅಂದರೆ ಅವರಿಗೆ ಸಹಾಯವು ದೊರೆತು ಮುಂದಿನ ಕೆಲಸಕ್ಕೆ ಅನುಕೂಲ ನಾಗುವದು. ದಕ್ಷರಾದ ಕಾರ್ಯದರ್ಶಿಗಳು ಇದ್ದಲ್ಲಿ ಹಣದ ಅಥವಾ ಪುಸ್ತಕ ಸಂಗ್ರಹದ ಸಮಸ್ಯೆ ಶಾನಾಗಿಯೇ ಕಡಿಮೆಯಾಗುತ್ತದೆ.

" ವಾಚನಾಲಯವನ್ನು ಸ್ಥಾಪಿಸಿರಿ ಎಂದು ಸೂಚಿಸಿದಾಗ ಶಿಕ್ಷಕರಾಗಲಿ, ಕಾರ್ಯಕರ್ತರಾಗಲಿ ಎದೆಗುಂದುವ ಕಾರಣವಿಲ್ಲ. ಅನುಕೂಲಸ್ಥರನ್ನು ಸದಸ್ಯರನ್ನಾಗಿ ಮಾಡಿಕೊಂಡು ಮದುವೆ ಮುಂ. ಸಂಭ್ರಮದ ಪ್ರಸಂಗಗಳಲ್ಲಿ ಈ ಸಂಸ್ಥೆಗೆ ದಾನ, ಕಾಣಿಕೆಗಳನ್ನು ಸ್ವೀಕರಿಸಬೇಕು. ಜನತೆಯಲ್ಲಿ ದಾನದ ಪ್ರೇರಣೆಯನ್ನು ಹುಟ್ಟಿಸುವ ಮಹಾ ಕಾರ್ಯವು ನಿಃಸ್ವಾರ್ಥ ದೃಷ್ಟಿಯಿಂದಲೂ ಸೇವಾ ಭಾವನೆಯಿಂದಲೂ ದುಡಿದಾಗಲೇ ಮಾತ್ರ ನೆರವೇರುವದು ಎಂಬುದನ್ನು ಲಕ್ಷದಲ್ಲಿಟ್ಟುಕೊಂಡು ಸಾಗಬೇಕು.

ವಾಚನಾಲಯದ ಸೆಕ್ರೆಟರಿ ಅಥವಾ ಮುಖ್ಯಸ್ಥನಿಗೆ ವಾಚನಾಲಯದ ಮಹತ್ವವು ಪೂರ್ಣವಾಗಿ ಮನದಟ್ಟಾಗಿರಬೇಕು. ಅಸ್ಪಷ್ಟ ಕಲ್ಪನೆಯಿಂದ ಈ ಕೆಲಸ ಚನ್ನಾಗಿ ಸಾಗಲಾರದು. ಅವನು Five laws of Library Science ( ವಾಚನಾಲಯದ ಐದು ನಿಯಮಗಳು ) ಎಂಬ ಗ್ರಂಥದಲ್ಲಿಯ—

(೧) ಗ್ರಂಥಗಳು ಓದುಗರಿಗಾಗಿಯೇ ಇರುವವು.

(೨) ಪ್ರತಿ ವಾಚಕನಿಗೆ ಬೇಕಾದ ಪುಸ್ತಕವು ದೊರೆಯಬೇಕು.

(೩) ಪ್ರತಿ ಪುಸ್ತಕಕ್ಕೆ ಯೋಗ್ಯ ಓದುಗನು ಸಿಗಬೇಕು.

(೪) ಓದುಗನ ಮತ್ತು ಕಾರ್ಯದರ್ಶಿಯ ವೇಳೆ ಉಳಿಯಬೇಕು.

(೫) ವಾಚನಾಲಯವು ದಿನದಿನಕ್ಕೆ ಬೆಳೆಯುತ್ತಿರುವ ಸಂಸ್ಥೆ.

ಈ ಪಂಚ ತತ್ವಗಳನ್ನು ಚನ್ನಾಗಿ ಅರಿತವನಾಗಿರಬೇಕು.

ವಾಚನಾಲಯದ ಉಪಯೋಗವು ಇಲ್ಲವೆ ಅದರ ಮಹತ್ವವು ಬಾಲಕರಿಗಾಗಲಿ ಇಲ್ಲವೆ ಅಜ್ಞ ಜನರಿಗಾಗಲಿ ಒಮ್ಮೆಲೆ ಗೊತ್ತಾಗುವದಿಲ್ಲ. ಅಂಥಲ್ಲಿ ಶಿಕ್ಷಕರು ವರ್ಗಕ್ಕೆ ಅನುನಾರವಾಗಿ ಪುಸ್ತಕಗಳನ್ನು ವರ್ಗೀಕರಣ ಮಾಡಿ ಅವರಿಗೆ ಓದಲಿಕ್ಕೆ ಪ್ರೋತ್ಸಾಹ ಕೊಡಬೇಕು. ಪಠ್ಯೇತರ ಚಟುವಟಿಕೆಗಳ ಅವಧಿಯಲ್ಲಿ ಅವರಿಗೆ ಓದಲು ಶಾಲೆಯಲ್ಲಿಯೇ ಕೊಡಬಹುದು. ಇಲ್ಲವೆ ತಮ್ಮ ತಮ್ಮ ಮನೆಗೆ ಓದಲು ಕೊಡಬಹುದು. ಸರತಿಗೆ ಎರಡು

ಮೂರು ಪುಸ್ತಕಗಳಂತೆ ಕೊಟ್ಟು ವಾರಾಂತ್ಯದಲ್ಲಿ ತಿರುಗಿ ತೆಗೆದುಕೊಳ್ಳುವ ವ್ಯವಸ್ಥೆ ಇರಬೇಕು. ಮೊದಮೊದಲು ಇದು ಇಬ್ಬರಿಗೂ ಸ್ವಲ್ಪ ತೊಂದರೆ ಎನಿಸಿದರೂ ಮುಂದೆ ಅದು ರೂಢಿಯಾಗಿ ವಾಚನಾಲಯದಿಂದ ಪುಸ್ತಕಗಳನ್ನು ತಾನೇ ತೆಗೆದುಕೊಂಡು ಹೋಗಿ ಓದುವ ರೂಢಿಯು ಚನ್ನಾಗಿ ಆಗುತ್ತದೆ. ಸಾಮಾನ್ಯವಾಗಿ ವಾಚನಾಲಯದ ಕಾರ್ಯದರ್ಶಿಯು ವಾಚನಾಲಯದಲ್ಲಿ ಇದ್ದ ಮತ್ತು ಹೊಸದಾಗಿ ಬಂದ ಎಲ್ಲ ಪುಸ್ತಕಗಳನ್ನು ಮೊದಲು ತಾನು ಓದಿದವನಿರಬೇಕು. ಅಂದರೆ ಮಾತ್ರ ಅವನು ಓದುಗರ ಅಭಿರುಚಿಯನ್ನು ಅರಿತು ಅವರಿಗೆ ಸರಿಯಾದ ಮಾರ್ಗದರ್ಶನ ಮಾಡಬಲ್ಲನು.

ಶಾಲಾ ವಾಚನಾಲಯವು ಬೆಳೆಯಬೇಕಾದರೆ, ಕಾರ್ಯದರ್ಶಿಯು ಅಲ್ಲಿಯ ಜನರ ಓದಿನ ಮಟ್ಟ, ಸಂಸ್ಕೃತಿಯ ಮಟ್ಟವನ್ನು ಮತ್ತು ಅಲ್ಲಿಯ ಜನರ ಅಭಿರುಚಿಯನ್ನು ಅರಿತವನಾಗಿರಬೇಕು. ಅವರ ಅಭಿರುಚಿಗೆ ತಕ್ಕಂತೆ ಪುಸ್ತಕಗಳನ್ನು ತರಿಸಿ ವರ್ಣಿಸಿ ಹೇಳಿ, ಅದನ್ನು ಓದಲಿಕ್ಕೆ ಹಚ್ಚುವ ಪ್ರಯತ್ನ ಮಾಡಿದರೆ ಮುಂದೆ ಅವನಿಗೆ ವರ್ಗಣಿ ಹಣದ ತೊಂದರೆಯೂ ಬರಲಿಕ್ಕಿಲ್ಲ. ವಾಚನಾಲಯದ ಬೆಳವಣಿಗೆಯೂ ಆದೀತು.

ಹಳ್ಳಿಯ ವಾಚನಾಲಯ ಮೊದಲುಗೊಂಡು ತಾಲೂಕಾ ವಾಚನಾಲಯ ಹಾಗೂ ಪ್ರಾದೇಶಿಕ ಗ್ರಂಥಾಲಯದ ವರೆಗೆ ಸರಕಾರವು ಅದರ ಸ್ಥಾನಕ್ಕೆ ತಕ್ಕಂತೆ ಸಹಾಯ ಧನವನ್ನು ಕೊಡುವದು. ಈ ಸಹಾಯ ಧನವು ಸ್ವಯಂಪೂರ್ಣವಾಗಿ ಅಲ್ಲಿಯ ಕೊರತೆಯನ್ನು ಹೋಗಲಾಡಿಸಲು ಸಮರ್ಥವಾಗದಿದ್ದರೂ ದೊಡ್ಡ ದೇಣಿಗೆದಾರನಂತೆ ಸಹಾಯಮಾಡುವದು. ಕೇವಲ ಸರಕಾರವನ್ನೇ ಅವಲಂಬಿಸಿ ಕೂಡ್ರದೇ ನಾಡಿನ ಶ್ರೀಮಂತರ ಮತ್ತು ಉದಾರಿಗಳ ಸಹಾಯದಿಂದ ವಾಚನಾಲಯವನ್ನು ಉತ್ತಮ ಸಂಸ್ಥೆಯನ್ನಾಗಿಸುವ ಹೊಣೆ ಅಲ್ಲಲ್ಲಿಯ ಸಮಾಜ ಶಿಕ್ಷಣ ಕಾರ್ಯಕರ್ತರನ್ನು ಮತ್ತು ವಾಚನಾಲಯದ ಸೆಕ್ರೆಟರಿಗಳನ್ನು ಅವಲಂಬಿಸಿದೆ.

ಈಗ ಎಷ್ಟೋ ಜೀವನ ಶಿಕ್ಷಣ ಶಾಲೆಗಳಲ್ಲಿ ಶಿಕ್ಷಕರ ಉತ್ಸಾಹ ಉಮೇದುಗಳಿಂದ ಅಲ್ಲಲ್ಲಿ ವಾಚನಾಲಯಗಳು ಸ್ಥಾಪಿಸಲ್ಪಟ್ಟಿವೆ. ಇವು ಹಳ್ಳಿಯ ವಾಚನಾಲಯದ ಯೋಜನೆಯಲ್ಲಿಯೂ ಬರುವದಿಲ್ಲ. ವಾಚನಾಲಯದ ಬೆಳವಣಿಗೆಯ ಆಕಾಂಕ್ಷೆ ಇದ್ದರೂ ಈಗಿನ ನಿಯಮದ ಪ್ರಕಾರ ಪ್ರತಿ ಶಿಕ್ಷಕರ ಹಾಗೂ ಬಾಲಕರ ಮೇಲೆ ಒತ್ತಾಯವನ್ನು ತರುವಂತೆ ಇಲ್ಲ. ಜಿಲ್ಲಾ ಸ್ಕೂಲ್ ಬೋರ್ಡ ಸಂಸ್ಥೆಯು ಈ ದಿಶೆಯಲ್ಲಿ ಇತ್ತೀಚೆಗೆ ಪುಸ್ತಕಗಳ ರೂಪದಿಂದ ಕಲವೊಂದು ಸಹಾಯವನ್ನು ಮಾಡುತ್ತಿರುವದೇನೋ ನಿಜ; ಆದರೆ ಇದು ಅಲ್ಲಿಯ ಕೊರತೆಯನ್ನು ಪೂರ್ಣವಾಗಿ ನೀಗಿಸುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಕೆಲವೊಂದು ಅಲ್ಪ ಪ್ರಮಾಣದ ಮೇಲೆ ಶಾಲಾ ವಾಚನಾಲಯದ ಫೀ ಎಂದು ಸ್ವೀಕರಿಸಿ ಆ ಹಣದಿಂದ ಶಿಕ್ಷಕರಿಗೂ ಮತ್ತು ಬಾಲಕರಿಗೂ ಅನುಕೂಲವಾಗುವಂತಹ ಸಾಹಿತ್ಯವನ್ನು ಒದಗಿಸಿಕೊಳ್ಳಬೇಕು. ಸರಕಾರವಾಗಲಿ ಜಿಲ್ಲಾ ಸಂಸ್ಥೆಯವರಾಗಲಿ ಸಾಹಿತ್ಯವನ್ನು ಒದಗಿಸಿ ಕೊಟ್ಟರೆ ವಾಚನಾಲಯದ ಬೆಳವಣಿಗೆಯಾಗಿ ತನ್ಮೂಲಕ ಬಾಲಕರಲ್ಲಿ ವಾಚನಾಭಿರುಚಿ ಹೆಚ್ಚುತ್ತ ಹೋಗುವದರಲ್ಲಿ ಸಂಶಯವಿಲ್ಲ. ವಾಚನಾಲಯದಲ್ಲಿದ್ದ ಪುಸ್ತಕಗಳ ಸರಿಯಾದ ಉಪಯೋಗವನ್ನು ಮಾಡಿಕೊಳ್ಳುವ ಪ್ರವೃತ್ತಿಯು ಮಕ್ಕಳಲ್ಲಿ ಬೆಳೆಯಬೇಕಾದರೆ ಅವರಲ್ಲಿ ವಿಷಯ ಸಂಗ್ರಹದ ಪಿಪಾಸೆ ಹೆಚ್ಚಾಗಬೇಕಾಗುವದು. ಈ ಜ್ಞಾನ ಲಾಲಸೆಯು ಚರ್ಚಾಕೂಟಗಳಿಂದ ಹೆಚ್ಚುತ್ತ ಹೋಗುವದೆಂದು ಕಂಡು ಬಂದ ಮಾತಾಗಿದೆ. ಈ ಚರ್ಚಾಕೂಟಗಳ ಬೆಳವಣಿಗೆಯೂ ವಾಚನಾಲಯದ ಅಭಿವೃದ್ಧಿಯೂ ಒಂದಕ್ಕೊಂದು ಪೂರಕವಾಗಿ ಬೆಳೆಯಬೇಕು. ಪ್ರಜಾರಾಜ್ಯದಲ್ಲಿ ಇದಕ್ಕೆ ಒಳ್ಳೆ ಮಹತ್ವದ ಸ್ಥಾನವಿದೆ ಎಂಬುದನ್ನು ಶಿಕ್ಷಕರು ಇನ್ನೂ ಅರಿಯಬೇಕಾಗಿದೆ.

ಚಿಕ್ಕ ಮಕ್ಕಳಲ್ಲಿ ವಾಚನಾಭಿರುಚಿ ಅಥವಾ ಮಾತಾಡುವ ಕಲೆಯನ್ನು ಉತ್ಪನ್ನ ಮಾಡುವದು ಮಾತೃಭಾಷೆಯ ಬೆಳವಣಿಗೆಯ ಒಂದು ಸಾಧನವಾಗಿದೆ. ಚರ್ಚಾಕೂಟಗಳ ಮುಖಾಂತರವಾಗಿ ನಿತ್ಯಜೀವನಕ್ಕೆ ಉಪಯೋಗ ಬೀಳುವ ಈ ಶಕ್ತಿಯನ್ನು ಬೆಳೆಸ ಬಹುದಾಗಿದೆ. ಉತ್ತಮ ರೀತಿಯಿಂದ ಮಾತಾಡುವ ಶಕ್ತಿಯುಳ್ಳ ಮನುಷ್ಯನು ನಾಲ್ಕು ಜನರ ಪ್ರೀತಿಗೆ ಪಾತ್ರನಾಗಿ ಧೈರ್ಯವನ್ನೂ ಸಂತೋಷವನ್ನೂ ಹೊಂದುವನು. ಅದೇ ಮಾತಿನಲ್ಲಿ ದೋಷವಿರುವ ಮನುಷ್ಯನು ಜನರಿಗೆ ಪ್ರಿಯನಾಗದೆ ನಾಲ್ಕು ಜನರಲ್ಲಿ ಬೆರೆಯದೆ ಮೌನವಾಗಿ

ಮೂಲೆಯಲ್ಲಿ ಕುಳಿತು ಬಿಡುವನು; ಹಿಂದಾಗುವನು. ವೈಯಕ್ತಿಕ ಮಾತಿನ ದೋಷಗಳು ಅಥವಾ ಗುಣಗಳು ವ್ಯಕ್ತಿಯ ಗುಣದ ಮೇಲೆ ಪ್ರಭಾವ ಬೀರುವವೆಂದು ತಜ್ಞರು ಹೇಳುತ್ತಾರೆ, ಅಂದ ಮೇಲೆ ಮಗುವಿಗೆ ಸರಿಯಾಗಿ ಮಾತಾಡಲಿಕ್ಕೂ ತನ್ನ ಮನಸ್ಸಿನಲ್ಲಿ ಇದ್ದದ್ದನ್ನು ಇತರರ ಎದುರಿಗೆ ಸ್ಪಷ್ಟವಾಗಿ ಧೈರ್ಯದಿಂದ ಮಂಡಿಸಲಿಕ್ಕೂ ಕಲಿಸುವದು ಎಷ್ಟು ಮಹತ್ವದ್ದಾಗಿದೆ ಎಂಬುದನ್ನು ಗುರುಗಳಾದವರು ತಿಳಿದುಕೊಳ್ಳಬೇಕು.

ಶಾಲೆಯಲ್ಲಿರುವ ಚರ್ಚಾ ಕೂಟಗಳಲ್ಲಿ ಸಾಮಾನ್ಯವಾಗಿ ಮೊದಲನೇ ವರ್ಗದಿಂದ ನಾಲ್ಕನೇ ವರ್ಗದ ವರೆಗೆ ಒಂದು, ೫ನೆಯ ವರ್ಗದಿಂದ ೪ಳನೆಯ ವರ್ಗದ ವರೆಗೆ ಒಂದು ಹೀಗೆ ಎರಡು ಗುಂಪುಗಳನ್ನು ಮಾಡಬಹುದು. ಮೊದಲನೇ ಗುಂಪಿನಲ್ಲಿ ಬರುವ ಮಕ್ಕಳು ೧೦-೧೧ ವಯಸ್ಸಿನ ಒಳಹೊರಗೆ ಇರುವದರಿಂದ ಅವರು ಗ್ರಹಿಸಿ ಕೊಂಡ ವಿಷಯಗಳ ಮೇಲೆ ಇಲ್ಲವೇ ಅವರಿಗೆ ಪರಿಚಿತವಿರುವ ವಿಷಯಗಳನ್ನು ಆರಿಸಿಕೊಂಡು ಅದನ್ನು ಸಮರ್ಥಿಸಿ ಮಾತಾಡಲಿಕ್ಕೆ ಸಾಕಷ್ಟು ಅವಕಾಶ ಕೊಡಬೇಕು. ವಿಷಯಗಳನ್ನು ಆರಿಸುವಾಗ್ಗೆ ಶಿಕ್ಷಕನು ತನ್ನ ಜಾಣತನವನ್ನು ಉಪಯೋಗಿಸುವದು ಒಳ್ಳೆಯದು. ಸರಿಯಾದ ವಿಷಯಗಳ ಆಯ್ಕೆಯಿಂದ ತನ್ನ ಕೆಲಸವೂ ಹಗುರಾಗುವದು; ಮತ್ತು ಮಕ್ಕಳ ಸಾಮಾನ್ಯ ಜ್ಞಾನವೂ ಹೆಚ್ಚಾಗುವದು. ಈ ಗುಂಪಿನಲ್ಲಿ ಎಷ್ಟೋ ವಿಷಯಗಳನ್ನು ಪಠ್ಯ ಪುಸ್ತಕದಿಂದಲೇ ಆರಿಸಲು ಬರುವಂತಿದೆ. ಶಿಕ್ಷಕನು ಅವುಗಳ ಒಂದು ಪಟ್ಟಿಯನ್ನು ತಯಾರಿಸಿಟ್ಟುಕೊಳ್ಳುವದು ಉತ್ತಮ. ಉದಾ — ಅಡವಿಯ ನಾಯಿ ಹೆಚ್ಚೋ ಊರ ನಾಯಿ ಹೆಚ್ಚೋ ? ಬಾವಿಯ ನೀರು ಉತ್ತಮವೋ ಹೊಂಡವ ನೀರು ಉತ್ತಮವೋ ? ಚಕ್ಕಡಿ ಮೇಲೋ ಮೋಟಾರು ಮೇಲೋ ಮುಂ. ಹೀಗೆ ಸಣ್ಣ ಸಣ್ಣ ವಿಷಯಗಳನ್ನು ಒಂದೊಂದಾಗಿ ಇಡಿಸಿ ಅದರ ಮೇಲೆ ತಮಗೆ ತಿಳಿದ ನಾಲ್ಕು ಮಾತುಗಳನ್ನು ಸ್ಪಪ್ರೇರಣೆಯಿಂದಾಗಲಿ ಇಲ್ಲವೆ ಒತ್ತಾಯದಿಂದಾಗಲಿ ಮಾತನಾಡ ಹಚ್ಚುವದು, ನಂತರ ಮತಕ್ಕೆ ಹಾಕಿಸುವದು, ಬಹುಮತದಿಂದ ಬಂದ ವಿಷಯಗಳ ಮೇಲೆ ಅವುಗಳ ಗುಣಾವಗುಣಗಳನ್ನು ವಿಮರ್ಶಿಸಿ ತನ್ನ ನಿರ್ಣಯವನ್ನು ಕೊಡುವದು, ಹೀಗೆ ನಿರಂತರವಾಗಿ ಸಾಗಿದಲ್ಲಿ ವಕ್ತೃತ್ವ ಕಲೆಯು ಮೆಲ್ಲಗೆ ಮಕ್ಕಳಲ್ಲಿ ಮೂಡತೊಡಗುವದು.

ಎರಡನೇ ಗುಂಪಿನ ವಿದ್ಯಾರ್ಥಿಗಳಲ್ಲಿ ಸ್ವಲ್ಪ ಗಡುಚಾದ ವಿಷಯಗಳನ್ನು ಮೇಲಿನ ಮಾದರಿಯಲ್ಲಿಯೇ ಆಯ್ಕೆ ಮಾಡಿ ವಿಷಯಗಳನ್ನು ಚರ್ಚೆಗಾಗಿ ಇಟ್ಟು ಸಾಗಬೇಕು. ಇಂತಹ ಚಟುವಟಿಕೆಗಳು ಶಾಲೆಯ ಪ್ರಗತಿಗೆ ಹೇಗೆ ಅವಶ್ಯಕಗಳಾಗಿವೆ ಎಂಬುದನ್ನು ಸಾರ್ವಜನಿಕರಿಗೆ ತೋರಿಸಿಕೊಡಬೇಕಲ್ಲದೆ ಶಾಲೆಯು ಕ್ರಿಯಾಶೀಲ ಚಟುವಟಿಕೆಗಳ ಕೇಂದ್ರವಾಗಿದೆ ಎಂಬುದನ್ನು ಮನಗಾಣಿಸಿ ಕೊಡಬೇಕು. ಶಿಕ್ಷಕರು ಕ್ಷುದ್ರ ಹಳ್ಳಿಗಳ ರಾಜಕಾರಣಗಳಲ್ಲಿ ತೊಡಗಿ ವೇಳೆಯ ದುರುಪಯೋಗ ಮಾಡದೆ ಇಂತಹ ಉತ್ತಮ ಚಟುವಟಿಕೆಗಳಲ್ಲಿ ತೊಡಗಿ ಪಾಲಕರ ಮನಸ್ಸಿನಲ್ಲಿ ಶಿಕ್ಷಕರು "ಮಕ್ಕಳ ಕಲ್ಯಾಣಕರ್ತರು" ಎಂಬ ಭಾವನೆಯನ್ನು ಹುಟ್ಟಿಸಬೇಕು.

ಚಟುವಟಿಕೆಗಳಿಂದ ಅವ್ಯಾಹತ ಚಟುವಟಿಕೆಗಳಿಂದ ವಿದ್ಯಾರ್ಥಿಗಳ ಬುದ್ಧಿ ಚುರುಕಾಗಿ ಶಿಕ್ಷಕನ ಕೆಲಸವೂ ಉತ್ತಮವಾಗುವದು. ಉದಾ—ಸಾಮಾನ್ಯ ಜ್ಞಾನದ ಅವಧಿಯಲ್ಲಿ ನಾಕುವ ಪ್ರಾಣಿಗಳ ಮಹಿಮೆಯನ್ನು ಕೊಡುವದಿದೆ ಎಂದು ತಿಳಿಯುವಾ. ಅದನ್ನು ಶಿಕ್ಷಕನು ತನ್ನ ಉಪನ್ಯಾಸ ಪದ್ಧತಿಯಿಂದ ಮೂವತ್ತು ಮಿನಿಟೋ ಅಥವಾ ನಾಲ್ವತ್ತು ಮಿನಿಟೋ ಹೇಳಿದರೆ ಸೂಕ್ಷ್ಮ ಬುದ್ಧಿಯ ನಾಲ್ಕಾರು ಮಕ್ಕಳು ಮಾತ್ರ ಗ್ರಹಿಸುವರು. ಎಲ್ಲರಿಗೂ ಉಪಯೋಗ ಬೀಳುವದಿಲ್ಲ. ಚರ್ಚಾಕೂಟದ ಮಾದರಿಯ ಮೇಲೆ ಸಾಮಾನ್ಯ ಜ್ಞಾನದಲ್ಲಿ ಬರುವ ಬಹು ವಿಷಯಗಳನ್ನು ಒಂದೊಂದಾಗಿ ಆರಿಸಿಕೊಂಡು ಕಲಿಸಿದಲ್ಲಿ ಮಕ್ಕಳ ಮನಸ್ಸಿನಲ್ಲಿ ಅವು ಸ್ಪುಟವಾಗಿ ಬೇರೂರಿ ನಿಲ್ಲುವವು. ವಿಷಯ ಜ್ಞಾನವೂ ಉತ್ತಮವಾಗುವದು. ಅದನ್ನೇ ಟಿಪ್ಪಣಿಗಳಲ್ಲಿ ಬರೆಯಿಸಿದರೆ ಬರೆಹಗಳಲ್ಲಿಯೂ ಸಾಕಷ್ಟು ಸುಧಾರಣೆಯಾಗುವದು. ಗುರುಗಳಾದವರು ಇದರ ಪ್ರಯೋಗಮಾಡಿ ನೋಡಿ ಕೊಳ್ಳಬೇಕು.

ಎಷ್ಟೋ ಶಾಲೆಗಳಲ್ಲಿ ಚರ್ಚಾಕೂಟದ ಅವಧಿಗಳು ವೇಳಾಪತ್ರಿಕೆಯಲ್ಲಿಯೇ ಉಳಿಯುತ್ತಿರುವದರಿಂದ ಇಲ್ಲವೆ ಈ ವೇಳೆಯನ್ನು ಬೇರೆ ವಿಷಯಗಳಿಗಾಗಿ ಉಪಯೋಗಿಸಿ

ಕೊಳ್ಳುತ್ತಿರುವದರಿಂದ ಅಥವಾ ಚರ್ಚಾಕೂಟಗಳ ನಿಜವಾದ ಪ್ರಯೋಜನವನ್ನು ಅರಿಯದ ಮೂಲಕ ಅವು ವೇಳಾಪತ್ರಿಕೆಯಲ್ಲಿಯೇ ಉಳಿದುಬಿಡುತ್ತವೆ. ಇದರಿಂದ ಮಕ್ಕಳ ಕಲ್ಯಾಣದ ಬದಲು ಅಹಿತವೇ ಆಗುತ್ತದೆ. ಆದರಿಂದ ಎಲ್ಲ ಶಾಲೆಯಲ್ಲಿ ವಾಚನಾಲಯ ಹಾಗೂ ಚರ್ಚಾಕೂಟಗಳನ್ನು ಸ್ಥಾಪಿಸಿ ಅದರ ಏಳ್ಗೆಯ ಬಗ್ಗೆ ಮಾಡಿದ ಪ್ರಯತ್ನ, ಸಾಧಿಸಿದ ಪ್ರಗತಿ ಮುಂದ್ದನ್ನು ಶಾಲೆಯ ಮುಖ್ಯ ಗುರುಗಳು ಪಠ್ಯೇತರ ಚಟುವಟಿಕೆಯ ಪುಸ್ತಕದಲ್ಲಿ ಬರೆದು ಇಟ್ಟು ಮುಂದೆ ಬರುವ ಶಿಕ್ಷಕರಿಗೆ ಮಾರ್ಗದರ್ಶಕರಾಗಿ ತಮ್ಮ ಶಾಲೆಯ ಏಳ್ಗೆಗಾಗಿ ಪ್ರಯತ್ನಿಸಿದರೆ ಶಾಲೆಯ ಮುಖಾಂತರ ಸಮಾಜದ ಸುಧಾರಣೆ ತನ್ನಿಂದ ತಾನೇ ಆಗುವದು. ವಾಚನಾಲಯ ಹಾಗೂ ಚರ್ಚಾಕೂಟಗಳ ಉದ್ದೇಶವು ಕೈಗೂಡುವದು.

---

# ಕಲಿಸುವ ಪಾಠವು ಪರಿಣಾಮಕಾರಿಯಾಗಬೇಕಾದರೆ

ಲೇಖಕರು: ಶ್ರೀ ಹಾವಟೆ ಚೆನ್ನಪ್ಪನವರು, ತಾಳೀಕೋಟೆ ವಿಭಾಗದ ಶಿಕ್ಷಣಾಧಿಕಾರಿಗಳು.

ವಿದ್ಯಾರ್ಥಿಗಳಲ್ಲಿ ವಯೋಮಾನಕ್ಕನುಸರಿಸಿ ಜ್ಞಾನಾರ್ಜನೆಯ ತೃಷೆಯನ್ನು ಹುಟ್ಟಿಸಿ, ಅದನ್ನು ಪಡೆಯಲು ನವಚೈತನ್ಯವನ್ನು ನಿರ್ಮಿಸಿ, ಉದಾತ್ತ ಧ್ಯೇಯಗಳ ಕಡೆಗೆ ಅವರ ಶಕ್ತಿ ಸಾಮರ್ಥ್ಯಗಳು ಕೇಂದ್ರೀಕೃತವಾಗುವಂತೆ ಮಾಡುವ ಪ್ರಭಾವಶಾಲಿ ಶಿಕ್ಷಕನೇ ಶ್ರೇಷ್ಠನೆಂದು ಪರಿಗಣಿಸಲ್ಪಡಬೇಕು.

ಮಾನವ ಶಕ್ತಿ ಸತ್ವಗಳನ್ನು ಹೀರುವ ದಾರಿದ್ರ್ಯ ಮತ್ತು ಮೋಹಾದಿಗಳಿಂದ ವಿದ್ಯಾರ್ಥಿಗಳು ಅಲಿಪ್ತರಾಗಿದ್ದು, ಅವರಲ್ಲಿ ಹುದುಗಿದ ಅಗಾಧವಾದ ಯೋಗ್ಯತೆಗಳನ್ನು ಪ್ರಕಟಿಸುವ ಕಲೆ ಅವನಿಗೆ ಗೊತ್ತಿರಬೇಕು. ವಿದ್ಯಾರ್ಥಿಗಳಲ್ಲಿ ಹೊಸ ಜೀವಕಳೆ ತುಂಬುವದು ಶಿಕ್ಷಕೋತ್ತಮನ ಆದ್ಯ ಕರ್ತವ್ಯ ಹಾಗೂ ವಿಶೇಷ ಹೊಣೆಯಾಗಿದೆ.

ಶಿಕ್ಷಣವನ್ನು ಆರಂಭಿಸುವಾಗ ಎರಡು ಮಾತುಗಳನ್ನು ಗಮನಿಸುವದು ಅತ್ಯಾವಶ್ಯಕ. ನಾವು ಯಾವ ಗುರಿ ಸಾಧಿಸಬೇಕಾಗಿದೆ ಎನ್ನುವದು ಒಂದು; ಮತ್ತು ಎಲ್ಲಿಂದ ಹೊರಡಬೇಕಾಗಿದೆ ಎನ್ನುವದು ಇನ್ನೊಂದು. ಪೂರ್ವಿಕರ ಪರಿಭಾಷೆಯಲ್ಲಿ ಹೇಳಬೇಕಾದರೆ, ಪುರುಷಾರ್ಥವೇ ನಾವು ಸಾಧಿಸಬೇಕಾದ ಗುರಿ. ಧರ್ಮ, ಅರ್ಥ, ಕಾಮ, ಮೋಕ್ಷಗಳೇ ಪುರುಷಾರ್ಥಗಳು. ಈ ಪುರುಷಾರ್ಥ ಸಾಧನವು ನಮ್ಮ ಶರೀರ, ಹೃದಯ, ಬುದ್ಧಿ, ಆತ್ಮ ಈ ನಾಲ್ಕು ಅಂಗಗಳಲ್ಲಿ ಆರಂಭವಾಗಿ ಮುಗಿಯಬೇಕಾದರೆ. ಇವೆಲ್ಲವೂ ಏಕಕಾಲಕ್ಕೆ ಆರಂಭವಾಗಿ ಮಕ್ಕಳ ಬೆಳವಣಿಗೆಯೊಂದಿಗೆ ವಿಕಾಸಗೊಳ್ಳುತ್ತ ಸಾಗಬೇಕಾಗಿದೆ. ಒಂದಾದನೇಲೆ ಒಂದಲ್ಲ.

ಮಕ್ಕಳಿಗೆ ಶಿಕ್ಷಣ ಕೊಡಲು ಸಮರ್ಥರಾಗುವ ದಕ್ಕಾಗಿ ತಮಗೆ ತಾವೇ ಶಿಕ್ಷಣ ಕೊಟ್ಟುಕೊಂಡು ತಮ್ಮನ್ನು ತಾವೇ ಅರಿತುಕೊಂಡು, ಸಂಯಮ ಪೂರ್ಣರಾಗುವದು ಪ್ರಥಮತಃ ಅವಶ್ಯ ಎಂಬುದನ್ನು ಶಿಕ್ಷಕನು ಅರಿತುತೊಳ್ಳಬೇಕಾಗಿದೆ. ಯಾಕಂದರೆ ಸ್ವಂತದ ಆಚರಣೆಯ ಮೂಲಕವೇ ಶಿಕ್ಷಣವು ಪರಿಣಾಮಕಾರಿಯಾಗುವದುಂಟು. ಯಾವ ಒಳ್ಳೆಯ ಮಾತುಗಳಾಗಲಿ ಜಾಣತನದ ಉಪದೇಶವಾಗಲಿ, ಮಗುವಿನವೇಲೆ ಏನೂ ಪರಿಣಾಮ ಮಾಡುವದಿಲ್ಲ. ಆದುದರಿಂದ ಶಿಕ್ಷಕನು ತಾಯಿ–ತಂದೆಗಳಂತೆ, ತಾಯಿ–ತಂದೆಗಳು ಶಿಕ್ಷಕನಂತೆ, ಉತ್ತಮಮಾದ ಆದರ್ಶ ಜೀವಿಯಾಗಿ ಅದಕ್ಕೊಪ್ಪುವಂತೆ ಜೀವಿಸುವದಕ್ಕೆ ಸಮರ್ಥರಾಗತಕ್ಕದ್ದು. ಆದರ್ಶವೇ ಮಗುವಿನಲ್ಲಿ ಸ್ವಲ್ಪ ಸ್ವಲ್ಪವಾಗಿ ಪ್ರತಿಬಿಂಬಿಸುವದನ್ನು ಕಾಣಬಹುದು. ತಂದೆ-ತಾಯಿಗಳಂತಹ ಶಿಕ್ಷಕನ ವಿಷಯವಾಗಿಯಾಗಲಿ ಶಿಕ್ಷಕನಂತಹ ತಂದೆ ತಾಯಿಗಳ ವಿಷಯದಲ್ಲಾಗಲಿ, ಮಗುವಿಗೆ ಆದರಾಭಿಮಾನಗಳಿರುತ್ತವೆ. ಶಿಕ್ಷಕನಾದವನು ತನ್ನ ಬಗೆಗೆ ಗೌರವ ಭಾವನೆಯನ್ನು ತಿಳಿದು ಎರಡೂ ಕಣ್ಣು ಮುಚ್ಚಿಕೊಂಡು ನಡೆದರೆ ನೂರಾರು ತೆರೆದ ಕಣ್ಣುಗಳು ತನ್ನನ್ನು ನಿಟ್ಟಿಸುತ್ತವೆಂಬುದನ್ನು ಲಕ್ಷದಲ್ಲಿರಿಸಿಕೊಳ್ಳತಕ್ಕದ್ದು. ವಿದ್ಯಾರ್ಥಿಗಳಿಗೆ ವಿಷಯವು ಪರಿಣಾಮಕಾರಿಯಾಗುವಂತೆ ಮಾಡಬೇಕಾದರೆ ಸಾಮೂಹಿಕ ಆಟ, ವ್ಯಾಯಾಮಗಳಿಂದ

ಮಾಡಲು ಬರುತ್ತದೆ. ಇದೇ ಮಾತನ್ನು ಶ್ರೀ ಆರವಿಂದರು ಉಚ್ಚರಿಸಿದ್ದಾರೆ. "ಮನಸ್ಸಿನ ವಿಚಾರದ ಮಾರ್ಗದರ್ಶನವಿಲ್ಲದೆ, ಶರೀರವು ಸಹಜ ಪ್ರವೃತ್ತಿಯಿಂದ ಆಯಾ ಸಂದರ್ಭದಲ್ಲಿ ಏನು ಬೇಕೆಂಬುದನ್ನು ತನ್ನಷ್ಟಕ್ಕೆ ತಾನೇ ತಿಳಿದುಕೊಂಡು ಮಾಡಬಲ್ಲ ಅರಿವು ಆಟದಿಂದ ಜಾಗೃತವಾಗುತ್ತದೆ". "ಆಟವೇ ಪಾಠ, ಪಾಠವೇ ಆಟ" ಆಗಬೇಕಾದರೆ ಮಕ್ಕಳಿಗೆ ಸಾಮೂಹಿಕ ವ್ಯಾಯಾಮದಿಂದ ಹಾಗೂ ಆಟಗಳಿಂದ ಆಗುತ್ತದೆ. ವಿಷಯವು ಪರಿಣಾಮಕಾರಿಯಾಗಲು ಶ್ರೀ ತಾಯಿಯವರು ಹೇಳಿದ ಮಾತು "ದೃಢವಾಗಿದ್ದರೂ ಕೋಮಲತೆಯಿಂದೊಡಗೂಡಿದ ಕಣ್ಣುಳ್ಳ ವಾತ್ಸಲ್ಯ, ಹಾಗೂ ಸಾಕಷ್ಟು ವ್ಯವಹಾರ ಜ್ಞಾನ" ಬೇಕು.

ಇನ್ನು ವಿಷಯವು ತಿಳಿಯಾಗಿ, ಪರಿಣಾಮಕಾರಿಯಾಗಿ ತಿಳಿದು ಉಳಿಯಬೇಕಾದರೆ ಶಿಕ್ಷಕನು ಅನೇಕ ಉತ್ತಮ ವಿಚಾರಗಳನ್ನು ಅರಗಿಸಿಕೊಂಡು ಅವುಗಳನ್ನು ಬಾಲಕರು ಸುಲಭವಾಗಿ ಅರಗಿಸಿಕೊಳ್ಳುವಂತೆ ತಿಳಿಯಾಗಿ ಸವಿಯಾಗಿ ನಿಯಮಿತ ಅವಧಿಯಲ್ಲಿ ಹೇಳಿಕೊಡುವದಕ್ಕೆ ಸಾಮರ್ಥ್ಯವುಳ್ಳವನೂ, ಉಪಕರಣಗಳುಳ್ಳವನೂ ಆಗಿರಬೇಕು. ಒಟ್ಟಾರೆ ವಿಷಯವು ಧರ್ಮಾಧರ್ಮಗಳನ್ನು ವಿವೇಚಿಸಿ ನ್ಯಾಯವಾದ ನಿರ್ಣಯಕ್ಕೆ ಬರುವ ವಿಮರ್ಶನಾ ಶಕ್ತಿಯನ್ನು ಕುದುರಿಸತಕ್ಕಂಥದಾಗಿರಬೇಕು.

## ಪೂರ್ವ ಸಿದ್ಧತೆ ಹಾಗೂ ಶಿಕ್ಷಕನ ಕರ್ತವ್ಯದ ಅರಿವು

೧. ಶಿಕ್ಷಕನು ತನ್ನ ವರ್ಗಗಳ ಪಠ್ಯ ಪುಸ್ತಕಗಳನ್ನು ಚನ್ನಾಗಿ ಅಭ್ಯಸಿಸಬೇಕು.

೨. ಪಠ್ಯ ಪುಸ್ತಕಗಳಿಗೆ ಸಂಬಂಧಿಸಿ ಅನುಕೂಲವಾಗಿ ವಿಷಯ ಜ್ಞಾನವನ್ನು ಹೆಚ್ಚಿಸುವ ಪೂರಕ ಸಾಹಿತ್ಯವನ್ನು ಬೆಳಿಸಿಕೊಳ್ಳಬೇಕು.

೩. ಸರಕಾರದಿಂದ ಗೊತ್ತುಪಡಿಸಿದ ಅಭ್ಯಾಸ ಪತ್ರಿಕೆಯನ್ನು ತಿಳಿದುಕೊಂಡು ತದನುಸಾರವಾಗಿ ವರ್ಗಗಳಿಗೆ ಕಲಿಸುವ ವಿಷಯಗಳ ವಾರ್ಷಿಕ ಯೋಜನೆಯನ್ನು ಮುಂಗಡವಾಗಿಯೇ ಮಾಡಿಕೊಳ್ಳಬೇಕು. ಅದರ ಪ್ರಕಾರ ಕಾರ್ಯರೂಪದಲ್ಲಿ ತರಲು ಪ್ರಯತ್ನಿಸಬೇಕು.

೪. ತನ್ನ ವರ್ಗಗಳ ಬಾಲಕರ ಜ್ಞಾನ ಮತ್ತು ಬುದ್ಧಿಗಳ ಮಟ್ಟವನ್ನು ತಿಳಿದುಕೊಂಡು ಕಲಿಸುವ ವಿಧಾನವನ್ನು ರೂಪಿಸಿಕೊಳ್ಳಬೇಕು.

೫. ವರ್ಗಗಳ ವಿವಿಧ ವಿಷಯಗಳನ್ನು ಕಲಿಸಲು ಅಗತ್ಯವಿರುವ ಆವಶ್ಯಕ ಶೈಕ್ಷಣಿಕ ಉಪಕರಣಗಳನ್ನು ಸಿದ್ಧಪಡಿಸಿಕೊಳ್ಳಬೇಕು.

೬. ಶಿಕ್ಷಕನು ಮಕ್ಕಳಿಗೆ ಮಿತ್ರನಾಗಿ ಅವರ ಗುಣದೋಷಗಳನ್ನು ಅರಿತು ತಿದ್ದುತ್ತ ಆತ್ಮೀಯತೆಯಿಂದ ಪಾಠಗಳನ್ನು ಕಲಿಸುತ್ತಿರಬೇಕು.

೭. ಬಾಲಕನು ಶಿಕ್ಷಕನ ಉಡಿಗೆ-ತೊಡಿಗೆ ಮತ್ತು ವ್ಯಕ್ತಿತ್ವ ಇವುಗಳನ್ನು ಅನುಸರಿಸುವದರಿಂದ ಈ ದೆಶೆಯಲ್ಲಿ ಶಿಕ್ಷಕನು ಮಾರ್ಗದರ್ಶಕನಾಗಿರಬೇಕು.

೮. ತನ್ನ ಕರ್ತವ್ಯವಾದ ಕಲಿಸುವ ಕೆಲಸವೇ ಪವಿತ್ರ ಕೆಲಸವೆಂದು ಪೂರ್ಣ ನಂಬಿಗೆಯನ್ನಿಟ್ಟುಕೊಂಡಿರಬೇಕು.

## ಕಲಿಸುವ ವಿಧಾನಗಳು

೧. ಶಿಕ್ಷಕನು ಪ್ರಶ್ನೋತ್ತರ ಪದ್ಧತಿಯನ್ನು ಅನುಸರಿಸಬೇಕು. ಉದ್ದನ್ನ ಭಾಷಣಗಳನ್ನು ಮಾಡಬಾರದು.

೨. ಗೊತ್ತಿದ್ದ ವಿಷಯದಿಂದ ಗೊತ್ತಿಲ್ಲದವುಗಳ ಕಡೆಗೆ ಸಾಗುವದು, ನೋಡಿ ಕಲಿ, ಮಾಡಿ ಕಲಿ, ಪಾಠವೇ ಆಟ, ಆಟವೇ ಪಾಠ, ಮುಂತಾದ ಮಹತ್ವದ ಶೈಕ್ಷಣಿಕ ಸಿದ್ಧಾಂತಗಳನ್ನು ತಿಳಿದು ಪಾಠವನ್ನು ಕಲಿಸಬೇಕು.

೩. ಬೇರೆ ಬೇರೆ ಶೈಕ್ಷಣಿಕ ಪದ್ಧತಿಗಳನ್ನು ತಿಳಿದು ಬೇರೆ ಬೇರೆ ವಿಷಯಗಳನ್ನು ಕಲಿಸುವಾಗ ಉಚಿತವಾದ ರೀತಿಯಲ್ಲಿ ಬಳಸಬೇಕು.

೪. ಶೈಕ್ಷಣಿಕ ಉಪಕರಣಗಳನ್ನು ಉಚಿತ ಸಮಯಕ್ಕೆ ಯೋಗ್ಯ ರೀತಿಯಲ್ಲಿ ಪ್ರದರ್ಶಿಸಬೇಕು.

೫. ತಾನು ಕಲಿಸುವ ಪಾಠದ ಕಡೆಗೆ ಎಲ್ಲ ಮಕ್ಕಳು ಲಕ್ಷ ಕೊಡುತ್ತಿರುವರೇಂಬುದನ್ನು ನೋಡಿಕೊಳ್ಳಬೇಕು. ಪಾಠವು ಮಕ್ಕಳಿಗೆ ಆಕರ್ಷಕವಾಗುವಂತೆ ಕಲಿಸಬೇಕು.

೬. ಗೃಹಪಾಠ, ಬರಿಹಗಳಲ್ಲಿ ಎಲ್ಲ ಮಕ್ಕಳು ಭಾಗವಹಿಸುವಂತೆ ನೋಡಿಕೊಳ್ಳಬೇಕು. ಅವುಗಳಲ್ಲಿ ಕಂಡುಬರುವ ದೋಷಗಳನ್ನು ಸಮಕ್ಷವೆ ಸಕಾಲಕ್ಕೆ ತಿದ್ದಬೇಕು. ಬಾಲಕರಿಗೆ ಮಾರ್ಗದರ್ಶನ ಮಾಡಬೇಕು

೭. ಕೆಳಗಿನ ವರ್ಗಗಳಲ್ಲಿ ಮಕ್ಕಳು ಸಹಜ ಪ್ರವೃತ್ತಿಗನುಸಾರವಾಗಿ ಅಂದರೆ ಶುದ್ಧವಾಗಿ ಸುಲಭ ಶಬ್ದಗಳನ್ನು ಉಚ್ಚರಿಸಲಿಕ್ಕೂ ಹಾಗೂ ಬರೆಯಲಿಕ್ಕೂ ಪೂರ್ಣ ವಾಕ್ಯಗಳಲ್ಲಿ ಉತ್ತರ ಕೊಡಲಿಕ್ಕೂ ಬರುವಂತೆ ಕಲಿಸತಕ್ಕದ್ದು. ಮೇಲಿನ ವರ್ಗದ ಮಕ್ಕಳು ಯಾವ ದೊಂದು ವಿಷಯದ ಮೇಲೆ ಸ್ವತಂತ್ರವಾಗಿ ಮಾತ ನಾಡಲಿಕ್ಕೂ ಸ್ವವಿಚಾರಗಳನ್ನು ಮಂಡಿಸಲಿಕ್ಕೂ ಶುದ್ಧ ಭಾಷೆಯಲ್ಲಿ ಬರೆಯಲಿಕ್ಕೂ ಬರುವಂತೆ ಕಲಿಸಬೇಕು.

೮. ಪಠ್ಯಪುಸ್ತಕಗಳ ವಿವರಣೆಗೆ ಮಾತ್ರ ಅಂಟಿ ಕೊಳ್ಳದೆ ಪ್ರಚಲಿತ ಸುದ್ದಿಸಮಾಚಾರಗಳ ಪರಿಚಯ ವನ್ನು ಸಂದರ್ಭಾನುಸಾರವಾಗಿ ಮಾಡಿಕೊಡುತ್ತಿರಬೇಕು.

೯. ಇಂದಿನ ಬಾಲಕನು ನಾಳಿನ ನಾಗರಿಕನು; ಆದಕಾರಣ ಬಾಲಕರಿಗೆ ಯೋಗ್ಯ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಷ್ಟ್ರೀಯತೆಯ ಕಲ್ಪನೆಗಳನ್ನು ಮಾಡಿಕೊಟ್ಟು ಬಾಲಕನಲ್ಲಿ ಆತನ ಕರ್ತವ್ಯದರಿವನ್ನೂ ತ್ಯಾಗ-ಸೇವೆಗಳ ಮಹತ್ವವನ್ನೂ ಆತನ ಮನದ ಮೇಲೆ ಬಿಂಬಿಸಬೇಕು.

೧೦. ವಿವಿಧ ವಿಷಯಗಳಲ್ಲಿ ಜ್ಞಾನವನ್ನು ಪೆಚ್ಚಿಸಲು ಆಗಾಗ್ಗೆ ಸ್ಪರ್ಧೆಗಳನ್ನು ಏರ್ಪಡಿಸಬೇಕು.

೧೧. ಪರಿಣಾಮಕಾರಿಯಾಗಿ ಪಠ್ಯಪುಸ್ತಕಗಳನ್ನು ಕಲಿಸುವದಾಗಬೇಕಾದರೆ ಕ್ರಿಯಾತ್ಮಕ ಶಿಸ್ತು ಅವಶ್ಯವು.

೧೨. ಶೈಕ್ಷಣಿಕ ಪ್ರವಾಸಗಳು ಅತ್ಯಗತ್ಯ. ಆದ ಕಾರಣ ಪ್ರತಿಯೊಬ್ಬ ಶಿಕ್ಷಕನು ಮೇಲ್ಕಾಣಿಸಿದ ಕಲಿಸುವ ವಿಧಾನಗಳನ್ನು ಅನುಸರಿಸಿದಲ್ಲಿ ಮಕ್ಕಳ ವಿಷಯ ಜ್ಞಾನವು ಹೆಚ್ಚಾಗಿ ಜ್ಞಾನಾರ್ಜನೆಯ ಪಿಪಾಸೆಯು ಅವರಲ್ಲಿ ಬೆಳೆಯುವದು.

ಜಯ-ಹಿಂದ

# ಸಾಮಾನ್ಯ ಹಾಗು ದಶಾಂಶ ಅಪೂರ್ಣಾಂಕಗಳ ವಿಶೇಷ ಪ್ರಯೋಜನ

ಲೇಖಕರು:— ಲೇಖನ ಕಲಾನಿಧಿ **ಶ್ರೀ ತಟ್ಟಿ ಶಾಮರಾಯರು,** ಬಿ.ಎ.,ಎಸ್.ಟಿ.ಸಿ.ಡಿ., ಧಾರವಾಡ
ನಿವೃತ್ತ ಪ್ರಿನ್ಸಿಪಾಲರು, ಪ್ರಾ. ಟ್ರೇ. ಕಾ. ನವಲಗುಂದ

ಕಾಡು ಮನುಷ್ಯನಿಗೆ ಮೊದಲು ಎಣಿಕೆಯ ಅಗತ್ಯ ಏನಿಸಿದ್ದು ಕುರಿಗಳ, ದನಗಳ, ಪ್ರಾಣಿಗಳ ಹಿಂಡನ್ನು ನೋಡಿದಾಗ ಮತ್ತು ಅವುಗಳಲ್ಲಿಯ ಹೆಚ್ಚಳವನ್ನೂ, ಕಡಿಮೆಯನ್ನೂ ಲಕ್ಷದಲ್ಲಿಟ್ಟುಕೊಳ್ಳುವಾಗ. ನಾಗರಿಕತೆಯು ಮುಂದೆವರಿದು ಮನೆಗಳನ್ನು ಕಟ್ಟಿಕೊಳ್ಳ ಹತ್ತಿದಾಗ, ಬಟ್ಟೆಬರೆಗಳನ್ನು ಉಪಯೋಗಿಸಲು ಪ್ರಾರಂಭಿಸಿದಾಗ, ಎರಡು ಧಾನ್ಯ ರಾಶಿಗಳ ಪರಸ್ಪರ ತರತಮ ಪ್ರಮಾಣವನ್ನು ಗೊತ್ತುಮಾಡುವಾಗ ಅರ್ಧ ಗಿರ್ಧ ಮುಂತಾದ ಭಿನ್ನ ರಾಶಿಗಳ ಕಲ್ಪನೆಯು ಬೇಕಾಯಿತು. ಪರಿಮಾಣಗಳು ಎರಡು ಪ್ರಕಾರದವಿರುವವು : (೧) ಬಿಡಿಬಿಡಿ ವಸ್ತುಗಳ ಗುಂಪು. (೨) ಅಚ್ಛೇದ್ಯವಾದ ಅಖಂಡ ನಿರಂತರವಾದ ರಾಶಿ. ಮೊದಲನೆಯ ಪರಿಮಾಣಗಳ ಎಣಿಕೆಗೆ ಇಡಿಯಾಗಿ ಒಂದೊಂದರಂತೆ ಹೆಚ್ಚಾಗುತ್ತ ಹೋಗುವ ೧, ೨, ೩ ....ಇತ್ಯಾದಿಯಾದ ಪೂರ್ಣ ಸಂಖ್ಯೆಗಳು. ಅದರೆ ತೂಕ ಅಳತೆಗಳಂತಹ ನಿರಂತರ, ಅಖಂಡ ಪರಿಮಾಣಗಳ ಲೆಕ್ಕಕ್ಕೆ ಈ ಸಾಮಾನ್ಯ ಸಂಖ್ಯೆಗಳಿಂದ ಪೂರ್ತಿಯಾದ ಪ್ರಯೋಜನವು ದೊರೆಯುವದಿಲ್ಲವೆಂಬದು ಸ್ಪಷ್ಟವದೆ. ಒಂದು ಉದ್ದಳತೆಯನ್ನು ಯಾರ್ಡಿನಿಂದ ಅಳತೆ ಮಾಡುತ್ತಿರುವಾಗ ಒಮ್ಮೊನ್ಮೆ ಯಾರ್ಡಿಗಿಂತ ತುಸು ಕಡಿಮೆಯಾದ ಭಾಗವು ಉಳಿಯುವದು. ಅದಕ್ಕೆ ಬೇರೊಂದು ಮಾಪನ್ನು, ಮಾನವನ್ನು, ಘಾಟನ್ನು ಉಪಯೋಗಿಸಿ ಅಳೆಯಬಹುದು. ಆದರೂ ಒಮ್ಮೊನ್ಮೆ ಇನ್ನೂ ಉಳಿದರೆ ಇನ್ನೊಂದು ಸಣ್ಣ ಮಾಪನ್ನು ಕಲ್ಪಿಸಿ ಇಷ್ಟು ಇಂಚಾಯಿತು ಎಂದು ಹೇಳಲು ಬಹುದು. ಆದರೆ ಅಗಲೂ ಒಂದಿಷ್ಟು ಭಾಗ ಉಳಿದರೆ ಮಾಡುವದೇನು? ಎಷ್ಟು ಬೇರೆ ಬೇರೆ ಹೆಸರಿನ

ಮಾವುಗಳನ್ನು ಮಾಡಿಕೊಳ್ಳವದು? ವ್ಯವಹಾರದಲ್ಲಿ ಉಪಯೋಗಿಸಲಾಗುವ ಅತಿ ಸಣ್ಣ ಪ್ರಮಾಣದ ಅಳತೆಗಿಂತಲೂ ಸಣ್ಣದಾಗುತ್ತ, ಸೂಕ್ಷ್ಮವಾಗುತ್ತ ಹೋಗುವ ಪರಿಮಾಣಗಳನ್ನು ಹೆಸರಿನಿಂದ ಕರೆಯುವದಕ್ಕೆ ಒಂದು ಗಣಿತದ ವಿಶಿಷ್ಟ ಪರಿಭಾಷೆಯೇ ಬೇಕಾಯಿತು. ಎರಡು ಸರಿಯಾದ ಭಾಗಗಳಿಂದ (ಅಂಶಗಳಿಂದ) ಒಂದು ಪೂರ್ಣ ಅಳತೆಯಾಗುತ್ತಿದ್ದರೆ ಅಂತಹ ಭಾಗಗಳಿಗೆ ೨ನೆಯ ಭಾಗಗಳು (ಅಂಶಗಳು) ಎನ್ನೋಣ. ನಾಲ್ಕು ಸರಿಯಾದ ಭಾಗಗಳಿಂದ ಒಂದು ಪೂರ್ಣ ಅಳತೆಯಾಗುತ್ತಿದ್ದರೆ ಆ ಭಾಗಗಳಿಗೆ ೪ನೆಯ ಭಾಗಗಳು (ಅಂಶಗಳು) ಎಂದು ಹೆಸರಿಡೋಣ. ಹೀಗೆಯೇ, ೨ನೆಯ (ಭಾಗ) ಒಂದು, ೩ನೆಯ (ಭಾಗ) ಎರಡು, ೫ನೆಯ ಐದಂಶ, ಮೂರು ಹತ್ತನೆಯ ಅಂಶ (ಮೂರು ದಶಾಂಶ) ಇತ್ಯಾದಿ ಭಿನ್ನ ರಾಶಿಗಳ ಪರಿಭಾಷೆಯು ರೂಢಿಯಲ್ಲಿ ಬಂದಿದೆ.

ಕಾಗದ, ಬೊಟ್ಟು, ನಿಂಬೆ ಹಣ್ಣು ಇತ್ಯಾದಿ ವ್ಯವಹಾರದ ವಸ್ತುಗಳ ಭಾಗ ಮಾಡುವಾಗ ೨ನೆಯ ಅಂಶ, ೪ನೆಯ ಅಂಶ, ೮ನೆಯ ಅಂಶ ಈ ಭಾಗಗಳೇ ಹೆಚ್ಚು ಅನುಕೂಲವಾದ ಭಾಗಗಳು. ತಾಸು, ದಿವಸ ಮುಂತಾದ ಅಳತೆಗಳ ಭಾಗದ ವಿಚಾರ ಮಾಡುವಾಗ ೩ನೆಯ ಭಾಗ, ೬ನೆಯ ಭಾಗ, ೮ನೆಯ ಭಾಗ ಇವೇ ಹೆಚ್ಚಾಗಿ ಬಳಕೆಗೆ ಬರುವವು. ಆದರೆ ೫ನೆಯ ಭಾಗ, ೧೦ನೆಯ ಭಾಗ, ೨೦ನೆಯ ಭಾಗ, ೧೦೦ನೆಯ ಭಾಗ ಇತ್ಯಾದಿ ಸಾಮಾನ್ಯ ವ್ಯವಹಾರದಲ್ಲಿ ಬರುವದಿಲ್ಲ. ಇನ್ನು ಈಗ ನಮ್ಮ ದೇಶದಲ್ಲಿ ದಶಾಂಶ ನಾಣ್ಯ ಪದ್ಧತಿಯು ಬಳಕೆಯಲ್ಲಿ ಬಂದಿರುವದರಿಂದ ೧೦ನೆಯ ಭಾಗ, ೧೦೦ನೆಯ ಭಾಗ, ೨೫ನೆಯ ಭಾಗ ಇತ್ಯಾದಿ ಪರಿಭಾಷೆಯ ಲೆಕ್ಕದಲ್ಲಿ ಪರ್ಯಾಯದಿಂದ ಸೇರುವದು. ಹಿಗೆಯೇ ಇನ್ನು ಮೇಲೆ ಕ್ರಮೇಣ ದಶಾಂಶ ಪದ್ಧತಿಯು (ಮೆಟ್ರಿಕ್ ಪದ್ಧತಿಯು) ತೂಕ-ಅಳತೆಗಳನ್ನು ನಮ್ಮ ಸರಕಾರವು ತರಲಿರುವದರಿಂದ ದಶಾಂಶ-ಅಪೂರ್ಣಾಂಕಗಳ ಪ್ರಯೋಜನವು ವಿಸ್ತಾರ ಹೊಂದುವದು.

ಸಾಮಾನ್ಯ ಅಪೂರ್ಣಾಂಕಗಳ ಹಾಗೂ ದಶಾಂಶ ಪೂರ್ಣಾಂಕಗಳ ಹೆಸರುಗಳ ಪರಿಭಾಷೆಯು ಒಂದೇ ಆಗಿದ್ದರೂ ಅವುಗಳ ಲೇಖನ ಪದ್ಧತಿಯು ಭಿನ್ನವಾದದ್ದು ಎಂಬದು ತಿಳಿದ ವಿಷಯವಾಗಿದೆ; ಮೂರು, ಎಂಟನೆಯ ಅಂಶ (ಎಂಟನೆಯ ಮೂರಂಶ) ಇವನ್ನು ಎರಡು ಪೂರ್ಣಾಂಕಗಳ ಭಾಗಾಕಾರದಂತೆ ಬರೆಯುವೇಕಾಗುವದು. ಹೀಗೆ, ೩ ÷ ೮ ಅಥವಾ ೩/೮ ಅಥವಾ $\frac{೩}{೮}$ ಆದರೆ ಮೂರು ಹತ್ತನೆಯ ಅಂಶ (ಹತ್ತನೆಯ ಮೂರಂಶ) ಎಂಬುದನ್ನು ಬರಿಯ ೦.೩ ಇಷ್ಟರಿಂದ ತಿಳಿಸಬಹುದು— ಎಂದರೆ ಪೂರ್ಣಾಂಕಗಳನ್ನು ಬರೆಯುವ ಸ್ಥಾನ ಪದ್ಧತಿಯನ್ನೇ ಮುಂದುವರಿಸಿ ಅಪೂರ್ಣಾಂಕಗಳನ್ನು ಸಾಕಷ್ಟು ತೃಪ್ತಿಕರವಾಗಿ, ಸೂಕ್ಷ್ಮವಾಗಿ ಬರೆಯುವ ಪದ್ಧತಿಯನ್ನು ಉಂಟು ಮಾಡಿದ್ದೇವೆ. ಅದು ಬಹು ಅರ್ಥಗರ್ಭಿತವಾದ ಶೋಧವಾಗಿದೆ.

ಸಂಕಲನ ವ್ಯವಕಲನಾದಿ (ಕೂಡುವದು, ಕಳೆಯುವದು ಆದಿ) ಕೃತಿಗಳು ಸಾಮಾನ್ಯ ಅಪೂರ್ಣಾಂಕಗಳಿದ್ದರೆ ಒಂದಿಷ್ಟು ತೊಡಕಿನವೆಂದೇ ಮಕ್ಕಳ ಅನುಭವಕ್ಕೆ ಬರುವದು. $\frac{೧}{೨}$ ಮತ್ತು $\frac{೧}{೪}$ ಇವುಗಳನ್ನು ಕೂಡ (ಕೂಡಿಸ) ಬೇಕಾಗಿದ್ದರೆ $\frac{೧}{೨}$ ಕ್ಕೆ $\frac{೨}{೪}$ ಎಂದೂ $\frac{೧}{೪}$ ಕ್ಕೆ $\frac{೧}{೪}$ನೆಂದೂ ರೂಪಾಂತರವಾಗಬೇಕು. ಆ ಮೇಲೆ ೯ (೧೨ನೆಯ) ಅಂಶಗಳು + ೧೦ (೧೨ನೆಯ) ಅಂಶಗಳು ಕೂಡಿ, ೧೯, ೧೨ನೆಯ, ಅಂಶಗಳು ಆಗುವದು.

ಹೀಗೆಯೇ ವ್ಯವಕಲನ : $\frac{೩}{೪} - \frac{೧}{೨} = \frac{೩}{೪} - \frac{೨}{೪} = \frac{೧}{೪}$,

ಇನ್ನು ಪೂರ್ಣಾಂಕದಿಂದ ಗುಣಾಕಾರ ಭಾಗಾಹಾರಗಳು :

$\frac{೧}{೨} \times ೩$; ೩ (೪ನೆಯ) ಅಂಶಗಳು $\times ೩ = ೯$ (೪ನೆಯ) ಅಂಶಗಳು. $\frac{೧}{೨} \times ೩ = \frac{೩}{೨}$.

$\frac{೧}{೨} \div ೫$; $\frac{೧}{೨} = \frac{೧೦}{೨೦}$; ೧೦ (೨೦ನೆಯ) ಅಂಶಗಳು $\div ೫ = ೨$ (೨೦ನೆಯ) ಅಂಶ; $\frac{೧}{೨} \div ೫ = \frac{೧}{೧೦}$.

ಅಪೂರ್ಣಾಂಕಗಳಿಂದ ಗುಣಾಕಾರ ಭಾಗಹಾರಗಳು :

$೩/೪ = \frac{೧}{೨} = ೩ \div ೪$; $\frac{೧}{೨} \div ೪ = \frac{೧}{೮}$; $\frac{೧}{೨} \times \frac{೧}{೨} = \frac{೧}{೪}$ ಈ ಉದಾಹರಣೆಯ ಸಾದೃಶ್ಯದಿಂದಲೇ ಎಷ್ಟೋ ದಡ್ಡ ಹುಡುಗರು $\frac{೧}{೨} + \frac{೧}{೨} = ೨$ ಎಂದು ತಪ್ಪು ಉತ್ತರಗಳನ್ನು ಒಮ್ಮೊಮ್ಮೆ ವಿಚಾರ ಮಾಡದೇ ಹಚ್ಚುತ್ತಾರೆ.

**ಅಪೂರ್ಣಾಂಕಕ್ಕೆ ಅಪೂರ್ಣಾಂಕದಿಂದ ಭಾಗಿಸುವ ಅತಿ ಕ್ಲೇಷ್ಟವಾದ, ಅತಿ ಸೂಕ್ಷ್ಮವಾದ ವಿಚಾರ :** ಉಪ್ಪೋದ್ಘಾತ ಕಂಸದಿಂದ ( ಆವರಣದಿಂದ ) ಪದಗಳನ್ನು ಮುಕ್ತಮಾಡುವದು, ಬಿಡಿಸುವದು. ಉದಾ : ೧೩೦೦ ÷ ( ೧೦೦ ÷ ೪ ) ಕಂಸದ ಹಿಂದೆ ÷ ಚಿಹ್ನವಿದೆ ∴ ಕಂಸವನ್ನು ತೆಗೆದು ಬಿಟ್ಟರೆ ಉದಾಹರಣೆಯು ಹೀಗಾಗುವದು: ೧೩೦೦ ÷ ೧೦೦ × ೪. ಈ ತಂತ್ರವು ಓದುವ ಶಿಕ್ಷಕರಿಗೆ ತಿಳಿಯದಿದ್ದರೆ ಈ ಬಾಯಿಲೆಕ್ಕದ ತಂತ್ರವನ್ನೂ ವಿಚಾರ ಮಾಡಿರಿ. ಯಾವದೊಂದು ಸಂಖ್ಯೆಗೆ ೨೫ರಿಂದ ಭಾಗಿಸುವದಾದರೆ ಅದನ್ನು ೧೦೦ ರಿಂದ ಭಾಗಿಸಿ ಬಂದದ್ದಕ್ಕೆ ೪ರಿಂದ ಗುಣಿಸಿದರಾಯಿತು. ∴ ೧೩೦೦ ÷ ೧೦೦ = ೧೩, ೧೩ × ೪ = ೫೨.

```
      ೫೨
  ೨೫) ೧೩೦೦
      ೧೨೫
      -----
        ೫೦
        ೫೦
      -----
         ೦೦
```

**ಕೃತಿ :** ೬ ÷ (೩ ÷ ೪) = ೬ ÷ ೩ × ೪, ೬ ÷ ೩ = ೨, ೨ × ೪ = ೮ = ೧.

ಉತ್ತರ ೧. ಇದು ಸರಿಯಾಗಿದೆ ಎಂಬದನ್ನು ಇನ್ನೊಂದು ವಿಧದಿಂದಲೂ ತಿಳಿಯಬಹುದು : ಒಂದು ಸಂಖ್ಯೆಗೆ ಅದೇ ಸಂಖ್ಯೆಯಿಂದ ಭಾಗಿಸಿದರೆ ೧ ಉತ್ತರ ಬರಬೇಡವೇ ?

**ಇನ್ನು ದಶಾಂಶ ಅಪೂರ್ಣಾಂಕಗಳ ಕೃತಿಗಳು :**

ಇವಕ್ಕೂ ಸಾದಾ ಪೂರ್ಣಾಂಕಗಳ ಕೃತಿಗಳಿಗೂ ವಿಶೇಷ ಹೆಚ್ಚು ಕಡಿಮೆ ಇಲ್ಲವೇ ಇಲ್ಲ.

**ಸಂಕಲನ :**

```
    ೧ . ೩೦೧
+   ೨ . ೪೭೭
+   ೧ . ೭೪೫
=   ೫ . ೬೨೩
```

**ವ್ಯವಕಲನ :**

```
    ೧ . ೦೦೦
-     . ೬೯೯
=   ೦ . ೩೦೧
```

**ಗುಣಾಕಾರ :**

```
      . ೩೭
×     . ೩  = .೧೧೧ ಗುಣ್ಯದಲ್ಲಿ ೨ ಸ್ಥಾನಗಳು, ಗುಣಕದಲ್ಲಿ ೧, ಅಂತೂ ೩ ಸ್ಥಾನ ಉತ್ತರದಲ್ಲಿ.
```

**ತಿಳಿವಳಿಕೆ :** $\frac{೩೭}{೧೦೦} \times \frac{೩}{೧೦} = \frac{೧೧೧}{೧೦೦೦} = .೧೧೧$,

**ಭಾಗಾಕಾರ :** ಯಾವಾಗಲೂ ಭಾಜಕವು ಪೂರ್ಣಾಂಕವಾಗುವಂತೆ ಮಾಡಿಕೊಳ್ಳಿರಿ, ಮೇಲೆ ೧೩೦೦ಕ್ಕೆ ೨೫ರಿಂದ ಭಾಗಿಸಿದಂತೆ ಹಚ್ಚುತ್ತ ಹೋಗಿರಿ. ಉದಾ : ೨೨ ÷ ೭.೩ = ೨೨೦ ÷ ೭೩.

```
      ೦೦೩.೦
  ೭೩) ೨೨೦.೦
      ೨೧೯
      -------
         ೦೧೦
```

---

## ವಿನಂತಿ

**ಲೇಖಕರಲ್ಲಿ :—** ಸರಿಯಾಗಿ ಓದಲಿಕ್ಕೆ ಬರುವಂತೆ ಸ್ಪಷ್ಟವಾಗಿ ಮಸಿಯಿಂದ ಬರೆದು ಲೇಖನಗಳನ್ನು ಕಳುಹಿಸಬೇಕು. ಕಾಗದದ ಒಂದೇ ಮಗ್ಗಲು ಬರೆಯಬೇಕು.

ಕಾರ್ಬನ್ ಪ್ರತಿಗಳನ್ನು ಕಳಿಸುವದಿದ್ದಲ್ಲಿ **ಮೊದಲನೆಯ** ಪ್ರತಿಯನ್ನು **ಮಾತ್ರ** ಕಳಿಸಬೇಕು.

**ಮೂಲೋದ್ಯೋಗದ ಹೊಸ ಅಭ್ಯಾಸ ಪತ್ರಿಕೆಗಳು ಮಾರಲಿಕ್ಕೆ ದೊರೆಯುತ್ತವೆ.**

೧ ರಿಂದ ೭ನೆಯ ಇಯತ್ತೆಗಳಿಗಾಗಿ ೦—೨—೬
೧ ರಿಂದ ೪ನೆಯ ,, ೦—೧—೦
ಅಂಚೆ ನೆಚ್ಚ ಬೇರೆ.

ದೊರೆಯುವ ಸ್ಥಳ :

**ಪ್ರಧಾನ ಸಂಪಾದಕರು**
ಜೀವನ ಶಿಕ್ಷಣ ಧಾರವಾಡ.

ಳನೆಯ ಪುಟದಿಂದ ಬಂದದ್ದು

ಎಲ್ಲ ಶಿಕ್ಷಕರು ಕೂಡಿ ಪಾಲಕರ ಮನವೊಲಿಸಿ ಅವರ ಮಕ್ಕಳನ್ನು ಸದಸ್ಯರನ್ನಾಗಿ ಮಾಡಿಕೊಳ್ಳಬೇಕು. ಇದರಿಂದ ಪ್ರತಿಯೊಬ್ಬ ವಿದ್ಯಾರ್ಥಿಗೆ ಅದರ ಸರಿಯಾದ ಪ್ರತಿಫಲ ದೊರೆಯುವದು. ಮೊದಲನೆಯ ವರ್ಗದ ಬಾಲಕನು ಇಂದು ೧ ರೂಪಾಯಿ ಕೊಟ್ಟು ಸದಸ್ಯನಾದರೆ ಅವನು ಏಳನೆಯ ವರ್ಗಕ್ಕೆ ಬರುವಷ್ಟರಲ್ಲಿ ಒಂದೆರಡು ಪುಸ್ತಕಗಳು ಅವನಿಗೆ ಲಾಭಾಂಶದಲ್ಲಿ ದೊರೆಯುವವು. ಇದನ್ನು ಗಮನಿಸಿದರೆ ಸಹಕಾರಿ ಭಾಂಡಾರದಿಂದ ವ್ಯಕ್ತಿಗೆ ಆಗುವ ಉಪಯುಕ್ತತೆಯು ನಿದರ್ಶನಕ್ಕೆ ಬರುವದು.

ಹತ್ತು ಬೆಳೆಯಿಸುವ ಸಹಕಾರೀ ಅಂಗಡಿಗಳು ಸಾಕಷ್ಟು ಪ್ರಗತಿ ಹಥದಲ್ಲಿ ಸಾಗಿರುವದಿಲ್ಲವೆಂದು ನಾವು ಆಯಾ ಸಂಘಗಳ ಅಧಿಕಾರಿ ವರ್ಗಗಳಿಂದ ಕೇಳುತ್ತೇವೆ. ಹೀಗಾಗಲು ಕಾರಣವೇನು ? ಇದಕ್ಕೆ ಸರಿಯಾದ ತಳಹದಿ ಇಲ್ಲದ್ದೇ ಕಾರಣವೆಂದು ಹೇಳಬಹುದು. ಪ್ರೌಢ ಸದಸ್ಯನಿಗೆ ತನಗೆ ಸಾಲ ಸಿಗುವವರೆಗೆ ಸಂಘದ ಬಗ್ಗೆ ಆಸ್ಥೆ ತಾಳುತ್ತಾನೆ. ಮುಂದೆ ಅವನ ಅನಾಸ್ಥೆ ಪ್ರಾರಂಭವಾಗುತ್ತದೆ. ಸಂಘದ ಯಾವ ಸಭೆಗೂ ಹೋಗದೆ ಸಂಘದ ಕಾರ್ಯಕಲಾಪಗಳನ್ನು ಟೀಕಿಸುತ್ತ ಹೊರಗೆ ಉಳಿಯುತ್ತಾನೆ. ಇವನ ಅನಾಸ್ಥೆಯ ಉಪಯೋಗವನ್ನು ಕೆಲವು ಧೂರ್ತ ಅಧಿಕಾರಿ ವರ್ಗದವರು ತೆಗೆದುಕೊಂಡು ಸ್ವಚ್ಛಂದದ ಆಡಳಿತ ನಡೆಸುವರು; ಇದರಿಂದ ಒಮ್ಮೊಮ್ಮೆ ಸಂಘಕ್ಕೆ ಅಹಿತವು ಆಗುತ್ತದೆ. ಶಾಲೆಯಲ್ಲಿ ಬಾಲಕನು ಸ. ಭಾಂಡಾರದಲ್ಲಿ ಭಾಗವಹಿಸುವದರಿಂದಲೂ ಅದರಲ್ಲಿ ಪ್ರತ್ಯಕ್ಷ ಕೆಲಸ ಮಾಡುವದರಿಂದಲೂ ಪೂರ್ವಜ್ಞಾನವು ಸಾಕಷ್ಟು ಆಗುವದು. ಇದರಿಂದ ಮುಂದೆ ಅವನು ಸಂಘ ಸಂಸ್ಥೆಗಳಲ್ಲಿ ಚನ್ನಾಗಿ ದುಡಿದು ದೇಶದ ಏಳ್ಗೆಗೆ ಕಾರಣನಾಗುವನು. ಚಿಕ್ಕ ಬಾಲಕರಿಗೆ ಇಂತಹ ಅವಕಾಶಗಳನ್ನು ಕಲ್ಪಿಸಿಕೊಡುವದು ಶಿಕ್ಷಕರನ್ನೇ ಕೂಡಿದೆ.

ಜೀ. ಶಿಕ್ಷಣ ಶಾಲೆಗಳಲ್ಲಿ ಸಹಕಾರಿ ಭಾಂಡಾರಗಳು ಸರಿಯಾಗಿ ನಡೆಯದಿರುವ ಕಾರಣಗಳನ್ನು ಲಕ್ಷಿಸಿದರೆ ಅವುಗಳಲ್ಲಿ ಕೆಲವೊಂದು ಸುಧಾರಣೆ ಮಾಡಿಕೊಳ್ಳಬಹುದು. ಸಾಮಾನ್ಯವಾಗಿ ಕಾರಣಗಳನ್ನು ಕೆಳಗಿನಂತೆ ಹೇಳಬಹುದು.

(೧) ಶಿಕ್ಷಕರಿಗೆ ಸಹಕಾರಿ ಭಾಂಡಾರದ ಬಗ್ಗೆ ಸರಿಯಾದ ಕಲ್ಪನೆ ಇಲ್ಲದಿರುವದು. ಇದ್ದರೂ ಅದನ್ನು ಯಶಸ್ವಿಯಾಗಿ ಮಾಡುವ ವಿಧಾನಗಳು ಗೊತ್ತಿಲ್ಲದಿರುವದು.

(೨) ಕೆಲಸದಲ್ಲಿ ಅನಾಸಕ್ತಿಯೊಂದಿಗೆ ಅದು ದೈನಂದಿನ ಕೆಲಸದ ಕಷ್ಟೆಯ ಹೊರಗಿನದೆಂಬ ಭಾವನೆ.

(೩) ಪಾಲಕನ ಕಠಿಣೋಕ್ತಿ, ಅಜ್ಞಾನ, ಅಪನಂಬಿಕೆ, ಸಹಕಾರಿ ತತ್ವದಲ್ಲಿ ಅವಿಶ್ವಾಸ, ಬಡತನ ಇತ್ಯಾದಿ.

(೪) ಶಿಕ್ಷಕನ ನೈತಿಕ ಹೊಣೆ ಸಾಕಷ್ಟಿಲ್ಲದಿರುವದು.

(೫) ಸಮರ್ಥ ಆಡಳಿತ ಮಂಡಳ ಇಲ್ಲದಿರುವದು ಮತ್ತು ಸರಿಯಾಗಿ ಲೆಕ್ಕ-ಪತ್ರ ಇಡದೇ ಇರುವದು.

(೬) ಕೆಲವು ವ್ಯಾಪಾರೀ ಜನರ ಮನೋಭಾವ.

(೭) ಅಢಾವೆ ತೆಗೆಯಲಿಕ್ಕೆ ಗೊತ್ತಿಲ್ಲದಿರುವದು.

(೮) ಸರಕಾರದ ಪಾಗೂ ಇತರ ಸಂಘ ಸಂಸ್ಥೆಗಳ ಸಹಾಯ ಇಲ್ಲದಿರುವದು.

(೯) ಅಜ್ಞಾನದಿಂದ ಅಲ್ಪ ಆಶೆಆಮಿಷಗಳನ್ನು ಇಟ್ಟುಕೊಂಡಿರುವದು.

(೧೦) ಆಸ್ಥೆಯಿದ್ದ ಶಿಕ್ಷಕರು ವರ್ಗವಾಗಿ ಹೋದ ನಂತರ ಬರುವ ಶಿಕ್ಷಕರ ಅನಾಸ್ಥೆ ಇತ್ಯಾದಿ.

ಮೇಲೆ ಹೇಳಿದ ಕಾರಣಗಳನ್ನು ಚನ್ನಾಗಿ ಅರಿತುಕೊಂಡು ಜೀ. ಶಿ. ಶಾಲೆಗಳ ಅನೇಕ ಭಾಗಗಳಲ್ಲಿ ಒಂದಾಗಿರುವ ಸಹಕಾರಿ ಭಾಂಡಾರದ ಭಾಗವನ್ನು ಉತ್ತಮಾಂಗವನ್ನಾಗಿ ಮಾಡಿಕೊಂಡು ಕೈಲಾದ ಮಟ್ಟಿಗೆ ಶಾಲೆಯ ಏಳ್ಗೆಗೆ ಪ್ರಯತ್ನಮಾಡಿ ಸತ್ಕೀರ್ತಿಯನ್ನು ಪಡೆಯುವ ಹವ್ಯಾಸವನ್ನು ಗುರುಗಳು ಇಟ್ಟುಕೊಳ್ಳುವರೆಂದು ಆಶಿಸೋಣ.

# ಪ್ರಾಥಮಿಕ ಶಾಲೆಗಳಲ್ಲಿ ಪಂದ್ಯಾಟದ ಯೋಜನೆ

ಲೇಖಕರು : **ಶ್ರೀ ಶಿ. ಅ. ದರೂರ, ಗುರೂಜಿ,** ಕಂ. ಗಂ. ಶಾಲಾ, ಬಸಾಪೂರ

ಸ್ವತಂತ್ರ ರಾಷ್ಟ್ರವು ಹೇಗೆ ತನ್ನದೇ ಆದ ರಾಷ್ಟ್ರ ಧ್ವಜವನ್ನು ರೂಪಿಸಿಕೊಳ್ಳುವದೋ ಅದೇರೀತಿ ಧ್ವಜದ ರಕ್ಷಣೆಗಾಗಿ ಸದೃಢ ಶರೀರದ ನವ ಯುವಕ ನಾಗರಿಕರನ್ನು ರೂಪಿಸುವ ಅವಶ್ಯಕತೆ ಇದೆ ಎಂಬುದು ಇತ್ತಿತ್ತಲಾಗಿ ಎಲ್ಲರಿಗೂ ಮತ್ತಿಷ್ಟು ಮನದಟ್ಟಾಗಿರಲಿಕ್ಕೆ ಸಾಕು.

ಬುದ್ಧಿ ವಿಕಾಸಕ್ಕೆ ಹೇಗೆ ಶಿಕ್ಷಣದ ಅವಶ್ಯಕತೆ ಯುಂಟೋ ಹಾಗೆ ಶರೀರದ ತುಂಬು ಬೆಳವಣಿಗೆಗೆ ಶಾಸ್ತ್ರೀಯವಾದ ಶಾರೀರಿಕ ಶಿಕ್ಷಣದ ಅವಶ್ಯಕತೆ ಇದೆ ಎಂಬುದನ್ನು ಎಲ್ಲರೂ ಒಪ್ಪತಕ್ಕ ಮಾತು. ಇದನ್ನು ತಿಳಿದು ಇಂದಿನ ಸರಕಾರವು ಶಿಕ್ಷಣ ಕ್ಷೇತ್ರದಲ್ಲಿ ಶಾಸ್ತ್ರೀಯ ಪಂದ್ಯಾಟ ಜರುಗಿಸಲು ಪ್ರೋತ್ಸಾಹನೆ ಕೊಡುತ್ತಿರುವುದು ಸಂತೋಷದ ಸಂಗತಿಯು. ಇಂದಿನ ಮೂಲ ಶಿಕ್ಷಣ. (ಜೀವನ ಶಿಕ್ಷಣ) ಪದ್ಧತಿಯಲ್ಲಿ ಆಟಕ್ಕೆ ಮಹತ್ವ ಕೊಟ್ಟದ್ದು " ಆಟವೇ ಪಾಠ, ಪಾಠವೇ ಆಟ " ಎಂಬ ನಾಣ್ಣುಡಿಯನ್ನೇ ನಿರ್ಮಿಸಿ ಬಿಟ್ಟಿದೆ.

ಪಂದ್ಯಾಟಗಳ ರುಚಿ ಹೈಸ್ಕೂಲ-ಕಾಲೇಜು ವಿದ್ಯಾರ್ಥಿಗಳಿಗೆ ಹತ್ತಿದಂತೆ. ಇಂದು ಪ್ರಾ. ಶಾಲೆಯ ಮಕ್ಕಳಿಗೂ ಪಂದ್ಯಾಟಗಳ ರುಚಿನೋಡುವ ಸುಅವಸರ ಸಿಕ್ಕಿದ್ದು ಸೂಕ್ತವೇ; ಪ್ರಾಥಮಿಕ ಶಿಕ್ಷಣ ಪ್ರಪಂಚದಲ್ಲಿ ಇಂಥ ಪಂದ್ಯಾಟಗಳು ೨-೩ ವರ್ಷಗಳಿಂದ ಈಚೆಗೆ ಪ್ರಾರಂಭವಾಗಿವೆ. ಪಂದ್ಯಾಟ ಜರುಗಿಸಲು ಅನುಭವಿಕ 'ಫಿಜಿಕಲ್' ಟ್ರೇಂಡ, ಶಿಕ್ಷಕರ ಸಂಖ್ಯೆ ದಿನದಿನಕ್ಕೂ ಹೆಚ್ಚುತ್ತಲಿದೆ. ತತ್‌ಪರಿಣಾಮವಾಗಿ ಎಲ್ಲ ಕಡೆಗೂ ಪಂದ್ಯಾಟಗಳು ನೆರವೇರಿದ ಸುದ್ದಿಯನ್ನು ಪತ್ರಿಕೆಯಲ್ಲಿ ಪ್ರತಿನಿತ್ಯವೂ ಓದುತ್ತೇವಲ್ಲದೆ, ಪ್ರತ್ಯಕ್ಷ ನೋಡಿದವರೂ ಅನೇಕಜನ ! ಏನು ಇಂದಿನ ಶಾಲೆಗಳು ಆಟದ ಕಣಗಳೇ ? ಎಂದು ಸಂಶಯ ವ್ಯಕ್ತ ಮಾಡುವವರಿಗೂ ಕೊರತೆ ಇಲ್ಲ. ಆದರೆ ಆಟದ ಮೂಲ ಉದ್ದೇಶ ಏನೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿದರೆ ಈ ಮಾತೇ ಬರುತ್ತಿರಲಿಲ್ಲ. ಶಿಕ್ಷಕರಾದ ನಾವು ಈ ಪಂದ್ಯಾಟಗಳನ್ನು ನೆರವೇರಿಸುವಾಗ ನ್ಯಾಯ ಬದ್ಧರೀತಿಯನ್ನು ಅನುಸರಿಸಿ, ಮಕ್ಕಳಲ್ಲಿ ಸದ್ಗುಣ, ಸಹಕಾರ, ಮುಂದಾಳುತನ, ಧೈರ್ಯ, ಸಾಹಸಗಳನ್ನು ತುಂಬಿ, ಮಗುವಿನ ಮಾನಸಿಕ ಹಾಗೂ ದೈಹಿಕ-ಬೆಳವಣಿಗೆ, ಸಮನ್ವಯವಾಗಿ ನಡೆಯುತ್ತದೆ ಎಂಬುದನ್ನು ತೋರಿಸ ಬೇಕು. ಸುಸಂಸ್ಕೃತ ಸಮಾಜ ಹಾಗೂ ಸರಕಾರ ಇದನ್ನೇ ಬಯಸುತ್ತವೆ.

ಯೋಜನೆ ಒಳ್ಳೆಯದಾಗಿದ್ದರೆ ಯಶಸ್ಸು ಹಿಂಬಾಲಿಸುತ್ತಿದೆ ಎಂಬುದನ್ನು ಮರೆಯಬಾರದು ! ಈಗ ನಮ್ಮ ಮಕ್ಕಳು ತಮ್ಮ ತಮ್ಮ ಶಾಲೆಗಳಲ್ಲಿ ಗುರುಗಳ ಮಾರ್ಗದರ್ಶನದಲ್ಲಿ ನಿರ್ದಿಷ್ಟ ಪಡಿಸಿದಂತೆ ಪಂದ್ಯಾಟಗಳನ್ನು ಆಡಿ ತರಬೇತಿ ಹೊಂದುತ್ತಾರೆ. ಪಂದ್ಯಾಟಗಳ ಸುಗ್ಗಿ ಬಂದಿತೆಂದು ಒಂದೆರಡು ದಿನ ಕಷ್ಟ ಪಟ್ಟು ತಯಾರಿ ಮಾಡಿಕೊಂಡರೆ ಸಾಲದು. ಆಟವು ದೈನಿಕ ಚಟುವಟಿಕೆಗಳಲ್ಲಿ ನಿತ್ಯ ನಡೆಯುವಂತೆ ಎಚ್ಚರ ವಹಿಸ ಬೇಕು. ಕೇಂದ್ರ ಶಾಲೆಗಳಲ್ಲಿ ಅಂತರ ಪಂದ್ಯಾಟ ಜರುಗಿಸುವರು. ಅಲ್ಲಿ ವಿಜಯಗಳಿಸಿ ಅವರೇ ತಾಲೂಕೆಗೆ ಹೋಗುವರು. ಅಲ್ಲಿ ಗೆದ್ದವರು ಜಿಲ್ಲೆಗೂ ಪುನಃ ರಾಜ್ಯ ಮಟ್ಟದ ಪಂದ್ಯಾಟದಲ್ಲಿ ಭಾಗವಹಿಸುವರು. ಹೀಗೆ ಇದರ ಸಾಮಾನ್ಯ ಯೋಜನೆ ಇದೆ. ತಾಲೂಕಾ ಮಟ್ಟದಿಂದ ಮುಂದೆ ನಡೆವ ಪಂದ್ಯಾಟಗಳು ಹೆಚ್ಚು ಶಿಸ್ತು ಹಾಗೂ ಕ್ರಮಬದ್ಧ ರೀತಿಯಿಂದ ನಡೆಯುವವು. ಆ ಮಾದರಿಯ ಮೇಲೆಯೇ ಈ ಕೇಂದ್ರ ಶಾಲೆಯ ಪಂದ್ಯಾಟಗಳೂ ಜರುಗಿದರೆ ಹೆಚ್ಚು ಉತ್ತಮ.

ಪಂದಾಟಗಳಲ್ಲಿ ಭಾಗ ವಹಿಸುವ ಹುದ್ದರಿಗಳನ್ನು ಆರಿಸುವ ಬಗೆ :—

ಕೇವಲ ಜನ್ಮ ತಾರೀಖಿನಿಂದ ವಯಸ್ಸು ಗೊತ್ತು ಪಡಿಸಿ ಹುದ್ದರಿಗಳನ್ನು ಆರಿಸುವದಕ್ಕಿಂತ, ಹುದ್ದರಿಯ, ವಯಸ್ಸು, ತೂಕ, ಎತ್ತರ, ಎದೆಯಳತೆ ಇವೆಲ್ಲವನ್ನೂ ಗಮನಿಸಬೇಕು. ಅಂದಾಗ ಮಾತ್ರ ಯೋಗ್ಯ ಸ್ಪರ್ಧಾಳುಗಳು ಆಟದ ಕಣಕ್ಕೆ ಇಳಿಯುವರು. ಒಬ್ಬ ಹುಡುಗನೇ ಓಟ, ಜಿಗಿತ, ಚೆಂಡೊಗೆತ, ಕುಂಟಾಟ, ಖೋ ಖೋಗಳಲ್ಲಿ ಭಾಗವಹಿಸುವದು ಒಳಿತಲ್ಲ. ಎರಡನೇ ಬಾಲಕರಿಗೂ ಅವಕಾಶ ಬೇಕು ಎಂಬುದನ್ನು ಶಿಕ್ಷಕರು ಗಮನಿಸಬೇಕು. ಎಲ್ಲರೂ ಗೆದ್ದೇ ಬರಬೇಕು ಎಂದಾಗ ಸೋಲುವವರಾರು ? ಇಲ್ಲಿ ಸೋಲು-ಗೆಲುವಿನ ಮಾತು

ಮುಖ್ಯವಲ್ಲ. ಸಮನಾದ ಅವಕಾಶ, ಸರಿಯಾದ ತರ ಬೇತಿಗೆ ಹೆಚ್ಚು ಮಹತ್ವ ಇದೆ. ಒಬ್ಬ ಬಾಲಕನು ಒಂದೇ ವೈಯಕ್ತಿಕ ಪಂದ್ಯಾಟ ಹಾಗೂ ಒಂದೇ ಗುಂಪಿನ ಪಂದ್ಯಾಟದಲ್ಲಿ ಭಾಗವಹಿಸುವಂತೆ ನೋಡಿಕೊಳ್ಳಬೇಕು.

ಕೇಂದ್ರ ಕ್ರೀಡಾಸಮ್ಮೇಲನ ಅಧ್ಯಕ್ಷರ ಹೊಣೆ:— (೧) ಹುದ್ದರಿಯು ಪೂರೈಸತಕ್ಕ ಮಾಹಿತಿಯನ್ನು ಸಕಾಲಕ್ಕೆ ದೊರಕಿಸಿಕೊಳ್ಳಬೇಕು. ಅಪೂರ್ಣ ಮಾಹಿತಿಯನ್ನು ಸ್ವೀಕರಿಸಕೂಡದು. ಒಬ್ಬ ಹುದ್ದರಿಯು ಒಂದು ವೈಯಕ್ತಿಕ ಹಾಗೂ ೧ ಸಾಂಘಿಕ ಪಂದ್ಯಾಟದಲ್ಲಿ ಮಾತ್ರ ಭಾಗವಹಿಸಲಿಕ್ಕೆ ತಿಳಿಸಬೇಕು. (೨) ಗ್ರುಪ್ಪಿನಲ್ಲಿ ಬರುವ ಶಾಲೆಗಳಲ್ಲಿ 'ಫಿಜಿಕಲ್ ಟ್ರೇಂಡ್' ಶಿಕ್ಷಕರನ್ನು ಕರೆಯಿಸಿ ಅವರ ಮುಖಾಂತರ ಪಂದ್ಯಾಟ ನಡೆಯುವಂತೆ ತಿಳಿಸುವದಲ್ಲದೆ ಯಾವಯಾವ ಪಂದ್ಯಾಟಕ್ಕೆ ಯಾರುಯಾರು ನಿರ್ಣಾಯಕರು ಎಂಬುದನ್ನು ೨ದಿನ ಪೂರ್ವದಲ್ಲಿ ತಿಳಿಸಬೇಕು. (೩) ಪಂದ್ಯಾಟದ ಮುಂಚಿನ ದಿನವೇ ವಿವಿಧ ಪಂದ್ಯಾಟ ಕಣಗಳನ್ನು ಶಾಸ್ತ್ರೀಯ ಪದ್ಧತಿಯಂತೆ ತಯಾರಿಸಬೇಕು. (೪) ಗ್ರುಪ್ ಶಾಲೆಗೆ ಒಂದು ಫಿಜಿಕಲ್-ಧ್ವಜ ಇರುವಂತೆ ನೋಡಿಕೊಳ್ಳಬೇಕು.

ನಿರ್ಣಾಯಕರ ಕರ್ತವ್ಯ:— (೧) ಪ್ರಾಮಾಣಿಕ ನ್ಯಾಯ ನೀಡುವದು ಅವರ ಕರ್ತವ್ಯ. (೨) ಯಾವ ಆಟಕ್ಕೆ ಎಷ್ಟು ಅವಧಿ, ಅದರ ಪದ್ಧತಿ ಹೇಗೆಬುದನ್ನು ನಿರ್ಧರಿಸಿ ಕಣಕ್ಕೆ ಬರಬೇಕು. (೩) ಧ್ವಜದ ಸಮ್ಮುಖದಲ್ಲಿ ಆಟಗಾರರೂ ನಿರ್ಣಾಯಕರೂ ಪ್ರಾಮಾಣಿಕತೆಯ ಬಗ್ಗೆ ಪ್ರತಿಜ್ಞೆಯನ್ನು ಸ್ವೀಕರಿಸಬೇಕು.

ಇತರ ವ್ಯವಸ್ಥೆ:—ಆಟಗಾರರಿಗೆ ಲಿಂಬು, ಮಿತಾಯಿ ಪೂರೈಸಬೇಕು. ಪ್ರಥಮೋಪಚಾರದ ಪೆಟ್ಟಿಗೆ ಸಂಗಡ ಇರಬೇಕು. ಸ್ವಯಂ ಸೇವಕರು ಪಂದ್ಯಾಟ ಕಣದಲ್ಲಿ ಶಾಂತತೆ ಕಾಯಬೇಕು. ಹಳ್ಳಿಗಳಲ್ಲಿ ರೈತರಿಗೆ ಸೋಮವಾರ ಬಿಡುವು ಇರುವದು. ಕಾರಣ ಪಂದ್ಯಾಟಗಳನ್ನು ಹಳ್ಳಿಯ ಕೇಂದ್ರಶಾಲೆಯವರು ಸೋಮವಾರವೇ ಜರುಗಿಸಬೇಕು. ಶಿಕ್ಷಣದಲ್ಲಿ ಶಿಕ್ಷಕರ ಹಾಗೂ ಪಾಲಕರ ಹೊಣೆ ಎಷ್ಟಿದೆ ಎಂಬುದು ಗೊತ್ತಿರಲಿಕ್ಕೆ ಸಾಕು.

ಕಾರ್ಯ ನೆರವೇರಿಸಲು ಹಣ:— ಉದಾರಿಗಳು ಕೊಟ್ಟ ದೇಣಿಗೆ ಪಡೆಯಬಹುದು. ಆದರೆ ಎಲ್ಲ ಕಡೆಗೂ ಈ ರೀತಿ ದೇಣಿಗೆ ಸಿಕ್ಕೀತು ಎಂಬುದು ನಿಶ್ಚಿತವಿಲ್ಲ. ಕಾರಣ ಶಾಲೆಗಳ ಆರಂಭಕ್ಕೆ ಪ್ರತಿ ವಿದ್ಯಾರ್ಥಿಗಳಿಂದ ಪಂದ್ಯಾಟ ಫೀ ಎಂದು ೩ರಿಂದ ೪ನೇ ಇಯತ್ತೆವರೆಗೆ ಪ್ರತಿ ಹುಡುಗರಿಗೆ ೨ ಆಣೆ; ೫ರಿಂದ ೭ನೇ ಇಯತ್ತೆಯ ಪ್ರತಿಯೊಬ್ಬರಿಗೆ ೪ ಆಣೆಗಳವರೆಗೆ ವಸೂಲ ಮಾಡಿ ಅದರ ಲೆಕ್ಕಪತ್ರ ಇಟ್ಟು ಮೇಲಧಿಕಾರಿಗಳಿಗೆತೋರಿಸಬೇಕು.

ಹಣದ ವಿತರಣೆ:—ಕೇಂದ್ರ ಶಾಲೆಯಿಂದ ನಡೆಯಿಸಲ್ಪಡುವ ಪಂದ್ಯಾಟಕ್ಕೆ ಕೆಳಗಿನ ಪ್ರಾಥಮಿಕ ಶಾಲೆಯವರು ೮ ಆಣೆ. ಮೇಲಿನ ಪ್ರಾಥಮಿಕ ಶಾಲೆಯವರು ೧ ರೂಪಾಯಿ, ಇದೇರೀತಿ ತಾಲೂಕಾ ಮಟ್ಟಕ್ಕೆ ಕ್ರಮವಾಗಿ ೧ ರೂಪಾಯಿ, ೨ ರೂಪಾಯಿ ಪಂದ್ಯಾಟದ ಪ್ರವೇಶ ಫೀ ತುಂಬಬೇಕು. ಉಳಿದ ಹಣ ಸ್ಥಳಿಕ ಪಂದ್ಯಾಟದ ಖರ್ಚಿಗೆ ಉಪಯೋಗಿಸಬೇಕು.

ಸರಕಾರದ ಸಹಾಯ:— ತಾಲೂಕದಿಂದ ಮುಂಬೆ ನಡೆಯುವ ಪಂದ್ಯಾಟಗಳಿಗೆ ಬರುವ ಹುದ್ದರಿಗಳ ಪ್ರವಾಸ ವೆಚ್ಚದಲ್ಲಿ ಈ ರೀತಿ ಸೋನೀ ಕಲ್ಪಿಸಬೇಕು. ತಾಲೂಕಿನ ಸ್ಥಳದಿಂದ ೩ ಸ್ಟೇಜಗಿಂತ ದೂರನಿರುವ ಹಳ್ಳಿಯ ಹುದ್ದರಿಗಳಿಗೆ ಪ್ರವಾಸ ವೆಚ್ಚವನ್ನು ಸರಕಾರವೇ ವಹಿಸಬೇಕು. ಇದೇ ಕ್ರಮವು ಜಿಲ್ಲಾ ಹಾಗೂ ರಾಜ್ಯ ಮಟ್ಟಕ್ಕೂ ಅನ್ವಯಿಸಬೇಕು.

ಈ ರೀತಿ ನಡೆದಲ್ಲಿ ಯಶಸ್ಸು ಸಿಗುವದೆಂದೂ ಸಶಕ್ತ ಸಮಾಜ ರಚನೆಗೆ ತಳಹದಿಯಾದ ಪ್ರಾಥಮಿಕ ಶಿಕ್ಷಣಕ್ಕೆ ತುಂಬಾ ಮಹತ್ವ ಬಂದು ಆದರ್ಶ ಆಟಗಾರರ ತಂಡ ಮೊಡ್ಡ ಪ್ರಮಾಣದಲ್ಲಿ ಬೆಳೆಯಲು ಅನೂಕೂಲವಾಗುವದೆಂದೂ ಹೇಳಿದರೆ ತಪ್ಪಾಗಲಿಕ್ಕಿಲ್ಲ !

## ಪಿ. ಟಿ. ಸಿ. ಪರೀಕ್ಷೆ ೧೯೫೯

ಈ ವರುಷ ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ವಿದ್ಯಾರ್ಥಿನಿ **ಲಕ್ಷ್ಮೀಬಾಯಿ ಗುರಪ್ಪಗೌಡರ** ಇವರು ೧೦೦೦/೬೭೩ ಗುಣಗಳನ್ನು ಪಡೆದು ಧಾರವಾಡ ಕೇಂದ್ರಕ್ಕೆ **ಪ್ರಥಮ ಸ್ಥಾನವನ್ನು** ಪಡೆದಿದ್ದಾರೆ.

# ೧೯೫೯ ಎಪ್ರಿಲ್ ತಿಂಗಳಲ್ಲಿ ಜರುಗಿದ ಪ್ರಾ. ಶಾ. ಪ್ರ. ಪ. ಪರೀಕ್ಷೆಯ ಪರಿಣಾಮದ ಬಗೆಗೆ ಬಂದ ಪತ್ರಗಳ ವಿವರಗಳು

| ಊರು | ಪ. ಕುಳಿತವರ ಒ. ಸಂಖ್ಯೆ | ಪಾಸಾದ ಸಂಖ್ಯೆ | ಕಲಿಸಿದ ಗುರುಗಳು ಶ್ರೀಯುತರುಗಳಾದ |
|---|---|---|---|
| ಕೊಟ್ಟೂರವಾಡ | ೯ | ೬ | ಹ. ಗು. ನವಲಗುಂದಕರ |
| ಮಹಲ ಕುಂದಗೋಳ | | | |
| ಸಂಕೇಶ್ವರ | ೨೬ | ೨೧ | ಅ. ರ. ಮುಲ್ಲಾ |
| ಅಂಕಲಗಿ (ತಾ. ಗೋಕಾಕ) | ೧೭ | ೧೨ | — |
| ಯಾದಗುಡ್ಡ | ೧೦ | ೯ | ಬ. ಕ. ಗುಡಸಿ |
| ಹಿರೇಮೊರಬ | ೫ | ೪ | ಬಿ. ಎಚ್. ಬಾಬಣ್ಣವರ |
| ದುಧನಿ | ೨೨ | ೧೯ | ಪಂ. ರಾ. ಲೋಣಿಮಠ |
| ಹಳದೀಪುರ | ೨೯ | ೨೧ | ನಾಗೇಶ ಹರಿ ಪೈ |
| ನಾಗತಾಣ | ೧೪ | ೧೬ | ವಿಜಯಸಿಂಹ ಹಜೇರಿ |
| ಹದಲಿ (ತಾ. ನವಲಗುಂದ) | ೧೧ | ೬ | ಎನ್. ಪಿ. ಶಿರೋಳ |
| ಹೊಳೆಮಣ್ಣೂರ | ೪ | ೪ | ವೆಂ. ಬ. ನಾಡಗೌಡ |
| ಗೋಲಗೇರಿ | ೧೩ | ೪ | ಮಳ್ಳಿ |
| ಧುಂಡಶಿ | ೧೧ | ೯ | ಜಿ. ದೆ. ಅಂಗಡಿ |
| ಕೊತಬಾಳ | ೧೩ | ೧೧ | ಬಿ. ವ್ಹಿ. ಮಡಿವಾಳರ |
| ಕುರುಬಗೊಂಡ | ೧೯ | ೧೭ | ಚಿ. ಬ. ಕೋಟಿ |
| ಬೆಳವಗಿ | ೯ | ೪ | ಶೇಷಗಿರಿ |
| ರಡ್ಡೇರ ತಿಮ್ಮಾಪೂರ (ಬದಾಮಿ) | ೫ | ೪ | ಚ. ಬ. ಬಿರಾದಾರ |
| ದೇವಿಹೊಸೂರ | ೯ | ೬ | ಮ. ಬ. ಶ್ಯಾಡಗುಪ್ಪಿ |
| ಕೊಂಡಗೂಳಿ | ೧೦ಕಜಉ | ೯ಕ ೫ಉ | ಕೆ. ಆರ್. ಕುಲಕರ್ಣಿ ಆರ್. ಎಚ್. ಮಕಾನದಾರ |
| ಜೈನಾಪೂರ | ೧೦ | ೬ | ಸಿ. ಜಿ. ಸಮಗೊಂಡ |
| ಬ್ಯಾಕೋಡ | ೪ | ೪ | ಸಿ. ಮ. ಬಸರಕೋಡ |
| ಕುಲಗೋಡ | ೧೩ | ೧೦ | ರಾ. ಬ. ಮೋಳಿ |
| ಹಮ್ಮಿಗಿ | ೫ | ೩ | — |
| ಹಿರೇಮುಸಳಿ | ೧೩ | ೧೩ | ಭಿ. ಗೆ. ಹುಣಶಾಳ |
| ಬೇವೂರ | ೨೨ | ೨೧ | ಎಸ್. ಎಸ್. ಆಲವಿ |
| ಅರಭಾಂವಿ | ೪ | ೪ | ಉ. ಗು. ಅರಭಾಂವಿ |
| ಅತ್ತೀಗೇರಿ | ೪ | ೩ | ಶೇ. ಫ. ಪಾಟೀಲ |
| ಅಳ್ನಾವರ | ೨೦ | ೧೪ | ಎಸ್. ಎಸ್. ಹೂಲಗೇರಿಮಠ |
| ಹಳಿಯಾಳ | ೫೦ | ೩೩ | ಜ. ಹೋ. ನಾಯ್ಕ |

| ಊರು | ಪ.ಕುಳಿತವರ ಒ.ಸಂಖ್ಯೆ | ಪಾಸಾದ ಸಂಖ್ಯೆ | ಕಲಿಸಿದ ಗುರುಗಳು ಶ್ರೀಯುತರುಗಳಾದ |
|---|---|---|---|
| ಕಣಬರಗಿ | ೫ | ೫ | ವೀ. ಬ. ಅಕ್ಕತಂಗೇರಹಾಳ |
| ಡಂಬಳ | ೧೦ | ೧೦ | ವೆಂ. ಜಿ. ಕುಲಕರ್ಣಿ |
| ರಾಕೋಳ | ೬ | ೫ | ಅಂ. ಸಿ. ವೀರಭದ್ರಯ್ಯನವರ |
| ಜಾಲಿಹಾಳ | ೧೦ | ೯ | ಬ. ಮು. ಬಸರಕೋಡ |
| ವಂದಾಲ | ೧೨ | ೧೦ | ಪ. ಬ. ಸುನಗದ |
| ರೋಣ ಉ. ಗಂ. ಶಾ. | ೧೧ | ೧೦ | ಎ. ಎಸ್. ಕಾಜಿ |
| ಇಟಗಿ | ೧೩ | ೧೨ | ಸಂ. ಬ. ಜಾಲಣ್ಣವರ |
| ಮಂಟೂರ | ೬ | ೫ | ಎಸ್. ಆರ್. ಗದಗ |
| ಲಿಂಗಧಾಳ | ೫ | ೫ | ನೀ. ಚ. ಚಿಕ್ಕನಗೌಡ್ರ |
| ಇಚ್ಚಂಗಿ | ೮ | ೪ | ಶಂ. ಬ. ತಳವಾರ |
| ತಿಳಗೂಳ | ೧೩ | ೧೩ | ಆಯ್. ಎನ್. ಚೀರಗೊಂಡ |
| ಹೊಳಿಹೊಸೂರ | ೬ | ೬ | ರಾ. ಗಾ. ಕುಲಕರ್ಣಿ |
| ಬೀಡಿ | ೧೪ | ೧೪ | ಪಿ. ಎಸ್. ಗಾಣಿಗೇರ |
| ಕಾಗವಾಡ | ೧೫ | ೧೩ | ವಿ. ಸಾ. ಮಠಪತಿ |
| ಇಟಗಿ | ೯ | ೯ | ಸ. ಯ. ಠಕೇರ |
| ಲೋಕಾಪೂರ | ೮ | ೭ | ಮ. ವೀ. ಕುಂಚನೂರ |
| ಕೊಟಬಾಗಿ | ೧೧ | ೮ | ವಾಸನ |
| ಸಂಗಮ | ೨೭ | ೨೬ | ವೀ. ಮ. ಪಲ್ಲೇದ |
| ಕರೀಕಟ್ಟಿ | ೯ | ೬ | ಎಸ್. ಆರ್. ಶಿವಪೂಜಿಮಠ |
| ಉಗಲಖಾಟ | ೪ | ೨ | ಬಿ. ಬಿ. ತಿಮ್ಮಲಗಿ |
| ಮಲ್ಲಾಪೂರ | ೧೫ | ೧೩ | ಹೆ. ಬಾ. ತಳವಾರ |
| ಅಳ್ನಾವರ | ೬ | ೫ | ಆಯ್. ಆಯ್. ನೀರಲಗಿ |
| ಶಿರೋಳ | ೧೫ | ೧೨ | ಮು. ಟಿ. ತಾಂಡೆ |
| ಜಮ್ಮನಕಟ್ಟಿ | ೭ | ೫ | ಎಸ್. ಎಲ್. ಕಮತಗಿ |
| ನೇರಲಿ | ೧೦ | ೭ | ಕಾ. ಮು. ರಬಕವಿ |
| ಸವಣೂರ | ೧೯ | ೧೬ | ಹೆ. ಫ. ತಿ. ಸವಣೂರ |
| ಅಮ್ಮಿಣಗಿ | ೧೪ | ೧೪ | ಪಿ. ಆರ್. ಪೂಜಾರ |
| ಹೊಸೂರ | ೪ | ೪ | ಯ. ಯ. ಗಾರವಾಡ |
| ಬಸಾಪೂರ ತಾ. ಹುಕ್ಕೇರಿ | ೧೧ | ೮ | ವೆ. ರಾ. ಜೋಶಿ |
| ಕಿರೆಸೂರ (ತಾ. ಬಾಗಲಕೋಟ) | ೭ | ೫ | ರು. ಶಿ. ತಕರಡ್ಡಿ |
| ಕೊಂಚಿಗೇರಿ | ೪ | ೪ | ಆರ್. ಡಿ. ದ್ಯಾವನಗೌಡ್ರ |
| ಹಿರೇಹಾಳ | ೧೦ | ೬ | ಆ. ಸು. ಬಿದರಹಟ್ಟಿ |
| ಮಿಶ್ರಿಕೋಟಿ | ೧೭ | ೧೪ | ಸಿ. ಪಿ. ಹಿರೇಮಠ |
| ತುಂಬಗಿ | ೪ | ೩ | ಮು. ಗು. ತಾಯಮ್ಮನವರ |

| ಊರು | ಪ.ಕುಳಿತವರ ಒ.ಸಂಖ್ಯೆ | ಪಾಸಾದ ಸಂಖ್ಯೆ | ಕಲಿಸಿದ ಗುರುಗಳು ಶ್ರೀಯುತರುಗಳಾದ |
|---|---|---|---|
| ಭತಗುಣಕಿ | ೧೩ | ೧೩ | ಎಸ್. ಆರ್. ಪಾಟೀಲ |
| ಇಟಗಿ | ೭ | ೫ | — |
| ಮನಗೂಳಿ | ೨೭ | ೨೨ | ಲ. ಶಿ. ಹರಿಜನ |
| ಸುಳ್ಳ | ೫ | ೪ | ಡಿ. ಕೆ. ಗೌರಿ |
| ಭಾವಿಕೇರಿ | ೧೧ | ೯ | ಪಿ. ಎಮ್. ಶೆಟ್ಟಿ |
| ಹಿಚಕಡ | ೧೨ | ೧೧ | — |
| ಮಸಬಿನಹಾಳ | ೧೦ | ೮ | ಈ. ಬಾ. ತುಂಬಗಿ |
| ಮಾಕನೂರ | ೧೧ ಗಂ.+ ೧ ಹೆ=೧೨ | ೯ ಗಂ + ೧ ಹೆ=೧೦ | ಎಫ್. ಡಿ. ಒಡ್ಡರ |
| ಕ.ಗಂ.ನಂ. ೨–೫ ರಾಣೇಬೆನ್ನೂರ | ೩೫ | ೨೪ | — |
| ಕುರಡಗಿ | ೮ | ೪ | ಹು. ಶಿ. ಸೊಪ್ಪಣ್ಣವರ |
| ಉಳ್ಳೇಗಡ್ಡಿ ತಾ. ಹಾನಾಪೂರ | ೧೧ | ೧೧ | ಎಚ್. ಎ. ಪಾಟೀಲ |
| ಸಂಕೇಶ್ವರ, ಬೀಟಶಾಲೆ | ೧೦೦% | ೧೦೦% | — |
| ಕೆ.ಎಲ್.ಇ.ಸೊ. ಪ್ರಾ.ಸಿ.ಸ್ಕೂಲ ಬೆಳಗಾಂವಿ | ೧೫ | ೧೧ | — |
| ಹಿರೇಗುಂಜಳ | ೭ | ೬ | ಹ. ಗು. ಪಾಟೀಲ |
| ಬೆಳಕೂಡ | ೫ | ೪ | ಗಂ. ಸಿ. ತಪಕೀರೆ |
| ನೀರಲಗಿ ತಾ. ಹಾನಗಲ್ಲ | ೫ | ೪ | ಮ. ಮೋ. ಹರಕುಣಿ |
| ಮಿರ್ಜಿ ತಾ. ಮುಧೋಳ | ೪ | ೪ | ಅ. ಇ. ಬೇವೂರ |
| ಪ್ರಾ.ಸ್ಕೂ.ಗಂ.ಮ. ಟ್ರೇ. ಕಾ. ಧಾರವಾಡ | ೫೨ | ೪೨ | ಪ್ರಾ.ಸ್ಕೂ. ಗಂ. ಮ. ಸ. ಟ್ರೇ. ಕಾ. ಧಾರವಾಡ |
| ಮುದೇನೂರ | ೨೯ | ೧೫ | ಎ. ಆರ್. ಮಾಲಗಿತ್ತಿಮಠ |
| ಕುಪಜಿ | ೮ | ೮ | ಭಾ. ಬ. ಈಳಿಗೇರ |
| ಮೆಣಸಗಿ | ೬ಗಂ ೨ಹೆ | ೫ಗಂ ಹೆ೨ | ಗು. ನಾ. ಮಣ್ಣೂರ |
| ಹಿರೇಲೋಣಿ | ೮ | ೭ | ಭೋ. ಸಿ. ಹೊರ್ತಿ |
| ಕಗ್ಗೋಡ | ೧೦ | ೮ | ಮ. ಕ. ಜೇವುರಗಿ |
| ಸೀಮೀಕೇರೆ | ೩ | ೩ | — |
| ಮುಸಗುಪ್ಪಿ | ೯ | ೭ | M. B. ಹಟ್ಟಿಗೌಡರ |
| ಖನಗಾಂವ | ೧೩ | ೧೩ | ಶಂ. ಅ. ಮ್ಯಾಗೋಟಿ |
| ಹತ್ತರಗಿ | ೯ | ೭ | ಬಿ. ಪಿ. ಬಾದಾಮಿ |
| ಮುಂಡರಗಿ | ೨೨ | ೧೬ | ಲಿಂ. ಮು. ಲಿಂಗಶೆಟ್ಟರ |
| ಸಾಲವಾಡಗಿ | ೧೦ | ೯ | — |
| ಮಡ್ಲಿ | ೭ | ೪ | ಪಿ. ಎಸ್. ಕಾಂಬಳಿ |

| ಊರು | ಪ. ಕುಳಿತವರ ಒ. ಸಂಖ್ಯೆ | ಪಾಸಾದ ಸಂಖ್ಯೆ | ಕಲಿಸಿದ ಗುರುಗಳು ಶ್ರೀಯುತರುಗಳಾದ |
|---|---|---|---|
| ಕಾಸರಕೋಡ | ೧೩ | ೧೦ | ಬಾಳೇಮನೆ |
| ಯರಗಲ್ಲ | ೬ | ೫ | ಗು. ನಿ. ಅಕ್ಕಸ್ತಿ |
| ಕಾಖಂಡಿ | ೧೭ | ೧೬ | ನಾಮ ಕೆರೂರ |
| ನಿಡಗುಂದಿ | ೧೧ | ೧೦ | ಎಸ್. ಎಸ್. ಅಡಿಕೇನವರ |
| ಕಾನ್ನಾಳ | ೬ | ೫ | ಮು. ಭೀ. ಜಮಖಂಡಿ ( ಮು. ಗು. ) |
| ಸೂಡಂಬಿ | ೭ | ೬ | ಬಿ. ಎಸ್. ತಿರಕನಗೌಡರ |
| ಅಕ್ಕಿಆಲೂರ | ೩೨ | ೩೧ | ಕು. ಪು. ಶಾಂತಪೂರಮಠ |
| ಕಲಕೇರಿ | ೧೪ | ೧೦ | ಡಿ. ಆಯ್. ಮುರಡಿ |
| ಕ್ಯಾಡಗಿ | ೧೩ | ೧೦ | ಗೋ. ಈ. ನಾಯ್ಕ |
| ಕದಡಿ | ೬ | ೪ | ವೀ ವೀ ಗಡಿಗಿ |
| ಯಮನೂರ | ೮ | ೭ | ಭೀ. ತೋ. ಈಟಿ |
| ಮಲ್ಲಿಗೆವಾಡ | ೧೦ | ೭ | ನೀ. ಬ. ದೇಸಾಯಿ |
| ಉಕ್ಕಲಿ ಕ. ಹೆ. ಮ. ಶಾಲೆ | ೬ | ೫ | ಮ. ಸಿ. ಕೌಲಗಿ ( ಮು. ಗು.) |
| ಮುದ್ದೇಬಿಹಾಳ (ಕ. ಗಂ. ಮ. ಶಾಲೆ) | ೩೪ | ೩೪ | ಶಾ. ನಿ. ಶಿವಯೋಗಿಮಠ |
| ಮುದ್ದೇಬಿಹಾಳ (ಕ. ಹೆ. ಮ. ಶಾಲೆ) | ೭ | ೪ | ಶ್ರೀಮತಿ ಜಿ. ಎಸ್. ಶಿವಯೋಗಿಮಠ |
| ಬೆಳಧಡಿ ತಾ. ಗದಗ | ೪ | ೨ | ರಾ. ಉ. ಲಮಾಣಿ ( ಜೆ. ಮಾ. ) |
| ತುಮ್ಮಿನಕಟ್ಟಿ (ಕ. ಗಂ. ಮ. ಶಾಲೆ) | ೧೫ | ೧೪ | ಗ. ಕ. ಮಠ ( ಹೆ. ಮಾ. ) |
| ,, (ಕ. ಉ. ಗಂ. ಮ. ಶಾಲೆ) | ೫ | ೪ | — |
| ಮುತ್ತಗಿ | ೧೯ | ೧೬ | — |

| ಊರು | ಪರೀಕ್ಷೆ | ಉ. ಹೆಸರು | ಕಲಿಸಿದ ಗುರುಗಳು |
|---|---|---|---|
| ಸಾಲಾಪೂರ (ತಾ. ರಾಮದುರ್ಗ) | P. S. C. | ಕು. ರಾ. ಮ. ಯಾದವಾಡ ಈತನು ರಾಮದುರ್ಗ ಕೇಂದ್ರಕ್ಕೆ ೧ ಸ್ಥಾನ ವನ್ನು ಪಡೆದಿದ್ದಾನೆ. ಮತ್ತು ಜಿಲ್ಲೆಗೆ ೩ನೇ ಸ್ಥಾನವನ್ನು ಪಡೆದಿದ್ದಾನೆ. | ಮ. ಬ. ನಾವಲಗಿ. |
| ಕಲಾದಿಗಿ | ಮಿ.ಸ್ಕೂ.ಸ್ಕಾ.ಸಿ. | ೧. ಕು. ಆರ್. ಎಸ್. ಆಕಳವಾಡಿ. | ಸಿ. ಎಸ್. ವಿರಕ್ತಮಠ. |
| | | ೨. ,, ವ್ಹಿ. ಕೆ. ಅಂಕಲಗಿ. | ,, |

| ಊರು | ಪರೀಕ್ಷೆ | ವಿದ್ಯಾರ್ಥಿಯ ಹೆಸರು | ಕಲಿಸಿದ ಗುರುಗಳು ಶ್ರೀಯುತರುಗಳಾದ |
|---|---|---|---|
| ನರಗುಂದ | ಹೈ. ಸ್ಕಾ. ಸಿ. ಪ | ಎ. ಬಿ. ಸುಹಿಷಿ<br>ಆರ್. ಎಲ್. ಕುಲಕರ್ಣಿ | ಬಿ. ಎಮ್. ಚಲವಾದಿ |
| ವಿಜಾಪುರ | ಹೈ. ಸ್ಕಾ. ಸಿ. ಪ | ರಾಜೇಂದ್ರ ಜಾಲಿಹಾಳ | ಬಿ. ಆಯ್. ಪಾಟೀಲ |
| ವಿಜಾಪುರ | ಮಿ.ಸ್ಕೂ. ಸ್ಕಾ ಪ | ಶ್ರೀಕಾಂತ ಜ. ಜಹಗೀರದಾರ<br>ಅಶೋಕ ವ. ಕೆರೂರ<br>ಗುರುನಾಥ ಗ. ಚಿಂಚಣೇಕರ<br>ಈ ಮೂವರು ವಿಜಾಪೂರ ಜಿಲ್ಲೆಗೆ I, II, IIIನಂಬರ ಪಡೆದಿದ್ದಾರೆ. | ಪ. ರಾ. ಜಗಲಿ |
| ಹಿರೇಮಸಳಿ | ಹೈ. ಸ್ಕಾ. ಸಿ. ಪ | ೬ರಲ್ಲಿ ೪ ವಿ.ಗಳು ಪಾಸಾಗಿ ೧,೩,೪, ೧೦ ನಂಬರ ಪಡೆದಿದ್ದಾರೆ. ಮಲ್ಲಿಕಾರ್ಜುನ ಕಲ್ಲೂರ ಈತನು ಬಿಜಾಪೂರ ಜಿಲ್ಲೆಗೆ ಪ್ರಥಮ ಸ್ಥಾನವನ್ನು ಗಳಿಸಿರುವನು. | ಭಿ. ಗೆ. ಹುಣಶಾಳ |
| ಮುದ್ದೆಬಿಹಾಳ | ಮಿ.ಸ್ಕೂ. ಸ್ಕಾ.ಪ | ವೀರಾಜಿ ಪ. ನಲವಡೆ<br>IIIನೆಯ ನಂಬರ ಪಡೆದಿದ್ದಾನೆ. | — |
| ತಿರೋಳ | ಹೈ. ಸ್ಕಾ. ಸಿ. ಪ | ಶಿ. ರು. ಹಬ್ಬು | ಮು. ಟಿ. ಲಾಂಡೆ |
| ಬೀಡಿ ತಾ. ಖಾನಪುರ | P. S. C. | ಮಲ್ಲಪ್ಪ ಶಿ. ಶೀಗಿಹಳ್ಳಿ<br>ಬೆಳಗಾವಿ ಜಿಲ್ಲೆಗೆ Iನೆಯ ಸ್ಥಾನವನ್ನು ಪಡೆದಿದ್ದಾನೆ. | ಪಿ. ಎಸ್. ಗಾಣಿಗೇರ |
| ಬೇವೂರ | P. S. C. | ಕು. ಕ. ಮ. ಬಂಡರಗಲ್ಲ<br>ಬಾಗಲಕೋಟ ಸೆಂಟರಕ್ಕೆ Iನೆಯ ಸ್ಥಾನ ಪಡೆದಿದ್ದಾನೆ. | ಎಸ್. ಎಸ್. ಆಲವಿ |
| ಸಿಂದಗಿ | ಹೈ. ಸ್ಕಾ. ಸಿ. ಪ | ಬಿ. ಎಸ್. ಬಂಥನಾಳ | ಮಳ್ಳಿ |
| ಸವಣೂರ | P. S. C. | ಮುನ್ಶಾಖಿ ರಿನೌಲದಾರ<br>ಸವಣೂರ ಕೇಂದ್ರಕ್ಕೆ Iನೆಯ ಸ್ಥಾನ ಪಡೆದಿದ್ದಾನೆ. | ಫ. ಶಿ. ಹೊಸಮನಿ |
| ಅಮ್ಮಿಣಗಿ | P. S C. | ಬಿ. ಆರ್. ನಾವಿ<br>ಸಂಕೇಶ್ವರ ಕೇಂದ್ರಕ್ಕೆ IIನೆಯ ಸ್ಥಾನ ಪಡೆದಿದ್ದಾನೆ. | ಪಿ. ಆರ್. ಪೂಜಾರ |
| ಸಂಕೇಶ್ವರ | P. S. C. | ಸಂ. ಉ. ಕೇಂದ್ರ Iನೆಯ ಸ್ಥಾನ. | — |

| ಊರು | ಪರೀಕ್ಷೆ | ಸಿ. ಹೆಸರು | ಕಲಿಸಿದ ಗುರುಗಳು ಶ್ರೀಯುತರುಗಳಾದ |
|---|---|---|---|
| ಧಾರವಾಡ | ಹಾ. ಸ್ಯಾ. ಶಿ. ಪ. | ಮೂವರು ಪಾಸಾಗಿದ್ದಾರೆ. | ಜೆ. ಮಾ. ಪ್ರ್ಯಾ.ಸಿ. ಸ್ಕೂಲ ಗಂ. ಮ. ಸ. ಟ್ರೇ. ಕಾ. ಧಾರವಾಡ |
| ,, | ಮಿ.ಸ್ಕೂ. ಸ್ಯಾ. ಪ | ಐವರು ಪಾಸಾಗಿದ್ದಾರೆ. | ,, |
| ಕುಡಿಚಿ | P. S. C. | ಕುಮಾರ ಜಯಪ್ರಕಾಶ ಅ. ಕದ್ದು ಈತನು ಕಾಗವಾಡ ಕೇಂದ್ರಕ್ಕೆ IIನೆಯ ಸ್ಥಾನ ಪಡೆದಿದ್ದಾನೆ. | ಭಾ. ಬ. ಈಳಗೇರ |
| ಕಗ್ಗೋಡ | P. S. C. | ಕುಮಾರ ಅಯ್ಯಪ್ಪ ಶಿ. ಕಂಡೋಳಿ ಈತನು ಬಿಜಾಪುರ ಕೇಂದ್ರಕ್ಕೆ Iನೆಯ ಸ್ಥಾನ ಪಡೆದಿದ್ದಾನೆ. | ಪು ಕ. ಜೇವುರಗಿ |
| ಖನಗಾಂವ | P. S. C. | ಕುಮಾರ ಕುಲಗೋಡ ಮತ್ತು ಬಿ. ಪಾಟೀಲ ಇವರು ಗೋಕಾಕ ಕೇಂದ್ರಕ್ಕೆ ಅನುಕ್ರಮವಾಗಿ I, III ಕ್ರಮಾಂಕವನ್ನು ಪಡೆದಿದ್ದಾರೆ. | ಶಂ ಅ. ಮ್ಯಾಗೋಟಿ |

---

# ಜೀವನ ಶಿಕ್ಷಣ ಪ್ರಪಂಚದಲ್ಲಿ

**ರಾಯಭಾಗ :** ದಿ.೨೮-೫-೧೯೫೯ ಹರಿಜನ ಸಪ್ತಾಹವನ್ನು ಮೇ ೨೨ ರಿಂದ ೨೮ ರ ವರೆಗೆ ಆಚರಿಸಲಾಯಿತು. ದಿ ೨೨ ರಂದು ಮೆ|| ಮಹಾಲಕರಿ ಸಾ|| ರಾಯಬಾಗ ಹಾಗೂ ಗ್ರಾ. ಪಂ. ಸರಪಂಚ ಅವರಿಂದ ಸಪ್ತಾಹದ ಪ್ರಾರಂಭೋತ್ಸವವು ಜರುಗಿತು.

ದಿ.೨೭ ರಂದು ಮೆ|| ಎ. ಇ. ಬೆಳಗಾವ ಹಾಗೂ ಬೀಟ ಆಫೀಸರ ಸಾ || ಚಿವಟೆ ಅವರ ಹಿರಿಯತನದಲ್ಲಿ " ಮಕ್ಕಳನ್ನು ಶಾಲೆಗೆ ದಾಖಲ ಮಾಡಿರಿ " ಎಂದು ಮಾಡಿದ ಆಂದೋಲನವು ಯಶಸ್ವಿಯಾಯಿತು.

**ಧಾರವಾಡ :** ೨ನೇ ನಂಬರ ಉ. ಗಂ. ಶಾಲೆಯ ( ಮಾಳಾಪೂರ ) ಪಾಲಕರ ದಿನಾಚರಣೆಯನ್ನು ದಿ. ೨೩-೪-೫೯ನೆಯ ದಿವಸ ಶ್ರೀ ಎ. ಎಸ್. ಡಿ. ಪರಾಣ ರಿ. ಪರ್ಸನಲ್ ಎ. ಇ. ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಸದರ ಸಮಾರಂಭಕ್ಕೆ ಶ್ರೀ ಎ. ಎಮ್. ಶೇಖ. ಅ. ಡಿ. ಎ. ಇ. ಧಾರವಾಡ. ಶ್ರೀ ಆಯ್. ಎಸ್. ಬಿದರಿ ಮ್ಯು. ಸ್ಕೂ. ಬೋ. ಎ. ಓ. ಧಾರವಾಡ. ಶ್ರೀ ಎನ್. ಎಲ್. ಧಾರವಾಡಕರ ಸದಸ್ಯರು ಮ್ಯು. ಸ್ಕೂ. ಬೋರ್ಡ. ಧಾರವಾಡ ಇವರು ಉಪಸ್ಥಿತರಿದ್ದರು.

**ನೇರಲಿ :** ದಿ ೧-೬-೫೯ ಇಲ್ಲಿಯ ಪ್ರಧಾನ ಗುರುಗಳಾಗಿದ್ದ ಶ್ರೀ ಲ. ಗೋ. ಬದಾಮಿ ಇವರಿಗೆ ಇಲ್ಲಿಂದ ವರ್ಗವಾದ್ದರಿಂದ ಬೀಳ್ಕೊಡುವ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಅಧ್ಯಕ್ಷ ಸ್ಥಾನವನ್ನು ಈ ಭಾಗದ ಸಮಾಜ ಕಾರ್ಯಕರ್ತರಾದ ಶ್ರೀ ಎಸ್. ಆಯ್. ಪಾಟೀಲ ಬಿ. ಎ. ಎಲ್‌ಎಲ್. ಬಿ. ಅವರು ವಹಿಸಿದ್ದರು.

**ಸಂಕೇಶ್ವರ :** ದಿ.೨೯-೫-೫೯ರಂದು ಕ. ಗಂ. ಮ. ಶಾಲೆಯಲ್ಲಿ ಅ. ಡಿ. ಎ. ಇ. ಸಾಹೇಬರಾದ ಶ್ರೀ ಇ. ಆರ್. ರಾವುತ ಇವರಿಗೆ ಬೈಲಹೊಂಗಲ ಬೀಟಿಗೆ ವರ್ಗವಾದದ್ದರಿಂದ ಅವರ ಬೀಳ್ಕೊಡುವ ಸಮಾರಂಭವನ್ನು ಶಾಲೆಯ ಹೈಸ್ಕೂಲ ಹೆ .ಮಾಸ್ತರರಾದ ಶ್ರೀ ಎನ್. ಜಿ. ಹೊಸಮನಿ ಅವರ ಹಿರಿಯತನದಲ್ಲಿ ಏರ್ಪಡಿಸಲಾಯಿತು.

Regd. No. B. 5375

ಭಾಗ ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧೫

( ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು )

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಡೆ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧–೨ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಆಗಷ್ಟ ದಿಂದ ಆಗಷ್ಟಕ್ಕೆ ಒಂದು ವರುಷ ಬಿಡಿ ಕುಸುಮ ಚಂದಾದಾರರಿಗೆ ¾ ಬೆಲೆಯಲ್ಲಿ [ಅಂಚೆವೆ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪಋಣ ತಮ್ಮ ಶಿಕ್ಷಕ ಮಿತ್ರ ಏಳ್ಗೆಗೆ ಮೀಸಲು. ಗಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

**ಕಲ್ಯಾಣ ಕನ್ನಡ ಗುಡಿಯ ಕಾಣಿಕೆ**

**ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ!**

## "ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮ ತಣಿಸುವಂಥ, **ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಿಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂ ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ ಪಾವಟಿಯವರು ಮುನ್ನುಡಿ ಬರೆದಂ ಅಮೋಘ ಗ್ರಂಥ.**

**ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ.** ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯ ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂ **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಆಗಸ್ಟ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ ಓ. ಸಾಹೇಬರ ಅನು ಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

**ಸಾದಾ ಪ್ರತಿ ೩ ರೂ. ]** **ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್.** **[ ಸುಂದರ ಪ್ರತಿ ೪ ರೂ**

**ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬಿ, ಜಿಲ್ಲಾ:— ವಿಜಾಪುರ.**

Printed by Shri S. F. Kattimani, at Manohar Power Printing Press, Hubli. Edited a Published by Sjts. M. G. Katti, B. M. Shintri, S. R. Tatti & Smti. P. A. Bhaskar, at t Kannada Jeevan Shikshan Office, Govt. Training College for Men, Dharwar.

ಪ್ರಧಾನ ಸಂಪಾದಕರು : ಶ್ರೀ ಎಸ್. ಜಿ. ಕಟ್ಟಿ

ಜೋಗದ ಜಲಪಾತ

# ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : **ಶ್ರೀ ಎಮ್. ಜಿ. ಹಂದ್ರಾಳ,** ಬಿ.ಎ.(ಆನರ್ಸ),ಎಮ್.ಈಡಿ.,ಡಿ.ಬಿ.ಈಡಿ ,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : **ಶ್ರೀ ಎಮ್. ಜಿ. ಕಟ್ಟಿ,** ಬಿ.ಎ.(ಆನರ್ಸ), ಬಿ.ಟಿ.,ಡಿ.ಬಿ.ಈ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

**ಶ್ರೀಮತಿ ಪಿ. ಎ. ಭಾಸ್ಕರ,** ಲೇಡಿ ಸುಪರಿಂಟಿಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

**ಶ್ರೀ ಬಿ. ಎಂ. ಶಿಂತ್ರಿ,** ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ
(ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್,
ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

**ಶ್ರೀ ಎಸ್. ಆರ್. ತಟ್ಟಿ,** ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

**ಸಂಪುಟ ೯ಕ** **ಮೇ ೧೯೫೯** **ಸಂಚಿಕೆ ೧೨**

## — ಪರಿವಿಡಿ —


| | | | | |
|---|---|---|---|---|
| ೧ | ಸಂಪಾದಕೀಯ | .... | .... | ೧ |
| ೨ | ಪುರೋಗಾಮಿ ಶಿಕ್ಷಕರಾಗುವದೆಂತು ? (ಭಾಷಣ) | .... | ಶ್ರೀ ಎಮ್. ಜಿ. ಹಂದ್ರಾಳ | ೨ |
| ೩ | ಪ್ರಕಟಣೆ | .... | .... | ೪ |
| ೪ | ಜೀವನ ಶಿಕ್ಷಣ ಶಾಲೆಗಳಲ್ಲಿ ಪ್ರವಾಸ ಹಾಗೂ ನಿರೀಕ್ಷಣೆ | .... | ಶ್ರೀ ಎನ್. ಬಿ. ಮುದಕವಿ | ೫ |
| ೫ | ಜೀವನ ಶಿಕ್ಷಣ ಶಾಲೆಗಳ ಒಳನೋಟ | .... | ಶ್ರೀ ಮು. ಖ. ಶ್ಯಾಡಗುಪ್ಪಿ | ೬ |
| ೬ | ಜೀವನ ಶಿಕ್ಷಣ | .... | ಶ್ರೀ ಎಮ್. ಕೆ. ಚಿಕ್ಕಮಠ | ೧೦ |
| ೭ | ಬಾಲಮಂದಿರಗಳು | .... | ಶ್ರೀ ವ್ಹಿ. ಆರ್. ದೇಶಪಾಂಡೆ | ೧೫ |
| ೮ | ಯುಗಾದಿ ಹಬ್ಬ | .... | ಶ್ರೀ ಶಿ. ಚ. ಹಿರೇಮಠ | ೧೯ |
| ೯ | ದೀಪದಾನ ಸಮಾರಂಭ ಪ್ರತಿಜ್ಞಾವಿಧಿ | .... | .... | ೨೧ |
| ೧೦ | ಪಂಡಿತಾ ರಮಾಬಾಯಿ | .... | ಶ್ರೀ ಟಿ. ಎಫ್. ದೇಸಾಯಿ | ೨೨ |
| ೧೧ | ಭಾರತದಲ್ಲಿ ನೀರಾವರಿಯ ಹೊಸ ಯೋಜನೆಗಳು | .... | ಶ್ರೀ ಆರ್. ಎಸ್. ಸೂರ್ಯವಂಶಿ | ೨೫ |
| ೧೨ | ಪಾಠಗಳ ವಿಭಜನೆ | .... | ಶ್ರೀ ಆರ್. ಬಿ. ಸೊನಗಾರ | ೨೭ |
| ೧೩ | ಜೀವನ ಶಿಕ್ಷಣ ಪ್ರಸಂಚದಲ್ಲಿ | .... | | ಕವರು ೩ |


ಮುಖ ಚಿತ್ರ ಸಂಯುಕ್ತ ಕರ್ನಾಟಕದ ಕೃಪೆಯಿಂದ

# ಸಂಪಾದಕೀಯ

## ವಸಂತ ಋತು

ವಸಂತನನ್ನು 'ಋತುರಾಜ' ನೆಂದು ಕರೆಯುವರು. ಕೋಗಿಲೆಯ ಕುಕಿಲು, ತರುರಾಜಿಗಳ ಮುಗುಳು ಗಳೊಡನೆಯೆ ಪ್ರಕೃತಿಯು ಹೊಸತನವನ್ನು ಪಡೆಯು ವಂತೆ ಜನ ಜೀವನವೂ ಹೊಸತನವನ್ನು ಪಡೆಯುತ್ತಿದೆ. ಒಕ್ಕಲು ಮಕ್ಕಳು ತಮ್ಮ ಉದ್ಯೋಗವನ್ನೆಲ್ಲ ಪೂರೈಸಿ, ವಿರಾಮಸುಖವನ್ನು ಅನುಭವಿಸುವರು. ನೃತ್ಯ, ಸಂಗೀತ, ವಿನೋದ-ಕಥಾಲಾಪಗಳಲ್ಲಿ ಜನಸಮುದಾಯವು ಕಾಲ ಕಳೆಯ ಹತ್ತುವದು. ಜಾತ್ರೆ, ಮದುವೆ, ಉತ್ಸವ ಮೊದಲಾದ ಸಾಮಾಜಿಕ ಚಟುವಟಿಕೆಗೂ ಈ ವಸಂತ ಋತುವಿನಲ್ಲಿ ಕಳೆಯೇರುವದು. ಮಕ್ಕಳೂ ಕೂಡ ತಮ್ಮ ಪರೀಕ್ಷೆಗಳನ್ನು ಪೂರೈಸಿ ಆನಂದದಿಂದ ನೆಗೆದಾಡುವರು! ಗುರುವರ್ಗವೂ ಕೂಡ ಬಿಡುವು ಬಂದಿತೆಂದು ಉಸಿರೆಳೆ ಯುವರು. ಅಂತೂ 'ವ ಸಂ ತ ಋ ತು ವಿ ನ ಲ್ಲಿ ಜೀವನ ರಂಗ ಭೂಮಿಯಲ್ಲಿಯ ಪಾತ್ರ ವರ್ಗವೆಲ್ಲವೂ ಸಂತೋಷ ಸಂಭ್ರಮಗಳಲ್ಲಿ ಮುಳುಗುವದರಿಂದ ಅವನು ಋತುರಾಜನೇ ಸೈ!

## ಪರೀಕ್ಷೆಗಳು

ಸಾಮಾನ್ಯವಾಗಿ ಎಪ್ರಿಲ್ ತಿಂಗಳನ್ನು ಪರೀಕ್ಷೆಯ ಮಾಸವೆಂದು ಹೇಳಬಹುದು. ಚಿಕ್ಕ ಮಕ್ಕಳಿಂದ ವಿಶ್ವವಿದ್ಯಾನಿಲಯದ ಕೊನೆಯ ಹಂತದ ಎಲ್ಲರ ಪರೀಕ್ಷೆಗಳೂ ನಡೆಯುವವು. ಇಂದಿನ ಪರೀಕ್ಷೆಗಳು ವಸ್ತುನಿಷ್ಠವಾಗಿರುವದಿಲ್ಲವೆಂದು, ಅವು ಮಕ್ಕಳ ಅಭ್ಯಾಸಗಳ, ನಿಜವಾದ ಒರೆಗಲ್ಲುಗಳಾಗಿರುವದಿಲ್ಲವೆಂದು ಎಲ್ಲರೂ ಹೇಳುತ್ತಿರುವರು. ಪರೀಕ್ಷಾ ಪದ್ಧತಿಗಳ ಆಮೂಲಾಗ್ರ ಬದಲಾವಣೆಯ ಎತ್ತುಗಡೆಗಳೂ ಶಿಕ್ಷಣ ಪ್ರಸಂಚದಲ್ಲಿ ನಡೆದಿವೆ. ಕೆಲವರು ಪರೀಕ್ಷೆಗಳೇ ಬೇಡ ವೆಂದು ಹೇಳುತ್ತಿರುವರು.

ಅದನೇ ಇದ್ದರೂ ಕಾರ್ಯ ಪರಿಶೀಲನೆಯನ್ನು ಮಾಡುವದು ಮನುಷ್ಯ ಸ್ವಭಾವವು. ಮನುಷ್ಯನು ತಾನು ನಡೆದು ಬಂದ ದಾರಿಯನ್ನು ಕ್ಷಣಹೊತ್ತು ನಿಂತು ನಿರುಕಿಸಿ ಮುನ್ನಡೆಯುವನು. ಅದು ಅವನಿಗೆ ತಾನು ನಡೆದು ಹೋದ ದಾರಿಯ ಒಂದು ಕಲ್ಪನೆಯನ್ನು ತಂದು ಕೊಡುವದಲ್ಲದೆ, ಮುಂದೆ ಇನ್ನೆಷ್ಟು ನಡೆಯಬೇಕೆಂಬುದರ ಸ್ಪಷ್ಟ ಚಿತ್ರವನ್ನು ಕಣ್ಣೆದುರಿಗೆ ಇಡುವದು. ಅದು ಜೀವನಕ್ಕೆ ನೆಮ್ಮದಿಯನ್ನು ನೀಡುವದಲ್ಲದೆ, ಮುಂದಿನ ಕಾರ್ಯಕ್ಕೆ ಪ್ರಜ್ಞೋದನೆಯನ್ನು ಉಂಟು ಮಾಡುವದು. ಈ ದೃಷ್ಟಿಯಿಂದ ಕಾರ್ಯ ಪರಿಶೀಲನೆ-ನಡೆದು, ಬಂದ ದಾರಿಗೆ-ಜ್ಞಾನ ದೀಪದ ಬೆಳಕು ನೀಡುವ ವಸ್ತುನಿಷ್ಠ ವಾದ ಪರೀಕ್ಷೆಗಳು ಇದ್ದರೆ ಅಸಾಧುವೆನಿಸದು.

## ಬಿಡುವಿನ ಸದುಪಯೋಗ

ಪರೀಕ್ಷೆಗಳು ಮುಗಿದೊಡನೆಯೇ ಬಾಲಕರಿಗೂ ಗುರುಗಳಿಗೂ ಜೊತೆಯಾಗಿಯೇ ದೀರ್ಘ ಬಿಡುವು ದೊರಕುವದು. ಅನೇಕರು ಬಿಡುವೆಂದೊಡನೆಯೇ ಐಷಾರಾಮದಲ್ಲಿ ಕಾಲ ಕಳೆಯುವದೆಂಬ ಕಲ್ಪನೆಯನ್ನು ಮಾಡಿಕೊಳ್ಳುವರು. ಅಂತೆಯೇ ನಮ್ಮ ಪ್ರಧಾನ ಮಂತ್ರಿಗಳು 'ಆರಾಮ ಹರಾಮ ಹೈ' ಎಂದು ಉದ್ಘೋಷಿಸಿರುವರು, ಆರಾಮದರ್ಥವು 'ಹರಾಮವಾಗಿ ಕಾಲ ಕಳೆಯುವದಲ್ಲ' ವರುಷದುದ್ದಕ್ಕೂ ಮಾದುತ್ತ ಬಂದ ಕಾಯಕದಲ್ಲಿ ಜಡತ್ವವು ತೋರಿಬರುವದು. ಕಾಯಕವನ್ನು ಬದಲಿಸಿ ಮನಸ್ಸನ್ನು ಉಲ್ಲಾಸಿತಗೊಳಿಸ ಬೇಕು. ದೀರ್ಘ ಪ್ರವಾಸಗಳು, ನಿಸರ್ಗ ರಮಣೀಯ ಪ್ರದೇಶಗಳ ಸಂ ದ ರ್ಶ ನ ಮೊದಲಾದವುಗಳನ್ನು ಶಿಕ್ಷಕರು ಬಿಡುವಿನಲ್ಲಿ ಕೈಕೊಳ್ಳಬಹುದು. ನಿಸರ್ಗವು ಸಾಂತ್ವನ ಶಕ್ತಿಯನ್ನು ಪಡೆದಿದೆಯಲ್ಲದೆ, ಜೀತೋಹಾರಿ ಯಾಗಿದೆ. ನಮ್ಮ ಪ್ರಧಾನ ಮಂತ್ರಿಗಳು 'ಕುಲೂ ಕೊಳ್ಳಕ್ಕೆ ಹೋಗಿ ವಿಶ್ರಮಿಸಿ ಬಂದರು; ಆದರೆ ಅವರು ಅಲ್ಲಿಯ ವಾಸ್ತವ್ಯದಲ್ಲಿ ಕಾಗದ ಪತ್ರಗಳ ಫೈಲನ್ನು ಕೆಲ ದಿನ ಬದಿಗಿರಿಸಿ, 'ಪತ್ರಗಳ ಗೊಂಚಲನ್ನು' ಹೊರ ದೆಗೆದರು. ಮತ್ತೆ ಸಿಂಹ ಸದೃಶವಾದ ಹೃದಯ ಉತ್ಸಾಹಗಳೊಂದಿಗೆ ಕೊಳ್ಳದಿಂದ ಎದ್ದು ಬಂದರು. ಇಂದಿನ ನಮ್ಮ ಪ್ರಾಥಮಿಕ ಶಿಕ್ಷಕ ಬಾಂಧವರಿಗೆ ಬಿಡುವನ್ನು ಈ ತೆರನಾಗಿ ಬಳಸಿಕೊಳ್ಳುವುದು ಆರ್ಥಿಕ ಮುಗ್ಗಟ್ಟಿನಲ್ಲಿ ಆಗಲಿಕ್ಕಿಲ್ಲ; ಜ್ಞಾನ ಸಂಗ್ರಹಾದಿ ಯೋಜನೆಗಳನ್ನು ಮಾಡಿಕೊಳ್ಳುವುದರಲ್ಲಿ ಕಳೆಯ ಬಲ್ಲರು. ಮಕ್ಕಳೂ ಕೂಡ ಬಿಡುವಿನ ಸದುಪಯೋಗ ವನ್ನು ಕಾರ್ಯಾಂತರಗಳಿಂದ ಮಾಡಿಕೊಳ್ಳಲಿ.

## ದೀಪದಾನ ಸಮಾರಂಭ

ಎಪ್ರಿಲ್ ೨೯ ನೆಯ ದಿನಾಂಕ ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜದಲ್ಲಿ ದೀಪದಾನ

ಸಮಾರಂಭವು ಒಳ್ಳೇ ಗಂಭೀರವಾದ ವಾತಾವರಣದಲ್ಲಿ ನಡೆಯಿತು. ಎರಡು ವರುಷ ತರಬೇತಿಯನ್ನು ಪಡೆದು ಹೊರಬೀಳಲಿರುವ ಶಿಕ್ಷಕ ವಿದ್ಯಾರ್ಥಿಗಳಿಗೆ ಪ್ರಿನ್ಸಿಪಾಲರಾದ ಶ್ರೀಯುತ ಎಮ್. ಜಿ. ಕಟ್ಟಿಯವರು ದೀಪ-ದಾನ ಮಾಡಿ- ಸಂದೇಶ ಬೀರಿದರು. ಅವರು ತಮ್ಮ ಸಂದೇಶದಲ್ಲಿ ಅಮರ ಬಾಪುವಿನ ಜೀವನ ಜ್ಯೋತಿಯ ಬೆಳಕಿನಲ್ಲಿ ನಡೆಯಲು ಕೇಳಿಕೊಂಡರು.

ನಮ್ಮ ಧಾರವಾಡ ಜಿಲ್ಲೆಯ ವಿದ್ಯಾಧಿಕಾರಿಗಳಾದ ಶ್ರೀಮಾನ್ ಎಮ್. ಜಿ. ಹಂದ್ರಾಳರು ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಅವರು ಶಿಕ್ಷಕ ವಿದ್ಯಾರ್ಥಿಗಳನ್ನು ಕುರಿತು ಒಳ್ಳೇ ಅಮೋಘವಾದ ಭಾಷಣವನ್ನು ಮಾಡಿದರು. ಅವರು ತಮ್ಮ ಭಾಷಣದಲ್ಲಿ ಶಿಕ್ಷಕರು ಪುರೋಗಾಮಿಗಳು ಎಂತಾಗಬಲ್ಲರು ಎಂಬುದನ್ನು ತೋರಿಸಿಕೊಟ್ಟರು. ಒಳ್ಳೆಯ ಸಂಸ್ಕಾರ, ಮಾತೃ ವಾತ್ಸಲ್ಯ, ಸಂತತವಾದ ವಿದ್ಯಾರ್ಥಿ ಜೀವನ, ಗೌರವಾನ್ವಿತ ಜೀವನ ನಿರ್ವಹಣೆ, ಕಾಯಕದಲ್ಲಿ ಫಲಾಪೇಕ್ಷೆಯಿಲ್ಲದೆ ನಿರತರಾಗುವದು, ಬಾಳತೇದು ಬಾವನ್ನು ಬೀರುವ ಪರೋಪಕಾರ ಬುದ್ಧಿಗಳನ್ನು ಜೀವನದಲ್ಲಿ ತಂದುಕೊಳ್ಳುವವೇ ಪುರೋಗಾಮಿತ್ವದ ಲಕ್ಷಣವೆಂದು ಶ್ರೀಯುತರು ಶಿಕ್ಷಕರಿಗೆ ಉಪದೇಶಿಸಿದರು.

## ರ್ಯಾಂಗ್ಲರ ಪಾವಟಿಯವರ ಷಷ್ಟ್ಯಬ್ದಿ ಪೂರ್ತಿ ಸಮಾರಂಭ

ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳೂ, ಶಿಕ್ಷಣತಜ್ಞರೂ ಆದ ಶ್ರೀಮಾನ್ ಡಿ. ಸಿ. ಪಾವಟೆಯವರು ಒರಲಿರುವ ಆಗಷ್ಟ ತಿಂಗಳಲ್ಲಿ ಅರವತ್ತು ವರುಷಗಳನ್ನು ದಾಟಿ ಅರವತ್ತೊಂದರಲ್ಲಿ ಪಾದಾರ್ಪಣೆ ಮಾಡುತ್ತಲಿರುವರು. ಅಂಥವರ ಷಷ್ಟ್ಯಬ್ದಿ ಪೂರ್ತಿ ಸಮಾರಂಭವನ್ನು ನೆರವೇರಿಸಿ ಶ್ರೀಯುತರಿಗೆ ಒಂದು ಉದ್ಗ್ರಂಥವನ್ನೂ ಹವಿಣಿಯನ್ನೂ ಅರ್ಪಿಸಬೇಕೆಂಬ ಉದ್ದೇಶದಿಂದ ಕನ್ನಡಿಗರ ಪ್ರಾತಿನಿಧಿಕ ಸತ್ಕಾರಸಮಿತಿಯೊಂದು ಈಗಾಗಲೇ ರಚಿತವಾಗಿ ಆ ದಿಶೆಯಲ್ಲಿ ಮುಂದುವರೆದಿದೆ. ಸತ್ಕಾರ ಸಮಿತಿಯಲ್ಲಿ ಕನ್ನಡ ನಾಡಿನ ಸುಪ್ರಸಿದ್ಧ ಮುಂದಾಳುಗಳಾದ ಶ್ರೀಮಾನ್ ಎಸ್. ನಿಜಲಿಂಗಪ್ಪನವರು, ಶ್ರೀಮಾನ್ ಎನ್. ಕೆ. ದೀಕ್ಷಿತ ವಕೀಲರು, ಶ್ರೀಯುತ ವ್ಹಿ. ಎಸ್. ಬಸವನಾಳ ಮೊದಲಾದ ಪ್ರಭೃತಿಗಳು ಇರುವರು. ಅವರು ಈಗಾಗಲೇ ಒಂದು ಬಿನ್ನಹ ಪತ್ರವನ್ನು ಹೊರಡಿಸಿ ಶ್ರೀಮಾನ್ ಪಾವಟೆಯವರ ವ್ಯಕ್ತಿತ್ವದ ಪರಿಚಯವನ್ನು ಮಾಡಿಕೊಟ್ಟಿರುವರಲ್ಲದೆ ಕನ್ನಡಿಗರನ್ನು ಸಕ್ರಿಯ ಸಹಾಯ ವೀಯಲು ಕೇಳಿಕೊಂಡಿದ್ದಾರೆ.

ಶ್ರೀಮಾನ್ ಪಾವಟೆಯವರು ಶಿಕ್ಷಣ ಪ್ರಪಂಚಕ್ಕೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ; ಹಿಂದಕ್ಕೆ ಮುಂಬೈ ರಾಜ್ಯದಲ್ಲಿ ಶಿಕ್ಷಣ ಶಾಖೆಯ ವರಿಷ್ಠಾಧಿಕಾರಿಗಳಾಗಿ ದೀರ್ಘಕಾಲ ಸೇವೆ ಸಲ್ಲಿಸಿದರಲ್ಲದೆ, ಪ್ರಾಥಮಿಕ ಶಿಕ್ಷಣದ ಮುನ್ನಡೆಗೂ ಅವಿಶ್ರಾಂತ ದುಡಿದಿದ್ದಾರೆ. ಅವರು ಶಿಕ್ಷಣ ತಜ್ಞರಲ್ಲದೆ, ನುರಿತ ಅನುಭವಿಕ ಆಡಳಿತಗಾರರೂ ಆಗಿದ್ದಾರೆ. ಒಳ್ಳೇ ಮುಂಧೋರಣೆಯುಳ್ಳವರೂ ಯೋಜಕರೂ ಸಂಘಟಕರೂ ಆಗಿರುವರು. ಶ್ರೀಮಾನ್ ಪಾವಟೆಯವರು ಸುಪ್ರಸಿದ್ಧ ಗಣಿತಜ್ಞರಾಗಿರುವರು. ಅವರು ಪ್ರಾಥಮಿಕ ಶಾಲೆಗಳ ಮಕ್ಕಳಿಗಾಗಿ ಆಧುನಿಕ ದೃಷ್ಟಿ ಕೋನವುಳ್ಳ ಗಣಿತ ಪುಸ್ತಕಗಳನ್ನು ಬರೆದು ಪ್ರಕಟಿಸಿರುವರು. ಶ್ರೀಮಾನ್ ಪಾವಟೆಯವರು ಇಂದು ಕರ್ನಾಟಕಕ್ಕೆ ಪರಿಮಿತರಾಗಿರದೆ, ದೇಶದ ಶಿಕ್ಷಣ ಪ್ರಪಂಚದಲ್ಲೇ ಹೆಸರು ಗಳಿಸಿರುವರು. ದೇಶದ ಯಾವ ಶಿಕ್ಷಣ ಸಮಿತಿಯೇ ಇರಲಿ, ಅದರಲ್ಲಿ ಶ್ರೀಮಾನ್ ಪಾವಟೆಯವರು ಇದ್ದುದು ಕರ್ನಾಟಕಕ್ಕೆ ಹೆಮ್ಮೆಯ ವಿಷಯ.

ಶ್ರೀಮಾನ್ ಪಾವಟೆಯವರ ವ್ಯಕ್ತಿತ್ವದಲ್ಲಿ ಕಾಣುವ ಇನ್ನೊಂದು ಗುಣವೆಂದರೆ ಅವರ ಅದ್ಭುತವಾದ ಉತ್ಸಾಹ ಶಕ್ತಿ. ಅವರ ಮುಖಚರ್ಯೆಯು ನೋಡಿದವರನ್ನು ಮುಂಕು ಹಿಡಿಸುವದು. ಅರವತ್ತು ವರುಷಗಳಾಗಿವೆ ಎಂದು ನಂಬುವದೂ ಕಷ್ಟವಾಗುವದು. ಇಂಥ ಮೇಧಾವಿಗಳು, ಕುಶಾಗ್ರಮತಿಗಳು, ಕರ್ತವ್ಯ ಪರಾಯಣರು, ಶ್ರೇಷ್ಠ ಆಡಳಿತಗಾರರು, ಕನ್ನಡ ನಾಡಿನಲ್ಲಿ ಇರುವುದು, ಕನ್ನಡ ನಾಡಿಗೆ-ದೇಶಕ್ಕೆ-ಹೆಮ್ಮೆಯ ವಿಷಯವೇ ಸರಿ. ಅಂಥವರನ್ನು ಸತ್ಕರಿಸುವದು, ಕನ್ನಡಿಗರ ಕರ್ತವ್ಯ ಧರ್ಮವೇ ವಿನಃ ಹೆಚ್ಚಿನ ವಿಶೇಷವೇನಲ್ಲ! ದೇವರು ಅವರಿಗೆ ಇನ್ನೂ ಹೆಚ್ಚಿನ ಆಯುರಾರೋಗ್ಯಗಳನ್ನು ದಯಪಾಲಿಸಿ, ಅವರಿಂದ ದೇಶಕ್ಕೆ ಇನ್ನೂ ಹೆಚ್ಚಿನ ಸೇವೆ ದೊರಕುವಂತೆ ಕರುಣಿಸಲಿ ಎಂದು ಪ್ರಾರ್ಥಿಸುವೆವು. "ಜೀವನ ಶಿಕ್ಷಣ" ಪತ್ರಿಕೆಯು ಈ ಸಂದರ್ಭದಲ್ಲಿ ಭಾರತೀಯ ಸಂಸ್ಕೃತಿಗನುಗುಣವಾಗಿ ಶ್ರೀಮಾನ್ ಪಾವಟೆಯವರು "ಶತಾಯುಷಿಯಾಗಲಿ" ಎಂದು ಹಾರೈಸುವದು.

# ಪುರೋಗಾಮಿ ಶಿಕ್ಷಕರಾಗುವದೆಂತು ?

ಸಂಗ್ರಾಹಕರು :– **ಶ್ರೀ ಹ. ಗ. ಜ್ಯೋಶಿ,** ಪ್ರಾಧ್ಯಾಪಕರು ಟ್ರೇನಿಂಗ ಕಾಲೇಜ, ಧಾರವಾಡ.

[ದಿ ೨೯–೪–೫೯ ರಂದು ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ಶಿಕ್ಷಕ ವಿದ್ಯಾರ್ಥಿಗಳು ೨ ವರುಷಗಳ ತರಬೇತಿಯನ್ನು ಪಡೆದು ಹೊರಬೀಳಲಿರುವ ಸಂದರ್ಭದಲ್ಲಿ ದೀಪದಾನ ಸಮಾರಂಭವು ನಡೆಯಿತು. ಶ್ರೀಮಾನ್ **ಮ. ಗು. ಹಂದ್ರಾಳ,** ಎ. ಇ. ಧಾರವಾಡ ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ಹೊರಬೀಳಲಿರುವ ಶಿಕ್ಷಕ-ವಿದ್ಯಾರ್ಥಿಗಳಿಗೆ ಕೆಲವು ಉಪದೇಶಪರ ಮಾತುಗಳನ್ನು ಹೇಳಿದರು. ಅವರ ಭಾಷಣದ ಸಾರವನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ].

**ಶ್ರೀಮಾನ್ ಕಟ್ಟಿಯವರೇ, ಸ್ನೇಹಿತರೇ,**

ಮನೆಯ ಕಡೆಗೆ ಮುಖಮಾಡಿದ ನಿಮಗೆ ಬಹಳ ಹೇಳುವದು ಈ ಸಮಯದಲ್ಲಿ ಸೂಕ್ತವೆನಿಸಲಿಕ್ಕಿಲ್ಲ. ಎರಡು ವರುಷಗಳ ಪರ್ಯಂತ ನೀವು ಈ ಸಂಸ್ಥೆಯಲ್ಲಿ ತರಬೇತಿಯನ್ನು ಪಡೆದಿರುವಿರಿ; ಈ ಸಮಯದಲ್ಲಿ ನೀವು ಅನೇಕ ಪಾಠಗಳನ್ನು ಕೊಟ್ಟಿರುವಿರಿ; ಪದ್ಧತಿಗಳ ಪರಿಚಯವನ್ನು ಮಾಡಿಕೊಂಡಿರುವಿರಿ; ಓದಿರುವಿರಿ; ಜ್ಞಾನ ಸಂಗ್ರಹವನ್ನು ಮಾಡಿಕೊಂಡಿರುವಿರಿ. ಆದರೆ ಇಷ್ಟರಿಂದಲೇ ಪರಿಪೂರ್ಣರಾದಿರೆಂದು ಮಾತ್ರ ಭಾವಿಸಬೇಡಿರಿ. ಏಕೆಂದರೆ ಶಿಕ್ಷಣಕ್ಕೆ, ಜ್ಞಾನಕ್ಕೆ ಮುಗಿತಾಯವೆಂಬುದಿರುವುದಿಲ್ಲ. ಶಿಕ್ಷಣವು ಜೀವನದುದ್ದಕ್ಕೂ ನಡೆದು ಬರುತ್ತಿದೆ ಜೀವನದಲ್ಲಿ ಪ್ರತಿಯೊಂದು ಕ್ಷಣಕ್ಕೂ ಬರುತ್ತಿರುವ ಹೊಸ ಹೊಸ ಅನುಭವವೆಲ್ಲವೂ ಒಂದು ತೆರನಾದ ಶಿಕ್ಷಣವೇ. ಆದರೆ ಎಲ್ಲಕ್ಕಿಂತಲೂ ಇಲ್ಲಿ ನೀವು ಕಲಿತ ಒಂದು ಹೆಚ್ಚಿನ ಅಂಶವಿದೆ. ಅದಾವುದೆಂದರೆ ಎರಡು ವರುಷಗಳ ಪರ್ಯಂತ ಸೋದರ ಭಾವದಿಂದ ನೀವು ಏನು ಇಲ್ಲಿ ನಡೆದುಕೊಂಡಿರೊ, ಅದು ಹೆಚ್ಚಿನದು. ಅದು ನಿಮ್ಮ ಹೃದಯದಲ್ಲಿ ನೆಲೆಯೂರಬೇಕು. ನೀವು ಎಲ್ಲಿಗೇ ಹೋಗಲಿ, ಅಲ್ಲಿ ಎಲ್ಲರೊಡನೆ ಸಮರಸರಾಗಿ ಸೋದರ ಭಾವದಿಂದ ನಡೆದು ಇನ್ನೊಬ್ಬರಿಗೂ ಅಂಥ ಒಂದು ನಡುವಳಿಕೆಯನ್ನು ಕಲಿಸಿಕೊಡಬೇಕು. ಜೀವನದಲ್ಲಿ ಹಾಸು ಹೊಕ್ಕಾಗಿ ನಡೆದುಕೊಂಡು ಹೋಗುವ ಸಂಸ್ಕಾರವನ್ನು ಪಡೆದುಕೊಳ್ಳಬೇಕು. ಅಂಥ ಸಂಸ್ಕಾರವನ್ನು ಪಡೆದವರು **ಪುರೋಗಾಮಿ ಶಿಕ್ಷಕರೆನಿಸಿಕೊಳ್ಳಬಲ್ಲರು.**

ಶಿಕ್ಷಕರಾಗಿ ಮುಡಿದು ಇಲ್ಲಿಗೆ ಬಂದು ಶಿಕ್ಷಕ ವಿದ್ಯಾರ್ಥಿಗಳಾದಿರಿ; ಪುನಃ ಶಿಕ್ಷಕರಾಗಿ ಹೊರಟಿರುವಿರಿ. ನೀವು ಕಂಡುದನ್ನು, ಪಡೆದುದನ್ನು, ಮಾಡುವದನ್ನು ಅಲ್ಲಿ ನೀವು ಚಿಕ್ಕ ಮಕ್ಕಳಿಗೆ ನೀಡಬೇಕಾಗಿದೆ. ನೀವು ಸಂಪತ್ತು ದಾನ, ಭೂದಾನ, ಶ್ರಮದಾನ ಮೊದಲಾದ ಅನೇಕ ದಾನಗಳನ್ನು ಕೇಳಿದ್ದೀರಿ. ನಿಮ್ಮದು ಮಾತ್ರ ಜ್ಞಾನ ದಾನವು. ಈ ದಾನದಲ್ಲಿ ದಾನ–ಪ್ರತಿಗ್ರಹಗಳೆರಡೂ ಸಮಾವೇಶವಾಗಿವೆ. ಉಳಿದ ದಾನಗಳಲ್ಲಿ ಕೊಡುವು ದೊಂದೇ ಇರುತ್ತಿದೆ. ಇದನ್ನು ಕೊಡತೆಗೆದುಕೊಳ್ಳುವ ದೆರಡೂ ಸಮಾವೇಶಗೊಂಡಿ ಇದೊಂದು ಮಾತೃ ಚುಂಬನವಂತಿದೆ. ತಾಯಿಯು ವಾತ್ಸಲ್ಯದ ಮುತ್ತನ್ನೊಂದು ಮಗುವಿಗೆ ಕೊಡುವಳಲ್ಲದೆ, ಮಗುವಿನಿಂದ ಪ್ರತಿಯಾಗಿ ಮುದ್ದನ್ನು ಪಡೆದು ಆನಂದ ತುಂದಿಲಳಾಗುವಳು. ಹಾಗೆ ನೀವು ಮಕ್ಕಳನ್ನು ಕಾಣಬೇಕು. ಮಕ್ಕಳಿಗೆ ನಿಮ್ಮ ಅನುಭವಗಳನ್ನು ಹೇಳಿಕೊಟ್ಟು, ಜ್ಞಾನ ನೀಡಿ, ಅವರಿಂದಲೂ, ನೀವು ಅನೇಕ ಮಾತುಗಳನ್ನು ಕಲಿತುಕೊಳ್ಳಬೇಕು. ಶಿಕ್ಷಕನು ಕಲಿಸುವದರ ಜೊತೆಗೆ ಕಲಿಯುವವನೂ ಆಗಬೇಕು. ಯಾವನಲ್ಲಿ ಈ ಗುರುಶಿಷ್ಯ ಭಾವನೆಗಳು ಸಮಾನಾಗಿ ಮೂಡಿಕೊಂಡು ಬಾಳಿನಲ್ಲಿ ಬೆಳೆದುಕೊಂಡು ಬರುತ್ತಿವೆಯೋ ಅವನೇ ನಿಜವಾದ **ಪುರೋಗಾಮಿ ಶಿಕ್ಷಕನು.**

ನಾವು ಊರಿಗೆ ವಯಣ ಬೆಳಿಸುವಾಗ ಬರುತ್ತೇನೆ ಎಂದು ಹೇಳುತ್ತೇನೆ. ಹೊರಟು ನಿಂತಾಗ ಬರುವೆನೆಂದು ಹೇಳುವದರಲ್ಲಿ ತೋರಿಕೆಗೆ ವಿರೋಧವು ಕಾಣಬಹುದು. ಅದು ವಿರೋಧಾಭಾಸವೇ ಹೊರತು ನಿಜವಾದ ವಿರೋಧವು ಅಲ್ಲಿರುವದಿಲ್ಲ. ಅದೊಂದು ಭಾರತೀಯ ಸಂಸ್ಕೃತಿಯ ದೃಷ್ಟಿಯಿಂದೇ ಹೇಳಬಹುದು. ಸಾಂಸ್ಕೃತಿಕ ಸಂಬಂಧವು ಆ ಬರುಹೋಗುವದರಲ್ಲಿ ಕಾಣುತ್ತಿದೆ. ಸಮಾಜದಲ್ಲಿ ಸ್ವಾಸ್ಥ್ಯ ನೆಮ್ಮದಿಗಳು ನೆಲಿಸಬೇಕಾದರೆ

ಸಮಾಜದ ಘಟಕಗಳಾದ ವ್ಯಕ್ತಿಗಳಲ್ಲಿ, ಪರೋಪಕಾರ, ಸಹಾನುಭೂತಿ, ಮೊದಲಾದ ಗುಣಗಳಿರಬೇಕಾಗುವದು. ಮನುಷ್ಯನ ವ್ಯಕ್ತಿತ್ವವು ಸಮಾಜದಮೇಲೆ ಪ್ರಭಾವವನ್ನು ಬೀರುತ್ತದೆ. ಮಕ್ಕಳಂತೂ ಗುರುಗಳ ವ್ಯಕ್ತಿತ್ವವನ್ನೇ ಅನುಕರಣ ಮಾಡುತ್ತಾರೆ. ಕೀರ್ತಿಯು ವ್ಯಕ್ತಿತ್ವವನ್ನು ಅವಲಂಬಿಸಿರುತ್ತದೆ. ಅಂಥ ಒಂದು ವ್ಯಕ್ತಿತ್ವವನ್ನು ಶಿಕ್ಷಕರು ಗಳಿಸಿಕೊಂಡುದಾದರೆ ಕೀರ್ತಿಯು ತಾನೇ ಅನುಸರಿಸಿ ಬರುವದು. ಕೀರ್ತಿಯ ಬೆನ್ನುಹತ್ತಿ ಹೋಗುವವರು ಮಾತ್ರ ನಿಜವಾದ ಗುರುಗಳೆನ್ನಿಸಿಕೊಳ್ಳಲಾರರು. ವ್ಯಕ್ತಿತ್ವವು ಆದರ್ಶ ಜೀವನವನ್ನೂ ಅವಲಂಬಿಸಿರುತ್ತದೆ. ಆದರ್ಶ ಜೀವನವು ಸಾಂಘಿಕ ಜೀವನದಿಂದ ರೂಪುಗೊಳ್ಳುತ್ತದೆ. ಇಲ್ಲಿಯ ಸಾಂಘಿಕ ಜೀವನದಲ್ಲಿ ಎರಡು ವರ್ಷಗಳ ಪರ್ಯಂತ ಆಚರಿಸಿ ಕಲಿತ ಮಾತು, ಆದಕ್ಕೊಂದು ಅಂಕುರವಾಗಬಹುದು. ಆದನ್ನು ನೀವು ನಿಮ್ಮ ಹಳ್ಳಿಗಳಿಗೆ ತಿರುಗಿದ ನಂತರ ಬೆಳಿಸಬೇಕು. ಅದು ನಿಮ್ಮ ಕೈಯಲ್ಲಿದೆ. ಯಾರು ಅಂಥ ಒಂದು ಗೌರವಾನ್ವಿತ ಜೀವನವನ್ನು ನಡೆಸಲು ಸಮರ್ಥರಾಗುವರೋ ಅವರೇ **ಪುರೋಗಾಮಿ ಶಿಕ್ಷಕರೆನಿಸಿಕೊಳ್ಳಬಲ್ಲರು.**

ಶಾಲೆಯನ್ನು ಒಂದು ದೇವಾಲಯವೆಂದು ಪರಿಭಾವಿಸಬೇಕು. ಅಲ್ಲಿಯ ಮಕ್ಕಳು ಪಾಷಾಣ ಪ್ರತಿಷ್ಠಾಪನೆಗೊಂಡ ದೇವಮೂರ್ತಿಗಳು ಎಂಬ ಕಲ್ಪನೆಯು ಗುರುಗಳಲ್ಲಿ ಕುದುರಬೇಕು. ಭಕ್ತನು ದೇವಮಂದಿರಕ್ಕೆ ದರ್ಶನಕ್ಕೆ ಹೋಗಲು ಯಾವ ಮನಸ್ಸನ್ನು ಸಿದ್ಧಗೊಳಿಸಿಕೊಂಡು ಹೋಗುವನೋ ಅಂಥ ಮನಸ್ಸಿನೊಂದಿಗೆ ಗುರುಗಳು ಶಾಲೆಗೆ ಹೋಗಬೇಕು. ಇಂಥ ಭಾವನೆಯಿಂದ ಗುರೂಜಿಯು ತನ್ನ ಕಾಯಕದಲ್ಲಿ ನಿರತನಾದರೆ ಆತನ ಸ್ವಾಭಿಮಾನಗಳು ಬೆಳೆಯುವಲ್ಲದೆ ಅವನು ನಿಜವಾಗಿಯೂ **ಪುರೋಗಾಮಿ ಶಿಕ್ಷಕನಾಗಬಲ್ಲನು.**

ಸ್ವಹಿತದ ಗೂಡ ಪರಹಿತ ಸಾಧಿಸಬಹುದಾದ ಎರಡು ವಿಧದ ಶಕ್ತಿಯು ಈ ಶಿಕ್ಷಣ ಕಾಯಕದಲ್ಲಿದೆ. ಜೀವನ ಶಿಕ್ಷಣವು ಪುರೋಗಾಮಿ ಶಿಕ್ಷಣದ ಎಲ್ಲ ಗುಣಗಳನ್ನೂ ಅಳವಡಿಸಿಕೊಂಡಿದೆ. ಈ ಜೀವನ ಶಿಕ್ಷಣದ ಜ್ಞಾನ ದೀವಿಗೆಯನ್ನು ಮೊದಲು ಗಾಂಧೀಜಿ ಹೊತ್ತಿಸಿದರು. ಆ ಜ್ಞಾನ ದೀಪವನ್ನೇ ತಾವಿಂದು ತೆಗೆದು ಕೊಳ್ಳಿರೆಂದು ಹೇಳಬಯಸುತ್ತೇನೆ.

ಜ್ಯೋತಿಯು ತಾನು ಸುಟ್ಟುಕೊಂಡು ಅನ್ಯರಿಗೆ ಬೆಳಕು ನೀಡುತ್ತದೆ. ಹಾಗೆಯೇ ಜ್ಞಾನ ಜ್ಯೋತಿಯ ಬಗೆಗೂ ಶಿಕ್ಷಕರ ಜೀವನವಾಗಲಿ; ಶಿಕ್ಷಕರು ತಮ್ಮ ಜೀವನವೆಂಬ ಚಂದನದ ಕೊರಡನ್ನು ತೆಯ್ದು ಮಕ್ಕಳ ಬಾಳಜೀವನಕ್ಕೆ ಬಾವನ್ನ ತೊಡೆಯಲೆ! ಎಂದು ಹಾರೈಸುವೆ."

# ಪ್ರಕಟನೆ

ಪ್ರಾಥಮಿಕ ಶಿಕ್ಷಕರ ಪ್ರಮಾಣ ಪತ್ರ ಪರೀಕ್ಷೆಯ ಫಲಿತಾಂಶವು ಪ್ರಕಟವಾದ ನಂತರ ಅನುತ್ತೀರ್ಣ ಉಮೇದುವಾರರಿಗೆ ಅವರು ಪಡೆದ ಗುಣಗಳ ವಿವರಗಳನ್ನು ವಿದ್ಯಾಧಿಕಾರಿಗಳ ಕಚೇರಿಯಿಂದ ಪೂರೈಸಲಾಗುವದು. ತಮ್ಮ ಗುಣಗಳನ್ನು ಪಡೆಯಲಿಚ್ಛಿಸುವ ಅನುತ್ತೀರ್ಣ ಉಮೇದುವಾರರು ಹತ್ತಿರದ ಟ್ರೆಝರಿಯಲ್ಲಿ ಒಂದು (೧) ರೂಪಾಯಿ ಶುಲ್ಕವನ್ನು ಚಲನದ "XXVI Education" ಈ ಸದರಿಗೆ ತುಂಬಿ ಚಲನದ ಒಂದು ಅಸಲು ಪ್ರತಿಯನ್ನು ತಮ್ಮ ಅರ್ಜಿಯ ಸಂಗಡ ಎಜ್ಯುಕೇಶನಲ್ ಇನಸ್ಪೆಕ್ಟರರವರ ಕಚೇರಿಗೆ ಕಳುಹಿಸತಕ್ಕದ್ದು. ಅರ್ಜಿಯಲ್ಲಿ ಕೇಂದ್ರ, ಕ್ರಮಾಂಕ ಇತ್ಯಾದಿ ವಿವರಗಳನ್ನು ಕಾಣಿಸಬೇಕು. ಒಂದು ರೂಪಾಯಿ ತುಂಬಿದ ಚಲನು ಜತೆಯಲ್ಲಿ ಹಚ್ಚದೇ ಬಂದ ಅರ್ಜಿಗಳನ್ನು ಗಮನಿಸಲಾಗುವದಿಲ್ಲ. ೧ ರೂಪಾಯಿ ಶುಲ್ಕವನ್ನು ಮನಿಯಾರ್ಡರ ಇಲ್ಲವೆ ಸಮಕ್ಷಮ ಸ್ವೀಕರಿಸಲಾಗುವದಿಲ್ಲ. ಈ ಮಾತನ್ನು ಉಮೇದವಾರರು ಗಮನಿಸಬೇಕು.

ಉತ್ತೀರ್ಣರಾದಂಥ ಉಮೇದುವಾರರಿಗೆ ಗುಣಗಳ ವಿವರಗಳನ್ನು ಪೂರೈಸಲಾಗುವದಿಲ್ಲ. ಆ ದ್ದರಿಂದ ಉತ್ತೀರ್ಣರಾದ ಉಮೇದುವಾರರು ಈ ವಿಷಯದಲ್ಲಿ ಅರ್ಜಿಗಳನ್ನು ಕಳುಹಿಸಬಾರದು.

ಸಹಿ :
**ಮ. ಗು. ಹಂದ್ರಾಳ**
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

# ಜೀವನ ಶಿಕ್ಷಣ ಶಾಲೆಗಳಲ್ಲಿ ಪ್ರವಾಸ ಹಾಗೂ ನಿರೀಕ್ಷಣೆ

ಲೇಖಕರು : ಶ್ರೀ ಎನ್. ಬಿ. ಮುದಕವಿ, ಆ. ಡಿ. ಎ. ಇ. ಹಾವೇರಿ

ಜೀವನ ಶಿಕ್ಷಣ ಶಾಲೆಗಳಲ್ಲಿ ಪ್ರವಾಸಗಳನ್ನು ಕೈಕೊಳ್ಳುವ ರೂಢಿ ಇತ್ತೀಚೆಗೆ ಹೆಚ್ಚಾಗತೊಡಗಿದ್ದುದು ಸಂತೋಷದ ಸಂಗತಿ. ಚಿಕ್ಕ ಚಿಕ್ಕ ಪ್ರವಾಸಗಳನ್ನು ಕೈಕೊಳ್ಳುವದು ಚಳಿಗಾಲ ಹಾಗೂ ಬೇಸಿಗೆಕಾಲಗಳಲ್ಲಿ ಬಹಳವಾಗಿ ಕಂಡು ಬರುತ್ತದೆ. ರೇಲ್ವೆಗಳಲ್ಲಿ ಪ್ರವಾಸದ ತಿಕೀಟುಗಳು ರಿಯಾಯತಿಯಲ್ಲಿ ಸಿಕ್ಕರೂ ಸ್ಥಳಾಭಾವದ ಮೂಲಕ ಪ್ರವಾಸಗಳು ಸುಖಕರವಾಗಿ ಸಾಗದೆ ತೊಂದರೆ ಗೊಳಗಾಗುತ್ತವೆ. ಎಸ್. ಟಿ. ಬಸ್ಸುಗಳಲ್ಲಿ ರಿಯಾಯಿತಿಯಿಂದ ತಿಕೀಟುಗಳು ಸಿಕ್ಕರೂ ಎಲ್ಲ ವಿದ್ಯಾರ್ಥಿಗಳನ್ನು ಒಮ್ಮೆಲೇ ಕರೆದುಕೊಂಡುಹೋಗದೆ ಅಷ್ಟಷ್ಟೇ ಸಂಖ್ಯೆಗಳಲ್ಲಿ ಮೂರು ನಾಲ್ಕು ಸರತಿಗಳಲ್ಲಿ ತೆಗೆದುಕೊಂಡು ಹೋಗಿ ಬಿಡುವುದರಿಂದ ಮುಂದಿನ ಪ್ರಯಾಣಕ್ಕೆ ತೊಂದರೆಯಾಗುತ್ತದೆ. ಕೆಲವು ಸಾರೆ ವಿದ್ಯಾರ್ಥಿಗಳು ತಮ್ಮತಮ್ಮ ಗುಂಪುಗಳಲ್ಲಿ ಬರದೇ ಇನ್ನೊಬ್ಬರ ಗುಂಪುಗಳಲ್ಲಿ ಬರುವದರಿಂದ ಮುಂದೆ ಬಂದವರು ಅವರ ಬಗ್ಗೆ ಉದ್ವಿಗ್ನತೆಯಿಂದ ಕಾಯಬೇಕಾಗುವದು. ಎಲ್ಲ ವಿದ್ಯಾರ್ಥಿಗಳು ಬರುವ ವರೆಗೆ ಶಿಕ್ಷಕನ ಅಥವಾ ಜವಾಬದಾರಿಯುಳ್ಳ ಮುಖ್ಯಸ್ಥನ ಮನಸ್ಥಿತಿಯನ್ನು ಹೇಳಲಿಕ್ಕೆ ತೀರದು. ಎಲ್ಲರೂ ಬಂದರೆಂಬ ವರ್ತಮಾನ ಕೇಳಿ ಕೊನೆಗೊಮ್ಮೆ ಅವನು ಸಮಾಧಾನದ ಉಸಿರನ್ನು ಬಿಡುವನು. ಮುಂದಿನ ಪ್ರಯಾಣವನ್ನು ವಿಚಾರಿಸುವನು. ಹೀಗಾಗದೆ ಹೊರಟ ಸ್ಥಳದಿಂದ ನಿರ್ದಿಷ್ಟ ಸ್ಥಳದ ವರೆಗೆ ನೇರವಾಗಿ ಗಾಡಿಗಳು ರಿಯಾಯತಿ ದರದಲ್ಲಿ ಓಡಾಡುವಂತೆ ವ್ಯವಸ್ಥೆಯಾದಲ್ಲಿ ಒಳಿತು.

ಶೈಕ್ಷಣಿಕ ಪ್ರವಾಸವೆಂಬ ಉದಾತ್ತ ಪೆಸರಿನಿಂದ ನಾವು ಪ್ರವಾಸ ಕೈಕೊಂಡರೂ ಅದರಿಂದ ನಾವು ಸಾಧಿಸಿದ್ದೇನು? ಎಂಬುದನ್ನು ವಿಚಾರಿಸಿದರೆ ಈ ತರಹದ ಪ್ರವಾಸ ಕೈಕೊಳ್ಳುವದಕ್ಕಿಂತ ಬಿಡುವುದು ಲೇಸೆನಿಸುತ್ತದೆ. ಶೈಕ್ಷಣಿಕ ಪ್ರವಾಸ ಕೈಕೊಂಡು ಮರಳಿ ಬಂದ ವಿದ್ಯಾರ್ಥಿಗಳನ್ನು ವಿಚಾರಿಸಿದರೆ ಅವರ ಶೈಕ್ಷಣಿಕ ಪ್ರವಾಸವು ಶೈಕ್ಷಣಿಕವಾಗಿರದೆ ಸಂತೋಷದ ಪ್ರವಾಸಗಳು ಆಗಿರುತ್ತವೆಂದು ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವ ಪ್ರತಿಯೊಬ್ಬರಿಗೂ ಗೊತ್ತಿದ್ದ ಮಾತು. ಅಂದ ಮೇಲೆ ಸಂತೋಷದ ಪ್ರವಾಸಗಳನ್ನು ಶೈಕ್ಷಣಿಕ ಎಂದು ಹೆಸರಿಟ್ಟುಕೊಂಡು ನಾವು ಮೋಸ ಹೋಗಲಿಕ್ಕೆಲ್ಲವಷ್ಟೇ !

ಶಾಲೆಯ ವತಿಯಿಂದ ಕೈಕೊಂಡ ಪ್ರವಾಸಗಳು ಜ್ಞಾನ ಸಾಧನೆಗಾಗಿ ಇದ್ದಲ್ಲಿ ಪ್ರವಾಸಕ್ಕೆ ಕರೆದುಕೊಂಡು ಹೋಗತಕ್ಕ ಶಿಕ್ಷಕರಿಗಾದರೂ ಕನಿಷ್ಠ ಪಕ್ಷಕ್ಕೆ ಆ ಸ್ಥಳದ ಸಂಪೂರ್ಣ ಪರಿಚಯವಿರುವದು ಅವಶ್ಯವಾಗಿದ್ದು. ಅದಕ್ಕಾಗಿ ಅವರು ಸ್ವಲ್ಪ ಮುಂಚಿತವಾಗಿ ಅದನ್ನು ನೋಡಿದವರಾಗಿರಬೇಕು. ಆ ಸ್ಥಳದ ಐತಿಹಾಸಿಕ, ಭೌಗೋಲಿಕ, ಸಾಂಸ್ಕೃತಿಕ ಸಂಗತಿಗಳನ್ನು ಬಲ್ಲವರಾಗಿರಬೇಕು. ಆ ಸ್ಥಳದ ನಕ್ಷೆ, ಹಾದಿಯ ನಕಾಶ, ಇಳಿದು ಕೊಳ್ಳತಕ್ಕ ಸ್ಥಳಗಳು ಮುಂತಾದವುಗಳನ್ನು ಗೊತ್ತು ಮಾಡಿಕೊಂಡು ಸ್ವಲ್ಪ ಮುಂಚಿತವಾಗಿ ಅಲ್ಲಿಯ ಪ್ರಮುಖ ಜನರಿಗಾಗಲಿ, ಸಂಸ್ಥೆಯ ಮುಖ್ಯಸ್ಥರಿಗಾಗಲಿ ತಿಳಿಸಿಟ್ಟುಕೊಂಡಿರುವದು ಉತ್ತಮ. ಇಲ್ಲವಾದಲ್ಲಿ ಪ್ರವಾಸದ ಅನೇಕ ತೊಂದರೆಗಳನ್ನು ಎದುರಿಸಬೇಕಾಗುವದು. ಇವುಗಳಿಂದಾಗಿ ತಾವು ಕೈಕೊಂಡಿರುವ ಗುರಿ ಸಾಧನೆ ಎಲ್ಲಿಯೋ ಮರೆತು ಹೋಗಿ ಸುರಕ್ಷಿತವಾಗಿ ಊರಿಗೆ ಮುಟ್ಟುವದೊಂದೇ ಸಾಕು-ಬೇಕಾಗುತ್ತದೆ.

ಪ್ರವಾಸದಿಂದ ಮರಳಿಬಂದ ಬಳಿಕ ಶಿಕ್ಷಕರಾದವರು ತಮ್ಮ ವಿದ್ಯಾರ್ಥಿಗಳಿಗೆ ಸರಿಯಾಗಿ ಮಾರ್ಗದರ್ಶನ ಮಾಡದಿರುವದರಿಂದ ವಿದ್ಯಾರ್ಥಿಗಳು ಕೆಲವು ದಿವಸ ಪ್ರವಾಸದ ಅನುಭವಗಳನ್ನು ನೆನಸಿನಲ್ಲೆಟ್ಟುಕೊಂಡವರು ಕ್ರಮೇಣ ಮರೆತುಬಿಡುವ ಸಂಭವವಿರುತ್ತದೆ. ಇದರಿಂದ ಪ್ರಯೋಜನವಾಗಲಾರದು. ಹೀಗೆ ಆಗ--ರದೆಂದು ಅಷ್ಟೇನೆ ಇದ್ದಲ್ಲಿ, ತಾವು ಕೈಕೊಂಡ ಪ್ರವಾಸದ ನಕ್ಷೆಯನ್ನು ತಯಾರಿಸುವದು, ಅಲ್ಲಿಯ ನೈಸರ್ಗಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ಬರೆದಿಟ್ಟುಕೊಳ್ಳುವದು, ಆ ಸ್ಥಳದ ಹಿನ್ನೆಲೆ ಅಥವಾ ಸಧ್ಯದ ಸ್ಥಿತಿಯ ಬಗ್ಗೆ ಚರ್ಚಾಕೂಟಗಳಲ್ಲಿ ಚರ್ಚಿಸುತ್ತ ಇರಬೇಕು. ಶಕ್ಯವಿದ್ದಲ್ಲೆಲ್ಲ ಕಪ್ಪೆ, ಕವನಗಳ ಮುಖಾಂತರ ಅವುಗಳ ನೆನಪು ಕೊಟ್ಟು ಕೈಕೊಂಡ ಪ್ರವಾಸಗಳು ಮನಸಿನಿಂದ

ಮಾಯವಾಗದೆ ಸದಾ ಉಳಿಯುವಂತೆ ಮಾಡುವದು ಶಿಕ್ಷಕರನ್ನೇ ಅವಲಂಬಿಸಿದೆ. ಆಯಾ ವರ್ಗಗಳಿಗೆ ಅನುಸಾರವಾಗಿ ಮಾಡಿದ ಪ್ರವಾಸದ ವರ್ಣನೆ, ನೋಡಿದ ಸಂಗತಿಗಳ ಅನುಭವದ ಟಿಪ್ಪಣಿ, ಪ್ರವಾಸದ ವೆಚ್ಚ, ನಡುವೆ ಸಂಭವಿಸಿರುವ ರಸನಿಮಿಷಗಳು ಮುಂತಾದವುಗಳನ್ನು ಹಲವು ಬಾರಿ ಬರೆಯಿಸಿ ಅವು ಮಕ್ಕಳಲ್ಲಿ ಬೇರೂರುವಂತೆ ಮಾಡಬೇಕು.

ವರ್ಣನೆಯಲ್ಲಾಗಲಿ ಬರೆಹದಲ್ಲಿಯಾಗಲಿ ವೈವಿಧ್ಯತೆ ಇರದೆ ಒಂದೇ ಮಾದರಿಯ ಅನುಕರಣ ಮಾಡಿದ ಲೇಖವು ಕಂಡುಬರುತ್ತದೆ. ಇವು ಮಕ್ಕಳಿಗೂ ತಮಗೂ ನೋಡುವವರಿಗೂ ಜಿಗುಪ್ಸೆಯನ್ನು ತರುವವಲ್ಲದೇ ಹೆಚ್ಚಿನ ದನ್ನೇನೂ ಸಾಧಿಸಲಾರವು. ನಾವು ಕೈಕೊಂಡ ಪ್ರವಾಸವು ನಿಜವಾಗಿ ಶೈಕ್ಷಣಿಕ ಪ್ರವಾಸವಾಗಬೇಕಾದರೆ ಪ್ರವಾಸ ಕೈಕೊಳ್ಳುವ ಮೊದಲು ಅದರ ಬಗ್ಗೆ ಆಲೋಚಿಸಿ ಅನೇಕ ಟಿಪ್ಪಣಿಗಳನ್ನು ಸಂಗ್ರಹಿಸಿಟ್ಟುಕೊಂಡಿರಬೇಕು.

ಪ್ರವಾಸ ಮುಗಿಸಿದ ನಂತರ ತಾವು ನೋಡಿದ, ಕೇಳಿದ, ಓದಿದ ಸಂಗತಿಗಳ ಮೇಲೆ ಮಕ್ಕಳು ಸ್ವತಂತ್ರವಾಗಿ ವಯೋಮಾನಕ್ಕೆ ಅನುಸರಿಸಿ ಮಾತಾಡಲಿಕ್ಕೂ ಬರೆಯಲಿಕ್ಕೂ ಶಕ್ತರಾಗುವಂತೆ ಮಾಡಬೇಕು. ಇದನ್ನು ನಾವು ಸಾಧಿಸದೇ ಹೋದರೆ ಮಕ್ಕಳ ವೇಳೆ, ಶ್ರಮ, ದುಡ್ಡು ಇವು ಹಾಳಾದಂತೆ ಮಾತ್ರ ಆದೀತು. ಶೈಕ್ಷಣಿಕ ಪ್ರವಾಸವೆಂದು ನಮಗೆ ನಾವೇ ಮೋಸಮಾಡಿಕೊಳ್ಳುವದಕ್ಕಿಂತ ಹೆಚ್ಚಿನದೇನೂ ಆಗಲಾರದು. ಶೈಕ್ಷಣಿಕ ಪ್ರವಾಸ ಕೈಕೊಳ್ಳುವವರೆಲ್ಲರೂ ಶಿಕ್ಷಣಕ್ಕಾಗಿ ಪ್ರವಾಸ, ಪ್ರವಾಸದಿಂದ ಶಿಕ್ಷಣ ಎಂಬ ತತ್ವವನ್ನು ಚನ್ನಾಗಿ ನೆನಪಿನಲ್ಲಿಟ್ಟುಕೊಂಡು ಕಾರ್ಯೋನ್ಮುಖರಾಗಬೇಕು.

ಜೀವನ ಶಿಕ್ಷಣ ಶಾಲೆಗಳಲ್ಲಿ ನಿರೀಕ್ಷಣೆಯ ಕೆಲಸವು ಸರಿಯಾಗಿ ಸಾಗದೇ ಇರುವದಕ್ಕೆ ಶಿಕ್ಷಕರು ತಳೆದಿರುವ ಅನಾಸ್ಥೆಯೇ ಕಾರಣವಾಗಿದೆ. ನಿರೀಕ್ಷಣೆ ಎಂದರೆ ನೋಡುವದು ಮಾತ್ರ ಎಂದು ತಿಳಿದು ಕೊಂಡಂತಿದೆ. ಸೂರ್ಯೋದಯ, ಸೂರ್ಯಾಸ್ತ ಮುಂತಾದವುಗಳನ್ನು ಬಾಲಕರು ದಿನಾಲು ನೋಸುತ್ತಾರೆ. ಅಂದ ಮೇಲೆ ನಿರೀಕ್ಷಿಸಿದಂತೆ ಆಯಿತು. "ಇವುಗಳ ನಿರೀಕ್ಷಣೆ ಮಾಡಿಸಿದ್ದೇವೆ" ಎಂಬ ಉತ್ತರವು ಬರುತ್ತದೆ. ಅದರಂತೆ ಮೋಡ, ಮಳೆ, ಕಾಮನಬಿಲ್ಲು, ದಿಕ್ಕುಗಳು, ಬೆಳೆಗಳ ನಿರೀಕ್ಷಣೆ ಎಲ್ಲವೂ ಸಾಗುವದು. ಈ ತರಹದ ನಿರೀಕ್ಷಣೆಯಿಂದ ಅಭ್ಯಾಸ ಪತ್ರಿಕೆಯಲ್ಲಿ ನಾವು ಇಟ್ಟು ಕೊಂಡ ಗುರಿಯನ್ನು ಮುಟ್ಟಲಾರೆವು. ಮಕ್ಕಳಿಗೆ ಸರಿಯಂದ ಜ್ಞಾನವನ್ನು ನೀಡಲಾರೆವು. ನಿರೀಕ್ಷಣೆಯಿಂದ ನಿಶ್ಚಿತ ಜ್ಞಾನವು ನಮಗೆ ಸಿಗಬೇಕಾದರೆ ನಾವು ನಿರೀಕ್ಷಿಸಿದ್ದನ್ನು ಸರಿಯಾಗಿ ಬರೆದಿಡಬೇಕು. ಉದಾ:— ಬೆಳೆಗಳ ನಿರೀಕ್ಷಣೆಯನ್ನೇ ತೆಗೆದುಕೊಳ್ಳೋಣ. ಅನುಕೂಲವಾದಾಗೊಮ್ಮೆ ಹೊಲಕ್ಕೆ ಹೋಗಿ ಬೆಳೆ ನೋಡಿ ಬಂದು ನಾವು ನಿರೀಕ್ಷಣೆ ಮಾಡಿಸಿದ್ದೇವೆ ಎಂಬ ಭಾವನೆಯಲ್ಲಿ ತೃಪ್ತರಾಗದೆ, ಬಿತ್ತಿಗೆಯಿಂದ ಕೊಯ್ಯುವ ವರೆಗೆ ಎಲ್ಲ ತರಹದ ಮಾದರಿಯ ಕೋಷ್ಟಕ ಇಟ್ಟು ಅದನ್ನು ಪ್ರತಿ ವಾರಕ್ಕೊಮ್ಮೆ ಇಲ್ಲವೇ ಹದಿನೈದು ದಿನಕ್ಕೊಮ್ಮೆ ತುಂಬುತ್ತ ಸರಿಯಾದ ಮಾಹಿತಿ ಮಾಡಿ ಕೊಡುತ್ತ ಹೋದಲ್ಲಿ ಅದರ ವಿಷಯಕ್ಕೆ ಸರಿಯಾದ ಜ್ಞಾನ ಉಂಟಾಗುತ್ತದೆ. ಒಕ್ಕಲುತನದ ಶಾಲೆಗಳಿಲ್ಲದವರು ತಮಗೆ ಪರಿಚಿತರಾದ ಯೋಗ್ಯ ಒಕ್ಕಲಿಗರ ಹೊಲಕ್ಕೆ ಮಕ್ಕಳನ್ನು ಕರೆದುಕೊಂಡು ಹೋಗಿ ಅವರ ಸಹಕಾರದಿಂದ ಬೀಜಕ್ಕೆ, ಅಳಿಗೆ, ಗೊಬ್ಬರಕ್ಕೆ, ಕಳೆ ಕೆಲಸಕ್ಕೆ ಕೊಯ್ಯುವದಕ್ಕೆ ಹತ್ತಿದ ಖರ್ಚಿನ ವಿವರ, ಬಂದ ಆದಾಯದ ವಿವರ ಇಡುತ್ತಾ ಹೋದಲ್ಲಿ ಒಂದು ನಿರ್ದಿಷ್ಟ ಕಲ್ಪನೆ ಮಕ್ಕಳಲ್ಲಿ ಮೂಡಿ ಅವರ ಮುಂದಿನ ಜೀವನಕ್ಕೆ ಅನುಕೂಲವಾಗುವದು. ಒಕ್ಕಲಿಗನು ತನ್ನ ಹೊಲದ ಖರ್ಚಿನ ವಿವರಗಳನ್ನು ಹೇಳುತ್ತ ಬೆಳೆ ಮನೆಗೆ ಬಂದ ನಂತರ ಸರಿಯಾಗಿ ಮಾಹಿತಿಯನ್ನು ಕೊಡುವದಿಲ್ಲವೆಂದು ಗ್ರಹಿಸಿದರೂ ಅಡ್ಡಿ ಇಲ್ಲ. ಶಿಕ್ಷಕರು ಅಂತಹ ಪ್ರಸಂಗಗಳಲ್ಲಿ ನೆರೆಹೊರೆಯವರನ್ನು ಕೇಳಿ ಅಂದಾಜು ಬೆಲೆ ಹಾಕಿ ಮಾಹಿತಿಯನ್ನು ಮಾಡಿಕೊಡಬೇಕು. ಲಾಭ ಹಾನಿಯ ಜಮಾ-ಖರ್ಚನ್ನು ಬರೆಯಿಸಬೇಕು.

ನೈಸರ್ಗಿಕ ದೃಶ್ಯಗಳ ನಿರೀಕ್ಷಣೆ ಮಾಡಿಸಿದ ಮೇಲೆ ಅದರ ವಿಷಯಕ್ಕೆ ಮಾಹಿತಿ ಮಾಡಿಕೊಟ್ಟು ಶಕ್ಯವಿದ್ದಲ್ಲೆಲ್ಲ ಚಿತ್ರ ಬರೆಯಿಸಿ ಟಿಪ್ಪಣಿ ಬರೆಯಿಸಬೇಕು. ತಾವು ನಿರೀಕ್ಷಿಸಿದ ಸಂಗತಿಗಳನ್ನು ಶಾಸ್ತ್ರೀಯವಾಗಿ ನಿವೇದಿಸಿ ಮೇಲೆ ಹೇಳಿದಂತೆ ಕಲಿಸುತ್ತ ಹೋದಲ್ಲಿ ಪ್ರವಾಸ ಹಾಗೂ ನಿರೀಕ್ಷಣೆಯ ಉದ್ದೇಶವು ಪೂರೈಸಿದಂತೆ ಆಗುವದರಲ್ಲಿ ಸಂದೇಹವಿಲ್ಲ.

---

# "ಜೀವನ ಶಿಕ್ಷಣ ಶಾಲೆಗಳ ಒಳನೋಟ"

ಲೇಖಕರು : ಶ್ರೀ ಮು. ಬ. ಶ್ಯಾಡಗುಪ್ಪಿ, ಉಪಗುರುಗಳು, ಶಾಲಾ ದೇವಿಹೊಸೂರು

[ ಕಳೆದ ಸಂಚಿಕೆಯಿಂದ ಮುಂದುವರಿದದ್ದು ]

## ೩. ಪಥಕಗಳು

ಮಾನವನ ಜೀವನದಲ್ಲಿ ಅತ್ಯಂತ ಪ್ರಾಮುಖ್ಯತೆಯ ಗುಣಗಳೆಂದರೆ ಶಿಸ್ತು, ಸಂಘಟನೆ ಹಾಗೂ ಸಂಯಮನ. ಇಂದು ಈ ಗುಣಗಳ ಅಭಾವದಿಂದ ಉಚ್ಚ ಮಟ್ಟದ ವಿದ್ಯಾರ್ಥಿಗಳಲ್ಲಿಯೂ ಕೂಡ; ಶೀಲ-ಸಂವರ್ಧನೆ ಮಾಯವಾಗಿ ಅಸೂಯೆ, ಅನೈತಿಕತೆ ಬೆಳೆದು ನಿಂತಿವೆ. ಇದನ್ನು ಹೋಗಲಾಡಿಸಲು ಎಳೆಯ ಮಕ್ಕಳಲ್ಲಿ ಶಿಸ್ತು, ಸಂಘಟನೆ ಹಾಗೂ ಸಹಕಾರ ಬೆಳೆದು ಬರಬೇಕಾಗುವದು. ಅದಕ್ಕಾಗಿ ಶಾಲೆಯಲ್ಲಿ ಕೆಲವು ಪಥಕಗಳನ್ನು ನಿರ್ಮಿಸಬೇಕು. ( ಉದಾ :– ವ್ಯಾಯಾಮ ಪಥಕ, ಕಲಾ ಪಥಕ, ಚರ್ಚಾ ಕೂಟ, ಕಥಾಕೂಟ, ಸಾಮಾಜ ಪಥಕ ಹಾಗೂ ಪ್ರದರ್ಶನ ಪಥಕ— ಮುಂ ). ಪ್ರತಿಯೊಂದು ಪಥಕದಲ್ಲಿ ೬ ಜನ ವಿದ್ಯಾರ್ಥಿಗಳು ಸದಸ್ಯರಿರುವಂತೆ ಯೋಜನೆಯಾಗಬೇಕು. ಸದರ ಪಥಕಗಳ ಕಾರ್ಯ ನಿರ್ವಹಣೆಯನ್ನು ಒಬ್ಬೊಬ್ಬ ಗುರುಗಳು ಒಂದೊಂದು ಪಥಕದ ಸಂಚಾಲಕರಾಗಿ ಮಾರ್ಗದರ್ಶನ ಮಾಡುತ್ತ, ಮಕ್ಕಳಿಂದ ಕಾರ್ಯ ನಾಗಿಸುವದು ಒಳಿತು. ಇದರಿಂದ ಮಕ್ಕಳಲ್ಲಿ ಕಾರ್ಯತತ್ಪರತೆಯ ಗುಣವನ್ನು ಬಿತ್ತಿದಂತಾಗುವದು.

## ೪. ಸಮವಾಯ

ಮಾನವನಲ್ಲಿ ಅಡಗಿದ ಸುಪ್ತ ಶಕ್ತಿಯ ಹೆಚ್ಚಳವು, ಕಂಡು ಬರಬೇಕಾದರೆ ಅದು ಅವನು ಆಡುವ, ಮಾಡುವ, ನೋಡುವ ಕೃತಿಗಳಲ್ಲಿ ಕಂಡು ಬರುವದು. ಅದರಂತೆ ಮಕ್ಕಳಲ್ಲಿ ಹುದುಗಿದ ಅಂತಃಶಕ್ತಿಗಳು ಅವರು ಮಾಡುವ ಚಟುವಟಿಕೆಗಳಲ್ಲಿ ಗೋಚರವಾಗುತ್ತವೆ. ಮತ್ತು ಅಂತೆಯೆ ನಮ್ಮ ಈ ಹೊಸ ಶಿಕ್ಷಣದಲ್ಲಿ ಚಟುವಟಿಕೆಗಳಿಗೆ ಪ್ರಾಮುಖ್ಯತೆ ಬಂದಿದೆ. ಈ ಚಟುವಟಿಕೆಗಳ ಮೂಲಕ ಮಗು ತನ್ನ ರಚನಾ ಕೌಶಲ್ಯವನ್ನು ಬೆಳೆಯಿಸಿಕೊಳ್ಳುವ ನಲ್ಲದೆ; ತನ್ನ ಬೌದ್ಧಿಕ ಶಕ್ತಿಯನ್ನು ವಿಶಾಲಗೊಳಿಸಿ ಶಾರೀರಿಕ ಬಲವನ್ನು ಬೆಳೆಯಿಸಿ ಕೊಳ್ಳುವನು. ಈ ಚಟುವಟಿಕೆಗಳ ಮುಖಾಂತರ ಹುಟ್ಟುವ ಸಹಜ ಜ್ಞಾನವನ್ನು ಮಗುವಿಗೆ ಮಾಡಿ ಕೊಡುವುದೇ ಸಮವಾಯ ಪದ್ಧತಿಯ ಗುಟ್ಟು. ಈ ಸಮವಾಯ ಪದ್ಧತಿಯಲ್ಲಿ ಚಟುವಟಿಕೆಗಳು ಬಹು ಮುಖ್ಯ ಪಾತ್ರ ವಹಿಸಬಲ್ಲವು. ಅವುಗಳ ಯೋಜನೆಯನ್ನು ವರ್ಷಾರಂಭದಲ್ಲಿಯೇ ತಯಾರಿಸಿ; ಅವುಗಳಿಗೆ ಬೌದ್ಧಿಕ ವಿಷಯಗಳನ್ನು ನೈಜ ರೀತಿಯಲ್ಲಿ ಸಮಸ್ವಿತಗೊಳಿಸಿ ತಿಂಗಳುಗಳಲ್ಲಿ ಒಡೆಯುವ ಏರ್ಪಾಡುಮಾಡುವದು ಒಳಿತು. ವರ್ಷದಲ್ಲಿ ಬರುವ ಆರ್ಥಿಕ ಸಾಮಾಜಿಕ ನೈಸರ್ಗಿಕ ಮತ್ತು ಆಕಸ್ಮಿಕ ಚಟುವಟಿಕೆಗಳನ್ನು ವ್ಯರ್ಥ ಹೋಗಗೊಡದಂತೆ ಗುರುಗಳು ಎಚ್ಚರಿಕೆವಹಿಸುವದು ಉತ್ತಮ.

## ೫. ಚಿತ್ರಸಂಕಲನ (ಶಾಲೆಯ ಪ್ರದರ್ಶನಾಲಯ)

ಪ್ರತಿಯೊಂದು ಸಜೀವ ಪ್ರಾಣಿಗಳಲ್ಲಿ ಸಂಗ್ರಹ ಪ್ರವೃತ್ತಿಯು ಹುಟ್ಟುಗುಣವಾಗಿದ್ದು, ಅದು ಮಾನವ ಪ್ರಾಣಿಯಲ್ಲಿ ಇನ್ನಿಲ್ಲದ ಪ್ರಾಣಿಗಳಿಗಿಂತ ಹೆಚ್ಚಾಗಿ ಕಂಡುಬರುವದು. ಈ ಸಂಗ್ರಹ ಪ್ರವೃತ್ತಿಯನ್ನು ತಂದುಕೊಡುವದು; ಅದರಿಂದ ಅವನ ಜ್ಞಾನವನ್ನು ವಿಕಸಿತಗೊಳಿಸುವದು; ಗುರುಗಳಕಾರ್ಯವಾಗಿದೆ. ಅಂತೆಯೇ ಶಿಕ್ಷಣ ಪ್ರಪಂಚದಲ್ಲಿ ನಿದರ್ಶನಗಳಿಗೆ ಸಾಕಷ್ಟು ಪ್ರಾಮುಖ್ಯತೆ ದೊರೆತಿದೆ. ಆದ್ದರಿಂದ ಗುರುಗಳು ಚಿತ್ರ ಸಂಗ್ರಹಿಸಿಕೊಂಡು, ವರ್ಗಕ್ಕೆ ಕನಿಷ್ಠ ಪಕ್ಷಕ್ಕಾದರೂ ಒಂದು ಮಕ್ಕಳ ಚಿತ್ರಕೋಶ ರಚಿಸಿಕೊಳ್ಳುವದು ಶೈಕ್ಷಣಿಕ ದೃಷ್ಟಿಯಿಂದ ಉತ್ತಮವಾದದ್ದು. ಅಲ್ಲದೆ ಚಿತ್ರಪಟಗಳು ನಕಾಶಗಳು, ಸುಳುವುಗಳು, ಮಾಡೆಲ್ಲುಗಳು, ಒಟೆಕೆಯ ವಸ್ತುಗಳು, ಮಣ್ಣಿನ ನಾಮಾನುಗಳು, ಮತ್ತು ರಟ್ಟಿನ ಕೆಲಸ ಮುಂತಾದವುಗಳನ್ನು ಸಂಗ್ರಹಿಸಿ ಹಾಗೂ ತಯಾರಿಸಿ ಶಾಲೆಯಲ್ಲಿ ಶಾಶ್ವತವಾದ ಚಿಕ್ಕ ವಸ್ತು ಪ್ರದರ್ಶನಾಲಯವನ್ನು ಏರ್ಪಡಿಸಿ ಮಕ್ಕಳಲ್ಲಿ ಹಸ್ತ ಕೌಶಲ್ಯವನ್ನು, ರಚನಾಶಕ್ತಿಯನ್ನು, ಬುದ್ಧಿಯ ವಿಶಾಸವನ್ನು ಮತ್ತು ಕಾರ್ಯಕ್ಷಮತೆಯ ಅರಿವನ್ನು ಉಂಟುಮಾಡಿ ಕೊಡಬೇಕು; ಅವುಗಳನ್ನು ಬೆಳೆಸಿಕೊಳ್ಳಲು ಅವಕಾಶ ಕೊಡಬೇಕು.

ನ್ಯಾಯವಾಗವೆ ಸದಾ ಉಳಿಯುವಂತೆ ಮಾಡುವದು ಶಿಕ್ಷಕರನ್ನೇ ಅವಲಂಬಿಸಿದೆ. ಆಯಾ ವರ್ಗಗಳಿಗೆ ಅನುಸಾರವಾಗಿ ಮಾಡಿದ ಪ್ರವಾಸದ ವರ್ಣನೆ, ನೋಡಿದ ಸಂಗತಿಗಳ ಅನುಭವದ ಟಿಪ್ಪಣಿ, ಪ್ರವಾಸದ ವೆಚ್ಚ, ನಡುವೆ ಸಂಭವಿಸಿರುವ ರಸನಿಮಿಷಗಳು ಮುಂತಾದವುಗಳನ್ನು ಹಲವು ಬಾರಿ ಬರೆಯಿಸಿ ಅವು ಮಕ್ಕಳಲ್ಲಿ ಬೇರೂರುವಂತೆ ಮಾಡಬೇಕು.

ವರ್ಣನೆಯಲ್ಲಾಗಲಿ ಬರೆಹದಲ್ಲಿಯಾಗಲಿ ವೈವಿಧ್ಯತೆ ಇರದೆ ಒಂದೇ ಮಾದರಿಯ ಅನುಕರಣ ಮಾಡಿದ ಲೇಖವು ಕಂಡುಬರುತ್ತದೆ. ಇವು ಮಕ್ಕಳಿಗೂ ತಮಗೂ ನೋಡುವವರಿಗೂ ಜಿಗುಪ್ಸೆಯನ್ನು ತರುವವಲ್ಲದೇ ಹೆಚ್ಚಿನದನ್ನೇನೂ ಸಾಧಿಸಲಾರವು. ನಾವು ಕೈಕೊಂಡ ಪ್ರವಾಸವು ನಿಜವಾಗಿ ಶೈಕ್ಷಣಿಕ ಪ್ರವಾಸವಾಗಬೇಕಾದರೆ ಪ್ರವಾಸ ಕೈಕೊಳ್ಳುವ ಮೊದಲು ಅದರ ಬಗ್ಗೆ ಆಲೋಚಿಸಿ ಅನೇಕ ಟಿಪ್ಪಣಿಗಳನ್ನು ಸಂಗ್ರಹಿಸಿಟ್ಟುಕೊಂಡಿರಬೇಕು.

ಪ್ರವಾಸ ಮುಗಿಸಿದ ನಂತರ ತಾವು ನೋಡಿದ, ಕೇಳಿದ, ಓದಿದ ಸಂಗತಿಗಳ ಮೇಲೆ ಮಕ್ಕಳು ಸ್ವತಂತ್ರವಾಗಿ ವಯೋಮಾನಕ್ಕೆ ಅನುಸರಿಸಿ ಮಾತಾಡಲಿಕ್ಕೂ ಬರೆಯಲಿಕ್ಕೂ ಶಕ್ತರಾಗುವಂತೆ ಮಾಡಬೇಕು. ಇದನ್ನು ನಾವು ಸಾಧಿಸದೇ ಹೋದರೆ ಮಕ್ಕಳ ವೇಳೆ, ಶ್ರಮ, ದುಡ್ಡು ಇವು ಹಾಳಾದಂತೆ ಮಾತ್ರ ಆದೀತು. ಶೈಕ್ಷಣಿಕ ಪ್ರವಾಸವೆಂದು ನಮಗೆ ನಾವೇ ಮೋಸಮಾಡಿಕೊಳ್ಳುವದಕ್ಕಿಂತ ಹೆಚ್ಚಿನದೇನೂ ಆಗಲಾರದು. ಶೈಕ್ಷಣಿಕ ಪ್ರವಾಸ ಕೈಕೊಳ್ಳುವವರೆಲ್ಲರೂ ಶಿಕ್ಷಣಕ್ಕಾಗಿ ಪ್ರವಾಸ, ಪ್ರವಾಸದಿಂದ ಶಿಕ್ಷಣ ಎಂಬ ತತ್ವವನ್ನು ಚನ್ನಾಗಿ ನೆನಪಿನಲ್ಲಿಟ್ಟುಕೊಂಡು ಕಾರ್ಯೋನ್ಮುಖರಾಗಬೇಕು.

ಜೀವನ ಶಿಕ್ಷಣ ಶಾಲೆಗಳಲ್ಲಿ ನಿರೀಕ್ಷಣೆಯ ಕೆಲಸವು ಸರಿಯಾಗಿ ಸಾಗದೇ ಇರುವದಕ್ಕೆ ಶಿಕ್ಷಕರು ತಳೆದಿರುವ ಅನಾಸ್ಥೆಯೇ ಕಾರಣವಾಗಿದೆ. ನಿರೀಕ್ಷಣೆ ಎಂದರೆ ನೋಡುವದು ಮಾತ್ರ ಎಂದು ತಿಳಿದುಕೊಂಡಂತಿದೆ. ಸೂರ್ಯೋದಯ, ಸೂರ್ಯಾಸ್ತ ಮುಂತಾದವುಗಳನ್ನು ಬಾಲಕರು ದಿನಾಲು ನೋಡುತ್ತಾರೆ. ಅಂದ ಮೇಲೆ ನಿರೀಕ್ಷಿಸಿದಂತೆ ಆಯಿತು. "ಇವುಗಳ ನಿರೀಕ್ಷಣೆ ಮಾಡಿಸಿದ್ದೀವೆ" ಎಂಬ ಉತ್ತರವು ಬರುತ್ತದೆ. ಅದರಂತೆ ಮೋಡ, ಮಳೆ, ಕಾಮನಬಿಲ್ಲು, ದಿಕ್ಕುಗಳು, ಬೆಳೆಗಳ ನಿರೀಕ್ಷಣೆ ಎಲ್ಲವೂ ಸಾಗುವದು. ಈ ತರಹದ ನಿರೀಕ್ಷಣೆಯಿಂದ ಅಭ್ಯಾಸ ಪತ್ರಿಕೆಯಲ್ಲಿ ನಾವು ಇಟ್ಟುಕೊಂಡ ಗುರಿಯನ್ನು ಮುಟ್ಟಲಾರೆವು. ಮಕ್ಕಳಿಗೆ ಸರಿಯಾದ ಜ್ಞಾನವನ್ನು ನೀಡಲಾರೆವು. ನಿರೀಕ್ಷಣೆಯಿಂದ ನಿಶ್ಚಿತ ಜ್ಞಾನವು ನಮಗೆ ಸಿಗಬೇಕಾದರೆ ನಾವು ನಿರೀಕ್ಷಿಸಿದ್ದನ್ನು ಸರಿಯಾಗಿ ಬರೆದಿಡಬೇಕು. ಉದಾ:– ಬೆಳೆಗಳ ನಿರೀಕ್ಷಣೆಯನ್ನೇ ತೆಗೆದುಕೊಳ್ಳೋಣ. ಅನುಕೂಲವಾದಾಗೊಮ್ಮೆ ಹೊಲಕ್ಕೆ ಹೋಗಿ ಬೆಳೆ ನೋಡಿ ಬಂದು ನಾವು ನಿರೀಕ್ಷಣೆ ಮಾಡಿಸಿದ್ದೇವೆ ಎಂಬ ಭಾವನೆಯಲ್ಲಿ ತೃಪ್ತರಾಗದೆ, ಬಿತ್ತಿಗೆಯಿಂದ ಕೊಯ್ಯುವ ವರೆಗೆ ಎಲ್ಲ ತರಹದ ಮಾದರಿಯ ಕೋಷ್ಟಕ ಇಟ್ಟು ಅದನ್ನು ಪ್ರತಿ ವಾರಕ್ಕೊಮ್ಮೆ ಇಲ್ಲವೇ ಹದಿನೈದು ದಿನಕ್ಕೊಮ್ಮೆ ತುಂಬುತ್ತ ಸರಿಯಾದ ಮಾಹಿತಿ ಮಾಡಿಕೊಡುತ್ತ ಹೋದಲ್ಲಿ ಅದರ ವಿಷಯಕ್ಕೆ ಸರಿಯಾದ ಜ್ಞಾನ ಉಂಟಾಗುತ್ತದೆ. ಒಕ್ಕಲುತನದ ಶಾಲೆಗಳಿಲ್ಲದವರು ತಮಗೆ ಪರಿಚಿತರಾದ ಯೋಗ್ಯ ಒಕ್ಕಲಿಗರ ಹೊಲಕ್ಕೆ ಮಕ್ಕಳನ್ನು ಕರೆದುಕೊಂಡು ಹೋಗಿ ಅವರ ಸಹಕಾರದಿಂದ ಬೀಜಕ್ಕೆ, ಆಳಿಗೆ, ಗೊಬ್ಬರಕ್ಕೆ, ಕಳೀ ಕೆಲಸಕ್ಕೆ ಕೊಯ್ಯುವದಕ್ಕೆ ಹತ್ತಿದ ಖರ್ಚಿನ ವಿವರ, ಬಂದ ಆದಾಯದ ವಿವರ ಇಡುತ್ತಾ ಹೋದಲ್ಲಿ ಒಂದು ನಿರ್ದಿಷ್ಟ ಕಲ್ಪನೆ ಮಕ್ಕಳಲ್ಲಿ ಮೂಡಿ ಅವರ ಮುಂದಿನ ಜೀವನಕ್ಕೆ ಅನುಕೂಲವಾಗುವದು. ಒಕ್ಕಲಿಗನು ತನ್ನ ಹೊಲದ ಖರ್ಚಿನ ವಿವರಗಳನ್ನು ಹೇಳುತ್ತ ಬೆಳೆ ಮನೆಗೆ ಬಂದ ನಂತರ ಸರಿಯಾಗಿ ಮಾಹಿತಿಯನ್ನು ಕೊಡುವದಿಲ್ಲವೆಂದು ಗ್ರಹಿಸಿದರೂ ಅಡ್ಡಿ ಇಲ್ಲ. ಶಿಕ್ಷಕರು ಅಂತಹ ಪ್ರಸಂಗಗಳಲ್ಲಿ ನೆರೆಹೊರೆಯವರನ್ನು ಕೇಳಿ ಅಂದಾಜು ಬೆಲೆ ಹಾಕಿ ಮಾಹಿತಿಯನ್ನು ಮಾಡಿಕೊಡಬೇಕು. ಲಾಭ ಹಾನಿಯ ಜಮಾ-ಖರ್ಚನ್ನು ಬರೆಯಿಸಬೇಕು.

ನೈಸರ್ಗಿಕ ದೃಶ್ಯಗಳ ನಿರೀಕ್ಷಣೆ ಮಾಡಿಸಿದ ಮೇಲೆ ಅದರ ವಿಷಯಕ್ಕೆ ಮಾಹಿತಿ ಮಾಡಿಕೊಟ್ಟು ಶಕ್ಯವಿದ್ದಲ್ಲೆಲ್ಲ ಚಿತ್ರ ಬರೆಯಿಸಿ ಟಿಪ್ಪಣಿ ಬರೆಯಿಸಬೇಕು. ತಾವು ನಿರೀಕ್ಷಿಸಿದ ಸಂಗತಿಗಳನ್ನು ಶಾಸ್ತ್ರೀಯವಾಗಿ ವಿವೇಚಿಸಿ ಮೇಲೆ ಹೇಳಿದಂತೆ ಕಲಿಸುತ್ತ ಹೋದಲ್ಲಿ ಪ್ರವಾಸ ಹಾಗೂ ನಿರೀಕ್ಷಣೆಯ ಉದ್ದೇಶವು ಪೂರೈಸಿದಂತೆ ಆಗುವದರಲ್ಲಿ ಸಂದೇಹವಿಲ್ಲ.

# "ಜೀವನ ಶಿಕ್ಷಣ ಶಾಲೆಗಳ ಒಳನೋಟ"

ಲೇಖಕರು : ಶ್ರೀ ಮ. ಬ. ಶ್ಯಾಡಗುಪ್ಪಿ, ಉಪಗುರುಗಳು, ಶಾಲಾ ದೇವಿಹೊಸೂರು

[ ಕಳೆದ ಸಂಚಿಕೆಯಿಂದ ಮುಂದುವರಿದದ್ದು ]

### ೩. ಪಥಕಗಳು

ಮಾನವನ ಜೀವನದಲ್ಲಿ ಅತ್ಯಂತ ಪ್ರಾಮುಖ್ಯತೆಯ ಗುಣಗಳೆಂದರೆ ಶಿಸ್ತು, ಸಂಘಟನೆ ಹಾಗೂ ಸಂಯಮನ. ಇಂದು ಈ ಗುಣಗಳ ಅಭಾವದಿಂದ ಉಚ್ಚ ಮಟ್ಟದ ವಿದ್ಯಾರ್ಥಿಗಳಲ್ಲಿಯೂ ಕೂಡ; ಶೀಲ-ಸಂವರ್ಧನೆ ಮಾಯವಾಗಿ ಅಸೂಯೆ, ಅನೈತಿಕತೆ ಬೆಳೆದು ನಿಂತಿವೆ. ಇದನ್ನು ಹೋಗಲಾಡಿಸಲು ಎಳೆಯ ಮಕ್ಕಳಲ್ಲಿ ಶಿಸ್ತು, ಸಂಘಟನೆ ಹಾಗೂ ಸಹಕಾರ ಬೆಳೆದು ಬರಬೇಕಾಗುವದು. ಅದಕ್ಕಾಗಿ ಶಾಲೆಯಲ್ಲಿ ಕೆಲವು ಪಥಕಗಳನ್ನು ನಿರ್ಮಿಸಬೇಕು. ( ಉದಾ :– ವ್ಯಾಯಾಮ ಪಥಕ, ಕಲಾ ಪಥಕ,ಚರ್ಚಾ ಕೂಟ, ಕಥಾಕೂಟ, ಸಾಮಾಜ ಪಥಕ ಹಾಗೂ ಪ್ರದರ್ಶನ ಪಥಕ— ಮುಂ ). ಪ್ರತಿಯೊಂದು ಪಥಕದಲ್ಲಿ ೬ ಜನ ವಿದ್ಯಾರ್ಥಿಗಳು ಸದಸ್ಯರಿರುವಂತೆ ಯೋಜನೆಯಾಗಬೇಕು. ಸದರ ಪಥಕಗಳ ಕಾರ್ಯ ನಿರ್ವಹಣೆಯನ್ನು ಒಬ್ಬೊಬ್ಬ ಗುರುಗಳು ಒಂದೊಂದು ಪಥಕದ ಸಂಚಾಲಕರಾಗಿ ಮಾರ್ಗದರ್ಶನ ಮಾಡುತ್ತ, ಮಕ್ಕಳಿಂದ ಕಾರ್ಯ ಸಾಗಿಸುವದು ಒಳಿತು. ಇದರಿಂದ ಮಕ್ಕಳಲ್ಲಿ ಕಾರ್ಯತತ್ಪರತೆಯ ಗುಣವನ್ನು ಬಿತ್ತಿದಂತಾಗುವದು.

### ೪. ಸಮುವಾಯ

ಮಾನವನಲ್ಲಿ ಅಡಗಿದ ಸುಪ್ತ ಶಕ್ತಿಯ ಹೆಚ್ಚಳವು ಕಂಡು ಬರಬೇಕಾದರೆ ಅದು ಅವನು ಆಡುವ, ಮಾಡುವ, ನೋಡುವ ಕೃತಿಗಳಲ್ಲಿ ಕಂಡು ಬರುವದು. ಅದರಂತೆ ಮಕ್ಕಳಲ್ಲಿ ಹುದುಗಿದ ಅಂತಃಶಕ್ತಿಗಳು ಅವರು ಮಾಡುವ ಚಟುವಟಿಕೆಗಳಲ್ಲಿ ಗೋಚರವಾಗುತ್ತವೆ. ಮತ್ತು ಅಂತೆಯೆ ನಮ್ಮ ಈ ಹೊಸ ಶಿಕ್ಷಣದಲ್ಲಿ ಚಟುವಟಿಕೆಗಳಿಗೆ ಪ್ರಾಮುಖ್ಯತೆ ಬಂದಿದೆ. ಈ ಚಟುವಟಿಕೆಗಳ ಮೂಲಕ ಮಗು ತನ್ನ ರಚನಾ ಕೌಶಲ್ಯವನ್ನು ಬೆಳೆಯಿಸಿಕೊಳ್ಳುವನಲ್ಲದೆ; ತನ್ನ ಬೌದ್ಧಿಕ ಶಕ್ತಿಯನ್ನು ವಿಶಾಲಗೊಳಿಸಿ ಶಾರೀರಿಕ ಬಲವನ್ನು ಬೆಳೆಯಿಸಿ ಕೊಳ್ಳುವನು. ಈ ಚಟುವಟಿಕೆಗಳ ಮುಖಾಂತರ ಹುಟ್ಟುವ ಸಹಜ ಜ್ಞಾನವನ್ನು ಮಗುವಿಗೆ ಮಾಡಿ ಕೊಡುವುದೇ ಸಮುವಾಯ ಪದ್ಧತಿಯಾಗುಟ್ಟು. ಈ ಸಮುವಾಯ ಪದ್ಧತಿಯಲ್ಲಿ ಚಟುವಟಿಕೆಗಳು ಬಹು ಮುಖ್ಯ ಪಾತ್ರ ವಹಿಸಬಲ್ಲವು. ಅವುಗಳ ಯೋಜನೆಯನ್ನು ವರ್ಷಾರಂಭದಲ್ಲಿಯೇ ತಯಾರಿಸಿ; ಅವುಗಳಿಗೆ ಬೌದ್ಧಿಕ ವಿಷಯಗಳನ್ನು ಸೈಜ ರೀತಿಯಲ್ಲಿ ಸಮನ್ವಿತಗೊಳಿಸಿ ತಿಂಗಳುಗಳಲ್ಲಿ ಒಡೆಯುವ ಏರ್ಪಾಡುಮಾಡುವದು ಒಳಿತು. ವರ್ಷದಲ್ಲಿ ಬರುವ ಆರ್ಥಿಕ ಸಾಮಾಜಿಕ ನೈಸರ್ಗಿಕ ಮತ್ತು ಆಕಸ್ಮಿಕ ಚಟುವಟಿಕೆಗಳನ್ನು ವ್ಯರ್ಥ ಹೋಗಗೊಡದಂತೆ ಗುರುಗಳು ಎಚ್ಚರಿಕೆವಹಿಸುವದು ಉತ್ತಮ.

### ೫. ಚಿತ್ರಸಂಕಲನ (ಶಾಲೆಯ ಪ್ರದರ್ಶನಾಲಯ)

ಪ್ರತಿಯೊಂದು ಸಜೀವ ಪ್ರಾಣಿಗಳಲ್ಲಿ ಸಂಗ್ರಹ ಪ್ರವೃತ್ತಿಯು ಹುಟ್ಟುಗುಣವಾಗಿದ್ದು, ಅದು ಮಾನವ ಪ್ರಾಣಿಯಲ್ಲಿ ಇನ್ನಿಲ್ಲದ ಪ್ರಾಣಿಗಳಿಗಿಂತ ಹೆಚ್ಚಾಗಿ ಕಂಡುಬರುವದು. ಈ ಸಂಗ್ರಹ ಪ್ರವೃತ್ತಿಯನ್ನು ತಂದುಕೊಡುವದು; ಅದರಿಂದ ಅವನ ಜ್ಞಾನವನ್ನು ವಿಕಸಿತಗೊಳಿಸುವದು; ಗುರುಗಳಕಾರ್ಯವಾಗಿದೆ. ಅಂತೆಯೇ ಶಿಕ್ಷಣ ಪ್ರಪಂಚದಲ್ಲಿ ನಿದರ್ಶನಗಳಿಗೆ ಸಾಕಷ್ಟು ಪ್ರಾಮುಖ್ಯತೆ ದೊರೆತಿದೆ. ಅದ್ದರಿಂದ ಗುರುಗಳು ಚಿತ್ರ ಸಂಗ್ರಹಿಸಿಕೊಂಡು, ವರ್ಗಕ್ಕೆ ಕನಿಷ್ಠ ಪಕ್ಷಕ್ಕಾದರೂ ಒಂದು ಮಕ್ಕಳ ಚಿತ್ರಕೋಶ ರಚಿಸಿಕೊಳ್ಳುವದು ಶೈಕ್ಷಣಿಕ ದೃಷ್ಟಿಯಿಂದ ಉತ್ತಮವಾದದ್ದು. ಅಲ್ಲದೆ ಚಿತ್ರ ಪಟಗಳು ನಕಾಶಗಳು, ಸುಳುವುಗಳು, ಮಾಡೆಲ್ಲುಗಳು, ಆಟಿಕೆಯ ವಸ್ತುಗಳು, ಮಣ್ಣಿನ ಸಾಮಾನುಗಳು, ಮರ್ತ್ತ ರಟ್ಟಿನ ಕೆಲಸ ಮುಂತಾದವುಗಳನ್ನು ಸಂಗ್ರಹಿಸಿ ಹಾಗೂ ತಯಾರಿಸಿ ಶಾಲೆಯಲ್ಲಿ ಶಾಶ್ವತವಾದ ಚಿಕ್ಕ ವಸ್ತು ಪ್ರದರ್ಶನಾಲಯವನ್ನು ಏರ್ಪಡಿಸಿ ಮಕ್ಕಳಲ್ಲಿ ಹಸ್ತ ಕೌಶಲ್ಯವನ್ನು, ರಚನಾಶಕ್ತಿಯನ್ನು, ಬುದ್ಧಿಯ ವಿಕಾಸವನ್ನು ಮತ್ತು ಕಾರ್ಯಕ್ಷಮತೆಯ ಅರಿವನ್ನು ಉಂಟುಮಾಡಿ ಕೊಡಬೇಕು; ಅವುಗಳನ್ನು ಬೆಳೆಸಿಕೊಳ್ಳಲು ಆಸ್ಪದ ಕೊಡಬೇಕು.

## ೬. ಮನರಂಜನೆ

" ದಣಿದ ದೇಹಕ್ಕೆ ವಿಶ್ರಾಂತಿಯ ಅವಶ್ಯಕತೆ ಇದ್ದಂತೆ ನೊಂದ ಮನಕ್ಕೆ ನಗೆಯೇ ವಿಶ್ರಾಂತಿ. ನಕ್ಕು ನಗಿಸುವದೇ ಮನರಂಜನೆ " ಎಂದು ಬಲ್ಲವರು ಹೇಳುವಂತೆ, ನಮ್ಮ ಶಾಲೆಯಲ್ಲಿ ಈ ಮನರಂಜನೆಗೆ ಹೆಚ್ಚಿನ ಮಹತ್ವ ಬಂದಿದೆ. ಕೆಲಸ ಮಾಡಿ ದಣಿದ ಮೆದುಳಿಗೆ ವಿಶ್ರಾಂತಿ ಬೇಡವೇ ? ಅದಕ್ಕಾಗಿ ಚಿಕ್ಕ ಮಕ್ಕಳಿಗೆ ಪ್ರತಿದಿನವೂ ವಿನೋದದಿಂದೊಡಗೂಡಿದ ಆಟ ಗಳನ್ನು ಆಡಿಸಿ, ನಕ್ಕು ನಗಿಸಬೇಕು. ಪ್ರತಿ ವಾರಕ್ಕೊಮ್ಮೆ ಸಾಮೂಹಿಕ ಮನರಂಜನೆಯ ಕಾರ್ಯಕ್ರಮಗಳನ್ನು ಸಂಘಟಿಸಬೇಕು. ಆಯ್ದುಕೊಳ್ಳುವ ವಿವಿಧವಿನೋದಾ ವಳಿಗಳು ಮಕ್ಕಳಿಂದ ಯೋಜಿತವಾದವುಗಳಾಗಿರಬೇಕು. ಗುರುಗಳು ಕೇವಲ ಮಾರ್ಗದರ್ಶಕರಾಗಿ ತಪ್ಪನ್ನು ತಿದ್ದು ವವರಾಗಬೇಕು. ಅವು ಬಾಲಕರ ಶೀಲ-ಸಂವರ್ಧನೆ, ಶಿಸ್ತು ಸಂಘಟನೆಗಳನ್ನು ಪ್ರಜ್ಞೋದಿಸುವಂಥವುಗಳು ಇದ್ದು ಸರಳ ರಾಗೂ ಸುಂದರ ಸಮನ್ವಯವನ್ನು ಜೀವನದೊಂದಿಗೆ ನೈಜರೀತಿಯಲ್ಲಿ ಸಾಧಿಸಬೇಕು. (ಉದಾ:- ಚಿಕ್ಕ ಚಿಕ್ಕ ಸಂಭಾಷಣೆ, ಹಾಡುಗಳು, ಕೊಳಲು, ಕಥೆ ಅನುಕರಣೆ, ಪಠ್ಯ ಪುಸ್ತಕದಲ್ಲಿ ಬಂದ ಸನ್ನಿವೇಶ ಮುಂ. ) ಮೇಲಿನ ವರ್ಗದ ಮಕ್ಕಳಿಂದ ಶಾಲಾ ಏಕಾಂಕ ನಾಟಕಗಳನ್ನು ಏರ್ಪಡಿಸಬೇಕು. ನಾಟಕಕ್ಕಾಗಿ ಆರಿಸುವ ವಿಷಯಗಳು ಕ್ಲಿಷ್ಟವಾಗಿರದೆ, ಮಕ್ಕಳ ಮನಕ್ಕೆ ಒಗ್ಗುವಂಥವುಗಳು, ಚಿಕ್ಕವು ಸರಳ ಹಾಗೂ ಸುಂದರ ಸನ್ನಿವೇಶದಿಂದ ಕೂಡಿದಂಥವುಗಳಾಗಿರಬೇಕು. ಅಲ್ಲದೆ ಸಮಾಜದ ಉನ್ನತಿಯನ್ನು ಬಯಸುವಂಥ, ಸ್ವಾಭಿಮಾನ ಸ್ವದೇಶಾಭಿಮಾನವನ್ನು ಕೆರಳಿಸುವಂಥ ನಾಟಕಗಳನ್ನು ಏರ್ಪಡಿಸಿ, ಮಕ್ಕಳಲ್ಲಿ ಹುದುಗಿದ ಕಲೆಗೆ ಬೆಲೆಯನ್ನು ತಂದು ಕೊಟ್ಟು ಉತ್ತಮ ಕಲಾಕಾರರನ್ನಾಗಿ ಮಾಡಬೇಕು.

## ೭. ಸಹಕಾರ

ಸ್ವತಂತ್ರ ಭಾರತದಲ್ಲಿ ಇಂದು ಎಲ್ಲೆಡೆಗೂ ಸಹಕಾರ ಚಳವಳಿಗೆ ಅಗ್ರಸ್ಥಾನ ದೊರೆತಿದೆ. " ನಾನು ಎಲ್ಲರಿಗಾಗಿ ಎಲ್ಲರೂ ನನಗಾಗಿ " ಎಂಬ ಆದರ್ಶ ತತ್ವವು ಮನೆ ಮನೆಗೂ ಮುಟ್ಟಿ, ಸಮಾಜದ ಸರ್ವತೋ ಮುಖ ಪ್ರಗತಿಯನ್ನು ಸಾಧಿಸಿ ಜೀವನದ ಮಟ್ಟವನ್ನು ಮತ್ತು ಮೌಲ್ಯಗಳನ್ನು ಹೆಚ್ಚಿಸ ಬೇಕಾಗಿದೆ. ಈ ತತ್ವವು ಶಿಕ್ಷಣದಂಥ ಪವಿತ್ರ ಕಾರ್ಯದಲ್ಲಿಯೂ ಮೂಡಿಬರಬೇಕು. ಶಿಕ್ಷಣವು ಕೇವಲ ಶಿಕ್ಷಕನ ವೃತ್ತಿಯಾಗಿರದೆ; ಮಗು, ಪಾಲಕ, ಹಾಗೂ ಸಮಾಜ, ಈ ತ್ರಿವೇಣೀ ಸಂಗಮದ ಸುಂದರ ಸಮನ್ವಯದಿಂದ ಮಗುವಿನ ಜ್ಞಾನಾರ್ಜನೆಯ ಭಾಂಡಾರವನ್ನು ಸಾಧಿಸ ಬೇಕಾಗಿದೆ. ಅದಕ್ಕಾಗಿ ಶಿಕ್ಷಣ ಕ್ಷೇತ್ರದಲ್ಲಿ " ಸಹಕಾರ " ಅನಿವಾರ್ಯ. ಆದ್ದರಿಂದ ಶಾಲೆಗೂ ಸಮಾಜಕ್ಕೂ ಒಂದು ತರದ ಮಧುರ ಬಾಂಧವ್ಯವು ಹುಟ್ಟುವಂತೆಯೂ, ಪಾಲಕರು ಶಾಲೆಯ ಬಗ್ಗೆ ಆಸ್ಥೆವಹಿಸುವಂತೆಯೂ ಮಾಡುವದು ಗುರುವಿನ ಪ್ರಪ್ರಥಮ ಕರ್ತವ್ಯವಾಗಿದೆ. ಆದ್ದರಿಂದ ಪ್ರಸಂಗಾನುಗುಣ ವಾಗಿ ನಗರ ಸಂಕೀರ್ತನೆ, ಪಾಲಕರ ದಿನಾಚರಣೆ, ಮಕ್ಕಳ ದಿನಾಚರಣೆ, ಶಾಲಾ ಹುಟ್ಟು ಹಬ್ಬ, ಪ್ರದರ್ಶನ, ಸಭೆ-ಸಮ್ಮೇಲನಗಳನ್ನು ಏರ್ಪಡಿಸಿ; ಸಮಾಜ ಹಾಗೂ ಪಾಲಕರಲ್ಲಿ ನನ್ನ ಶಾಲೆ ನನ್ನ ನಾಡು, ಎಂಬ ವಿಶ್ವ-ಬಂಧುತ್ವದ ತಿಳಿ ಹೊನಲನ್ನು ಹರಿಸಿ; ಮಕ್ಕಳ ಶಿಕ್ಷಣದ ಕಡೆಗೆ ಲಕ್ಷವಹಿಸುವಂತೆ ಮಾಡಬೇಕು. ಅಲ್ಲದೆ ಶಿಕ್ಷಣದ ಏಳ್ಗೆಯ ಬಗ್ಗೆ ಗ್ರಾಮದ ಉದಾರಿಗಳಿಂದ ಶಾಲೆಗೆ ಬೇಕಾಗುವ ಉಪಕರಣಗಳನ್ನು (ಉದಾ :- ಭೂಮಿತಿಯ, ವಿಜ್ಞಾನದ, ಮೂಲೋದ್ಯೋಗದ, ಆಟಿಕೆಯ ಮುಂ. ) ಪಡೆಯಲು ಗುರುಗಳು ಶಕ್ತರಾಗಬೇಕು. ಮತ್ತು ತಮ್ಮ ತಮ್ಮ ಕಾರ್ಯಕ್ಷೇತ್ರದ ಕಾರ್ಯಕ್ಷಮತೆಯ ಹೊಂಬೆಳಕನ್ನು ಸಮಾಜದ ಮುಂದೆ ಚಲ್ಲಿ ಸಕ್ರಿಯ ಸಹಾಯವನ್ನು ಬಯಸುವಂತಾಗಬೇಕು. ಮಕ್ಕಳಿಗೆ ಸಹಕಾರದ ಆದರ್ಶ ತತ್ವಗಳು ಮನವರಿಕೆಯಾಗಬೇಕಾದರೆ ಶಾಲೆಗೊಂದರಂತೆ ಮಕ್ಕಳಿಂದ ಸಂಘಟಿತವಾದ ಶಾಲಾ ಸಹಕಾರೀ ಅಂಗಡಿ ಯನ್ನು ತೆರೆಯಬೇಕು. ಅದರ ಪ್ರಗತಿಯ ಫಲವು ಮಕ್ಕಳ ನಿದರ್ಶನಕ್ಕೆ ಬರುವಂತೆ ಗುರುಗಳು ದಕ್ಷತೆ ವಹಿಸ ಬೇಕು. ಮತ್ತು ಕೆಲವು ಕೈಬರೆಹದ ಪತ್ರಿಕೆಗಳನ್ನು ಹೊರಡಿಸಿ ಮಕ್ಕಳಿಗೆ ಲೋಕ ಶಿಕ್ಷಣದ ಮಹತ್ವವನ್ನು ತಿಳಿಯ ಪಡಿಸಬೇಕು.

## ೮. ಸಾಂಘಿಕ ಜೀವನ

ಇಂದು ವಿಶಾಲವಾದ ಜಗತ್ತು ದಿನದಿನಕ್ಕೆ ಸಂಕುಚಿತ ಹೊಂದಿ ಪರಸ್ಪರರಲ್ಲಿ ಹೊಂದಾಣಿಕೆಯ ಬಳಿಕೆಯು ಅತಿಯಾಗಿ ಬೆಳೆದು ಬರತೊಡಗಿವೆ. ಇಂದು ಬಿಡಿಯಾಗಿ ಬಾಳದೆ ಇಡಿಯಾಗಿ ಬಾಳ ಬೇಕಾಗಿದೆ. ಇದರಲ್ಲಿಯೇ ರಾಷ್ಟ್ರದ ಉನ್ನತಿ; ಸತ್ಯ-ಶಾಂತಿ-ಅಹಿಂಸೆ

ಗಳ ಹುಟ್ಟು. ವಿಶ್ವವು ಒಂದೇ ಕುಟುಂಬ; ಇಲ್ಲಿ ವಾಸಿಸುವ ಮಾನವರೆಲ್ಲರೂ ಒಂದೇ ಕುಟುಂಬದವರು ಎಂಬ ಸದಸದ್ವಿವೇಕ ಬುದ್ಧಿ ಹಾಗೂ ಮಾನವೀಯತೆಯ ಕುರುಹುಗಳು ಹುಟ್ಟಿ; ರಾಷ್ಟ್ರದ ಕಲ್ಯಾಣವಾಗ ಬೇಕಾಗಿದೆ. ಈ ವಿಶ್ವ ವ್ಯಾಪಕ ಶಕ್ತಿಯನ್ನು ಮಕ್ಕಳ ಮನೋಭೂಮಿಕೆಯಲ್ಲಿ ಈಗಿನಿಂದಲೆ ಬಿತ್ತಿ ಅದನ್ನು ಹೆಮ್ಮರವನ್ನಾಗಿ ಬಾಳಿ ಬೆಳೆಯಿಸ ಬೇಕಾಗಿದೆ. ಆದ್ದರಿಂದ ಶಾಲೆಯಲ್ಲಿ ಇಂದು ಸಾಂಘಿಕ ಜೀವನವು ಒಂದು ಪ್ರತ್ಯೇಕ ವಿಷಯವಾಗಿ ಪರಿಣಮಿಸಿದೆ.

ಶಾಲೆಯಲ್ಲಿ ಗ್ರಾಮದ ಎಲ್ಲ ಮಕ್ಕಳು ಒಂದೆಡೆಗೆ ಕಲೆಯುವದರಿಂದ ಅದೂ ಒಂದು ಅವಿಭಕ್ತ ಕುಟುಂಬ; ಮತ್ತು ಸಾಮುದಾಯಿಕ ಕೇಂದ್ರ. ಬೆಳಗಿನ ಪ್ರಾರ್ಥನೆ ಯಿಂದ ಮೊದಲುಗೊಂಡು ಸಮಗ್ರ ಶಾಲಾ ಚಟುವಟಿಕೆ ಗಳು ಮಕ್ಕಳಿಂದ ಜರುಗುತ್ತವೆ. ಅವರಿಗೆ ಸೇವಾಭಾವದ ಕಲ್ಪನೆಯನ್ನು ಕೆಲಸದ ಮಹತ್ವವನ್ನು ತಿಳಿಯ ಪಡಿಸಿ ಸತತೋದ್ಯೋಗಿಗಳನ್ನಾಗಿ ಮಾರ್ಪಡಿಸುವಂತಾಗಬೇಕು. ಶಾಲೆ ಮತ್ತು ಸಮಾಜದಲ್ಲಿ ನನ್ನ ಇರುವಿಕೆ ಹೇಗೆ? ಎಂತು? ನನ್ನ ಸ್ಥಾನ-ಮಾನಗಳೇನು? ಎಂಬ ಅರುವಿನ ತಿರುಳನ್ನು ತಂದು ಕೊಟ್ಟು ಉತ್ತಮ ನಾಗರಿಕರನ್ನಾಗಿ ತಯಾರಿಸುವದು ಗುರುಗಳಾದವರ ಹೊಣೆ.

## ೮. ಶಾರೀರಿಕ ಸಂಪತ್ತು

"ಎಲ್ಲ ಸಂಪತ್ತುಗಳಲ್ಲಿ ಶರೀರ ಸಂಪತ್ತೇ ಹೆಚ್ಚು" ಎಂಬ ಉಕ್ತಿಗನುಸಾರವಾಗಿ ನಮ್ಮ ರಾಷ್ಟ್ರದ ಜನತೆಯ ಬಲಾಬಲಗಳನ್ನು ಹೆಚ್ಚಿಸಿ "ಶರೀರ ಮಾದ್ಯಂ ಖಲು ಧರ್ಮ ಸಾಧನಂ" ಈ ಮಾತಿನ ಸತ್ಯತೆಯನ್ನು ಪ್ರಕಟಿಸ ಬೇಕಾಗಿದೆ. ಈಗಿನ ವಿಜ್ಞಾನ ಯುಗದಲ್ಲಿ ಮಾನವನು ಕೇವಲ ಬುದ್ಧಿ ಜೀವಿಯಾಗಿ ಬಾಳದೆ, ಅದರೊಂದಿಗೆ ಶಾರೀರಿಕ ಬಲವನ್ನು ವೃದ್ಧಿಗೊಳಿಸಬೇಕಾಗಿದೆ. ಇಲ್ಲದಿದ್ದರೆ ವೃತ್ತ ಪತ್ರಿಕೆಗಳಲ್ಲಿ ಕಾಣುವ ವ್ಯಂಗ್ಯ ಚಿತ್ರ ಗಳಂತೆ ತಲೆ ಅತಿ ದೊಡ್ಡದಿದ್ದು ಕೈಕಾಲು ಕಡ್ಡಿಯಾಗಿ ತೋರುವ ನಿರ್ಜೀವ ಹಾಗೂ ನಿಷ್ಕ್ರಿಯ ವ್ಯಕ್ತಿಗಳ ಸಮಾಜವು ಮುಂದೆ ಸಿದ್ಧವಾಗಬಹುದು! ಆದ್ದರಿಂದ ನಮ್ಮ ಜೀವನ ಶಿಕ್ಷಣ ಶಾಲೆಗಳಲ್ಲಿ ಬೌದ್ಧಿಕ ವಿಷಯಕ್ಕೆ ಕೊಡುವ ಮಹತ್ವದಷ್ಟೇ ಪ್ರಾಧಾನ್ಯತೆಯನ್ನು ಶಾರೀರಿಕ ಶಿಕ್ಷಣಕ್ಕೆ ಕೊಟ್ಟಿರುತ್ತಾರೆ. ವೇಳಾಪತ್ರಿಕೆಯಲ್ಲಿ ಆಟಕ್ಕಾಗಿಯೇ ಕೆಲವು ಅವಧಿಯನ್ನು ಮೀಸಲಾಗಿರಿಸಿದೆ. ಮಗುವಿನ ವಿವಿಧ ಸರ್ವಾಂಗಗಳು ಪ್ರಮಾಣ ಬದ್ಧವಾಗಿ ಬೆಳೆದು ಸದೃಢ ಕಾಯದವರಾಗಬೇಕು. ಅದಕ್ಕಾಗಿ ವೈಯಕ್ತಿಕ ಹಾಗೂ ಸಾಮಾಜಿಕ ಶಿಸ್ತುಗಳು, ಸ್ವಚ್ಛಂದ ಚಟುವಟಿಕೆಗಳು, ಕೂಜುಗಳು, ಲಾಠಿ, ಲೆಝಿಮ್, ಡಂಬೆಲ್ಸ ಮತ್ತು ಕವಾಯತು ಮುಂತಾದ ಚಟುವಟಿಕೆಗಳು ನಿತ್ಯನಡೆಯುವ ಏರ್ಪಾಡಾಗಿ; ಮಕ್ಕಳಲ್ಲಿ ಶಿಸ್ತು-ಸಾಹಸದ ಸಮನ್ವಯವನ್ನು ತಂದು ಕೊಡಬೇಕು.

## ೧೦. ಗುರು-ಮಾರ್ಗದರ್ಶಕ

ಸ್ವತಂತ್ರ ಭಾರತದ ಭಾವೀ ಜನಾಂಗದ ರೂಪ-ರೇಷೆಯನ್ನು ಸುಂದರವಾಗಿ ಚಿತ್ರಿಸುವ ಚಿತ್ರಕಾರನೆಂದರೆ ಗುರು. ಇಂದು ಈ ಪ್ರಜಾಪ್ರಭುತ್ವದ ಜಗತ್ತಿನಲ್ಲಿ ಗುರುವಿನ ಪಾತ್ರವು ಅತ್ಯಂತ ಗುರುತರ ಹಾಗೂ ಹೊಣೆಗಾರಿಕೆಯದೆಂಬುದನ್ನು ಎಲ್ಲರೂ ಬಲ್ಲರು. ಆದರೆ ಸಮಾಜವು ಇಂದು ಈ ವಿಶ್ವವ್ಯಾಪಿ ಗುರುಗಳ ಬಗ್ಗೆ ತೋರುವ ಅನಾಸಕ್ತಿ ಮತ್ತು ಅವಹೇಳನ ಕಂಡರೆ ಅತೀವ ಕೆಡಕೆನಿಸುತ್ತದೆ. ಅವರಿಗೆ ಸಮಾಜದಲ್ಲಿ ದೊರೆಯುವ ಸ್ಥಾನ-ಮಾನಗಳನ್ನು ನೆನೆದರೆ ಅತ್ಯಂತ ಮರುಕ ಎನಿಸುತ್ತದೆ. ಆದರೆ ಗುರುಗಳು ಇತ್ತ ಗಮನ ಕೊಡದೆ "ಕರ್ಮ ಮಾಡು ಅದರ ಫಲವೇಕೆ? ಎಂಬ ಉದಾತ್ತ ತತ್ವಕ್ಕೆ ಅಂಜಿ ತನ್ನ ಕರ್ಮವನ್ನು ಮಾಡುತ್ತಿರ ಬೇಕು. ಲೋಕ ಕಲ್ಯಾಣ ಕಾರಕ ಬೀಜವನ್ನು ಬಿತ್ತಿದರೆ ಸನ್ಮಾನವೆಂಬ ಬೆಳೆಯು ತನ್ನಿಂದ ತಾನೇ ದೊರಕುವದು. ಆದ್ದರಿಂದ ಗುರುವು ಇದಾವುದಕ್ಕೂ ಎಡೆಗೊಡದೆ ಶಾಲೆ ಯೊಂದು ತನ್ನ ವ್ಯವಸಾಯದ ಭೂಮಿ; ಮಕ್ಕಳೇ ಅದರ ಹುಲುಸಾದ ಬೆಳೆ. ಈ ಬೆಳೆಗೆ ತನ್ನ ಜ್ಞಾನವೆಂಬ ಗೊಬ್ಬರನೀಡಿ, ಸತ್ಯ ಹಾಗೂ ಶಾಂತಿಯ ಜಲವನ್ನು ಎರೆದು ಶಿಸ್ತು ಹಾಗೂ ಸಂಘಟನೆಯ ಮೇಲು ಗೊಬ್ಬರ ವನ್ನು ಹರಡಿ, ಫಲವನ್ನು ಪುಲುನಾಗಿ ಬೆಳೆಯಿಸಿ ಜಗತ್ತಿಗೆ ಹಂಚುವೆನೆಂಬ ದೃಢ ಸಂಕಲ್ಪವನ್ನು ತಾಳಿ, ತನ್ನ ಕರ್ತವ್ಯದಲ್ಲಿ ನಿಮಗ್ನನಾಗದೆ ಮಕ್ಕಳ ಸರ್ವಾಂಗೀಣ ಉನ್ನತಿಗೆ ಕಾರಣೀ ಭೂತನಾಗಬೇಕು.

ಇಂದು ಶಾಲೆಯಲ್ಲಿ ಕೆಲಸ ಮಾಡುವ ಎಲ್ಲ ಗುರು-ವೃಂದವು ಒಂದೇ ಕುಟುಂಬದವರೆಂಬ ಸಹೋದರ ಭಾವನೆ

ಬೇಕು. ಪರಸ್ಪರರಲ್ಲಿ ನಂಬಿಕೆ, ಪ್ರೇಮ, ಸಹಿಷ್ಣುತೆ, ಸಂಯಮನ ಮತ್ತು ಸಹಕಾರ ನೊದಲಾದ ಮಾನವೀಯ ಹಾಗೂ ದೈನಿಕ ಗುಣಗಳ ಘೋರಣೆಯಿಂದ ಈ ಶಿಕ್ಷಣ ವೆಂಬಸಾಗರದಲ್ಲಿ ನುಕ್ಕಳಿಂಬ ಪ್ರಯಾಣಿಕರನ್ನು ಹೊತ್ತು ಶಾಲೆಯೆಂಬ ನೌಕೆಯನ್ನು ನಡೆಸುವ ಗುರು, ಕಪ್ತಾನ ನಾಗಿ ಯಾವ ಅಡಳಿತೆಗೂ ಎಡೆಗೊಡದೆ, ನಿರಾತಂಕವಾಗಿ ಸಾಗಿಸಿ, ಭಾರತದ ಪ್ರಗತಿಗೆ ಮನಃಪೂರ್ವಕವಾಗಿ ಸೇವೆ ಸಲ್ಲಿಸಿ, ಕೃತಾರ್ಥರಾಗಬೇಕು.

# ' ಜೀವನ ಶಿಕ್ಷಣ '

ಲೇಖಕರು : ಶ್ರೀ ಎಮ್. ಕೆ. ಚಿಕ್ಕಮಠ
'ರಾಷ್ಟ್ರ ಭಾಷಾ ವಿಶಾರದ' ಎಸ್. ಟಿ. ಸಿ. ಕ. ಗಂ. ಮ. ಶಾಲೆ, ಕಿರೇಸೂರ

ಶಿಕ್ಷಣವು ಮನುಷ್ಯನ ಮೂಲಭೂತ ಬೇಡಿಕೆಗಳಲ್ಲಿ ಒಂದು ಎಂದು ಗಣಿಸಲ್ಪಟ್ಟಿಂದಿನಿಂದ ಶಿಕ್ಷಣವನ್ನು ಕುರಿತು ಅದು ಯಾವ ಗುರಿಯುಳ್ಳದ್ದಿರಬೇಕು? ಯಾವ ಪದ್ಧತಿಯಿಂದ ಕಲಿಸಲ್ಪಡಬೇಕು? ಹಂತ ಹಂತಗಳಲ್ಲಿನ ಅದರ ಮಟ್ಟವು ಹೇಗಿರಬೇಕು? ಎಂಬೀ ಮುಂತಾದ ಮಾತುಗಳ ಬಗ್ಗೆ ಈಗಾಗಲೇ ಅನೇಕ ಶಿಕ್ಷಣ ತಜ್ಞರು ವಿಚಾರ ಮಾಡಿದ್ದಾರೆ, ಇನ್ನೂ ಮಾಡುತ್ತಿದ್ದಾರೆ. ಅದರೂ ಶಿಕ್ಷಣದ ಬಗ್ಗೆ ಇನ್ನೂ ಪದ್ಧತಿಗಳು ಶೋಧ ವಾಗುತ್ತಲೇ ಇವೆ. ಇದರಿಂದ ಶಿಕ್ಷಣವು ಬಹು ವ್ಯಾಪಕ ವಾದುದು ಎಂಬುದನ್ನು ತೋರಿಸುತ್ತದೆ. "ಶಿಕ್ಷಣ" ಈ ಶಬ್ದನೇ ವ್ಯಾಪಕಾರ್ಥವುಳ್ಳದ್ದಾಗಿರುವಾಗ ಇಡಿಯ ಜೀವನವನ್ನೇ ಸಂಬಂಧಿರಿಸಿಕೊಂಡ ಈ ಜೀವನ ಶಿಕ್ಷಣ ವಿನ್ನೆಷ್ಟು ವ್ಯಾಪಕವಾಗಲಿಕ್ಕಿಲ್ಲ! ಇದು ವ್ಯಾಪಕಾರ್ಥ ವುಳ್ಳದ್ದಾಗಿದೆ.

ತಪಸ್ಸು ಹಾಗೂ ಮಹಾತ್ಮೈ ಇವು ಅಸಾಮಾನ್ಯ ತ್ವದ ಪ್ರತೀಕಗಳು ಎಂದು ಒಪ್ಪಿಕೊಂಡರೆ ಅಂಥ ತಪಸ್ವಿಯಾದ, ಮಹಾತ್ಮನಾದ ಗಾಂಧೀಜಿಯ ಅನುಭವದ ಫಲವಾಗಿರುವದರಿಂದಂತೂ ಈ ಜೀವನ ಶಿಕ್ಷಣವು ನಿಜವಾಗಿಯೂ ವ್ಯಾಪಕಾರ್ಥವುಳ್ಳದ್ದೂ ಹಾಗೂ ನಮ್ಮ ದೇಶಕ್ಕೆ ಅನುಕೂಲವುಳ್ಳದ್ದೂ ಆಗಿದೆ, ಎನ್ನುವದರಲ್ಲಿ ಸಂದೇಹವಿಲ್ಲ. ಆದ್ದರಿಂದ ಶಿಕ್ಷಣದ ಬಗ್ಗೆ ಬೇರೆ ಬೇರೆ ಶಿಕ್ಷಣ ತಜ್ಞರು ಏನೇ ವ್ಯಾಖ್ಯೆ ಕೊಟ್ಟರಲಿ ನಾವು ಈಗ ಜೀವನ ಶಿಕ್ಷಣದ ಬಗ್ಗೆ ಪರಿಚಯ ಮಾಡಿಕೊಳ್ಳುವದ ರಿಂದ ಶಿಕ್ಷಣದ ಬಗ್ಗೆ ಗಾಂಧೀಜಿಯವರ ಅಭಿಪ್ರಾಯ ಗಳೇನಿದ್ದವು? ಎಂಬುದನ್ನೇ ನೋಡೋಣ. ಯಾಕಂದರೆ ಜೀವನ ಶಿಕ್ಷಣವು ಅವರಿಂದಲೇ ಉಗಮವಾಗಿದೆಯಾದ್ದ ರಿಂದ ಅವರ ವಿಚಾರಗಳು ನೇರವಾಗಿ ಜೀವನ ಶಿಕ್ಷಣಕ್ಕೇ ಅನ್ವಯಿಸುತ್ತವೆ.

ಶಿಕ್ಷಣವನ್ನು ಕುರಿತು ಅವರು ಮೊಟ್ಟಮೊದಲು ೩೧-೭-೩೭ ರಲ್ಲಿ ತಮ್ಮ ವಿಚಾರಗಳನ್ನು ಪ್ರಕಟ ಪಡಿಸುತ್ತ ಹೀಗೆ ಬರೆದಿದ್ದಾರೆ:— "ಶಿಕ್ಷಣದಿಂದ ಮಗು ವಿನ ಸಮನ್ವಿತ ವಿಕಾಸವಾಗಬೇಕು. ಸಾಕ್ಷರತೆಯು ಶಿಕ್ಷಣವಲ್ಲ; ಕೈಗಾರಿಕೆಯ ಮುಖಾಂತರ ಮಗುವಿನ ಶಿಕ್ಷಣ ಆರಂಭವಾಗಬೇಕು. ಮಕ್ಕಳ ಕೆಲಸದಿಂದುಂಟಾದ ಸಾಮಾನುಗಳನ್ನು ಸರಕಾರವು ಕೊಂಡಲ್ಲಿ ಶಿಕ್ಷಣವು ಸ್ವಾವಲಂಬಿಯಾಗಬಲ್ಲದು. ಇಂಥ ಶಿಕ್ಷಣ ಯೋಜನೆ ಯನ್ವಯ ಮಗುವಿನ ಮನಸ್ಸು ಪೂರ್ತಿ ವಿಕಾಸಹೊಂದು ವದು. ಕೈಗಾರಿಕೆಯನ್ನು ಯಾಂತ್ರಿಕವಾಗಿ ಕಲಿಸದೆ ಶಾಸ್ತ್ರಬದ್ಧವಾಗಿ ಕಲಿಸಬೇಕು. ಪ್ರತಿಯೊಂದು ವಿಧಾನದ ಕಾರ್ಯಕಾರಣ ತಿಳಿಯಬೇಕು. ಆತ್ಮವಿಶ್ವಾಸವಿಲ್ಲದೆ ಹೀಗೆ ನಾನು ಬರೆದಿಲ್ಲ; ಅನುಭವದ ಹಿನ್ನೆಲೆಯಿದೆ."

ಜೀವನ ಶಿಕ್ಷಣವೆಂದರೆ ತಾನು ಬಾಳಿ ಎರಡನೆ ಯವರನ್ನು ಬಾಳಿಸುವ ಶಿಕ್ಷಣವೆಂದೂ ಇಲ್ಲವೆ ಇನ್ನೊಂದು ಅರ್ಥದಲ್ಲಿ ಶೋಷಣರಹಿತ ಸಮಾಜವನ್ನು ನಿರ್ಮಿಸುವ ಶಿಕ್ಷಣವೆಂದೂ ಹೇಳಬಹುದು. ಮೇಲ್ನೋಟಿಸಿದಂತೆ ಯಾವದಕ್ಕೆ ನಾವು ಜೀವನ ಶಿಕ್ಷಣವೆನ್ನಬೇಕು? ಎಂಬ ದನ್ನು ಸಾಮಾನ್ಯ ಸ್ವರೂಪದಿಂದ ಕೇವಲ ಅದರ ಶಬ್ದಾರ್ಥ ವಿವರಣೆಯ ರೂಪದಲ್ಲಿ ತಿಳಿದುಕೊಳ್ಳುವ ಪ್ರಯತ್ನ ಮಾಡಿದೆವು. ಇನ್ನು ಈ ಜೀವನ ಶಿಕ್ಷಣದ ಇತಿಹಾಸ

ವೇನು? ವೈಶಿಷ್ಟ್ಯವೇನು? ಇದರ ಪದ್ಧತಿಯ ಸ್ವರೂಪವೇನು? ಇದರ ಉದ್ದೇಶ–ಮಹತ್ವವೇನು? ಎಂಬುದನ್ನು ನೋಡೋಣ.

## ವೈಶಿಷ್ಟ್ಯ:

ಜೀವನ ಶಿಕ್ಷಣದ ಮೂಲ ಹಾಗೂ ಮಹತ್ವದ ವೈಶಿಷ್ಟ್ಯವೆಂದರೆ ಇಲ್ಲಿ ಶಿಕ್ಷಣವು ಉತ್ಪಾದಕ ಉದ್ಯಮವನ್ನು ಕೇಂದ್ರವಾಗಿಟ್ಟುಕೊಂಡು ಆರಿಸಿದ ಕೈಗಾರಿಕೆಯ ಮುಖಾಂತರವೇ ಮಗುವನ್ನು ಇಡಿಯಾಗಿ ತರಬೇತು ಗೊಳಿಸುವದಿರುತ್ತದೆ. ಅದುದರಿಂದ ಜೀವನ ಶಿಕ್ಷಣ, ಶಾಲೆಗಳಲ್ಲಿ ಒಂದು ಮೂಲ ಉದ್ಯೋಗವಿದ್ದು ಅದಕ್ಕೆ ಅನ್ವಯವಾಗುವಂಥ ಮತ್ತೊಂದು ಉಪಮೂಲ ಉದ್ಯೋಗವಿರುವದು. ಆ ಮೂಲ ಹಾಗೂ ಉಪಮೂಲ ಉದ್ಯೋಗಗಳ ಮುಖಾಂತರ ಶಿಕ್ಷಣವು ಸಾಗುತ್ತಿರುತ್ತದೆ.

ಶಾಲೆಯು ಸಮಾಜ ವಿಕಾಸ ಕೇಂದ್ರವಾಗಿರುತ್ತದೆ. ಅಂದರೆ ಇಲ್ಲಿ ಶಿಕ್ಷಕನು ತನ್ನಷ್ಟಕ್ಕೆ ತಾನು ರಾಜನಂತಿದ್ದು ಹಾಗೆಯೇ ಸಮಾಜ ಸೇವಕನಾಗಿರುತ್ತಾನೆ. ಸಾಕ್ಷರತಾ ಪ್ರಸಾರ, ಆರೋಗ್ಯ ಚಟುವಟಿಕೆ, ರಾಷ್ಟ್ರೀಯ ಚಟುವಟಿಕೆ, ಕಲಾವಿಕಾಸ, ನಿರುದ್ಯೋಗ ನಿವಾರಣೆ, ಖಾದಿ ಬೆಳವಣಿಗೆ, ಪಾನನಿರೋಧ, ಹರಿಜನೋದ್ಧಾರ ಮುಂತಾದ ವಿಧಾಯಕ ಕಾರ್ಯಗಳಿಗೆ ಜೀವನ ಶಿಕ್ಷಣವು ಮುಖ್ಯಸ್ಥಾನವನ್ನು ಕೊಡುತ್ತದೆ. ಆದುದರಿಂದ ಜೀವನ ಶಿಕ್ಷಣ ಶಾಲೆಗಳಲ್ಲಿ ಜೀವನದ ಒಂದು ಸಣ್ಣ ಚಿತ್ರವೇ ನೋಡಲು ಸಿಕ್ಕರೆ ಅದು ಆಶ್ಚರ್ಯವಲ್ಲ.

ಜೀವನ ಶಿಕ್ಷಣ ಶಾಲೆಗಳಲ್ಲಿ (೧) ಸ್ವಾವಲಂಬನ, (೨) ಶ್ರಮಗೌರವ ವೃತ್ತಿ, (೩) ಆಶ್ರಮ ಪದ್ಧತಿಯ ಪ್ರಾರ್ಥನೆ, (೪) ಧಾರ್ಮಿಕ ವೃತ್ತಿಗೆ ಪ್ರೋತ್ಸಾಹ ವಿರುತ್ತವೆ. ಆದ್ದರಿಂದ ಇಲ್ಲಿ ಸಂಸ್ಕೃತಿಯು ಒಡೆದು ಕಾಣುತ್ತಿದೆ. ಅಲ್ಲದೆ ಜೀವನ ಶಿಕ್ಷಣ ಶಾಲೆಗಳಲ್ಲಿ ಆಟದ ಬೈಲು, ವಾಚನಾಲಯ, ಬಾಲಕರ ಸಹಕಾರಿ ಸಂಘ, ವಸ್ತ್ರ ಸ್ವಾವಲಂಬನ ಸಂಘ, ಚರ್ಚಾಕೂಟ, ವಸ್ತುಸಂಗ್ರಹಾಲಯ, ಸಾಹಿತ್ಯಮಂಡಲ, ಕಥಾಕೂಟ, ಸಮಯನಿಷ್ಠ ಯೋಜನೆ, ಆಟಪಾಟಗಳು, ಪ್ರಶ್ನ ಪೆಟ್ಟಿಗೆ, ನಾಟ್ಯಸಭೆ, ನೂಲುವ ಸ್ಪರ್ಧೆಗಳು ಹಾಗು ಬಾಲವೀರ ಪಥಕಗಳು ಇರುವವು. ಇವು ಅಲ್ಲದೆ ಜೀವನ ಶಿಕ್ಷಣ ಶಾಲೆಗಳಲ್ಲಿ ವೈಯಕ್ತಿಕ ಹಾಗೂ ಸಾಮೂಹಿಕ ಸಹಾಯಿ ನಡೆಯುವದು. ಈ ಎಲ್ಲ ಚಟುವಟಿಕೆಗಳು ಮಂತ್ರಿ ಮಂಡಲ ಪದ್ಧತಿಯಿಂದ ನಡೆಯುವವು.

ಹೀಗೆ ಮೇಲ್ಕಾಣಿಸಿದಂತೆ ಅನೇಕ ವಿಷಯಗಳಿಂದ ಸಾದಾ ಶಿಕ್ಷಣಕ್ಕಿಂತ ಜೀವನ ಶಿಕ್ಷಣವು ವೈಶಿಷ್ಟ್ಯ ಪೂರ್ಣವಾಗಿದೆ.

ಜೀವನ ಶಿಕ್ಷಣದ ವೈಶಿಷ್ಟ್ಯವನ್ನು ಇನ್ನೂ ಒಂದು ರೀತಿಯಿಂದ ಈ ಕೆಳಗಿನಂತೆ ಹೇಳಬಹುದು.

ಇದು ಮಕ್ಕಳ ಯುಗವು. ಸುಮ್ಮನೆ ಹಿಂದಿನಂತೆ ಶಿಕ್ಷಕನಿಗೆ ತೋಚಿದ್ದನ್ನು ಮಕ್ಕಳ ತಲೆಯಲ್ಲಿ ತುಂಬುವಂತಿಲ್ಲ. ಮಗುವಿನ ವಯೋಮಾನ, ಬುದ್ಧಿಮಾನ ಹಾಗೂ ವಾತಾವರಣಗಳಿಗೆ ಹೊಂದಿಕೆಯಾಗುವ ವಿಷಯಗಳನ್ನು ಮಾತ್ರ ಅವನು ಅರಗಿಸಿಕೊಳ್ಳಬಲ್ಲನು. ಜೀವನ ಶಿಕ್ಷಣವು ಇದನ್ನು ಚನ್ನಾಗಿ ಗಮನದಲ್ಲಿಟ್ಟುಕೊಂಡು ಸಾಗುವದು. ಅದು ಮಗುವಿಗೆ ಮೇಲ್ಕಾಣಿಸಿದ ವಾತಾವರಣವನ್ನು ನಿರ್ಮಿಸಿಕೊಟ್ಟು ಅದನ್ನು ಕೇಂದ್ರದಲ್ಲಿಟ್ಟುಕೊಂಡೇ ಸಾಗುತ್ತದೆ.

## ಮಗುವಿನ ವಿಕಾಸದಲ್ಲಿ ಶ್ರದ್ಧೆ

ಶಿಕ್ಷಣವು ಶಾಲೆಯ ಅಥವಾ ಶಿಕ್ಷಕನ ಸೊತ್ತು ಅಲ್ಲ. ಶಿಕ್ಷಣವೆಂದರೆ ಸಂಸ್ಕಾರ. ಸಂಸ್ಕಾರವು ಅನುಭವದಿಂದ ಬರುವದು. ಈ ಸಂಸ್ಕಾರ ಅಥವಾ ಅನುಭವವು ಹುಟ್ಟಿನಿಂದ ಮರಣದ ವರೆಗೂ ನಡೆದೇ ಇರುವದು. ಮತ್ತೂ ನಿಸರ್ಗದ ನಿಯಮಗಳಿಗನುಸಾರವಾಗಿ ನಡೆಯುವದು. ಆದ್ದರಿಂದ ಮಗುವಿಗೆ ತಕ್ಕ ಮಾರ್ಗದರ್ಶನವನ್ನು ಮಾಡುತ್ತ ಅವನ ವಿಕಾಸವನ್ನು ಜೀವನ ಶಿಕ್ಷಣವು ಸಾಗಿಸುತ್ತದೆ. ಮತ್ತು ಮಗುವಿನ ದೇಹ, ಬುದ್ಧಿ, ನೀತಿ ಗಳನ್ನು ವಿಕಾಸಗೊಳಿಸುತ್ತದೆ.

## ಶಿಕ್ಷಣದಲ್ಲಿ ಸ್ವಾತಂತ್ರ್ಯ:

ಮೇಲೆ ಹೇಳಿದಂತೆ ಮಗುವು ಶಿಕ್ಷಣ ಅಥವಾ ಸಂಸ್ಕಾರಪಡೆಯಬೇಕಾದರೆ ಅವನಿಗೆ ಸ್ವಾತಂತ್ರ್ಯಬೇಕು. ಓದು ಬರೆಹಗಳನ್ನು ಮಕ್ಕಳು ಸ್ವತಃ ಮಾಡುವದಿಲ್ಲ, ಅವರು ಕೃತಿಪ್ರಿಯರಿರುವರು. ಕೃತಿಗಳನ್ನು ಮಾಡುವಲ್ಲಿ ಅವರಿಗೆ ಸ್ವಾಭಾವಿಕ ಪ್ರೇಮವಿದೆ. ಆದ್ದರಿಂದಲೇ ಕೃತಿ ಮೂಲಕ ಶಿಕ್ಷಣವೀಯುತ್ತ ಅವರಿಗೆ ಅನುಭವಗಳನ್ನು

ಮಾಡಿಕೊಡುವದು, ಅಲ್ಲದೆ ಈ ಜೀವನ ಶಿಕ್ಷಣವು ಇನ್ನೂ ಮುಂದೆ ಹೋಗಿ ವೇಳಾಪತ್ರಿಕೆ, ಪರೀಕ್ಷೆಗಳ ಬಂಧನಗಳನ್ನು ತೆಗೆಯುವಲ್ಲಿ ಹಿಂದು — ಮುಂದು ನೋಡುವದಿಲ್ಲ.

### ವೈಯಕ್ತಿಕ

ಪ್ರತಿಯೊಬ್ಬ ಎಲ್ಲ ಮಕ್ಕಳೂ ಒಂದೇ ತೆರನಾಗಿ ಕಲಸ ಮಾಡುತ್ತಿರುವದಿಲ್ಲ. ಒಂದೊಂದು ಮಗುವಿನಲ್ಲಿ ಒಂದೊಂದು ವೈಶಿಷ್ಟ್ಯವಿರುತ್ತದೆ. ಜೀವನ ಶಿಕ್ಷಣವು ಈ ವೈಯಕ್ತಿಕ ವೈಶಿಷ್ಟ್ಯಕ್ಕೆ ಮಹತ್ವಕೊಟ್ಟು ಪ್ರತಿಯೊಂದು ಮಗುವಿನ ವ್ಯಕ್ತಿತ್ವ ವಿಕಾಸಕ್ಕೆ ದಾರಿಮಾಡಿ ಕೊಡುವದು.

### ಜೀವನ ಶಿಕ್ಷಣ

ಮಕ್ಕಳು ಪಡೆವ ಶಿಕ್ಷಣವು ಅವರ ಜೀವನಕ್ಕೆ ಪೋಷಕವಾಗಿರಬೇಕು. ಜೀವನ ಶಿಕ್ಷಣದಲ್ಲಿ ವೃತ್ತಿ ಮೂಲವಾಗಿದ್ದುದು ಈ ಮಾತಿಗೆ ಅದು ಎಷ್ಟೊಂದು ಅಗ್ರಸ್ಥಾನವಿತ್ತಿದೆಯೆನ್ನುವದನ್ನು ತೋರಿಸುತ್ತದೆ. ಶಿಕ್ಷಣವು ಮಕ್ಕಳಿಗೆ ಜೀವಿಸುವ ಕಲೆಯನ್ನು ಕಲಿಸಬೇಕು. ಜೀವನದ ಹೊಸ ಹಾದಿಯನ್ನು ತೋರಿಸಬೇಕು ಎಂದು ಶ್ರೀ ಆರ್ಯನಾಯಕಂ ಅವರು ಹೇಳಿದಂತೆ ಇಲ್ಲಿ ಜೀವನ ಕಲೆಯೇ ಕಲ್ಪಿಸಲ್ಪಡುತ್ತದೆ.

### ಅಹಿಂಸಾತ್ಮಕ ಶಿಕ್ಷಣ

ಮಕ್ಕಳಿಗೆ ಶಾಲೆಯು ಒತ್ತಾಯದ್ದಾಗಬಾರದು. ಮಕ್ಕಳು ಸಾಮಾನ್ಯವಾಗಿ ಶಾಲೆಯೆಂದರೆ ಬೇಸರ ಪಡುವರು. ಯಾಕೆಂದರೆ ಅಲ್ಲಿ ಎಲ್ಲವೂ ಅವರ ಮನಸ್ಸಿನ ಒಲವಿನ ವಿರುದ್ಧವಾಗಿ ಒತ್ತಾಯದಿಂದಲೇ ಕಲಿಸಲ್ಪಡುವದು. ಬಲುಮೆಯ ಜಾಡು, ಬೆತ್ತದ ಬೆದರಿಕೆ, ಇವೆಲ್ಲ ಅನೈಸರ್ಗಿಕ ಹಾಗೂ ಹಿಂಸಾತ್ಮಕ. ಚಟುವಟಿಕೆಗಳ ಮುಖಾಂತರ ಬೆಳೆಯುವದು ನಿಸರ್ಗ ನಿಯಮವಾಗಿದ್ದು, ನಿಸರ್ಗ ನಿಯಮಕ್ಕೆ ವಿರುದ್ಧವಾಗಿ ನಡೆಯುವ ದೆಲ್ಲ ಹಿಂಸಾಮಾರ್ಗವೇ.

ಜೀವನ ಶಿಕ್ಷಣವು ಇದನ್ನು ಗಮನಿಸಿ ನಿಸರ್ಗ ನಿಯಮದಂತೆ ಚಟುವಟಿಕೆಗಳ ಮುಖಾಂತರ ಸಾಗುವದರಿಂದ ಇದು ಅಹಿಂಸಾತ್ಮಕ ಶಿಕ್ಷಣವಾಗಿದೆ.

### ರಾಷ್ಟ್ರೀಯ ಶಿಕ್ಷಣ

ಮಕ್ಕಳಿಗೆ ಸಿಗುವ ಶಿಕ್ಷಣವು ನಮ್ಮ ಸಂಸ್ಕೃತಿಯ ಕುರುಹಾಗಿಯೂ ನಮ್ಮ ದೇಶದ ಪರಿಸ್ಥಿತಿಗೆ ಹೊಂದಿಕೆಯಾ..ಯೂ ಇರಬೇಕು. ಸ್ವದೇಶ ಪ್ರೇಮ, ಸ್ವಾಭಿಮಾನಗಳು ಬೆಳೆಯಬೇಕು. ಜೀ. ಶಿ. ದಲ್ಲಿ ಸಂಸ್ಕೃತಿ, ರಾಷ್ಟ್ರೀಯತೆ, ಸ್ವದೇಶ ಪ್ರೀತಿ, ಸ್ವಾಭಿಮಾನಗಳಿಗೆ ಸ್ಥಾನವಿದೆ. ಅಲ್ಲದೆ ಈ ಯೋಜನೆಯು ಭಾರತದ ಸುಪುತ್ರ ನಿಂಜಲೇ ತಯಾರಾದುದಾಗಿರುವದರಿಂದ ನಮ್ಮ ದೇಶಕ್ಕೆ ಹೊಂದುವಂಥಹದೂ ಆಗಿದೆ.

### ನವನಾಗರಿಕತೆ

ಜೀವನ ಶಿಕ್ಷಣವು ವಿಶ್ವಸಮಾಜ, ವಿಶ್ವಬಂಧುತ್ವವನ್ನು ಸಾರುವ ಶಿಕ್ಷಣ. ಸತ್ಯ, ನ್ಯಾಯ, ಅಹಿಂಸೆಗಳೇ ಅಂಥ ಸಮಾಜದ ಅಡಿಗಲ್ಲು. ಯಾಕಂದರೆ ಮಗುವಿನ ವ್ಯಕ್ತಿತ್ವವು ಮಾನವ ಪ್ರಗತಿಗೆ ಪೋಷಕವಾಗುವಂತೆ ಬೆಳೆಯಬೇಕೆಂದು ಜೀವನ ಶಿಕ್ಷಣವು ಪ್ರಯತ್ನಿಸುತ್ತಿದೆ. ಇಷ್ಟೆಲ್ಲ ವೈಶಿಷ್ಟ್ಯಗಳಿರುವ ಈ ಶಿಕ್ಷಣ ಯೋಜನೆಗೆ ಪ್ರಾಯೋಗಿಕ ಹಿನ್ನೆಲೆ ಇದೆಯೇ? ನೋಡೋಣ.

### ಜೀವನ ಶಿಕ್ಷಣ ಪದ್ಧತಿ

ಜೀವನಕ್ಕೆ ಆರ್ಥಿಕ, ಸಾಮಾಜಿಕ, ನೈಸರ್ಗಿಕವೆಂದು ಮೂರು ಕೇಂದ್ರಗಳಿದ್ದು ಈ ಕೇಂದ್ರ ಚಟುವಟಿಕೆಗಳನ್ನೇ ಈ ಶಿಕ್ಷಣವು ಆಧಾರವಾಗಿಟ್ಟುಕೊಂಡಿರುತ್ತದೆ. ಆರ್ಥಿಕ, ಸಾಮಾಜಿಕ, ನೈಸರ್ಗಿಕ ಚಟುವಟಿಕೆಗಳ ಮುಖಾಂತರವೇ ಮಕ್ಕಳು ತಾವು ಕಲಿಯುತ್ತಿವೆ ಎಂಬುದು ಸಹ ಗೊತ್ತಾಗದೆ ಕೃತಿರತರಿರುತ್ತಿರುವಾಗಲೇ ಶಿಕ್ಷಕನು ವಿಷಯಗಳ ಸಮವಾಯ ಮಾಡುತ್ತಾ ಅವರಿಗೆ ವಿಷಯಗಳ ಜ್ಞಾನಮಾಡಿಕೊಡುತ್ತಿರುವನು. ಹೀಗೆ ಕೇಂದ್ರ ಚಟುವಟಿಕೆಗಳಿಂದಲೂ, ಸಮವಾಯ ತಂತ್ರದಿಂದಲೂ ಈ ಜೀವನ ಶಿಕ್ಷಣ ಪದ್ಧತಿಯು ಸಾಗುತ್ತಿದೆ. ಆದರೆ ಇಲ್ಲಿ ಒಂದು ಮಾತನ್ನು ನೆನಪಿಡಬೇಕಾದುದು ಏನೆಂದರೆ—ಉತ್ಪಾದಿತವಾಗುವ ಮಾಲು ಇಲ್ಲಿ ವೈಶಿಷ್ಟಿಕ ದೃಷ್ಟಿಯಿಂದಲೇ ಹೊರತು ಲಾಭದ ದೃಷ್ಟಿಯಿಂದಲ್ಲ ಆದ್ದರಿಂದ ಜೀವನ ಶಿಕ್ಷಣದಲ್ಲಿ ಮಕ್ಕಳನ್ನು ಕೂಲಿಯನ ರಂತೆ ದುಡಿಸಿಕೊಳ್ಳುವ ಪ್ರಮೇಯವಿಲ್ಲ.

ಹೀಗೆ ಮನುಷ್ಯನನ್ನು ಬುದ್ಧಿವಂತನನ್ನಾಗಿಯೂ ಕ್ರಿಯಾಶೀಲನನ್ನಾಗಿಯೂ ಮಾರ್ಪಡಿಸಿ ಜೀವನದಲ್ಲಿ

ಅವನು ನ್ಯಾವಲಂಬಿಯಾಗಿ ಬಾಳುವಂತೆ ಮಾಡುವದು ಈ ನವ್ಯವಾದ ಜೀವನ ಶಿಕ್ಷಣದ ಸ್ಪಷ್ಟ ಹಾಗೂ ಪ್ರಥಮ ಉದ್ದೇಶವಾಗಿದೆ.

**ಇತಿಹಾಸ**

ಜೀವನ ಶಿಕ್ಷಣವು ಮಹಾತ್ಮಾ ಗಾಂಧಿಯವರಿಂದ ಪ್ರಕಾಶಿತವಾದ ಶಿಕ್ಷಣ ಪದ್ಧತಿಯು. ಗಾಂಧೀಜಿಯವರು ದ. ಆಫ್ರಿಕೆಯಲ್ಲಿದ್ದಾಗಲೇ ಇದರ ಬಗ್ಗೆ ಅವರು ವಿಚಾರ ಮಾಡಿದ್ದರು. ಆದರೆ ಶಿಕ್ಷಣ ತಜ್ಞರ ವಿರೋಧದ ಹೆದರಿಕೆಯಿಂದ ತಮ್ಮ ವಿಚಾರವನ್ನು ಪ್ರಕಟ ಪಡಿಸಲಿಲ್ಲ. ಆದರೂ ಕೊನೆಗೆ ೧೯೩೭ನೆಯ ಜುಲೈ ೩೧ನೆಯ ತಾರೀಖಿನ ಹರಿಜನ ಪತ್ರಿಕೆಯಲ್ಲಿ ತಮ್ಮ ವಿಚಾರಗಳನ್ನು ಸೂತ್ರರೂಪವಾಗಿ ಪ್ರಕಟಪಡಿಸಿದರು. ಮುಂದೆ ೧೯೩೭ನೆಯ ಅಕ್ಟೋಬರದಲ್ಲಿ ಒಂದು ಶಿಕ್ಷಣ ತಜ್ಞರ ಸಮ್ಮೇಲನ ಕೂಡಿತು. ಆ ಸಮ್ಮೇಲನದಲ್ಲಿ ಗಾಂಧಿಯವರ ಶಿಕ್ಷಣ ಸೂತ್ರವು ಒಪ್ಪಿಗೆ ಪಡೆದು ಅದಕ್ಕನುಸಾರವಾಗಿ ಅಭ್ಯಾಸ ಪತ್ರಿಕೆಯನ್ನು ನಿರ್ಮಿಸುವದರ ಸಲುವಾಗಿ ಮತ್ತೊಂದು ಸಮಿತಿಯು ಸ್ಥಾಪಿತವಾಯಿತು. ಈ ಸಮಿತಿಗೆ ಡಾ. ಝಾಕೀರ ಹುಸೇನರು ಜೇಅರಮನ್ನರಾದರು. ಜನಾಬ ಸಯಾದೀನ, ಆಚಾರ್ಯ ಕಾಲೇಲಕರ, ಶ್ರೀ ಕಿಶೋರಿಲಾಲ ಮಶ್ರುವಾಲಾ, ಶ್ರೀ ಜೆ. ಸಿ. ಕುಮಾರಪ್ಪ, ಆಚಾರ್ಯ ವಿನೋಬಾ, ಶ್ರೀಮತಿ ಆಶಾದೇವಿ, ಪ್ರೊ. ಕೆ. ಟಿ. ಶಹಾ, ಶ್ರೀ ಕೃಷ್ಣದಾಸ ಜಾಜು, ಶ್ರೀ ಆರ್ಯನಾಯಕಂ ಈ ಸಮಿತಿಯ ಇತರ ಸದಸ್ಯರಿದ್ದರು. ೧೯೩೮ನೆಯ ಫೆಬ್ರುವರಿಯಲ್ಲಿ ಇವರು ಒಂದು ವರದಿಯನ್ನು ಸಿದ್ಧಪಡಿಸಿ ಹರಿಪುರದಲ್ಲಿ ಸೇರಿದ ಕಾಂಗ್ರೆಸ ಅಧಿವೇಶನದಲ್ಲಿ ಮಂಡಿಸಿದರು. ಕಾಂಗ್ರೆಸು ಈ ವರ್ಧಾ ಶಿಕ್ಷಣ ಯೋಜನೆಯನ್ನು ರಾಷ್ಟ್ರೀಯ ಶಿಕ್ಷಣವೆಂದು ಮುದ್ರೆಹಾಕಿ ಇದರ ಸಂಘಟನೆಗಾಗಿ ಅಖಿಲ ಭಾರತ ಶಿಕ್ಷಣ ಸಂಸ್ಥೆಯೊಂದನ್ನು ಸ್ಥಾಪಿಸಿ ಮುಂದಿನ ಕಾರ್ಯ ಕೈಕೊಳ್ಳಲಿಕ್ಕೆ ತಿಳಿಸಿತು. ಶ್ರೀ ಆರ್ಯನಾಯಕಂ ಕಾರ್ಯದರ್ಶಿಯಾಗಿಯೂ ಶ್ರೀಮತಿ ಆಶಾದೇವಿ ಉಪಕಾರ್ಯದರ್ಶಿಯಾಗಿಯೂ ನಿಯಮಿಸಿಲ್ಪಟ್ಟರು.

ಇದಕ್ಕೆ ಹಿಂದುಸ್ತಾನಿ ನಯಿ ತಾಲೀಮು ಸಂಘವೆಂದು ಹೆಸರಿಟ್ಟು ದೇಶದಲ್ಲಿ ಕೆಲವೊಂದು ಪ್ರಾಯೋಗಿಕ ಕ್ಷೇತ್ರಗಳನ್ನು ಆರಿಸಿಕೊಂಡು ಮೂಲ ಶಿಕ್ಷಣ ಯೋಜನೆಯ ಪ್ರಯೋಗ ಮಾಡತೊಡಗಿತು. ಇಷ್ಟರಲ್ಲಿ ಕೆಲವು ಪ್ರಾಂತಗಳಲ್ಲಿ ಕಾಂಗ್ರೆಸ ಮಂತ್ರಿಮಂಡಳವು ಅಧಿಕಾರಕ್ಕೆ ಬಂದಿದ್ದು ಅಲ್ಲಲ್ಲಿ ಈ ಶಿಕ್ಷಣ ಯೋಜನೆಗೆ ಪುರಸ್ಕಾರ ದೊರೆಯಿತು. ಶಿಕ್ಷಕರ ತರಬೇತಿಗಾಗಿ ವರ್ಧಾದಲ್ಲಿ ವಿದ್ಯಾಮಂದಿರ ಟ್ರೇನಿಂಗಸ್ಕೂಲ ಪ್ರಾರಂಭವಾಯಿತು. ಅಲ್ಲದೆ ಮಧ್ಯಪ್ರಾಂತ, ಸಂ. ಪ್ರಾಂತ, ಬಿಹಾರ, ಮುಂಬಯಿ, ಕಾಶ್ಮೀರ ಸಂಸ್ಥಾನಗಳಲ್ಲಿ ಪ್ರಯೋಗಗಳು ನಡೆದವು. ವಿಶೇಷ ಅಧಿಕಾರಿಗಳು ನಿಯವಿಸಲ್ಪಟ್ಟು ಪ್ರಾಂತಗಳಲ್ಲಿ ಮೂಲಶಿಕ್ಷಣ ಸಮಿತಿಗಳು ಸ್ಥಾಪಿಸಲ್ಪಟ್ಟವು. ಅಲ್ಲಲ್ಲಿ ಟ್ರೇನಿಂಗ ಸ್ಕೂಲುಗಳು ತೆರೆಯಲ್ಪಟ್ಟವು. ಧಾರವಾಡದಲ್ಲಿಯೂ ಆರಂಭವಾಯಿತು.

೧೯೩೯ರಲ್ಲಿ ಪುಣೆಯಲ್ಲಿ ಶ್ರೀ ಕೆ. ಟಿ. ಸಯಾದೀನ ಅವರ ಅಧ್ಯಕ್ಷತೆಯಲ್ಲಿ ಸಮ್ಮೇಲನಕೂಡಿ ಮೂಲ ಶಿಕ್ಷಣ ಯೋಜನೆಯು ಸರ್ವ ದೃಷ್ಟಿಯಿಂದಲೂ ನಮ್ಮ ದೇಶಕ್ಕೆ ಉಪಯುಕ್ತವಾಗಿದೆ ಎಂಬದನ್ನು ಒಪ್ಪಿಕೊಂಡು ಇದನ್ನೇ ಅನ್ವಯಿಸಬೇಕೆಂದು ತೀರ್ಮಾನಿಸಿತು.

೧೯೪೧ರಲ್ಲಿ ದಿಲ್ಲಿಯ ಜಾಮಿಯಾ ಮಲಯಾ ಇಸ್ಲಾಮಿಯಾ ಸಂಸ್ಥೆಯವರು ೩ನೆಯ ಶಿಕ್ಷಣ ಸಮ್ಮೇಲನ ಕರೆದರು. ಡಾ. ರಾಜೇಂದ್ರ ಪ್ರಸಾದರು ಸಮ್ಮೇಲನ ಉದ್ಘಾಟಿಸಿದರು. ಝಾಕೀರ ಹುಸೇನರು ಅಧ್ಯಕ್ಷರಾಗಿದ್ದರು. ಈ ಸಮ್ಮೇಲನದಲ್ಲಿ ಮೂಲ ಶಿಕ್ಷಣ ಶಾಲೆಗಳಲ್ಲಿ ಮಕ್ಕಳ ಆರೋಗ್ಯ, ನಡತೆ, ಬುದ್ಧಿ ಇವುಗಳಲ್ಲಿ ಯೋಗ್ಯ ಪ್ರಗತಿಯಾಗಿದೆ ಎಂದು ಮನವರಿಕೆಯಾಯಿತು. ೧೯೪೧-೪೨ರಲ್ಲಿ ಕಾರ್ಯಕ್ಷೇತ್ರ ವಿಸ್ತಾರವಾಗದಿದ್ದರೂ ಬಿಹಾರದಲ್ಲಿ ವಿದ್ಯಾರ್ಥಿಗಳ ಪ್ರಗತಿಯನ್ನು ನಿರೀಕ್ಷಿಸುವ ಪ್ರಯತ್ನ ನಡೆಯಿತು.

೧೯೪೨ರಿಂದ ೪೫ರ ವರೆಗೆ ಕಾರ್ಯಕ್ಷೇತ್ರ ಸಣ್ಣದಾಯಿತು. ಯಾಕಂದರೆ ಸಂಘದಲ್ಲಿದ್ದ ೨೧ ಸದಸ್ಯರಲ್ಲಿ ೧೫ ಜನ ಸದಸ್ಯರು ಜೇಲಿನಲ್ಲಿ ಉಳಿದರು. ಆದರೂ ಈ ಅವಧಿಯಲ್ಲಿ ಈ ಶಿಕ್ಷಣ ಯೋಜನೆಗೆ ನಯೀ ತಾಲೀಮು ಎಂಬ ಹೆಸರು ಗಾಂಧೀಜಿಯಿಂದ ಬಳಿಕೆಯಲ್ಲಿ ಬಂದಿತಲ್ಲದೆ ಶಿಕ್ಷಣದ ಬಗ್ಗೆ ಮೂಲ ಶಿಕ್ಷಣವು ಜೀವನ ಶಿಕ್ಷಣವಾಗ ಬೇಕು ಎಂಬ ಅವರ ದರ್ಶನದ ಸಂದೇಶವು ಕೊಡಲ್ಪಟ್ಟಿತು.

೧೯೪೫ನೆಯ ಜನವರಿಯಲ್ಲಿ ಸೇವಾಗ್ರಾಮದಲ್ಲಿ ಮತ್ತೊಂದು ಸಮ್ಮೇಲನವನ್ನು ಗಾಂಧೀಜಿಯವರು

ಉದ್ಘಾಟಿಸಿದರು. ಹಾಗೂ ವಿದ್ಯಾರ್ಥಿಗಳು ತಮ್ಮ ಶಿಕ್ಷಣನೆಚ್ಚಕ್ಕೆ ಸಾಲುವಷ್ಟು ಗಳಿಸಲು ಸಮರ್ಥರಾಗ ಬೇಕೆಂಬುವನ್ನು ಅವರು ಆಗ ಸ್ಪಷ್ಟಪಡಿಸಿದರು. ೧೯೪೮ರಲ್ಲಿ ಮದ್ರಾಸ ಕರ್ನಾಟಕ, ಮೈಸೂರುಗಳಲ್ಲಿ ಕೆಲ ಹೊಸ ಸಂಸ್ಥೆಗಳು ಸ್ಥಾಪಿತವಾದವು. ಶಿಕ್ಷಣ ಮಂತ್ರಿಗಳ ಹಾಗೂ ಕಾರ್ಯಕರ್ತರ ಸಮ್ಮೇಲನವನ್ನು ಶ್ರೀ ಖೇರರು ಕರೆದರು. ಮತ್ತು ಮೂಲ ಶಿಕ್ಷಣ ಯೋಜನೆಯು ಪ್ರಯೋಗಾವಸ್ಥೆಯನ್ನು ದಾಟಿದ್ದು ಪ್ರಾಂತಗಳಲ್ಲೆಲ್ಲ ಇದನ್ನು ಪ್ರಾರಂಭಿಸಬೇಕೆಂದು ತಿಳಿಸ ಲಾಯಿತು. ೧೯೪೮–೪೯ ರಲ್ಲಿ ಮಾಧ್ಯಮಿಕ ಶಿಕ್ಷಕರಿಗೂ ಶಿಕ್ಷಣಾಧಿಕಾರಿಗಳಿಗೂ ತರಬೇತುಕೊಡಲಾಯಿತು.

೧೯೪೮ ನೆಯ ಏಪ್ರಿಲ ೧೪ ರಿಂದ ೨೨ ರ ವರೆಗೆ ಪಾಟಣಾ ಜಿಲ್ಲೆಯ ವಿಕ್ರಮದಲ್ಲಿ ಅ. ಭಾ. ರಾಷ್ಟ್ರೀಯ ಮೂಲ ಶಿಕ್ಷಣ ಸಮ್ಮೇಲನ ಕೂಡಿತು. ವಿವಿಧ ಪ್ರಾಂತ ಗಳ ಪ್ರತಿನಿಧಿಗಳೂ ಅಧಿಕಾರಿಗಳೂ ಶಿಕ್ಷಣ ಮಂತ್ರಿಗಳೂ ಅದರಲ್ಲಿ ಭಾಗವಹಿಸಿದ್ದರು. ಈ ಸಮ್ಮೇಲನದಲ್ಲಿ ಬೇರೆಬೇರೆ ಶಿಕ್ಷಣ ಕೇಂದ್ರಗಳ ವರದಿಯನ್ನು ಪರಿಶೀಲಿಸಿ ಇನ್ನುಮೇಲೆ ಈ ಯೋಜನೆಯ ಯೋಗ್ಯ ಪ್ರಸಾರ ಮಾಡಲು ಶಿಕ್ಷಣ ತಜ್ಞರು ಪ್ರಯತ್ನಿಸಬೇಕೆಂದು ಒಪ್ಪಿಕೊಳ್ಳಲಾಯಿತು. ಮುಂದೆ ೧೯೪೯ನೆಯ ಮೇ ತಿಂಗಳಲ್ಲಿ ಆಚಾರ್ಯ ವಿನೋಬಾ ಅವರ ಅಧ್ಯಕ್ಷತೆಯಲ್ಲಿ ಪೆರಿಯಾ ನಾಯಕಂ ಪಾಲಯಂದಲ್ಲಿ ಅ. ಭಾ. ಮೂಲ ಶಿಕ್ಷಣ ಸಮ್ಮೇಲನ ಕೂಡಿ ಈ ಜೀವನ ಶಿಕ್ಷಣದ ಬಗ್ಗೆ ಚರ್ಚಿಸಿತು. ಹೀಗೆ ಇದಕ್ಕೆ ಒಂದು ಪ್ರಾಯೋಗಾತ್ಮಕ ಸೃಷ್ಟಿಯಿಂದ ಶೈಕ್ಷಣಿಕ ದೃಷ್ಟಿಯಿಂದ ಒಂದು ಉದಾತ್ತ ಪರಂಪರೆಯ ಇತಿಹಾಸವಿದ್ದು ಇದನ್ನು ನಾವೆಲ್ಲ ಅನುಸರಿಸಿ ನಮ್ಮ ತಾಲೀಮ ನಮ್ಮ ಆಶೆಯ ಸ್ಥಾನವೆಂದು ಪೆರಿಯಾ ನಾಯಕಂ ಪಾಲಯಂ ಸಮ್ಮೇಲನದಲ್ಲಿವಿನೋಬಾ ಜೀಳ ದಂತೆ ನಮ್ಮ ಆಶೆಯನ್ನು ಫಲವನ್ನು ಕಾಣಬೇಕಾಗಿದೆ.

## ಮಹತ್ವ

೧. ಜೀವನ ಶಿಕ್ಷಣವು ಸರ್ವಾಂಗಸುಂದರ ವ್ಯಕ್ತಿ ಗಳನ್ನು ನಿರ್ಮಾಣ ಮಾಡುವದರಿಂದ ಇಂಥ ಸಮಾಜ ವನ್ನು ನಿರ್ಮಿಸುತ್ತದೆ.

೨. ಜೀವನ ಶಿಕ್ಷಣದಲ್ಲಿ ಶಿಸ್ತು, ಸಂಯಮತೆ, ಚಟುವಟಿಕೆಗಳಿಂದ ಏಕಾಗ್ರತೆಗಳು ದೊರಕಿ ಆಶೆ ಆಕಾಂಕ್ಷೆ ಗಳು ಹಿಡಿತದಲ್ಲಿ ಬರುವವು. ಹಾಗೂ ಜೀವನವು ಸುಖಮಯವಾಗುವದು.

೩. ಇಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ತರಬೇತಿ ದೊರೆಯುವದು.

೪. ಇಲ್ಲಿ ವ್ಯಕ್ತಿಯು ತನ್ನ ಎಲ್ಲ ಸಪ್ತ ಚೇತನ ಗಳನ್ನು ಸರಿಯಾಗಿ ಪ್ರದರ್ಶಿಸಲು ಚಟುವಟಿಕೆಯಿಂದ ಅವಕಾಶ ದೊರೆಯುವದು.

ಜೀವನ ಶಿಕ್ಷಣದಲ್ಲಿ ಅಧ್ಯಯನವಿದೆ. ಜ್ಞಾನಾ ರ್ಜನೆಯಿದೆ. ಆಚರಣೆ ಇದೆ. ಆದ್ದರಿಂದ ಇದು ಪೂರ್ಣ ಶಿಕ್ಷಣವೆನಿಸಿದೆ.

ಈ ಎಲ್ಲ ದೃಷ್ಟಿಯಿಂದ ವ್ಯಕ್ತಿಯನ್ನು ಶೋಷಣ ರಹಿತ ಸಮಾಜ ಕಟ್ಟಿ ರಾಷ್ಟ್ರಕ್ಕೆ ಸಹಾಯಕಾರಿ ಯಾಗುವಂತೆ ಮಾಡುವದು, ಜೀವನಕ್ಕೆ ಅವಶ್ಯವಿರುವ ಜ್ಞಾನವನ್ನು ದಯಪಾಲಿಸಿ ಜೀವನಾಧಾರಿಯಾಗುವದು. ಹೀಗೆ ಸಾಮಾಜಿಕವಾಗಿ, ರಾಷ್ಟ್ರೀಯವಾಗಿ ಜೀವನದ ಆಧಾರವಾಗಿ ಮಹತ್ವವನ್ನು ಪಡೆದು ಇದು ಅನುಕರಿಸಲು ಯೋಗ್ಯತೆ ಪಡೆದಿದೆ.

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

**ಶೇಲಾರ ಕೃತ**

**ಪ್ರಾಥಮಿಕ ಭೂಮಿತಿ**

**[ಕ್ಷೇತ್ರಫಲ ಘನಫಲ ಸಹಿತ]**

೪ ರಿಂದ ೭ ನೇಯ ವರ್ಗದ ವರೆಗಿನ
ವಿಷಯವನ್ನೆಲ್ಲ ಒಳಗೊಂಡಿದೆ.

**ಬೆಲೆ: ೧ರೂ. ೮ಆಣೆ ಮಾತ್ರ**

ದೊರೆಯುವ ಸ್ಥಳ:—

**ಸಾಯಿ ಪಬ್ಲಿಶಿಂಗ್ ಹಾವುಸ್,**
ವಿಜಯ ರೋಡ, ಧಾರವಾಡ.

# 'ಬಾಲ ಮಂದಿರ'ಗಳು

ಲೇಖಕರು : ಶ್ರೀ ವಿ. ಆರ್. ದೇಶಪಾಂಡೆ, ಬಿ.ಎ.,ಎಮ್.ಎಡ್., ಧಾರವಾಡ

[ ಮುಂದುವರೆದುದು ]

ಫೆಬ್ರುವರಿ ಸಂಚಿಕೆಯಲ್ಲಿ ವಿಶದಪಡಿಸಿದಂತೆ ಪ್ರಾ. ಶಾಲೆಗಳಲ್ಲಿಯ ಅಧರಲ್ಲೂ ಕೆಳಗಿನ ಇಯತ್ತೆಗಳ ಮಕ್ಕಳ ದಿನದ ಹಾಜರಿಯನ್ನು ಹೆಚ್ಚಿಸುವದು 'ಬಾಲಮಂದಿರಗಳ' ಮುಖ್ಯವಾದ ಉದ್ದೇಶವು. ಇವು ಸಾರ್ವತ್ರಿಕ ಒತ್ತಾಯದ ಪ್ರಾಥಮಿಕ ಶಿಕ್ಷಣದ ಯೋಜನೆಯನ್ನು ಅತ್ಯಂತ ಫಲಕಾರಿಯಾಗಿ ಮಾಡುವಲ್ಲಿ ಪ್ರಬಲ ಸಹಾಯಕಗಳು. ಇದಲ್ಲದೆ ಇವು ನಮ್ಮ ಗ್ರಾಮಾಂತರ ಪ್ರದೇಶಗಳ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ಆರೋಗ್ಯದ ಮಟ್ಟವನ್ನು ಸುಧಾರಿಸುವಲ್ಲಿ ಗಣನೀಯವಾಗಿ ಪ್ರಯೋಜನಕಾರಿಯಾಗಿರುವವು. ಬಾಲಮಂದಿರಗಳಿಂದ ಸಮಾಜಕ್ಕೆ ಆಗುವ ಇತರ ಲಾಭಗಳನ್ನು ವಿಶದೀಕರಿಸಿ ಅವುಗಳ ಕಾರ್ಯಾಚರಣೆಯ ಬಗ್ಗೆ ಬರಬಹುದಾದ ಒಂದೆರಡು ಸಂಶಯಗಳನ್ನು ನಿವಾರಿಸುವದೇ ಈ ಲೇಖನದ ಉದ್ದೇಶವಾಗಿದೆ.

## ೧. ಶೈಕ್ಷಣಿಕ ಪ್ರಯೋಜನಗಳು :-

" ನಮ್ಮ ಶಾಲೆಗಳಲ್ಲಿಯ ಶೈಕ್ಷಣಿಕ ಮಟ್ಟವು ಈಗ ಕಡಿಮೆಯಾಗಿದೆ." ಎಂಬ ಕೂಗನ್ನು ನಾವು ಎಲ್ಲ ಕಡೆಗೆ ಕೇಳುತ್ತೇವೆ. ಸಾಮಾನ್ಯವಾಗಿ ಈ ತಕರಾರನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಇದಕ್ಕೆ ಅನೇಕ ಕಾರಣಗಳಿವೆ. ಪ್ರಾಥಮಿಕ ಶಾಲೆಗಳ ಮಟ್ಟಿಗೆ ಹೇಳುವದಾದರೆ ಮಕ್ಕಳು ನೇಲೆಗೆ ಸರಿಯಾಗಿ, ಪ್ರತಿದಿವಸ ಶಾಲೆಗೆ ಬಾರದೆ ಇರುವದು ಒಂದು ಅತ್ಯಂತ ಪ್ರಬಲವಾದ ಕಾರಣವಾಗಿದೆ. ಸದ್ಯದ ವ್ಯವಸ್ಥೆಯಲ್ಲಿ ಮಗುವು ಸಾಮಾನ್ಯವಾಗಿ ೬-೭ ನೆಯ ವಯಸ್ಸಿಗೆ ಶಾಲೆಯಲ್ಲಿ ಕಾಲಿಡುತ್ತಾನೆ. ಪಾಲಕರು ಎಷ್ಟೇ ಆತುರರಿದ್ದರೂ ಆತನಿಗೆ ಶಾಲೆಯ ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲು ಮತ್ತು ಒಂದೆರಡು ಸೂಲಾಕ್ಷರಗಳನ್ನು ಕಲಿಯಲು ಒಂದು ವರ್ಷವೇ ಕಳೆದು ಹೋಗುವದು. ಶಿಕ್ಷಣ ಮಟ್ಟವು ಕೆಳಗೆ ಬರಲು ಮೊದಲಿನ ಸಣ್ಣ-ದೊಡ್ಡ ಬಿನ್ ಇಯತ್ತೆಗಳನ್ನು ತೆಗೆದದ್ದೂ ಒಂದು ಪ್ರಬಲ ಕಾರಣವೆಂದು ಸುರಿತ ಶಿಕ್ಷಕರೂ ಕೂಡ ಅಭಿಪ್ರಾಯ ಪಡುತ್ತಾರೆ.ಬಾಲಮಂದಿರಗಳಲ್ಲಿ ಬರುವ ಮಗುವು ಚಿಕ್ಕಂದಿನಿಂದಲೂ ಒಂದೆಡೆಗೆ ಬಂದು ಸಮವಯಸ್ಸಿನ ಮಕ್ಕಳ ನಡುವೆಯೇ ತನ್ನ ದಿನದ ವೇಳೆಯನ್ನು ಕಳೆಯುವದರಿಂದ ತನಗೆ ತಿಳಿಯದಲೇ ಶಾಲೆಯ ವಾತಾವರಣಕ್ಕೆ ರೂಢಿಸಿಕೊಳ್ಳುವನು. ಸ್ವಲ್ಪ ಹೆಚ್ಚಿನ ಅನುಕೂಲತೆಗಳನ್ನು ಕಲ್ಪಿಸಿ ಕೊಟ್ಟಲ್ಲಿ ಮೊದಲಿನ ಬಿನ್ ಇಯತ್ತೆಗಳ ಕೆಲಸವನ್ನು ಬಾಲಮಂದಿರಗಳು ಪೂರೈಸಿ ಅಪ್ರತ್ಯಕ್ಷವಾಗಿ ಮಕ್ಕಳ ಶೈಕ್ಷಣಿಕ ಕಾರ್ಯವನ್ನು ಮಾಡಬಹುದು. ಈ ರೀತಿಯಾಗಿ ಬಾಲಮಂದಿರಗಳು ಮಕ್ಕಳ ಶಿಕ್ಷಣದ ಮಟ್ಟವನ್ನು ಹೆಚ್ಚಿಸುವ, ಮತ್ತು ಮಕ್ಕಳಿಗೆ/ ಪ್ರತಿ ದಿವಸ ಸರಿಯಾಗಿ ಶಾಲೆಗೆ ಬರುವ ರೂಢಿಯನ್ನು ಮಾಡಿಸುವವು.

## ೨. ಸಾಮಾಜಿಕ ಪ್ರಯೋಜನಗಳು :-

ಬಾಲಮಂದಿರಗಳಲ್ಲಿ ಎಲ್ಲ ಜಾತಿಯ ಮತ್ತು ಎಲ್ಲ ಸ್ತರಗಳ ಮಕ್ಕಳು ಒಂದುಗೂಡಿ ಆಟವಾಡುವದರಿಂದ ಸಾಮಾಜಿಕ ಸಮಾನತೆಯ ಪಾಠಗಳನ್ನು ಅವರು ಸ್ವಾಭಾವಿಕವಾಗಿ ಕಲಿತುಕೊಳ್ಳುವರು. ಜಾತಿ-ಪಂಥಗಳ, ಮಿಥ್ಯಾ ದೊಡ್ಡಿಸ್ತಿಕೆಯ ಅರಿವಾಗುವ ಮೊದಲೇ ಅವುಗಳ ಬೇರುಗಳು ಬಾಲಕರ ಮನೋಭೂಮಿಕೆಯಿಂದ ಇಲ್ಲವಾಗುವದರಿಂದ ಇಂದಿನ ಸಮಾಜದ ಮಹಾರೋಗವಾದ ಜಾತೀಯತೆಯಿಂದ ಮುಂದಿನ ಪೀಳಿಗೆಯು ನಿಃಸಂಶಯವಾಗಿ ಮುಕ್ತವಾಗುವದೆಂಬಲ್ಲಿ ಸಂಶಯವಿಲ್ಲ. ಪುಟ್ಟ ಮಕ್ಕಳ ಬಾಲ ಮಂದಿರಗಳು ಅನುಕೂಲವಾದ ಮಾನಸಿಕ ವಾತಾವರಣವನ್ನು ಒದಗಿಸಿ ಅವುಗಳ ಸಂಪೂರ್ಣ ವಿಕಾಸಕ್ಕೆ ಎಡೆ ಮಾಡಿಕೊಡುವವು. ಮಕ್ಕಳು ತಮ್ಮ ಇಡೀ ದಿನವನ್ನು ಸಂತೋಷದಿಂದ ಕಳೆಯುವದರಿಂದ ಅವರಲ್ಲಿ ಭಿಕಾರಜೋಟಿತನ (vagabondism)ಕ್ಕೆ ಆಸ್ಪದ ಉಳಿಯದಂತಾಗುವದು

## ೩. ಆರ್ಥಿಕ ಪ್ರಯೋಜನಗಳು :-

ನಮ್ಮ ಜಲ್ಪಿಯಲ್ಲಿ ರಾಷ್ಟ್ರೀಯ ವಿಸ್ತರಣೆ ಯೋಜನೆಯು ಜಾರಿಯಲ್ಲಿರುವ ಪ್ರದೇಶಗಳಲ್ಲಿಯ ಕೆಲವು ಗ್ರಾಮಗಳಲ್ಲಿ ಸರಕಾರದ ವತಿಯಿಂದ ಒಂದೊಂದು ಪೂರ್ವ ಪ್ರಾಥಮಿಕ ( Nursary Schools ) ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಇವುಗಳನ್ನು ನಡೆಯಿಸಿಕೊಂಡು ಹೋಗಲು 'ಮೌಂಟೆಸರಿ' ತರಬೇತು ಹೊಂದಿದ ಒಬ್ಬೊಬ್ಬ ಶಿಕ್ಷಕಿಯನ್ನೂ ಮತ್ತು ಅವಳಿಗೆ ಸಹಾಯ ಮಾಡಲು ಒಬ್ಬೊಬ್ಬ 'ದಾಯಿ'ಯನ್ನೂ ಕೊಟ್ಟಿದ್ದಾರೆ. ಈ ಪ್ರಕಾರವಾಗಿ ಸರಕಾರಕ್ಕೆ ಪ್ರತಿಯೊಂದು ಶಾಲೆಯ ಮೇಲೆ ಕನಿಷ್ಠ ರೂ. ೧೮೦೦/- ಗಳನ್ನು ಪ್ರತಿವರ್ಷ ಖರ್ಚು ಮಾಡಬೇಕಾಗುವದು. ತಾಲೂಕಿನ ಹಳ್ಳಿಗಳ ಸಂಖ್ಯೆ ೧೫೦ ಎಂದು ಸಾಮಾನ್ಯವಾಗಿ ಗ್ರಹಿಸಿದರೆ ಸರಕಾರವು ಪ್ರತಿಯೊಂದು ಹಳ್ಳಿಯಲ್ಲಿ ಇಂಥ ಒಂದು ಶಾಲೆಯನ್ನು ನಡೆಸಲು ಪ್ರತಿ ವರ್ಷಕ್ಕೆ ೧೫೦೦೦೦/- ರೂ. ಗಳನ್ನು ಖರ್ಚು ಮಾಡಬೇಕು. ಇದಲ್ಲದೆ ಸದರ ಶಾಲೆಗಳ ಶಿಬ್ಬಂದಿಗೆ ಕಾಲಕಾಲಕ್ಕೆ ಕೊಡುವ ಬಡತಿ ವಗೈರೆ ಲೆಕ್ಕ ಹಾಕಿದಲ್ಲಿ ಸರಕಾರವು ವರ್ಷೊಂದಕ್ಕೆ ಒಂದು ತಾಲೂಕಿನಲ್ಲಿ ಈ ಬಗ್ಗೆಯೇ ಸುಮಾರು ೨೦೦೦೦೦/- ರೂ. ಗಳನ್ನು ಖರ್ಚು ಮಾಡಬೇಕು. ೧೯೬೨ನೇ ಇಸ್ವಿಯ ಅಂತ್ಯದೊಳಗೆ ನಮ್ಮ ದೇಶದ ಎಲ್ಲ ಪ್ರದೇಶಗಳು ರಾ. ವಿ. ಯೋಜನೆಗೊಳಪಟ್ಟಿದ್ದಾದರೆ. ಇಂಥ ಶಾಲೆಗಳ ಮೇಲೆ ಎಷ್ಟೊಂದು ಹಣ ಪ್ರತಿ-ವರ್ಷ ಖರ್ಚು ಮಾಡಬೇಕಾಗುವದೆಂಬುದನ್ನು ಬೇರೆ ಹೇಳಬೇಕಿಲ್ಲ. ನಮ್ಮ ಸಮಾಜವು ಬಾಲಮಂದಿರ ಯೋಜನೆಯನ್ನು ಅಂಗೀಕರಿಸಿದಲ್ಲಿ ಮತ್ತು ಸರಕಾರವು ಅದಕ್ಕೆ ಪ್ರೋತ್ಸಾಹ ನೀಡಿದಲ್ಲಿ ಸರಕಾರಕ್ಕೆ ಈ ಎಲ್ಲ ಹಣದ ಉಳಿತಾಯವಾಗುವದು. ನಮ್ಮ ಹಳ್ಳಿಗಾಡು ಜನರಲ್ಲಿಯ ತೀವ್ರ ನಿರುದ್ಯೋಗ ಸಮಸ್ಯೆಗೆ ತಕ್ಕಮಟ್ಟಿನ ಪರಿಹಾರವನ್ನು ಒದಗಿಸಿದಂತಾಗುವದು.

ಸದ್ಯಕ್ಕೆ ಪ್ರಾರಂಭಿಸಲ್ಪಟ್ಟಿರುವ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಕೆಲವು ವಿಶಿಷ್ಟ ಸಮಸ್ಯೆಗಳಿವೆ. ನಮ್ಮ ದೇಶದ ಹಳ್ಳಿಗಳಿಗೆಲ್ಲ ತರಬೇತು ಪಡೆದ ಶಿಕ್ಷಕಿಯನ್ನು ಒದಗಿಸುವದು ದುಸ್ತರ. ಸದ್ಯದ ಸ್ಥಿತಿಯು ಮುಂದು ವರೆದರೆ ಇನ್ನೂ ೫೦ ವರ್ಷಗಳ ವರೆಗೂ ಶಿಕ್ಷಕಿಯರನ್ನು ಪ್ರತಿಯೊಂದು ಹಳ್ಳಿಗೆ ಒದಗಿಸುವದಾಗುವದಿಲ್ಲ. ಅಲ್ಲಿಯ ವರೆಗೆ ನಮ್ಮ ಮಕ್ಕಳ ಶಿಕ್ಷಣ ಕಾರ್ಯ ತಡೆಯಲಾರದು. ಎರಡನೆಯದಾಗಿ "ವಯಸ್ಸಿನಲ್ಲಿರುವ" ಹೆಂಗಳೆಯರಾದ ಶಿಕ್ಷಕಿಯರು ಹಳ್ಳಿಗಳಲ್ಲಿಯ ಪ್ರತಿಯೊಬ್ಬರ ಮನೆಗೆ ಹೋಗಿ ಪಾಲಕರ ಮನವೊಲಿಸಿ ಮಕ್ಕಳನ್ನು ಶಾಲೆಗೆ ತರುವದಂತೂ ನಮ್ಮ ಸಮಾಜದ ಸಧ್ಯದ ನೈತಿಕ ಮಟ್ಟದಲ್ಲಿ ಶಕ್ಯವೇ ಇಲ್ಲ. ಮೂರನೆಯದಾಗಿ ಈ ಶಾಲೆಗಳು ಹಳ್ಳಿಗರ ಸಮಸ್ಯೆಗೆ ಪರಿಹಾರ ಒದಗಿಸುವದೇ ಇಲ್ಲ. ಇವು ಪ್ರಾಥಮಿಕ ಶಾಲೆಗಳಂತೆ ಒಂದು ತರದ ಶಾಲೆಗಳಾಗಿ ಅವರಿಗೆ 'ಒಜ್ಜೆ'ಯಾಗಿವೆ. ಪ್ರಾಥಮಿಕ ಶಾಲೆಗಳಿಗೆ ಮಕ್ಕಳನ್ನು ಕಳಿಸಲು ನಿರಾಕರಿಸುವಂತೆ ಜನರು ಇವುಗಳಿಗೂ ಕಳಿಸುವದಿಲ್ಲ. ನಾಲ್ಕನೆಯದಾಗಿ ಎಳೆ ಮಕ್ಕಳ ಶಾಲೆಯಲ್ಲಿಯ ಶಿಕ್ಷಕಿಯು 'ಶಿಶು-ಸಂಗೋಪನ' ಕಾರ್ಯ ಹೆಚ್ಚು ಮಾಡಬೇಕಾಗುವದು. ನಮ್ಮ ಸರಕಾರಿ ನರ್ಸರಿ ಶಾಲೆಗಳ ತರುಣ ಶಿಕ್ಷಕಿಯರು ಮಾನಸಿಕವಾಗಿ ಆ ಕೆಲಸಕ್ಕೆ ತಯಾರಿರುವದಿಲ್ಲ. ಹೀಗಾಗಿ ನಮ್ಮ ಹಳ್ಳಿಗಳ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಕೊರತೆಯೇ ಹೆಚ್ಚಾಗಿದೆ. "ಬಾಲಮಂದಿರ"ಗಳ ಮುದುಕಿಯರು ಮಾತ್ರ ಈ ಎಲ್ಲ ಆತಂಕಗಳಿಗೆ ತಕ್ಕ ಉಪಾಯರಾಗಿರುವರೆಂಬುದನ್ನು ಯಾರೂ ಅಲ್ಲಗಳೆಯಲಾರರು.

## ೪. ಮಕ್ಕಳ ಆರೋಗ್ಯ

ಬಾಲಮಂದಿರಗಳು ಹಳ್ಳಿಯ ಮಕ್ಕಳ ಆರೋಗ್ಯ ರಕ್ಷಣೆ ಮತ್ತು ಸುಧಾರಣೆಗೆ ಸೂಕ್ತ ಉಪಾಯಗಳಾಗಿವೆ. ಒಕ್ಕಲುತನದವರು ತಮ್ಮ ಮಕ್ಕಳನ್ನು ಮನೆಯಲ್ಲಿ ಬಿಟ್ಟು ಹೊರಗೆ ಕೆಲಸಕ್ಕೆ ಹೋದಾಗ ಅವು ಅನಿರ್ಬಂಧವಾಗಿ ವರ್ತಿಸುವವು. ಅಂದರೆ ಅವು ಮಣ್ಣಿನಲ್ಲಿ ಆಟವಾಡುವದು, ಮನೆಯಲ್ಲಿ ಮಾಡಿಟ್ಟ ರೊಟ್ಟಿ ಮೊದಲಾದವುಗಳನ್ನು ಮೇಲಿಂದ ಮೇಲೆ ಅನಾರೋಗ್ಯಕರ ಸ್ಥಳದಲ್ಲಿ ಕುಳಿತು ತಿನ್ನುವದು, ಒಬ್ಬರಿಗೊಬ್ಬರು ಬಡಿದಾಡುವದು ಬಯ್ದಾಡುವದು ಮುಂತಾಗಿ ಮಾಡುವವು. ಹೀಗಾಗಿ ಅವರು ಅಸಂಸ್ಕೃತರೂ, ರೋಗಿಗಳೂ ಆಗಿ ಬೆಳೆಯುವರು. ಅವರು ಜಾಣರಿದ್ದರೂ ಸರಿಯಾದ ವಾತಾವರಣದಲ್ಲಿ ಪೋಷಿತರಾಗಿ ಬೆಳೆಯದೆ ಸಮಾಜ ಕಂಟಕರೂ, ದುರ್ಬಲರೂ ಆಗಿಬಿಡುವರು. ಬಾಲಮಂದಿರಗಳು ಬಾಲ್ಯದಿಂದಲೇ ಮಕ್ಕಳ ಮಾನಸಿಕ, ದೈಹಿಕ ಆರೋಗ್ಯವನ್ನು ಕಾಯ್ದುಕೊಂಡು, ಬಲಪಡಿಸಿ ಅವರನ್ನು ಉತ್ತಮ

ನಾಗರಿಕರನ್ನಾಗಿ ಮಾಡಲು ಪರಿಣಾಮಕಾರಿಯಾಗಿ ಸಹಾಯ ಮಾಡುವವು.

ಒಟ್ಟಿನ ಮೇಲೆ ಹೇಳುವದಾದರೆ 'ಬಾಲಮಂದಿರ' ಯೋಜನೆಯು ನಮ್ಮ ಹಳ್ಳಿಗಳ ಬಾಳನ್ನು ಸುಧಾರಿಸಿ, ಎತ್ತರಿಸಿ, ಅಭಿವೃದ್ಧಿಗೊಳಿಸುವವೆಂಬಲ್ಲಿ ಸಂಶಯವಿಲ್ಲ. ಈ ಯೋಜನೆಯು ಯಶಸ್ವಿಯಾಗಬೇಕಾದರೆ ಪುರ ಪ್ರಮುಖರ ತಿಳುವಳಿಕೆ, ಸಹಕಾರ ಅತ್ಯಗತ್ಯ. ಇದಲ್ಲದೆ ಹಳ್ಳಿಯ ಶಿಕ್ಷಕರು, ಪಂಚಾಯತಿಗಳು ಒಳ್ಳೇ ಯಶಸ್ವಿಯಾಗಿ ಈ ಯೋಜನೆಯನ್ನು ನಿರಾಯಾಸವಾಗಿ ಕಾರ್ಯಗತ ಮಾಡಬಲ್ಲವು. ಸರಕಾರದ ಪ್ರೋತ್ಸಾಹನೆ ಕೊರೆತರೆ ಹಾಲಿನಲ್ಲಿ ಸಕ್ಕರೆ ಬೆರೆಸಿದಂತಾಗುವದು.

ಈ 'ಬಾಲಮಂದಿರ' ಯೋಜನೆಯನ್ನು ಕೆಲವು ಹಳ್ಳಿಗಳ ಜನರು ಮತ್ತು ನನ್ನ ಸಹೋದ್ಯೋಗಿಗಳ ಸಂಗಡ ಚರ್ಚಿಸುವಾಗ ಮುಂದೆ ಮಾಡಲ್ಪಟ್ಟ ಒಂದೆರಡು ಸಂಶಯಗಳನ್ನು ಕೆಳಗೆ ನಿವಾರಿಸಲಾಗಿದೆ.

೧. ಈ ಯೋಜನೆಯು ಅನವಶ್ಯಕವಾಗಿದೆ :— ಗ್ರಾಮೀಣ ಇಸ್ಪಿಯ ಅಂತ್ಯದೊಳಗಾಗಿ ರಾ. ವಿ. ಯೋಜನೆಯು ನಮ್ಮ ದೇಶದ ತುಂಬೆಲ್ಲ ಹಬ್ಬಿ ಅದರ ಅಂಗವಾಗಿ ನಮ್ಮ ಹಳ್ಳಿಗಳಲ್ಲಿ ಪೂರ್ವ-ಪ್ರಾಥಮಿಕ ಶಾಲೆಗಳು ಪ್ರಾರಂಭಿಸಲ್ಪಡುವವಾದ್ದರಿಂದ 'ಬಾಲಮಂದಿರ'ಗಳು ಅನವಶ್ಯವಾಗಿವೆ ಎಂದು ವಾದಿಸಲಾಯಿತು. ಈ ವಾದ ನಿರರ್ಥಕವು ಮತ್ತು ಅಯೋಗ್ಯವು ಇದೆ ಎಂಬುದನ್ನು ಮೇಲೆ ಈಗಾಗಲೇ ಹೇಳಲಾಗಿದೆ. ದೇಶದಾದ್ಯಂತವೂ ಪೂರ್ವ-ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿ ನಡೆಯಿಸಿಕೊಂಡು ಹೋಗುವದು ಸರಕಾರಕ್ಕೆ ಕೂಡ ಹೇಗೆ ಅಸಾಧ್ಯವೆಂಬುದನ್ನು ಈಗಾಗಲೇ ವಿಶದಪಡಿಸಲಾಗಿದೆ.

೨. ಯೋಜನೆಯು ಅಯಶಸ್ವಿಯಾಗುವದು:— ಈ ಬಗ್ಗೆ ಹೇಳುವಾಗ ಹಳ್ಳಿಗರ ಮೇಲೆ ಕೆಳಗೆ ಕಾಣಿಸಿದ ಒಂದೆರಡು ಅಪಾದನೆಗಳು ಮಾಡಲ್ಪಟ್ಟವು. ಅವಾವವೆಂದರೆ (ಅ) ಹಳ್ಳಿಗರು ಯಾವದೇ ಹೊಸ ಯೋಜನೆಗೆ ಕೂಡಲೇ ಅನುಕೂಲರಾಗಿ ವರ್ತಿಸುವದಿಲ್ಲ. (ಬ) ಪೊಲೆಯುಣ್ಣುವ ಮಕ್ಕಳನ್ನು ಮಂದಿರಗಳಿಗೆ ಕಳಿಸಲು ಹೇಳುವದು ಅವ್ಯವ ಹಾರ್ಯವಾದದ್ದು. (ಕ) ಕೆಲವು ಸಮಾಜಗಳಲ್ಲಿ (ಉದಾ :— ಲಮಾಣಿ, ಕೊಶವರು ಮುಂತಾದವು) ಹೆಣ್ಣು ಮಕ್ಕಳನ್ನು ಸಾಲೆಗೆ ಕಳಿಸುವದೆಂದರೆ ತಮ್ಮ 'ಧರ್ಮ'ಕ್ಕೆ ಸಲ್ಲದೆಂದು ಭಾವನೆ ಇದೆ. (ಡ) ಹಳ್ಳಿಯ ಹೆಣ್ಣುಮಕ್ಕಳು ತಮ್ಮ ಚಿಕ್ಕಮಕ್ಕಳನ್ನು ಬೇರೊಬ್ಬರ ಕೈಯಲ್ಲಿ ಕೊಡಲು ಸಹಸಾ ಒಪ್ಪರು, ಯಾಕೆಂದರೆ ಅವರಿಗೆ "ದೃಷ್ಟಿ" "ಸಾಂಸರ್ಗಿಕ ರೋಗ"ಗಳ ಹೆದರಿಕೆ ಇದೆ. ಈ ಎಲ್ಲ ಕಾರಣಗಳಿಂದಾಗಿ ಈ ಯೋಜನೆಯು ಯಶಸ್ವಿಯಾಗುವದಿಲ್ಲ.

ಈ ಎಲ್ಲ 'ಕಾರಣ'ಗಳು ಹಳ್ಳಿಗರ ಅಜ್ಞಾನ ಮೂಲಕವಾದ, ಅರ್ಥವಿಲ್ಲದ ನೆಪಗಳು ಮಾತ್ರ ಎಂಬುದು ಎಲ್ಲರಿಗೂ ತಿಳಿದಿದೆ. ನಾವು ಮೊದಲಿಗೆ ಜನರಿಗೆ ಬಾಲ ಮಂದಿರಗಳ ಬಗ್ಗೆ ಸರಿಯಾದ ತಿಳುವಳಿಕೆ ಮಾಡಿಕೊಡ ಬೇಕು. ಈ ಕೆಲಸವನ್ನು ಮಾಡಲು ನರ್ಸರಿ ಶಿಕ್ಷಕಿ ಯರಿಗಿಂತ ನಮ್ಮ ಯೋಜನೆಯ ಮುದುಕಿಯರೇ ಅತ್ಯಂತ ಯೋಗ್ಯರು. ಪೊಲೆಯುಣ್ಣುವ ಮಕ್ಕಳಿಗೆ 'ಮಂದಿರ'ಗಳಲ್ಲಿ "ಕೃತಕ" ಹಾಲಿನ ಸ್ಫೂರ್ತಿಕೆ ಮಾಡ ಬಹುದು. ಈ ಯೋಜನೆಯಲ್ಲಿ ತಮ್ಮ ಮಕ್ಕಳನ್ನು ಸಾಲೆಗಳಿಗೆ ಕಳಿಸಲು ಹಳ್ಳಿಗರ ಮೇಲೆ ಒತ್ತಾಯ ತರಲು ದಾರಿ ಇದೆ.

೩. ತಪ್ಪು ಕಲ್ಪನೆಯ ಮೇಲೆ ಆಧರಿಸಲ್ಪಟ್ಟ ಯೋಜನೆಯು :— ಹಳಿಗರು ತಮ್ಮ ಸ್ವಲ್ಪು ದೊಡ್ಡ ಮಕ್ಕಳನ್ನು "ಚಿಕ್ಕ ಮಕ್ಕಳ"ನ್ನು "ಎತ್ತಿ ಆಡಿಸಲು" ಪಾತ್ರ ಉಪಯೋಗಿಸಿಕೊಳ್ಳುವರೆಂಬ ತಪ್ಪು ಕಲ್ಪನೆಯ ಮೇಲೆ ಈ ಯೋಜನೆಯು ಅವಲಂಬಿಸಿದೆ ಎಂದು ಆಪಾದಿಸಲಾಗಿದೆ. ಮಕ್ಕಳು ತಮ್ಮ ಶಕ್ತ್ಯಾನುಸಾರ ತಮ್ಮ ಪಾಲಕರಿಗೆ "ಆರ್ಥಿಕ"ವಾಗಿ ನೆರವಾಗುವರು. ಅಂದರೆ ಅವರು ದನಕಾಯುವದು, ಕುಳ್ಳು ತಬ್ಬುವದು, ಮುಂತಾದ ಕೆಲಸ ಮಾಡಿ ಹಣ ಗಳಿಸುವರು. ಮತ್ತು ಪ್ರತ್ಯಕ್ಷವಾಗಿ ನೆರವಾಗುವರು. ಈ ವಾದಕ್ಕೆ ಮೊದಲಿನ ಲೇಖನದಲ್ಲಿ ಉತ್ತರ ಕೊಡಲಾಗಿದೆ. ಇದಲ್ಲದೆ ಈ ಪ್ರಶ್ನೆಯು ನಮ್ಮನ್ನೂ 'ಮೌಲ್ಯಮಾಪನ' ಮಾಡಲು ಹಚ್ಚುತ್ತದೆ. ಹಳ್ಳಿಯ ಮಕ್ಕಳು ತಮ್ಮ ವಯಸ್ಸಿನ ತುಂಬ ಬರಿ ಕೂಲಿಗಳು, ದನ ಕಾಯುವವರು ಆಗಿ ಬದುಕಬೇಕೋ ಅಥವಾ ಪ್ರಗತಿಪರ ನಾಗರಿಕರಾಗ ಬೇಕೋ ಎಂಬುದಕ್ಕೆ ನಾವು ಉತ್ತರಿಸಬೇಕು. ಈ ಬಗ್ಗೆ

ಹಳ್ಳಿಗರಿಗೆ ಚೆನ್ನಾಗಿ ತಿಳುವಳಿಕೆ ಕೊಡಬೇಕು. ಮತ್ತು ಮಕ್ಕಳನ್ನು ಶಾಲಾ ಬಿಡುವಿನ ಸಮಯದಲ್ಲಿ ಈ ಕೆಲಸಗಳಿಗೆ ಉಪಯೋಗಿಸುವಂತೆ ಜನರನ್ನು ಒತ್ತಾಯಿಸಬೇಕು. ನಾನು ೪–೫ ಹಳ್ಳಿಗಳಲ್ಲಿ ಈ ಬಗ್ಗೆ ನಡೆಯಿಸಿದ ಸಮೀಕ್ಷೆ(Survey)ಯಲ್ಲಿ ಸುಮಾರು ೬೫% ಹಳ್ಳಿಗರು ೬–೭ ವಯಸ್ಸಿನ ಮಕ್ಕಳನ್ನು ತಾವು ಹೊಲಗಳಲ್ಲಿ ಕೆಲಸ ಮಾಡುವಾಗ ಕೇವಲ ಮನೆಕಾಯಲು, ತಮ್ಮ ಚಿಕ್ಕ ತಮ್ಮ–ತಂಗಿಯರನ್ನು ಆಡಿಸಲು, ಹೊಲಕ್ಕೆ ಬುತ್ತಿತರಲು ಉಪಯೋಗಿಸುವರೆಂದು ಕಂಡುಬಂದಿತು. ಈ ಎಲ್ಲ ಕೆಲಸಗಳನ್ನು ಸಾಲೆಯ ಬಿಡುವಿನ ವೇಳೆಯಲ್ಲಿ ಮತ್ತು ಬಾಲಮಂದಿರಗಳ ಸಹಾಯದಿಂದ ನಿರಾತಂಕವಾಗಿ ಪೂರೈಸಿಕೊಳ್ಳಬಹುದು. ಆದ್ದರಿಂದಲೇ 'ಬಾಲಮಂದಿರ' ಯೋಜನೆಯು ಹಳ್ಳಿಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಬಲ್ಲದೆಂದು ನಾನು ಧೈರ್ಯವಾಗಿ ಹೇಳಬಲ್ಲೆನು.

೪. ಈ ಯೋಜನೆ ಯಶಸ್ವಿಯಾಗಲು ಅಡೆತಡೆಗಳು ಬಹಳ ಇವೆ:– ಮಕ್ಕಳನ್ನು ಶಾಲೆಗೆ ಕಳಿಸಲು ಒತ್ತಾಯಿಸುವದು ಮತ್ತು "ಮುದುಕಿಯ"ರಿಗಾಗಿ ಪಂತಿಕೆಯನ್ನು ಕೂಡಿಸುವ ಜವಾಬದಾರಿಯನ್ನು ಯಾರು ಹೊರುವರು? ಜನರ ಅವಕೃಪೆಗೆ ಗುರಿಯಾಗಲು ಯಾರು ಸಿದ್ಧರಿದ್ದಾರೆ? ಎಂದು ಕೇಳಲಾಗುತ್ತಿದೆ. ಈ ಹೊಣೆಯನ್ನು ಹಳ್ಳಿಯ ಶಾಲಾ ಶಿಕ್ಷಕರು, ಗ್ರಾಮ ಪಂಚಾಯಿತಿಗಳು, ಸರಕಾರಿ ಅಧಿಕಾರಿಗಳು ಮತ್ತು ಅಧಿಕಾರೇತರ ಸಮಾಜ ಸುಧಾರಕರು ಹೊತ್ತುಕೊಳ್ಳಬೇಕು. ಈ ಕೆಲಸಕ್ಕಾಗಿ ಒಂದು ಸ್ಥಾನಿಕ ಸಮಿತಿಯನ್ನು ಮಾಡಿ ಕೆಲಸ ಮಾಡಬೇಕು. ನಮ್ಮ ಹಳ್ಳಿಗರು ಸಾಕಷ್ಟು ಉದಾರಿಗಳೆದ್ದು ಅದರ ಉಪಯೋಗವನ್ನು ತಮ್ಮ ಊರಿಗಾಗಿ, ತಮ್ಮ ಮಕ್ಕಳಿಗಾಗಿ ಮಾಡಿಕೊಳ್ಳಬೇಕು. ಇವರ ಸಹಾಯಕ್ಕೆ ಸರಕಾರದ "ಒತ್ತಾಯ ಶಿಕ್ಷಣ" ಕಾಯ್ದೆಗಳು ಇವೆ.

ನಮ್ಮ ದೇಶದಲ್ಲಿ 'ಒತ್ತಾಯ ಶಿಕ್ಷಣ'ವು ಯಶಸ್ವಿಯಾಗಿ ಪ್ರತಿಯೊಬ್ಬನೂ ಸುಶಿಕ್ಷಿತನೂ, ಯಶಸ್ವಿ ನಾಗರಿಕ ನಾಗಬೇಕಾದರೆ ಸಧ್ಯದ ಪರಿಸ್ಥಿತಿಯಲ್ಲಿ 'ಬಾಲಮಂದಿರ' ಯೋಜನೆಯು ಯಶಸ್ವಿಯಾಗಲೇಬೇಕು. ಬೇರೆದಾರಿಯೇ ಇಲ್ಲ. ನಾವು ಗಣತಿ ಮಾಡಿ ಹಳ್ಳಿಯ ಎಲ್ಲ ಮಕ್ಕಳು ಹಾಜರಿ ಪಟದಲ್ಲಿ ಇರುವಂತೆ ದಕ್ಷತೆ ವಹಿಸುತ್ತೇವೆ. ಆದರೆ ಅವು ಪ್ರತಿದಿನ ಸಾಲೆಗೆ ಬಾರದಿದ್ದರೆ ನಮ್ಮ 'ಒತ್ತಾಯ ಶಿಕ್ಷಣ' ಯೋಜನೆ, ನಮ್ಮ ರಾಜ್ಯ ಘಟನೆಯ ಆದೇಶಗಳೆಲ್ಲ ನೀರಿನಲ್ಲಿ ಬರೆದಂತಾಗುವವು.

[ ಮುಗಿದುದು ]


**ಮೂಲೋದ್ಯೋಗದ ಹೊಸ ಅಭ್ಯಾಸ ಪತ್ರಿಕೆಗಳು**

ಮಾರಲಿಕ್ಕೆ ದೊರೆಯುತ್ತವೆ.

೧ ರಿಂದ ೭ನೆಯ ಇಯತ್ತೆಗಳಿಗಾಗಿ ೦—೨—೬

೧ ರಿಂದ ೪ನೆಯ ,, ೦—೧—೦

ಅಂಚೆ ವೆಚ್ಚ ಬೇರೆ

ದೊರೆಯುವ ಸ್ಥಳ :

**ಪ್ರಧಾನ ಸಂಪಾದಕರು**

ಜೀವನ ಶಿಕ್ಷಣ ಧಾರವಾಡ.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

**ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ**

# ಆದರ್ಶ ಚಿತ್ರಕಲಾ

**( Ideal Drawing )**

**ಶ್ರೀ ಎಸ್. ಕೆ. ಜೋಶಿ, ಮತ್ತು**

**ಶ್ರೀ ಜಿ. ಡಿ. ವಾಲಿ.**

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. ಬೆಲೆ ೧—೧೨—೦ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಇದು ಕನ್ನಡದಲ್ಲಿಯೂ ಸಿಗುತ್ತದೆ,

**ಜಿ. ವಾಯ್. ರಾಣೆ**

**ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.**

# ಯುಗಾದಿ ಹಬ್ಬ

ಲೇಖಕರು : ಶ್ರೀ ಶಿ. ಚ. ಹಿರೇಮಠ, ಪ್ರಧಾನ ಗುರುಗಳು ಕ.ಗಂ.ಶಾಲಾ, ಬಸವನಕೊಪ್ಪ

ದೇವತೋದ್ದೇಶದಿಂದಾಗಲಿ, ಸಾಮಾಜಿಕೋದ್ದೇಶದಿಂದಾಗಲಿ ಕೆಲವು ಮಂಗಲಕಾರ್ಯಗಳನ್ನು ಸ್ವಧರ್ಮೋಕ್ತ ಪ್ರಕಾರ ಮಾಡಿ ಆಪ್ತೇಷ್ಟರೊಡನೆ ಮೃಷ್ಟಾನ್ನಭೋಜನ ಮಾಡುವ ಪದ್ಧತಿಯು ಹಿಂದೂ ಜನರಲ್ಲಿ ಉಂಟು. ಆ ಕಾರ್ಯಗಳಿಗೆ ಪರ್ವಗಳೆಂತಲೂ, ಕಾರ್ಯಮಾಡುವ ದಿವಸಗಳಿಗೆ ಪರ್ವದ ದಿವಸಗಳೆಂತಲೂ ಅನ್ನುತ್ತಾರೆ. ಪರ್ವಗಳಲ್ಲಿ ದೇವತಾಪರ್ವ–ಸಾಮಾಜಿಕಪರ್ವ ಹೀಗೆ ಎರಡು ಪ್ರಕಾರಗಳುಂಟು. ಸಾಮಾಜಿಕ ಪರ್ವಗಳಲ್ಲಿ ಯುಗಾದಿಯು ಒಂದು ಪರ್ವವಾಗಿದೆ. ಯುಗ ಮತ್ತು ಆದಿ ಈ ಎರಡು ಶಬ್ದಗಳಿಂದ ಯುಗಾದಿ ಎಂಬ ಸಮಸ್ತ ಪದವು ಉತ್ಪನ್ನವಾಗಿದೆ. ಯುಗವೆಂದರೆ ವರುಷ, ಆದಿಯೆಂದರೆ ಮೊದಲು, ಯುಗಾದಿಯೆಂದರೆ ವರುಷಾರಂಭ. ಪರ್ವವೆಂಬ ಶಬ್ದವು ತದ್ಭವವಾಗಿ ಹಬ್ಬವಾಗಿದೆ. ವ್ಯಾಕರಣವನ್ನರಿಯದ ಜನರು "ಉಗಾದಿ" ಎಂದು ಅನ್ನುತ್ತಾರೆ. ಯುಗಾದಿಯಂತಲೇ ಅನ್ನುವದು ಸಯುಕ್ತ.

ಅತಿ ಪರಿಚಯಾದವಜ್ಞಾ | ಗತಾನುಗತಿಕೋ ಲೋಕಃ ಎಂಬ ಉಕ್ತಿಗಳಂತೆ ಹಬ್ಬಗಳನ್ನು ಕೇವಲ ಧರ್ಮಶ್ರದ್ಧೆಯಿಂದ ಮಾಡದೆ, ಪೂರ್ವದಿಂದ ಹಿರಿಯರು ಮನೆಯಲ್ಲಿ ಮಾಡುತ್ತ ಬಂದ ಪರಂಪರಾಗತ ಕ್ರಮವನ್ನು ಅನುಸರಿಸಿ ಮಾಡುತ್ತಾರೆ. ಪ್ರತಿಯೊಂದು ಹಬ್ಬದ ಬಗ್ಗೆ ಪುರಾಣ ಆಧಾರದ ಕಥೆಯು ಉಂಟೇ ಉಂಟು.

ಆರಂಭಕಾಲದ ಕಾರ್ಯವು ಬಹಳ ಮಹತ್ವದ್ದು. ಎಲ್ಲ ಹಿಂದೂ ಹಬ್ಬಗಳನ್ನು ಎಣಿಸುವದರಲ್ಲಿ ಯುಗಾದಿ ಹಬ್ಬವು ಮೊದಲನೆಯದಾಗಿಯೂ ಮಹತ್ವದ್ದಾಗಿಯೂ ಇರುವದು. ನಾವು ನಮ್ಮ ಸೌಖ್ಯವೆಂಬ ರಮಣೀಯವಾದ ಮೇಲುಪ್ಪರಿಗೆಯ ವಿಲಾಸ ಮಂದಿರವನ್ನು ಏರುವದಕ್ಕೆ ಯುಗಾದಿಯು ಮೊದಲನೆಯ ಪಾವಟಿಗೆಯಾಗಿದೆ. ಯುಗಾದಿಯು ಸಂತೋಷ–ಶುಭಕಾರಕ ಭಾವೀ ಸಕಲ ಕಾರ್ಯಗಳಿಗೆ ಆದಿ ದಿನವಾದ ಕಾರಣ, ಈ ದಿವಸದಲ್ಲಿ ನಾವು ಸಂತೋಷದಿಂದ ಇದ್ದರೆ ಮುಂದೆ ವರುಷದ ಕೊನೆಯ ವರೆಗೆ ನಮಗೆ ಸಂತೋಷವೇ ಇರುವದೆಂದು ತಿಳಿದು, ಈ ಹಬ್ಬದ ದಿನಗಳಲ್ಲಿ ಯಾವತ್ತೂ ಹಿಂದೂ ಜನರು ಉಂಡುಟ್ಟು ಆಡಿಪಾಡಿ ಸುಖದಿಂದ ಕಾಲಕಳೆಯುತ್ತಾರೆ. ಅಂದೇ ಹೊಸ ಕಾರ್ಯಗಳನ್ನು ಆರಂಭಿಸುತ್ತಾರೆ.

ಯುಗಾದಿಯ ದಿವಸದ ಕಾರ್ಯಗಳಲ್ಲಿ ಮುಖ್ಯವಾಗಿ ಮೂರು ಭಾಗಗಳನ್ನು ಮಾಡಬಹುದು :

(೧) ಪ್ರಾತಃಕಾಲದ ಕಾರ್ಯಗಳು, (೨) ಮಧ್ಯಾಹ್ನದ ಕಾರ್ಯಗಳು, (೩) ಸಾಯಂಕಾಲದ ಕಾರ್ಯಗಳು.

ಕರಾಗ್ರೇ ವಸತೇ ಲಕ್ಷ್ಮೀಃ ಕರಮಧ್ಯೇ ಸರಸ್ವತೀ |
ಕರಪೃಷ್ಠೇ ಚ ಗೋವಿಂದಃ ಪ್ರಭಾತೇ ಕರದರ್ಶನಂ ||

ಎಂಬ ಸಂಸ್ಕೃತ ಪದ್ಯದಂತೆ ಯುಗಾದಿ ದಿವಸ ಜನರು ಉಷಃಕಾಲಕ್ಕೆದ್ದು ಕೂಡಲೆ ಕರದ ಅಗ್ರ–ಮಧ್ಯ–ಪೃಷ್ಠ ಭಾಗಗಳನ್ನು ನೋಡಿಕೊಂಡು, ಬೇವಿನ ತೊಪ್ಪಲವನ್ನು ಹಾಕಿದ ಬಿಸಿನೀರಿನಿಂದ ಅಭ್ಯಂಗ ಸ್ನಾನವನ್ನು ಮಾಡಿ ಕುಲದೇವರಿಗೂ–ಗುರುಹಿರಿಯರಿಗೂ ನಮಸ್ಕರಿಸಿ ಪಸ್ತ್ರಾಲಂಕಾರಭೂಷಿತರಾಗಿ

ಭಾರದ್ವಾಜ ಮಯೂರಾಣಾಂ ಜಾಕ್ಷಸ್ಯ ನಕುಲಸ್ಯ ಚ |
ಇತ್ಯೇತದ್ದರ್ಶನಂ ಪುಣ್ಯಂ ವಾಮಭಾಗೇ ವಿಶೇಷತಃ ||

ಮೇಲೆ ಹೇಳಿದ ಪುರಾಣೋಕ್ತ ಶ್ಲೋಕದಂತೆ ಶ್ರೇಷ್ಠವಾದ ಭಾರದ್ವಾಜಪಕ್ಷಿ (ಸಂಬರಗಾಗೆ) ಯನ್ನು ನೋಡಲಿಕ್ಕೆ ಹೋಗುವದು ಅತ್ಯವಶ್ಯವು. ಭಾರದ್ವಾಜವು ಸಿಗದಿದ್ದಲ್ಲಿ ಮಯೂರವನ್ನು, ಮಯೂರವು ಲಭ್ಯವಾಗದ ಪಕ್ಷದಲ್ಲಿ ಹಂಗನ್ನು, ಹಂಗು ಸಿಗದೇ ಇದ್ದಲ್ಲಿ ನಕುಲ (ಮುಂಗಲಿ) ವನ್ನು ನೋಡಬೇಕು.

ಮಧ್ಯಾಹ್ನದಲ್ಲಿ ತಳಿರ್ತೋರಣಗಳನ್ನು ಬಾಗಿಲಿಗೂ ದೇವತಾಗೃಹಕ್ಕೂ ಕಟ್ಟಿ ದೇವತಾರ್ಚನವನ್ನು ಮಾಡುವದು ಅವಶ್ಯವಾದದ್ದು. ದೇವೇಂದ್ರನ ಅನುಗ್ರಹವೇ ಆದಬಳಿಕ ಉಳಿದ ದೇವತೆಗಳ ಪೀಡೆಯು ಆಗಲಾರದೆಂಬುದು ಭಾರತೀಯರ ಗ್ರಹಿಕೆಯುಂಟು. ಅಂಥವರು ದೇವೇಂದ್ರನ ಧ್ವಜಾರೋಪಣವನ್ನು ಸ್ಥಾಪಿಸಿ ಅದನು

ಸ್ವಧರ್ಮೋತ್ತವಾಗಿ ನಿಷ್ಠೆಯಿಂದ ಪೂಜಿಸತಕ್ಕದ್ದು. ಮಾಡಿದ ಸಕಲ ಪಾಕವನ್ನು ಕುಲಸ್ವಾಮಿಗೂ-ಧ್ವಜಕ್ಕೂ ನೈವೇದ್ಯ ಮಾಡಬೇಕು. ನಂತರ ಮನೆಯ ಯಜಮಾನನು ಗುರು-ಬಂಧುಜನ ಮಿತ್ರ ರೊಡನೆ ಕೂಡಿಕೊಂಡು

ಪಾರಿಭದ್ರಸ್ಯ ಪತ್ರಾಣಿ ಕೋಮಲಾನಿ ವಿಶೇಷತಃ ।
ಸುಪುಷ್ಪಾಣೀ ಸಮಾನೀಯ ಚೂರ್ಣಂ ಕೃತ್ವಾ
ವಿಧಾನತಃ ॥
ಮರೀಚಂ ಹಿಂಗು ಲವಣಂ ಜೀರಕೇಣ ಚ ಸಂಯುತಂ ।
ಅಜಮೋದಾಯತಂ ಕೃತ್ವಾ ಭಕ್ಷಯೇದ್ರೋಗ
ಶಾಂತಯೇ ॥

ಎಂಬ ಸಂಸ್ಕೃತ ಪದ್ಯಗಳಂತೆ ಮೆಣಸು-ಇಂಗು-ಲವಣ-ಜೀರಿಗೆ-ಅಜವಾನ ಇವುಗಳನ್ನು ಬೇವಿನ ಮುಗಳು-ಹೂಗಳಲ್ಲಿ ಮಿಶ್ರಮಾಡಿ, ತಿಂದು, ಬಳಿಕ ಸುಗ್ರಾಸ ಭೋಜನವನ್ನು ಸ್ವಸಂತೋಷದಿಂದ ಮಾಡಬೇಕು. ಬೇವಿನಲ್ಲಿ ಮಿಶ್ರವಾಗುವ ಪದಾರ್ಥಗಳು ರೋಗಪರಿಹಾರಕ ವಿರುವದರಿಂದಲೂ, ಬೇವು ಮಹೌಷಧಿಯಿರುವದ ರಿಂದಲೂ, ಬೇವಿನಲ್ಲಿ ಅಮೃತವಿರುತ್ತದೆಂದು ಪುರಾಣ ಪ್ರಸಿದ್ಧ ಕಥೆಯಿರುವದರಿಂದಲೂ ಇದರ ಸೇವನೆಯಿಂದ ಆರೋಗ್ಯಾಭಿವೃದ್ಧಿಯಾಗುವದೆಂದು ಹೇಳಬಹುದು.

ಸಾಯಂಕಾಲದ ಕಾರ್ಯಗಳು:- ಇದು ಸಾಮಾಜಿಕ ಹಬ್ಬ ವಿದ್ದರಿಂದ ಎಲ್ಲರೂ ಒಂದೆಡೆ ಕಲೆತು ಇಲ್ಲವೆ ತಮ್ಮ ತಮ್ಮ ಮನೆಗಳಲ್ಲಾಗಲಿ ಕೂಡಿ ಜೋಯಿಸನನ್ನು ಕರೆದು ಪಂಚಾಂಗ ಶ್ರವಣಮಾಡಿ, ಆ ವರ್ಷದ ಬಲಾಬಲಗಳನ್ನು ಕೇಳಿಕೊಂಡು ಜೋಯಿಸನಿಗೆ ದಕ್ಷಿಣೆಯನ್ನು ಕೊಟ್ಟು, ಆಶೀರ್ವಚನಗಳನ್ನು ಪಡಕೊಂಡು, ತಮ್ಮ ಸ್ಥಾನಗಳಿಗೆ ಹೋಗಿ ದೇವರಿಗೆ ಮಂಗಳಾರುತಿ ಮಾಡಿ ಭೋಜನಾದಿ ಕಾರ್ಯಗಳನ್ನು ಮುಗಿಸಿ ಮಲಗಿಕೊಳ್ಳಬೇಕು.

ಪುರಾಣ ಕಥೆಯು:- ಪೂರ್ವದಲ್ಲಿ ಕಶ್ಯಪ ಮುನಿಗೆ ಹದಿನೂರು ಮಂದಿ ಹೆಂಡಂದಿರಿದ್ದರು. ಅವರಲ್ಲಿ ಕದ್ರುಕಿ, ವಿನತಾ ಎಂಬವರಿಬ್ಬರು ವಿನೋದಾರ್ಥವಾಗಿ ಒಂದು ಸರೋವರಕ್ಕೆ ಹೋದಾಗ್ಗೆ ಒಂದು ಬಿಳೇ ಕುದುರೆಯನ್ನು ಕಂಡರು. ಆಗ್ಗೆ ವಿನತೆಯು ಏ ಸವತಿಯೇ, ಈ ಶುಭ್ರ ವರ್ಣದ ಕುದುರೆಯನ್ನು ನೋಡು ಎಂದಳು. ಅದಕ್ಕೆ ಕದ್ರುಕೆಯು ಈ ಕುದುರೆಯು ಶುಭ್ರವರ್ಣದ್ದಲ್ಲ; ಕಪ್ಪು ವರ್ಣದ್ದದೆ ಎಂದು ಅಂದಳು. ಹೀಗೆ ಅವರೀರ್ವರಲ್ಲಿ ಜಗಳವು ಹುಟ್ಟಲು, ಅವರು "ಈ ಕದನವನ್ನು ಮೂರನೆಯವರ ಕಡೆಯಿಂದ ವಿಚಾರಮಾಡಿಸಬೇಕು, ಸೋತವಳು ಗೆದ್ದವಳ ದಾಸಿಯಾಗಬೇಕು" ಎಂದು ತಮ್ಮೊಳಗೆ ಗೊತ್ತು ಮಾಡಿ ಕೊಂಡು ಹೊರಟರು. ಅದಕ್ಕೆ ಕುಯುಕ್ತಿಯಿಂದ ಕುದ್ರುಕಿಯು ತನ್ನ ಮಕ್ಕಳಾದ ಕಾಲಸರ್ಪಗಳನ್ನು ಕರೆದು ನಡೆದ ಸಂಗತಿಯನ್ನು ಹೇಳಿ, ಮಕ್ಕಳಿರಾ, ನೀವು ಹೋಗಿ ಆ ಕುದುರೆಯ ಮಯ್ಗೆಲ್ಲ ಅಂಟಿಕೊಳ್ಳಿರಿ, ಅಂದರೆ ನನ್ನ ಮಾತು ಗೆದ್ದು ಸವತಿಯಾದ ವಿನತೆಯು ನನ್ನ ದಾಸಿ ಯಾಗುವಳು ಎಂದು ಹೇಳಿದಳು. ಮಾತೃಭಕ್ತಿಯುಳ್ಳ ಕಾಲಸರ್ಪಗಳು ತಮ್ಮ ಜನನಿಯ ಮಾತಿಗೆ ಒಡಂಬಟ್ಟು ಹಾಗೇ ಮಾಡಿದವು. ಮುಂದೆ ಇವರಿಬ್ಬರ ಮಾತಿನ ನಿರ್ಣಯವು ನಡೆದು ಕುದುರೆಯು ಕಪ್ಪಾಗಿದೆಯೆಂದು ಸರ್ವಾನುಮತದಿಂದ ನಿಶ್ಚಯವಾಗಿ ಕೂಡಲೆ ವಿನತೆಯು ಕದ್ರುಕಿಯ ದಾಸಿಯಾದಳು. ಅಕೆ ಆಗ್ಗೆ ಗರ್ಭಿಣಿ ಇದ್ದುದರಿಂದ ಮುಂದೆ ಗಂಡು ಕೂಸನ್ನು ಹೆತ್ತಳು. ಅದಕ್ಕೆ ಗರುಡನೆಂಬ ಹೆಸರನ್ನು ಇಟ್ಟರು. ಬಳಿಕ ಒಂದಾನೊಂದು ದಿವಸ ಗರುಡನನ್ನು ಗುಪ್ತವಾಗಿ ಕರೆದು ಹಿಂದೆ ನಡೆದ ಸಂಗತಿಯನ್ನು ಹೇಳಲು, ಗರುಡನು ಕೂಡಲೇ ದೇವಲೋಕಕ್ಕೆ ಹೋಗಿ, ಅಲ್ಲಿಯ ಅಮೃತ ಕಲಶವನ್ನು ತಕ್ಕೊಂಡು, ದೇವಲೋಕದಿಂದ ಪಾತಾಳ ಲೋಕಕ್ಕೆ ಬರುವಾಗ್ಗೆ, ಮಾರ್ಗದಲ್ಲಿ ಕೈ ಸೋತು ಭೂಲೋಕದಲ್ಲಿಯ ಬೇವಿನ ಮರದಲ್ಲಿ ಅಮೃತ ಕಲಶವನ್ನು ಇಟ್ಟು, ವಿಶ್ರಾಂತಿ ತಕ್ಕೊಂಡನು. ಆ ದಿವಸ ಯುಗಾದಿ ಯಿದ್ದದ್ದು ವಿಶ್ರಾಂತಿಯ ನಂತರ ತಿಳಿದುಬಂತು.

ಪುಷ್ಪಮಾಲಾಸಂಗದಿಂದ ದಾರಕ್ಕೆ ಶ್ರೇಷ್ಠತ್ವ ವೊದಗುವಂತೆ, ಅಮೃತ ಸಂಸರ್ಗದಿಂದ ಬೇವಿನಮರವು ಭೂಲೋಕದ ಕಲ್ಪವೃಕ್ಷವೆಂಬ ಪ್ರಸಿದ್ಧಿಯನ್ನು ಹೊಂದಿ ಲೋಕಮಾನ್ಯವಾಗಿದೆ. ಅದುದರಿಂದ ಭಾರತೀಯರು ಸೀಗಸಲ್ಲಿ ಬೇವಿನತೊಪ್ಪಲ ಹಾಕಿ ಸ್ನಾನಮಾಡುವದನ್ನೂ, ಅದರ ಚಿಗುರು-ಹೂಗಳನ್ನು ತಿನ್ನುವದನ್ನೂ ಮಾಡು ತ್ತಾರೆ. ಹಿಂದೂ ಧರ್ಮದ ಎಲ್ಲರೂ ಪ್ರತಿಯೊಂದು ಹಬ್ಬದ ಕಾರಣಗಳನ್ನು ತಿಳಿದು ಅವುಗಳನ್ನು ಯಥಾವಿಧಿ ಗಳಿಂದ ಸಾಂಗವಾಗಿ ನೆರವೇರಿಸಬೇಕು. ಯುಗಾದಿ ಹಬ್ಬದಲ್ಲಂತೂ ಎಲ್ಲ ಕಾರ್ಯಗಳನ್ನು ಸರಿಯಾಗಿ ನೆರವೇರಿಸಿ, ಎಲ್ಲರೂ ತದೀಯ ಕಥಾಶ್ರವಣಮಾಡಿ, ಆನಂದದಿಂದ ಕಾಲಕಳೆಯುವದು ಉಚಿತ.

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

# " ದೀಪದಾನ ಸಮಾರಂಭ "

[ ೧೯೫೯ ]

## ಪ್ರತಿಜ್ಞಾ - ವಿಧಿ

ಪ್ರಾಥಮಿಕ ಶಿಕ್ಷಣದ ಏಳ್ಗೆಗಾಗಿ ಶತಾಯುಷಿಯಾಗಿ ಬಾಳಿ ಬೆಳೆದು ವಟವೃಕ್ಷದಂತೆ ಹಬ್ಬುತ್ತಿರುವ ಜೀವನ ಶಿಕ್ಷಣ ತರಬೇತಿಯನ್ನು ನೀಡುತ್ತಿರುವ ಈ ಕೇಂದ್ರದಲ್ಲಿ ತರಬೇತಿಯನ್ನು ಪಡೆದು, ಇಲ್ಲಿಯ ಸಂಸ್ಕೃತಿಯ ಸಂಗಮ ಜಲದಲ್ಲಿ ಮಿಂದು ಪುನೀತರಾಗಿ, ಶಿಕ್ಷಣ ಸಮೀರನನ್ನು ಎರಡು ವರುಷಗಳ ಪರ್ಯಂತ ಸೇವಿಸಿ, ಬಾಲಕುಸುಮಗಳನ್ನು ವಿಕಸಿಸಲು ಜ್ಞಾನ ಕಿರಣಗಳ ಕೇಂದ್ರೀಕರಣಕ್ಕಾಗಿ ಕಟಿಬದ್ಧರಾದ ನಿಮಗೆ ಇದು ಒಂದು ಶುಭದಿನವು.

ಈ ಜೀವನ ಶಿಕ್ಷಣ ಜ್ಯೋತಿಯನ್ನು ಮೊದಲು ಹೊತ್ತಿಸಿದ ಮಹಾ ವಿಭೂತಿಯು, ಮಹಾತ್ಮಾ ಗಾಂಧಿಜಿಯವರು, ಅವರು ಮಾನವ ಕೋಟಿಯ ಸಮಗ್ರ ಕಲ್ಯಾಣದ ದೃಷ್ಟಿಯನ್ನು ಕಣ್ಣಿದುರಿಗೆ ಇರಿಸಿಕೊಂಡು ಅವರೀ ಶಿಕ್ಷಣದ ನಂದಾದೀವಿಗೆಯನ್ನು ಹೊತ್ತಿಸಿದರು. ಮಾನವೀಯತೆಯ ಸ್ಪಷ್ಟ ಚಿತ್ರವು ಈ ಜ್ಯೋತಿಯಿಂದ ಕಾಣಬಲ್ಲದು. ಇದರ ಬೆಳಕಿನಡಿಯಲ್ಲಿ ಮುನ್ನಡೆಯುವವರು, ಅಸತ್ಯದಿಂದ ಸತ್ಯದೆಡೆಗೆ, ಮೃತ್ಯುವಿನಿಂದ ಅಮೃತದೆಡೆಗೆ ಸಾಗಬಲ್ಲರು.

ಕಾಪಟ್ಯ, ಕುಹಕತನಗಳನ್ನು ದೂರೀಕರಿಸಿ ಪ್ರೇಮ ಭೂಮಿಯಲ್ಲಿ ಪಾದಾರ್ಪಣಮಾಡಲು ಸ್ವಾರ್ಥವನ್ನು ಬದಿಗಿರಿಸಿ ವಿಶ್ವಬಂಧುತ್ವದಲ್ಲಿ ಲೀನವಾಗಲು, ದುರಹಂಕಾರವನ್ನು ದಮನಿಸಿ ವಿನಮ್ರ ಭಾವಪೀಠವನ್ನಲಂಕರಿಸಲು ಈ ಅರಿವಿನ ತಿಳಿಬೆಳಕು ದಾರಿದೋರಲಿ. ಅಂಥ ಪುನಃ ಪರಿವರ್ತನದತ್ತ ನಿಮ್ಮನ್ನು ಈ ಜ್ಞಾನದೀಪವು ನಡೆಸಿಕೊಂಡು ಹೋಗುವಂತಾಗಲಿ !

ನಿಮ್ಮೆಲ್ಲರ ಹೃದಯಾಂತರಾಳದಲ್ಲಿ ಈ ದೀಪವು ಸದಾ ಬೆಳಗಲಿ; ನಿಮ್ಮನ್ನು ಬೆಳಗಿ ಅನ್ಯರನ್ನು ಬೆಳಗಿಸಲಿ. ಹಳ್ಳಿಗಳಲ್ಲಿ ಕಾಣುತ್ತಿರುವ ಅಜ್ಞಾನವೆಂಬ ಕತ್ತಲೆಯ ಕೇಡು ದೂರವಾಗಲಿ. ಮೊಗ್ಗುಗಳಂತಿರುವ ಮಾನಸ ಕುಸುಮವು ನಿಮ್ಮ ಜ್ಞಾನಕಿರಣಗಳ ಸ್ಪರ್ಶ ಮಾತ್ರದಿಂದ ವಿಕಸಿಸಿ ಅವರ ಬಾಳಪುಷ್ಪವು ಪೂರ್ಣ ವಿಕಸಿಸಿ ಫಲಿಸಲಿ ಎಂದು ಹಾರೈಸಿ, ಜ್ಯೋತಿರ್ಲಿಂಗನಾದ ಪರಮೇಶ್ವರನನ್ನು ಪ್ರಾರ್ಥಿಸಿ ಈ ದೀಪವನ್ನು ನಿಮ್ಮ ಕೈಗೆ ನೀಡಿದ್ದೇನೆ.

— ಜೈ ಹಿಂದ —

ಎಮ್. ಜಿ. ಕಟ್ಟಿ
ಪ್ರಿನ್ಸಿಪಾಲ
ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ದಿ. ೩೯-೪-೫೯

# ಪಂಡಿತಾ ರಮಾಬಾಯಿ

ಲೇಖಕರು : ಶ್ರೀ ಟಿ. ಎಫ್. ದೇಸಾಯಿ, ನಿವೃತ್ತ ಅ. ಡಿ. ಎ. ಇ., ಧಾರವಾಡ

ಭಾರತದ ಸಂಸ್ಕೃತಿಯಲ್ಲಿ ಅವಿಚ್ಛಿನ್ನ ಪ್ರವಾಹದ ಒಂದು ವೈಶಿಷ್ಟ್ಯವುಂಟು. ಅದರ ಒಂದು ಶಾಖೆಯು ಪುಣ್ಯ ಪುರುಷರ ಮುಖಾಂತರ ಪ್ರಕಟವಾಗಿದ್ದರೆ ಇನ್ನೊಂದು ಶಾಖೆಯು ಪೂಜ್ಯ ಮಹಿಳಾಮಣಿಗಳ ದ್ವಾರ ಕಾಣಿಸಿಕೊಂಡಿರುವದು. ಸೀತಾ, ತಾರಾ, ದ್ರೌಪದಿ ಮೊದಲಾದ ಪ್ರಾಚೀನ ಪಂಚಕನ್ನೆಯರು ತಮ್ಮ ಪತಿ ವ್ರತಾಧರ್ಮದ ಪಾವಿತ್ರ್ಯದಿಂದ ಪ್ರಸಿದ್ಧರಾಗಿದ್ದಾರೆ. ಝಾನ್ಸಿ ಲಕ್ಷ್ಮೀಬಾಯಿ, ಕಿತ್ತೂರ ಚನ್ನಮ್ಮರಂಥ ರಾಣಿಯರು ತಮ್ಮ ವೀರಶ್ರೀಯಿಂದ ಹೆಸರಾದರು. ಇವರೆಲ್ಲರಿಗೆ ಒಂದು ಪರಂಪರೆಯ ಇಲ್ಲವೆ ಆಕಸ್ಮಿಕ ಸನ್ನಿವೇಶದ ಅನುಕೂಲತೆಯಿರಬಹುದು. ಆದರೆ ಪಂಡಿತಾ ರಮಾಬಾಯಿಯವರು ಕೇವಲ ತಮ್ಮ ಕಷ್ಟಮಯ ಜೀವನ, ಅದ್ಭುತ ಸಾಹಸ, ಅಪ್ರತಿಹತ ಪಾಂಡಿತ್ಯ, ಅನುಪಮ ಸಚ್ಚರಿತ್ರ ಹಾಗು ನಿಃಸ್ವಾರ್ಥ ಸಮಾಜ ಸೇವೆ ಇವುಗಳಿಂದ ವಿಶ್ವವಿಖ್ಯಾತರಾದರೆಂಬುದು ಅವರ ಈ ಅಲ್ಪ ಪರಿಚಯದಿಂದ ವ್ಯಕ್ತವಾಗುವದು.

ಮೈಸೂರು ರಾಜ್ಯದ ಪಶ್ಚಿಮ ಘಟ್ಟದ ಒಂದು ಗ್ರಾಮದಲ್ಲಿ ಕ್ರಿ. ಶ. ೧೮೫೮ರಲ್ಲಿ ರಮಾಬಾಯಿಯವರ ಜನ್ಮವಾಯಿತು. ತಂದೆ ಅನಂತಶಾಸ್ತ್ರಿ ಡೋಗರೆ ಒಬ್ಬ ವಿದ್ವಾನ್ ಬ್ರಾಹ್ಮಣ. ಅವರು ಆಗಿನ ಕಾಲದಲ್ಲಿಯೇ ಸ್ತ್ರೀ-ಶಿಕ್ಷಣದ ಪುರಸ್ಕರ್ತರಾಗಿದ್ದರು. ರಮಾಬಾಯಿಯವರ ತಾಯಿ-ಲಕ್ಷ್ಮೀಬಾಯಿ ಸಾಧ್ವೀಶಿರೋಮಣಿ. ಅನಂತ ಶಾಸ್ತ್ರಿಗಳು ಹೆಂಡತಿಗೆ ಸಂಸ್ಕೃತ ಭಾಷೆಯ ಅಭ್ಯಾಸವನ್ನು ಮಾಡಿಸಬೇಕೆನ್ನುತ್ತಿದ್ದರು. ಆದರೆ ಹಳೆಯ ಸಂಪ್ರದಾಯ ನಿಷ್ಠರಾದ ಅವರ ಸಂಬಂಧಿಕರು ವಿರೋಧಿಸಿದುದರಿಂದ ಅವರ ಎದುರಿಗೆ ಇವರ ಆಟವು ಸಾಗಲಿಲ್ಲ. ಕೊನೆಗೆ ಸ್ವವಿಚಾರ ನಿಷ್ಠರಾದ ಡೋಗರೆಯವರು ಗ್ರಾಮವನ್ನು ಬಿಟ್ಟು ಮೂರದಲ್ಲಿ ಒಂದು ಗುಡಿಸಲನ್ನು ಕಟ್ಟಿಕೊಂಡು ಇರಹತ್ತಿದ್ದರು. ಹಾಗು ತಮ್ಮ ಹೆಂಡತಿಗೆ ಸಂಸ್ಕೃತವನ್ನು ಕಲಿಸಿದರು.

ರಮಾಬಾಯಿಯವರಿಗೆ ಒಬ್ಬ ತಮ್ಮನೂ ಒಬ್ಬ ತಂಗಿಯೂ ಇದ್ದರು. ರಮಾಬಾಯಿಯವರು ಆರು ತಿಂಗಳದವರಿರುವಾಗಲೇ ಅವರ ತಂದೆಯವರಿಗೆ ಬಡತನವು ಬಂತು. ವಿದ್ವಾಂಸರ ಸಾಧುಸಂತರ ಸತ್ಕಾರದಲ್ಲಿ ಅಪಾರ ಧನವನ್ನು ವ್ಯಯಮಾಡಿ ಅವರು ನಿರ್ಧನರಾದರು. ಆದುದರಿಂದ ಊರಿಂದೂರಿಗೆ ಅಲೆಯುತ್ತ, ಯಾತ್ರೆಯನ್ನು ಮಾಡುತ್ತ, ಪೌರಾಣಿಕ ಕಥೆಗಳನ್ನು ಹೇಳಿ ಉದರ ನಿರ್ವಾಹವನ್ನು ಸಾಗಿಸಬೇಕಾಯಿತು. ಕಟ್ಟಾ ಹಿಂದುಗಳಾದುದರಿಂದ ಅನೇಕ ಸಲ ದಿನವೆಲ್ಲವೂ ಒಂದು ತುತ್ತು ಕೂಳು, ಒಂದು ಜಲ ನೀರಿಲ್ಲದೆ ಕಷ್ಟದಿಂದ ಕಾಲಕಳೆಯುತ್ತಿದ್ದರು. ಇದರ ಪರಿಣಾಮವಾಗಿ ಅವರ ಸ್ವಾಸ್ಥ್ಯವು ಕೆಟ್ಟು, ಕಥಾಪ್ರವಚನ ಕಾರ್ಯವು ಕಟ್ಟಾಗಿ, ಕುಟುಂಬ ಪೋಷಣೆಯನ್ನು ಮಾಡಲಸಮರ್ಥರಾದರು.

ರಮಾಬಾಯಿಯವರು ತಂದೆ ತಾಯಿಗಳಿಂದ ಸಂಸ್ಕೃತ ಅಭ್ಯಾಸವನ್ನು ಮಾಡಿಕೊಂಡರು. ಅವರ ತಾಯಿ ಲಕ್ಷ್ಮೀಬಾಯಿಯವರು ಆದರ್ಶ ಪತ್ನಿಯೂ ಅನುಕರಣೀಯ ಮಾತೆಯೂ ಆಗಿದ್ದರು. ತಾಯಿಯ ಚರಿತ್ರದ ಪೂರ್ಣ ಪ್ರಭಾವವು ರಮಾಬಾಯಿಯವರ ಮೇಲೆ ಬಿದ್ದಿತ್ತು. ಕೇವಲ ಹನ್ನೆರಡು ವರುಷದ ವಯಸ್ಸಿನಲ್ಲಿಯೇ ಸುಮಾರು ಇಪ್ಪತ್ತು ಸಾವಿರ ಸಂಸ್ಕೃತ ಶ್ಲೋಕಗಳನ್ನು ಕಂಠಪಾಠ ಮಾಡಿದ್ದರು. ತಂದೆ-ತಾಯಿಗಳಿಂದ ಅವರಿಗೆ ಮರಾಠಿ ಭಾಷೆಯ ಜ್ಞಾನವೂ ಪ್ರಾಪ್ತವಾಗಿತ್ತು. ತರುವಾಯ ದೇಶ ಸಂಚಾರದಲ್ಲಿ ಅವರು ಕನ್ನಡ, ಹಿಂದುಸ್ತಾನಿ, ಬಂಗಾಲಿ ಭಾಷೆಗಳನ್ನು ಕಲಿತರು. ೧೮೮೩ರಲ್ಲಿ ಇಂಗ್ಲಂಡಿಗೆ ಹೋದಾಗ ಇಂಗ್ಲಿಷ ಭಾಷೆಯನ್ನೂ ಕಲಿತರು. ಹೀಗೆ ಅವರಿಗೆ ಅನೇಕ ಭಾಷೆಗಳ ಪರಿಚಯವಾಗಿತ್ತು. ಸಂಸ್ಕೃತದಲ್ಲಿ ವಿದುಷಿಯಾದುದರಿಂದ ಅವರಿಗೆ "ಪಂಡಿತಾ," "ವಿದುಷಿ" ಎಂಬ ಬಿರುದುಗಳು ಪ್ರಾಪ್ತವಾದವು.

೧೮೮೨-೮೩ರಲ್ಲಿ ಭೀಕರವಾದ ಬರವು ಬಿದ್ದಿತು. ಆಗ ಈ ಸಾಹಸಿ ಪರಿವಾರದ ಪರಿಸ್ಥಿತಿಯು ಅತ್ಯಂತ ಶೋಚನೀಯವಾಯಿತು. ಆ ಕಾಲದ ದುಃಸ್ಥಿತಿಯನ್ನು ಉಲ್ಲೇಖಿಸುವಾಗ ರಮಾಬಾಯಿಯವರು— "ಅಂದು ಕೊನೆಯದಾಗಿ ನಾವು ಅಕ್ಕಿಯ ಅಗುಳನ್ನು ತಿಂದಿದ್ದೆವು.

ಉಪವಾಸಬಿದ್ದು ಸತ್ತು ಹೋಗುವವರ ಹೊರತು ನಮ್ಮ ಪಾಲಿಗೆ ಇನ್ನೇನೂ ಉಳಿದಿರಲಿಲ್ಲ. ಆಹಾ! ಆ ಸಂಕಟ ಸಮಯದ ದೈನ್ಯತೆ, ಘೋರ ಅಪಮಾನ ಇವುಗಳನ್ನು ವರ್ಣಿಸಲಸಾಧ್ಯವು. ಅವು ಬಹಳ ಕಷ್ಟದ ದಿನಗಳು" ಎಂದು ಅಂದಿರುವರು. ಆಗ ಅವರಿಗೆ ಎಲ್ಲಿಯೂ ಆಶ್ರಯವು ದೊರೆಯದಾಗಲು ಆ ಪರಿವಾರವು ಅಡವಿಯ ಪಾಲಾಗಿ ಆತ್ಮತ್ಯಾಗ ಮಾಡಿಕೊಳ್ಳುವ ಅಸಹಾಯ ಸ್ಥಿತಿಯಲ್ಲಿ ತೊಳಲಬೇಕಾಯಿತು. ಮೊದಲೇ ಅಸ್ವಸ್ಥರಾದ ಅವರ ತಂದೆಯವರು ಸ್ವರ್ಗಸ್ಥರಾದರು. ಕೆಲವು ದಿನಗಳ ತರುವಾಯ ಅವರ ತಾಯಿಯವರೂ ಪರಲೋಕವಾಸಿಗಳಾದರು. ಆಗ ಆ ಪರದೇಶಿ ಮಕ್ಕಳು ಅಸಹನೀಯ ಆಘಾತಕ್ಕೀಡಾಗಿ ಅತ್ತಿತ್ತ ಅಲೆದಾಡಹತ್ತಿದರು. ಅನೇಕ ಸಲ ಹಸಿವೆಯಿಂದ ಕಂಗೆಟ್ಟು ಅಡವಿಯ ಹಣ್ಣುಗಳನ್ನು ಬೀಜ, ಸಿಪ್ಪೆ ಸಹಿತ ತಿಂದುಬಿಡುತ್ತಿದ್ದರು. ಎಷ್ಟೋಸಲ ಚಳಿಯಿಂದ ಉಳಿಯಬೇಕೆಂದು ತಗ್ಗಿನಲ್ಲಿ ಅಡಗಿಕೊಂಡು ಒಣ ಉಸುಕನ್ನು ಮೈಮೇಲೆ ಹರವಿ ತಮ್ಮ ಶರೀರ ರಕ್ಷಣೆಯನ್ನು ಮಾಡಿಕೊಳ್ಳುತ್ತಿದ್ದರು. ಜೀವನದ ಇಂಥ ಕಟು ಅನುಭವದ ಮೂಲಕ ಅವರಲ್ಲಿ ಸಹನಶೀಲತೆಯುಂಟಾಯಿ ತಲ್ಲದೆ ಮಾನವತೆಯ ಬಗೆಗೆ ಅವರ ದೃಷ್ಟಿಯೂ ವಿಶಾಲವಾಯಿತು. ಕಷ್ಟಪರಂಪರೆಯ ಈ ಮೂರು ವರುಷಗಳಲ್ಲಿ ಕಾಲು ನಡಿಗೆಯಿಂದ ಅತ್ತಿತ್ತ ಅಲೆಯುತ್ತ ಸುಮಾರು ನಾಲ್ಕು ಸಾವಿರ ಮೈಲುಗಳ ಪಾದಯಾತ್ರೆಯನ್ನು ಮಾಡಿದರು! ಪ್ರತಿಕೂಲ ಪರಿಸ್ಥಿತಿಯೊಡನೆ ಸಾಹಸದಿಂದ ಹೋರಾಡುವದರಲ್ಲಿಯೇ ಮಾನವನ ನುನ್ನತಿಯ ಮೂಲಸೂತ್ರವಿದೆಯೆಂದು ಅವರ ದೃಢವಾದ ನಂಬಿಗೆ. ಇಷ್ಟರಿಂದಲೇ ಅವರ ಕಷ್ಟಸಹಿಷ್ಣುತೆಯ ಸ್ಪಷ್ಟವಾದ ಕಲ್ಪನೆಯು ನಮಗೆ ಆಗದಿರದು.

ಮುಂದೆ ಗಿಲಖರಲ್ಲಿ ಅವರು ಕಲಕತ್ತೆಗೆ ಹೋದರು. ಅಲ್ಲಿಯೇ ಇದ್ದುಕೊಂಡು ದುಃಖಿಗಳಾದ ದುರ್ದೈವೀ ಭಗಿನಿಯರ ಉದ್ಧಾರದ ಸಲುವಾಗಿ ತಮ್ಮ ಜೀವನವನ್ನು ಅರ್ಪಿಸಬೇಕೆಂದು ನಿರ್ಧರಿಸಿದರು. ಅಲ್ಲಲ್ಲಿ ಹೋಗಿ ಬಾಲ ವಿವಾಹ, ವಿಧವಾ ದುರ್ದೆಶೆ ಇವುಗಳತ್ತ ಜನತೆಯ ಲಕ್ಷ್ಯವನ್ನು ಸೆಳೆಯಲೆತ್ನಿಸಿದರು. ಇವರ ಭಾಷಣಗಳಿಂದ ಬಂಗಾಲದಲ್ಲಿ ಒಂದು ಹೊಸ ವಿಚಾರ ಕ್ರಾಂತಿಯಾಯಿತು. ಭಾಷಣದ ಸಮಯದಲ್ಲಿ ಸಂದರ್ಭೋಚಿತವಾಗಿ ಶಾಸ್ತ್ರಗಳ ಆಧಾರವನ್ನು ಕೊಟ್ಟು ತಮ್ಮ ವಿಚಾರದ ಸಮರ್ಥನೆಯನ್ನು ಮಾಡಿಕೊಳ್ಳುತ್ತಿದ್ದರು. ಅವರ ಬಾಯಿಯಿಂದ ಒರುವ ಸಂಸ್ಕೃತ ಶ್ಲೋಕಗಳನ್ನು ಕೇಳಿ ಜನರು ಆಶ್ಚರ್ಯದಿಂದ ಮಂತ್ರಮುಗ್ಧರಾಗಿ ಸರಸ್ವತಿಯು ಅವತಾರವೆಂದೇ ಭಾವಿಸುತ್ತಿದ್ದರು. ಆಗ ಅವರ ವಯಸ್ಸು ಕೇವಲ ೨೨. ನಸುಗೆಂಪಾದ ಮೈಬಣ್ಣ, ತುಂಬಿದ ಕಣ್ಣು, ತೆಳುವಾದ ಮೈಕಟ್ಟು ಇವುಗಳಿಂದ ರಮಾಬಾಯಿಯವರ ವ್ಯಕ್ತಿತ್ವವು ಆಕರ್ಷಕವಾಗಿತ್ತು.

ರಮಾಬಾಯಿಯವರು ಕಲಕತ್ತೆಗೆ ಬಂದ ಬಳಿಕ ಅವರ ತಮ್ಮನು ತೀರಿಕೊಂಡನು. ಅವರ ಕಷ್ಟ ಪರಂಪರೆಯು ಇನ್ನೂ ಕೊನೆಗೊಳ್ಳಲೊಲ್ಲದು. ಒಂಟಿಗರಾಗಿ ಆರು ತಿಂಗಳ ತರುವಾಯ ಅವರು ವಿಪಿನ ಬಿಹಾರಿ ಮೇಧಾವಿ ಎಂಬ ಒಬ್ಬ ಶೂದ್ರ ಕುಲದ ವಕೀಲರೊಡನೆ ವಿವಾಹವಾದರು. ಮೇಧಾವಿ ಅವರು ಕಲಕತ್ತೆಯ ವಿಶ್ವವಿದ್ಯಾಲಯದಿಂದ ಎಂ. ಎ. ಪಾಸಾಗಿದ್ದರು. ಕಷ್ಟ ಪರಂಪರೆಯ ವಿಷಮ ಪರಿಸ್ಥಿತಿಯಲ್ಲಿ ಜನಾಭಿಪ್ರಾಯವನ್ನು ಗಮನಿಸದೆ ಜೀವನದ ಜೊತೆಗಾರರನ್ನು ಅರಿಸಿಕೊಂಡು ದಾಂಪತ್ಯ ಜೀವನದ ಮಧುರ ಫಲವನ್ನು ತುಟಿಯ ತುದಿಯಲ್ಲರಿಸುವಾಗಲೇ-ಕೇವಲ ಒಂದೂವರೆ ವರ್ಷದೊಳಗಾಗಿ-ಮೇಧಾವಿಯವರು ಪರಂಧಾಮವನ್ನೈದಿದರು! ರಮಾಬಾಯಿ ಹಾಗೂ ಒಂದು ಹೆಣ್ಣು ಕೂಸು-ಮನೋರಮಾ-ಅನಾಥರಾದರು. ಸಾತ್ವಿಕ ಜನರ ಸತ್ವ ಪರೀಕ್ಷೆಗೆ ಸಣ್ಣ ಪುಟ್ಟ ಕಷ್ಟಗಳು ಸಾಲುವದಿಲ್ಲ. ಬಾಳಿನುದ್ದಕ್ಕೂ ಅವರು ಬಳಲ ಬೇಕಾಗುವದು. ಪುರಾಣೇತಿಹಾಸಗಳಲ್ಲಿ ಇಂಥ ಹಲವು ಉದಾಹರಣೆಗಳನ್ನು ನಾವು ಕಾಣಬಹುದು. ರಮಾಬಾಯಿಯವರು ಒಬ್ಬ ಅಸ್ಪೃಶ್ಯನೊಡನೆ ವಿವಾಹವಾದ ಕಾರಣ ಅವರ ಕರ್ಮನಿಷ್ಠ ಸಂಬಂಧಿಕರು ಈ ಸಮಯದಲ್ಲಿ ಅವರಿಗೆ ಆಶ್ರಯವನ್ನು ಕೊಡಲಿಲ್ಲ. ಆದುದರಿಂದ ಅವರು ಕಲಕತ್ತೆಯಿಂದ ಪುಣೆಗೆ ಬಂದು ಜೀವನದ ಹೊಸ ಅಧ್ಯಾಯವನ್ನು ಆರಂಭಿಸಿದರು. ಸ್ತ್ರೀ ಶಿಕ್ಷಣದ ಬಗೆಗೆ ಲೇಖನಗಳನ್ನು ಬರೆಯಹತ್ತಿದರು. ಭಾಷಣಗಳನ್ನು ಕೊಡಲಾರಂಭಿಸಿದರು. ರಾನಡೆ, ಕೇಳಕರ ಹಾಗೂ ಭಂಡಾರಕರ ಮೊದಲಾದ ಆಗಿನ ಮಹಾ ಮುಖಂಡರನ್ನು ಕಂಡು ತಮ್ಮ ವಿಚಾರಗಳನ್ನು ಅವರೆದುರಿಗೆ ಮಂಡಿಸಿದರು. ಅವರೆಲ್ಲರು ಇವರನ್ನು ಪ್ರೋತ್ಸಾಹಿಸಿದರು. ಕೊನೆಗೆ ಪುಣೆಯಲ್ಲಿ "ಆರ್ಯ-ಮಹಿಳಾ ಸಮಾಜ"ವೆಂಬ ಒಂದು

ಸಂಸ್ಥೆಯನ್ನು ಸ್ಥಾಪಿಸಿ ಮಹಾರಾಷ್ಟ್ರ ಪ್ರಾಂತದಲ್ಲೆಲ್ಲ ಅದರ ಶಾಖೆಗಳನ್ನು ತೆರೆದರು.

ಈಗ ಅವರಿಗೆ ಇಂಗ್ಲೀಷ ಭಾಷೆಯ ಜ್ಞಾನದ ಅಭಾವವು ಒಂದು ದೊಡ್ಡ ಕೊರತೆಯೆನಿಸಹತ್ತಿತು. ಅದಕ್ಕಾಗಿ ಅವರು ೧೮೮೩ ರಲ್ಲಿ ಇಂಗ್ಲಂಡಕ್ಕೆ ಹೋದರು. ಅಲ್ಲಿ " ಸೆಂಟಮೇರಿಸ ಹೋಮ " ದಲ್ಲಿ ಉಳಿದುಕೊಂಡು ಕ್ರಿಸ್ತ ಧರ್ಮವನ್ನು ಸ್ವೀಕರಿಸಿದರು. ಬಳಿಕ ಅಲ್ಲಿ ಒಂದು ಮಹಿಳಾ ಮಹಾವಿದ್ಯಾಲಯದಲ್ಲಿ ಎರಡು ವರುಷ ಸಂಸ್ಕೃತ ಪ್ರಾಧ್ಯಾಪಿಕೆಯಾಗಿ ಕೆಲಸ ಮಾಡಿದರು. ತರುವಾಯ ತಮ್ಮ ಕಕ್ಕನ ಮಗಳಾದ ಶ್ರೀಮತಿ ಆನಂದೀಬಾಯಿ ಜೋಶಿ ಅವರ ಆಮಂತ್ರಣದ ಮೇರೆಗೆ ಅಮೇರಿಕಾಕ್ಕೆ ಹೋದರು. ಅಮೇರಿಕೆಯ ಶಿಕ್ಷಣ ಪದ್ಧತಿಯ ಪ್ರಭಾವ ಕ್ಕೊಳಗಾಗಿ ಅವರು ಕಿಂಡರ ಗಾರ್ಡನ ಪದ್ಧತಿಯ ತರಬೇತಿಯನ್ನು ಹೊಂದಿದರು. ಹಿಂದೂ ಸ್ತ್ರೀಯರಿಗೆ ಆಗುವ ಸಾಮಾಜಿಕ ಅತ್ಯಾಚಾರಗಳನ್ನು ವಿವರಿಸಿ ' ಉಚ್ಚ ಕುಲದ ಹಿಂದೂ ಸ್ತ್ರೀ ' ಎಂಬ ಒಂದು ಪುಸ್ತಕ ವನ್ನು ಬರೆದರು. ಕೊನೆಗೆ ಅಲ್ಲಿ " ರಮಾಬಾಯಿ ಅಸೋಸಿಯೇಶನ್ ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ಉಚ್ಚ ಕುಲದ ವಿಧವಾ ಸ್ತ್ರೀಯರಿಗಾಗಿ ಒಂದು "ವಿಧವಾ ಆಶ್ರಮ"ವನ್ನು ತೆರೆದರು. ಮುಂದೆ ಹತ್ತು ವರುಷಗಳ ವರೆಗೆ ಅದರ ವೆಚ್ಚವನ್ನು ಸಾಗಿಸಿ ಕೊಂಡು ಹೋಗುವಂತೆ ಆಶ್ವಾಸನವನ್ನು ಪಡೆದರು. ರಮಾಬಾಯಿಯವರ ಸಮಾಜ ಸೇವಾ ಸಂಘಟನಾ ಶಕ್ತಿಯ ದ್ಯೋತಕವಿದು.

ರಮಾಬಾಯಿಯವರು ೧೮೮೮ ರಲ್ಲಿ ಭಾರತಕ್ಕೆ ಮರಳಿ ಬಂದರು. ಇಲ್ಲಿಯ ವಿಧವಾ ನಾರಿಯರಿಗಾಗಿ "ಶಾರದಾ ಸದನ"ವೆಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ಅಲ್ಲಿ ಸ್ತ್ರೀಯರಿಗೆ ದಾಯಿ, ಗೃಹಿಣಿ, ಶಿಶುಪಾಲನ ಮೊದಲಾದ ಚಟುವಟಿಕೆಗಳಲ್ಲಿ ತರಬೇತಿ ಯನ್ನು ಕೊಟ್ಟು ಸ್ವಾವಲಂಬಿ ಜೀವನದ ಶಿಕ್ಷಣಕ್ರಮ ವನ್ನು ಬಳಕೆಯಲ್ಲಿ ತಂದರು. ಪಾಶ್ಚಾತ್ಯ ಪದ್ಧತಿಯನ್ನು ಅನುಸರಿಸದೆ ಭಾರತೀಯ ವಾತಾವರಣದಲ್ಲಿಯೇ ಸ್ತ್ರೀ ಶಿಕ್ಷಣವು ಸಾಗಬೇಕೆಂದು ಅವರು ಅನ್ನುತ್ತಿದ್ದರು.

ಅಮೇರಿಕೆಯಲ್ಲಿದ್ದ ' ರಮಾಬಾಯಿ ಅಸೋಸಿಯೇಶನ್'ದ ಹತ್ತು ವರುಷದ ಅವಧಿಯು ಮುಗಿದುದರಿಂದ ಅವರು ೧೮೯೮ ರಲ್ಲಿ ಮತ್ತೆ ಅಮೇರಿಕೆಗೆ ಹೋದರು. ಅಲ್ಲಿಯ ತಮ್ಮ ಎಲ್ಲ ಕಾರ್ಯಗಳು ಸಫಲವಾದ ಬಳಿಕ ತಿರುಗಿ ಭಾರತಕ್ಕೆ ಬಂದರು. ಮುಕ್ತಿ ಎಂಬಲ್ಲಿ ಒಂದು ಹೊಸ ಭವನವನ್ನು ಕಟ್ಟಿಸಿ " ಕೃಪಾ ಸದನ " ವೆಂಬ ಹೆಸರಿನಿಂದ ಇನ್ನೊಂದು ಆಶ್ರಮವನ್ನು ತೆರೆದರು. ಅನೇಕ ನಿರ್ಗತಿಕ ವಿಧವೆಯರಿಗೂ ಪತಿತ ನಾರಿಯರಿಗೂ ಅಲ್ಲಿ ಆಶ್ರಯವನ್ನು ಕೊಟ್ಟು ಅವರೆಲ್ಲರಿಗೆ ಒಂದೊಂದು ಉದ್ಯೋಗದ ವ್ಯವಸ್ಥೆಯನ್ನು ಮಾಡಿದರು.

ರಮಾಬಾಯಿಯವರ ಮಗಳಾದ ಮನೋರಮೆಯು ಅಮೇರಿಕೆಯಲ್ಲಿ ಮಾಧ್ಯಮಿಕ ಶಿಕ್ಷಣವನ್ನು ಮುಗಿಸಿ ಕೊಂಡು ಭಾರತಕ್ಕೆ ಬಂದಳು. ಮುಂದೆ ಮುಂಬಯಿ ವಿಶ್ವವಿದ್ಯಾಲಯದಿಂದ ಬಿ.ಎ. ಪಾಸಾಗಿ 'ಶಾರದಾ ಸದನ' ಮಾಧ್ಯಮಿಕ ಶಾಲೆಯ ಮುಖ್ಯಾಧ್ಯಾಪಿಕೆಯಾಗಿ ಕೆಲವು ಕಾಲ ಕೆಲಸ ಮಾಡಿದಳು. ೧೯೨೨ರಲ್ಲಿ ಗುಲಬುರ್ಗಾದಲ್ಲಿ ಒಂದು ಕ್ರಿಶ್ಚನ್ ಮಾಧ್ಯಮಿಕ ಶಾಲೆಯನ್ನು ತೆರೆದು ಅದನ್ನು ಚನ್ನಾಗಿ ಸಾಗಿಸಿಕೊಂಡು ಹೋದಳು. ಮುಂದೆ ತುಸು ದಿನಗಳಲ್ಲಿಯೇ ಮನೋರಮಾ ಆಕಸ್ಮಾತ್ತಾಗಿ ಮರಣಹೊಂದಿದಳು. ಇದರಿಂದಂತೂ ರಮಾಬಾಯಿ ಯವರಿಗೆ ದೊಡ್ಡ ಆಘಾತವಾಯಿತು. ಆದರೂ ತಮ್ಮ ಬಾಳಿನ ಗುರಿಯನ್ನು ಸಾಧಿಸುವಲ್ಲಿ ನಿರಂತರವೂ ಹೆಣಗುತ್ತ ಕೊನೆಗೆ ೧೯೨೩ ರಲ್ಲಿ ಸಮಾಜ ಸೇವಾ ಕಾರ್ಯಭಾರವನ್ನು ಬದಿಗಿರಿಸಿ ಚಿರಶಾಂತಿಯನ್ನು ಹೊಂದಿದರು !

ಒಂದು ಬಡ ಕುಟುಂಬದಲ್ಲಿ ಹುಟ್ಟಿ, ಅಸಹನೀಯ ವಾದ ಅಪರಿಮಿತ ಕಷ್ಟ-ಪರಂಪರೆಗಳ ಮಧ್ಯದಲ್ಲಿ ಬೆಳೆದು, ತನ್ನ ಜೀವನದ ಸಾರ್ಥಕತೆಯ ದಿವ್ಯ-ದರ್ಶನವನ್ನು ಕಂಡುಕೊಂಡು ಅದನ್ನನುಸರಿಸಿ ಅಮರಣ ನಾರೀಕುಲದ ಉನ್ನತಿಗಾಗಿ ಶ್ರಮಿಸಿದ ಆದರ್ಶ ಮಹಿಳಾ ಮಣಿ —ಪಂಡಿತಾ ರಮಾಬಾಯಿ. ಅವರ ಮೂಕ ಸಹನ ಶೀಲತೆಗೆ ಸೀಮೆಯಿಲ್ಲ. ಅದ್ಭುತ ಸಾಹಸಕ್ಕೆ ಮಿತಿಯಿಲ್ಲ. ನಿಃಸ್ವಾರ್ಥ ಸೇವೆಗೆ ನೆಲೆಯಿಲ್ಲ. ಅವರ ಸಚ್ಚರಿತ್ರ, ಸದಯಾಂತಃಕರಣ, ಅವಿಶ್ರಾಂತ ಪರಿಶ್ರಮಗಳಿಗೆ ಪರಿಮಿತಿ ಇಲ್ಲ. ಹೃದಯ ಭೇದಕ ಬಡತನದ ಬಾಳಿನ ಆ ಕಹಿ ಅನುಭವಗಳ ಬೇವಿನಲ್ಲಿ ಸಚ್ಚರಿತ್ರ, ಸೇವಾಭಾವ, ಪಾಂಡಿತ್ಯಗಳ ಬೆಲ್ಲವನ್ನು ಬೆರಿಸಿ ಬದುಕಿನುದ್ದಕ್ಕೂ

ಯುಗಾದಿಯನ್ನಾಚರಿಸಿ, ಭಾರತದ ನಿರ್ಭಾಗ್ಯ ನಾರೀ ಕುಲದ ಕಲ್ಯಾಣ ಪಂಚಾಂಗದ ಶ್ರವಣವನ್ನು ಮಾಡಿಸಿದ ಆ ಪೂಜ್ಯ ರಮಾಬಾಯಿಯವರು ನಮ್ಮ ಕೃತಜ್ಞತೆಗೆ ಪಾತ್ರರಾಗಿರುವರು. ಹೊಸ ಸಮಾಜ ನಿರ್ಮಾಣದ ಈಗಿನ ಕಾಲದಲ್ಲಿ ಪಂಡಿತ ರಮಾಬಾಯಿಯವರಂಥ ಸಮಾಜ ಸೇವಾ ಭಾವದ ನಾರಿಯರ ಉದಯವಾಗಲಿ ! ಭಾರತದ ಮಹಿಳಾ ಮಂಡಳಗಳ ಅಭಿವೃದ್ಧಿಯಾಗಿ ಅದು ರಾಷ್ಟ್ರೋದ್ಧಾರ ಕಾರ್ಯಕ್ಕೆ ಪ್ರೇಷಕವಾಗಲಿ !!

# ಭಾರತದಲ್ಲಿ ನೀರಾವರಿಯ ಹೊಸ ಯೋಜನೆಗಳು

ಲೇಖಕರು : ಶ್ರೀ ಆರ್. ಎಸ್. ಸೂರ್ಯವಂಶಿ, ಬಿ.ಎ.(ಆನರ್ಸ್)ಡಿ.ಇಡಿ.
[ ಅ. ಸಾ. ಟೆ. ಸಿ. ಎಮ್. ಧಾರವಾಡ ]

( ಕಳೆದ ಸಂಚಿಕೆಯಿಂದ ಮುಂದುವರೆದದ್ದು. )

**ಯೋಜನೆಗಳ ವಿವರ:**

**೯. ಘಟಪ್ರಭಾ ಯೋಜನೆ :**

ಘಟಪ್ರಭಾ ಹೊಳೆಗೆ ಧೂಪದಾಳದ ಹತ್ತಿರ ಈ ಪೂರ್ವದಲ್ಲಿಯೇ ಆಣೆಕಟ್ಟು ಕಟ್ಟಿ ನೀರಾವರಿ ನಡೆದಿತ್ತು. ನೀರಿನ ಪೂರೈಕೆಯನ್ನು ಹೆಚ್ಚು ಮಾಡಲು ಹಡಲ್ಗ ಮತ್ತು ಆಜರಗಳೆಂಬ ಎರಡು ಜಲಾಶಯ ಗಳನ್ನು ತಯಾರಿಸುವದು ಇರುತ್ತದೆ. ಈ ಯೋಜನೆಯ ಎಷ್ಟೋ ಕೆಲಸವು ಈಗಾಗಲೇ ಪೂರ್ತಿಗೊಳ್ಳುತ್ತ ಬಂದಿರುತ್ತದೆ. ಈ ಯೋಜನೆಯಿಂದ ವಿಜಾಪೂರ ಬೆಳಗಾವಿ ಜಿಲ್ಲೆಗಳಿಗೆ ನೀರಿನ ಪೂರೈಕೆಯಾಗುತ್ತದೆ.

**೧೦. ಗಂಗಾಪೂರ ಆಣೆಕಟ್ಟಿನ ಯೋಜನೆ :**

ಗೋದಾವರಿ ಹೊಳೆಯ ಉಗಮಸ್ಥಾನದಲ್ಲಿ ಗಂಗಾಪೂರ ಎಂಬ ಗ್ರಾಮದ ಹತ್ತಿರ ಈ ಯೋಜನೆ ಯನ್ನು ಕೈಕೊಳ್ಳಲಾಗಿದೆ. ಈ ಯೋಜನೆಯ ಕಾಲುವೆ ಯಿಂದ ಸುಮಾರು ೫೦-೬೦ ಸಾವಿರ ಎಕರೆ ಭೂಮಿಗೆ ನೀರಿನ ಪೂರೈಕೆಯಾಗುತ್ತದೆ. ಆಣೆಕಟ್ಟಿನ ಕೆಲಸವು ಬಹುಮಟ್ಟಿಗೆ ಮುಗಿದಂತಾಗಿದೆ.

**೧೧. ಕೊಯನಾ ಯೋಜನೆ :**

ಕೊಯನಾ ಹೊಳೆಯು ಸಹ್ಯಾದ್ರಿಯಲ್ಲಿ ಉಗಮ ವಾಗಿ ಮುಂದೆ ಕೃಷ್ಣಾ ನದಿಯನ್ನು ಕೂಡಿದೆ. ಈ ಹೊಳೆಗೆ ಕಟ್ಟಿದ ಆಣೆಕಟ್ಟು ಉತ್ತರ ಸಾತಾರ ಜಿಲ್ಲೆಯ ಜಾಲಕವಾಡಿ ಎಂಬ ಗ್ರಾಮದ ಹತ್ತಿರ ಇರುತ್ತದೆ. ಆಣೆಕಟ್ಟಿನ ಕೆಲಸದ ಬಹುಭಾಗ ಮುಗಿದಂತಾಗಿದೆ. ಈ ಯೋಜನೆಯು ಮಹತ್ವದ್ದು ಇದ್ದು, ಇದರಿಂದ ೪—೫ ಲಕ್ಷ ಎಕರೆ ಭೂಮಿಗೆ ನೀರಿನ ಪೂರೈಕೆ ಯಾಗುತ್ತದೆ.

**೧೨. ಲೋಅರ ಭವಾನಿ ಯೋಜನೆ :**

ಲೋಅರ (ಕೆಳ) ಭವಾನಿ ಹೊಳೆಯು ಕಾವೇರಿ ನದಿಯ ಉಪನದಿಯು ಇರುತ್ತದೆ. ಈ ಹೊಳೆಯು ನೀಲಗಿರಿ ಪರ್ವತದಲ್ಲಿ ಉಗಮವಾಗಿರುತ್ತದೆ. ಆಣೆಕಟ್ಟನ್ನು ಮದ್ರಾಸ ರಾಜ್ಯದಲ್ಲಿ ಕೋಯಿಮತ್ತೂರ ಜಿಲ್ಲೆಯ ಸತ್ಯಮಂಗಲಂ ಎಂಬಲ್ಲಿಂದ ಹತ್ತು ಮೈಲು ಮೇಲಕ್ಕೆ ಭವಾನಿ ನದಿಗೆ ಆಣೆಕಟ್ಟನ್ನು ಕಟ್ಟಲಾಗಿರುತ್ತದೆ. ಕೋಯಿಮತ್ತೂರ ಜಿಲ್ಲೆಗೆ ಈ ಯೋಜನೆಯಿಂದ ಬಹಳ ಲಾಭವಿರುತ್ತದೆ. ಸುಮಾರು ೩ ಲಕ್ಷ ಎಕರೆ ಭೂಮಿಗೆ ನೀರಿನ ಪೂರೈಕೆಯಾಗುತ್ತದೆ. ಮತ್ತು ೧೦ ಸಾವಿರ ಕಿಲೋ ವ್ಯಾಟು ವಿದ್ಯುತ್‌ಶಕ್ತಿ ದೊರೆಯಬಹುದು. ಈ ಆಣೆಕಟ್ಟಿನ ಕೆಲಸವು ಮುಕ್ತಾಯಗೊಂಡಿದೆ. ಖರ್ಚು ಸುಮಾರು ೯ ಕೋಟಿ ರೂಪಾಯಿ .

**೧೩. ವೀರದ ಆಣೆಕಟ್ಟಿನ ಯೋಜನೆ :**

ಪುಣೆ ಜಿಲ್ಲೆಯಲ್ಲಿ ವೀರ ಎಂಬ ಗ್ರಾಮದ ಹತ್ತಿರ ನೀರಾ ನದಿಗೆ ಆಣೆಕಟ್ಟು ಕಟ್ಟುವ ಕೆಲಸ ನಡೆದಿದೆ. ಈ ಯೋಜನೆಯಿಂದ ಸುಮಾರು ೧ ಲಕ್ಷ ಎಕರೆ ಭೂಮಿಗೆ ನೀರಿನ ಪೂರೈಕೆಯಾಗುವದು. ಈ ಯೋಜನೆಗೆ

ವಿದ್ಯುತ್ ಉತ್ಪಾದನೆ ಮಾಡುವ ವ್ಯವಸ್ಥೆ ಇದೆ. ಇದಕ್ಕೆ ಅಜಮಾಸು ೪ ಕೋಟಿ ರೂಪಾಯಿ ವೆಚ್ಚ ತಗಲ ಬಹುದು.

**೧೪. ರಾಧಾ ನಗರೀ ಆಣೆಕಟ್ಟಿನ ಯೋಜನೆ :**

ಕೋಲ್ಹಾಪೂರ ಜಿಲ್ಲೆಯಲ್ಲಿ ರಾಧಾನಗರೀ ಎಂಬ ಗ್ರಾಮದ ಹತ್ತರ ಭೋಗಾವತಿ ಎಂಬ ಹೊಳೆಗೆ ಆಣೆಕಟ್ಟು ಹಾಕುವರು. ಈ ಯೋಜನೆಯಿಂದ ಕೊಲ್ಹಾಪೂರ ಜಿಲ್ಲೆಗೆ ಸುಮಾರು ೨೦ ಸಾವಿರ ಎಕರೆ ಭೂಮಿಗೆ ನೀರಿನ ಪೂರೈಕೆಯಾಗುತ್ತದೆ. ಇಲ್ಲಿಯೇ ಒಂದು ವಿದ್ಯುತ್ ಗೃಹವನ್ನು ರಚಿಸುತ್ತಾರೆ. ಇದರಿಂದ ಉದ್ಯೋಗ ವ್ಯವಸಾಯ ಬೆಳಿಸುವ ಯತ್ನವಿದೆ.

**೧೫. ಜವಾಯೀ ಯೋಜನೆ :**

ಜವಾಯೀ ಹೊಳೆಯು ಅರವಲಿ ಬೆಟ್ಟದಲ್ಲಿ ಉಗಮವಾಗಿರುತ್ತದೆ. ಈ ಹೊಳೆಗೆ ಒಂದು ಆಣೆಕಟ್ಟು ಹಾಕುವರು. ಈ ಯೋಜನೆಯಿಂದ ಸುಮಾರು ೧-೧/೨ ಲಕ್ಷ ಎಕರೆ ಭೂಮಿಗೆ ನೀರನ್ನು ಉಣಿಸಲಾಗುವದು. ಇಲ್ಲಿ ವಿದ್ಯುತ್‌ಶಕ್ತಿ ಉತ್ಪಾದನಾ ಕೇಂದ್ರ ಮಾಡುವವರಿದ್ದಾರೆ. ಇದಕ್ಕೆ ಸುಮಾರು ೫ ಕೋಟಿ ರೂಪಾಯಿ ವೆಚ್ಚ ತಗಲ ಬಹುದೆಂದು ಅಂದಾಜು ಮಾಡಲಾಗಿದೆ.

**೧೬. ಭದ್ರಾ ಯೋಜನೆ :**

ಇದು ವಿವಿಧ ಉದ್ದೇಶದ ಯೋಜನೆ ಇರುವದು. ಮೈಸೂರು ರಾಜ್ಯದ ಚಿಕ್ಕ-ಮಗಳೂರ ಜಿಲ್ಲೆಯಲ್ಲಿ ಲಕ್ಕವಳ್ಳಿ ಎಂಬ ಗ್ರಾಮದ ಹತ್ತರ ಭದ್ರಾ ನದಿಗೆ ಅಡ್ಡವಾಗಿ ಒಂದು ಆಣೆಕಟ್ಟು ಕಟ್ಟಲಾಗುತ್ತಿದೆ. ಕೆಲಸವು ಮುಕ್ತಾಯಗೊಳ್ಳುತ್ತಾ ಬಂದಿದೆ. ೧೯೬೦ ರ ಸುಮಾರಿಗೆ ಪೂರ್ತಿಯಾಗ ಬಹುದು. ಇದರಿಂದ ೨ ಲಕ್ಷ ೨೪ ಸಾವಿರ ಎಕರೆ ಭೂಮಿಗೆ ನೀರು ಸಿಗಬಹುದು. ಮತ್ತು ೩೩ ಸಾವಿರ ಕಿಲೋವ್ಯಾಟುಗಳಷ್ಟು ವಿದ್ಯುತ್ ಶಕ್ತಿ ದೊರೆಯಬಹುದು. ಇದಕ್ಕೆ ಅಜಮಾಸ ೧೭ ಕೋಟಿ ೭೫ ಲಕ್ಷ ರೂಪಾಯಿ ವೆಚ್ಚ ತಗಲಬಹುದೆಂದು ಅಂದಾಜು ಮಾಡಲಾಗಿದೆ.

**೧೭. ರಾಜೋಳಿ ಬಂಡ ಯೋಜನೆ :**

ತುಂಗಭದ್ರಾ ಯೋಜನೆಯ ಸ್ಥಳದಿಂದ ಕೆಳಗೆ ೮೦ ಮೈಲು ದೂರದಲ್ಲಿ ತುಂಗಭದ್ರಾ ನದಿಗೆ ಅಡ್ಡವಾಗಿ ಆಣೆಕಟ್ಟು ಕಟ್ಟುವರು.

**೧೮. ತುಂಗಾ ಆಣೆಕಟ್ಟು**

ಮೈಸೂರ ರಾಜ್ಯದ ಶಿವಮೊಗ್ಗಾ ಜಿಲ್ಲೆಯ ಸಕ್ರೆ ಬೈಲಿನ ಹತ್ತರ ತುಂಗಾ ನದಿಗೆ ಅಡ್ಡವಾಗಿ ಆಣೆಕಟ್ಟು ಹಾಕುವ ಕೆಲಸವು ನಡೆದಿರುತ್ತದೆ.

**೧೯. ಅಂಬ್ಲಿಗೋಳ ಯೋಜನೆ :**

ಶಿವಮೊಗ್ಗಾ ಜಿಲ್ಲೆಯ ಶಿಕಾರಿಪೂರ ತಾಲೂಕಿನಲ್ಲಿ ಸಾಲೂರ ಹಳ್ಳಕ್ಕೆ ಅಡ್ಡವಾಗಿ ಒಡ್ಡು ಹಾಕುವ ಕೆಲಸವು ನಡೆದು ಪೂರ್ತಿಗೊಳ್ಳುತ್ತಾ ಬಂದಿದೆ.

**೨೦. ನಾಗಾರ್ಜುನ ಸಾಗರ :**

ಇದು ವಿವಿಧ ಉದ್ದೇಶದ ಯೋಜನೆ ಇರುತ್ತದೆ. ನಂದಿಗೊಂಡ ಗ್ರಾಮದ ಹತ್ತರ ಕೃಷ್ಣಾನದಿಗೆ ಅಡ್ಡವಾಗಿ ಒಂದು ಆಣೆಕಟ್ಟು ಕಟ್ಟಲಾಗುತ್ತದೆ. ಈ ಯೋಜನೆಯಲ್ಲಿ ೭೫ ಸಾವಿರ ಕಿಲೋವ್ಯಾಟು ಶಕ್ತಿಯುಳ್ಳ ಒಂದು ವಿದ್ಯುತ್ ಕೇಂದ್ರವನ್ನು ಕಟ್ಟಲಾಗುವದು. ಇದರಿಂದ ೩೪ ಲಕ್ಷ ಎಕರೆ ಭೂಮಿಗೆ ನೀರಿನ ಪೂರೈಕೆಯಾಗುತ್ತದೆ. ಇದರ ಕೆಲಸದ ಬಹುಭಾಗವು ಮುಗಿಯುತ್ತಾ ಬಂದಿದೆ. ಈ ಯೋಜನೆಗೆ ಸುಮಾರು ೭೫ ಕೋಟಿ ರೂಪಾಯಿ ಖರ್ಚು ತಗಲಬಹುದೆಂದು ಅಂದಾಜು ಮಾಡಲಾಗಿದೆ.

**೨೧. ರಿಹಾನ ಯೋಜನೆ :**

ಉತ್ತರ ಪ್ರದೇಶದ ಮಿರ್ಜಾಪೂರ ಜಿಲ್ಲೆಯಲ್ಲಿ ರಿಹಾನ ಎಂಬ ನದಿಗೆ ಒಡ್ಡು ಹಾಕುವರು. ಕೆಲಸವು ನಡೆದು ಇನ್ನು ೧-೨ ವರುಷಗಳಲ್ಲಿ ಪೂರ್ತಿಗೊಳ್ಳಬಹುದು. ಈ ಯೋಜನೆಯನ್ನು ಮುಕ್ತಾಯಗೊಳಿಸಲು ಅಜಮಾಸು ೪೫ ಕೋಟಿ ರೂಪಾಯಿ ವೆಚ್ಚ ತಗಲಬಹುದೆಂದು ಅಂದಾಜು ಮಾಡಲಾಗಿದೆ. ಇದಕ್ಕೆ ಒಂದು ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಬೇಕೆಂದು ಮಾಡಲಾಗಿದೆ.

ಇದರಂತೆ ಪಂಚವಾರ್ಷಿಕ ಯೋಜನೆಗಳಲ್ಲಿ ಅನೇಕ ನೀರಾವರಿ ಯೋಜನೆಗಳನ್ನು ಕೈಕೊಳ್ಳಲಾಗಿದೆ. ಎಷ್ಟೋ ಯೋಜನೆಗಳ ಫಲ ಈಗಾಗಲೇ ದೊರೆತಿದೆ. ಮತ್ತು ದೊರೆಯುತ್ತಲಿದೆ. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ನೀರಾವರಿಗಾಗಿ ೩೭೪ ಕೋಟಿ ರೂಪಾಯಿಗಳನ್ನೂ, ವಿದ್ಯುತ್ ಉತ್ಪಾದನೆಗಾಗಿ ೨೬೦ ಕೋಟಿ ರೂಪಾಯಿಗಳನ್ನೂ ಅದರಂತೆ ಎರಡನೇ ಪಂಚ

ವಾರ್ಷಿಕ ಯೋಜನೆಯಲ್ಲಿ ನೀರಾವರಿಗಾಗಿ ೩೮೧ ಕೋಟಿ ರೂಪಾಯಿಗಳನ್ನೂ ಮತ್ತು ವಿದ್ಯುತ್ ಉತ್ಪಾದನೆಗಾಗಿ ೪೨೭ ಕೋಟಿ ರೂಪಾಯಿಗಳನ್ನೂ ಮೀಸಲಾಗಿರಿಸಲಾಗಿದೆ.

ಅಂತೂ ನಮ್ಮ ನಾಡಿನ ನಾಯಕರು ಪಂಡಿತ ಜವಾಹರಲಾಲ ನೆಹರೂರ ನೇತೃತ್ವದಲ್ಲಿ ಟೊಂಕಕಟ್ಟಿ ಹಗಲಿರುಳು ದುಡಿಯುತ್ತಲಿದ್ದಾರೆ. ಭಾರತೀಯರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಯತ್ನಿಸುತ್ತಿದ್ದಾರೆ.

# ಪಾಠಗಳ ವಿಭಜನೆ

ವರ್ಗ : **೨ನೆಯ ವರ್ಗ.** ವಿಷಯ : **ಗಣಿತ [ಸಂಖ್ಯಾಜ್ಞಾನ]**

**ಲೇಖಕರು: ಶ್ರೀ ಆರ್. ಬಿ. ಸೊಸಗಾರ,** ಅ. ಮಾ. ಪ್ರಾಕ್ಟಿಸಿಂಗ ಸ್ಕೂಲ ಗಂ. ಮ. ಸ. ಟ್ರೇ. ಕಾಲೇಜ, ಧಾರವಾಡ

ವಿದ್ಯಾಖಾತೆಯವರು ಪ್ರತಿಯೊಂದು ವರ್ಗಕ್ಕೆ ಅನುಗುಣವಾದ ಅಭ್ಯಾಸ ಪತ್ರಿಕೆಯನ್ನು ತಯಾರಿಸಿರುತ್ತಾರೆ. ಒಂದು ವರ್ಷದಲ್ಲಿ ಆಯಾವರ್ಗಗಳಿಗೆ ಕಲಿಸ್ಪಡಬೇಕಾದ ವಿಷಯಗಳು ಅದರಲ್ಲಿ ನಿರೂಪಿಸಲ್ಪಟ್ಟಿರುತ್ತವೆ. ಶಿಕ್ಷಕನು ಪ್ರತಿಯೊಂದು ಸದರಿನಲ್ಲಿ ಬರುವ ವಿಷಯಗಳನ್ನು ' ಸುಲಭದಿಂದ ಕಠಿಣಕ್ಕೆ ನಾಗು ' ಎಂಬ ಶಿಕ್ಷಣ ತತ್ವಕ್ಕೆ ಅನುಸರಿಸಿ ಅನೇಕ ಪಾಠಗಳಲ್ಲಿ ವಿಭಜಿಸಿ ಕಲಿಸಬೇಕಾಗುತ್ತದೆ. ಎತ್ತರದ ಮೇಲಿರುವ ಗುಡಿಯನ್ನು ತಳದಿಂದ ಒಂದೊಂದೇ ಪಾವಟಿಗೆಯನ್ನೇರಿ ಮುಟ್ಟುವಂತೆ ಕ್ರಮ ಗೊಳಿಸಿ ತಯಾರಿಸಿದ ಈ ಪಾಠಗಳನ್ನು ಕ್ರಮವರಿತು ನಾಗಿಸಿ ಒಂದು ವಿಷಯದ ಪರಿಪೂರ್ಣ ಜ್ಞಾನವನ್ನು ಮಾಡಿಕೊಡಬೇಕಾಗುತ್ತದೆ. ಪ್ರಸ್ತುತ ಲೇಖನದಲ್ಲಿ ೨ನೆಯ ವರ್ಗಕ್ಕೆ ಸಂಖ್ಯಾ ಜ್ಞಾನವನ್ನು ಮಾಡಿಕೊಡುವಾಗ ತಯಾರಿಸಿಕೊಳ್ಳಬಹುದಾದ ಪಾಠಗಳ ಯೋಜನೆಯನ್ನು ತಿಳಿಸಲು ಯತ್ನಿಸಲಾಗಿದೆ.

ಯಾವದೊಂದು ಹೊಸ ವಿಷಯವನ್ನು ಕಲಿಸುವಾಗ ಆ ವಿಷಯದ ಬಗ್ಗೆ ಮಕ್ಕಳಲ್ಲಿದ್ದ ಪೂರ್ವ ಜ್ಞಾನವನ್ನು ಮೊದಲು ಅರಿತುಕೊಳ್ಳಬೇಕು. ' ಗೊತ್ತಿದ್ದರಿಂದ ಗೊತ್ತಿಲ್ಲದ್ದಕ್ಕೆ ನಾಗು ' ಎಂಬ ಶಿಕ್ಷಣ ತತ್ವಕ್ಕನುಸರಿಸಿ, ಮಕ್ಕಳಿಗೆ ಯಾವದೊಂದು ವಿಷಯದ ಬಗ್ಗೆ ಗೊತ್ತಿದ್ದ ಸಂಗತಿಗಳಿಂದ ಗೊತ್ತಿಲ್ಲದ ಸಂಗತಿಗಳನ್ನು ಕಲಿಸಬೇಕಾಗುತ್ತದೆ. ೨ನೆಯ ವರ್ಗದ ಮಕ್ಕಳಿಗೆ ೧೦೦೦ ದ ವರೆಗೆ ಸಂಖ್ಯಾಭ್ಯಾಸವನ್ನು ಮಾಡಿಕೊಡುವದದೆ. ಅವರು ೧ನೆಯ ವರ್ಗದಲ್ಲಿ ೧೦೦ ರ ವರೆಗೆ ಸಂಖ್ಯಾಜ್ಞಾನವನ್ನು ಮಾಡಿಕೊಂಡಿರುವರು. ಆದ್ದರಿಂದ ಈ ವರ್ಗದಲ್ಲಿ ೧೦೦ ರಿಂದ ಸಂಖ್ಯಾಜ್ಞಾನವನ್ನು ಪ್ರಾರಂಭಿಸಬೇಕು. ಮೊದಲು ೩-೪ ಪಾಠಗಳಲ್ಲಿ ೧೦೦ ರ ವರೆಗಿನ ಸಂಖ್ಯಾ ಜ್ಞಾನವನ್ನೇ ಆವರ್ತನ ಮಾಡಿಕೊಂಡು, ಮುಂದಿನ ಮೂಲಕ ಕುಂದು ಕೊರತೆಗಳೇನಾದರೂ ಕಂಡು ಬಂದಲ್ಲಿ ಸರಿಪಡಿಸಿಕೊಂಡು ಮುಂದೆ ನಾಗುವದು ವಿಹಿತ. ಇಲ್ಲವಾದರೆ ಹೊಸ ಪಾಠಗಳಲ್ಲಿ ಅಡೆತಡೆಗಳು ಮೇಲಿಂದ ಮೇಲೆ ತಲೆದೋರಿ ವಿಷಯವು ಮಕ್ಕಳಿಗೆ ಸರಿಯಾಗಿ ತಿಳಿಯದೆ ಬೇಸರ ಪಡುವರು.

ಆರಂಭದ ಹೊಸ ಪಾಠಗಳಲ್ಲಿ ಮಕ್ಕಳಿಗೆ ೧೦೦, ೨೦೦, ೩೦೦, ೪೦೦, ೫೦೦, ೬೦೦, ೭೦೦, ೮೦೦, ೯೦೦. ೧,೦೦೦, ಈ ಸಂಖ್ಯೆಗಳ ಜ್ಞಾನ ಮಾಡಿಕೊಡಬೇಕು, ಇದಕ್ಕಾಗಿ ನೂರರ ಮಣಿಗಳ ಸರಗಳನ್ನಾಗಲಿ, ಹತ್ತಿಯ ಕಾಳಿನ ಗಂಟುಗಳನ್ನಾಗಲಿ ವಸ್ತುಗಳಾಗಿ ಉಪಯೋಗಿಸಿಕೊಳ್ಳಬೇಕು. ವಸ್ತು ಸಹಾಯವಿಲ್ಲದೆ ಎಂದೂ ಸಂಖ್ಯಾ ಜ್ಞಾನ ಮಾಡಿ ಕೊಡಬಾರದು. ವಸ್ತು ಸಹಾಯವಿಲ್ಲದೆ ಮಾಡಿಕೊಟ್ಟ ಜ್ಞಾನವು ಯಾಂತ್ರಿಕವಾಗಿ ಸಂಖ್ಯೆಗಳ ನಿಜವಾದ ಪರಿಮಾಣವು ಮಕ್ಕಳಿಗೆ ಗೊತ್ತಾಗುವದಿಲ್ಲ. ಹೀಗಾಗುವಾಗ ೨೦೫, ೨೫೦ ಇವುಗಳಲ್ಲಿ ಯಾವುದು ದೊಡ್ಡದು ? ಎಂದು ಪ್ರಶ್ನೆಮಾಡಿದರೆ ೨೫೦ ಎಂದು ಉತ್ತರ ಬರುವದು. ಒಂದು ವೇಳೆ ೨೦೫ ಎಂದು ಹೇಳಿದರೂ ಅದು ಮಕ್ಕಳು ಪೂರ್ಣ ವಿಚಾರ ಮಾಡಿ ಕೊಟ್ಟ ಪ್ರಾಮಾಣಿಕ ಉತ್ತರವಾಗಲಾರದು. ವಸ್ತುಗಳಿಂದ ಪಾಠವು ಕ್ರೀಡಾರೂಪವಾಗಿ ಮಕ್ಕಳಿಗೆ ಆನಂದವೆನಿಸುವದು. ಅವರ ಅವಧಾನವು ಪಾಠದಲ್ಲಿ ಸ್ಥಿರವಾಗಿ ಉಳಿಯುವದು.

ಮೊದಲನೆಯ ಪಾಠದಲ್ಲಿ ಒಂದು ನೂರರ ಗಂಟನ್ನು ತೋರಿಸಿ, ಇದು ಎಷ್ಟರ ಗಂಟು ಆವೆ ? ಎಷ್ಟು ಕಾಳು ಆವೆ ? ಎಂಬುದನ್ನು ಕೇಳಿಕೊಂಡು ಒಂದು ನೂರರ ಗಂಟು, ಒಂದು ನೂರು ಕಾಳು ಎಂದು ಮಕ್ಕಳಿಂದ ಅನ್ನಿಸಿ

ಕೊಳ್ಳಬೇಕು. ಅದರಂತೆ ೨ ನೂರರ ಗಂಟು, ೨೦೦ ಕಾಳು, ಮೂರು ನೂರರ ಗಂಟು, ಮೂರು ನೂರು ಕಾಳು ಎಂದು ಹೇಳಿಕೊಡಬೇಕು. ಕರೆ ಹಲಿಗೆಯ ಮೇಲೆ ನೂ. ಗ, ಹ. ಗ, ಬಿ. ಕಾ, ಮನೆಗಳನ್ನು ಹಾಕಿ ಬರೆದು ತೋರಿಸ ಬೇಕು. ಶೂನ್ಯಗಳ ಉಪಯೋಗವನ್ನು ತಿಳಿಸಿ ಕೊಡ ಬೇಕು. ಬಳಿಕ ಮಕ್ಕಳೂ ತಮ್ಮ ಪಾಟಿಗಳಲ್ಲಿ ಮನೆಯನ್ನು ಹಾಕಿಕೊಂಡು ಬರೆಯ ಬೇಕು. ಇದೇ ಮೇರೆಗೆ ಮುಂದಿನ ೨ ಪಾಠಗಳಲ್ಲಿ ೪೦೦, ೫೦೦, ೬೦೦, ೭೦೦, ೮೦೦, ೯೦೦, ೧,೦೦೦ ಈ ಸಂಖ್ಯೆಗಳ ಜ್ಞಾನ ಮಾಡಿ ಕೊಡಬೇಕು.

ಇಷ್ಟಾದ ಬಳಿಕ ನೂರರ ಗಂಟುಗಳಲ್ಲಿ ಬಿಡಿಕಾಳು ಗಳನ್ನು ಕೂಡಿಸುತ್ತ ಹೋಗಬೇಕು. ೧ ನೂರರ ಗಂಟು ೧ ಬಿಡಿಕಾಳು ಅಂದರೆ ಒಂದು ನೂರು, ಒಂದು; ಒಂದು ನೂರಾ ಒಂದು; ೨ ನೂರರ ಗಂಟು, ೧ ಬಿಡಿಕಾಳು ಅಂದರೆ ಎರಡು ನೂರಾ ಒಂದು ಹೀಗೆ ೯೦೧ ರ ವರೆಗೆ ಸಾಗಿಸಬೇಕು. ಮುಂದಿನ ಪಾಠಗಳಲ್ಲಿ ೨, ೩, ೪, ೫, ೬, ೭, ೮, ೯ ಬಿಡಿಕಾಳುಗಳನ್ನು ಕೂಡಿಸುತ್ತ ೯೦೯ ರ ವರೆಗೆ ಕಲಿಸಬೇಕು. ಪ್ರತಿಸಾರಿ ವಸ್ತುಗಳನ್ನು ಇಡು ವದು, ಓದುವದು, ಬರೆಯುವದು ಇವು ಕ್ರಮವರಿತು ಸಾಗಲಿಕ್ಕೇಬೇಕು. ಇದಕ್ಕಾಗಿ ೫ ಪಾಠಗಳನ್ನು ರಚಿಸಿ ಕೊಳ್ಳಬಹುದು.

ಮುಂದಿನ ಪಾಠಗಳಲ್ಲಿ ನೂರರ ಗಂಟುಗಳ ಜೊತೆಗೆ ಹತ್ತರ ಗಂಟುಗಳನ್ನು ಕೂಡಿಸಿಕೊಳ್ಳಬೇಕು. ಒಂದು ನೂರರ ಗಂಟು ಒಂದು ಹತ್ತರ ಗಂಟು ಅಂದರೆ ಒಂದು ನೂರು, ಹತ್ತು, ಒಂದು ನೂರಾ ಹತ್ತು ಎಂದು ತಿಳಿಸಿ ಕ. ಹ. ಯ ಮೇಲೆ ಬರೆದು ತೋರಿಸಬೇಕು. ಹೀಗೆಯೇ ೨೧೦, ೩೧೦, ೪೧೦, ೫೧೦, ೬೧೦, ೭೧೦, ೮೧೦, ೯೧೦ ಈ ಸಂಖ್ಯೆಗಳನ್ನು ಒಂದೇ ಪಾಠದಲ್ಲಿ ಕಲಿಸಬಹುದು. ಬಳಿಕ ನೂರರ ಗಂಟುಗಳ ಜೊತೆಗೆ ೨, ೩, ೪, ೫, ೬, ೭, ೮, ೯ ಹತ್ತರ ಗಂಟುಗಳನ್ನು ಕೂಡಿಸುತ್ತ ೯೯೦ ರ ವರೆಗೆ ಮುಂದುವರಿಸಬೇಕು. ಮೇಲಿನಂತೆ ೫ ಪಾಠಗಳಲ್ಲಿ ಈ ವಿಷಯವನ್ನು ಮುಗಿಸಬಹುದು.

ಇನ್ನು ಮುಂದಿನ ಪಾಠಗಳಲ್ಲಿ ನೂರರ ಗಂಟುಗಳ ಜೊತೆಗೆ ಹತ್ತರ ಗಂಟುಗಳನ್ನೂ ಬಿಡಿಗಾಳುಗಳನ್ನೂ ಜೋಡಿಸಿಕೊಳ್ಳಬೇಕು. ಹೇಗಂದರೆ ೧ ನೂರರ ಗಂಟು, ೧ ಹತ್ತರಗಂಟು, ೧ ಬಿಡಿಕಾಳು ಅಂದರೆ ೧೦೦, ೧೦, ೧ ಒಂದು ನೂರಾ ಹನ್ನೊಂದು ಎಂದು ಮೊದಲು ವಸ್ತು ಸಹಾಯದಿಂದ ತೋರಿಸಿ, ಓದಿಸಿ ಬಳಿಕ ಕ. ಹ. ಯ ಮೇಲೆ ಬರೆದು ತೋರಿಸಬೇಕು. ಹೀಗೆ ೨೦೦ ರ ವರೆಗೆ ಒಂದು ಪಾಠದಲ್ಲಿ ಕಲಿಸಬಹುದು. ಸುಮಾರು ೧೦ ಪಾಠಗಳಲ್ಲಿ ೧೦೦ ರಿಂದ ೧೦೦೦ ವರೆಗೆ ಕ್ರಮವಾಗಿ ಹೇಳಲಿಕ್ಕೂ ಬರೆಯಲಿಕ್ಕೂ ಬರುವಂತೆ ಬಾಲಕರಿಗೆ ಜ್ಞಾನ ಮಾಡಿಕೊಡಬಹುದು.

ಪ್ರತಿ ಪಾಠದಲ್ಲಿಯೂ ಶಿಕ್ಷಕನು ವಸ್ತು ಸಹಾಯ ದಿಂದ ಸಂಖ್ಯಾಜ್ಞಾನ ಮಾಡಿಕೊಟ್ಟ ಬಳಿಕ, ಕೊಟ್ಟ ಸಂಖ್ಯೆಯನ್ನು ಓದಲಿಕ್ಕೂ, ಬರೆಯಲಿಕ್ಕೂ, ಕೊಟ್ಟ ಸಂಖ್ಯೆಗೆ ಸರಿಯಾಗಿ ವಸ್ತುಗಳನ್ನಿಟ್ಟು ತೋರಿಸಲಿಕ್ಕೂ, ಕೊಟ್ಟ ವಸ್ತುಗಳ ಸಂಖ್ಯೆಯನ್ನು ಹೇಳಲಿಕ್ಕೂ, ಬರೆದು ತೋರಿಸಲಿಕ್ಕೂ ಮಕ್ಕಳನ್ನು ತೊಡಗಿಸಿ ವಿಷಯವನ್ನು ಸಾಕಷ್ಟು ದೃಢಪಡಿಸಬೇಕು. ವಸ್ತು ಸಹಾಯದಿಂದ ವಿಷಯವು ಸಾಕಷ್ಟು ದೃಢಪಟ್ಟ ಬಳಿಕ ಪಾಠವನ್ನು ಭಾವವಾಚಕವಾಗಿ ಸಾಗಿಸಬೇಕು. ಹೇಗೆಂದರೆ— ೧ ನೂರರ ಗಂಟು, ೨ ಬಿಡಿಕಾಳು ಒಟ್ಟು ಎಷ್ಟು ಎಂಬು ದನ್ನು ಮಗು ವಸ್ತುಸಹಾಯವಿಲ್ಲದೆ ವಿಚಾರಮಾಡಿ ಹೇಳಬೇಕು. ಈಗ ಮಾತ್ರ ಅವನ ವಿಚಾರ ಶಕ್ತಿಗೆ ಹೆಚ್ಚು ಚಾಲನೆ ದೊರೆಯುವದು.

ಈ ವರ್ಗದ ಮಕ್ಕಳಲ್ಲಿ ವಿಚಾರಶಕ್ತಿಯು ಸಾಕಷ್ಟು ಬಲಗೊಂಡಿರುವದಿಲ್ಲ. ಆದ್ದರಿಂದ ಪ್ರಾರಂಭದ ಪಾಠ ಗಳಲ್ಲಿ ವಸ್ತುಗಳನ್ನು ಹೆಚ್ಚಾಗಿ ಉಪಯೋಗಿಸಬೇಕು. ಬಳಿಕ ಭಾವ ವಾಚಕವಾಗಿ ಪಾಠ ಸಾಗಿಸಬೇಕು. ಕೊನೆಯವರೆಗೂ ವಸ್ತುಗಳನ್ನುಪಯೋಗಿಸುತ್ತ ಹೋಗು ವದರಿಂದ ಮಗುವಿನ ವಿಚಾರಶಕ್ತಿಗೆ ಚಾಲನೆ ಇಲ್ಲದಂತಾ ಗುವದು. ಆದ್ದರಿಂದ ಪಾಠವು ಮೊದಲು ವಸ್ತು ವಾಚಕವಾಗಿಯೂ ಬಳಿಕ ಭಾವ ವಾಚಕವಾಗಿಯೂ ಸಾಗುವದು ಅವಶ್ಯವು.

ಮನುಷ್ಯನಿಗೆ ಬಾಹ್ಯ ಪ್ರಪಂಚದ ಅರಿವು ಪಂಚೇಂದ್ರಿಯಗಳ ಮೂಲಕ ಆಗುತ್ತದೆ. ಹೆಚ್ಚು ಇಂದ್ರಿಯಗಳಿಂದಾದ ಜ್ಞಾನವು ಹೆಚ್ಚು ಸ್ಪಷ್ಟವಾಗು ತ್ತದೆ. ವಸ್ತುಗಳನ್ನುಪಯೋಗಿಸುವದರಿಂದ ಕಣ್ಣು, ಕಿವಿ, ನಾಲಗೆ, ತ್ವಚೆ ಈ ನಾಲ್ಕೂ ಇಂದ್ರಿಯಗಳ ಉಪ ಯೋಗವಾಗುವದರಿಂದ ಮಗುವಿಗೆ ಸುಸ್ಪಷ್ಟವಾದ ಜ್ಞಾನವಾಗಲು ಸಹಾಯವಾಗುತ್ತದೆ.

ಶಿಕ್ಷಕನು ವರ್ಷಾರಂಭದಲ್ಲಿಯೇ ಪ್ರತಿಯೊಂದು ಸದರಿನಲ್ಲಿ ಬರುವ ವಿಷಯದಲ್ಲಿ ಹೀಗೆ ಪಾಠಗಳನ್ನು ರಚಿಸಿ ಕೊಂಡು ಪಾಠ ಸಾಗಿಸುವದರಿಂದ ಅವನ ಕಾರ್ಯವು ಸುಲಭ ವಾಗುವದು. ಮಕ್ಕಳಿಗೂ ಸರಿಯಾದ ಜ್ಞಾನವಾಗಿ ಕಲಿಯಲು ಹಗುರೆನಿಸುವದು.

# ಜೀವನ ಶಿಕ್ಷಣ ಪ್ರಪಂಚದಲ್ಲಿ

**ನಾಗರಾಳ:-** (ತಾ. ಮುಧೋಳ) ದಿನಾಂಕ ೨೨-೪-೫೯ ರಂದು ಇಲ್ಲಿಯ ಕ. ಹೆ. ಮ. ಶಾಲೆಗೆ ಸರಕಾರದಿಂದ ದೊರೆತ ಪಾಟಿ ಹಾಗು ಬಟ್ಟೆಯ ವಿತರಣವು ಇಲ್ಲಯ ಸರಪಂಚರೂ ಸ್ಕೂ. ಕಮೀಟಿಯ ಜೇಷ್ಠರು ಮನ್ನರೂ ಆದ ಶ್ರೀ ಬ. ಸ. ಶಿರಬೂರ ಇವರ ಹಸ್ತದಿಂದ ಮಾಡಲಾಯಿತು.

**ಇಂಡಿ:-** ದಿ. ೯-೪-೫೯ ರಂದು ನಮ್ಮ ಶಾಲೆಯ ಗಡಿಯಾರ ಹಾಗೂ ರಾಷ್ಟ್ರೀಯ ಮಹಾಪುರುಷರ ಫೋಟೋಗಳ ಉದ್ಘಾಟನೆಯು ಮೆ|| ಬಿ. ಡಿ. ಓ. ಸಾಹೇಬರು ಇಂಡಿ, ಇವರ ಅಮೃತ ಹಸ್ತದಿಂದ ಮಾಡಲ್ಪಟ್ಟಿತು. ಊರ ಪ್ರಮುಖರಾದ ಶ್ರೀ ಈರಪ್ಪಣ್ಣ ಸುರಪೂರ ಇವರು ಅಧ್ಯಕ್ಷತೆ ವಹಿಸಿದ್ದರು.

**ಬಿದರಿ:-** (ತಾ. ಜಮಖಂಡಿ) ದಿನಾಂಕ ೧೧-೪-೫೯ ರಂದು ನಿಯಮಿತ ಹಾಜರಿಯ ವಿದ್ಯಾರ್ಥಿನಿಯರಿಗೆ ಸರಕಾರದಿಂದ ಕೊಡಮಾಡಿದ ಅರಿವೆ ಹಾಗೂ ಪಾಟಿಪುಸ್ತಕಗಳನ್ನು ಇಲ್ಲಿಯ ಸ್ಥಳೀಯ ಪೂಜ್ಯ ಮಹಾಸ್ವಾಮಿಗಳಾದ ಶ್ರೀ ಮ. ನಿ. ಪ್ರ. ಸ್ವ. ಕುಮಾರಸ್ವಾಮಿಗಳವರ ಅಮೃತ ಹಸ್ತದಿಂದ ಹಂಚಲಾಯಿತು. ಈ ಭಾಗದ ಉಪಶಿಕ್ಷಣಾಧಿಕಾರಿಗಳಾದ ಶ್ರೀ ಹುಯಿಲಗೋಳರವರು ಹಾಜರಿದ್ದರು.

**ಹಂಜಗಿ:-** ದಿನಾಂಕ ೫-೪-೫೯ ರಂದು ಶ್ರೀ ಎಸ್. ಎಫ್. ಬಿರಾದಾರ ವಿದ್ಯಾ. ಪಿ. ಸಿ. ಸರಪಂಚ ಹಂಜಗಿ ಇವರ ಹಿರಿಯತನದಲ್ಲಿ ಉ. ಗಂ. ಮ. ಶಾಲೆಯಲ್ಲಿ ಸಭೆ ಏರ್ಪಡಿಸಲ್ಪಟ್ಟಿತು. ಇಲ್ಲಿ ಸರಕಾರದಿಂದ ಹೆಣ್ಣು ಮಕ್ಕಳಿಗೆ ದೊರೆತ ಸೀರೆ, ಫ್ರಾಕು, ಕೈವಸ್ತ್ರ, ಪೆನ್ಸಿಲ್ ಇವು ಹಂಚಲ್ಪಟ್ಟವು.

**ಹಾಲಕುಸುಗಲ್:-** ದಿನಾಂಕ ೩-೪-೫೯ ರಂದು ರಾಷ್ಟ್ರೀಯ ವಿಸ್ತರಣಾ ಯೋಜನೆಯವರು ನಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಹಂಚಲಿಕ್ಕೆ ಕೊಟ್ಟ ಹಾಲಿನ ಪುಡಿಯನ್ನು ಶ್ರೀ ದೊ. ರು. ನಿಡವಣಿ ಸ್ಕೂ. ಕ. ಚೇರಮನ್ ಇವರ ಹಸ್ತದಿಂದ ಪ್ರಾರಂಭಮಾಡಿತು. ರಾ. ವಿ. ಯೋಜನೆಯ ಅಧಿಕಾರಿಗಳಾದ ಶ್ರೀ ವ್ಹಿ ಎಸ್. ಅಗಡಿ, ಶ್ರೀಮತಿ ತಿಲೋತ್ತಮಾ ಸೊರಟೂರ ಮತ್ತು ರಾ. ವಿ. ಅಧಿಕಾರಿ ಶ್ರೀ ಜಾವೂರ, ದೇಸಾಯಿ ನಾಗಯ್ಯ ಮೊದಲಾದವರು ಉಪಸ್ಥಿತರಿದ್ದರು.

**ಬೆಳಗಾಂವಿ:-** ದಿನಾಂಕ ೫-೪-೫೯ ರಂದು ಕನ್ನಡ ಪ್ರಾಥಮಿಕ ಶಿಕ್ಷಣ ಪ್ರಗತಿ ಸಂಘದ ಪ್ರಪ್ರಥಮ ವಾರ್ಷಿಕ ಸಮ್ಮೇಲನವು ಕ.ಗಂ ಶಾ.ನಂ.೮ ಶಹಪೂರ ಇಲ್ಲಿ ನಡೆಯಿತು. ಸಮ್ಮೇಲನದ ಅಧ್ಯಕ್ಷತೆಯನ್ನು ಶಿಕ್ಷಣಾಧಿಕಾರಿ ಶ್ರೀ ಯರಗಲ್ಲರು ವಹಿಸಿದ್ದರು. ಪ್ರಿನ್ಸಿಪಾಲರು ಕು. ದೇಸಾಯಿ ವನಿತಾ ವಿದ್ಯಾಲಯ ಬೆಳಗಾಂವಿ ಅವರು ಶಿಕ್ಷಕರ ಕೈಬರಹ ಪತ್ರಿಕೆ ಉದ್ಘಾಟಿಸಿದರು. ಪ್ರದರ್ಶನದ ಉದ್ಘಾಟನೆಯನ್ನು ಶ್ರೀ ಯರಗಲ್ಲರು ಮಾಡಿದರು.

## ಜೀವನ ಶಿಕ್ಷಣ ಶಾಲೆಗಳಿಗೆ ಉದಾರ ಸಹಾಯ

| ಊರು | ದಿನಾಂಕ | ಸಹಾಯ ಮಾಡಿದವರ ಹೆಸರು | ಸಹಾಯ |
|---|---|---|---|
| **ಕುರಡಿಕೇರಿ** (ತಾ. ಹುಬ್ಬಳ್ಳಿ) | ೨೪-೩-೫೯ | ಶ್ರೀ ಶಿವಪ್ಪ ಸೋಬೇಗೂರ | ಧ್ವಜಸ್ತಂಭ |
| **ಬ್ಯಾಕೋಡ** (ತಾ. ಬಾಗೇವಾಡಿ) | ೨೫-೪-೫೯ | ಶ್ರೀ ಹಣಮಂತ್ರಿಯ ಬಿ. ಬಿರಾದಾರ | ಹಿತ್ತಾಳೆಯ ಬಕೇಟು ಜೆಲೆ ೧೭=೫೫ |
| | | ಶ್ರೀ ರಾಮನಗೌಡಾ ರಾ. ಬಿರಾದಾರ | ತಾಮ್ರದ ಕೊಡ ಜೆಲೆ ೧೬=೫೦ |
| | | ಶ್ರೀ ಖಂಡಪ್ಪಗೌಡಾ ಮ. ಪಾಟೀಲ | ಹಿತ್ತಾಳೆಯ ತಂಬಿಗೆ ಜೆಲೆ ೬=೫೦ |
| | | ಶ್ರೀ ಮಲ್ಲಪ್ಪಾ ಬಿರಾದಾರ | ಹಿತ್ತಾಳೆಯ ವಾಟಕ ಜೆಲೆ ೧=೫೫ |
| | | ಶ್ರೀ ವೀ. ಸೋ. ಬಿರಾದಾರ | ಕನ್ನಡಿ ಜೆಲೆ ೧೩=೦೦ |
| | | ಶ್ರೀ ರುದ್ರಯ್ಯ ವೀ. ಹಿರೇಮಠ | ಫೋಟೋ ಜೆಲೆ ೫=೦೦ |
| **ಹಡಗಲಿ** | ೨೭-೩-೫೯ | ಶ್ರೀ ಊರ ನಾಗರಿಕರು | i. ಹಾರ್ಮೋನಿಯಂ (ಪೇಟಿ) ಜೆಲೆ ೧೩೦=೦೦<br>ii ಝಾಂಗಟೆ ಜೆಲೆ ೨೩=೦೧<br>iii ಕೊಡ, ತಂಬಿಗೆ ಜೆಲೆ ೧೮=೦೦ |

Regd. No. B. 5375

ಭಾಗ ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧೫

(ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು)

ಮಾನ್ಯ ಎ. ಸಿ. ದೇವೇಗೌಡರು ಶಿಕ್ಷಣಾಧಿಕಾರಿಗಳು [D. E. O.] ವೈ ಸೊಲ್ಲಾಪುರ ಇವರ ಮುನ್ನುಡಿ.
ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಮುನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ವರ್ಷದ ಉಚಿತ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ಎಂಟು ಪುಟಗಳಲ್ಲಿ.
- ಆಗಷ್ಟ ದಿಂದ ಆಗಷ್ಟಕ್ಕೆ ಒಂದು ವರುಷ ಈ ಬಿಡಿ ಕುಸುಮ ಚಂದಾದಾರರಿಗೆ ೨ ಜಿಲ್ಲೆಯಲ್ಲಿ [ಅಂಚೆಚೀ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮವರೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪಋಣ ತಮ್ಮ ಶಿಕ್ಷಕ ಮಿತ್ರ ಏಳ್ಗೆಗೆ ಮೀಸಲು. ಗಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

**ಕಲ್ಯಾಣ ಕನ್ನಡ ಗುಡಿಯ ಕಾಣಿಕೆ**

**ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ!!!**

# "ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮನ ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸಿಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ ಪಾವಟೆಯವರು ಮುನ್ನುಡಿ ಬರೆದಂಥ ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯರ ಬಣ್ಣ ಬಣ್ಣಗಳಲ್ಲಿ ಭಾವ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ಭವ್ಯ ಪುಟಗಳ ಅಮರ ಸಾಹಿತ್ಯ ಗ್ರಂಥ ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.

ದಿ. ೧೫ ಆಗಸ್ಟ ಸ್ವಾತಂತ್ರ್ಯ ದಿನಸಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ ಓ. ಸ್ಟಾಫೇಬರ ಆನ್ಸೈ ಯಲ್ಲಿ ಪ್ರೊ. ಬಿ. ಟಿ. ಸಾಸನೂರ ಇವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ

ವಿವರಗಳಿಗೆ ಇಂದೇ ಈಗಲೇ ಬರೆಯಿರಿ.

ಸಾದಾ ಪ್ರತಿ ೩ ರೂ. ] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. [ ಸುಂದರ ಪ್ರತಿ ೪ ರೂ

ವಿಳಾಸ :— ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಾಂಬೆ, ಜಿಲ್ಲಾ:— ಬಿಜಾಪುರ.

Printed by Shri S. F. Kattimani, at Mahabar Power Printing Press, Hubli. Edited and Published by Sjts. M. G. Katti, B. M. Shintri, S. R. Tatti & Smti. P. A. Bhaskar, at the Kannada Jeevan Shikshan Office, Govt. Training College for Men, Dharwar.

ಎಪ್ರಿಲ್ ೧೯೫೯

ಬಿಡಿಪ್ರತಿ ೬ ಆಣೆ  ವಾ. ಚಂ. ೪

# ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು: **ಶ್ರೀ ಎಮ್. ಜಿ. ಹಂದ್ರಾಳ,** ಬಿ.ಎ.(ಆನರ್ಸ),ಎಸ್.ಈಡಿ.,ಡಿ.ಬಿ.ಈಡಿ ,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ

ಪ್ರಧಾನ ಸಂಪಾದಕರು: **ಶ್ರೀ ಎಮ್. ಜಿ. ಕಟ್ಟಿ,** ಬಿ.ಎ.(ಆನರ್ಸ), ಬಿ.ಟಿ.,ಡಿ.ಬಿ.ಈ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

— ಸದಸ್ಯರು —

**ಶ್ರೀಮತಿ ಪಿ. ಎ. ಭಾಸ್ಕರ,** ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

**ಶ್ರೀ ಬಿ. ಎಂ. ಶಿಂತ್ರಿ,** ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

**ಶ್ರೀ ಎಸ್. ಆರ್. ತಟ್ಟಿ,** ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

**ಸಂಪುಟ ೯ಳ** **ಏಪ್ರಿಲ್ ೧೯೫೯** **ಸಂಚಿಕೆ ೧೧**

## — ಪರಿವಿಡಿ —


| | | | | |
|---|---|---|---|---|
| ೧. | ಸಂವಾದಕೀಯ | .... | .... .... | ೧ |
| ೩. | ದೀಪದಾನ ಸಮಾರಂಭ | .... | .... .... | ೪ |
| ೩. | ಕೋಯನಾ ಅಣೆಕಟ್ಟು | .... | ಶ್ರೀ ಶಿಂತ್ರಿ ಬಸಪ್ಪನವರು | ೫ |
| ೪. | ರಾಘವಾಂಕನ ಹರಿಶ್ಚಂದ್ರ ಕಾವ್ಯ | .... | ಶ್ರೀ ಆಯ್. ಎಸ್. ಬಿದರಿ | ೭ |
| ೫. | ಸಮಾಜ ಶಿಕ್ಷಣದ ಬಗೆಗೆ ಸಾರ್ವಜನಿಕರ ಅಭಿಪ್ರಾಯಗಳು ಹಾಗು ಅವುಗಳನ್ನು ಕಲೆಹಾಕಲು ಮಾಡಿದ ಪ್ರಯೋಗ | .... | ಡಾ. ಎಮ್. ಝಡ್. ಖಾನ | ೧೩ |
| ೬. | ಭಾರತದಲ್ಲಿ ನೀರಾವರಿಯ ಹೊಸಯೋಜನೆ | .... | ಶ್ರೀ ಆರ್. ಎಸ್. ಸೂರ್ಯವಂಶಿ | ೧೪ |
| ೭. | ಶಕ್ತಿಯ ಕೇಂದ್ರೀಕರಣವು ಅನಿಷ್ಟಮೂಲವು | .... | ಶ್ರೀ ಹ. ಗ. ಜೋಶಿ | ೧೧ |
| ೮. | ಶಿಕ್ಷಕರಿಗೆ ಮನಃಶಾಸ್ತ್ರದ ಮೂಲಭೂತ ಸಂಗತಿಗಳ ಜ್ಞಾನವು ಬೇಕು | .... | ಶ್ರೀ ತಟ್ಟಿ ರಾಮರಾಯರು | ೧೪ |
| ೯. | ನಾನು ಶಿಕ್ಷಕನೇ | .... | ಶ್ರೀ ಎಲ್. ಎಸ್. ಪಾಟೀಲ | ೧೬ |
| ೧೦. | ಜೀವನ ಶಿಕ್ಷಣ ಶಾಲೆಗಳ ಒಂದು ಒಳನೋಟ | .... | ಶ್ರೀ ಬ. ಮು. ಶ್ಯಾಡಗುಪ್ಪಿ | ೧೭ |
| ೧೧. | ಜೀವನ ಶಿಕ್ಷಣ ಪ್ರಪಂಚದಲ್ಲಿ | .... | .... .... | ೧೮ |

# ನಮ್ಮ ಹೊಸ ಪ್ರಿನ್ಸಿಪಾಲರು

**ಶ್ರೀಯುತ ಎಮ್. ಜಿ. ಕಟ್ಟಿ,** ಬಿ. ಎ. (ಆನರ್ಸ್), ಬಿ. ಟಿ., ಡಿ. ಬಿ. ಈ.

೧೯೫೯ನೆಯ ಮಾರ್ಚ ೨೨ನೆಯ ದಿನಾಂಕ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲ ಸ್ಥಾನಕ್ಕೆ ನಿಯುಕ್ತರಾದ ಶ್ರೀಮಾನ್ ಎಮ್. ಜಿ. ಕಟ್ಟಿಯವರು ಅಧಿಕಾರ ಸೂತ್ರಗಳನ್ನು ವಹಿಸಿಕೊಂಡರು. ಅವರು ತಮ್ಮ ಈ ಹುದ್ದೆಯ ಕೂಡ "ಜೀವನ ಶಿಕ್ಷಣ" ಪತ್ರಿಕೆಯ ಸಂಪಾದಕತ್ವದ ಹೊಣೆಯನ್ನೂ ಹೊತ್ತುಕೊಂಡುದರಿಂದ ಅದರ ವಾಚಕ ವರ್ಗದ ಸದಸ್ಯರಿಗೆ ಅವರ ಪರಿಚಯವು ಅವಶ್ಯವೆನಿಸಿದೆ. ತನ್ನಿಮಿತ್ತವಾಗಿ ಸಂಕ್ಷಿಪ್ತದಲ್ಲಿ ಅವರ ಪರಿಚಯವನ್ನಿಲ್ಲಿ ಮಾಡಿಕೊಡಲು ಹವಣಿಸಿದೆ.

ಶ್ರೀಮಾನ್ ಮಧ್ವಗೋಪಾಲಾಚಾರ್ಯ ಕಟ್ಟಿಯವರು ಮೂಲತಃ ಹಾವೇರಿ ತಾಲೂಕಿನವರು. ಶ್ರೀಯುತರ ತಂದೆಯವರ ಮೂಲ ಮನೆತನವು ಇಟಗಿ. ಅವರು ಕಟ್ಟಿ ಮನೆತನಕ್ಕೆ ದತ್ತು ಹೋದುದರಿಂದ ಅವರ ಮನೆತನದ ಹೆಸರು ಕಟ್ಟಿಯಿಂದಾಯಿತು. ಆ ಕಟ್ಟಿ ಮನೆತನದ ಪೂರ್ವಜರು ಸಾತೇನಹಳ್ಳಿಯಿಂದ ವಲಸೆ ಬಂದು ಕರ್ಜಗಿಯಲ್ಲಿ ನೆಲಸಿದರು. ಸಾತೇನಹಳ್ಳಿಯಿಂದ ವಲಸೆ ಬಂದುದರಿಂದ ಸಾತೇನಹಳ್ಳಿ ಎಂಬ ಅಭಿಮಾನದಿಂದಲೂ ಇವರನ್ನು ಕರೆಯಹತ್ತಿದರು. ಇವರ ತಂದೆಯವರು "ಸಾತೇನಹಳ್ಳಿ ಮಾಸ್ತರರೆಂದೇ" ಪ್ರಸಿದ್ಧರಾಗಿ ಹೋದರು.

ಇವರ ತಂದೆಯವರಾದ ಶ್ರೀ ಗೋಪಾಲಾಚಾರ್ಯರು ಪ್ರಾಥಮಿಕ ಶಿಕ್ಷಕರಾಗಿದ್ದರಲ್ಲದೆ ಗಂ. ಮ. ಸ. ಟ್ರೇನಿಂಗ ಕಾಲೇಜಕ್ಕೆ ಸಂಲಗ್ನವಾದ ಪ್ರಾಥಮಿಕ ಪ್ರಾಯೋಗಿಕ ಶಾಲೆಯಲ್ಲಿ ಸತತವಾಗಿ ಹದಿನಾಲ್ಕು ವರುಷ ಸೇವೆ ಸಲ್ಲಿಸಿ 'ಒಳ್ಳೇ ಮಾಸ್ತರರೆಂಬ' ಹೆಸರು ಗಳಿಸಿದರು. ಶ್ರೀಯುತರಲ್ಲಿಯ ಭ್ರಾತೃವಾತ್ಸಲ್ಯವು ಇಂದಿಗೂ ಅವರನ್ನು ಜನತೆ ನೆನೆಸುವಂತೆ ಮಾಡಿದೆ. ಇಂದು 'ಜೀವನ ಶಿಕ್ಷಣ'ವೆಂಬ ಹೆಸರು ಪಡೆದ ಈ ಪತ್ರಿಕೆಯು ಆಗ್ಗೆ "ಪ್ರಾಥಮಿಕ ಶಿಕ್ಷಣ' ಎಂಬ ಹೆಸರು ತಾಳಿದ್ದಿತು. ಶ್ರೀಮಾನ್ ಗೋಪಾಲಾಚಾರ್ಯರ ಸೇವೆಯ ಸಂಬಂಧವು ಆ ಪತ್ರಿಕೆಯ ಜೊತೆಗೂ ಇದ್ದಿತು. ಆವರು ಮಕ್ಕಳ ಶಿಕ್ಷಣದ ಉನ್ನತಿಗಾಗಿ ಅಹರ್ನಿಶ ದುಡಿಯುತ್ತಲಿದ್ದರು. ಶ್ರೀಯುತರು ಧರ್ಮಭೀರುಗಳೂ, ದೇವಭಕ್ತರೂ ಆಗಿದ್ದರು.

ಇಂಥ ಪರಿಪಠಿಯಲ್ಲಿ ಬೆಳೆದಿರುವರೆಂದೋ ಏನೋ ನಮ್ಮ ಪ್ರಿನ್ಸಿಪಾಲರಾದ ಶ್ರೀಯುತ ಕಟ್ಟಿಯವರೂ ಧರ್ಮಭೀರುಗಳೂ, ದೇವನಲ್ಲಿ ಅಪಾರ ಶ್ರದ್ಧೆಯುಳ್ಳವರೂ ಆಗಿದ್ದಾರೆ. ಅವರು ಸರಳ ಹಾಗೂ ಸಾದಾ ಜೀವಿಗಳಾಗಿದ್ದಾರೆ. ಇವರನ್ನು ನೋಡಿದ ಯಾರಾದರೂ 'ಓ ಇವರೇ ಈ ಕಾಲೇಜದ ಪ್ರಿನ್ಸಿಪಾಲರೇ?' ಎಂದು ಆಶ್ಚರ್ಯ ಉದ್ಗಾರ ತೆಗೆಯದೆ ಇರರು. ಇಂಥ ಸಾದಾತನವನ್ನು ಇರುಪಿಕೆಯಲ್ಲಿ ಇರಿಸಿಕೊಂಡು ಬಂದಿದ್ದಾರೆ.

ಶ್ರೀಮಾನ್ ಕಟ್ಟಿಯವರ ಶೈಕ್ಷಣಿಕ ಅರ್ಹತೆಗಳು: ಬಿ. ಎ. (ಆನರ್ಸ) ದ್ವಿತೀಯ ಶ್ರೇಣಿ—೧೯೩೮, ಬಿ. ಟಿ.— ೧೯೪೦, ಡಿ. ಬಿ. ಈ.— ೧೯೪೯. ೧೯೪೦ರಲ್ಲಿ ಬಿ. ಟಿ. ಪರೀಕ್ಷೆಯನ್ನು ಮುಗಿಸಿಕೊಂಡು ಬಂದ ನಂತರ ಇವರ ನೌಕರಿಯು ಧಾರವಾಡದ ಸರಕಾರಿ ಹೈಸ್ಕೂಲದಲ್ಲಿ ಪ್ರಾರಂಭವಾಯಿತು. ಅಂದಿನಿಂದ ಇಂದಿನ ವರೆಗೆ ವಿವಿಧ ಕ್ಷೇತ್ರಗಳಲ್ಲಿ ಕಾರ್ಯಕ್ಷಮತೆಯಿಂದ ಸೇವೆಸಲ್ಲಿಸುತ್ತ ಬಂದಿದ್ದಾರೆ. ಟ್ರೇನಿಂಗ ಕಾಲೇಜದಲ್ಲಿ ಈ ಮೊದಲು ೧೯೪೭ ರಿಂದ ೧೯೫೨ರ ವರೆಗೆ ಪ್ರಾಧ್ಯಾಪಕರೆಂದು ದುಡಿದು ಅನುಭವ ಪಡೆದವರಾಗಿದ್ದಾರೆ. ಕೆಲ ದಿನ ಧಾರವಾಡದ ಮುನಸಿಪಲ್ ಸ್ಕೂಲ ಬೋರ್ಡ ಏ.ಓ. ಎಂದೂ ಕೆಲಸ ಮಾಡಿದರು. ಪ್ರಿನ್ಸಿಪಾಲ ಹುದ್ದೆಯನ್ನು ವಹಿಸಿಕೊಳ್ಳುವ ಪೂರ್ವದಲ್ಲಿ ಧಾರವಾಡದ ಪದವೀಧರರ ಜೀವನ ಶಿಕ್ಷಣ ಕೇಂದ್ರದಲ್ಲಿ ಪ್ರಾಧ್ಯಾಪಕರೆಂದು ಕೆಲಸ ಮಾಡುತ್ತಲಿದ್ದರು. ಆಂಥ ಒಂದು ಜೀವನ ಶಿಕ್ಷಣ ಕೇಂದ್ರದಿಂದ ಈ ಸಂಸ್ಥೆಗೆ ಬಂದುದು ಒಂದು ಅವಿಚ್ಛಿನ್ನವಾದ ಶೈಕ್ಷಣಿಕ ಸೂತ್ರದ ಸಂಕೇತವೆಂದೇ ಹೇಳಬಹುದು. ಅವರ ಈ ಬರುವಿಕೆಯು ಜೀವನ ಶಿಕ್ಷಣ ಪ್ರಪಂಚಕ್ಕೆ ಲಾಭದಾಯಕವಾದ ಸಂಗತಿಯಾಗಿ ಪರಿಣಮಿಸಿದೆ. ಶ್ರೀಮಾನ್ ಕಟ್ಟಿಯವರು ೧೯೪೯ರಲ್ಲಿ ಆ ಸಂಸ್ಥೆಯಲ್ಲಿಯೇ ಜೀವನ ಶಿಕ್ಷಣದ ದೀಕ್ಷೆಯನ್ನು ಪಡೆದು ಜ್ಞಾನದೀಪವನ್ನು ಹೊತ್ತಿಸಿಕೊಂಡವರಾಗಿದ್ದಾರೆ.

ಶ್ರೀಮಾನ್ ಕಟ್ಟಿಯವರು, ಅನುಭವದ ಜೊತೆಗೆ ಹಗಲು ರಾತ್ರಿ ದುಡಿಯುವ ಚಟವನ್ನೂ ರೂಢಿ ಮಾಡಿಕೊಂಡವರಾಗಿದ್ದಾರೆ. ಅವರು ಕೆಲಸದಲ್ಲಿ ಮಗ್ನರಾದರೆ ತೀರಿತು; ಹಸಿವೆ ನೀರಡಿಕೆಗಳ ಪರಿವೆ ಕೂಡ ಇರುವದಿಲ್ಲ. ಸರಕಾರಿ ಕೆಲಸದಲ್ಲಿ ತುಂಬಾ ಜಾಗರೂಕತೆ ಉಳ್ಳವರು. ಎಷ್ಟು ಜಾಗ್ರತೆ ವಹಿಸಿದರೂ ಅವರಿಗೆ ತೃಪ್ತಿ ಇರದು.

ಈ ಸಂಸ್ಥೆಯ ಉತ್ಕರ್ಷಕ್ಕಾಗಿ ಅನೇಕ ಮಹನೀಯರು ದುಡಿದು, ಇದರ ಕೀರ್ತಿಯನ್ನು ಬೆಳಿಸಿದ್ದಾರೆ. ಶತಮಾನೋತ್ಸವವನ್ನು ಆಚರಿಸಿದ ಈ ಸಂಸ್ಥೆಯ ಇತಿಹಾಸವು ದೊಡ್ಡದಿದೆ ಇಂಥ ಮಹಾಸಂಸ್ಥೆಯನ್ನು ಇನ್ನಷ್ಟು ಮುನ್ನಡೆಸಿಕೊಂಡು ಹೋಗುವ ಶಕ್ತಿಯನ್ನು ಪರಮಾತ್ಮನು ಶ್ರೀಯುತರಿಗೆ ದಯಪಾಲಿಸಲೆಂದು ಬೇಡಿಕೊಂಡು ಈ ಸಂಕ್ಷಿಪ್ತ ಪರಿಚಯವನ್ನು ಮುಗಿಸುವೆ.

ಜೈ ಹಿಂದ

**ಹ. ಗೋ. ಜೋಶಿ**

# ಸಂಪಾದಕೀಯ

## ರಾಷ್ಟ್ರಪತಿಗಳ ಸಂಚಾರ

ನಮ್ಮ ರಾಷ್ಟ್ರಪತಿಗಳಾದ ಡಾ. ಬಾಬು ರಾಜೇಂದ್ರ ಪ್ರಸಾದರು ಮಾರ್ಚ ತಿಂಗಳ ೧೫ನೆಯ ದಿನಾಂಕದಿಂದ ಇಂಡೋ-ಚೀನದ ತಮ್ಮ ಸದಿಚ್ಛಾ ಸಂಚಾರವನ್ನು ಹನ್ನೆರಡು ದಿನಗಳ ಪರ್ಯಂತ ಕೈಕೊಂಡು ಮಾರ್ಚ ೨೭ನೆಯ ದಿನಾಂಕ ಭಾರತಕ್ಕೆ ಮರಳಿ ಬಂದರು. ಅವರು ತಮ್ಮ ಈ ಸಂಚಾರದಲ್ಲಿ, ಉತ್ತರ ವೀಟನಾಮ, ದಕ್ಷಿಣ ವೀಟನಾಮ, ಲಾವೋಸ, ಕಾಂಬೋಡಿಯಾ ಮೊದಲಾದವುಗಳನ್ನು ಸಂಚರಿಸಿ, ಶಾಂತಿಸೌಹಾರ್ದಗಳ ಸಂದೇಶವನ್ನು ಬೀರಿಬಂದರು. ರಾಷ್ಟ್ರಪತಿಗಳು ಉತ್ತರ ವೀಟನಾಮದ ರಾಜಧಾನಿಯಾದ ಹಾನೋಯಿಯಲ್ಲಿ ಆರು ವಿಶ್ವವಿದ್ಯಾಲಯಗಳ ಪ್ರತಿನಿಧಿಗಳ ಸಭೆಯಲ್ಲಿ ಭಾಷಣಮಾಡುತ್ತ 'ಜಗತ್ತಿನಲ್ಲಿ ಅಹಿಂಸೆಯೊಂದೇ ರಚನಾತ್ಮಕ ಸಹಕಾರವನ್ನು ಸಾಧಿಸಬಲ್ಲದು; ಸಹಜೀವನವನ್ನು ಬಿಟ್ಟರೆ ವಿನಾಶವೇ ನಮಗೆ ಗತಿ' ಎಂದು ಹೇಳಿದರು. ಅವರು ಭಗವಾನ್ ಬುದ್ಧನ ಸತ್ಯಪ್ರೀತಿಗಳ ಸಂದೇಶವನ್ನು ಅರ್ಥಮಾಡಿಕೊಳ್ಳಬೇಕೆಂದು ಅಲ್ಲಿಯ ಜನತೆಗೆ ಕರೆಯಿತ್ತರು.

ರಾಜೇಂದ್ರ ಪ್ರಸಾದರು ಹೋದಲೆಲ್ಲ ಅವರಿಗೆ ಆ ಆ ದೇಶಗಳ ಜನತೆಯಿಂದ ಅಭೂತಪೂರ್ವ ಸ್ವಾಗತವು ದೊರೆಯುತ್ತಿತ್ತಲ್ಲದೆ; ಜನತಾ ಪ್ರತಿನಿಧಿಗಳು ಆದರಾತಿಥ್ಯವನ್ನು ನೀಡುತ್ತಿದ್ದರು. ಪ್ರಸಾದರು ತಮ್ಮ ಸಂಚಾರದಲ್ಲಿ ಹಳ್ಳಿಗಳಿಗೂ ಸಂದರ್ಶನವಿತ್ತು; ಅಲ್ಲಿಯ ಜನತೆಯ ಜೊತೆಗೂಡಿ ಅವರ ಮಧ್ಯದಲ್ಲಿ ಸುಖವನ್ನು ಅನುಭವಿಸಿದರು. ಪ್ರಸಾದರು ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರಲ್ಲದೆ ಮಾರ್ಚ ೨೪ನೆಯ ದಿನಾಂಕ ಹಾನೋಯಿಯಲ್ಲಿ ಅಧ್ಯಕ್ಷರಾದ ಹೋಚಿಮಿನ್ ರೊಡನೆ ಹೋಳಿಯಾಡಿದರು. ಮತ್ತು ಅಲ್ಲಲ್ಲಿ ಪ್ರಸಿದ್ಧ ಪಡೆದ ಬೌದ್ಧವಿಹಾರಗಳಿಗೆ, ವಸ್ತುಸಂಗ್ರಹಾಲಯಗಳಿಗೆ ಸಂದರ್ಶನವಿತ್ತು ಸಾಂಸ್ಕೃತಿಕ ಸಂಬಂಧವನ್ನು ಪುನರುಜ್ಜೀವನಗೊಳಿಸಿದರು. ಅಜಾತಶತ್ರುಗಳೆನಿಸಿದ ರಾಜೇಂದ್ರರ ಈ ಸದಿಚ್ಛಾ ಸಂಚಾರವು ಭಾರತಕ್ಕೆ ಅನೇಕ ಸ್ನೇಹಿತರನ್ನು ತಂದು ಕೊಡುವಂತಾಗಿದೆ. ಇಂಥ ಅಜಾತಶತ್ರುಗಳಿಗೆ ದೇವರು ಆಯುರಾರೋಗ್ಯಗಳನ್ನು ದಯಪಾಲಿಸಲಿ!

ಅತ್ತ ರಾಜೇಂದ್ರರು ಸದಿಚ್ಛಾ ಸಂಚಾರವನ್ನು ಕೈಕೊಂಡು ಬಂದರೆ ಇತ್ತ ಭಾರತೀಯ ಕಾಂಗ್ರೆಸ್ಸಿನ ನೂತನ ಅಧ್ಯಕ್ಷಿಣಿಯರಾದ ಶ್ರೀಮತಿ ಇಂದಿರಾ ಗಾಂಧಿಯವರು ಕಾಂಗ್ರೆಸ್ಸಿಗರಲ್ಲಿ ನವ ಚೈತನ್ಯವನ್ನು ತುಂಬಲು ಬಿಸಿರಕ್ತದ ತರುಣರನ್ನು ನಿಸ್ವಾರ್ಥ ಸೇವೆಗೆ, ಸಮಾಜ ಸೇವೆಗೆ ಕಟಿಬದ್ಧಗೊಳಿಸಲು ದೇಶದಲ್ಲಿ ಅಡ್ಡಾಡುತ್ತಿದ್ದಾರೆ. ಶ್ರೀಮತಿಯವರು ಮುಂಬೈಗೆ ಬಂದಾಗ ಅನೇಕ ಹಿತೋಕ್ತಿಗಳನ್ನಾಡಿ ದೇಶದ ಜನತೆಗೆ ನಾಗಪೂರ ಕಾಂಗ್ರೆಸ್ಸಿನ ಗೊತ್ತುವಳಿಯಾದ ಸಹಕಾರಿ ಕೃಷಿ ವ್ಯವಸಾಯವನ್ನು ಕಾರ್ಯರೂಪಕ್ಕಿಳಿಸಲು ಕೇಳಿಕೊಂಡರು ಶ್ರೀಮತಿಯವರು ಮುಂಬೈಯಲ್ಲಿಯ ಒಂದು ಕಾರ್ಯಕ್ರಮದಲ್ಲಿ ಭಾಷಣಮಾಡುತ್ತ ಭಾರತವು ಇಂದು ದಾರಿದ್ರ್ಯ ಹಾಗು ನಿರುದ್ಯೋಗಗಳ ವಿರುದ್ಧ ಯುದ್ಧ ಹೂಡಿದೆ. ಎರಡೂ ಅನಿಷ್ಟಗಳನ್ನು ಹೊಡೆದೋಡಿಸಿ ಈ ಯುದ್ಧದಲ್ಲಿ ಭಾರತೀಯರು ಸ್ವಾತಂತ್ರ್ಯವನ್ನು ಗಳಿಸಬೇಕಾಗಿದೆ. ಇದಕ್ಕೆ ಎಲ್ಲರ ಸಹಕಾರವೂ ಅಗತ್ಯವೆಂದು ಪ್ರತಿಪಾದಿಸಿದರು. ರಾಷ್ಟ್ರ ನಿರ್ಮಾಣಕಾರ್ಯದಲ್ಲಿ ಸ್ತ್ರೀಯರೂ ಬಹಳಷ್ಟು ನೆರವು ನೀಡಬೇಕೆಂದು ಕೇಳಿಕೊಂಡರು. ಶ್ರೀಮತಿಯವರು ಕಾಂಗ್ರೆಸ್ಸ ಸಂಸ್ಥೆಯು ಜನ್ಮತಳೆದಂದಿನಿಂದ ಇಂದಿನವರೆಗೆ ಆಗಿಹೋದ ಸ್ತ್ರೀ ಅಧ್ಯಕ್ಷಿಣಿಯರಲ್ಲಿ ನಾಲ್ಕನೆಯವರು. ಅವರು ಕಾಂಗ್ರೆಸ್ಸಿನ ಅಧ್ಯಕ್ಷಿಣಿಯರಾಗಿ ಆಯ್ಕೆಗೊಂಡ ಈ ಸಮಯವೂ ಕಠಿಣವಾದುದೇ ಆಗಿದೆ. ನಾಗಪೂರ ಗೊತ್ತುವಳಿಯಾದ ಸಹಕಾರಿ ಪದ್ಧತಿಯ ಒಕ್ಕಲುತನವನ್ನು ಅನೇಕ ಮುತ್ಸದ್ದಿಗಳು ವಿರೋಧಿಸುತ್ತಿರುವದುಂಟು. ಅದರ ಕಾರ್ಯಾಚರಣೆಗೆ ಪಂಡಿತಜೀಯವರು ಕಟಿಬದ್ಧರಾದಂತೆ ಶ್ರೀಮತಿಯವರೂ ದೃಢನಿಶ್ಚಯರಾಗಿದ್ದಾರೆ. ಅವರ ಈ ನಿರ್ಧಾರದ ಮುನ್ನಡೆಯಲಿ; ಜನತೆಯು ಸಹಕರಿಸಲಿ; ದೇವರು ಅವರಿಗೆ ಶಕ್ತಿನೀಡಲಿ ಎಂದು ಹಾರೈಸುವೆವು.

## ಶುಭಾಸ್ತೇ ಪಂಥಾನಃ

ಮೈಸೂರ ವಿಧಾನಸಭೆಯ ಅಧ್ಯಕ್ಷರಾದ ಶ್ರೀ ಎಸ್. ಆರ್. ಕಂಠಿಯವರು ಇದೇ ತಿಂಗಳ ೯ರ ರಾತ್ರಿ ವಿಮಾನ ಮಾರ್ಗವಾಗಿ ಲಂಡನಕ್ಕೆ ಪ್ರಯಾಣ ಬೆಳಿಸಿ ವಿದೇಶ ಸಂಚಾರವನ್ನು ಕೈಕೊಂಡಿರುವರು. ಕಾಮನವೆಲ್ಥ ಪಾರ್ಲಿಮೆಂಟರಿ ಅಸೋಸಿಯೇಶನ ಇಂಗ್ಲಂಡ ಹಾಗು ಉತ್ತರ ಆಯರ್ಲಂಡಿನವರು ಏರ್ಪಡಿಸಿರುವ ಪಾರ್ಲಿಮೆಂಟರಿ ಕೋರ್ಸಿನಲ್ಲಿ ಭಾಗವಹಿಸುವದು ಅವರ ಈ ಸಂಚಾರದ ಉದ್ದೇಶವಾಗಿದೆ. ಎಪ್ರಿಲ್ ೧೫ರಿಂದ ಮೇ ೧೭ರ ವರೆಗೆ ೧ ತಿಂಗಳ ಕಾಲಾವಧಿ ಅವರು ಅಲ್ಲಿ ವಾಸಿಸುವರು. ಆ ನಂತರ ಒಂದು ವಾರದವರೆಗೆ ಲಂಡನ, ಫ್ರಾನ್ಸ, ಜರ್ಮನಿ, ಸ್ವಿತ್ಸರ್ಲಂಡ, ರೋಮ, ಕೈರೋಗಳಿಗೆ ಭೆಟ್ಟಿಕೊಟ್ಟು ಮರಳಿ ಭಾರತಕ್ಕೆ ಬರಲಿರುವರು.

ಇದೇ ಸಮಯದಲ್ಲಿ ನಮ್ಮ ರಾಜ್ಯದ ರಾಜ್ಯಸಾಲ ರಾದ ಶ್ರೀಮಾನ್ ಜಯಚಾಮರಾಜೇಂದ್ರ ಒಡೆಯರವರೂ ಮೂರು ತಿಂಗಳ ವಿದೇಶ ಸಂಚಾರವನ್ನು ಕೈಕೊಳ್ಳಲಿರುವರು. ಈರ್ವರ ಈ ಸಂಚಾರದಲ್ಲಿ "ಶುಭಾಸ್ತೇ ಪಂಥಾನಃ" ಎಂದು ಜೀವನ ಶಿಕ್ಷಣ ಪತ್ರಿಕೆಯು ಬಯಸುವದು.

## ನಮ್ಮ ರಾಜ್ಯ ಶಿಕ್ಷಣ ಶಾಖೆಯ ಮುಂಗಡಪತ್ರ

ಮಾರ್ಚ ತಿಂಗಳ ೩೧ನೆಯ ದಿನಾಂಕ ನಮ್ಮ ರಾಜ್ಯದ ಶಿಕ್ಷಣ ಸಚಿವರಾದ ಮಾನ್ಯ ಅಣ್ಣಾರಾವ ಗಣಮುಖಿಯವರು ಮಂಡಿಸಿದ ೧೯೫೫—೫೦ ನೆಯ ಸಾಲಿನ ೧೧ಕೋಟಿ ೩೨ಲಕ್ಷ ರೂಪಾಯಿಗಳ ಬೇಡಿಕೆಗೆ ವಿಧಾನಸಭೆಯು ತನ್ನ ಒಪ್ಪಿಗೆಯನ್ನು ಕೊಟ್ಟಿತು. ಈ ಸಮಯದಲ್ಲಿ ಸದಸ್ಯರು ಕೇಳಿದ ಅನೇಕ ಪ್ರಶ್ನೆಗಳಿಗೆ ಉತ್ತರಿಸುತ್ತ ಹೊಸ ವರ್ಷದಲ್ಲಿ ಹೆಚ್ಚು ತಾಂತ್ರಿಕ ಸಂಸ್ಥೆಗಳನ್ನು ಸ್ಥಾಪಿಸಲಾಗುವದೆಂದೂ, ರಾಜ್ಯದಲ್ಲಿ ಮೂರು ಹೊಸ ಎಂಜನಿಯರಿಂಗ ಕಾಲೇಜುಗಳು ಹಾಗು ನಾಲ್ಕು ಪಾಲಿಟೆಕ್ನಿಕ್ ಸಂಸ್ಥೆಗಳು ಪ್ರಾರಂಭವಾಗುವ ಸಾಧ್ಯತೆಯಿದೆ ಎಂದೂ ವಿದಿತಪಡಿಸಿದರು. ರಾಜ್ಯದಲ್ಲಿ ಮೈಲಿಗೊಂದು ಶಾಲೆಯನ್ನು ಸ್ಥಾಪಿಸುವ ಗುರಿಯನ್ನು ಸರಕಾರವು ಇಟ್ಟುಕೊಂಡಿದೆಯೆಂದೂ ಈ ಗುರಿಸಾಧನೆ ಗಾಗಿ ೨೨೦೦ ಶಾಲೆಗಳನ್ನು ಹೊಸದಾಗಿ ಸ್ಥಾಪಿಸ ಬೇಕಾಗುವದೆಂದೂ ಹೇಳಿದರು. ೧೯೫೫—೫೦ ರಲ್ಲಿ ೧೦೦೦ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸ ಲಾಗುವದು.

ಕಡ್ಡಾಯದ ಹಾಗು ಉಚಿತ ಶಿಕ್ಷಣದ ಗುರಿ ಯನ್ನಾದರೂ ಕೂಡ ಕೇಂದ್ರ ಸರಕಾರದ ನೆರವಿನೊಂದಿಗೆ ತೃತೀಯ ಪಂಚವಾರ್ಷಿಕ ಯೋಜನಾವಧಿ ಮುಗಿಯುವದ ರೊಳಗಾಗಿ ಮುಟ್ಟಲಾಗುವದು. ೬ರಿಂದ ೧೧ವರ್ಷ ವಯಸ್ಸಿನ ಎಲ್ಲ ಮಕ್ಕಳಿಗೂ ಉಚಿತ ಹಾಗು ಕಡ್ಡಾಯದ ಶಿಕ್ಷಣವು ದೊರೆಯಲಿರುವದು. ರಾಜ್ಯದಾದ್ಯಂತ ಏಕರೂಪವಾದ ಶೈಕ್ಷಣಿಕ ಪದ್ಧತಿಯು ಬಳಕೆಯಲ್ಲಿ ಬರಲಿದ್ದು ಅದರ ಪ್ರಥಮಹೆಜ್ಜೆಯೆಂದು ಇದೇ ಶೈಕ್ಷಣಿಕ ವರುಷದಿಂದ (ಜೂನ ೧೯೫೫) ೧ ಹಾಗು ೨ ನೆಯ ವರ್ಗಗಳಲ್ಲಿ ಹೊಸ ಅಭ್ಯಾಸಪತ್ರಿಕೆಯು ಬಳಿಕೆಯಲ್ಲಿ ಬರಲಿದೆ. ನೂತನವಾಗಿ ರಚಿತವಾದ ಈ ಅಭ್ಯಾಸ ಪತ್ರಿಕೆ ಯನ್ನು ಕೂಲಂಕಷವಾಗಿ ಪ್ರಾಥಮಿಕ ಶಿಕ್ಷಕರು ಅವಲೋಕಿಸುವದಗತ್ಯವಿದೆ ಎಂಬ ಮಾತನ್ನು ಇಲ್ಲಿ ಹೇಳದಿರಲಾರೆವು.

## ಆರೋಗ್ಯ ದಿನಾಚರಣೆ

ಇದೇ ತಿಂಗಳ ( ಎಪ್ರಿಲ್ ) ೭ನೆಯ ದಿನಾಂಕ ದೇಶದ ತುಂಬೆಲ್ಲ ಜಾಗತಿಕ ಆರೋಗ್ಯದಿನಾಚರಣೆಯು ಆಚರಿಸಲ್ಪಟ್ಟಿತು. ಯುಕ್ತ ರಾಷ್ಟ್ರ ಸಂಸ್ಥೆಯ ಅಂಗಸಂಸ್ಥೆಯಾದ ಜಾಗತಿಕ ಆರೋಗ್ಯ ಸಂಸ್ಥೆಯು (WHO)ಪ್ರತಿವರುಷ ಈ ದಿನವನ್ನು ಆಚರಿಸುತ್ತಲಿದೆ. ಜಗತ್ತಿನ ಎಲ್ಲ ಮಕ್ಕಳ ಯೋಗಕ್ಷೇಮಕ್ಕಾಗಿ ಈ ಸಂಸ್ಥೆಯು ಹೆಣಗುತ್ತಲಿದೆ. ಈ ವರುಷ "ಮಕ್ಕಳ ಮನೋರೋಗಗಳು ಹಾಗು ಮಾನಸಿಕ ಆರೋಗ್ಯ" ಎಂಬ ವಿಷಯವನ್ನು ಎತ್ತಿಕೊಂಡು ಎಲ್ಲೆಡೆಗೂ ವಿದ್ವಾಂಸರಿಂದ ಭಾಷಣಗಳನ್ನು ಏರ್ಪಡಿಸಲಾಗಿತ್ತು. ಪ್ರಾಥಮಿಕ ಶಿಕ್ಷಕರೂ ಕೂಡ ಆ ವಿಷಯವನ್ನು ಕುರಿತು ಮಕ್ಕಳಿಗೆ, ಪಾಲಕರಿಗೆ ತಿಳುವಳಿಕೆಯನ್ನುಂಟುಮಾಡಿ ಕೊಟ್ಟರು. ಅಂದು ಮಕ್ಕಳ ಪ್ರಭಾತಫೇರಿ, ಮಕ್ಕಳಿಗೆ ಹಾಲಿನಪುಡಿಯ ವಿತರಣೆ, ಭಾಷಣ, ಸಾಯಂಕಾಲ ಚಲಚಿತ್ರ ಪ್ರದರ್ಶನ, ಏಕಾಂಕ ನಾಟಕ ಮೊದಲಾದ ಮನರಂಜನೆಯ ಕಾರ್ಯಕಲಾಪ ಮೊದಲಾದ ಕಾರ್ಯಕ್ರಮಗಳು ಜರುಗಿದವು. ಮುಖ್ಯವಾಗಿ ಮಕ್ಕಳ

ಆರೋಗ್ಯರಕ್ಷಣೆಯತ್ತ ಪಾಲಕರ ಮನಸ್ಸನ್ನು ಎಳೆಯುವದೇ ಈ ದಿನದ ಆಚರಣೆಯ ಉದ್ದೇಶವು. ಈ ಸಂದರ್ಭದಲ್ಲಿ ಈ 'ಜೀವನ ಶಿಕ್ಷಣ' ಪತ್ರಿಕೆಯು ತನ್ನ ವಾಚಕ ವರ್ಗಕ್ಕೆ "ಶರೀರ ಮಾದ್ಯಂ ಖಲು ಧರ್ಮಸಾಧನಂ" ಎಂಬ ಕವಿಯ ಉಕ್ತಿಯನ್ನು ಹಾಗು ಆಂಗ್ಲ ನಾಣ್ನುಡಿಯಾದ "ಒಳ್ಳೇ ದೇಹದಲ್ಲಿ ಒಳ್ಳೇ ಮನಸ್ಸು" ಎಂಬ ನುಡಿಗಳನ್ನು ನೆನಪಿಗೆ ತಂದು ಕೊಡಬಯಸುತ್ತದೆ.

## ದೀಪದಾನ ಸಮಾರಂಭ

ಪ್ರತಿಸಲದಂತೆ ಈ ವರುಷವೂ ಧಾರವಾಡದ ಪದವೀಧರರ ಜೀವನ ಶಿಕ್ಷಣ ಕೇಂದ್ರದಲ್ಲಿ ದಿನಾಂಕ ೩ರಂದು ದೀಪದಾನ ಸಮಾರಂಭವು ನಡೆಯಿತು.

ಕುಲಪತಿಗಳಾದ ಶ್ರೀ ಮಾನ್ ಕೆ. ಬಿ. ತೇರಗಾಂವಕರರು ತರಬೇತಿ ಪಡೆದು ಹೊರಬೀಳಲಿರುವ ಸ್ನಾತಕರಿಗೆ ದೀಪದಾನವನ್ನು ಮಾಡಿದರು. ಅಂದು ಗಾಂಧೀನಿಧಿಯ ಚೇರಮನ್‌ರಾದ ಶ್ರೀಯುತ ದಿವಾಕರ ರಂಗರಾಯರು ಮುಖ್ಯ ಅತಿಥಿಗಳಾಗಿ ಬಂದು, ಒಳ್ಳೇ ಉದ್ಬೋಧಕ ಭಾಷಣ ಮಾಡಿದರು. ಅವರು ತಮ್ಮ ಭಾಷಣದಲ್ಲಿ ಗಾಂಧೀಜಿಯನರ ಜೀವನ ಸೂತ್ರಗಳಾವವು ಎಂಬುದನ್ನು ನಿವರಿಸಿ; ಅದರ ಮೂಲ ಶಿಕ್ಷಣವನ್ನು, ಈ ಜೀವನ ಸೂತ್ರಗಳನ್ನು ಕಣ್ಮುಂದಿಟ್ಟು ಕೊಂಡು ನೋಡಬೇಕೆಂದು ಉಪದೇಶಿಸಿದರು. ಕೇಂದ್ರೀಕರಣವು ಅನಿಷ್ಠಮೂಲವೆಂದೂ, ಆದುದರಿಂದಲೇ ವಿಕೇಂದ್ರೀಕರಣವು ಗಾಂಧೀಜಿಯವರ ಜೀವನ ಸೂತ್ರವಾಗಿದ್ದಿತೆಂದೂ ಅರುಹಿದರು. ಶೋಷಣರಹಿತವಾದ ಸಮಾಜವನ್ನು ನಿರ್ಮಿಸುವದು ಗಾಂಧೀಜಿಯವರ ಮುಖ್ಯ ಉದ್ದೇಶವಾಗಿದ್ದಿತು; ಆ ದೃಷ್ಟಿಯಿಂದ ಬರಲಿರುವ ಸಮಾಜವು ರೂಪುಗೊಳ್ಳಲು, ಪ್ರೇಮ, ಸಹಕಾರ, ದುಡಿಮೆ, ಮೊದಲಾದ ಗುಣಗಳು ಅಳವಡುವ ಶಿಕ್ಷಣವು ಮಕ್ಕಳಿಗೆ ದೊರಕಬೇಕೆಂದು ಬಯಸಿ ಮೂಲಶಿಕ್ಷಣವನ್ನು ನಾಡಿಗೆ ನೀಡಿದರು. ವ್ಯಕ್ತಿಯ ವಿಕಾಸಕ್ಕೆ ಸ್ವಾತಂತ್ರ್ಯವು ಅಗತ್ಯ. ವ್ಯಕ್ತಿಯು ಸಮಾಜದೊಡನೆ ಅದ್ವೈತ ಭಾವನೆಯಿಂದ ತಾದಾತ್ಮ್ಯಹೊಂದುವದೇ ಸಮಾಜವಾದವು. ಎಂದು ಮುಂತಾಗಿ ಒಳ್ಳೇ ಮನನೀಯವಾದ ಭಾಷಣವನ್ನು ಮಾಡಿದರು. ಮೂಲ ಶಿಕ್ಷಣದ ಹೊನೆ ಹೊತ್ತ ಪ್ರಾಥಮಿಕ ಶಿಕ್ಷಕಬಾಂಧವರು ಈ ಸೂತ್ರಗಳನ್ನು ತಮ್ಮ ಕಣ್ಮುಂದಿಟ್ಟುಕೊಳ್ಳುವರಾಗಿ ಆಶಿಸುತ್ತೇವೆ.

## ನಮ್ಮ ಹೊಸ ಕುಲಪತಿಗಳು

ಶ್ರೀಮಾನ್ ಎಮ್. ಜಿ. ಕಟ್ಟಿಯವರು ಮಾರ್ಚ ೩೫ನೆಯ ದಿನಾಂಕ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರೆಂದು ಅಧಿಕಾರ ಸೂತ್ರಗಳನ್ನು ವಹಿಸಿಕೊಂಡರು. ಅವರ ಅಲ್ಪ ಪರಿಚಯವನ್ನು ಮಾಡಿಕೊಡುವ ಪ್ರತ್ಯೇಕ ಲೇಖನವೊಂದು ಇದೇ ಸಂಚಿಕೆಯಲ್ಲಿ ಬೇರೆಡೆಗೆ ಪ್ರಕಟವಾಗಿದೆ. ಜನೇವರಿ ೩೦ರಂದು ಮೊದಲು ಪ್ರಿನ್ಸಿಪಾಲರಾಗಿದ್ದ ಶ್ರೀಮಾನ್ ಎಸ್. ಪಿ. ಪಾಟೀಲರು ಶ್ರೀಯುತ ವ್ಹಿ. ಬಿ. ಚವಣ್ಣನವರಿಗೆ ಅಧಿಕಾರ ಸೂತ್ರಗಳನ್ನು ವಹಿಸಿಕೊಟ್ಟು ಹೋಗಿದ್ದರು. ಈ "ಜೀವನ ಶಿಕ್ಷಣ" ಪತ್ರಿಕೆಗಾಗಿ ದುಡಿದು ಮೇಲ್ಕರಗತಿಗೆ ಹೋದ ಶ್ರೀಮಾನ ಪಾಟೀಲರನ್ನೂ, ಈ ಎರಡು ತಿಂಗಳುಗಳ ಪರ್ಯಂತ ಇದರ ಹೊಣೆಹೊತ್ತು ಹೊಸ ದಿಟ್ಟ ದೃಷ್ಟಿಯನ್ನು ತೋರಿಸಿದ ಶ್ರೀಮಾನ್ ಚವಣ್ಣನವರಿಗೂ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುವದರ ಜೊತೆಗೆ ಹೊಸ ಕುಲಪತಿಗಳಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

---

# ಪ್ರಕಟನೆ

ಧಾರವಾಡ ಜಿಲ್ಲಾ ಕನ್ನಡ ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರ ಮಕ್ಕಳು ಪೈಸ್ಕೂಲ ಸ್ಕಾಲರಶಿಪ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿದ್ದರೆ ಅಂಥವರಿಗಾಗಿ ಪ್ರಾ. ಸ್ಕೂ. ನಿಂದ ನಿವೃತ್ತರಾದ ಶ್ರೀಮಾನ್ ಸಂತಿಯವರು ಇಟ್ಟ ಒಂದು ವಿಶೇಷ ಬಹುಮಾನವಿದೆ. ಆದ್ದರಿಂದ ಆ ಪರೀಕ್ಷೆಯ ಪರಿಣಾಮವು ಹೊರಬಿದ್ದ ಕೂಡಲೇ ತಮ್ಮ ಪೂರ್ಣ ವಿಳಾಸದೊಂದಿಗೆ ಪ್ರಿನ್ಸಿಪಾಲರು ಗಂಡುಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ ಧಾರವಾಡ ಇವರಿಗೆ ಬರೆದುಕೊಳ್ಳಬೇಕು.

# 'ದೀಪದಾನ ಸಮಾರಂಭ'

**ಪದವೀಧರರ ಜೀವನ ಶಿಕ್ಷಣ ಕೇಂದ್ರ, ಧಾರವಾಡ. ಈ ಸಂಸ್ಥೆಯ ಕುಲಪತಿಗಳಾದ**
**ಶ್ರೀ ಕೆ. ಬಿ. ತೇರಗಾಂವಕರರು ದೀಪದಾನ ಸಮಾರಂಭದಲ್ಲಿ**
**೧೯೫೮—೫೯ನೆಯ ಸಾಲಿನ ಸ್ನಾತಕರಿಗೆ**

## ನೀಡಿದ ಸಂದೇಶ

ಜೀವನ-ಶಿಕ್ಷಣ ಕೇಂದ್ರದಿಂದ ಸ್ನಾತಕರಾಗಿ ಹೋಗುತ್ತಿರುವವರಿಗೆ ಇಂದು ಜ್ಯೋತಿರ್ದಾನದ ಸಮಾರಂಭದ ದಿನ. ಈ ಜ್ಯೋತಿಯನ್ನು ಹೊತ್ತಿಸಿದ ಮಹಾವಿಭೂತಿಯೆಂದರೆ ಮಹಾತ್ಮಾ ಗಾಂಧೀಜಿ. ಮಾನವಕೋಟಿಯ ಕಲ್ಯಾಣಕ್ಕೋಸ್ಕರ ತನ್ನ ಸರ್ವಸ್ವವನ್ನೂ ಮೀಸಲಾಗಿರಿಸಿ ಸಮಗ್ರ ಪ್ರಪಂಚಕ್ಕೇ ಜೀವನದ ಬಗ್ಗೆ ಒಂದು ಅಮೂಲ್ಯವಾದ ಸೂತ್ರವನ್ನು ದಯಪಾಲಿಸಿದ ಮಹಾದಾನಿಯೇ ಮಹಾತ್ಮಾಜಿ. ಮಾನವನು ದೇವತ್ವದ ಕಡೆಗೆ ಹೋಗುವಂತೆ ಮಾಡಿದ ಮಹಾನುಭಾವರಲ್ಲಿ ಮಹಾತ್ಮಾಜಿಯ ನ್ಯಾಸಮಾನ ಶ್ರೇಷ್ಠಶ್ರೇಣಿಗೆ ಸೇರಿದ್ದೆಂದು ಬೇರೆ ಹೇಳಬೇಕಾಗಿಲ್ಲ. ಇಂಥ ಮಹಾವಿಭೂತಿಯಿಂದ ಪ್ರಜ್ವಲಿತವಾದ ಈ ಜೀವನ ಜ್ಯೋತಿಯ ಪ್ರತೀಕದ ಸಮ್ಮುಖದಲ್ಲಿ, ಜೀವನ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುತ್ತಿರುವ ಕಾರ್ಯ ಕರ್ತರ ಬಳಗದೊಳಗೆ ತಮ್ಮನ್ನೆಲ್ಲ ಈ ಹೊತು ಬರಮಾಡಿಕೊಳ್ಳಲು ನನಗೆ ತುಂಬ ಸಂತೋಷವೆನಿಸುತ್ತದೆ.

ಈ ದೀವಿಗೆಯು ಜ್ಞಾನದ ಪ್ರತೀಕವಿದ್ದಂತೆ, ಬಾಳಿನ ಪ್ರತೀಕವೂ ಆಹುದು. ಭಾವದ ಉದ್ದೀಪನಕ್ಕೆ, ಕರ್ತವ್ಯದ ಉದ್ದೀಪನಕ್ಕೆ ದಾರಿದೋರುವದೇ ಈ ಜೀವನ ಜ್ಯೋತಿ. ಈ ದೀಪದ ಬೆಳಕಿನಲ್ಲಿಯೇ ಅಸತ್ಯದ ಮುಸುಕು ಹರಿದು ಸತ್ಯವನ್ನು ಕಾಣುವದು; ಕತ್ತಲೆಯನ್ನು ದೂಡಿ ದಿವ್ಯಪ್ರಕಾಶವನ್ನು ಸ್ವಾಧೀನಪಡಿಸಿಕೊಳ್ಳುವದು; ಮೃತ್ಯುವನ್ನು ಮೆಟ್ಟಿ ಅಮೃತತ್ವದಲ್ಲಿ ಆರೂಢವಾಗುವದು; ಈ ಬೆಳಕಿನ ನೆರವಿನಿಂದಲೇ ಕಾನೂನುಗಳ ಕಟ್ಟುಪಾರಿ ಉದಾತ್ತ ಪ್ರೇಮದ ಬಂಧನದಲ್ಲಿ ಸಿಲುಕಿಕೊಳ್ಳುವದು. ಸ್ವಾರ್ಥಭರಿತ ಸ್ಪರ್ಧೆಯಿಂದ ತ್ಯಾಗಮಯ ಸಹಕಾರದಲ್ಲಿ ನಾವು ಈ ದೀಪದ ಬೆಳಕಿದ್ದರೆ ಮಾತ್ರ ಅಡಿ ಇಡಬಲ್ಲೆವು. ಕುನಸು, ದುರಹಂಕಾರಗಳನ್ನು ಬಿಟ್ಟು ಕ್ಷಮಾವೃತ್ತಿಯತ್ತ, ಮನಃಪರಿವರ್ತನದತ್ತ ಸಾಗಬೇಕಿದ್ದರೂ ಈ ಜೀವನ ನಂದಾದೀಪವೇ ಬೇಕು.

ಇಂಥ ಈ ದೀಪದಿಂದ ನೀವು ಪ್ರಭಾವಿತರಾಗಿರಿ, ಪುಲಕಿತರಾಗಿರಿ ಎಂದು ಹಾರೈಸುತ್ತೇನೆ.

ಈ ದೀವಿಗೆಯು ತಮ್ಮೆಲ್ಲರ ಹೃದಯಾಂತರಾಳದಲ್ಲಿ ಸದಾ ಬೆಳಗಲೆಂದೂ, ಅದು ಸದಾ ನಿಮ್ಮ ಪ್ರತಿ ಹೆಜ್ಜೆ ಹೆಜ್ಜೆಗೂ ದಾರಿದೋರುತ್ತಿರಲೆಂದೂ, ಮಹಾತ್ಮಾಜಿ ಅವರನ್ನು ಸ್ಮರಿಸಿ ಜ್ಯೋತಿಃವುಂಜನಾದ ಪರಮೇಶ್ವರನನ್ನು ಪ್ರಾರ್ಥಿಸಿ, ಈ ದೀಪವನ್ನು ನಿಮ್ಮ ಕೈಗೆ ನೀಡಿದ್ದೇನೆ.

**ಕೆ. ಬಿ. ತೇರಗಾಂವಕರ**
ಕುಲಪತಿಗಳು, ಜಿ. ಬಿ. ಟಿ. ಸಿ. ಧಾರವಾಡ

ದಿನಾಂಕ : ೩–೪–೧೯೫೯

# ಕೊಯನಾ ಅಣೆಕಟ್ಟು

## [ ವಿವಿಧೋದ್ದೇಶಗಳ ಯೋಜನೆ ]

ಲೇಖಕರು : ಶ್ರೀ ಶಿಂತ್ರಿ ಬಸಪ್ಪನವರು, ಬಿ.ಎ., ಬಿ.ಟಿ.

### ಮೊದಲ ಮಾತು

ಸ್ವಾತಂತ್ರ್ಯದ ತರುವಾಯ ನಮ್ಮ ರಾಷ್ಟ್ರದ ನೈಸರ್ಗಿಕ ಸಂಪತ್ತುಗಳಲ್ಲೊಂದಾದ ಜಲಸಂಪತ್ತಿನ ಉಪಯೋಗವನ್ನು ಅತ್ಯುತ್ತಮ ರೀತಿಯಿಂದ ಮಾಡಿಕೊಳ್ಳಲು ನಮ್ಮ ಕೇಂದ್ರ ಸರಕಾರವು ಹೆಣಗಾಡುತ್ತಿರುವದು ಭಾರತೀಯರಿಗೆಲ್ಲ ಅದೊಂದು ದೊಡ್ಡ ಹೆಮ್ಮೆಯ ಮಾತೇ ಸೈ: ದಾಮೋದರ ಕೊಳ್ಳ, ಭಾಕ್ರಾ-ನಾಂಗಲ್, ಹಿರಾಕುಡ, ಕೊಯನಾ, ಶರಾವತಿ, ಮುಂತಾದ ಯೋಜನೆಗಳು ಒಂದರ ಹಿಂದೊಂದು ಭರದಿಂದ ನಮ್ಮ ಪಂಚವಾರ್ಷಿಕ ಯೋಜನೆಗಳಲ್ಲಿ ಕೈಕೊಳ್ಳಲ್ಪಟ್ಟಿವೆ. ನಮ್ಮ ನೂತನ ರಾಜ್ಯದಲ್ಲಿಯ ಶರಾವತಿ ಜಲವಿದ್ಯುತ್ ಯೋಜನೆಯ ಮುಖ್ಯ ಅಂಗವಾಗಿದ್ದ ಲಿಂಗನಮಕ್ಕಿ ಅಣೆಕಟ್ಟಿನ ಪ್ರಾರಂಭೋತ್ಸವವು ದಿನಾಂಕ ೫-೨-೧೯೬೫ ರಂದು ಕೇಂದ್ರ ಸರಕಾರದ ನೀರಾವರಿ ಹಾಗೂ ವಿದ್ಯುತ್ ಶಾಖೆಯ ಮಂತ್ರಿಗಳಾದ ಶ್ರೀ ಎಸ್. ಕೆ. ಪಾಟೀಲರವರ ಅಮೃತ ಹಸ್ತದಿಂದ ಅತ್ಯಂತ ವಿಜೃಂಭಣೆಯಿಂದ ನೆರವೇರಿದಂತೆ ಕೊಯನಾ ಅಣೆಕಟ್ಟಿನ ಕಾಂಕ್ರೀಟಿನ ಕೆಲಸದ ಉದ್ಘಾಟನೆಯು ಮುಂಬಯಿ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ವಾಯ್. ಬಿ. ಚವ್ಹಾಣರವರ ಅಮೃತ ಹಸ್ತದಿಂದ ದಿ. ೧-೩-೧೯೬೫ ರಂದು ಅತಿ ಉಟ್ಟಹಾಸದಿಂದ ಜರುಗಿತು. ಈ ಯೋಜನೆಯು ದಕ್ಷಿಣ ಮಹಾರಾಷ್ಟ್ರದ ಭಗೀರಥ ಪ್ರಯತ್ನವೆಂದು ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಸಾರಿದರು. ಈ ಯೋಜನೆಗೆ ಕಿಂಚಿತ್ ಐತಿಹ್ಯವಿದ್ದಂತೆ ತೋರುತ್ತಿದೆ. ಇದರ ವಿಚಾರವನ್ನು ಟಾಟಾ ಕಂಪನಿಯವರು ಮೊಟ್ಟಮೊದಲು ೧೯೧೬ರಲ್ಲಿ ಕಂಡುಹಿಡಿದಿದ್ದರು. ೧೯೩೬ರಲ್ಲಿ ಅದರ ಶಕ್ಯತೆಯನ್ನು ಆ ಕಂಪನಿಯವರು ಪುನಃ ಪರಿಶೀಲನೆ ಮಾಡಿ ನೋಡಿದ್ದುಂಟು. ಮುಂಬಯಿ ಮತ್ತು ಪುಣೆ ಪಟ್ಟಣಗಳಲ್ಲಿಯ ವಿದ್ಯುತ್ತಿನ ಬೇಡಿಕೆಯು ಮಿತಿ ಮೀರಿ ಬೆಳೆಯಹತ್ತಿದ್ದರಿಂದ ೧೯೪೬ರಲ್ಲಿ ಆಗಿನ ಮುಂಬಯಿ ಸರಕಾರವು ಈ ಯೋಜನೆಯ ಸರ್ವೆ ಮಾಡಿ ನೋಡಲು ಆಜ್ಞಾಪಿಸಿತು. ತತ್ಪರಿಣಾಮದಿಂದ, ಸುದೀರ್ಘ ವಾದೊಂದು ಯೋಜನೆಯು ತಯಾರಿಸಲ್ಪಟ್ಟು ೧೯೫೦ ರಲ್ಲಿ ಅದು ಮುಂಬಯಿ ಸರಕಾರಕ್ಕೆ ಒಪ್ಪಿಸಲ್ಪಟ್ಟಿತು. ಮುಂಬಯಿ ಸರಕಾರವು ಅದನ್ನು ಕೂಲಂಕಷವಾಗಿ ಪರಾಮರ್ಶಿಸಿ ಕೇಂದ್ರ ಸರಕಾರದ ಮಂಜೂರಿಯ ಸಲುವಾಗಿ ಅದನ್ನು ದಿಲ್ಲಿಗೆ ಕಳಿಸಿತು. ಕೇಂದ್ರ ಸರಕಾರದ ಸಮ್ಮತಿಯು ದೊರೆತ ನಂತರ ೧೯೫೬ನೆಯ ಇಸವಿ ಜನವರಿ ತಿಂಗಳಲ್ಲಿ ಅದರ ಪ್ರಾರಂಭೋತ್ಸವವು ಜರುಗಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಅದಕ್ಕೆ ಅಗ್ರಸ್ಥಾನವು ದೊರೆತಿದೆ.

### ಸ್ಥಳ ಮತ್ತು ರಚನೆ

ಕೋಯಿನಾ ಅಣೆಕಟ್ಟು ಮುಂಬಯಿಯಿಂದ ಆಗ್ನೇಯ ದಿಕ್ಕಿಗೆ ಸುಮಾರು ೧೬೦ ಮೈಲು ದೂರದಲ್ಲಿದೆ. ಮಹಾಬಲೇಶ್ವರ ತಪ್ಪಲಿನ ಪಶ್ಚಿಮ ದಿಕ್ಕಿನ ಇಳಕಲು ಪ್ರದೇಶದಲ್ಲಿ ಕೊಯನಾ ಎಂಬ ಚಿಕ್ಕ ನದಿಯು ಉಗಮ ಹೊಂದಿ, ಪಶ್ಚಿಮ ಘಟ್ಟಕ್ಕೆ ಸಮಾಂತರವಾಗಿ ಮೊದಲು ಉತ್ತರಕ್ಕೆ ಆ ಮೇಲೆ ದಕ್ಷಿಣಕ್ಕೆ ೪೦ ಮೈಲುಗಳ ವರೆಗೆ ಹರಿದು, ಜಾರಿಯಲ್ಲಿ ಇತಿಹಾಸ ಪ್ರಸಿದ್ಧವಾದ ಪ್ರತಾಪಗಡ ಕೋಟೆಯನ್ನು ಕಚ್ಚಿಕೊಂಡು, ಸೆಲ್ಫಾಕನ ಪಕ್ಕದಲ್ಲಿ ಒಮ್ಮಿಂದೊಮ್ಮೆಲೆ ಪೂರ್ವ ವಾಹಿನಿಯಾಗಿ ಸರಾಡದ ಹತ್ತರ ಕೃಷ್ಣೆಯನ್ನು ಕೂಡುತ್ತಿದೆ. ಕೂಡುವ ಅಣೆಕಟ್ಟಿನ ಸ್ಥಳ(ದೇಶಮುಖವಾಡಿ)ದಿಂದ ೫೫ ಮೈಲು ದೂರದಲ್ಲಿದೆ. ಅಣೆಕಟ್ಟನ್ನು ಕಟ್ಟುವ ಸ್ಥಳದ ಮಗ್ಗುಲಿನಲ್ಲಿ ಒಂದು ಹೊಸ ನಗರವು ನಿರ್ಮಿಸಲ್ಪಟ್ಟಿದೆ. ಅದಕ್ಕೆ ಕೊಯನಾ ನಗರವೆಂದು ನಾಮಕರಣವಾಗಿದೆ. ಆ ನೂತನ ನಗರದಲ್ಲಿ ೮೦೦೦ ಕೆಲಸಗಾರರಿಗೆ ಸಾಲುವಷ್ಟು ವಸತಿ ಹಾಗೂ ಜೀವನಾವಶ್ಯಕ ಸೌಕರ್ಯಗಳೆಲ್ಲ ಒದಗಿಸಲ್ಪಟ್ಟಿವೆ. ಈ ಯೋಜನೆಯು ಒಟ್ಟು ಮೂರು ಹಂತಗಳಲ್ಲಿ ವಿಭಾಗಿಸಲ್ಪಟ್ಟು ಈಗ ಮೊದಲನೆಯ ಹಂತದ ಕಾರ್ಯವು ಭರದಿಂದ ಪ್ರಾರಂಭವಾಗಿದೆ, ಈ ಹಂತದಲ್ಲಿ ಅಣೆಕಟ್ಟಿನ ಎತ್ತರವು ನದಿಯ ಪಾತಳಿಯಿಂದ ಮೇಲಕ್ಕೆ ೩೦೭.೫

ಅಡಿಯಷ್ಟಾಗಿ ಕೊನೆಯ ಹಂತದಲ್ಲಿ ಅದು ೨೭೦ ಅಡಿಯ ವರೆಗೆ ಮೇಲಕ್ಕೇರುವದು. ಈ ಯೋಜನೆಗೆ ಒಟ್ಟು ೫೬ ಕೋಟಿ ರೂಪಾಯಿಗಳಷ್ಟು ವೆಚ್ಚವು ತಗಲಬಹುದೆಂದು ಅಂದಾಜಿದೆ. ಮೊದಲನೆಯ ಹಂತಕ್ಕೆ ಮಾತ್ರ ೩೮.೩೫ಕೋಟಿ ರೂಪಾಯಿಗಳು ಹಪ್ಪ್ಚಬಹುದೆಂದು ಅಂದಾಜು ಮಾಡಿದ್ದಾರೆ.

## ಜಲಾಶಯ ಮತ್ತು ವಿದ್ಯುತ್

ಅಣೆಕಟ್ಟನ್ನು ಕಟ್ಟುವ ಸ್ಥಳದಿಂದ ಮೇಲಕ್ಕೆ ಕೊಯನಾ ನದಿಯ ಕೊಳ್ಳವು ಒಂದು ಡೋಣಿಯ ಆಕೃತಿಯಂತಿದೆ. ಅಣೆಕಟ್ಟು ಸಂಪೂರ್ಣವಾದ ನಂತರ ಡೋಣಿಯ ಆಕಾರದಂತಿದ್ದ ಆ ಕೊಳ್ಳವೆಲ್ಲ ನೀರಿನಿಂದ ತುಂಬಿ ಆ ನೀರಿನ ಸಮೂಹವು ಸುಮಾರು ೩೪೪ ಚದುರು ಮೈಲುಗಳಷ್ಟು ಕ್ಷೇತ್ರವನ್ನು ವ್ಯಾಪಿಸುವದು. ಆಗ ಅದು ಒಂದು ಸಾಗರದಂತೆ ಕಾಣಿಸುವದು. ಸಮುದ್ರ ಸಪಾಟಿಯಿಂದ ಆ ಜಲಸಮೂಹದ ಎತ್ತರವು ೧೯೦೦ ಅಡಿಗಳಷ್ಟಾಗುತ್ತಿದೆ. ಅಲ್ಲಿಂದ ಒಮ್ಮೆಲೆ ೧೫೦೦ ಅಡಿ ಕೆಳಗಿರುವ ಪೋಫಾಲಿ ಎಂಬ ಹಳ್ಳಿಯ ಪಕ್ಕದಲ್ಲಿ ವಿದ್ಯುತ್ತನ್ನು ಹುಟ್ಟಿಸುವ ಯಂತ್ರಗಳು ರಚಿಸಲ್ಪಡುವವು. ದೊಡ್ಡ ದೊಡ್ಡ ಕೊಳವೆಗಳೊಳಗಿಂದ ೧೫೦೦ ಅಡಿ ಎತ್ತರದಿಂದ ಒಮ್ಮಿಂದೊಮ್ಮೆಲೆ ಕೆಳಗೆ ಧುಮುಕಿ ಬೀಳುವ ನೀರಿನ ರಭಸದಿಂದ ವಿದ್ಯುತ್ತನ್ನುತ್ಪಾದಿಸುವ ಯಂತ್ರಗಳ ಚಕ್ರಗಳಿಗೆ ಚಾಲನೆಯು ಸಿಕ್ಕು ಅವು ಗರಗರನೆ ತಿರುಗಿ ವಿದ್ಯುತ್ತನ್ನು ಹುಟ್ಟಿಸಲು ಅಣಿಯಾಗುವವು. ಪೋಫಾಲಿಯ ಬಳಿಯಲ್ಲಿಯೂ ಕಾರ್ಮಿಕರಿಗೋಸ್ಕರ ಹೊಸದೊಂದು ನಗರವು ತಲೆಯೆತ್ತಿದೆ. ಈ ಯೋಜನೆಯ ಮೂರೂ ಹಂತಗಳು ಪೂರ್ತಿಗೊಂಡ ನಂತರ ಅದರಿಂದ ೫೨೦೦೦೦ ಕೆಲೊ ವ್ಯಾಟ್ಸ್ (ಕೆಲೊ = ಸಾವಿರ; ವ್ಯಾಟ್ = ವಿದ್ಯುತ್ತನ್ನು ಅಳೆಯುವ ದೊಂದು ಅಳತೆ) ವಿದ್ಯುತ್ತು ಹೊರಡುವದು. ಆ ವಿದ್ಯುತ್ತನ್ನು ಮುಂಬಯಿ, ಪುಣೆ, ಕೊಲ್ಹಾಪುರ ಸೊಲ್ಹಾಪುರ, ಮಿರಜ, ಸಾಂಗಲಿ ಮುಂತಾವ ಶಹರಗಳಿಗೂ ಹಾದಿಯಲ್ಲಿ ಹತ್ತುವ ದೊಡ್ಡ ದೊಡ್ಡ ಗ್ರಾಮಗಳಿಗೂ ಪೂರೈಸಲಾಗುವದು. ಒಂದು ಯುನಿಟ್ಟು ವಿದ್ಯುತ್ತಿನ ಬೆಲೆಯು ಎರಡು ನಯೆ ಪೈಸೆಗಳಷ್ಟಾಗುವದು. ಅದು ನಮ್ಮ ಶರಾವತಿ ಯೋಜನೆ (ಇಲ್ಲಿ ಒಂದು ಯುನಿಟ್ಟಿಗೆ ಮುಕ್ಕಾಲು ನಯಾ ಪೈಸಾ ಸಹ ಬೀಳುವದಿಲ್ಲ) ಯಷ್ಟು ಅಗ್ಗವಲ್ಲವಾದರೂ ಈ ಗಿನ ಮುಂಬಯಿ–ಪುಣೆ ಪಟ್ಟಣಗಳಲ್ಲಿಯ ದರಗಳಿಗೆ ಹೋಲಿಸಿ ನೋಡಿದರೆ ಅದು ಬಹಳ ಅಗ್ಗ ದರವೆಂದು ಗಣಿಸಲ್ಪಡುವದು. ಇಷ್ಟೊಂದು ಅಗ್ಗ ದರದಲ್ಲಿ ಸಿಗುವ ವಿದ್ಯುತ್ತಿನ ಸಹಾಯದಿಂದ ಆ ಭಾಗದಲ್ಲಿಯ ಉದ್ಯಮಗಳು ಹೇಳ ತೀರದಷ್ಟು ಲಾಭವನ್ನು ಮಾಡಿಕೊಳ್ಳುವವು. ಅಣೆಕಟ್ಟಿನ ಪ್ರದೇಶದಲ್ಲಿ ವರ್ಷಕ್ಕೆ ೨೦೦ ಇಂಚು ಮಳೆ ಬೀಳುವದರಿಂದ ನೀರಿನ ಪುರವಠೆಯು ಅತ್ಯಧಿಕವಾಗುವದು. ವಿದ್ಯುದುತ್ಪಾದನೆಕ್ಕೆ ಸಾಕಾಗಿ ನೀರು ಅಳತೆಗೆಟ್ಟು ಉಳಿಯುವದು. ಆ ಹೆಚ್ಚಾದ ನೀರನ್ನು ಮಳೆಯ ಅಭಾವದಿಂದ ಕೊರಗುವ ಪ್ರದೇಶಗಳಿಗೆ ಕಾಲುವೆಗಳಿಂದ ಪೂರೈಸಲಾಗುವದು.

## ಕೊನೆಯ ಮಾತು

ಕೊಯನಾ ಯೋಜನೆಯು ದಕ್ಷಿಣ ಮಹಾರಾಷ್ಟ್ರಕ್ಕೆ ನಿಸರ್ಗ ದೇವತೆಯು ನೀಡಿದ ಉದಾತ್ತ ಕೊಡುಗೆಯು. ಅದು ಮುಂಬಯಿ, ಪುಣೆ, ಸೋಲ್ಹಾಪುರ, ಕೊಲ್ಹಾಪುರ, ಮಿರಜ, ಸಾಂಗಲಿ, ಮೊದಲಾದ ಶಹರಗಳಲ್ಲಿಯ ಗಿರಣಿಗಳಿಗೂ, ಕಾರಖಾನೆಗಳಿಗೂ ಅಗ್ಗ ದರದ ಶಕ್ತಿಯನ್ನು ಪೂರೈಸಿ ಅಲ್ಲಿಯ ಎಲ್ಲ ತರಹದ ಉದ್ಯಮಗಳಿಗೆ ಪ್ರೋತ್ಸಾಹವನ್ನೀಯುವದು. ವಿದ್ಯುತ್ತಿನ ಪುರವಠೆಯು ಹೆಚ್ಚಾದಂತೆ ಹಳ್ಳಿಗಳಿಗೂ ಅದನ್ನು ಪೂರೈಸಲಾಗುವದು. ಹಳ್ಳಿಗಳಲ್ಲಿ ವಿದ್ಯುತ್ತಿನ ಸಹಾಯದಿಂದ ಯಾತ ಹೊಡೆದು ಭೂಮಿಗೆ ನೀರನ್ನುಣ್ಣಿಸಿ ಅಗ್ಗದರದಲ್ಲಿ ಆಹಾರೋತ್ಪಾದನೆಯನ್ನು ಮಾಡಲು ಶಕ್ಯವಾಗುವದು. ನೀರಿನ ಪುರವಠೆಯು ಅತ್ಯಂತ ವೆಗ್ಗಳವಾಗುವದರಿಂದ ಹೆಚ್ಚಾದ ನೀರನ್ನು ನೀರಾವರಿಗೆ ಉಪಯೋಗಿಸಲಾಗುವದು. ಮಳೆಯಿಲ್ಲದೆ ಬರಗಾಲ ಕ್ಕೀಡಾಗುವ ಪ್ರದೇಶಗಳಿಗೆ ಕಾಲುವೆಗಳಿಂದ ನೀರನ್ನು ಒದಗಿಸಿ ಆಹಾರೋತ್ಪಾದನೆಯನ್ನು ಅದು ಹೆಚ್ಚಿಸುವದು. ಸಾರಾಂಶವೆಂದರೆ, ದಕ್ಷಿಣ ಮಹಾರಾಷ್ಟ್ರವು ಅದರ ಸಹಾಯದಿಂದ ಎಲ್ಲ ದೃಷ್ಟಿಗಳಿಂದಲೂ ಸಮೃದ್ಧಿಯನ್ನು ಹೊಂದುವದು ಖಂಡಿತ.

— ಜಯ ಹಿಂದ —

# ರಾಘವಾಂಕನ ಹರಿಶ್ಚಂದ್ರ ಕಾವ್ಯ

ಲೇಖಕರು : ಶ್ರೀ ಆಯ್. ಎಸ್. ಬಿದರಿ, ಎಡ್ಮಿನಿಸ್ಟ್ರೇಟಿವ ಆಫೀಸರ, ಸ್ಕೂ.ಜೋ.ಮು. ಧಾರವಾಡ.

ಸುಮಾರು ೮೦೦ ವರ್ಷಗಳ ಹಿಂದಿನ ಆ ಕ್ರಾಂತಿ ಕಾಲ; ನಾಡ ವಿಷ್ಣುವದ ಆ ಕಾಲದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿಯೂ ಅದ್ಭುತ ಕ್ರಾಂತಿಯು ವೈದೋಪಿತು. ಪರಂಪರೆಯಲ್ಲಿ ಸಿಕ್ಕುಬಿದ್ದ ಸಾಹಿತ್ಯ ದೇವಿಯು ರಾಜ ಭವನದಿಂದ, ಪಂಡಿತರ ಸೇವನೆಯಿಂದ ಬಿಡುಗಡೆ ಹೊಂದಿ ಸಂಸ್ಕೃತ, ಕ್ಲಿಷ್ಟ ಹಳೆಗನ್ನಡ, ಉದ್ದುದ್ದ ಓದಲಸದಳವಾದ ಶಬ್ದ-ಸಮಾಸಗಳ ವಿದ್ಯಾಲಂಕಾರಗಳನ್ನು ಕಳಚಿ ಸಂಸ್ಕೃತ ವೃತ್ತಗಳ ಅನಿಷ್ಕರವನ್ನು ಬಿಸುಟು ಜನ-ಸಾಮಾನ್ಯರಿಗೆ ಸುಲಭವಾಗಿ ಗ್ರಾಹ್ಯವಾಗುವ ಭಾಷೆಯ ಉಡುಪನ್ನು ತೊಟ್ಟು ಅವರವಳೇ ಎನ್ನುವಂತೆ ಅಚ್ಚ ಕನ್ನಡ ಛಂದೋಬಂಧದಲ್ಲಿ ಬಂದುದು ಅದ್ಭುತ ಕ್ರಾಂತಿಯ ಕುರುಹಲ್ಲದೆ ಇನ್ನೇನು. ರತ್ನತ್ರಯರಾದ ನಾಡೋಜ ಪಂಪ, ಪೊನ್ನ, ರನ್ನ "ಬಲ್ಲವರಂ ಮನಂಗೊಳಿಸುವ" ಶೈಲಿಯಿಂದ ತುಸು ಭಿನ್ನವಾಗಿ ಬಲ್ಲವ ರೊಂದಿಗೆ ಬಲ್ಲವರಲ್ಲದವರಿಗೂ ಮನಂಗೊಳಿಸುವ ರೀತಿ ಯಲ್ಲಿ ಕಾವ್ಯಗಳನ್ನು ಬರೆಯಲು ಪ್ರಾರಂಭವಾದ ಆ ಕ್ರಾಂತಿ ಕಾಲದಲ್ಲಿ ಗುರು ಹರೀಶ್ವರ, ಶಿಷ್ಯ ಅಳಿಯ ರಾಘವಾಂಕರ ಹೆಸರುಗಳು ಸ್ಪುಟವಾಗಿ ಕಾಣದೇ ಇರವು.

ವಿಜಯನಗರ ಸಾಮ್ರಾಜ್ಯವು ಉದಯವಾಗಿರವ ಆ ಕಾಲ; ಹಂಪೆಯ ಶ್ರೀ ವಿರೂಪಾಕ್ಷ ಭಕ್ತ ಹರೀಶ್ವರ ಕೈಲಾಸದಿಂದ ಹರನನ್ನು ತಂದು, ಹೇಮಕೂಟದಲ್ಲಿ ತಪಶ್ಚರ್ಯ ಮಾಡಿಸಿ, ಮನ್ಮಥ ಸಂಹರಣ ಮಾಡಿಸಿ, ಕೊನೆಗೆ ಗಿರಿಜೆಯನ್ನು ಹರನಿಗೆ ಮದುವೆ ಮಾಡಿಸಿ, ಹಂಪೆಯನ್ನು ಕೈಲಾಸವನ್ನಾಗಿಸಿ ನಾಡಿನ ಅಭಿಮಾನ ವನ್ನು ವ್ಯಕ್ತ ಪಡಿಸಿದ ರಾಷ್ಟ್ರೀಯ ಕವಿ. ಹರೀಶ್ವರನ ಶಿಷ್ಯ ರಾಘವಾಂಕ, ಗುರು ಹಾಗೂ ಮಾವ ಹರೀಶ್ವರ-ನಷ್ಟೇ ರಾಷ್ಟ್ರೀಯನೆಂಬುದೂ "ಜನ ಬದುಕಬೇಕೆಂಬ ಸದಿಚ್ಛೆ ಉಳ್ಳವನೆಂಬುದೂ ಆತನ ಕಾವ್ಯಗಳನ್ನು ಓದಿದರೆ ಹೊಳೆಯದಿರದು.

ರಾಘವಾಂಕನ ಕಾಲ ನಿರ್ಣಯದ ಬಗ್ಗೆ ಪಂಡಿತರಲ್ಲಿ ವಾದ ವಿವಾದಗಳಿದ್ದರೂ ಈತನು ತನ್ನ ಸಮಕಾಲೀನರಾದ ಹರಿಹರ, ಕೆರೆಯ ಪದ್ಮರಸರೊಂದಿಗೆ ಕ್ರಿ.ಶ. ೧೩೬೫ ರಿಂದ ೧೩೭೦ರ ಒಳಗೆ ಜೀವಿಸಿದ್ದನೆಂಬುದಕ್ಕೆ ವಿರೋಧವು ಇರುವದಿಲ್ಲ. ಬಾಹ್ಯ ಹಾಗೂ ಅಂತರ ಪ್ರಮಾಣಗಳಿಂದ ರಾಘವಾಂಕನು ೧೩೭೫ರ ಸುಮಾರಿನಲ್ಲಿ ಜನಿಸಿ ಕ್ರಿ.ಶ. ೧೪೧೦ರ ಛರೆಗೆ ಜೀವಿಸಿದ್ದನೆಂದು ಗ್ರಹಿಸಬಹುದು.

ರಾಘವಾಂಕನ ತಂದೆ-ತಾಯಂದಿರು ಶಿವಾಗಮ ಸಂಪದ್ಯುತರಾದ ಮಹಾದೇವಭಟ್ಟ-ರುದ್ರಾಣಿಯರು. ಲಿಂಗನಿಷ್ಠಾನುಮತಿಗಳಾದ ತತ್ವಾನುಭವಿಗಳಾದ ಈ ದಂಪತಿಗಳಿಗೆ ಬಹುದಿನಗಳ ವರೆಗೆ ಮಕ್ಕಳಾಗದಿರಲು ಬಹುವರ ಬಂಗಾರವೂ, ಬೇಡಿದವರ ಭಾಗ್ಯೋದಯನೂ ಆದ ಹಂಪೆಯ ವಿರೂಪಾಕ್ಷನಲ್ಲಿಗೆ ಹೋಗಿ ಪರಿಶುದ್ಧ ಮನಸ್ಸಿನಿಂದ ಪೂಜಿಸಿ ಭಕ್ತಿಯಿಂದ ಈ ದಂಪತಿಗಳು ನಿಂತುಕೊಂಡು "ಸ್ವಾಮೀ, ನಮಗೆ ಶಿವದಾಸ್ತ್ರ ಕಲೆಗಾರ ಸಲೆ ಧೀರನಾದ ಸುಪುತ್ರನನ್ನು ದಯಪಾಲಿಸು" ಎಂದು ಪ್ರಾರ್ಥಿಸಲು ಹಂಪೆಯಧೀಶ್ವರ ವಿರೂಪಾಕ್ಷನ ಸಿದಿಮುಡಿಯಿಂದ ಸೇವಂತಿಗೆ ಹೂವು ಅವರ ಮುಂದೆ ಬೀಳಲು ಮಹಾ ಪ್ರಸಾದವೆಂದು ಸ್ವೀಕರಿಸಿ ಅದನ್ನು ರುದ್ರಾಣಿಯು ತನ್ನ ಮುಡಿಯಲ್ಲಿ ಧರಿಸುವಳು. ದಂಪತಿಗಳು ಗರ್ಭ ಚಿಹ್ನಗಳನ್ನು ಕಂಡರು. ನವಮಾಸ ತುಂಬಿ ತೇಜೋ ನಿಧಿಯಾದ ಗಂಡುಕೂಸು ಜನಿಸಿ ಹನ್ನೆರಡು ಹಗಲುಗಳು ಜಾರಲು ಹೊನ್ನಿನ ತೊಟ್ಟಿಲಲ್ಲಿ ಕೂಸನ್ನು ಪಟ್ಟೈರಿಸಿ, ಲೋಲಾಡುವ ಮುಂಗುರುಳುಳ್ಳ, "ಕಾಮನ ಕೈಬಾವಿನಂತೆ ಚಂಚಲ ದೃಷ್ಟಿಯುಳ್ಳ" "ಮದನನಾಡುವ ಜಿಂಡಿನಂತೆ ಕನಕ ಕಲಶದಂತೆ ಸ್ತನ ಮಂಡಲವುಳ್ಳ ಮುತ್ತೈದೆ ಕಮಲ ವದನೆಯರು" ಚಂದ್ರಕಾಳಿ ಸೀರೆಯನ್ನುಟ್ಟು ಅಂಜೂರಿ ಬಣ್ಣದ ಕುಪ್ಪಸ ತೊಟ್ಟು ಜೋಗುಳವಾಡಿ "ರಾಘವಾಂಕ"ನೆಂಬ ಹೆಸರಿನಿಂದ ಕರೆಯುವರು. ಏಳು ವರ್ಷಗಳು ತುಂಬಲು ತಂದೆ-ತಾಯಿಗಳು ಗುರು ಹರೀಶ್ವರನಲ್ಲಿಗೆ ಮಗನನ್ನು ಕರೆದುಕೊಂಡು ಹೋಗಿ "ಹದಿನಾಲ್ಕು ವಿದ್ಯೆಗಳನ್ನು ಕಲಿಸಿ ಕರುಣದಿಂ ಕಾಪಾಡಬೇಕು" ಎಂದು ಹೇಳಿ, ಅವನನ್ನು ಗುರುವಿನ ಹತ್ತಿರ ಬಿಟ್ಟು ಬರುವರು. ಗುರು ಹಾಗೂ ಸೋದರ ಮಾವನಾದ ಹರೀಶ್ವರನ ಅನುಗ್ರಹದಿಂದ "ಪ್ರತ್ಯುತ್ಪನ್ನ ಮತಿಯಾದ

ರಾಘವಾಂಕನು ಪುರಾಣ, ಉಪನಿಷತ್, ವೇದಾಂತ, ವ್ಯಾಕರಣ, ಛಂದಸ್ಸು, ಸಮಸ್ತಶಾಸ್ತ್ರ ವಿದ್ಯೆಗಳಲ್ಲಿ ಪಾರಂಗತನಾಗಿ ಕನ್ನಡ, ಸಂಸ್ಕೃತ ಈ ಉಭಯ ಭಾಷೆಗಳಲ್ಲಿ ಕವಿತ್ವ ರಚನೆಗೆ ಅಧಿಪತಿಯಾಗಿ ಕವಿಶರಭಬೇರುಂಡನಾದನು. "ಸಿದ್ಧರಾಮ ಪುರಾಣ, ಸೋಮನಾಥ ಚರಿತ್ರೆ, ವಿಶ್ವೇಶ್ವರ ಚರಿತೆ, ಶರಭಚರಿತೆ, ಹರಿಹರ ಮಹತ್ವ" ಇವು ಈತನು ಬರೆದ ಇತರ ಗ್ರಂಥಗಳು.

ರಾಘವಾಂಕನ ಕೃತಿಗಳಲ್ಲಿ 'ಹರಿಶ್ಚಂದ್ರ ಕಾವ್ಯ'ವು ನಾಡವರಿಗೆ ಅತ್ಯಂತ ಮೆಚ್ಚುಗೆಯ ಕಾವ್ಯವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು. "ಸತ್ಯವೇ ಹರ, ಹರನೇ ಸತ್ಯ" ಎಂಬ ದಿಟ ಸಿದ್ಧಾಂತವನ್ನು ಪ್ರತಿಪಾದಿಸುವ ಈ ಕಾವ್ಯವು ಸೌಂದರ್ಯಯುತವಾದ ಅನೇಕ ವರ್ಣನೆಗಳಿಂದ, ನಿಷಯ ಮಂಡಿಸುವ ಸುಂದರವಾದ ನಾಟಕೀಯತೆಯಿಂದ ಕೂಡಿ ಆಕರ್ಷಣೀಯವಾಗಿ 'ಸತ್ಯಂ ಶಿವಂ ಸುಂದರಂ' ಎಂಬ ಉಕ್ತಿಯನ್ನು ಸಮರ್ಥಿಸುತ್ತದೆ ಎಂದು ಹೇಳಲು ಯಾವ ಅಭ್ಯಂತರವೂ ಇಲ್ಲ.

ದೇವೇಂದ್ರನ ಸಭೆಯಲ್ಲಿ ವಿಶ್ವಾಮಿತ್ರ ವಶಿಷ್ಠರೊಡನೆ ನಡೆದ ವಾಗ್ಯುದ್ಧದ ಪರಿಣಾಮವಾಗಿ ಎರಡನೆಯವರ ವರವೈರಿ ವಿಶ್ವಾಮಿತ್ರನು ಹರಿಶ್ಚಂದ್ರನನ್ನು ಸತ್ಯಭ್ರಷ್ಠನನ್ನಾಗಿ ಮಾಡಲು ಸುವರ್ಣ ಯಾಗವನ್ನು ಹಮ್ಮಿಸಿ 'ಪಿರಿಯ ಕರಿಯನೇರಿ ಕವಡೆಯ ಮಿಡಿದೊಡೆ ಅದು ಹೋಗುವನಿತುದ್ದಮಂ ಪೊಸ ಪೊನ್ನ ರಾಶಿಯಂ' ಕೇಳಿ ಕೊಡಲು ಬೇಡಿದಾಗ ಕೊಡು ಎಂದು ಆತನಲ್ಲಿಯೇ ಬಿಟ್ಟು ರಾಜ್ಯದಲ್ಲಿ ಮೃಗಗಳ ಹಾವಳಿ ಹೆಚ್ಚಿಸಿ ಬೇಟೆಯಾಡ ಬಂದ ರಾಜನನ್ನು ಮಾಯಾ ವರಾಹನನ್ನು ಬೆನ್ನಟ್ಟು ವಂತೆ ಮಾಡಿ ತನ್ನ ತಪೋವನಕ್ಕೆ ಎಳೆತರಿಸಿ ಮಾತಂಗ ಕನ್ಯೆಯರನ್ನು ನಿರ್ಮಿಸಿ ಹರಿಶ್ಚಂದ್ರನ ಮನವೊಲಿಸಲು ಕಳಿಸಿ ಅವರಿಗೆ ಒಲಿಯದೆ ಹೊಡೆದು ಕಳಿಸಿದ ಅವನನ್ನು ಪೀಡಿಸಿ ತನ್ನ ಕನ್ನೆಯರನ್ನು ವರಿಸು ಎಂದು ಕೇಳಲು ಒಪ್ಪದ ರಾಜನು ಸಕಲ ರಾಜ್ಯವನ್ನಾದರೂ ಕೊಟ್ಟೀನು ಹೊಲತಿಯರನ್ನು ವರಿಸಲು ಒಲ್ಲೆ, ಎಂದೆನಲು ಅವನಿಂದ ಸಕಲ ರಾಜ್ಯವನ್ನು ಕಸಿದುಕೊಂಡು ರಾಜ್ಯದಾನದ ಕಾಲದ ದಕ್ಷಿಣೆಯ ನೆವದಿಂದ ಅರಸನನ್ನು ಮಡದಿ–ಚಂದ್ರಮತಿ, ಮಗ–ರೋಹಿತಾಶ್ವರನು ಸಹಿತ ಅಡವಿನಿಗೆ ಅಟ್ಟಿ ದಾರಿಯಲ್ಲಿ ಕಷ್ಟ ಪರಂಪರೆಗಳನ್ನು ಅನುಭವಿಸುವಂತೆ ಮಾಡಿ ಅರಸನು ಋಣಮುಕ್ತನಾಗುವದಕ್ಕಾಗಿ ಕಾಶಿಯಲ್ಲಿ ಒರ್ವ ಬ್ರಾಹ್ಮಣನಿಗೆ ಮಡದಿ ಮಕ್ಕಳನ್ನು ಮಾರಿ ವಿಶ್ವಾಮಿತ್ರನ ಶಿಷ್ಯ ನಕ್ಷತ್ರಕನ ಒತ್ತಾಯವನ್ನು ತೀರಿಸಿ ಕಡೆಗೆ ಚಾಂಡಾಲ ವೀರಬಾಹುಕನಿಗೆ ತನ್ನನ್ನೇ ಮಾರಿಕೊಂಡು 'ಕೊಟ್ಟ ಅವಧಿಗೆ ಇನ್ನೆರಡು ಗಳಿಗೆ ಇರುವಾಗಲೇ' ಮುನಿಯ ಋಣದಿಂದ ಮುಕ್ತನಾಗಿ ಒಡೆಯ ಚಾಂಡಾಲನ ಆಜ್ಞೆಯಂತೆ ದಹಿಸ ಬಂದವರಿಂದ 'ಹೆಣನುಟ್ಟುದಂ ಮಸಣವಾಡಗೆಯನ್ನು ತಲೆಯಕ್ಕಿಯನು' ತೆಗೆದುಕೊಳ್ಳುತ್ತ ಸುಡುಗಾಡ ಕಾಯುತ್ತಿರಲೊಂದು ದಿನ ಹೂವು-ಪತ್ರಿ ತರಲು ಕಾಡಿಗೆ ಹೋದ ರೋಹಿತಾಶ್ವನು ಸರ್ಪ ಕಚ್ಚಿ ಸಾಯಲು ತಾಯಿ ಚಂದ್ರಮತಿಯು ಮಗನ ಹೆಣವನ್ನು ಎತ್ತಿಕೊಂಡು ನಟ್ಟಿರುಳಿನಲ್ಲಿ ಸುಡುಗಾಡಿಗೆ ಬಂದು ಸುಡುವ ಕ್ರಿಯೆಯಲ್ಲಿರಲು ಹರಿಶ್ಚಂದ್ರನು ಅವಳಾರೆಂಬುದನ್ನು ತಿಳಿದರೂ ಮಸಣವಾಡಗೆಯ ತೆತ್ತದೆ ಸುಡುಗೊಡದಿರಲು" ಕೇಳಿ ತರಲು ಹೊರವೊಂಟ ಚಂದ್ರಮತಿಯು ಕಾಶೀ ರಾಜಪುತ್ರನ ಕೊಲೆ ಮಾಡಿದ ಆರೋಪವನ್ನು ಹೊತ್ತು ಮರಣ ದಂಡನೆಗೆ ಗುರಿಯಾಗಿ ಗಂಡ—ಚಾಂಡಾಲ ಕಿಂಕರ ಹರಿಶ್ಚಂದ್ರನಿಂದ ವಧೆಗೆ ಒಳಗಾಗಿ ಆತನ ಖಡ್ಗ ಪ್ರವಾಹವು ಕಂಠದ ಮೇಲೆ ಬೀಳಲು ಕಂಠ ಮಧ್ಯದಲ್ಲಿ ಶಿವನು ಸಾಕ್ಷಾತ್ಕಾರನಾಗಿ ಸಕಲ ದೇವತೆಗಳ ಮಧ್ಯದಲ್ಲಿ ಹರಿಶ್ಚಂದ್ರನ ಸತ್ಯಸಂಧತೆಯನ್ನು ಮೆರೆಸಿ ವಿಶ್ವಾಮಿತ್ರನ ೫೦ ಕೋಟಿ ವರ್ಷಗಳ ತಪಸ್ಸಾಮರ್ಥ್ಯದಲ್ಲಿ ಅರ್ಧವನ್ನು ಕೊಡಿಸುವನು. ಮಗ ರೋಹಿತನನ್ನು ಬದುಕಿಸುವನು. ಮುನ್ನಿನಂದದಿಂ ಹರಿಶ್ಚಂದ್ರನು ಸಕಲಸಿರಿವೈಭವಗಳಿಂದ ಅಯೋಧ್ಯೆಯ ಅರಸನಾಗುವನು. ಕಥೆಗೆ ಮಂಗಳವಾಗುವದು.

ಸಾಮಾನ್ಯವಾಗಿ ಜನಸಾಮಾನ್ಯರಲ್ಲಿ ಸಹ ಬಳಕೆಯಲ್ಲಿರುವ ಈ ಕಥೆಯು ರಾಘವಾಂಕನು ನಿರೂಪಿಸುವ ರೀತಿಯಲ್ಲಿ, ಚಿತ್ರಿಸುವ ಪಾತ್ರವರ್ಗದ ಚಿತ್ರಣೆಯಲ್ಲಿ, ಅಲ್ಲಲ್ಲಿ ಉಚಿತವಾಗಿ ಸೇರಿಸಿರುವ ವರ್ಣನೆಗಳಲ್ಲಿ ನಿರ್ಮಿಸಿರುವ ಸಂಭಾಷಣೆಗಳಲ್ಲಿ, ರಚಿಸಿರುವ ನಾಟ್ಯ ರೀತಿಯ ದೃಶ್ಯಗಳಲ್ಲಿ, ಹೆಚ್ಚಾಗಿ ಇಟ್ಟುಕೊಂಡಿರುವ ಉಚ್ಚ ಮಟ್ಟದ ಧ್ಯೇಯವಾದಿತ್ವದಲ್ಲಿ, ಬಳಸಿರುವ ಕನ್ನಡ ವೃತ್ತಗಳು ಹಾಗೂ ಶಬ್ದ ಭಾಂಡಾರದಲ್ಲಿ, ಹೊಸದಾಗಿ, ಮುದ್ದಾಗಿ ಆಕರ್ಷಣೀಯವಾಗಿ, ಸುಲಭ ಗ್ರಾಹ್ಯವಾಗಿ, ಗಂಭೀರಯುತವಾಗಿ ಮೂಡಿ ಬಂದಿದೆ. ಹಂಪೆಯಾಳ್ದನ ಸ್ತುತಿ

ಯಿಂದ ಪ್ರಾರಂಭಿಸುವ ರಾಘವಾಂಕನು ಹಂಪೆಯರಸನಂ ಪೊಗಳ್ವ ನಾಲಿಗೆಯೊಳನ್ಯ ದೈವವ ಭವಿಗಳಂ ಕೀರ್ತಿಸಿ ನಾದೊಡೆ ಮನಸಿಜಾರಿಯ ಭಕ್ತನದೆ ತಾನೆಂದು ಭಾಳಲೋಚನನಲ್ಲಿ ಭಕ್ತಿ ಗುರುತ್ವವನ್ನು ತೋರಿಸುವನು.

ಮುಕ್ಕಣ್ಣನ ಬಗೆಗೆ ಈತನಲ್ಲಿರುವ ಭಕ್ತಿಯು ಅಪಾರವಾದುದು. ಮಂಗಲಾಚರಣದ ೮-೧೦ ಪದ್ಯ ಗಳಲ್ಲಿ ವಿರೂಪಾಕ್ಷನ ಸ್ತುತಿಯಿದೆಯಲ್ಲದೆ ಆರಂಭದ ಪದ್ಯ ದಲ್ಲಿ ಶ್ರೀಪತಿಗೆ ಸೊಬಗನುಡುಪತಿಗೆ ಶಾಂತಿಯನು..... ..... ಸ್ವಾಹಾಪತಿಗೆ ತೇಜವನು ಕೊಟ್ಟವನು ವಿರೂಪಾಕ್ಷನೆಂದು ತನ್ನ ಅಸದೃಶವಾದ ಭಕ್ತಿಯನ್ನು ತೋರಿಸಿದ್ದಾನೆ. ಬೇಟೆಯಾಡುತ್ತ ಬಂದ ಹರಿಶ್ಚಂದ್ರ ಪಂಪಾಪತಿಯ ಸನ್ನಿಧಾನವನ್ನು ತಲುಪುವನು. ಗುರು ವಶಿಷ್ಠನ ವಿಶ್ವಾಮಿತ್ರ ಮುನಿಯ ಬನವು ಕಥೆಯ ಹಾಗೂ ಮಹತ್ವದ ಸನ್ನಿವೇಶಗಳೆಲ್ಲ ಹಂಪೆಯಾಳ್ದನ ಭೂಮಿ ಯಲ್ಲಿಯೇ. ಹರಿಶ್ಚಂದ್ರ ಮಾತಂಗ ಕನ್ನೆಯರ ಸಂವಾದ, ಕನಸು ಕಂಡದ್ದು ರಾಜ್ಯವನ್ನೆಲ್ಲ ವಿಶ್ವಾಮಿತ್ರನಿಗೆ ಧಾರೆ ಎರೆದು ಕೊಟ್ಟದ್ದು ಇವೆಲ್ಲವೂ ಇಲ್ಲಿಯೇ.

ಕಥೆಯಲ್ಲಿ ಅಲ್ಲಲ್ಲಿ ಬರುವ ಶಿವ ಶಿವ ಮಹಾದೇವ ಮುಕ್ಕಣ್ಣ ಹರ ಕೊನೆಗೆ ನೀಲಕಂಠನ ಸಾಕ್ಷಾತ್ಕಾರ ಮೊದಲಾದವು "ಅಖಿಲ ಲೋಕಕ್ಕೆ ಮೃಡನಲ್ಲದನ್ಯ ದೈವವಿಲ್ಲವೆಂಬ" ಈತನ ಅಭಿಮತಕ್ಕೆ ಸಾಕ್ಷಿಯಾಗಿದೆ. ಇಂತಿಪ್ಪ ನಿಸ್ಸೀಮ, ನಿಶ್ಚಲ, ನಿಬಿಡವಾದ ಭಕ್ತಿ ಆ ಹರನಲ್ಲಿ. ಹೀಗೆ ಕಾವ್ಯ ಪ್ರವಾಹದ ಶುಭ್ರ ಮಳಲಾಗಿ ಶಿವಭಕ್ತಿ ಶಿವಾಚಾರಗಳು ಗೋಚರಿಸಿವೆಯಾದರೂ ಉದ್ದುದ್ದ ನೀರಸವಾದ ಧರ್ಮ ತತ್ವಾನ್ವೇಷಣೆಯಲ್ಲಿ ತೊಡಗಿಲ್ಲ. ಕಥೆಯ ಪ್ರವಾಹವು ಎಡೆತಡೆಯಿಲ್ಲದೆ ಎಲ್ಲಿಯೂ ಭಂಗ ವನ್ನು ಹೊಂದದೆ ಚ್ಯುತಿಯನ್ನು ಕಾಣದೆ ಮುಂದೆ ಸಾಗಿದೆ.

ದೇವೇಂದ್ರನ ಅಮರಾವತಿಯಲ್ಲಿ ವಶಿಷ್ಠ — ವಿಶ್ವಾಮಿತ್ರರ ವಾಗ್ವಾದದಿಂದ ಆರಂಭವಾಗುವ ಈ ನಾಟಕವು ಮುಂದೆ ವಸಂತಋತು ವಿಹಾರಕ್ಕೆಂದು ವನ ದಲ್ಲಿ ಅರಸನು ಸುಖಮಂ ಸವಿದದ್ದು ಪುರದಿರಾತ್ರಿಯು ಚರಿಸಿದ್ದು, ಬೇಟೆಯಾಡುತ್ತ ಗುರು ವಿರೂಪಾಕ್ಷನಂ ಕಂಡುದು, ಹೊಲತಿಯರೊಡನೆ ಸಂವಾದಿಸುವದು, ಹೀಗೆ ಹಲವು ದೃಶ್ಯಗಳಿಂದ ಕೂಡಿದೆ ಎಂದು ಧಾರಾಳವಾಗಿ ಹೇಳಬಹುದು. ಸನ್ನಿವೇಶಗಳು ಹಾಗೂ ದೃಶ್ಯಗಳಿಗೆ ತಕ್ಕಂತೆ ಪದ್ಯಗಳು ಬೇರೆಯಾಗುವವು. ಈ ದೃಶ್ಯದಲ್ಲಿ ಬರುವ ಸಂವಾದಗಳಂತೂ ರಾಘವಾಂಕನ ಜಾಣ್ಮೆ, ಕಥನ -ಕೌಶಲದ ಕನ್ನಡಿಗಳಾಗಿವೆ. ಹರಿಶ್ಚಂದ್ರ, ಮಾಯಾಂಗನೆಯರ-ಸಂಭಾಷಣೆಯು ಓದುಗರನ್ನು ಅಚ್ಚರಿ ಪಡಿಸುತ್ತದೆ. ತಮ್ಮನ್ನು ಲಗ್ನವಾಗಲು ಒಲ್ಲೆನ್ನುವ ಅರಸನನ್ನು ತಮ್ಮ ಮಾತಿನ ಕುಶಲತೆಯಿಂದ ಸೋಲಿಸಲು ಎಷ್ಟು ಪ್ರಯತ್ನಿಸಿದರೂ ಅವರಿಗಿಂತಲೂ ಚತುರನಾದ ಹರಿಶ್ಚಂದ್ರನು ಅವರ ಮಾತಿನಲ್ಲಿಯೇ ಪ್ರತ್ಯುತ್ತರವನ್ನು ಹುಟ್ಟಿಸಿ ಅವರನ್ನು ಸೋಲಿಸುತ್ತಾನೆ. ಹೀಗೆ ಮಾತಿನಲ್ಲಿ ಮಾತು ಹುಟ್ಟಿಸುವುದರಲ್ಲಿ ರಾಘವಾಂಕನದು ಪಳಗಿದ ಕೈ. ಇದರಂತೆ ವಶಿಷ್ಠ-ವಿಶ್ವಾಮಿತ್ರರ ಸಂವಾದ, ವಿಶ್ವಾಮಿತ್ರ ಹರಿಶ್ಚಂದ್ರರ ವಾಗ್ವಾದ, ರುದ್ರಭೂಮಿಯಲ್ಲಿ ಗಂಡ-ಹೆಂಡಿರ ಸಂಭಾಷಣೆ ಇವೆಲ್ಲ ವಾಚಕರ ಕುತೂಹಲವನ್ನು ಕೆರಳಿಸಿ ಕಿವಿಗಳನ್ನು ನಿಮಿರಿಸುತ್ತವೆ. ಈ ಸಂವಾದಗಳು ವ್ಯಾವಹಾರಿಕ ಉಪಮೆಗಳಿಂದ ಕೂಡಿ ಕುತೂಹಲ ಜನ್ಯಗಳಾಗಿವೆಯಲ್ಲದೆ ಕಾವ್ಯಕ್ಕೆ ಅಲಂಕಾರ ಪ್ರಾಯಗಳಾಗಿವೆ. ಕಾವ್ಯಸರಸತಿಯ ಸೀಮಂತ ಮಣಿಗಳಾಗಿವೆ. "ಪಡೆಯೈದೆ ಮಡಿಯಿತ್ತೆ ಮಡಿಯಿತ್ತು" ..... ಈ ಪದ್ಯದಲ್ಲಿಯ ಸಂಭಾಷಣೆ ಯಂತೂ ಶ್ಲಾಘನೀಯವಾಗಿದೆ. ಈ ನಾಟಕೀಯತೆ ಈ ಸಂವಾದಗಳ ರೀತಿ-ನೀತಿಯ ಕುಶಲತೆಗಳನ್ನು ಕಂಡುಂಡರೆ ರಾಘವಾಂಕನು ಕವಿ ಶರಭಭೀರುಂಡನಿದ್ದಂತೆ ನಾಟ್ಯ ಭೀರುಂಡನೂ, ಸಂಭಾಷಣಾಶಿಲ್ಪಿಯೂ ಇದ್ದನೆಂದು ಹೇಳಬಹುದಾಗಿದೆ.

ಕಾವ್ಯದಲ್ಲಿ ಬರುವ ಸಣ್ಣದೊಡ್ಡ ವರ್ಣನೆಗಳು ಸುಂದರವಾಗಿವೆ; ಸಂದರ್ಭಕ್ಕುಚಿತವಾಗಿ ಬಂದಿವೆ; ಬೇಸರಿಸುವ ಮುನ್ನವೇ ಮುಕ್ತಾಯ ಹೊಂದುವಂಥವಿವೆ. ಸಮುದ್ರ ವರ್ಣನೆ ಒಂದೇ ಒಂದು ಪದ್ಯ. ಲಾಳ ದೇಶದ ವರ್ಣನೆ ಗಂಗಾನದಿ ಕಾಶೀ ಪಟ್ಟಣಗಳ ಬಿತ್ತರಿಣೆ ಇತ್ಯಾದಿ ವರ್ಣನೆಗಳು ಚಿಕ್ಕವಾದರೂ ಸುಂದರವಾಗಿಯೇ ಬಂದಿವೆ. ವಸಂತಋತು, ಋತುವಿನಲ್ಲಿ ವನಕ್ಕೆ ವಿಶ್ರಾಂತಿಗಾಗಿ ಹೋದ ಹರಿಶ್ಚಂದ್ರನ ಇರುವಿಕೆಯ ವರ್ಣನೆ, ಅದರಂತೆ ಸೂಳೆಗೇರಿಯ ವರ್ಣನೆ ಇವು ತುಸು ದೀರ್ಘವಾಗಿದ್ದರೂ ಒಳ್ಳೇ ಹಾರ್ದಿಕವಾಗಿವೆ. ಶೃಂಗಾರವು ಹೊರಸೂಸುತ್ತಿದೆಯಾದರೂ ಎಲ್ಲಿಯೂ ಅಶ್ಲೀಲಕ್ಕೆ ಎಡೆಗೊಟ್ಟಿಲ್ಲ. ಸೂರ್ಯಾಸ್ತ, ಸಂಧ್ಯಾಕಾಲ, ರಾತ್ರಿ, ಚಂದ್ರೋದಯ ಇವೆ ಮೊದಲಾದ ವರ್ಣನೆಗಳು ರಾಘವಾಂಕನ ವರ್ಣನಾ

ವೈಖರಿಯನ್ನು ಎತ್ತಿ ತೋರಿಸುತ್ತವೆ. "ಇದು ಮೂಡನಂಗನೆಯ ಸಿಂಧೂರ ಆಲೋಕವೋ ..... ಬೇಡೆಂದು ಯಮ ಪಡೆವಡಂಗಾರವೆನಿಸಿತು." ಈ ಪದ್ಯವನ್ನು ವರ್ಣನಾ ವೈಖರಿಗೆ ಉದಾಹರಣೆ ಎಂದು ಕೊಡಬಹುದು. ಈ ದೀರ್ಘ ವರ್ಣನೆಗಳಲ್ಲಿ ಕವಿಯು ವಾಚಕರನ್ನು ಅವರಷ್ಟಕ್ಕೇ ಬಿಡದೆ ಕಥಾನಾಯಕ ಹರಿಶ್ಚಂದ್ರನನ್ನು ಅವರ ಜತೆಯಲ್ಲಿ ಇರುವಂತೆ ಕಥೆಯ ಸಂಬಂಧವನ್ನೂ ಸಾಮೀಪ್ಯವನ್ನೂ ಇಟ್ಟುಕೊಳ್ಳುತ್ತಾನೆ. ವಸಂತಾಗಮನ ಕಾಲಕ್ಕೆ ಜೈತ್ರವಿಹಾರಿಯಾಗಿ ಸುಖ ಲೋಲುಪದಲ್ಲಿ ತೊಡಗಿದ ಹರಿಶ್ಚಂದ್ರನನ್ನು ನೋಡಿ ಮರುಕ್ಷಣದಲ್ಲಿಯೇ ಅತನಿಗೆ ಒದಗಲಿರುವ ಅಗಣಿತ ಆಪತ್ತುಗಳನ್ನು ಮೊದಲೇ ತಿಳಿದ ವಾಚಕರು ಮರುಗದೆ ಇರರು. ಮರುಳ ಹಾಗೂ ದುರ್ದೈವಿ ಹರಿಶ್ಚಂದ್ರನು ದೇವತೆಯೋರ್ವಳಿಗೆ ಬಲಿಯಾಗಲಿರುವ ನಿರಪರಾಧಿ ಪ್ರಾಣಿಯಂತೆ ಕಂಡುಬಾರದಿರನು. ಶೃಂಗಾರದ ಆವರಣದಲ್ಲಿ ಮುಸುಕಲ್ಪಟ್ಟರೂ ಏಕೋ ಮನದಲ್ಲಿ ಹರಿಶ್ಚಂದ್ರನ ಬಗ್ಗೆ ಕಳವಳ. ಇಲ್ಲಿಯೂ ಸಹ ಕವಿಯು ನಿಸರ್ಗ ನಿಯಮವನ್ನು ಅನುಸರಿಸಿದಂತೆ ತೋರುತ್ತದೆ. ಬೆಳಕಿನ ತರುವಾಯ ಕತ್ತಲೆ, ಕತ್ತಲೆಯ ನಂತರ ಬೆಳಕು ಬರುವಂತೆ ಮಾನವನಾದ ಹರಿಶ್ಚಂದ್ರನಿಗೂ ಸುಖದ ತರುವಾಯ ದುಃಖ; ದುಃಖದ ನಂತರ ಸುಖವು ಬರುವದು ಎಂದು ಮೊದಲೇ ಸೂಚಿಸುವಂತೆ ತೋರುತ್ತದೆ.

ಪಾತ್ರ ಚಿತ್ರಣತೆಯಲ್ಲಿಯೂ ರಾಘವಾಂಕನೂ ಅಸಾಧ್ಯಶ್ಯ ವ್ಯಕ್ತಿತ್ವವನ್ನು ತೋರಿಸಿದ್ದಾನೆ. ಕಥಾ ನಾಯಕ ಹರಿಶ್ಚಂದ್ರ ಸತ್ಯದ ಮೂರ್ತಿಯೇ ಆಗಿದ್ದಂತೆ ಅತ್ಯಂತ ಪ್ರಜಾವತ್ಸಲನೂ, ಅಸಾದೃಶ್ಯ ದೈವೀ ಭಕ್ತಿಯುಳ್ಳವನೂ, ಒಳ್ಳೇ ಮಾತುಗಾರನೂ, ಧೀರನೂ, ದಾನಿಯೂ, ವಿಲಾಸಿಯೂ, ಶೂರನೂ, ಕರ್ತವ್ಯ ಪರಿಪಾಲಕನೂ, ವಿನಯಶಾಲಿಯೂ, ಆಗಿದ್ದನೆಂದು ಸಹಜವಾಗಿ ತಿಳಿಯುತ್ತದೆ. ಎಲ್ಲಿಯೇ ಇದ್ದರೂ ಅತನು ಲಿಂಗಪೂಜೆಯನ್ನು ಬಿಟ್ಟವನಲ್ಲ. ಬೇಟೆಯಾಡುತ್ತ ಬಂದು ಪಂಪಾಪತಿಯ ಆಶೀರ್ವಾದ ಪಡೆದುಕೊಂಡು ಗುರುಪತಿಪ್ತನಿಗೆರಗಿದ. ಸತ್ಯ ಪರೀಕ್ಷೆಯಲ್ಲಿ ಅನೇಕ ರೀತಿಯ ಆಪತ್ತನ್ನು ತೋರಿಸಿದರೂ ಬೆದರಿಸಿ, ಗದರಿಸಿ, ಹಿಂಸಿಸಿದರೂ ಸತ್ಯವನ್ನು ಬಿಡಲಿಲ್ಲ. ಪಾಲಿಗೊದಗಿದ ಕರ್ತವ್ಯವೆಂದು ಕೈಹಿಡಿದ ಹೆಂಡತಿಯನ್ನು ತಿಳಿದೂ ಕೊಲ್ಲದೆ ಬಿಡಲಿಲ್ಲ. ತನ್ನ ನಾಯಕನಿಗೆ ಎಷ್ಟೊಂದು ತೊಂದರೆಯನ್ನು ಕೊಟ್ಟಿನಲ್ಲ ಎಂದು ಮರುಗಿ ವಿಶ್ವಾಮಿತ್ರನಿಗೆ ವಿಗಡ,ವಿಶ್ವಮೃತ್ಯು,ಸಕಲಗುಣ ಸಂಪನ್ನ, ದುರ್ಮಂತ್ರ, ಬಲವಂತ ಹೀಗೆ ಹಲವು ವಿಶೇಷಣಗಳನ್ನು ರಾಘವಾಂಕನು ಹಚ್ಚಿದರೂ ಹರಿಶ್ಚಂದ್ರನಿಗೆ ಮಾತ್ರ ಆ ಮುನಿಯು ಎರಡನೆಯ ಮುಕ್ಕಣ್ಣ, ಮುನಿವರ ಮುನಿಗಳಾದಿತ್ಯ, ಸರ್ವಮುನಿವರೇಶ್ವರನೇ ಆಗಿ ಕಾಣುವನು. ನಿರಪರಾಧಿಯಾದ ಹರಿಶ್ಚಂದ್ರನಿಗೆ ವಿಶ್ವಾಮಿತ್ರನು ಕೊಡುವ ಕಿರುಕಳ, ಕಠೋರ, ಕುಹಕ, ಕಾಠಿಣ್ಯಗಳು ಯಾರನ್ನಾದರೂ ಸಿಟ್ಟಿಗೆಬ್ಬಿಸದಿರವು. "ಮುನಿಯು ತಳೆದ ಅನಿಮಿತ್ತ ವೈರ, ಬದ್ಧದ್ವೇಷ" ಅತಿಕೋಪ, ದುರ್ಯೋಧನೆ, ದುರ್ಮಂತ್ರ, ಮನವೊಲಿಸುವ ದುರ್ನೀತಿಗಳು ಮೇರುವಿನಂತೆ ಅಚಲನಾದ ಹರಿಶ್ಚಂದ್ರನೆದುರಿಗೆ ತಲೆಬಾಗುವವು. ಇಷ್ಟಾದರೂ ಆ ಮುನಿಗೆ ತಂದೆ, ಮುನಿವರ ಎಂದೇ ಸಂಬೋಧಿಸುವನು. ಇದೆಂತಹ ಶಾಂತ ಸ್ವಭಾವ! ಇದೆಂತಹ ಅಚಲತೆ!! ಮುನಿ ನೊಡುವ ತಾಪ ಅನುತಾಪಗಳಿಗೆ ಆಕಾಶವು ಬಿರಿಯ ಬಹುದು. ಪರ್ವತಗಳು ಸಿಡಿದೇಳಬಹುದು. ಆದರೆ ಹರಿಶ್ಚಂದ್ರನು ಮಾತ್ರ ಎಂದಿನಂತೆ ಶಾಂತಿ, ಸದ್ಭಾವನೆ, ಸುಹೃದಯತೆ, ಅನನ್ಯಭಕ್ತಿ, ನಗೆಮುಖದಿಂದ ಕೂಡಿರುವನು. ಧನ್ಯ ಹರಿಶ್ಚಂದ್ರ- ನಿಗೆ ಸತ್ಯವೆ ಬಿಡದೆ ಸಾರ್ಥಕ ನಾಡೆಯಲಾ; ಸತ್ಯವೇ ನೀನು ನೀನೇ ಸತ್ಯ ಸತ್ಯವೇಹರ ಹರನೇ ಸತ್ಯ ಕೊನೆಗೆ ನೀನೇ ಹರ, ಹರನೇ ನೀನೆಂಬ ಸ್ಥಿತಿಯನ್ನೈದಿದೆಯಲ್ಲವೇ ಎಂದು ವಾಚಕರು ತಿಳಿದರೆ ತಪ್ಪೇನು! ಹರಿಶ್ಚಂದ್ರ ಶಾಂತಿ-ದಾಂತಿಗಳ ರಸಘಟ್ಟ; ಸತ್ಯದ ಸಜೀವಾಕಾರ; ಕರುಣೆ; ಶೌರ್ಯ-ಧೈರ್ಯ ಭಕ್ತಿಭಾವನೆಗಳ ಹಿಮಾಚಲ.

ಕಥಾನಾಯಿಕೆ ಚಂದ್ರಮತಿಯು ಭರತಖಂಡದ ಆದರ್ಶ ಸ್ತ್ರೀರತ್ನ. "ವರರೂಪಿನೊಳು ರತಿಗೆ, ಸೌಭಾಗ್ಯದೊಳು ಸಿರಿಗೆ, ಜಾಣಿನೊಳು ವಾಣಿಗೆ, ಚರಿತದೊಳು ಗಂಗೆಗೆ, ಪತಿಭಕ್ತಿಯೊಳು ಅರುಂಧತಿಗೆ, ಸರಿ ಜಸದೊಳು ಪರಮ ರೋಹಿಣಿಗೆ, ಪುಣ್ಯದೊಳು ಸ್ವಧಾತರುಣಿಗೆ, ವಂದ್ಯತೆಯೊಳು ಗಾಯತ್ರಿಗೆ," ಸರಿದೊರೆ ಎನಿಸಿದ ಚಂದ್ರಮತಿಯು ಪತಿಯ ಹೆಜ್ಜೆಯಲ್ಲಿ ಹೆಜ್ಜೆಯನಿಕ್ಕುತ್ತ ಪ್ರಸಂಗ ವಶದಲ್ಲಿ ಅವನಿಗೆ ಮಾರ್ಗದರ್ಶಕಳಾಗುವಳು. ದುಃಸ್ವಪ್ನವನ್ನು ಕಂಡ ಹರಿಶ್ಚಂದ್ರನು ಕೆಲಹೊತ್ತು

ವಿಚಾರಮಗ್ನನಾಗಿರಲು . " ಬಗೆವೊಡೀಕನಸು ಗುರು ವಾಜ್ಞೆಯಂ ಮೀರಿತಕ್ಕೊಗೆವ ಕೇಡಿಂಗೆ ಸೂಚನೆ" ಎಂದು ಇಂಗಿತವನ್ನು ಹೇಳಿದುದಲ್ಲದೆ ಬಂದದ್ದು ಬರಲಿ "ಮುನಿಯಬೇಡ ಮಂತ್ರಿಗೆ ಮಗಂಗೆನಗೆ ರಾಜ್ಯಕ್ಕೆ..... ನಿನ್ನ ತೇಜದೇಳ್ಗೆಗೆ ಕೇಡು ಬಂದಡೆ ಬರಲಿ ನಿಮಗೆ ಸತ್ಯಮುಂ ಬಿಟ್ಟು ಕೆಡದಿರವನೀಶ" ಎಂದು ಬೇಡಿಕೊಳ್ಳುವಳು. ಇದೆಂತಹ ಸತ್ಯನಿಷ್ಠೆ; ಇದೆಂತಹ ಜಾಣ್ಮೆ ಹಾಗೂ ಮಾರ್ಗದರ್ಶನತ್ವದ ರೀತಿ. "ಎನ್ನಯ ಮಕ್ಕಳಂ ಮದುವೆಯಾಗು" ಎಂದ ವಿಶ್ವಾಮಿತ್ರನಿಗೆ ನಾಮಾಜ್ಯವನ್ನು ಧಾರೆ ಎರೆಯಲು ವಿಳಂಬಿಸುತ್ತಿದ್ದಾಗ ಪಂಕೇಜವಕ್ತ್ರೆ ಚಂದ್ರಮತಿ "ಹರನೇಕಭಾವವೆನಿಸುವ ಕಾರ್ಯಕಂ ಜೇದುತಿರಲು ಮಂತ್ರವ ಮಾಳ್ಪರೇ? ಪರಮಪದಿಂ ಸರ್ವ-ರಾಜ್ಯವನೀವುದರಸ" ಎಂದು ಹೇಳುವಳು. ಕಾಶಿಕ ನಿರ್ಮಿತ ಕೃತಕಾಗ್ನಿ ದಾರಿಯಲ್ಲಿ ಅವರಿಸಲು ದಿಕ್ಕು ತೋಚದಂತಾದ "ಗಂಡನಿಗೆ.... ಎಳಸಿ ಮುತ್ತೈದೆತನದಲಿ ಮುಂದೆ ಹೋದಪೆಂ...." ಎಂದು ದಾವಾಗ್ನಿಯಲ್ಲಿ ಧುಮುಕುವಳು 'ಉತ್ತಮರ ಮುಂದೆ ಅವಘಕ್ಕಿರಲಾವುದು' ಎಂಬಂತೆ ದಾವಾಗ್ನಿಯು ದೂರ ಕೊಟ್ಟಿತು. ದಕ್ಷಿಣೆಯ ಧನವನ್ನು ತೆಕ್ಕುವ ವೇಳೆ ಮುಗಿಯುತ್ತ ಬಂದಾಗ ಮರವಟ್ಟು ನಿಂತ ಗಂಡನಿಗೆ "....ನಾಲದಲಿ ಪ್ರೋದಸಿತು ಸ್ತೋಗಲೆಪ್ಪುಬ್ಬರಂ'ಮಾರಿ ಒಳಕುಳಿದುದಂ ಕಾಣುನಡೆ" ಎಂದು ಮಾರ್ಗ ತೋರಿಸುವಳು. ಮುಂದೆ"....ತಿಂತಿಣಿಯ ಸೂಳೆಗಾರರ ನಿಳಿಯ ರಕ್ಕಸಿಯ ಮಾಡ.... ಮೃತ್ಯುವಿನ ಬಲುಬಾಣಸದ ಹಂತಿಯಾಗಿರು"ವ ಮನೆಯಲ್ಲಿ ಆಳಾಗಿ ಆಕೆ ಪಡುವ ಕಷ್ಟ ವರ್ಣಿಸಲಸದಳ "ಒಡೆಯನತಿ ಕೋಪಿ, ಹೆಂಡತಿ ಮಹಾ ಮೂರ್ಖ.....ಮನೆಯ ನಪೆಮವರು ದುರ್ಜನರು" ಇಂಥವರ ಆಳಾಗಿ ತಾಯಿಮಕ್ಕಳು ದಿನಾಲು ಸತ್ತು ಹುಟ್ಟುತ್ತಿದ್ದರು. ಹುಲು—ಪುಳ್ಳಿ ತರಲು ಕಾಡಿಗೆ ಹೋದ ಮಗ ರೋಹಿತಾಶ್ವನು ಹಾವು ಕಚ್ಚಿ ಸತ್ತಾಗ ಚಂದ್ರಮತಿಯ ಶೋಕವನ್ನು ಪದ್ಯದಿಯಲ್ಲಿ ಬರೆಯಲಿಕ್ಕೆ ನಾಲದೆ ಒಗ್ಗಪೆ ಮಂದಾನಿಲಶಗಳೆಯನ್ನು ಉಪಯೋಗಿಸಿದ್ದಾನೆ ರಾಘವಾಂಕ. ಕೊನೆಗೆ ಕಾಶೀರಾಜನ ಪುತ್ರನ ಕೊಲೆಯ ಆಪಾದನೆಗೆ ಒಳಗಾಗಿ ಮರಣದಂಡನೆ ಹೊಂದಿ ಪತಿಯ ಕೈಯಿಂದಲೇ ಸಾಯಬೇಕಾಗುತ್ತದೆ. ಸಾಯುವ ಮುನ್ನ ".....ಶಿವನ ನಿರ್ಮಲ ರೂಪವನ್ನು ನೆನೆದು.....ಹರಿಶ್ಚಂದ್ರರಾಯಂ ಸತ್ಯವೆರಸಿ ಬಾಳಲಿ ಮಗಂ ಮುಕ್ತನಾಗಲಿ ..... ರಾಜ್ಯ ದೊಡೆಯ ವಿಶ್ವಾಮಿತ್ರನಾಗಲಿ....." ಎಂದು ಹರಕೆ ಬೇಡುತ್ತಾಳೆ. ಹೀಗೆ ರಾಘವಾಂಕನ ಚಂದ್ರಮತಿ ಸತ್ಯವಂತೆ, ಧೈರ್ಯವಂತೆ, ರಾಜಕಾರಿಣಿ, ಆದರ್ಶ ಸತಿ, ಮಾತೆ, ಭಕ್ತಪರಾಯಿಣಿ, ಕನ್ನಡ ಸಾಹಿತ್ಯನೀಲವ್ಯೋಮದಲ್ಲಿ ಚಿರಂತನವಾಗಿ ಬೆಳಗುವ ಧ್ರುವ ನಕ್ಷತ್ರ.

ವಿಶ್ವಾಮಿತ್ರನು ಈ ನಾಟಕದ ಸೂತ್ರಧಾರನೋ ಎಂಬಂತೆ ಭಾಸವಾಗುತ್ತದೆ. "ಅಖಿಳ ಜೀವಾವಳಿಯಲಿ ಭಾವಿಸಿಡೆ ಕುಂದನಲ್ಲದೆ ಜೀವಕಾಣಿಪಿಹ ಭಾವ" ಸೀಮಾತೀತ ಛಲ ನಿಷ್ಕಾರಣ ವೈರ, ಬದ್ಧದ್ವೇಷ, ಅತಿಕೋಪ ಈ ಗುಣಗಳನ್ನು ತಾಳಿ "ಆಡಂಬರ ಸಿಡಿಲು—ಗಜರಿ ಗರ್ಜಿಸಿ ಮೇಘದಿಂದ ಪೊರಮೊಡುವಂತೆ ವಿಶ್ವಾಮಿತ್ರನು ವಿಶ್ವವೃತ್ಯವೇ ಆಸುರದ ಕೋರಡಿಗ" ತಾನೆಂಬಂತೆ ಭೂಮಿಗೆ ಬರುವನು. ಸುವರ್ಣ ಯಾಗ, ವೈಭವಸಂಕುಳ, ಮಾತಂಗ ಕನ್ಯೆಯರು ದಾವಾಗ್ನಿ ಮೊದಲಾದವುಗಳಿಂದ ಹರಿಶ್ಚಂದ್ರನಿಗೆ ಹಲವಾರು ತೊಂದರೆಗಳನ್ನು ತಂದೊಡ್ಡುವನು. ಅವನ್ನೆಲ್ಲ ಓದಿದರೆ ವಿಶ್ವಾಮಿತ್ರನು ನಿರ್ದಯಿ, ನಿಷ್ಠುರ, ನಿರ್ದಾಕ್ಷಿಣ್ಯನೆಂದು ತೋರುತ್ತಾನೆ. ಆದರೆ ಬಿಕ್ಕಟ್ಟಿನ ವ್ಯಸಂಗದಲ್ಲಿ ಹರಿಶ್ಚಂದ್ರನ ಸಮಸ್ಯೆಗಳನ್ನು ಬಗೆಹರಿಸಲು ತಾನೇ ಮುಂಬರುತ್ತಾನೆ. ಕೊಟ್ಟವಧಿಯು ಮೀರುತ್ತ ಬಂದಿರಲು ಅಗ್ನಿಯನ್ನು ನಿಪ್ಪನ ಹೇಷಜಲ್ಲ ಕಳಿಸಿ ಅತನ ಹೆಂಡಿರು ಮಕ್ಕಳನ್ನು ಕೊಳ್ಳಹಜ್ಜುವದು; ಹರಿಶ್ಚಂದ್ರನನ್ನು ಕೊಳ್ಳಲಿಕ್ಕೆಂದು ಯಮನನ್ನು ಚಾಂಡಾಲ ವೀರಬಾಹುಕನನ್ನಾಗಿ ಕಳಿಸುವದು; ಇವೆಲ್ಲ ವಿಶ್ವಾಮಿತ್ರನಿಂದ ಆಗದಿದ್ದರೆ ಹರಿಶ್ಚಂದ್ರನ ಗತಿ ಏನಾಗುತ್ತಿತ್ತು ಎಂಬುದು ವಿಚಾರಾಸ್ಪದವಾದ ಸಂಗತಿ. ಕಷ್ಟ ಪರಂಪರೆಯನ್ನು ಕೊಟ್ಟರೂ ಅರಸನು ಶೂನ್ಯನಾಗಿ ದಿಙ್ಮೂಢನಾಗಿ ನಿಂತಾಗ ದಾರಿಯನ್ನು ಕಲ್ಪಿಸಿ ಕೊಡುವ, ಸಮಸ್ಯೆಗಳನ್ನು ಬಗೆಹರಿಸಲು ಕಾರಣವಾಗುವ ವಿಶ್ವಾಮಿತ್ರನು ಹರಿಶ್ಚಂದ್ರನ ಹಿತಚಿಂತಕನೆಂದೇ ಭಾವಿಸಬೇಕಾಗುತ್ತದೆ. ಎಲ್ಲ ಕಷ್ಟಕಾರ್ಪಣ್ಯಗಳನ್ನು ಸಹಿಸಿ ಸತ್ಯವನ್ನು ಮೆರೆಸಿದ ಹರಿಶ್ಚಂದ್ರನಿಗೆ ೫೦ ಕೋಟಿ ವರ್ಷಗಳಲ್ಲಿ ಮಾಡಿದ ಪುಣ್ಯದ ಅರ್ಧವನ್ನು ಕೊಟ್ಟು ಅತನಿಗೆ ತಾನು ಮುನ್ನ ಕಸಿದುಕೊಂಡ ಸರ್ವರಾಜ್ಯ ಪರಿವಾರವನ್ನೆಲ್ಲ "ಏನು ಕುಂದದಲೆಯಾಗಳಿತುಳು ಕವನುಗಿಡದೆ" ಒಪ್ಪಿಸುವನು. ವಿಶ್ವಾಮಿತ್ರನ ಕಷ್ಟಕಾರ್ಪಣ್ಯದ ಕುಲುಮೆಯಲ್ಲಿ ಸಿಕ್ಕಿ

ಹರಿಶ್ಚಂದ್ರನು ಪುಟಕ್ಕಿಕ್ಕಿದ ಅಪರಂಜಿಯಂತೆ ಮತ್ತಿಷ್ಟು ತೇ ಜೋ ವಂ ತ ನಾ ಗಿ ಹೊರಬರುವನು. ಹೀಗೆ ವಿಶ್ವಾಮಿತ್ರನು ವಿಶ್ವಮೃತ್ಯುವೆಂದು ಮೊ ದ ಲು ತೋರಿದರೂ ಹೆಸರಿಗೆ ತಕ್ಕಂತೆ ವಿಶ್ವಮಿತ್ರನಾಗಿಯೇ ಉಳಿಯುವನು. ಕೊನೆಯಲ್ಲಿ ಕವಿಯು ಆತನನ್ನು 'ಮುನಿಮುಖ್ಯ, ಮುನಿಪುಂಗವ ಮುನೀಸ್ವತ್ಯ' ನೆಂದು ಹೊಗಳಿರುವನು.

ನಕ್ಷತ್ರಕನು ಗುರುವಿಗೆ ತಕ್ಕ ಶಿಷ್ಯ. "ಹುಸಿಯ-ಸೂಯಾ ನೀಚವೃತ್ತಿ ನಿರ್ದಾಕ್ಷಿಣ್ಯ ನಿಷ್ಕರುಣ" ನೀತಿ ಗಳಲಿ ಹೆಸರುಳ್ಳ ನಕ್ಷತ್ರಕನು ಒಡೆಯನ ಆಜ್ಞೆಯಂತೆ ಹರಿಶ್ಚಂದ್ರನಿಗೆ ಹಲವಾರು ವಿಘ್ನಗಳನ್ನು ಒಡ್ಡುತ್ತಾನೆ. ಕೊನೆಗೆ ಹರಿಶ್ಚಂದ್ರನು ತನ್ನನ್ನೇ ಮಾರಿಕೊಂಡು ಹೊನ್ನ ರಾಶಿಯನ್ನು ಕೊಡಲು ನಕ್ಷತ್ರಕನು ತಲೆದೂಗಿ "..... ನಿನ್ನಿಷ್ಟಸಿದ್ಧಿ ಕೈನಾರಲಿ" ಎಂದು ಹೋಗುತ್ತಾನೆ.

ಸತ್ಯಕೀರ್ತಿ ಹರಿಶ್ಚಂದ್ರನ ನಚ್ಚಿನ ಸಚಿವ. ಹರಿಶ್ಚಂದ್ರ ದೇಶಕೋಶವನ್ನೆಲ್ಲ ಧಾರೆ ಎರೆದ ಬಳಿಕ ಸಹ ಅವನ ಜೊತೆಗಿದ್ದು ದುಃಖ ಕೋಟಲೆಯಲ್ಲಿ ಪಾಲುಗಾರ ನಾಗುತ್ತಾನೆ. ಚಾಂಡಾಲ ಕಿಂಕರನಾದ ತನ್ನ ಒಡೆಯನ ಕಿಂಕರನಾಗಿ ನಿತ್ಯವೂ ಮುಂದೆ "ಜಾವದೊಳೆದ್ದು..... ..... ಗಂಗಾಂಬುವಂ ಮಿಂದು ಕಾಶೀಪತಿಯನರ್ಚಿಸಿ.....ಎನ್ನ ಪತಿಗೆ ಬಂಧನ ಮೋಕ್ಷಮಂ ಮಾಡಿ ಕರುಣಿಸೆಂದು..... ಭೂಪಾಲ ಮಿಂದೆ ನೆನೆಯದಿರಿ ಪರಕರುಣಿಸುವನು" ಎಂದು ಧೈರ್ಯವನ್ನು ಹೇಳುತ್ತಾನೆ. ಇಂತಹ ಆದರ್ಶ ಮಂತ್ರಿಯನ್ನು ಪಡೆದ ಹರಿಶ್ಚಂದ್ರ ಧನ್ಯನೇ ಸರಿ.

ರಾಘವಾಂಕನ ಕಥನ ಕೌಶಲವು ಒಳ್ಳೇ ಮಾರ್ಮಿಕ ವಾಗಿ ಬಂದಿದೆ. ಛಂದೋಬಂಧವನ್ನು ಬಳಿಸಿ ಷಟ್ಪದಿ ಯಲ್ಲಿ ಕಾವ್ಯರಚನೆ ಮಾಡಿ ಷಟ್ಪದಿ ನಾಂಪ್ರದಾಯ ಸ್ಥಾಪಕನಾದ ಈ ಕವಿಯು ಕ್ಲಿಷ್ಟವಾದ ಹಳಗನ್ನಡ ಹಾಗೂ ಸಂಸ್ಕೃತ ಶಬ್ದಗಳಿಗೆ ಮಾರುಹೋಗಿಲ್ಲ. ಜನ-ಸಾಮಾನ್ಯರಲ್ಲಿ ರೂಢಿಯಲ್ಲಿರುವ ಪದಪ್ರಯೋಗಗಳನ್ನು ಬಳಸಿದ್ದಾನೆ. ಅಲ್ಲಲ್ಲಿ ಬಂದಿರುವ ಉಪಮೆ, ಉತ್ಪ್ರೇಕ್ಷೆ, ರೂಪಕ, ಇತ್ಯಾದಿ ಅಲಂಕಾರಗಳು, ಅನುಪ್ರಾಸ, ಯಮಕ ಮೊದಲಾದ ಶಬ್ದಾಲಂಕಾರಗಳು ಕಾವ್ಯಕ್ಕೆ ಎಂದಿಲ್ಲದ ಮೆರುಗನ್ನು ತಂದಿವೆ.

ಹೀಗೆ ಬಂದಿರುವ ಹೋಲಿಕೆಗಳಲ್ಲಿ ಸಹ ಒಂದು ಹೊಸತನವಿದೆ. ಇವು ಜನಸಾಮಾನ್ಯರಿಗೆ ರುಚಿಸುವಂ ತಹವೂ ಅವರವೇ ಆದವುಗಳು ಇರುವವು. "ಕೋಣ ನೆರಡುಂ ಹೋರೆ ಗಿಡುವಿಂಗೆ ಮಿತ್ತು" "ರೋಗಿ ಹಳಿ ದೊಡೆ ಹಾಲು ಹುಳಿಯಪ್ಪುದೇ?" "ಕಾಣದೊಡೆ ಮುಕುರ ಕೆಡವುದೆ?" "ಕುಲವ ನಾಲಗೆಯರುಹಿತು" ಸಂಗಮರ ಕುಲಮಂ ಕೆಡಿಸದು "ಮೂಗಂ ಕೊಯ್ದು ಕನ್ನಡಿಯ ತೋರುವಂತೆ" "ಹಸಿದ ಹುಲಿಯ ಮೀಶೆ ಯನ್ನು ಹಿಡಿದಲುಗಿ ನೋಡಿದೆ" "ತುಂಬಿರ್ದ ಬಂಡಿಗೆ ನೊರಂದಿಮ್ಮಿತೇ?." ಉತ್ತಮರ ಮುಂದಾವ ಠಕ್ಕಿರ ಲಾಪುದು. "ಕಡಿಗೆ ಮೆಣಸು ಹುಳಿದೊಡೆ ಜೋಳದಿಂ ಕುಂದೆ" "ನಾಡವುದ್ದಂ ತಿಂದು ಕುತ್ತಕೆಡದಿರ ಬಹುದೇ?" ಇವೇ ಮೊದಲಾದ ಮಾತುಗಳು ರಾಘ ವಾಂಕನ ಹೋಲಿಕೆಯ ಹೊಸತನ್ನು ಸಾರಿಹೇಳುತ್ತಿವೆ. ಅಲಂಕಾರಗಳಿಗೆ ಕವಿಯು ಶರಣುಹೋಗಿಲ್ಲ. ಕಥೆಯ ಓಟದಲ್ಲಿ ಅಲ್ಲಲ್ಲಿ ಉಪ್ಪಿನಕಾಯಿಯಂತೆ ಇವು ಕಾಣಿಸಿ ಕೊಳ್ಳುತ್ತವೆ. ಕಬ್ಬಿನ ಮೇಲೆ ಜೇನಿಟ್ಟಂತೆ ಕಾವ್ಯ ರುಚಿ ಯನ್ನೂ, ಓದುಗರ ರುಚಿಯನ್ನೂ ಹೆಚ್ಚಿಸುತ್ತವೆ. ಕಾವ್ಯದ ಓಘವು ಶಬ್ದಗಳ ಕೊರತೆಯಿಂದ ಎಲ್ಲಿಯೂ ಕುಂಠಿತವಾಗಿಲ್ಲ. ಸಮಯಕ್ಕೆ ತಕ್ಕಂತೆ ತಕ್ಕ ಪದ-ಪ್ರಯೋಗಗಳು ಸಹಜವಾಗಿಯೇ ಬಂದಂತಿವೆ. ಆಯಾ ಪ್ರಸಂಗದ ಭಾವವನ್ನು ಕೇವಲ ಶಬ್ದ ಜೋಡಣೆಯಿಂದಲೇ ತಿಳಿದುಕೊಳ್ಳಬಹುದಾಗಿದೆ. ಹರಿಶ್ಚಂದ್ರನಿಂದ ಹೊಡೆ ದೋಡಿಸಲ್ಪಟ್ಟ ಮಾತಂಗ ಕನ್ಯೆಯರು ಪರಿದುಬಂದ ಸ್ಥಿತಿಯನ್ನು ಬಣ್ಣಿಸುವ ಶಬ್ದ ಚಿತ್ರವನ್ನು ಉದಾಹರಣೆ ಗಾಗಿ ಕೊಡಬಹುದು.

ಶೋಕ, ಕರುಣೆ ರಸಗಳೇ ಹೆಚ್ಚಾಗಿ ಬಂದಿದ್ದರೂ ಶೃಂಗಾರ, ಬೀಭತ್ಸ, ಶಾಂತ, ರೌದ್ರ ಮೊದಲಾದ ಉಳಿದ ರಸಗಳೂ ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ.

ಹೀಗೆ ರಾಘವಾಂಕನು ನಿರೂಪಿಸಿದ ಕಥನ ಶೈಲಿ, ಚಿತ್ರಿಸಿದ ಪಾತ್ರ ಚಿತ್ರತೆ, ಬಣ್ಣಿಸಿದ ಚಿಕ್ಕ ದೊಡ್ಡ ವರ್ಣನೆಗಳು, ತೋರಿಸುವ ದೈವಭಕ್ತಿ, ಹೆಣೆದಿರುವ ಸಹಜ ಸಂಭಾಷಣೆಗಳು, ಕಾಣಿಸಿರುವ ಶೋಕ, ಕ್ರೋಧ ಸತ್ಯಸಂಧತೆ, ಕರ್ತವ್ಯನಿಷ್ಠೆ, ಭಕ್ತಿ ಇವುಗಳ ಸನ್ನಿವೇಶ ಗಳು ನಮ್ಮನ್ನು ನವರಸ ಪಾಕದಲ್ಲಿ ಮುಳುಗಿಸಿ ತೇಲಿ

ಸುತ್ತವೆ. ರಾಘವಾಂಕನೂ ನಾವೂ ಒಂದಾಗಿ ಬೆರೆತು ಹರಿಶ್ಚಂದ್ರನ ಸುಖ ದುಃಖಗಳಲ್ಲಿ ಸಮಭಾಗಿಗಳಾಗುತ್ತೇವೆ. ತನಗೊದಗುವ ಸುಖ ದುಃಖಗಳಿಗೆ ಹರಿಶ್ಚಂದ್ರನು ಹಿಗ್ಗದಿರಬಹುದು, ತಗ್ಗದಿರಬಹುದು. ಓದುಗರಾದ ನಾವು ಮಾತ್ರ ನಗುತ್ತೇವೆ; ಅಳುತ್ತೇವೆ; ಸಿಟ್ಟಿಗೇಳುತ್ತೇವೆ; ಕೊನೆಗೆ ಹರ್ಷಭರಿತರಾಗುತ್ತೇವೆ. ಅಧಿಕ ದಾನಿ, ಸತ್ಯಸಂಧ "ವೇದಪ್ರಮಾಣ ಪುರುಷನಾದ" ಹರನನ್ನು ಸಾಕ್ಷಾತ್ಕರಿಸಿಕೊಂಡ ಹರಿಶ್ಚಂದ್ರನನ್ನು ಹೊಗಳಿ ಜನ ಬದುಕಲಿ ಎಂದು ಮಹಾಲಿಂಗ ಭಕ್ತರ ಭಕ್ತ ರಾಘವಾಂಕನು ಹೇಳಿದುದು ಯಥೋಚಿತವಾಗಿದೆ.

# ಸಮಾಜ ಶಿಕ್ಷಣದ ಬಗೆಗೆ ಸಾರ್ವಜನಿಕರ ಅಭಿಪ್ರಾಯಗಳು ಹಾಗೂ ಅವುಗಳನ್ನು ಕಲೆ ಹಾಕಲು ಮಾಡಿದ ಪ್ರಯೋಗ

ಲೇಖಕರು : ಡಾ. ಎಮ್. ಝಡ್. ಖಾನ, ಲೆಕ್ಚರರ ಜಿ.ಬಿ.ಟಿ.ಸಿ. ಧಾರವಾಡ

ನಾನು ಕೆಲವೊಂದು ಪ್ರಾತಿನಿಧಿಕ ಸಮಾಜ ಶಿಕ್ಷಣ ವರ್ಗಗಳನ್ನು ಸಂದರ್ಶಿಸಿರುವೆನು. ಅವುಗಳಲ್ಲಿ ಕೆಲವೊಂದು ಹಳ್ಳಿಗಳಲ್ಲಿ ಹಾಗೂ ಪಟ್ಟಣಗಳಲ್ಲಿ. ಪುರುಷ ಹಾಗೂ ಸ್ತ್ರೀಯರಿಗಾಗಿ ತೆರೆಯಲ್ಪಟ್ಟ ಕನ್ನಡ, ಮರಾಠಿ ಮತ್ತು ಉರ್ದು ಭಾಷೆಗಳಲ್ಲಿ ನಡೆಯುತ್ತಿರುವ ವರ್ಗಗಳನ್ನು ಸಂದರ್ಶಿಸಿರುವೆನು. ಸಂದರ್ಶಿಸಿದಲ್ಲೆಲ್ಲ ಸಭೆ-ಸಮ್ಮೇಲನಗಳನ್ನು ಏರ್ಪಡಿಸಿಕೊಂಡು ಅಲ್ಲಿರುವ ಸಮಾಜ ಶಿಕ್ಷಣ ಕಾರ್ಯಕರ್ತರ ಹಾಗೂ ಸಂಘ-ಸಂಸ್ಥೆಗಳ ಅಭಿಪ್ರಾಯಗಳನ್ನು ಕೇಳಿಕೊಂಡಿರುವೆನು. ಮತ್ತು ಸಮಾಜ ಶಿಕ್ಷಣದ ವಿಷಯವಾಗಿ ಒಂದು ದಿನಚರಿಯನ್ನೂ ಕಾಯ್ದಿಟ್ಟಿರುವೆನು. ಕರ್ನಾಟಕದಲ್ಲಿ ಸಮಾಜ ಶಿಕ್ಷಣದ ಬಗೆಗೆ ಎತ್ತಲ್ಪಟ್ಟ ವಿಚಾರಗಳು ಬಹು ಮಹತ್ವದವಿದ್ದು ಇಡೀ ಭರತಖಂಡಕ್ಕೆ ಅನ್ವಯಿಸುವಂತಹವಿರುವವೆಂದು ಹೇಳಿದರೆ ತಪ್ಪಾಗದು.

ನಿರೀಕ್ಷಿಸಿದ ಬೇರೆ ಬೇರೆ ಪ್ರಕಾರದ ಸಮಾಜ ಶಿಕ್ಷಣದ ವರ್ಗಗಳ ವಿವರವು ಕೆಳಗಿನಂತಿದೆ :—

| ಸಂದರ್ಶಿಸಿದ ಸ್ಥಳಗಳು : | ಪಟ್ಟಣಗಳು | ಹಳ್ಳಿಗಳು |
|---|---|---|
| | ೧೨೦ | ೧೫೦ |

ಬೇರೆ ಬೇರೆ ಭಾಷೆಗಳಲ್ಲಿ ನಡೆಯುತ್ತಿರುವ ಸಮಾಜ ಶಿಕ್ಷಣದ ವರ್ಗಗಳು :

| ಕನ್ನಡ | ಮರಾಠೀ | ಉರ್ದು | ಸ್ತ್ರೀ ವರ್ಗಗಳು |
|---|---|---|---|
| ೧೨೦ | ೮೦ | ೩೦ | ೪೦ |

ಸಂದರ್ಶಿಸಿದ ವ್ಯಕ್ತಿಗಳು ಹಾಗೂ ಸಂಘಗಳು ಕೆಳಗಿನಂತಿವೆ :—

| | ವ್ಯಕ್ತಿಗಳು ಹಾಗೂ ಸಂಘ-ಸಂಸ್ಥೆಗಳು | ಅವರ ಸಂಖ್ಯೆ |
|---|---|---|
| ೧. | ಸಮಾಜ ಶಿಕ್ಷಣ ವರ್ಗಗಳಲ್ಲಿ ಇದ್ದ ನಿರಕ್ಷರೀ ಪ್ರೌಢರು | ೧೫೦೦ |
| ೨. | ಶಿಕ್ಷಕರು ಹಾಗೂ ಸಮಾಜ ಶಿಕ್ಷಣ ಕಾರ್ಯಕರ್ತರು | ೨೮೦ |
| ೩. | ಸಮಾಜ ಶಿಕ್ಷಣದಲ್ಲಿ ಆಸ್ಥೆಯುಳ್ಳ ಸುಶಿಕ್ಷಿತರು | ೨೦೦ |
| ೪. | ಸಮಾಜ ಶಿಕ್ಷಣದಲ್ಲಿ ಆಸ್ಥೆಯುಳ್ಳ ಶಿಕ್ಷಣ ತಜ್ಞರು | ೫೬ |
| ೫. | ಸಮಾಜ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವ ಅಧಿಕಾರಿಗಳು | ೪೭ |
| ೬. | ಗ್ರಾಮಪಂಚಾಯತ, ನಗರ ಸಭೆ ಹಾಗೂ ಸಹಕಾರೀ ಸಂಘ ಸಂಸ್ಥೆಗಳು ಇತ್ಯಾದಿ | ೨೫ |
| ೭. | ಸಮಾಜ ಶಿಕ್ಷಣದಲ್ಲಿ ಆಸ್ಥೆಯುಳ್ಳ ಶಿಕ್ಷಕರ ಹಾಗೂ ಅಧಿಕಾರಿಗಳ ಸಭೆ ಸಮ್ಮೇಲನಗಳು | ೧೮ |

ಕನ್ನಡ, ಮರಾಠೀ ಹಾಗೂ ಉರ್ದು ಭಾಷೆಗಳಲ್ಲಿಯ ಸಮಾಜ ಶಿಕ್ಷಣ ವರ್ಗಗಳನ್ನು ಪ್ರೋತ್ಸಾಹಿಸುವ ಜನರ ಕೂಡ ವಿಚಾರವಿನಿಮಯವನ್ನು ಮಾಡಿರುವೆನು. ಶಿಕ್ಷಣ ತಜ್ಞರ ಹಾಗೂ ಸಮಾಜ ಶಿಕ್ಷಣವನ್ನು ಪ್ರೋತ್ಸಾಹಿಸುವ ಇತರ ಜನರ ಕೂಡ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ವಿಚಾರವಿನಿಮಯವನ್ನು ಮಾಡಿರುವೆನು. ಈ ದಿಶೆಯಲ್ಲಿ ಕೆಳಗಿನಂತೆ ಪ್ರಶ್ನೆಗಳನ್ನು ಕೇಳಲಾಗಿತ್ತು:—

೧) ಸಮಾಜ ಶಿಕ್ಷಣದ ವ್ಯಾಪ್ತಿಯು ಹೇಗೆ ಇರಬೇಕು?

೨) ನಿರ್ದಿಷ್ಟ ಅವಧಿಯಲ್ಲಿ (ಮೂರು-ನಾಲ್ಕು ತಿಂಗಳುಗಳಲ್ಲಿ) ಒಂದು ಓಣಿಯನ್ನಾಗಲಿ, ಒಂದು ಭಾಗವನ್ನಾಗಲಿ ಅಥವಾ ಒಂದು ಹಳ್ಳಿಯನ್ನಾಗಲಿ ಸಂಪೂರ್ಣವಾಗಿ ಸಾಕ್ಷರಿಯನ್ನಾಗಿ ಮಾಡಲು ಸಾಧ್ಯವಿದೆಯೋ ಹೇಗೆ?

೩) ಇದನ್ನು ಪೂರ್ತಿಗೊಳಿಸಲು ಕೈಕೊಳ್ಳುವ ವಿಧಾನಗಳಾವವು?

೪) ಸಮಾಜ ಶಿಕ್ಷಣದಲ್ಲಿ ಕೇವಲ ಓದು ಬರೆಹಕ್ಕೆ ಮಹತ್ವವಿದೆಯೋ? ನಾಗರಿಕನ ಹಕ್ಕು ಬಾಧ್ಯತೆಗಳ ಜೊತೆಗೆ ಸಾಮಾನ್ಯ ಜ್ಞಾನಕ್ಕೆ ಮಹತ್ವವಿದೆಯೋ? ಅಥವಾ ಓದು ಬರೆಹದ ಜೊತೆಗೆ ನಾಗರಿಕತೆ ಹಾಗೂ ಸಾಮಾನ್ಯ ಜ್ಞಾನಕ್ಕೆ ಮಹತ್ವವಿದೆಯೋ ಹೇಗೆ?

೫) ಶಿಕ್ಷಕನು ತನ್ನ ಕಾಯ್ದೆಬದ್ಧವಾದ ಶಾಲೆಯ ಕೆಲಸದ ಜೊತೆಗೆ ಸಮಾಜ ಶಿಕ್ಷಣದ ಕಾರ್ಯವನ್ನು ಕೈಕೊಳ್ಳಬೇಕೋ ಹೇಗೆ?

೬) ವಾರ್ತಾ ಶಾಖೆಯವರು ಸಮಾಜ ಶಿಕ್ಷಣ ಕಾರ್ಯವನ್ನು ನಿರ್ವಹಿಸಿಕೊಳ್ಳಬೇಕೋ ಅಥವಾ ಶಿಕ್ಷಣ ಖಾತೆಯವರು ಮಾತ್ರ ಅದನ್ನು ನಿರ್ವಹಿಸಿಕೊಳ್ಳಬೇಕೋ ಹೇಗೆ?

೭) ಯಾವದಾದರೊಂದು ಸಂಘ ಅಥವಾ ಸಂಸ್ಥೆಯು ಈಗಾಗಲೇ ಸಾಕ್ಷರರಾದವರನ್ನು ನಿರಕ್ಷರಿ ಕುಕ್ಷಿಗಳಾಗದಂತೆ ನೋಡುವ ಕೆಲಸವನ್ನು ಕೈಕೊಂಡಿದೆಯೋ ಹೇಗೆ?

೮) ಸಮಾಜ ಶಿಕ್ಷಣದ ಯೋಜನೆಗೆ ಧನಸಹಾಯವನ್ನು ಹೇಗೆ ಪೂರೈಸಬೇಕು? ರಾಜ್ಯದಿಂದಲೋ, ಖಾಸಗೀ ಪ್ರಯತ್ನದಿಂದಲೋ? ಅಥವಾ ಎರೆಡರ ಸಂಯುಕ್ತ ಪ್ರಯತ್ನದಿಂದ ದೊರಕಿಸಬೇಕೋ ಹೇಗೆ?

೯) ಸಮಾಜ ಶಿಕ್ಷಣ ಕೊಡಲು ಸ್ವಯಂ ಪ್ರೇರಿತ ಸಂಘ ಸಂಸ್ಥೆಗಳು ಇರುವದು ಉಚಿತವೋ ಹೇಗೆ?

೧೦) ಪ್ರೌಢರ ಬೌದ್ಧಿಕ ಶಿಕ್ಷಣವು ಅವರ ಸಾಂಸ್ಕೃತಿಕ ಹಾಗೂ ವೃತ್ತಿ ಶಿಕ್ಷಣವನ್ನೊಳಗೊಂಡಿರಬೇಕೋ ಹೇಗೆ?

೧೧) ಅಕ್ಷರ ಜ್ಞಾನದ ಮಾಹಿತಿಯು ಹಾಗೂ ವಾಚನಾಲಯದ ಉಪಯೋಗವು ಸಮಾಜ ಶಿಕ್ಷಣದ ಅಂತರ್ಭಾಗಗಳಾಗಿರಬೇಕೋ ಹೇಗೆ?

೧೨) ಕೂಲಿಕಾರರು ವಾಸಿಸುವ ಸ್ಥಳಗಳು ಸಮಾಜ ಶಿಕ್ಷಣದ ವಿಶಿಷ್ಟವಾದ ಕೇಂದ್ರಗಳೆಂದು ತಿಳಿಯಬೇಕೋ? ಅಂಥ ಸ್ಥಳಗಳಲ್ಲಿಯ ಅಕ್ಷರ ಜ್ಞಾನದ ಪ್ರಚಾರವನ್ನು ವಿಶಿಷ್ಟ ರೀತಿಯಿಂದ ಮಾಡಬೇಕೋ ಹೇಗೆ?

೧೩) ಪುರುಷರಿಗಿಂತ ಹೆಣ್ಣುಮಕ್ಕಳಿಗೆ ಸಮಾಜ ಶಿಕ್ಷಣದ ಮಹತ್ವವು ಹೆಚ್ಚೋ ಹೇಗೆ?

೧೪) ಹೆಣ್ಣುಮಕ್ಕಳನ್ನು ಸುಶಿಕ್ಷಿತರನ್ನಾಗಿ ಮಾಡಲಿಕ್ಕೆ ವಿಶಿಷ್ಟ ಪ್ರಯತ್ನಗಳನ್ನು ಕೈಕೊಳ್ಳಬೇಕೋ ಹೇಗೆ?

೧೫) ಶಿಕ್ಷಕರ ಹಾಗೂ ಸಮಾಜ ಶಿಕ್ಷಣ ಕಾರ್ಯಕರ್ತರ ತರಬೇತಿಗಾಗಿ ಅನುಕೂಲತೆಗಳನ್ನು ಒದಗಿಸಿಕೊಡಬೇಕೋ ಹೇಗೆ?

೧೬) ಸಮಾಜ ಶಿಕ್ಷಣವನ್ನು ಜನಪ್ರಿಯಗೊಳಿಸಲು ಬೇರೆ ವಿಧಾನಗಳನ್ನು ಸೂಚಿಸಬಹುದೋ ಹೇಗೆ?

ಮೇಲಿನ ಮಾಹಿತಿಯನ್ನೊಳಗೊಂಡ ೨೬ ಓಲಿಗಳನ್ನು ಶಿಕ್ಷಣ ತಜ್ಞರಿಗೆ ಮತ್ತು ೪೭ ಓಲಿಗಳನ್ನು ಶಿಕ್ಷಣ ಅಧಿಕಾರಿಗಳಿಗೆ ಹಾಗೂ ಸಮಾಜ ಶಿಕ್ಷಣದಲ್ಲಿ ಆಸ್ಥೆಯುಳ್ಳವರಿಗೆ ಕಳುಹಿಸಲಾಯಿತು. ಕೇವಲ ಐವರು ಮಾತ್ರ ಉತ್ತರಿಸಿದರು. ಇದರಿಂದ ಬಹು ಸಾಮಾನ್ಯರು ಸಮಾಜ ಶಿಕ್ಷಣದಲ್ಲಿ ಆಸ್ಥೆಯುಳ್ಳವರಿಲ್ಲವೆಂದು ಕಂಡು ಬರುವದು. ಇದೊಂದು ಸಮಾಜ ಶಿಕ್ಷಣ ಕಾರ್ಯದಲ್ಲಿ ಸಂಶೋಧನೆಯನ್ನಾಗಲಿ ಅಥವಾ ಪ್ರಯೋಗವನ್ನಾಗಲಿ ಮಾಡುವವರಿಗೆ ತೊಡಕಾಗಲಿಕ್ಕಿಲ್ಲವೆ?

ಸಾರ್ವಜನಿಕರು ವೈಯಕ್ತಿಕವಾಗಿ ಹಾಗೂ ಸಾಂಘಿಕವಾಗಿ ಸಮಾಜ ಶಿಕ್ಷಣದ ಬಗೆಗೆ ವ್ಯಕ್ತಪಡಿಸಿದ ಅಭಿಪ್ರಾಯಗಳು :-

ಈ ಅಭಿಪ್ರಾಯಗಳನ್ನು ಕೆಳಗೆ ಕಾಣಿಸಿದಂತೆ ವರ್ಗೀಕರಿಸಲಾಗಿದೆ :-

೧) ಸಮಾಜ ಶಿಕ್ಷಣದ ಬಗೆಗೆ ಸಾರ್ವಜನಿಕರಲ್ಲಿ ಇರುವ ಆಸ್ಥೆ.

೩) ಸಮಾಜ ಶಿಕ್ಷಣ ವರ್ಗಗಳಲ್ಲಿ ಪ್ರೌಢರ ಹಾಜರಿ.

೩) ಸಮಾಜ ಶಿಕ್ಷಣ ವರ್ಗಗಳನ್ನು ನಡೆಯಿಸಿ ಕೊಂಡು ಹೋಗುವದರಲ್ಲಿ ಬರಬಹುದಾದ ಅಡ್ಡಿ–ಆತಂಕಗಳು.

೪) ಸಮಾಜ ಶಿಕ್ಷಣದ ವರ್ಗಗಳನ್ನು ನಡೆಯಿಸಿ ಕೊಂಡು ಹೋಗುವ ಅನುಕೂಲ ಸಮಯ.

೫) ಸಮಾಜ ಶಿಕ್ಷಣದ ವರ್ಗಗಳಲ್ಲಿಯ ಪ್ರಗತಿ.

೬) ಸಮಾಜ ಶಿಕ್ಷಣ ವರ್ಗಗಳನ್ನು ಕಾಯ್ದು ಕೊಂಡು ಹೋಗುವ ಬಗ್ಗೆ ಸಾರ್ವಜನಿಕರ ಟೀಕೆಗಳು.

೭) ಸಮಾಜ ಶಿಕ್ಷಣ ವರ್ಗಗಳ ಸುಧಾರಣೆಯ ಬಗ್ಗೆ ಸಾರ್ವಜನಿಕರ ಸಲಹೆ ಸೂಚನೆಗಳು.

ಮೇಲೆ ಕೊಟ್ಟ ಪ್ರತಿಯೊಂದು ಅಂಶವನ್ನು ಸವಿಸ್ತಾರವಾಗಿ ಕೆಳಗೆ ಕಾಣಿಸಿದಂತೆ ವಿವರಿಸಲಾಗಿದೆ :–

೧. ಸಮಾಜ ಶಿಕ್ಷಣದ ಬಗೆಗೆ ಸಾರ್ವಜನಿಕರಲ್ಲಿ ಇರುವ ಆಸ್ಥೆ:–

ನೇರವಾದ ದ್ವೇಷ, ಅಪಯಶಸ್ಸಿನ ನಿರಾಸೆ, ತಾನು ಕೇಳೆಂಬ ಭಾವನೆ, ಸ್ವಾಭಿಮಾನದ ಕೊರತೆ ಇವೇ ಮೊದಲಾದ ಕಾರಣಗಳು ನಿರಕ್ಷರೀ ಪ್ರೌಢರಲ್ಲಿ ಮನೆ ಮಾಡಿ ಕೊಂಡಿವೆ. ವರ್ಗಗಳಿಗೆ ಬರುವ ಪ್ರೌಢರು "ನಾವು ಬಡವರಿದ್ದೇವೆ. ನಮಗೆ ಆಹಾರ ಬೇಕು. ನಾವು ವರ್ಗಗಳಿಗೆ ಹೋಗಲಾರದಷ್ಟು ದಣಿದಿದ್ದೇವೆ. ನಾವು ಇಡೀ ದಿವಸ ಶ್ರಮ ವಹಿಸಿದ್ದೇವೆ. ಕಲಿಯಲು ಬಾರದಷ್ಟು ಮುದುಕರಿದ್ದೇವೆ. ವರ್ಗಗಳಿಗೆ ಬರುವಷ್ಟು ಅವಕಾಶವೂ ಕೂಡ ನಮಗೆ ಇಲ್ಲ. ನಮಗೆ ಬೇರೆ ಕೆಲಸಗಳು ಇವೆ." ಮುಂತಾದ ಮಾತುಗಳನ್ನು ಆಡುವರು. ಶಿಕ್ಷಕರು ಹಾಗೂ ಸಮಾಜ ಶಿಕ್ಷಣ ಕಾರ್ಯಕರ್ತರು ಸಮಾಜ ಶಿಕ್ಷಣ ವರ್ಗಗಳಿಗೆ ನಿರಕ್ಷರೀ ಪ್ರೌಢರನ್ನು ದೊರಕಿಸಿ ಕೊಳ್ಳುವದರಲ್ಲಿ ನಿರಾಶರಾಗಿದ್ದಾರೆ. ಪ್ರತಿದಿನದ ಪಾಠಗಳನ್ನು ಕಲಿಸಲು ನಿರಕ್ಷರಿ ಪ್ರೌಢರ ಮೇಲೆ ತಾವು ಒತ್ತಾಯ ಮಾಡುವ ಅಸಮರ್ಥತೆಯನ್ನು ಅವರು ವ್ಯಕ್ತ ಪಡಿಸುತ್ತಾರೆ. ಹೊಸ ವಿಚಾರ ಹಾಗೂ ಬದಲಾವಣೆಗಳಲ್ಲಿ ಕೆಲವರು ಸಂಶಯ ಪಡುತ್ತಾರೆ. ನಿರಕ್ಷರೀ ಪ್ರೌಢರು ಅವರನ್ನು ಶೋಷಿಸುವ ಸದವಕಾಶವನ್ನು ಕಳೆದು ಕೊಂಡಂತೆ ಆಗುವದೆಂದು ಸುಶಿಕ್ಷಿತ ಜನರು ಅಭಿಪ್ರಾಯ ಪಡುತ್ತಾರೆ. ನಿರಕ್ಷರತೆಯನ್ನು ಹೊಡದೋಡಿಸುವ ಹೊಣೆಗಾರಿಕೆಯು ತಮ್ಮದಲ್ಲವೆಂಬುದು ಸುಶಿಕ್ಷಿತರು ಅನ್ನುತ್ತಾರೆ. ಕುಶಲ ಕೆಲಸಗಾರರಾಗಲು ಹಾಗು ಸುಶಿಕ್ಷಿತ ಮತ್ತು ತಿಳುವಳಿಕೆಯುಳ್ಳ ಒಕ್ಕಲಿಗರಾಗಲು ಸಾಕ್ಷರತೆಯು ಅವಶ್ಯವೆಂದು ಶಿಕ್ಷಣ ತಜ್ಞರು ಅಭಿಪ್ರಾಯ ಪಡುತ್ತಾರೆ. ನಿರಕ್ಷರತೆಯನ್ನು ಹೋಗಲಾಡಿಸುವದು ಕೇವಲ ತಮ್ಮದೇ ಹೊಣೆ ಅಲ್ಲವೆಂದು ಅಧಿಕಾರಿಗಳು ಅಭಿಪ್ರಾಯ ಪಟ್ಟು ಬೇರೆ ಬೇರೆ ರಾಜಕೀಯ ಪಕ್ಷ ಪಂಗಡಗಳ ಕಾರ್ಯಕರ್ತರೂ ಕೂಡ ಈ ಕೆಲಸವನ್ನು ಕೈಕೊಳ್ಳಬೇಕೆಂದು ಸೂಚಿಸುತ್ತಾರೆ. ಮಹಾತ್ಮಾ ಗಾಂಧಿಯವರು ತಮ್ಮ ವಿಧಾಯಕ ಕಾರ್ಯಕ್ರಮದಲ್ಲಿ ಸಮಾಜ ಶಿಕ್ಷಣಕ್ಕೆ ಒಂದು ಮಹತ್ತರವಾದ ಸ್ಥಾನವನ್ನು ಕೊಟ್ಟಿದ್ದಾರೆ.ಆದ್ದರಿಂದ ಆ ರಾಷ್ಟ್ರ ಪಿತನ ನೆನಹಿಗಾಗಿ ಅವನ ಹೆಜ್ಜೆಯಲ್ಲಿ ಹೆಜ್ಜೆ ಇಡುವದು ನಮ್ಮೆಲ್ಲರ ಪ್ರಥಮ ಕರ್ತವ್ಯವಾಗಿದೆ, ಸಮಾಜ ಶಿಕ್ಷಣದ ವರ್ಗಗಳನ್ನು ತೆರೆಯುವದು ಹಾಗು ಅವುಗಳಿಗೆ ಪ್ರೋತ್ಸಾಹ ಕೊಡುವದು ತಮ್ಮ ಅವಶ್ಯಕ ಕಾರ್ಯವಲ್ಲವೆಂದು ಸಂಘ-ಸಂಸ್ಥೆಗಳು, ಗ್ರಾಮ ಪಂಚಾಯತಿಗಳು, ನಗರ ಸಭೆಗಳು, ಹಾಗೂ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ತಿಳಿದುಕೊಂಡಿವೆ. ಸಮಾಜ ಶಿಕ್ಷಣದ ಬಗೆಗೆ ಜರುಗುವ ಸಭೆ ಸಮ್ಮೇಲನಗಳು ಕೇವಲ ಗೊತ್ತುವಳಿಗಳನ್ನು ಸ್ವೀಕರಿಸುತ್ತವೆಯೇ ವಿನಃ ಅವುಗಳನ್ನು ಕಾರ್ಯಾಚರಣೆಯಲ್ಲಿ ತರಲು ಪ್ರಯತ್ನಿಸುವದಿಲ್ಲ.

೨. ಸಮಾಜ ಶಿಕ್ಷಣ ವರ್ಗಗಳಲ್ಲಿಯ ಪ್ರೌಢರ ಹಾಜರಿ:–

ಇದೊಂದು ಸಮಸ್ಯೆಯೇ. ಎಲ್ಲ ಹಂತಗಳಲ್ಲಿ ಇದನ್ನು ಲಕ್ಷಪೂರ್ವಕವಾಗಿ ವಿಚಾರಿಸುವದು ಅತ್ಯವಶ್ಯವಿದೆ. ನಾನು ಸಂದರ್ಶಿಸಿದ ಸಮಾಜ ಶಿಕ್ಷಣ ವರ್ಗಗಳಿಂದ ನನಗೊಂದು ಮಾರ್ಮಿಕ ಅನುಭವ ಬಂದಿದೆ. ನಾನು ಅಕಸ್ಮಾತ್ತಾಗಿ ಸಂದರ್ಶಿಸಿದಲ್ಲೆಲ್ಲ ಖಾಲಿ ಬಾಕುಗಳು, ಬರೆಯುವ ಕರೀ ಹಲಿಗೆ ಹಾಗೂ ತನ್ನ ವಿವರಣೆಯನ್ನು ಕೊಡಲುದ್ಯುಕ್ತನಾದ ಸಮಾಜ ಶಿಕ್ಷಣ ಕಾರ್ಯಕರ್ತ ಇವುಗಳ ಹೊರತಾಗಿ ನನಗೆ ಏನೂ ಕಂಡು ಬರಲಿಲ್ಲ. ಕಲಿಯಲು ಆಸ್ಥೆಯುಳ್ಳ ಪ್ರೌಢರು ವರ್ಗಗಳಲ್ಲಿ ಕಾಣಲಿಲ್ಲ. ಇದಕ್ಕಾಗಿ ಸಮಾಜ ಶಿಕ್ಷಣ ಕಾರ್ಯಕರ್ತನ ಸರ್ವ–

ಸಾಮಾನ್ಯವಾದ ಹೇಳಿಕೆಯೆಂದರೆ " ಇದೀಗ ವರ್ಗವನ್ನು ತೆಗೆದು ಕೊಳ್ಳುವದನ್ನು ಮುಗಿಸಿದ್ದೇನೆ; ಇಲ್ಲವೆ ಇನ್ನು ಮೇಲೆ ವರ್ಗವನ್ನು ಸುರುವು ಮಾಡುವವನಿದ್ದೇನೆ." ಸಕಾಲದಲ್ಲಿ ನಿರಕ್ಷರೀ ಪ್ರೌಢರು ಬಾರದಿರುವ ಹೊಣೆಯು ಶಿಕ್ಷಕನಸ್ಟೇ ಅವಲಂಬಿಸಿದೆಯೆಂದು ನನ್ನ ಮತ. ಶಿಕ್ಷಕರೇ ಸರಿಯಾಗಿ ಬಂದು ನಿಯಮಿತತನದಿಂದ ವರ್ಗ ಪ್ರಾರಂಭ ಮಾಡುವದಾದರೆ ಮುಂದೆ ಬರಬಹುದಾದ ತೊಂದರೆಯು ತೀವ್ರದಲ್ಲಿ ಮಾಯವಾಗುವದೆಂದು ನನ್ನ ನಂಬಿಗೆ. ಧಾರವಾಡ ಮತ್ತು ಬೆಳಗಾಂವಿಯಲ್ಲಿ ಪ್ರಾಯೋಗಿಕವಾಗಿ ಕಂಡು ಬಂದ ಅನುಭವವೂ ಹೀಗೇ ಇರುವದು.

೩. ಸಮಾಜ ಶಿಕ್ಷಣ ವರ್ಗಗಳನ್ನು ನಡೆಸಿಕೊಂಡು ಹೋಗುವದರಲ್ಲಿ ಬರಬಹುದಾದ ಅಡ್ಡಿ–ಆತಂಕಗಳು:–

ನಿರಕ್ಷರಿ ಪ್ರೌಢಪಂಚರು ತೀರ ಬಡವರೆಂದು ನಿಃಸಂದೇಹವಾಗಿ ಹೇಳಬಹುದು. ನಿರಕ್ಷರತೆ ನಿವಾರಣೆಯಲ್ಲಿ ಇದೊಂದು ಬಹು ದೊಡ್ಡ ಅತಂಕವಾಗಿದೆ. ಸಮಾಜ ಶಿಕ್ಷಣದ ಲಾಭಾಲಾಭಗಳ ಅರಿವನ್ನು ಕೊಟ್ಟು ಇದನ್ನು ನಿವಾರಿಸಲು ಶಕ್ಯನಿರುವದು. ಪರಿಣಾಮಕಾರಕವಾದ ಗುರಿಯಿಂದ ಸಮಾಜಶಿಕ್ಷಣದ ಬಗೆಗೆ ಈಗಿರುವ ಔದಾಸೀನತೆಯನ್ನು ಹೊಡೆದೋಡಿಸಲೂ ಬರುವದು. ಬಡವರಾದ ನಿರಕ್ಷರಿ ಪ್ರೌಢರು ದಿನವೆಲ್ಲ ಹೊಲದಲ್ಲಿಯಾಗಲಿ, ಕಾರಖಾನೆಯಲ್ಲಾಗಲಿ ಕೂಲಿಕಾರರೆಂದು ಕೆಲಸ ಮಾಡುವರು. ಸಮಾಜ ಶಿಕ್ಷಣದ ಬಗೆಗೆ ಅವರ ಔದಾಸೀನತೆಯೆಂದರೆ, "ಶಿಕ್ಷಣವು ನಮಗಾಗಿ ಅಲ್ಲ ಅದು ವಿಶಿಷ್ಟ ಜನರಿಗಾಗಿ ಅದೆ. ಮುಂದುವರಿದವರಿಗಾಗಿ ಅದೆ. ಬೇರೆಯವರು ಅವಲಂಬಿಸಿರುವಂತೆ ನಾವು ನಮ್ಮ ದೈನಿಕ ಆಹಾರಕ್ಕಾಗಿ ಶಿಕ್ಷಣವನ್ನವಲಂಬಿಸಿಲ್ಲ" ಎಂದು ಹೇಳುವದುಂಟು. ಸಮಾಜಶಿಕ್ಷಣ ಕಾರ್ಯಕರ್ತರಲ್ಲಿ ಹೆಚ್ಚಾಗಿ ಜಿಲ್ಲಾ ಸ್ಕೂಲ ಬೋರ್ಡಿನ ಆಡಳಿತೆಗೆ ಒಳಪಟ್ಟ ಅಥವಾ ನಗರಸಭೆಯ ಆಡಳಿತೆಗೆ ಒಳಪಟ್ಟ ಶಿಕ್ಷಕರೇ ಇರುವರು! ತಮ್ಮ ದೈನಂದಿನ ಕೆಲಸವನ್ನು ಮಾಡಿ ದಣಿದನಂತರ ಸಾಯಂಕಾಲದಲ್ಲಿ ಸಮಾಜಶಿಕ್ಷಣದ ವರ್ಗಗಳನ್ನು ತೆಗೆದುಕೊಳ್ಳುತ್ತಾರೆ ಇಂಥ ಶಿಕ್ಷಕರು ಸಾಮಾನ್ಯವಾಗಿ ಹೇಳುವದೇನಂದರೆ, "ನಮ್ಮ ಕಾಯ್ದೆಬದ್ಧ ಕೆಲಸವೆಂದರೆ ಶಾಲೆಯಲ್ಲಿ ಮಕ್ಕಳಿಗೆ ಕಲಿಸುವದು. ಸಮಾಜಶಿಕ್ಷಣ ವರ್ಗಗಳು ನಮ್ಮ ಮೇಲೆ ತಾವಾಗಿ ಬಂದುಬಿದ್ದಿವೆ. ನಮ್ಮಮೇಲೆ ಹೊರಿಸಿದ ಬೇಡಾದಹೊರೆ" ನಿರಕ್ಷರಿ ಪ್ರೌಢರಲ್ಲಿ ಆಸ್ಥೆಯಿಂದ ಕಲಿಯಬೇಕೆಂಬ ಜೀವಕಳಿಯನ್ನು ತುಂಬಲು ಇಂಥ ಶಿಕ್ಷಕರಿಂದ ಸಾಧ್ಯವೇ? ಸಮಾಜ ಶಿಕ್ಷಣದ ಅಭ್ಯಾಸಪತ್ರಿಕೆಯು ಕೂಡ ನಿರಕ್ಷರ ಪ್ರೌಢರ ಬೇಕು ಬೇಡಿಕೆಗಳನ್ನು ಅವಲಂಬಿಸಿಲ್ಲ. ಅವರಿಂದ ಅದು ಹೆಚ್ಚು ಬಯಸುತ್ತಿದೆ. ಆದ್ದರಿಂದ ಪ್ರೌಢ ಮಾನಃಶಾಸ್ತ್ರಕ್ಕನುಗುಣವಾಗಿ ಒಂದು ಹಗುರಾದ ಹಾಗೂ ಸುಲಭವಾದ ಅಭ್ಯಾಸಪತ್ರಿಕೆಯನ್ನು ತಯಾರಿಸುವದು ಅವಶ್ಯವಿಲ್ಲವೆ? ಹೀಗಾದಲ್ಲಿ ಪ್ರೌಢನ ಹೆಚ್ಚು ಗಳಿಕೆಯನ್ನು ಮತ್ತು ವಿಶ್ರಾಂತಿ ಸಮಯವನ್ನು ಉತ್ತಮತೆರನಾಗಿ ಉಪಯೋಗಿಸುವ ಕಾರ್ಯಸಮಾನತೆಗೆ ಪ್ರೋತ್ಸಾಹಿಸಲು ಬರುವದಿಲ್ಲವೆ? ಸಮಾಜಶಿಕ್ಷಣದ ವರ್ಗಗಳಲ್ಲಿ ಪ್ರೌಢರಿಗಾಗಿ ತಯಾರಿಸಿದ ಸಾಹಿತ್ಯದ ಕೊರತೆ ಇದೆ. ಗುಬ್ಬಿ ಕಾಗೆಗಳ ಕಥೆಗಳ ನ್ನೊಳಗೊಂಡ ಚಿಕ್ಕಮಕ್ಕಳಿಗಾಗಿ ನಿರ್ಮಿಸಲ್ಪಟ್ಟ ಸಾಹಿತ್ಯವನ್ನು ಪ್ರೌಢವರ್ಗಗಳಲ್ಲಿ ಇನ್ನೂ ರೂಢಿಯಲ್ಲಿ ಇದ್ದುದು ತೀರ ಶೋಚನೀಯ. ಈ ತರದ ಪುಸ್ತಕಗಳು ಅವರಿಗೆ ವಿಲಕ್ಷಣನೆನಿಸಬಹುದಲ್ಲವೆ? ಸಮಾಜಶಿಕ್ಷಣ ವರ್ಗಗಳಲ್ಲಿ ನಿರಕ್ಷರಿ ಪ್ರೌಢರಿಗೆ ಕಲಿಸಲು ಬೇಕಾಗುವ ಉಪಕರಣಗಳು ಅತಿ ವಿರಳವಾಗಿವೆಯಲ್ಲದೆ ಅವು ಸರಿಯಾಗಿ ಉಪಯೋಗಿಸಲ್ಪಡುವದು ಕಂಡು ಬರುವದಿಲ್ಲವೆಂದು ಹೇಳಿದರೆ ಅತಿಶಯೋಕ್ತಿ ಆಗದು.

೪. ಸಮಾಜ ಶಿಕ್ಷಣ ವರ್ಗಗಳನ್ನು ನಡಿಸುವ ಅನುಕೂಲ ಸಮಯ:–

ಪಟ್ಟಣಗಳಲ್ಲಿಯ ನಿರಕ್ಷರಿ ಪ್ರೌಢರಿಗೆ ಸಾಮಾನ್ಯವಾಗಿ ಸಾಯಂಕಾಲದ ಸಮಯವು ಸರಿಹೋಗುವದು. ಹಳ್ಳಿಗಳಲ್ಲಿಯು ಜನರಿಗೆ ಕೆಲವೊಂದು ಋತುಗಳಲ್ಲಿ ವ್ಯೆತುಂಬ ಕೆಲಸವಿರುವದು. ಮೇಲಾಗಿ ಹೆಚ್ಚು ಶ್ರಮ ಸಹಿಸಬೇಕಾಗುವದು. ಆದ್ದರಿಂದ ಸೂಟಿ, ಹಬ್ಬ ಹಾಗೂ ಮೋಜಿನ ದಿನಗಳನ್ನು ಹೊರ್ತುಪಡಿಸಿ ಸಮಾಜಶಿಕ್ಷಣ ವರ್ಗದ ಅವಧಿಯನ್ನು ಹಾಗೂ ವೇಳಾಪತ್ರಿಕೆಯನ್ನು ಪರಸ್ಪರರ ಒಪ್ಪಿಗೆಯಂತೆ ಹೊಂದಿಸಬೇಕು. ಪ್ರತಿತಿಂಗಳ ಆವರ ಸಭೆಕರೆದು ಪ್ರೌಢ ವಿದ್ಯಾರ್ಥಿಗಳ ಅಭಿಪ್ರಾಯದ ಮೇರೆಗೆ ವೇಳೆಯನ್ನು ನಿರ್ದಿಷ್ಟಪಡಿಸಬೇಕು. ಋತುಮಾನಕ್ಕನುಸರಿಸಿ ಅದರಲ್ಲಿ ಬದಲಾವಣೆಯನ್ನು ಮಾಡಿಕೊಳ್ಳಬೇಕು. ನಿರಕ್ಷರಿ ಪ್ರೌಢರಿಗೆ ಸಾಮಾನ್ಯವಾಗಿ ಸಾಯಂಕಾಲದಲ್ಲಿ ೭ರಿಂದ ೮ ಅಥವಾ ೮ರಿಂದ ೯ ಕೆಲಸ

ವಿಲ್ಲದ ಸಮಯವಿರುವದರಿಂದ ಇದು ವರ್ಗನಡಿಸಲು ಅನುಕೂಲವಾದ ಸಮಯವೂ ಹೌದು. ಇದರಿಂದ ಪ್ರೌಢರ ಹಾಜರಿಯೂ ಕೂಡ ಸುಧಾರಿಸುವದು. ಧಾರವಾಡ ಹಾಗೂ ಬೆಳಗಾವಿಯಲ್ಲಿ ನಾನು ನಡಿಸಿದ ಪ್ರಾಯೋಗಿಕ ವರ್ಗಗಳಿಂದ ಮೇಲ್ಕಂಡ ಅನುಭವವು ನನಗಾಗಿದೆ.

೫. ಸಮಾಜ ಶಿಕ್ಷಣದ ವರ್ಗಗಳನ್ನು ನಡಿಸಿಕೊಂಡು ಹೋಗಲು ಬೇಕಾಗುವ ವಿಧಾನಗಳು:–

ಮಕ್ಕಳಿಗೆ ಕಲಿಸುವ ವಿಧಾನಗಳು ನಿರಕ್ಷರಿ ಪ್ರೌಢರಿಗೆ ಒಗ್ಗುವದಿಲ್ಲವೆಂದು ಸಂದರ್ಶಿಸಿದ ಹಾಗೂ ವಿಚಾರ ವಿನಿಮಯಮಾಡಿದ ಜನರ ಅಭಿಪ್ರಾಯವಾಗಿದೆ. ಆರಂಭದ ಮೆಟ್ಟಿಲಲ್ಲಿ ಸಾಕ್ಷರತೆಯು ಅಥವಾ ಅಕ್ಷರ ಜ್ಞಾನವು ಉದ್ದುದ್ದ ಭಾಷಣ ಹಾಗೂ ಉಪದೇಶಪರ ಮಾತುಗಳಿಂದ ಸಾಗದೆ ಸರಳವಾಗಿ ಸ್ವಾಭಾವಿಕವಾಗಿ ಹಾಗೂ ಚರ್ಚಾತ್ಮಕವಾಗಿ ಸಾಗಬೇಕು. ಪ್ರಜಾ ಸತ್ತಾತ್ಮಕ ರೀತಿಯಲ್ಲಿ ವರ್ಗವನ್ನು ನಡೆಯಿಸಲು ಪ್ರಯತ್ನಿಸಬೇಕು. ಶಿಕ್ಷಕರು ಪ್ರೌಢರನ್ನು ಶಾಲೆಯ ಬಾಲಕರಂತೆ ನಡೆಯಿಸಿಕೊಳ್ಳಬಾರದು. ಸಮಾಜ ಶಿಕ್ಷಣ ವರ್ಗಗಳಲ್ಲಿ ಭಜನೆ,ಕೀರ್ತನೆ, ಲಾವಣಿಪದಗಳು, ಪಳ್ಳಿಯ ಕುಣಿತ ಇಂಥ ಅನೇಕ ಜಟುವಟಿಕೆಗಳು ಅವಶ್ಯವಾಗಿ ಬೇಕು. ಸಹಕಾರ, ಸದ್ಭಾವನೆ ಹಾಗೂ ಮಿತ್ರತ್ವಗಳ ನ್ನೊಳಗೊಂಡ ಸಮಾಜ ಶಿಕ್ಷಣವರ್ಗಗಳು ಇಂದು ನಮಗೆ ಬೇಕಾಗಿವೆ. ವ್ಯವಸಾಯಕ್ಕನುಗುಣವಾಗಿ ಸಮಾಜಶಿಕ್ಷಣ ವರ್ಗಗಳು ಸಾಗಬೇಕು. ಪ್ರಾರ್ಥನೆ, ಸುದ್ದಿ ಬಿತ್ತರಿಸುವದು, ಸಾಕ್ಷರತೆ, ಶ್ರಮದಾನ, ಮನರಂಜನೆ ಹಾಗೂ ರಾಷ್ಟ್ರೀಯ ಗೀತೆ ಮೊದಲಾದವುಗಳು ಸಮಾಜಶಿಕ್ಷಣ ವರ್ಗಗಳಲ್ಲಿ ಸಮಾವೇಶವಾಗಿರಬೇಕು.

೬. ಸಮಾಜ ಶಿಕ್ಷಣ ವರ್ಗಗಳಲ್ಲಿಯ ಪ್ರಗತಿ :–

ಸಮಾಜ ಶಿಕ್ಷಣ ವರ್ಗಗಳಲ್ಲಿಯ ಪ್ರಗತಿಯನ್ನು ಕಂಡುಹಿಡಿಯಲು ವಾರದ ಹಾಗೂ ತಿಂಗಳಿನ ಪರೀಕ್ಷೆ ಗಳನ್ನು ಏರ್ಪಡಿಸಬೇಕು. ನಿರಕ್ಷರಿ ಪ್ರೌಢರ ಪ್ರಗತಿ ಪತ್ರಿಕೆಗಳನ್ನು ಆರಂಭದಿಂದ ಕೊನೆಯವರೆಗೂ ಕಾದಿಡ ಬೇಕು. ಹೀಗೆ ಮಾಡುವದರಿಂದ ಸಮಾಜ ಶಿಕ್ಷಣ ಕಾರ್ಯಕರ್ತರಿಗೆ ಹೆಚ್ಚು ಸಮರ್ಥರಾಗಿ ಕೆಲಸ ಮಾಡಲು ಸಾಧ್ಯವಾಗುವದು. ಸಾಕ್ಷರತೆಯು ಸ್ಥಿರವಾಗಿ ಉಳಿ ಯಲು ವಾಚನಾಲಯಗಳನ್ನು ಆರಂಭಿಸಬೇಕು. ಅವು ಗಳ ಮುಖಾಂತರ ಪ್ರೌಢರಲ್ಲಿ ಓದುವ ಅಭಿರುಚಿಯನ್ನು ಹುಟ್ಟಿಸಬೇಕು.

೭. ಸಮಾಜ ಶಿಕ್ಷಣ ವರ್ಗಗಳನ್ನು ನಡೆಯಿಸಿ ಕೊಂಡು ಹೋಗುವ ಬಗ್ಗೆ ಸಾರ್ವಜನಿಕರ ಟೀಕೆಗಳು :–

ಸಮಾಜ ಶಿಕ್ಷಣವು ನಿರಕ್ಷರಿ ಪ್ರೌಢರನ್ನು ಸುಶಿಕ್ಷಿತ ರನ್ನಾಗಿ ಮಾಡದೆ ಅನೇಕ ಸಂದರ್ಭಗಳಲ್ಲಿ ಸಮಾಜ ಕಂಟಕರನ್ನಾಗಿ ಮಾಡುವದೆಂದು ಕೆಲವು ಸುಶಿಕ್ಷಿತರ ಅಭಿಪ್ರಾಯವಾಗಿರುವದು. ಹೊಸದಾಗಿ ಸಾಕ್ಷರರಾದ ಪ್ರೌಢರು ಪೊಟ್ಟಿ ಸಹಿಗಳ ಹಾಗೂ ಸಹಿಗಳೇ ಇಲ್ಲದ ಅರ್ಜಿಗಳನ್ನು ಮಾಡಿ ಹಳ್ಳಿಯ ಶಾಂತತೆಗೆ ಭಂಗತರುವ ರೆಂದು ಕೆಲವರು ವಾದಿಸುವರು. ಹೊಸದಾಗಿ ಸಾಕ್ಷರ ರಾದವರು ಅಜ್ಞರನ್ನು ಶೋಷಣೆಮಾಡಿ ಅಡ್ಡಮಾರ್ಗಕ್ಕೆ ಹಚ್ಚುವರೆಂದು ಮತ್ತೆ ಕೆಲವರು ಅನ್ನುವರು. ಇವೆಲ್ಲ ಸಂದೇಹಗಳನ್ನು ತೊಡೆದು ಹಾಕಲು ಸಮಾಜ ಶಿಕ್ಷಣ ವರ್ಗಗಳನ್ನು ಪ್ರಾಮಾಣಿಕ ರೀತಿಯಲ್ಲಿ ನಡೆಸಿಕೊಂಡು ಹೋಗುವ ಕಾರ್ಯಕರ್ತರನ್ನು ತರಬೇತುಗೊಳಿಸಬೇಕು. ಹೀಗಾದಲ್ಲಿ ಮಾತ್ರ ಸಮಾಜ ಶಿಕ್ಷಣವು ಸಂದೇಹವಿಲ್ಲದೇ ಯಶಸ್ವಿಯಾಗುವದು.

೮. ಸಮಾಜ ಶಿಕ್ಷಣ ವರ್ಗಗಳ ಸುಧಾರಣೆಯ ಬಗ್ಗೆ ಸಾರ್ವಜನಿಕರ ಸಲಹೆ ಸೂಚನೆಗಳು :–

ಸಮಾಜ ಶಿಕ್ಷಣವು ಯಶಸ್ವಿಯಾಗಲು ಅದನ್ನು ವೃತ್ತಿಮೂಲಕವಾಗಿ ಸಾಗಿಸಬೇಕೆಂದು ಶಿಕ್ಷಕರ, ಕಾರ್ಯ ಕರ್ತರ ಹಾಗೂ ಶಿಕ್ಷಣ ತಜ್ಞರ ಅಭಿಪ್ರಾಯವಾಗಿದೆ. ಸಮಾಜ ಶಿಕ್ಷಣ ಕಾರ್ಯಕರ್ತರು ನಿರಕ್ಷರಿ ಪ್ರೌಢರ ಕೂಡ ಸಹೃದಯಿಗಳಾಗಬೇಕು. ತಾವೇ ಶ್ರೇಷ್ಠರೆಂದು ತಿಳಿದು ಕೊಳ್ಳಬಾರದು. ಸಮಾಜ ಶಿಕ್ಷಣದ ಕಾರ್ಯವನ್ನು ಸಹಕಾರೀ ಸಂಘ-ಸಂಸ್ಥೆಗಳು, ಗ್ರಾಮ ಪಂಚಾಯತಿಗಳು, ನಗರಸಭೆಗಳು ಹಾಗು ಶಾಲೆ ಕಾಲೇಜುಗಳು ವಹಿಸಿಕೊಳ್ಳ ಬೇಕೆಂದು ಕೆಲವರ ಅಭಿಪ್ರಾಯವಿರುವದು. ಇವು ಇಂಥ ಹೊಣೆಯನ್ನು ವಹಿಸುವದರಿಂದ ತಮಗೇನೂ ಆರ್ಥಿಕ ಸಹಾಯ ದೊರೆಯಲಾರದೆಂದು ತಮ್ಮ ಹೊಣೆಯನ್ನು ತಪ್ಪಿಸಿಕೊಳ್ಳುವವು. ನಿರಕ್ಷರಿ ಪ್ರೌಢರು ಸಮಾಜ ಶಿಕ್ಷಣ ವರ್ಗಗಳಿಗೆ ಹೆಚ್ಚಾಗಿ ಬರುವಂತೆ ಪ್ರೋತ್ಸಾಹಿಸಲು ಅವರಿ ಗಾಗಿ ಸಾಯಂಕಾಲದ ಊಟವನ್ನು ಪುಕ್ಕಟೆಯಾಗಿ

ಒದಗಿಸಿಕೊಡಬೇಕೆಂದು ಕೆಲವರು ಅಭಿಪ್ರಾಯಪಡುವರು. ಒಟ್ಟಿನಲ್ಲಿ ಶಿಕ್ಷಣ ತಜ್ಞರೂ, ರಾಜಕಾರಣಿಗಳೂ, ಸಮಾಜ ಶಾಸ್ತ್ರಜ್ಞರೂ ಹಾಗೂ ಇತರರೂ ನಿರಕ್ಷರತೆಯನ್ನು ಹೊಡೆದೋಡಿಸುವ ಕೆಲಸದಲ್ಲಿ ಒಮ್ಮತದ ಅಭಿಪ್ರಾಯ ವುಳ್ಳವರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ನಿರಕ್ಷರಿ ಪ್ರಾಢರು ತಮ್ಮ ಬಿಡುವಿನ ವೇಳೆಯಲ್ಲಿ ಸಮಾಜ ಶಿಕ್ಷಣ ವರ್ಗಗಳಿಗೆ ಬರುವಂತೆ ನೋಡಬೇಕು. ಅಂದ ರೇನೆ ಪ್ರಜಾಪ್ರಭುತ್ವದ ಅಡಿಗಲ್ಲು ಭದ್ರವಾಗಿರಿಸಿದಂತಾ ಗುವದಿಲ್ಲವೆ ?

ಜಯ–ಹಿಂದ

# ಭಾರತದಲ್ಲಿ ನೀರಾವರಿಯ ಹೊಸ ಯೋಜನೆಗಳು

ಲೇಖಕರು : ಶ್ರೀ ಆರ್. ಎಸ್. ಸೂರ್ಯವಂಶಿ, ಬಿ.ಎ.(ಆನರ್ಸ)ಡಿ.ಇಡಿ.

[ ಅ. ಮಾ. ಟಿ. ಸಿ. ಎಮ್. ಧಾರವಾಡ ]

ಭಾರತದಲ್ಲಿ ನೀರಾವರಿಯ ಮಹತ್ವವು ಬಹಳವಿದೆ. ಯಾಕಂದರೆ ಹಿಂದುಸ್ಥಾನದ ಅನೇಕ ಭಾಗಗಳಲ್ಲಿ ಸಾಕಷ್ಟು ಮಳೆಯಾಗುವದಿಲ್ಲ. ಮತ್ತು ಆಗುವ ಮಳೆಯೂ ಕೂಡ ಅನಿಶ್ಚಿತವಿರುತ್ತದೆ. ಇದಲ್ಲದೆ ದೇಶದ ವಿಭಜನೆಯ ತರುವಾಯ ಆಹಾರ ಧಾನ್ಯದ ಪೂರೈಕೆಯ ಪ್ರಶ್ನೆಯು ಬಲು ಗಮುಚಿನದಾಯಿತು. ಆದ್ದರಿಂದ ಭಾರತ ಸರಕಾರವು ನೀರಾವರಿಯ ಎಷ್ಟೋ ಹೊಸ ಯೋಜನೆಗಳನ್ನು ಮಾಡಿ ಈಗಾಗಲೇ ಕಾರ್ಯರೂಪದಲ್ಲಿ ತಂದಿದೆ. ಅನೇಕ ಮಹಾ ಯೋಜನೆಗಳ ಉದ್ದೇಶ ( multi purpose project ) ಯೋಜನೆಗಳಿರುತ್ತವೆ. ಆಣೆಕಟ್ಟುಗಳಿಂದ ನದಿಗಳಿಗೆ ಬಂದ ಮಹಾಪೂರವನ್ನು ತಡೆಯಲಾಗುವದು. ಮಹಾಪೂರದಿಂದ ಆಗುತ್ತಿದ್ದ ಹಾನಿಯನ್ನು ಕಡಿಮೆಮಾಡ ಲಾಗುವದು. ಪರ್ಷದಲ್ಲಿ ಎರಡುಸಾರೆ ಬೆಳೆಯನ್ನು ತೆಗೆಯಬಹುದು. ವಿದ್ಯುತ್ ಶಕ್ತಿಯನ್ನು ಪೂರೈಸುವ ಎಷ್ಟೋ ಕಾರಖಾನೆಗಳನ್ನು ಸ್ಥಾಪಿಸಬಹುದು. ಇದರಿಂದ ಉದ್ಯೋಗ ವ್ಯವಸಾಯಗಳು ಪ್ರಗತಿಹೊಂದುವವು. ಅನೇಕ ಹಳ್ಳಿಗಳಿಗೆ ವಿದ್ಯುತ್ತನ್ನು ಪೂರೈಸಲಾಗುವದು. ಇದರಿಂದ ಗ್ರಾಮದ ಉದ್ಯೋಗಗಳು ಪ್ರೋತ್ಸಾಹನೆಗೊಳ್ಳಬಹುದು. ಮಹಾಪೂರದ ನಿವಾರಣೆಯಿಂದ ಜೌಳು ಕಡಿಮೆಯಾಗ ಬಹುದು. ಮತ್ತು ಚಳಿ ಜ್ವರದ ಕಾಟವು ಬಂದಾಗುವದು. ಸಣ್ಣ ಸಣ್ಣ ಹಳ್ಳಿಗಳಿಗೂ ಕೂಡ ನೀರಿನ ಪೂರೈಕೆ ಯಾಗುವದು.

## ಯೋಜನೆಗಳ ವಿವರ:—

### ೧. ದಾಮೋದರ ನದಿಯ ಯೋಜನೆ

ಇದೊಂದು ವಿವಿಧ ಉದ್ದೇಶದ ಅತ್ಯಂತ ಮಹತ್ವದ ಯೋಜನೆ ಇರುತ್ತದೆ. ಇದಕ್ಕೆ ಅಂದಾಜು ಕೋಟಿ ರೂಪಾಯಿ ಗಳು ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಕೆಲವು ಕಡೆಗೆ ನೀರಾವರಿ ಆಣೆಕಟ್ಟುಗಳನ್ನು ಕಟ್ಟಲಾಗುವದು. ಮತ್ತು ಇನ್ನು ಕೆಲವು ಸ್ಥಳಗಳಲ್ಲಿ ಜಲಜನ್ಯ ವಿದ್ಯುತ್ ಶಕ್ತಿ ಆಣೆಕಟ್ಟುಗಳನ್ನು ನಿರ್ಮಿಸ ಲಾಗುವದು. ಈಗಾಗಲೇ ಕೆಲವು ಕಡೆಗೆ ಕಾರ್ಯವು ಕೊನೆಗೊಂಡು ಫಲ ದೊರೆಯ ಹತ್ತಿದೆ.

(ಅ) ಭಾಕ್ರಾನಂಗಲ ನದಿಗೆ ತಿಲಾಯಾ ಎಂಬಲ್ಲಿ ಒಂದು ಆಣೇಕಟ್ಟು ಕಟ್ಟಿ ತಯಾರಿಸಿದ್ದಾರೆ. ಇದರಿಂದ ೨೦ ಸಾವಿರ ಎಕರೆ ಭೂಮಿಗೆ ನೀರಿನ ಪೂರೈಕೆಯಾಗ ಬಹುದು. ಅಲ್ಲಿರುವ ವಿದ್ಯುತ್ ಕೇಂದ್ರದಿಂದ ೪ ಸಾವಿರ ಕಿಲೋವ್ಯಾಟ್ ವಿದ್ಯುತ್ ಶಕ್ತಿ ಪೂರೈಕೆ ಯಾಗುತ್ತದೆ.

(ಬ) ಕೋನಾರ್‌ದ ಆಣೆಕಟ್ಟು ಪೂರ್ಣ ಮಾಡ ಲಾಗಿದೆ. ಈ ಆಣೆಕಟ್ಟಿನಿಂದ ೭೧ ಸಾವಿರ ಎಕರೆ ಭೂಮಿಗೆ ನೀರು ಸಿಗಬಹುದು. ಮತ್ತು ಇಲ್ಲಿಯ

ವಿದ್ಯುತ್‌ಶಕ್ತಿಯ ಕೇಂದ್ರದಿಂದ ೪ಸಾವಿರ ಕಿಲೋವ್ಯಾಟ ವಿದ್ಯುತ್‌ಶಕ್ತಿಯನ್ನು ಉಪಯೋಗಕ್ಕೆ ತೆಗೆದು ಕೊಳ್ಳಬಹುದು.

(ಕ) ಭಾಕ್ರಾರ ನದಿಗೆ ಕಟ್ಟಿದ ಮೈತಾನ ಆಣೆಕಟ್ಟಿನ ಕೆಲಸವು ಬಹುಮಟ್ಟಿಗೆ ಮುಗಿದಂತಾಗಿದೆ. ಇದನ್ನು ನದಿಯ ಮಹಾಪೂರ ತಡೆಯಲು ರಚಿಸಲಾಗಿದೆ. ಇದು ೨ ಲಕ್ಷ ೭೦ ಸಾವಿರ ಎಕರೆ ಭೂಮಿಗೆ ನೀರು ಉಣ್ಣಿಸುವದು. ಇಲ್ಲಿಯೇ ವಿದ್ಯುತ್ ಶಕ್ತಿಯನ್ನು ಪೂರೈಸುವ ವಿದ್ಯುತ್ ಕೇಂದ್ರವನ್ನು ನ್ಹಾಪಿಸಲಾಗಿದೆ.

(ಡ) ಪಂಚತ್ ಬೆಟ್ಟದಲ್ಲಿಯ ಆಣೆಕಟ್ಟಿನ ಕಾರ್ಯವು ಬಹುಮಟ್ಟಿಗೆ ಪೂರ್ತಿಗೊಂಡಂತಾಗಿದೆ. ಇದರಿಂದ ೬ಲಕ್ಷ ೮ಸಾವಿರ ಎಕರೆ ಭೂಮಿ ನೀರುಣ್ಣುವದು. ಇಲ್ಲಿಯ ವಿದ್ಯುತ್ ಕೇಂದ್ರದಿಂದ ೪೦ ಸಾವಿರ ಕಿಲೋವ್ಯಾಟ ವಿದ್ಯುತ್ ಶಕ್ತಿಯನ್ನು ತಯಾರಿಸಬಹುದಾಗಿದೆ.

(ಇ) ಇದರಂತೆ ದುರ್ಗಾಪುರದ ಆಣೆಕಟ್ಟಿನಿಂದ ೧೦ ಲಕ್ಷ ೪೪ ಸಾವಿರ ಎಕರೆ ಭೂಮಿಗೆ ನೀರಿನ ಪೂರೈಕೆ ಆಗುವದು.

### ೨. ಭಾಕ್ರಾ-ನಾನಗಲ್ ಯೋಜನೆ

ಪೂರ್ವ ಪಂಜಾಬ ಪ್ರಾಂತದಲ್ಲಿ ಭಾಕ್ರಾ ಎಂಬಲ್ಲಿ ಸತಲಜ ನದಿಗೆ ಒಂದು ದೊಡ್ಡ ಆಣೆಕಟ್ಟನ್ನು ಕಟ್ಟಲಾಗಿದೆ. ಮತ್ತು ಭಾಕ್ರಾದಿಂದ ೧೫ ಮೈಲುಗಳ ಕೆಳಗೆ ನಾನಗಲ್‌ದ ಹತ್ತರ ಮತ್ತೊಂದು ಆಣೆಕಟ್ಟು ರಚಿಸಿದ್ದಾರೆ. ನಾನಗಲ್ ಆಣೆಕಟ್ಟಿನ ಹತ್ತಿರ ಈಗಾಗಲೇ ಎರಡು ವಿದ್ಯುದಾಗರಗಳನ್ನು ಕಟ್ಟಿ ಪೂರ್ಣ ಮಾಡಲಾಗಿದೆ. ಕಾಲುವೆಗಳಿಂದ ಸುಮಾರು ೩೦-೩೫ ಲಕ್ಷ ಎಕರೆ ಭೂಮಿ ನೀರುಣ್ಣುವದು. ಈಗಿನ ಅಂದಾಜಿನಂತೆ ಒಟ್ಟು ಸುಮಾರು ೧೬೦ ಕೋಟಿ ರೂಪಾಯಿಗಳು ವ್ಯಯವಾಗಬಹುದು.

### ೩. ಹಿರಾಕುಡ್ ಯೋಜನೆ

ಈ ಯೋಜನೆಯನ್ನು ಓಡಿಸಾ ಪ್ರಾಂತದಲ್ಲಿ ಕೈಕೊಳ್ಳಲಾಗಿದೆ. ಮಹಾನದಿಗೆ ಕಟ್ಟುವ ಈ ಆಣೆಕಟ್ಟು ಇಡೀ ದೇಶದಲ್ಲಿಯೇ ಬಹಳ ದೊಡ್ಡದಿರುತ್ತದೆ. ಈ ಮಹಾಯೋಜನೆಗೆ ಸುಮಾರು ೮೫ ಕೋಟಿ ೭೦ ಲಕ್ಷ ರೂಪಾಯಿ ಖರ್ಚು ತಗಲಬಹುದೆಂದು ಅಂದಾಜು ಮಾಡಲಾಗಿದೆ. ವಿವಿಧ ಉದ್ದೇಶದ ಯೋಜನೆಗಳಲ್ಲಿ ಇದೊಂದು ಮಹತ್ವದ ಯೋಜನೆಯಾಗಿರುತ್ತದೆ. ಇದರಿಂದ ಸುಮಾರು ೭-೮ ಲಕ್ಷ ಎಕರೆ ಭೂಮಿಗೆ ನೀರಿನ ಪೂರೈಕೆಯಾಗುತ್ತದೆ.

ಈ ಆಣೆಕಟ್ಟಿನ ಉದ್ದ ೧೫,೭೪೮' ಎತ್ತರ ೨೦೦ ಇದೆ. ಇದರ ಬದಿಗಳಲ್ಲಿ ೧೨೫ ಮೈಲು ಉದ್ದದ ಮಣ್ಣಿನ ಗೋಡೆಗಳಿವೆ. ಈ ಯೋಜನೆಯ ಜಲಾಶಯವೂ ಕೂಡಾ ಇಡೀ ದೇಶದಲ್ಲಿಯೇ ಹಿರಿದಾಗಿದೆ.

ಈ ಆಣೆಕಟ್ಟಿನ ನೆರೆಯಲ್ಲಿ ಒಂದು ವಿದ್ಯುತ್ ಉತ್ಪಾದನಾ ಕೇಂದ್ರವನ್ನು ಕಟ್ಟಿದ್ದಾರೆ. ಕೆಲಸವು ಪೂರ್ತಿಯಾಗಿರುತ್ತದೆ. ಮುಖ್ಯ ಆಣೆಕಟ್ಟಿನಿಂದ ೧೪ ಮೈಲಿನ ಮೇಲೆ ಇನ್ನೊಂದು ವಿದ್ಯುತ್ ಉತ್ಪಾದನಾ ಕೇಂದ್ರವನ್ನು ರಚಿಸಲಾಗುವದು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ೧೨೪ ಕೋಟಿ ರೂಪಾಯಿ ವ್ಯಯ ಮಾಡಲಾಗುವದು.

### ೪. ಚಂಬಳ ಯೋಜನೆ

ಚಂಬಳ ನದಿಯು ವಿಂಧ್ಯಪರ್ವತದಲ್ಲಿ ಉಗಮವಾಗಿ ಮುಂದೆ ಯಮುನಾ ನದಿಯನ್ನು ಸೇರಿದೆ. ಇದಕ್ಕೆ ಳ ಕಡೆಗಳಲ್ಲಿ ಆಣೆಕಟ್ಟುಗಳನ್ನು ಕಟ್ಟುವರು. ಇದರಿಂದ ರಾಜಸ್ಥಾನ ಮತ್ತು ಮಧ್ಯಪ್ರದೇಶಗಳ ಸುಮಾರು ೧೪ ಲಕ್ಷ ಎಕರೆ ಭೂಮಿಗೆ ನೀರಿನ ಪೂರೈಕೆಯಾಗಬಹುದು. ಮತ್ತು ಇದರಿಂದ ೨ ಲಕ್ಷ ೧೦ ಸಾವಿರ ಕಿಲೋವ್ಯಾಟುಗಳಷ್ಟು ವಿದ್ಯುತ್‌ಶಕ್ತಿ ದೊರೆಯಬಹುದು. ಇದಕ್ಕೆ ಸುಮಾರು ೪೪ ಕೋಟಿ ರೂಪಾಯಿ ಬೆಚ್ಚ ತಗಲಬಹುದೆಂದು ಅಂದಾಜು ಮಾಡಲಾಗಿದೆ.

### ೫. ಕಾಕ್ರಾಪಾರಾದ ಆಣೆಕಟ್ಟಿನ ಯೋಜನೆ

ಮುಂಬೈ ಪ್ರಾಂತದಲ್ಲಿ ತಾಪೀ ನದಿಗೆ ಅಡ್ಡವಾಗಿ ಕಾಕ್ರಾಪಾರಾ ಎಂಬಲ್ಲಿ ಒಂದು ಆಣೆಕಟ್ಟು ಹಾಕುವ ಕೆಲಸವು ಈಗಾಗಲೇ ನಡೆದು ಪೂರ್ತಿಗೊಳ್ಳುತ್ತ ಬಂದಿರುತ್ತದೆ. ಈ ಆಣೆಕಟ್ಟಿನ ಕಾಲುವೆಗಳಿಂದ ೫ ಲಕ್ಷ ಎಕರೆ ಭೂಮಿಗೆ ನೀರು ಪೂರೈಕೆಯಾಗಬಹುದು. ಯೋಜನೆಗೆ ಸುಮಾರು ೧೧ ಕೋಟಿ ರೂಪಾಯಿ ವೆಚ್ಚವಾಗಬಹುದು.

### ೬. ಮಯೂರಾಕ್ಷಿ ಯೋಜನೆ

ಈ ಆಣೆಕಟ್ಟನ್ನು ಬಿಹಾರ ರಾಜ್ಯದಲ್ಲಿಯ ಮಯೂರಾಕ್ಷಿ ಎಂಬ ನದಿಗೆ ಕಟ್ಟಲಾಗಿರುತ್ತದೆ. ಇದರ ಹತ್ತಿರ ಒಂದು ವಿದ್ಯುತ್ ಉತ್ಪಾದನಾ ಕೇಂದ್ರವಿದೆ. ಈ ಆಣೆಕಟ್ಟು ಪಶ್ಚಿಮ ಬಂಗಾಲದ ಸುಮಾರು ೬ ಲಕ್ಷ ಎಕರೆ ಭೂಮಿಗೂ ಹಾಗೂ ಬಿಹಾರಿನ ೨೩ ಸಾವಿರ ಎಕರೆ ಭೂಮಿಗೂ ನೀರನ್ನು ಪೂರೈಸುವದು. ಈ ಯೋಜನೆಗೆ ಸುಮಾರು ೧೬ ಕೋಟಿ ರೂಪಾಯಿ ವ್ಯಯವಾಗ ಬಹುದು.

### ೭. ಕೋಸಿ ಯೋಜನೆ

ಕೋಸಿ ನದಿಯ ಮಹಾಪೂರದಿಂದ ಆಗುವ ಹಾನಿಯನ್ನು ತಡೆಯಲು ಈ ಯೋಜನೆಯನ್ನು ಕೈಕೊಳ್ಳಲಾಗಿರುತ್ತದೆ. ಕೋಸಿ ಆಣೆಕಟ್ಟಿನ ಯೋಜನೆಯಿಂದ ಬಿಹಾರ ಮತ್ತು ನೇಪಾಳ ರಾಜ್ಯಗಳಿಗೆ ಪ್ರಯೋಜನ ಕಾರಿಯಾಗಿರುತ್ತದೆ. ಈ ಯೋಜನೆಗೆ ಸುಮಾರು ೬ ಕೋಟಿ ರೂಪಾಯಿ ನೆಚ್ಚ್ಯಮಾಡಬಹುದು. ಪೂರ್ವ ಕೋಸಿ ಕಾಲುವೆಗಳಿಂದ ೧೩ ಲಕ್ಷ ಎಕರೆಗಳಿಗೂ ಪಶ್ಚಿಮ ಕಾಲುವೆಯಿಂದ ನೇಪಾಳದಲ್ಲಿ ೨೯ ಸಾವಿರ ಎಕರೆ ಭೂಮಿಗೂ ನೀರಿನ ಪೂರೈಕೆಯಾಗುವದು. ಇಲ್ಲಿಯೂ ಕೂಡ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ರಚಿಸಲಾಗುವದು.

### ೮. ತುಂಗಭದ್ರಾ ಯೋಜನೆ

ಮೈಸೂರು ರಾಜ್ಯದ ಬಳ್ಳಾರಿ ಜಿಲ್ಲೆಯಲ್ಲಿ ಹೊಸಪೇಟೆಯ ಸಮೀಪದಲ್ಲಿ ತುಂಗಭದ್ರಾ ನದಿಗೆ ಅಡ್ಡವಾಗಿ ಕಟ್ಟಿದ ಆಣೆಕಟ್ಟು ೬೦೦ ಅಡಿ ಉದ್ದವಾಗಿದೆ. ಆಣೆಕಟ್ಟಿನ ನೆರೆಯಲ್ಲಿ ವಿದ್ಯುದಾಗರಗಳನ್ನು ರಚಿಸಲಾಗುವದು. ಇಲ್ಲಿಂದ ೬೩ ಸಾವಿರ ಕಿಲೋವ್ಯಾಟುಗಳಷ್ಟು ವಿದ್ಯುತ್ ಶಕ್ತಿ ದೊರೆಯಬಹುದು.

ಆಣೆಕಟ್ಟಿನ ಮುಖ್ಯ ಕೆಲಸವು ಕೊನೆಗೊಳ್ಳುತ್ತಾ ಬಂದಿರುತ್ತದೆ. ಮತ್ತು ವಿದ್ಯುತ್ ಉತ್ಪಾದನಾ ಕೇಂದ್ರದ ಕೆಲಸವೂಕೂಡ ಪೂರ್ತಿಯಾಗಿದೆ. ಕಾಲುವೆಯ ಕೆಲಸವು ಕೊನೆಗಂಡು ೩೦,೦೦೦ ಎಕರೆ ಭೂಮಿಗೆ ನೀರಿನ ಪೂರೈಕೆಯಾಗುತ್ತದೆ.

( ಮುಂದುವರೆಯುವದು )


ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ್ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ್ ಮುಂ. ಡ್ರಾಯಿಂಗ ಪರಿಕ್ಷೆಗಳಿಗೆ—

**ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ**

## ಆದರ್ಶ ಚಿತ್ರಕಲಾ

**( Ideal Drawing )**

**ಶ್ರೀ ಎಸ್. ಕೆ. ಜೋಶಿ, ಮತ್ತು**

**ಶ್ರೀ ಜಿ. ಡಿ. ವಾಲಿ.**

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧—೧೨—೦ ಅಂಚೆವೆಚ್ಚ ಪ್ರತ್ಯೇಕ.** ಐದು ಮತ್ತು ಐದಕ್ಕಿಂತ ಹೆಚ್ಚು **ಪ್ರತಿ** ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.

ಇದು ಕನ್ನಡದಲ್ಲಿಯೂ ಸಿಗುತ್ತದೆ,

**ಜಿ. ವಾಯ್. ರಾಣೆ**

**ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.**

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

**ಶೇಲಾರ ಕೃತ**

## ಪ್ರಾಥಮಿಕ ಭೂಮಿತಿ

**[ಕ್ಷೇತ್ರಫಲ ಘನಫಲ ಸಹಿತ]**

೪ ರಿಂದ ೭ ನೇಯ ವರ್ಗದ ವರೆಗಿನ ವಿಷಯವನ್ನೆಲ್ಲ ಒಳಗೊಂಡಿದೆ.

**ಬೆಲೆ: ೧ರೂ. ೮ಆಣೆ ಮಾತ್ರ**

ದೊರೆಯುವ ಸ್ಥಳ:—

**ಸಾಯಿ ಪಬ್ಲಿಶಿಂಗ್ ಹಾವುಸ್,**
**ವಿಜಯ ರೋಡ, ಧಾರವಾಡ.**

# ಶಕ್ತಿಯ ಕೇಂದ್ರೀಕರಣವು ಅನಿಷ್ಠ ಮೂಲವು

**ಗಾಂಧೀಸ್ಮಾರಕ ನಿಧಿಯ ಚೇಅರಮನ್‌ರಾದ ಮಾನ್ಯ ದಿವಾಕರ ರಂಗರಾಯರು ದಿ. ೩-೪-೫೯ರಂದು ಧಾರವಾಡದ ಪದವೀಧರರ ಜೀ. ಶಿ. ಕೇಂದ್ರದ "ದೀಪದಾನ" ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾಡಿದ ಭಾಷಣವು.**

ಸಂಗ್ರಾಹಕರು : **ಶ್ರೀ ಹ. ಗ. ಜೋಶಿ**

ಶ್ರೀ ತೀರಗಾಂವಕರರೇ,

ಸಹೋದರ ಸಹೋದರಿಯರೇ,

ಶ್ರೀಯುತ ತೀರಗಾಂವಕರರು ಹಾಡುತ್ತಿರುವ ಕೆಲಸದ ಪರಿಚಯ ನನಗಿರುವದರಿಂದ ಅವರು ನನ್ನನ್ನು ಈ ಹೊತ್ತು ಈ ಸಮಾರಂಭಕ್ಕೆ ಆಗಮಿಸಿ ನಾಲ್ಕು ಮಾತುಗಳನ್ನು ಹೇಳಲು ಕೇಳಿಕೊಂಡ ಕೂಡಲೆ ನಾನು ಒಮ್ಮೆಲೆ ಒಪ್ಪಿಗೆಯಿತ್ತು ನಿಮ್ಮ ಮಧ್ಯದಲ್ಲಿರುವೆನು. ಸದ್ಯಕ್ಕೆ "ಜೀವನ ಶಿಕ್ಷಣ"ವೆಂದು ಪ್ರಚಲಿತವಿರುವ ಮೂಲಶಿಕ್ಷಣದ ಜೊತೆಗೆ ನನ್ನ ಪ್ರತ್ಯಕ್ಷ ಸಂಬಂಧವಿರದಿದ್ದರೂ, ಈ ಶಿಕ್ಷಣ ಪದ್ಧತಿ ಪ್ರಾರಂಭವಾಗುವ ಮುಂಡೆ, ಅದನೋಲೆ ಕೂಡ ಕೆಲದಿನ ನನ್ನ ಸಂಬಂಧ ಬಂದಿತ್ತು. ಮುಂದೆ ನಿರೀಕ್ಷಕನೆಂದು ನಾನದನ್ನು ನೋಡುತ್ತಲಿದ್ದೇನೆ. ಅದರ ಪ್ರಗತಿ ಪರಿಶೀಲನೆಯನ್ನು ಮಾಡುತ್ತಲಿದ್ದೇನೆ. ಈ ಶಿಕ್ಷಣಪನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಿದ್ದರೆ ಗಾಂಧೀಜಿಯವರು ಪ್ರಾರಂಭಮಾಡಿದ ಕಾರಣ, ಉದ್ದೇಶಗಳು ನಮ್ಮ ಕಣ್ಣೆದುರಿಗೆ ಸ್ಪಷ್ಟವಾಗಿ ಇರಬೇಕಾಗುತ್ತದೆ. ಅದರ ಭವಿಷ್ಯ ಏನಾಗಬೇಕೆಂದು ಅವರು ಬಯಸಿದ್ದರೋ ಆದನ್ನು ಒಳಗಣ್ಣಿನಿಂದ ನೋಡಬೇಕು. ಈ ವಿಷಯದಲ್ಲಿ ಒಂದು ಮಾತು ನೆನಪಾಗುತ್ತಲಿದೆ. ಇಂದಿನ ಅಣುಶಕ್ತಿಯ ನಿರ್ಮಾಪಕನು ಐನಸ್ಟಿನನೆಂದು ಹೇಳಬಹುದು. ಆತನು ಅಟಂ ಶಕ್ತಿಯನ್ನು ಕಾಣುವ ಮುಂದೆ ಅವನ ಕಣ್ಣೆದುರಿನಲ್ಲಿ ಅದರ ವಿಧ್ವಂಸಕ ಪರಿಣಾಮದ ಚಿತ್ರವು ಇರಲಿಲ್ಲ. ಅದರ ವಿಧ್ವಂಸಕ ಪರಿಣಾಮವನ್ನು ಕಣ್ಣಾರೆ ಕಂಡು ಮುಂದೆ ಆತನಿಗೆ ಪಾಶ್ಚಾತ್ತಾಪವಾದುದು ಅವನ ಜೀವನ ಚರಿತ್ರೆಯಿಂದ ತಿಳಿದುಬರುತ್ತಿದೆ. ಹಾಗೆ ಗಾಂಧೀಜಿಯವರ ಮನಸ್ಸಿನಲ್ಲಿ ಏನಿರಬೇಕೆಂಬುದು ಅವರ ಮನಸ್ಸಿನಲ್ಲಿ ಇದ್ದಿತೋ ಅದನ್ನು ತಿಳಿದು ಮುಂದಿನ ಪೀಳಿಗೆಯವರು ನಿರ್ಧರಿಸಬೇಕು.

ಗಾಂಧೀಜಿಯವರು ಕೆಲ ಜೀವನ ಸೂತ್ರಗಳನ್ನು ತಮ್ಮ ಕಣ್ಣೆದುರಿನಲ್ಲಿ ಇರಿಸಿಕೊಂಡಿದ್ದರು. ಜೀವನ, ಸಮಾಜ, ಮಾನವ ಕುಲ, ಜಗತ್ತು ಇವೆಲ್ಲವುಗಳ ಸಮಗ್ರತೆಯ ಚಿತ್ರ ಅವರ ಕಣ್ಮುಂದೆ ಇದ್ದಿತು. ಮಾನವ ಕುಲವೆಲ್ಲವೂ ಒಂದು. ಅದು ಶಾಂತಿ, ಸಮಾಧಾನ, ಪರಸ್ಪರ ಸಹಕಾರ, ಸಹಜೀವನಗಳಿಂದ ಕೂಡಿರಬೇಕು. ಆಂಥ ಬರಲಿರುವ ಸಮಾಜದ ಅಸ್ತಿವಾರವನ್ನು ಬಾಲ್ಯದಲ್ಲಿಯೇ ಹಾಕಬೇಕು. ಅದಕ್ಕೆ ಉಚಿತವಾದ ಸಂಸ್ಕಾರವನ್ನು ಮಕ್ಕಳಿಗೆ ಕೊಡಬೇಕು ಎಂಬ ದೃಷ್ಟಿಯಿಂದ ಅವರು ಈ ಶಿಕ್ಷಣದ ಬುನಾದಿಯನ್ನು ಹಾಕಿದರು. ಒಂದು ವಿಶಿಷ್ಟವಾದ ರೀತಿಯಿಂದ ಜೀವನ ನಡೆಸದಿದ್ದರೆ, ಅಥವಾ ಶಿಕ್ಷಣವನ್ನು ಕೊಡದಿದ್ದರೆ ಆತ್ಮಘಾತಕ ಧ್ಯೇಯವನ್ನು ಮುಂದಿಟ್ಟಂತಾಗುವದೆಂದು ಅವರು ಬಗೆದಿದ್ದರು. ಅಂತೆಯೇ ಅವರು ಕೆಲ ಜೀವನ ಸೂತ್ರಗಳನ್ನು ನಿರ್ಮಿಸಿಕೊಂಡಿದ್ದರು.

ಜೀವನದಲ್ಲಿ ಯಾವುದೇ ಕಾರಣದ ನಿಮಿತ್ತ ಇನ್ನೊಬ್ಬರ ಹಿಂಸೆಗೆ-ನಾಶಕ್ಕೆ ಯಾವುದೇ ಆಸ್ಪದವು ಸಿಕ್ಕಿರಬಾರದು. ಹಿಂಸೆಯು ಸರ್ವನಾಶದ ಮೂಲವು ಎಂಬ ಪ್ರತೀತಿ ಅವರಲ್ಲಿದ್ದಿತು. ಇಂಥ ದುಷ್ಟ ಹಿಂಸಾ ಪ್ರವೃತ್ತಿಗೆ ಮನುಷ್ಯನಲ್ಲಿರುವ ಶಕ್ತಿಯ ಕೇಂದ್ರೀಕರಣವೇ ಮೂಲ ಕಾರಣವು. ರಾಜಕಾರಣ, ಧಾರ್ಮಿಕ, ಆಧ್ಯಾತ್ಮಿಕ, ವಿಜ್ಞಾನ, ಔದ್ಯೋಗಿಕ ಮೊದಲಾದ ಯಾವ ಕ್ಷೇತ್ರವೇ ಇರಲಿ, ಆ ಕ್ಷೇತ್ರದಲ್ಲಿ ಶಕ್ತಿಯ ಕೇಂದ್ರೀಕರಣವಾದರೆ ತೀರಿತು, ಅನಿಷ್ಟಕ್ಕೆ ಕಾರಣವಾಗುವದು. ಬುದ್ಧಿ ಶಕ್ತಿಯ ಕೇಂದ್ರೀಕರಣವೂ ಕೂಡ ಅನಿಷ್ಟಕ್ಕೆ ಎಡೆಗೊಡುವುದು. ಧನಶಕ್ತಿಯ ಕೇಂದ್ರೀಕರಣದಿಂದಲೇ ಬಂಡವಲಶಾಹಿಯ ಉಗಮವಾಯಿತು. ರಾಜಕೀಯ ಶಕ್ತಿಯು ಕೇಂದ್ರೀಕರಣವು ಏಕಪ್ರಭುತ್ವಕ್ಕೆ

ಎಳೆಸಿತು. ಸಮಾಜದ ನಾಶಕ್ಕೆ ದಾಸ್ಯಕ್ಕೆ ಕಾರಣೀಭೂತವಾದುದೆಲ್ಲವೂ ಘಾತಕವಾದುದು. ಏಕಪ್ರಭುತ್ವ ಮೊದಲಾದವುಗಳು ಸಮಾಜದ ನಾಶಕ್ಕೆ ಕಾರಣಗಳಾಗಿವೆ. ಇದೇ ಮಾತನ್ನು ಮನುಷ್ಯನ ಸಮಾಜದ ಜೀವನಕ್ಕೂ ಅನ್ವಯಿಸಬಹುದು.

ಒಂದು ಕಾಲಕ್ಕೆ ರಾಜಶಕ್ತಿ ಧನಶಕ್ತಿಗಳು ಶ್ರೇಷ್ಠ ಶಕ್ತಿಗಳೆನಿಸಿದ್ದರೂ ಇಂದು ಅವನ್ನು ಮೀರಿಸುವ ಶಕ್ತಿಗಳೂ ಉದಯವಾಗಿಹತ್ತಿವೆ. ಇಂದು ವಿಜ್ಞಾನ; ತಾಂತ್ರಿಕ ಜ್ಞಾನಗಳು ರಾಜಕೀಯವನ್ನೂ ಕೂಡ ಮುಸುಕು ಹಾಕಿವೆ. ಆ ಶಕ್ತಿಗಳು ಇಂದು ಉಳಿದೆಲ್ಲ ಶಕ್ತಿಗಳನ್ನು ಮೀರಿ ನಿಂತಿವೆ. ಅವುಗಳ ಶಕ್ತಿಯ ಕೇಂದ್ರೀಕರಣವಂತೂ ಪ್ರಳಯದ ಮೂನ್ಸೂಚನೆಗಳೆಂದೇ ಹೇಳಬಹುದು. ಬರ್ನ್‌ಹ್ಯಾಮ ಎಂಬವನು ಅದನ್ನು ಮ್ಯಾನೇಜಿರಿಯಲ್ ರೆವ್ಹಲೂಶನ್' ಎಂದು ಕರೆದಿರುವನು. ಶಕ್ತಿಯ ಕೇಂದ್ರೀಕರಣದಲ್ಲಿ ಪೌರ್ಜನ್ಯವು ತುಂಬಿದೆ. ಆಧ್ಯಾತ್ಮ ಶಕ್ತಿಯ ಕೇಂದ್ರೀಕರಣವೂ ಕೂಡ ಅನಿಷ್ಟ ಮೂಲವು. ಬೌಧಿಕ, ನೈತಿಕ, ಆಧ್ಯಾತ್ಮಿಕ, ಯಾವ ಶಕ್ತಿಯೇ ಇರಲಿ. ಅದರ ಕೇಂದ್ರೀಕರಣವು ಕೆಡುಕು ಉಂಟುಮಾಡುವದು. ಅಂಥ ಕೇಂದ್ರೀಕೃತ ಶಕ್ತಿಯು ಮನುಷ್ಯನಲ್ಲಿಯ ಆಶಾ ಮುಂತಾದ ಆದಿಮ ಅಂತಃಶ್ಚಲನೆಗಳನ್ನು ಪ್ರಜ್ಞೋದಿಸುತ್ತದೆ. ಅಂಥ ಪ್ರಜ್ಞೋದನೆಯು ಅಹಂಭಾವ ಮೊದಲಾದ ದುರ್ಗುಣಗಳಿಗೆ ಎಡೆಮಾಡಿಕೊಡುತ್ತದೆ. ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಅಡ್ಡಿಬಂದು ವಿಕಾಸವು ಪ್ರತಿರೋಧಿಸಲ್ಪಡುತ್ತದೆ. ಮನುಷ್ಯನು ದಾಸ ಗುಲಾಮು ಪರವಶನಾಗುವನು. ಅಂತೆಯೇ ಗಾಂಧೀಜಿಯವರು ಶಕ್ತಿಯ ಕೇಂದ್ರೀಕರಣ ವಾಗ ಬಾರದೆಂದು ಹೇಳಿದರು. ಶಕ್ತಿಯ ವಿಕೇಂದ್ರೀಕರಣವು ಅವರ ಜೀವನದ ಪ್ರಥಮ ಸೂತ್ರವಾಗಿದ್ದಿತೆಂದು ಹೇಳಬಹುದು. ಗಾಂಧೀಜಿಯವರು ಮಾನವೀಯತೆಗೆ ಎಲ್ಲಕ್ಕೂ ಹೆಚ್ಚಿನ ಮಹತ್ವಕೊಡುತ್ತಿದ್ದರು.

ಮಾನವೀಯತೆಯನ್ನು ಹತ್ತಿಕ್ಕಿದರೆ ಇನ್ನುಳಿದ ಯಾವ ಪ್ರಗತಿಯೂ ಅವರಿಗೆ ಪ್ರಗತಿ ಎಂದೆನಿಸುತ್ತಿರಲಿಲ್ಲ. ಪ್ರತಿಯೊಂದು ವ್ಯಕ್ತಿಯನ್ನು ಗಾಂಧೀಜಿಯವರು 'ಚಿತ್ ಶಕ್ತಿಯ ಕಣ' ವೆಂದೇ ಭಾವಿಸುತ್ತಿದ್ದರು.

ಮನುಷ್ಯನಲ್ಲಿರುವ ಈ ಚಿತ್ ಶಕ್ತಿಯ ಅಸ್ತಿತ್ವವೇ ಅವನನ್ನು ಉಳಿದ ಪ್ರಾಣಿ ವರ್ಗಗಳಿಂದ ಭಿನ್ನ ಮಾಡಿದೆ. ಮನುಷ್ಯನ ಅವತಾರವಾಗಿ ಹತ್ತುಲಕ್ಷ ವರ್ಷ ಗತಿಸಿರಬಹುದು. ಕೆಲ ಪ್ರಾಣಿಗಳ ಉಗಮವು ಅದಕ್ಕೂ ಹಿಂದೆ ಹೋಗಬಹುದು. ಆದರೆ ಪ್ರಾಣಿಗಳು ಪ್ರಾಣಿಗಳಾಗಿಯೇ ಉಳಿದಿವೆ. ಮನುಷ್ಯನು ಮಾತ್ರ ಈ ಚಿತ್‌ಶಕ್ತಿಯ ವಿಕಸನದಿಂದ ಪ್ರಗತಿಯನ್ನು ತೋರಿದ್ದಾನೆ. ಈ ಚಿತ್-ಶಕ್ತಿಯ ವಿಕಸನಕ್ಕೆ ಬುದ್ಧಿ ಶಕ್ತಿಯ ಬೆಂಬಲ ಬೇಕು. ಈ ಬುದ್ಧಿಶಕ್ತಿಯ ವಿಕಾಸಕ್ಕೆ ವಿಶ್ವದ ಸಂಪರ್ಕ ಬೇಕು; ಅದಕ್ಕೆ ಸ್ವಾತಂತ್ರ್ಯವು ಬೇಕು. ಒಟ್ಟಿಗೆ ಮಾನವ ಸಮಾಜದ ವಿಕಾಸಕ್ಕೆ ಎರಡು ತೆರನಾದ ಪ್ರಯತ್ನಗಳು ಬೇಕು; ಇಂತಹ ಎರಡು ತರಹದ ಪ್ರಯತ್ನಗಳನ್ನು ಮಾನವನು ಮಾಡುತ್ತಲೇ ಇದ್ದಾನೆ. ಬಹಿರಂಗ ಪ್ರಯತ್ನ; ಆಂತರಂಗ ಪ್ರಯತ್ನ ಎಂಬಿವೇ ಆ ಎರಡು ಪ್ರಯತ್ನಗಳು.

೧) ದೇಹದ ಹೊರಗಿನ ವಸ್ತುಗಳ ನಿಯಮಗಳನ್ನು ತಿಳಿದುಕೊಂಡು ತನಗನುಕೂಲವಾದ ರೀತಿಯಲ್ಲಿ ಪರಿವರ್ತನ ಮಾಡಿಕೊಂಡು ನಿಸರ್ಗವನ್ನು ತನಗನುಕೂಲವಾದ ರೀತಿಯಲ್ಲಿ ಬಳಸಿಕೊಂಡಿದ್ದಾನೆ

೨) ತಾನು ಏನಿದ್ದೇನೆ? ಎಂದು ತನ್ನ ಅಂತಃಶಕ್ತಿಯ ಪ್ರಕಾರಗಳನ್ನು ತಿಳಿದುಕೊಂಡು ಆತ್ಮೋನ್ನತಿಯ ನಿಯಮಗಳನ್ನು ಕಂಡು ಕೊಳ್ಳುವುದು ಅವನ ದ್ವಿತೀಯ ಪ್ರಯತ್ನದ ಫಲವು. ಧರ್ಮ, ತತ್ತ್ವಜ್ಞಾನ, ಯೋಗ, ಇವೆಲ್ಲವುಗಳು ಅವನ ಅಂತಃಶಕ್ತಿಯ ನಿಯಮಗಳ ತಿಳುವಳಿಕೆಯಲ್ಲಿ ಹುಟ್ಟಿದವುಗಳು.

ಮನುಷ್ಯನ ವಿಕಾಸಕ್ಕೆ ಸ್ವಾತಂತ್ರ್ಯವು ತಾಯಿ-ಬೇರು. ಈ ವಿಕಾಸವು ದೈಹಿಕವಾದುದಲ್ಲ; ಮಾನಸಿಕವಾದುದು; ಆತ್ಮಮೂಲವಾದುದು. ವಿಕಾಸದ ಮೂಲವು ಮಿದುಳಿನಲ್ಲಿದೆ. ಅದಕ್ಕೆ ತಕ್ಕ ಅವಕಾಶಗಳನ್ನು ಕಲ್ಪಿಸಿಕೊಟ್ಟರೇನೇ ಅದು ವಿಕಾಸವಾಗುವದೇ ವಿನಃ ಒತ್ತಾಯದಿಂದಲ್ಲ. ಮನುಷ್ಯನು ಜೀವ ಶಾಸ್ತ್ರ ದೃಷ್ಟಿಯಿಂದ ಒಂದೇ ಇದ್ದರೂ ಅವನ ವಿಕಾಸವು ಸ್ಥಾನಮಾನಗಳ ಮೂಲಕ ಅವಕಾಶಗಳ ಮೂಲಕ ಬೇರೆ ಬೇರೆ ಆಗುತ್ತದೆಂದು ಕಂಡುಬಂದ ಸ್ವೀಕೃತವಾದ ಸ್ವಯಮೇಯವೆಂದು ಹೇಳಬಹುದು. ಶೋಷಣರಹಿತ ಸಮಾಜ ನಿರ್ಮಾಣವಾಗಬೇಕು. ಶಾಂತಿ, ಪ್ರೇಮ, ಸಹಯೋಗ, ಎಲ್ಲೆಲ್ಲಿ ಇವೆಯೋ ಅಲ್ಲಲ್ಲಿ ಏಕರಸತಾ ಭಾವವು ಹುಟ್ಟುವದು. ಏಕರಸತಾಭಾವದ ಅಭಾವವಾದರೆ

ಹೋರಾಟವು (Conflict) ಪ್ರಾರಂಭವಾಗುವದು. ಹೋರಾಟವು ಸಮಾಜ ಸ್ವಾಸ್ಥ್ಯಕ್ಕೆ ಮುಳುವಾಗುವುದು. ಅವು ಒಂದಕ್ಕೊಂದು ಸಂಲಗ್ನ ಸಮಸ್ಯೆಗಳಾಗಿವೆ. ಸಮಾಜ ಜೀವನ, ವ್ಯಕ್ತಿಯ ಜೀವನ ಒಂದೇ ಆಗಿರಬೇಕು. ಸಮಾಜವನ್ನು ಬಿಟ್ಟು ಸಿಡಿದು ವ್ಯಕ್ತಿಯು ನಿಂತರೆ ಆ ವ್ಯಕ್ತಿಯ ವಿಕಾಸವೂ ಆಗದು. ಸಮಾಜ ಸುಖ ವ್ಯಕ್ತಿಯ ಸುಖ ಒಂದೆಂಬ ಭಾವನೆಯನ್ನು ಸ್ಥಾಯೀಮಾಡಲು ಶಿಕ್ಷಣವು ಪ್ರಯತ್ನಿಸಬೇಕು. ಸಮಾಜಕ್ಕೂ ವ್ಯಕ್ತಿಗೂ ಇರುವ ಅಭೇದ್ಯತೆಯನ್ನೇ ಸಮಾಜವಾದವೆಂದು ಹೇಳ ಬಹುದು. ವ್ಯಕ್ತಿಯು ಅದ್ವೈತ ಭಾವನೆಯಿಂದ ಸಮಾಜದಲ್ಲಿ ಸಮರಸನಾಗಬೇಕು. ಸಮಾಜವೂ ಕೂಡ ವ್ಯಕ್ತಿಯ ವಿಕಾಸ, ಸ್ವಾತಂತ್ರ್ಯಗಳನ್ನು ಮನ್ನಿಸಬೇಕು. ಯಾವುದೂ ಅತಿಯಾಗಬಾರದು. ಟಾಗೋರರು ಕೂಡ ಅತಿ ರಾಷ್ಟ್ರೀಯತ್ವವು ಅನಿಷ್ಟಕ್ಕೆಳಸುವದೆಂದು ಒಂದು ಕಡೆಗೆ ಹೇಳಿದ್ದಾರೆ. ಅಂತೆಯೇ ಅವರು ವಿಶ್ವಬಾಂಧವ್ಯದ ಮಾತನ್ನು ಪ್ರತಿಪಾದಿಸಿದರು.

ಮಾನವತೆಯೆಂಬುದೊಂದು ಒಂದು ಎಂಬ ಭಾವನೆ ಎಲ್ಲರಲ್ಲಿ ಉದಯಿಸಬೇಕು. ಗಾಂಧೀಜಿಯವರು ಇದನ್ನೇ ಬಯಸಿದ್ದರು. ಮಾನವೀಯತೆಯನ್ನು ಬಲಿಗೊಟ್ಟು ಅವರು ಏನನ್ನು ಮಾಡಲೂ ಸಿದ್ಧರಿರಲಿಲ್ಲ. ಅವರು ತಮ್ಮ ಈ ಶಿಕ್ಷಣದಲ್ಲಿ ಈ ಮಾನವೀಯ ದೃಷ್ಟಿಕೋನವನ್ನು ತಂದು ಕೊಡುವ ಸೂತ್ರ ಪೋಣಿಸಿದ್ದಾರೆ. ಜೀವನ ಶಿಕ್ಷಣವನ್ನು ಅವರು ಮಾನವತೆ ಕೇಂದ್ರಶಿಕ್ಷಣವೆಂದು ಬಗೆದಿದ್ದರು.

ಕಾಡುಜನಾಂಗದವರಲ್ಲಿಯೂ ಕೂಡ ಸಮಾಜ ವಾದದ ದೃಷ್ಟಿಯಿದ್ದುದು ಕಾಣುತ್ತಿದೆ. ಒಬ್ಬನ ಗುಡಿಸಲು ಮುರಿದರೆ ಎಲ್ಲರೂ ಸೇರಿ ಕಟ್ಟುತ್ತಾರೆ. ನಾನೊಮ್ಮೆ ಆದಿವಾಸಿಜನರ ಸಂಪರ್ಕಮಾಡಿಕೊಂಡ ಸಮಯದಲ್ಲಿ ಹಸುವಿನಹಾಲು ಏಕೆ ಕುಡಿಯುವದಿಲ್ಲ ವೆಂದು ಪ್ರಶ್ನಿಸಿದೆ? ಅದಕ್ಕವರು ಸ್ವಾಮೀ, ಹಸುವಿನ ಕರುವಿಗೆ ಹಾಲು ಬೇಡವೇ? ಅದರ ಹಾಲನ್ನು ಕಸಿದು ಕೊಂಡು ನಾವುಣ್ಣುವುದು ಎಂಥ ಮಾತು? ಎಂದು ನನ್ನನ್ನೇ ಪ್ರಶ್ನಿಸಿದರು. ಇದು ಎಂಥ ದೊಡ್ಡ ಮಾತು? ಸಂಸ್ಕೃತಿ, ಸಭ್ಯತೆಗಳ ದೃಷ್ಟಿಯಿಂದ ಅವರು ನಮಗೆ ಪಾಠ ಕಲಿಸುವಂತಿರುವರು. ಶೋಷಣಮಾಡಬಾರದೆಂಬ ತತ್ವ ಅದರಲ್ಲಡಗಿದೆ. ಗಾಂಧೀಜಿಯವರು ಶೋಷಣರಹಿತವಾದ ಮಾನವೀಯತೆಯನ್ನು ತಮ್ಮ ಜೀವನದ ಮತ್ತೊಂದು ಸೂತ್ರವನ್ನಾಗಿ ಮಾಡಿಕೊಂಡಿದ್ದರು. ಗಾಂಧೀಜಿಯವರ ತತ್ವಜ್ಞಾನವನ್ನು ಮಾನವೀಯತೆಯ ತತ್ವಜ್ಞಾನವೆಂದೇ ಕರೆಯಬಹುದು. ಶೋಷಣೆಯು ಗಾಂಧೀ ತತ್ವಜ್ಞಾನಕ್ಕೆ ಮಾರಕವಾಗಿದೆ. ಎಲ್ಲ ಜೀವವೂ ಒಂದೇ ಎಂಬ ಭಾವನೆ ಮೂಡಿ ಬರಬೇಕು.

"ಈಶಾವಾಸ್ಯ ಮಿದಂ ಸರ್ವಂ ಯತ್ಕಿಂಚ ಜಗತ್ಯಾಂಜಗತ್" ಎಂಬ ಉಪನಿಷತ್ತಿನ ವಾಕ್ ಗಾಂಧೀಜಿಯ ಉಸಿರಾಗಿದ್ದಿತು. ಈ ಸೂತ್ರಗಳನ್ನು ತಮ್ಮ ಕಣ್ಮುಂದಿಟ್ಟುಕೊಂಡು ಅವರೀಶಿಕ್ಷಣವನ್ನು ನಾಡಿನ ಮುಂದಿಟ್ಟರು. ಇಂದು ನಾವು ಈ ಶಿಕ್ಷಣವನ್ನು ಈ ಸೂತ್ರಗಳ ಒರೆಗೆಹಚ್ಚಿ ನೋಡಬೇಕೇ ವಿನಃ ಏತರಿಂದ ನೂತನ? ಎಷ್ಟು ನೂತನ? ಎಂಬ ಕೇವಲ ತಾಂತ್ರಿಕತೆ ಯೆಡೆಗಷ್ಟೇ ಗಮನಿಸಬಾರದು.

ಈ ಸಂದರ್ಭದಲ್ಲಿ ಕೇವಲ ಚರಖಾ ಮುಂತಾದವುಗಳ ಉಪಯೋಗವನ್ನು ಹೇಗೆ ಮಾಡಿಕೊಳ್ಳಬೇಕೆಂಬುದರ ಕಡೆಗೆಯೇ ಹೆಚ್ಚು ಲಕ್ಷ್ಯವಿತ್ತು, ಮೂಲ ಗುರಿಯನ್ನು ಮರೆಯಬಾರದು. ಅಂಬರಚರಖಾದಿಂದ ನೂಲಬೇಕೋ; ಕೆಸಾನಚರಖಾದಿಂದ ನೂಲಬೇಕೋ, ಅದಕ್ಕೆ ಶಕ್ತಿಯ ಪ್ರಯೋಜನವನ್ನು ಪಡೆದುಕೊಳ್ಳಬೇಕೋ, ಮಾಡಿಕೊಳ್ಳ ಬಾರದೋ, ಕಬ್ಬಿಣವನ್ನು ಉಪಯೋಗಿಸಬೇಕೋ, ಉಪಯೋಗಿಸಬಾರದೋ, ಇವು ಅಷ್ಟು ಮಹತ್ವವಾದವು ಗಳಲ್ಲ ಮುಖ್ಯವಾಗಿ ಅಂಥವುಗಳಲ್ಲಿ ಶೋಷಣೆ ಇಲ್ಲದೇ ಹೇಗೆ ಅತ್ತ್ಯಗಮನವಿರಬೇಕು; ಶೋಷಣವು ಇದ್ದುದಾದರೆ ಅದು ತ್ಯಾಜ್ಯವು, ಯಾವ ಶೋಷಣವೂ ಇರದಿದ್ದರೆ ಅದೇನೇ ಇದ್ದರೂ ಸ್ವಾಗತಾರ್ಹವೆಂದು ಹೇಳಬಹುದು. ತಾವು ಈ ದೃಷ್ಟಿಯನ್ನಿಟ್ಟುಕೊಂಡು ವಿಚಾರಿಸಬೇಕಾಗಿ ಕೇಳಿಕೊಳ್ಳುವೆ, ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸುತ್ತಲಿರುವ ನೀವು ಗಾಂಧೀಜಿಯವರ ಈ ಜೀವನಸೂತ್ರಗಳನ್ನು ಮೈಗೂಡಿಸಿಕೊಂಡು ಕಾರ್ಯತತ್ಪರರಾಗಿ ಹೊಸ ಸಮಾಜ ನಿರ್ಮಾಣ ಕಾರ್ಯದಲ್ಲಿ, ಸೇವೆ ಸಲ್ಲಿಸುವಿರೆಂದು ಆಶಿಸುತ್ತೇನೆ.

ಜೈ ಹಿಂದ

# ಶಿಕ್ಷಕರಿಗೆ ಮನಃಶಾಸ್ತ್ರದ ಮೂಲಭೂತ ಸಂಗತಿಗಳ ಜ್ಞಾನವು ಬೇಕು ?

ಲೇಖಕರು : ಶ್ರೀ ತಟ್ಟಿ ಶಾಮರಾಯರು, ಬಿ. ಎ., ಎಸ್. ಟಿ. ಸಿ. ಡಿ.
( ನಿವೃತ್ತ ಪ್ರಿನ್ಸಿಪಾಲರು, ಟ್ರೇ.ಕಾ. ನವಲಗುಂದ. )

ಮಕ್ಕಳನ್ನು ಲಾಲನ-ಪಾಲನ ಮಾಡುವ ತಂದೆ-ತಾಯಿಗಳಿಗೂ ಈ ಜ್ಞಾನವು ಬೇಕೆಂದು ಹೇಳುವದು ಅನವಶ್ಯಕ. ಹಡೆದ ತಾಯಿಗೆ ಈ ಜ್ಞಾನವು ತಾನಾಗಿಯೇ ಇದ್ದೇ ಇರುವದು. ಮಕ್ಕಳ ಬೆಳಿಗೆಯನ್ನು ಪ್ರೀತಿಯಿಂದ ದಿನಾಲು ಕಣ್ಣಿಟ್ಟು ನೋಡುತ್ತಿರುವ ತಂದೆಗೂ ತನ್ನ ಮಕ್ಕಳ ಮನಸ್ಸಿನ ಆಗುಹೋಗುಗಳ ಜ್ಞಾನವು ಸಹಜವಾದದ್ದು.

ಶಿಕ್ಷಕರಿಗೆ ತಾವು ಕಲಿಸುವ ಮಕ್ಕಳ ಸಂಬಂಧವು ಅಷ್ಟು ನಿಕಟವಾದುದು ಇರಲಾರದಾದ್ದರಿಂದ ಅವರವರ ಭಿನ್ನ ಅಭಿರುಚಿಗಳನ್ನೂ ಒಲವುಗಳನ್ನೂ ಅವರ ಮನಸ್ಸಿನ ವಿಕಾಸಕ್ಕೆ ಇರುವ ಅತಂಕಗಳನ್ನೂ ಅರಿತು ವಿಶೇಷ ನಿರೀಕ್ಷಣೆಯಿಂದ ಕಷ್ಟಪಟ್ಟು ತಿಳಿದುಕೊಳ್ಳ ಬೇಕಾಗುವದು.

ಶಿಕ್ಷಕರು . ವೈದ್ಯರಿದ್ದಂತೆ. ತಂದೆ-ತಾಯಿಗಳು ಎಷ್ಟೇ ಒಳ್ಳೆಯವರೂ ಸುಸಂಸ್ಕೃತರೂ ಜಾಣರೂ ವಿವೇಕಿಗಳೂ ಇದ್ದರೂ ಮಕ್ಕಳು ಶಾಲೆಗೆ ಹೋಗುವ ವಯಸ್ಸಿನವರಾದಾಗ ಅವರಲ್ಲಿ ಅನೇಕ, ದೋಷಗಳು ನ್ಯೂನತೆಗಳು ಸೇರಿರುವವು. ವೈದ್ಯನು ಶರೀರ ಚಿಕಿತ್ಸೆಯಿಂದ ರೋಗಿಗಳ ಬೇನೆ ಬೇಸರಿಕೆಗಳನ್ನು ತಿಳಿದು ಕೊಳ್ಳುವಂತೆ ಶಿಕ್ಷಕನು ಮಕ್ಕಳ ಮನಸ್ಸಿನ ಚಿಕಿತ್ಸೆಯಿಂದ ಅವರ ಮೂಲಭೂತ ದೋಷಗಳನ್ನು ಕಂಡು ಹಿಡಿಯ ಬೇಕಾಗುವದು. ಆದ್ದರಿಂದ ಶಿಕ್ಷಕರಿಗೆ ಮನೋ-ವಿಜ್ಞಾನದ ಮುಖ್ಯಾಂಶಗಳ ಪರಿಚಯವು ಅಗತ್ಯವಾದದ್ದು.

ದೇಹವು ಸ್ಥೂಲವಾದದ್ದು, ಇಂದ್ರಿಯಗಳು ಅದಕ್ಕೂ ಸೂಕ್ಷ್ಮ, ಪ್ರಾಣವು ಅದಕ್ಕೂ ಸೂಕ್ಷ್ಮ, ಮನಸ್ಸು ಪ್ರಾಣಕ್ಕಿಂತಲೂ ಸೂಕ್ಷ್ಮ — ಎಂಬ ಮಾತುಗಳು ನಮಗೆ ಅನುಭವದಿಂದ ತಿಳಿದಿವೆ. ಮನಸ್ಸಿಗಿಂತಲೂ ಸೂಕ್ಷ್ಮವಾದ ಆತ್ಮವೆಂಬ ಒಂದು ತತ್ವವಿರುವದೆಂದು ಪ್ರಾಚ್ಯ ತತ್ವಜ್ಞಾನವು ಹೇಳುತ್ತದೆ. ಆದರೆ ಪಾಶ್ಚಾತ್ಯ ಮನೋವಿಜ್ಞಾನವು ಈ ಆತ್ಮ ತತ್ವದ ಸ್ವರೂಪದ ಬಗೆಗೆ ವಿಶೇಷವಾಗಿ ಹೀಗೆಂದು ಸಿದ್ಧಾಂತ ಮಾಡುವ ಗೋಜಿಗೆ ಹೋಗಿಲ್ಲ. ಪಾಶ್ಚಾತ್ಯ ಮನೋವಿಜ್ಞಾನಿಗಳು ಮನಸ್ಸಿನ ಧರ್ಮದ ವಿಶ್ಲೇಶಣವನ್ನು ಹೆಚ್ಚಾಗಿ ಅದು ವ್ಯಕ್ತಿಯಿಂದ ಮಾಡಿಸುವ ನಡತೆಯಿಂದಲೇ ಗೊತ್ತು ಮಾಡುವರು. ಈ ಕಾರಣದಿಂದ ಮನಃಶಾಸ್ತ್ರದ ಆರಂಭದ ಅಧ್ಯಾಯಗಳಲ್ಲಿ ದೇಹದ ಅಂಗಾಂಗಗಳ ಸೂಕ್ಷ್ಮ ರಚನೆ, ಮಿದುಳು, ನರ ಮಂಡಲ ಇವುಗಳ ವರ್ಣನೆಯನ್ನು ಸೂಕ್ಷ್ಮವಾಗಿ ಕೊಟ್ಟಿರುವರು.

ಜೀವನದ ಸ್ವರೂಪಕ್ಕೆ ಮೂರು ಮುಖಗಳಿರುವವು. ಒಂದು ಸತತವೂ ನಿರಂತರವೂ ಆದ ಅಸ್ತಿತ್ವ; ಅಥವಾ ಸಾತತ್ಯ; ಎರಡು ಸ್ವಾತಂತ್ರ್ಯ; ಮೂರು ಬದುಕಿನ ಸಹಜವಾದ ಆನಂದ. ಇದಕ್ಕನುರೂಪವಾಗಿ ಮನಸ್ಸಿನ ವ್ಯಾಪಾರಗಳು ಮೂರು ಬಗೆಯಾಗಿವೆ. ಚೈತನ್ಯದ ಸಾತತ್ಯವು ಮನಸ್ಸಿನ ಸಂತತವಾದ ಪ್ರಜ್ಞೆ, ನಿರಂತರವಾದ ಸ್ಮೃತಿ, ಅನುಸ್ಯೂತವಾದ ವಿಚಾರ ಪ್ರವಾಹ ಇವುಗಳಲ್ಲಿ ಕಂಡು ಬರುವದು. ಬದುಕಿನ ತನ್ನದೇ ಆದ ಸಂತೋಷವು ಜೀವನದ ಅನೇಕ ಚಟುವಟಿಕೆಗಳ ಆಸಕ್ತಿಯಲ್ಲಿ, ಆತ್ಮ ಸಂರಕ್ಷಣೆಯ ಹೋರಾಟದ ಹರ್ಷ, ಶೋಕ ಭಯ, ವಿಸ್ಮಯ ಇತ್ಯಾದಿ ಭಾವನೆಗಳಲ್ಲಿ ವ್ಯಕ್ತವಾಗುವದು. ಸುಖವನ್ನು ಹುಡುಕಿಕೊಂಡು ಹೋಗುವ ಜೀವನ ಸಾಧನೆಯಲ್ಲಿ ಮನಸ್ಸಿನ ಹಟ, ಸ್ವಾತಂತ್ರ್ಯ, ನಿರ್ಧಾರ ಇವು ವ್ಯಕ್ತವಾಗುವವು. ಜ್ಞಾನ, ಭಾವನೆ, ಕ್ರಿಯಾ ಪ್ರವೃತ್ತಿ—ಮನಸ್ಸಿನ ಸ್ವರೂಪದ ಈ ಮೂರು ಮುಖಗಳು ಒಂದರಲ್ಲೊಂದು ಕೂಡಿ ಕೊಂಡಿವೆ. ಯಾವ ಕ್ಷಣದಲ್ಲಿಯಾದರೂ ನಮ್ಮ ಮನಸ್ಸಿನ ಆತ್ಮ ನಿರೀಕ್ಷಣೆ

ಮಾಡಿಕೊಂಡರೆ ಅದರಲ್ಲಿ ಯಾವುದೋ ಒಂದು ಸ್ಪಷ್ಟವೋ ಅಸ್ಪಷ್ಟವೋ ಆದ ವಿಚಾರ, ಅದರಲ್ಲಿರುವ ಆಸಕ್ತಿಯ ಭಾವನೆ, ಅದರಿಂದ ಪ್ರೇರಿತವಾಗಿ ಒಂದು ಕಾರ್ಯೋನ್ಮುಖವಾಗಿರೋಣ ಈ ಮೂರು ಗುಣಗಳು ಬೆರೆತಿರುವದು ಕಂಡು ಬರುವದು. ವಿಚಾರವು ಮನಸ್ಸನ್ನು ಹೆಚ್ಚು ಪ್ರಮುಖವಾಗಿ ವ್ಯಾಪಿಸಿದ್ದರೂ, ಅದಕ್ಕೆ ಸಂಬಂಧಿಸಿದ ಪ್ರಿಯತೆ, ಅಪ್ರಿಯತೆ ಇವು ಹಿನ್ನೆಲೆಯಲ್ಲಿ ಇದ್ದೇ ಇರುವವು. ಇಂಥದೊಂದು ಕೆಲಸವನ್ನು ಮಾಡಬೇಕೆಂಬ ಉದ್ದೇಶವೂ ಸೂಕ್ಷ್ಮವಾಗಿ ಅದೇ ಹಿನ್ನೆಲೆಯಲ್ಲಿ ನಿಂತಿರುವದು. ಒಂದು ಕ್ಷಣವನ್ನು 'ನಿಜಾರ ಪ್ರಧಾನವಾದದ್ದೆಂದು ಹೇಳಿದರೆ ಮತ್ತೊಂದನ್ನು ಭಾವನಾ ಪ್ರಧಾನವೆಂದು, ಬೇರೊಂದು ಕ್ಷಣವನ್ನು ಧೃಢ ಸಂಕಲ್ಪ ಪ್ರಧಾನವೆಂದೂ ಹೇಳಬಹುದು. ಮನಸ್ಸಿನ ಈ ಮೂರು ಮುಖಗಳು ಏಕರೂಪವಾಗಿರುವುದಕ್ಕೆ ಬೆಂಕೆಯ ಉದಾಹರಣೆಯು ಬಹಳ ಚನ್ನಾಗಿದೆ. ಬೆಂಕೆಯಲ್ಲಿ ಮೂರು ಗುಣಗಳು ಕೂಡಿರುವವು—ಬೆಳಕು, ಬಣ್ಣ, ಶಾಖ ( ಕಾವು ) . ಕಾದ ಕಬ್ಬಿಣದಲ್ಲಿ ಉಷ್ಣತೆಯೇ ಪ್ರಧಾನವಾಗಿ ಕಾಣುವದು. ದೀಪದಲ್ಲಿ ಬೆಳಕೇ ಪ್ರಧಾನವಾಗಿ ಕಾಣುವದು; ಧಗ ಧಗ ಉರಿಯುವ ಉರಿಯು ಕೆಂಪಾಗಿ ಕಾಣುವದು. ಪ್ರತಿಯೊಂದು ಪ್ರಜ್ವಲಿತವಾದ ಪದಾರ್ಥದಲ್ಲಿ ಬೆಳಕು, ಬಣ್ಣ, ಶಾಖ ಇವು ಹೆಚ್ಚು-ಕಡಿಮೆ ಪ್ರಮಾಣದಲ್ಲಿ ಬೆರೆತು ಇದ್ದೇ ಇರುವವು. ಹೀಗೆಯೇ ಬುದ್ಧಿ, ಅಂತಃಕರಣ, ಸಂಕಲ್ಪ ಇವು ಮನಸ್ಸಿನಲ್ಲಿ ವಿಂಗಡಿಸಲಿಕ್ಕೆ ಬಾರದೇ ಸಮ್ಮಿಶ್ರವಾಗಿ ಇರುವವು.

ಬುದ್ಧಿಯೆಂಬ ಮನಸ್ಸಿನ ಮುಖದ ವಿಕಾಸದಲ್ಲಿ ಸಣ್ಣ ಕೂಸುಗಳಿಗೆ ಆಗುವ (೧) ಇಂದ್ರಿಯ ವಿಷಯ ಸಂಪರ್ಕದ ಅಸ್ಪಷ್ಟ ಸಂವೇದನೆ. (೨) ಗುಣಧರ್ಮ ವಿಶಿಷ್ಟವಾದ ವಸ್ತುಗಳ ಪ್ರತ್ಯಕ್ಷ ಜ್ಞಾನ. ( ೩ ) ಅವು ಮಿದುಳಿನಲ್ಲಿ ಮೂಡಿಸಿದ ಅಚ್ಚಿನಿಂದ ಆದ ಸಂಸ್ಕಾರಗಳಿಂದ ಎದುರಿನಲ್ಲಿರದ ವಸ್ತುಗಳ ಅಪ್ರತ್ಯಕ್ಷಜ್ಞಾನ ಅಥವಾ ಸ್ಮರಣೆ ( ೪ ) ಪ್ರಪಂಚದಲ್ಲಿರುವ ನಾನಾಬಗೆಯ ಅಸಂಖ್ಯಾತ ವಸ್ತುಗಳನ್ನು ಅವುಗಳ ಗುಣಧರ್ಮಗಳ ಸಾದೃಶ್ಯದ ಮೇಲಿಂದ ವರ್ಗೀಕರಿಸಿ, ಅಸ್ತಿತ್ವದಲ್ಲಿದ್ದ ಪ್ರತಿಯೊಂದು ಪ್ರಕಾರದ ವಸ್ತುವಿನ ವಿಶಿಷ್ಟ ಲಕ್ಷಣವನ್ನು ಮನಸ್ಸಿನಲ್ಲಿಟ್ಟುಕೊಂಡು ವಿಚಾರಮಾಡುವ, ಶಬ್ದದಿಂದ ಅದನ್ನು ಹೇಳುವ ಶಾಬ್ದಿಕ ಕಲ್ಪನಾ, (೫) ಇದು ಹೀಗೆ ಎಂದು ಎರಡು ಕಲ್ಪನೆಗಳನ್ನು ಜೋಡಿಸಿ ಸಾಧಿಸೋಣ (ವಾಕ್ಯರೂಪವಾದ ಹೇಳಿಕೆ) (೬) ಎದುರಿಗಿದ್ದು ತಿಳಿದಿರುವ ವಿಷಯಗಳ ಆಧಾರದಮೇಲಿಂದ ತಿಳಿಯದಿರುವ ಹೊಸ ಸಂಗತಿಗಳನ್ನು ಊಹಿಸಿ ತಿಳಿದುಕೊಳ್ಳುವ ವಿಧಾನ— ಹೀಗೆ ಆರು ಹಂತಗಳೂ ಬುದ್ಧಿಯ ವಿಕಾಸದಲ್ಲಿ ಉಂಟು.

ಹುಡುಗನು ಚುರುಕು ಬುದ್ಧಿಯವನಲ್ಲ ಎಂದರೆ ಅವನು ತನ್ನ ಸುತ್ತಲಿನ ಸಂಗತಿಗಳನ್ನು ಚೆನ್ನಾಗಿ ನೋಡಿಯೇ ಇರಲಿಕ್ಕಿಲ್ಲವೆಂದಾಗಲಿ ನೋಡಿದ್ದರೂ ವಸ್ತುವಸ್ತುಗಳಲ್ಲಿರುವ ಭಿನ್ನತೆ, ಸಾದೃಶ್ಯಗಳನ್ನು ಗುರುತು ಹಿಡಿದಿಲ್ಲವೆಂದಾಗಲಿ, ಇದು ಹೀಗೆಂದು ಚೆನ್ನಾಗಿ ಮಾತಿನಿಂದ ಹೇಳಲಿಕ್ಕೆಯೇ ಆಗುವದಿಲ್ಲವೆಂದಾಗಲಿ, ಊಹಾಶಕ್ತಿಯು ಕಡಿಮೆ ಎಂದಾಗಲಿ ಹಲವು ರೀತಿಯು ಅರ್ಥವಾಗಬಹುದು.

( ಮುಂದುವರಿಯುವದು )

## ವಿನಂತಿ

**ಲೇಖಕರಲ್ಲಿಃ—** ಸರಿಯಾಗಿ ಓದಲಿಕ್ಕೆ ಬರುವಂತೆ ಸ್ಪಷ್ಟವಾಗಿ ಮಸಿಯಿಂದ ಬರೆದು ಲೇಖನಗಳನ್ನು ಕಳುಹಿಸಬೇಕು. ಕಾಗದದ ಒಂದೇ ಮಗ್ಗಲು ಬರೆಯಬೇಕು.

ಕಾರ್ಬನ್ ಪ್ರತಿಗಳನ್ನು ಕಳಿಸುವದಿದ್ದಲ್ಲಿ ಮೊದಲನೇ ಅಥವಾ ಎರಡನೇ ಪ್ರತಿಯನ್ನು ಮಾತ್ರ ಕಳಿಸಬೇಕು.

**ಚಂದಾದಾರರಲ್ಲಿಃ—** ಪ್ರತಿ ತಿಂಗಳು ೧೫ನೆಯ ದಿನಾಂಕದ ನಂತರ ೧–೨ ದಿನಗಳಲ್ಲಿ ಜೀವನ ಶಿಕ್ಷಣವು ತಮಗೆ ಮುಟ್ಟಲೇಬೇಕು. ಮುಟ್ಟದಿದ್ದರೆ ಸಂಬಂಧಿಸಿದ ಅಂಚೆ ಮನೆಯಲ್ಲಿ ವಿಚಾರಿಸಿರಿ.

**ಮೂಲೋದ್ಯೋಗದ ಹೊಸ ಅಭ್ಯಾಸ ಪತ್ರಿಕೆಗಳು**

ಮಾರಲಿಕ್ಕೆ ದೊರೆಯುತ್ತವೆ.

೧ ರಿಂದ ೬ನೆಯ ಇಯತ್ತೆಗಳಿಗಾಗಿ ೦—೨—೬

೧ ರಿಂದ ೪ನೆಯ ,, ೦—೧—೦

ಅಂಚೆ ವೆಚ್ಚ ಬೇರೆ

ದೊರೆಯುವ ಸ್ಥಳ :

**ಪ್ರಧಾನ ಸಂಪಾದಕರು**

ಜೀವನ ಶಿಕ್ಷಣ ಧಾರವಾಡ

# ನಾನು ಶಿಕ್ಷಕನೇ

## [ ಒಂದು ಒಳನೋಟ ]

ಲೇಖಕರು : ಶ್ರೀ ಎಲ್. ಎಸ್. ಪಾಟೀಲ, ಬಿ.ಎ., ಬಿ.ಟಿ., ಅ. ಎ. ಓ. ಧಾರವಾಡ

೧. ನನ್ನ ಮುಖವು ಸಾಕಷ್ಟು ಸ್ವಚ್ಛವಾಗಿಯೂ ಮತ್ತು ಮುಖಚರ್ಯೆಯು ಸ್ವಾಭಾವಿಕವೂ ಹಾಗೂ ಆಕರ್ಷಕವೂ ಇದೆಯೋ ?

೨. ನನ್ನ ಬಟ್ಟೆಗಳು ಸ್ವಚ್ಛ ಹಾಗು ಓರಣವಾಗಿವೆಯೇ?

೩. ನಾನು ನಿರೋಗಿ ಮತ್ತು ಸಶಕ್ತನಾಗಿರುವೆನೋ?

೪. ಆರೋಗ್ಯಕ್ಕೆ ಅಪಾಯವನ್ನುಂಟುಮಾಡುವಂಥ ಚಟಗಳಿಂದ ನಾನು ಅಲಿಪ್ತನಾಗಿರುವೆನೋ?

೫. ನನ್ನ ಮಾತು ಮತ್ತು ಕೃತಿಗಳಲ್ಲಿ ನಿಯಮಿತತನ ಮತ್ತು ಸಮಯ ನಿಷ್ಠತೆಗಳಿವೆಯೋ?

೬. ವರ್ಗದಲ್ಲಿದ್ದಾಗ ನಾನು ಮೇಜಿನ ಮೇಲೆ ಬಾಗದೆ ಅಥವಾ ಮಲಗದೆ ನೀಟಾಗಿ ನಿಲ್ಲುತ್ತೇನೆಯೋ?

೭. ಮುಖವನ್ನು ಮೇಲೆ ಭುಜಗಳನ್ನು ಹಿಂದೆ ಎದೆಯನ್ನು ಮುಂದೆ ಹೊಟ್ಟೆಯನ್ನು ಒಳಗೆ ಮಾಡಿಕೊಂಡು ಹೆಬ್ಬೆರಳುಗಳ ಮೇಲೆ ಭಾರಹಾಕಿ ಕೈಕಾಲುಗಳನ್ನು ಸರಳವಾಗಿ ಬೀಸುತ್ತ ಓಡಾಡುತ್ತೇನೆಯೋ?

೮. ನನ್ನ ಧ್ವನಿಯಲ್ಲಿ ಅಸ್ಪಷ್ಟತೆ ಗುಕ್ಕಿಸುವದು ಇತ್ಯಾದಿ ದೋಷಗಳಿವೆಯೋ? ಇದ್ದರೆ ಆ ಬಗೆಗೆ ಚಿಕಿತ್ಸೆಗಳನ್ನು ಕೈಕೊಂಡಿರುವೆನೋ?

೯. ನಾನು ಸಾವಧಾನವಾಗಿ, ಸ್ಪಷ್ಟವಾಗಿ, ಸರಳವಾಗಿ ಮತ್ತು ಗಟ್ಟಿಯಾಗಿ ಮಾತನಾಡುತ್ತೇನೆಯೋ?

೧೦. ನಾನು ಶಬ್ದಗಳನ್ನು ಶುದ್ಧವಾಗಿ ಉಚ್ಚರಿಸುತ್ತೇನೆಯೋ? ಉಚ್ಚಾರ ಹಾಗು ಕಾಗುಣಿತ ಬರೆಪ (ಸ್ಪೆಲಿಂಗ) ಗಳ ಬಗೆಗೆ ಮೇಲಿಂದ ಮೇಲೆ ಶಬ್ದ ಕೋಶವನ್ನು ನೋಡುತ್ತೇನೆಯೋ?

೧೧. ನನ್ನ ನೈತಿಕ ಹಾಗು ಸಾಮಾಜಿಕ ಮಟ್ಟಗಳು ಶಿಕ್ಷಕನಿಗೆ ಸಲ್ಲುವಂತಹವು ಇವೆಯೋ?

೧೨. ನಾನು ಸೌಮ್ಯವಾಗಿ ಸಹಾನುಭೂತಿಯಿಂದ ಮಾತಾಡುತ್ತೇನೆಯೋ?

೧೩. ಪ್ರಜಲಿತ ವಿಷಯಗಳ ಬಗೆಗೆ ನನಗೆ ಸಾಕಷ್ಟು ಮಾಹಿತಿ ಇದೆಯೋ?

೧೪. ವೃತ್ತಿಗೆ ಸಂಬಂಧಿಸಿದ ಓದಿನಿಂದ ನಾನು ನನ್ನ ಬೋಧನೆಯನ್ನು ವೃದ್ಧಿಪಡಿಸಿಕೊಳ್ಳುವೆನೋ?

೧೫. ಸಂಬಳದಲ್ಲಿ ನೂರಕ್ಕೆ ೧೦ರಷ್ಟು ಹಣವನ್ನಾದರೂ ಉತ್ತಮ ಪುಸ್ತಕಗಳಿಗಾಗಿ ವೆಚ್ಚ ಮಾಡುವೆನೋ?

೧೬. ವಿದ್ಯಾರ್ಥಿಗಳನ್ನು ಬಾಲಬಳಗವೆಂದು ತಿಳಿದು ಪರಸ್ಪರರಲ್ಲಿ ಆದರ ವಿಶ್ವಾಸ ಮತ್ತು ಪ್ರೇಮ ಗಳನ್ನುಂಟು ಮಾಡುತ್ತೇನೆಯೋ?

೧೭. ಕಲಿಸಿದ ವಿಷಯಗಳ ಹಾಗು ಶಾಲೆಗೆ ಸಂಬಂಧಿಸಿದ ಇತರ ವಿಷಯಗಳ ಬಗೆಗೆ ಧೈರ್ಯದಿಂದ ಪ್ರಶ್ನೆಗಳನ್ನು ಕೇಳಲು ಮತ್ತು ಚರ್ಚಿಸಲು ವಿದ್ಯಾರ್ಥಿಗಳಿಗೆ ಅವಕಾಶ ಹಾಗು ಸ್ವಾತಂತ್ರ್ಯಗಳನ್ನು ನಾನು ಕೊಡುವೆನೋ?

೧೮. ನನ್ನ ವರ್ಗದ ಕೋಣೆಯು ಸ್ವಚ್ಛ ಹಾಗು ಅಚ್ಚುಕಟ್ಟಾಗಿದ್ದು ಅತಿ ಆಕರ್ಷಕವಾಗಿದೆಯೋ?

೧೯. ಪಠ್ಯೇತರ ಚಟುವಟಿಕೆ, ಆಟ ಇತ್ಯಾದಿಗಳಲ್ಲಿ ಆಸ್ಥೆಯಿಂದ ಪ್ರತ್ಯಕ್ಷ ಭಾಗವಹಿಸಿ ವಿದ್ಯಾರ್ಥಿಗಳಲ್ಲಿ ಈ ಬಗ್ಗೆ ಅಭಿರುಚಿ ಹಾಗು ಆಸಕ್ತಿಗಳನ್ನುಂಟು ಮಾಡುತ್ತೇನೆಯೋ ?

೨೦. ಕಲೆಗಳಲ್ಲಿ ಮನಸ್ಸು ಹಾಕಿ ಮಕ್ಕಳಲ್ಲಿ ಕಲೆಗಳ ಜೀವಣೆಗೆಗೆ ಪ್ರೋತ್ಸಾಹ ನೀಡುತ್ತೇನೆಯೋ?

ಮೇಲ್ಕಾಣಿಸಿದ ಪ್ರಶ್ನೆಗಳಿಗೆ ಯಾವ ಪ್ರಮಾಣದಲ್ಲಿ ಶಿಕ್ಷಕರಿಂದ ( ಶಿಕ್ಷಕಿಯರು ಸಹಿತವಾಗಿ ) ಸಮಂಜಸ ಉತ್ತರ ಸಿಗುವದೋ ಆ ಪ್ರಮಾಣದಲ್ಲಿ ಅವರು ತಮ್ಮ ವೃತ್ತಿಗೆ ಯೋಗ್ಯರೆಂದು ಗ್ರಹಿಕೆ ಮಾಡಿಕೊಂಡು ಎಲ್ಲ ಶಿಕ್ಷಕರೂ ಪೂರ್ಣ ಅರ್ಹರಾಗಲು ಪ್ರಯತ್ನಿಸುವರೆಂದು ಆಶೆ.

# 'ಜೀವನ ಶಿಕ್ಷಣ ಶಾಲೆಗಳ ಒಂದು ಒಳನೋಟ'

ಲೇಖಕರು : **ಶ್ರೀ ಬ. ಮು. ಶ್ಯಾಡಗುಪ್ಪಿ,** ಉಪಗುರುಗಳು, ಶಾಲಾ, ದೇವಿಹೊಸೂರು.

ಗುರುತರವಾದ ಈ ಶಿಕ್ಷಣ ಕ್ಷೇತ್ರದಲ್ಲಿ ವರ್ತಮಾನ ಕಾಲದಲ್ಲಿಯೇ ನಾವು ಎಲ್ಲವನ್ನು ಹೊಸದಾಗಿ ಆರಂಭಿಸುತ್ತೇವೆ, ಎನ್ನುವದು ಸಾಧ್ಯವೂ ಅಲ್ಲ ಸಾಧುವೂ ಅಲ. ಹಿಂದಿನಿಂದ ಬಂದ ಹಲಕೆಲವು ಒಳ್ಳೆಯ ಸಂಪ್ರದಾಯಗಳನ್ನು ನಾವು ಕಾಯ್ದುಕೊಳ್ಳ ಬೇಕಾಗುತ್ತದೆ. ಸಮಕಾಲಿನ ಪರಿಸರಕ್ಕೆ ತಕ್ಕ ಸೂತ್ರ ಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಅಂತೆಯೇ ಮಹಾತ್ಮಾ ಗಾಂಧೀಜಿಯವರು ಭಾರತದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಪರಿಸರಕ್ಕನುಸರಿಸಿ, ಈ ಹಿಂದೆ ನಶಿಸಿಹೋದ ಗುರುಕುಲ ಶಿಕ್ಷಣ ಪದ್ಧತಿಯನ್ನು ಹೊಸ ಶಿಕ್ಷಣ (ಜೀವನ ಶಿಕ್ಷಣ) ಪಸರಿನಲ್ಲಿ ಜನತೆಯ ಎದುರಿಗಿಟ್ಟರು. ಅದು ಇಂದು ರಾಷ್ಟ್ರೀಯ ಶಿಕ್ಷಣವಾಗಿ ಭಾರತದ ಎಲ್ಲೆಡೆಗೂ ಪಸರಿಸಿ; ಶಿಕ್ಷಣ ಪ್ರಪಂಚದಲ್ಲಿ ಒಂದು ಕ್ರಾಂತಿಯನ್ನೇ ಒಡಮೂಡಿಸಿತು. ಜೀವನ ಶಿಕ್ಷಣವೆಂದು ಪರಿವರ್ತನೆ ಹೊಂದಿದಶಾಲೆಯ ಒಳನೋಟ ಗಳು ಕೆಳಕಂಡಂತೆ ಇವೆ.

## ೧. ಈಶಸ್ತವನ ( ಪ್ರಾರ್ಥನೆ )

ನಮ್ಮ ಭಾರತ ದೇಶವು ಆಧ್ಯಾತ್ಮಿಕ ಬೆಳೆಯನ್ನು ಹುಲುಸಾಗಿ ಬೆಳೆಯಿಸಿಕೊಂಡು ಬಂದ ದೇಶ.ಅನೇಕಾನೇಕ ಸ್ಥಿತ್ಯಂತರಗಳಲ್ಲಿಯೂ ಆಧ್ಯಾತ್ಮಿಕ ಸಂಪತ್ತು ನಮ್ಮದೇ ಆಗಿ ಉಳಿದಿದೆ. ಅದನ್ನು ಕಾಲಕಾಲಕ್ಕೆ ಉದಯಿಸಿದ ಮಹಾತ್ಮರು ಉಳಿಸಿ ಬೆಳೆಯಿಸಿದ್ದಾರೆ. ಅಂತೆಯೇ ನಮ್ಮ ಜೀವನ ಶಿಕ್ಷಣ ವಿದ್ಯಾಮಂದಿರದಲ್ಲಿ ದಿನದ ಮೊದಲನೆಯ ಕಾರ್ಯಕ್ರಮವೆಂದರೆ ಈಶಸ್ತವನ (ಪ್ರಾರ್ಥನೆ) ಮಕ್ಕಳಲ್ಲಿ ದೇವ ಧರ್ಮಗಳ ಬಗ್ಗೆ ಚಿಕ್ಕಂದಿನಲ್ಲಿಯೇ ನಂಬುಗೆಯು ಹುಟ್ಟಿ, ಹಿಂದೂ ಧರ್ಮದ, ಹಿಂದೂ ಸಂಸ್ಕೃತಿಯ ಹಾಗೂ ವಿಶ್ವಧರ್ಮಗಳ ಬಗ್ಗೆ ಆಸ್ಥೆಯುಟ್ಟಿ ಸರ್ವಾಂತರ್ಯಾಮಿಯಾದ ಭಗವಂತನ ಸಾಕ್ಷಾತ್ಕಾರ ಪಡೆಯಬೇಕಾಗುವದು. ಈ ಪ್ರಾರ್ಥನಾ ಕಾರ್ಯಕ್ರಮದಲ್ಲಿಯ ಪದ–ಪದ್ಯಗಳು ಎಲ್ಲ ಜಾತಿ–ಪಂಥಗಳಿಂದ ಆಯ್ದುಕೊಂಡವುಗಳಾಗಿ, ಮಕ್ಕಳಲ್ಲಿ ವಿಶ್ವದ ಜಾತಿ ಪಂಥಗಳ ಧರ್ಮ ಸಹಿಷ್ಣುತೆಯ ಸಹೋದರ ಭಾವನೆಯನ್ನು ಜಾಗ್ರತಗೊಳಿಸಬೇಕು. ಕನಿಷ್ಠ ಪಕ್ಷ ಕ್ಕಾದರೂ ಏಳು ಪದ್ಯಗಳು ಮಕ್ಕಳಿಗೆ ಮುಖಪಾಠವಿದ್ದು ಅವುಗಳಭಾವವನ್ನು ಅರಿಯುವಂತೆ ಗುರುಗಳು ಪ್ರಯತ್ನಿಸ ಬೇಕು. ಅಂದಿನ ಪಂಚಾಂಗ, ಹವಾಮಾನ, ಬಾಯಿಬಲ್ ಕುರಾಣ ಪಠಣ, ಸುದ್ದಿಚಿತ್ತಾರಣೆ ಮತ್ತು ಪ್ರಕಟಣೆ ಮುಂತಾದವುಗಳು ಪ್ರತಿದಿನ ಕ್ರಮಬದ್ಧ ರೀತಿಯಲ್ಲಿ ಸಾಗುವಂತೆ ಯೋಜನೆ ಇರಬೇಕು.

## ೨. ಹೊಣೆಗಾರಿಕೆ

ನಮ್ಮದು ಪ್ರಜಾಸತ್ತಾತ್ಮಕರಾಷ್ಟ್ರ. ಈ ಪದ್ಧತಿಯ ರಾಜ್ಯದಾಡಳಿತದಲ್ಲಿ ಜನತೆಯ ಪಾಲು, ಮುಕ್ಕಾಲು ಪಾಲಾಗಿದೆ. ಇಂದಿನ ಬಾಲಕರು ನಾಳಿನ ನಾಗರಿಕರಲ್ಲವೆ? ಅವರಿಗೆ ಹೊಣೆಗಾರಿಕೆಯ ಅರಿವನ್ನುಂಟುಮಾಡಲು ಸಾಮೂಹಿಕ ಶಾಲಾ ಮಂತ್ರಿಮಂಡಲಗಳನ್ನು ಏರ್ಪಡಿಸ ಬೇಕು. ( ಮಂತ್ರಿಮಂಡಲವು ಭಾರತದ ರಾಜ್ಯಘಟನೆ ಯಲ್ಲಿ ಹೇಳಿದ ಪ್ರಕಾರ ಲೋಕಸಭೆ, ರಾಜ್ಯಸಭೆಗಳಂತೆ ಮೇಲಿನ ವರ್ಗದ ಮಕ್ಕಳಲ್ಲಿ ಎರಡು ಮನೆಗಳನ್ನು ರಚಿಸಿ ಈ ಸಭೆಗಳ ಮುಖಾಂತರ ಮಂತ್ರಿ ಮಂಡಲ ರಚನೆಯಾಗುವದು ವಿಹಿತ. ) ಈ ಮಂತ್ರಿ ಮಂಡಲದಲ್ಲಿ ಹಲವು ಶಾಖೆಗಳನ್ನಾಗಿ ವಿಂಗಡಿಸಿ (ಉದಾ:– ಪ್ರಾರ್ಥನೆ, ಸಫಾಯಿ, ಶಿಕ್ಷಣ, ಮೂಲೋದ್ಯೋಗ, ಆಟ, ಪ್ರವಾಸ ಮತ್ತು ಸಾಂಸ್ಕೃತಿಕ ಮುಂ)ಪ್ರತ್ಯೇಕ ನ್ಯಾಯನಿಕ ಸ್ವರಾಜ್ಯದ ತಿಳುವಳಿಕೆಯನ್ನು ತಂದು ಕೊಡಬೇಕು. ಇದರಂತೆ ವರ್ಗ ಮಂತ್ರಿ ಮಂಡಲಗಳು ಏರ್ಪಟ್ಟು ತಮ್ಮ ಹೊಣೆಯನ್ನು ತಾವು ಅರಿಯುವಂತೆ, ರಾಜ್ಯದಾಡಳಿತೆಯ ಪ್ರಾಥಮಿಕ ಮತ್ತು ತಳಪಡಿಯಾಗಿರುವ ಜ್ಞಾನವನ್ನು ಮಕ್ಕಳಿಗೆ ಮಾಡಿಕೊಡಬೇಕು. ( ಸಾಮೂಹಿಕ ಶಾಲಾ ಮಂತ್ರಿ ಮಂಡಲವನ್ನು ಆರು ತಿಂಗಳಿಗೊಮ್ಮೆ; ವರ್ಗ ಮಂತ್ರಿ ಮಂಡಲವನ್ನು ತಿಂಗಳಿಗೊಮ್ಮೆ ಬದಲಿಸುವದು ಹೊಣೆ ಗಾರಿಕೆಯ ಹಾಗೂ ಆಡಳಿತೆಯ ದೃಷ್ಟಿಯಿಂದ ನೆಟ್ಟಗೆ.

## ೩. ಪಥಕಗಳು

ಮಾನವನ ಜೀವನದಲ್ಲಿ ಅತ್ಯಂತ ಪ್ರಾಮುಖ್ಯ ತೆಯ ಗುಣಗಳೆಂದರೆ ಶಿಸ್ತು, ಸಂಘಟನೆ ಹಾಗೂ

[ ಮುಂದುವರಿಯುವದು ]

# ಜೀವನ ಶಿಕ್ಷಣ ಪ್ರಪಂಚದಲ್ಲಿ

**ಹಿರೇನಲ್ಲಿದಿಡಳ್ಳಿ:** ದಿ. ೧೯-೩-೫೯ ಪಾಲಕರ ಸಭೆಕರೆದು ಸರಕಾರದವರು ಶಾಲೆಯ ಮಕ್ಕಳಿಗೆ ಪುಕ್ಕಟೆ ಯಾಗಿ ಪೂರೈಸಿದ ಬಟ್ಟೆಗಳನ್ನು ಹೂವರು ಬಾಲಕಿ ಯರಿಗೆ ಇಲ್ಲಿಯ ಶಾಲಾ ಕಮಿಟಿಯ ಚೇರಮನ್ನರ ಹಸ್ತದಿಂದ ಹಂಚಲಾಯಿತು.

**ಕೋಟೆಕಲ್ಲ** ( ಬದಾಮಿ ): ದಿ.೧೬-೩-೫೯ ಕ. ಗಂ. ಮ. ಶಾಲೆಯಲ್ಲಿ ಸರಕಾರದಿಂದ ಕೊಡಮಾಡಿದ ಬಟ್ಟೆ, ಪಾಟಿ ಪುಸ್ತಕಗಳ ವಿತರಣ ಸಮಾರಂಭವು ಇಲ್ಲಿಯ ಶ್ರೀಮಂತ ಪಿ. ಎಸ್. ದೇಸಾಯಿ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು.

**ಕುಲಗೋಡ** (ತಾ. ಗೋಕಾಕ) ದಿ. ೧೬-೩-೫೯ ಕ. ಗಂ. ಮ. ಶಾಲೆಯಿಂದ ನಿವೃತ್ತರಾದ ಶ್ರೀ ಶಿ.ಚ. ಹಿರೇಮಠ ಇವರ ಬೀಳ್ಕೊಡುವ ಸಮಾರಂಭವನ್ನು ನಿವೃತ್ತ ಶಿಕ್ಷಕರು ಶ್ರೀ ಕೆ. ಆರ್. ಕುಲಕರ್ಣಿ ಇವರ ಹಿರಿಯತನದಲ್ಲಿ ಊರವತಿಯಿಂದ ಮಾಡಲಾಯಿತು .

**ದಾಡನಟ್ಟಿ** ( ಮುಧೋಳ ): ದಿ. ೧೩-೩-೫೯ ಸದರೀ ಶಾಲೆಗೆ ಊರ ಸರಪಂಚರಾದ ಶ್ರೀ ಬಿ. ಬಿ. ಕೃಷ್ಣಗೌಡ್ರ ಇವರ ಹಸ್ತದಿಂದ ಬಟ್ಟೆಗಳ ಹಂಚುವಿಕೆ ನಡೆಯಿತು.

**ಬೈಲಹೊಂಗಲ :** ದಿ. ೮-೩-೫೯ ಉ. ಗಂ. ಮ. ಶಾಲೆಯಲ್ಲಿ ಪಾಲಕರ ದಿನಾಚರಣೆಯನ್ನು ಸಂಜೆಯ ೪ಘಂಟೆಗೆ ಬೆಳಗಾಂವ ಜಿಲ್ಲಾ ಶಿಕ್ಷಣಾಧಿಕಾರಿಗಳಾದ ಮೆ|| ವಾಯ್. ಬಿ. ಯಾರಗಲ್ಲ ಸಾಹೇಬರವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

**ನರಗುಂದ:** ಊರಿನ ಪ್ರಮುಖರೂ ಕಾಂ ಕ. ಅಧ್ಯಕ್ಷರೂ ಆದ ಶ್ರೀ ರಾಜಶೇಖರಪ್ಪ ಹೊಸಕೇರಿ ಇವರು ಬೇಸಿಗೆಯ ಬಿಸಿಲಿನಿಂದ ತಳಮಳಗೊಳ್ಳುತ್ತಿರುವ ಶಾಲೆಯ ಹುಡುಗರನ್ನು ನೋಡಿ ೨ ಡ್ರಮ್ ಕೊಟ್ಟು ಆಳಿನ ಮುಖಾಂತರ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿರುವರು.

## ಗ್ರುಪ್ ಶಿಕ್ಷಕ-ಶಿಕ್ಷಕಿಯರ ಶೈಕ್ಷಣಿಕ ಸಮ್ಮೇಲನ

| ಶಾಲೆಯ ಹೆಸರು | ದಿನಾಂಕ | ಅಧ್ಯಕ್ಷರು |
|---|---|---|
| ಕುಂದಗೋಳ | ೬-೩-೫೯ | ಶ್ರೀ ಬಿ. ಬಿ. ಶೇಖ. ಸಮಾಜ ಶಿಕ್ಷಣಾಧಿಕಾರಿಗಳು, ಬೆಳಗಾಂವ. |
| ಇಲಕಲ್ಲ | ೨೩-೨-೫೯ | ಡಿ. ಡಿ. ಪಿ. ಆಯ್. ಮೆ|| ಎಸ್. ವ್ಹಿ. ಜೀವೂರ. |
| ಕಾಗಿನೆಲ್ಲಿ | ೨೦-೩-೫೯ | ಶ್ರೀ ಆರ್. ಬಿ. ಹಾವೇರಿ. ಫಿ. ಡೆ. ಎ. ಇ. ಧಾರವಾಡ |
| ಚಿಂಚಲಿ (ತಾ|| ಗದಗ) | ೨೦-೩-೫೯ | ಶ್ರೀ ಪ್ರ. ರು. ಹಳಕಟ್ಟಿ |
| ಸವಣೂರ | ೩೦-೩-೫೯ | ಶ್ರೀ ರಾ. ಬ. ಹಾವೇರಿ, ಶಾ.ಶಿ.ಅಧಿಕಾರಿಗಳು ಧಾರವಾಡ |
| ಭುಡಿವಾಡ | ೨೭-೩-೫೯ | ಶ್ರೀ ಚನ್ನಮಲ್ಲಪ್ಪ ಬಸ್ತೀವಾಡ. |

## ಜೀವನ ಶಿಕ್ಷಣ ಶಾಲೆಗಳಿಗೆ ಉದಾರ ಸಹಾಯ

| ಊರು | ದಿನಾಂಕ | ಸಹಾಯಮಾಡಿದವರ ಹೆಸರು | ಸಹಾಯ |
|---|---|---|---|
| ಹೆಬ್ಬಾಳ (ಬಸವನಬಾಗೇವಾಡಿ) | ೬-೩-೫೯ | ಶ್ರೀ ಗ. ಚ. ನಂದೀ | ೧೫೫ ರೂ. ಬೆಲೆಯ ಹಾರ್ಮೋನಿಯಂ ಪೆಟ್ಟಿಗೆ |
| | | ಶ್ರೀ ಪಿ. ಎಚ್. ಪಿಂಜಾರ | ೨೫ರೂ. ಬೆಲೆಯ ಸಾಗವಾನಿ ಬಾಕು |
| ಚಚಡಿ | ೬-೩-೫೯ | ಊರ ನಾಗರಿಕರು | ೫೬೫ಲ ಜೋಳ |
| | | ಶ್ರೀ ವ್ಹಿ. ಜಿ. ನಾಯಕ ಬಹಾದ್ದೂರ ದೇಸಾಯರು | ೧೦೦ರೂ. ವಾಗ್ದಾನ |
| ಗುಳೇದಗುಡ್ಡ | ೬-೩-೫೯ | ಶ್ರೀ ಎಸ್. ಎಸ್. ಬಸುಪಟ್ಟದ, ಹೆ.ಮಾ. ಮು. ಹೈಸ್ಕೂಲ | ಗಡಿಯಾರ, ಡ್ರೈನ್, ನೀರಿನಟಾಕಿ ೧೫೦ ರೂ. ಬೆಲೆಯ |
| ಅಂಬಿಗೇರಿ | ೧೦-೨-೫೯ | ಶ್ರೀ ಶೇಷ್ಕಿ ಕೋ. ಆ. ಸೊ. ಅಣ್ಣಿಗೇರಿ | ೧೫೦ ರೂ. |
| ಹೆಂ ಮಾ.ಉ.ಗಂ.ಮು.ಶಾಲೆ | | ಶ್ರೀ ಜೆ. ಎಚ್. ಬೆಟಗೇರಿ | ೨೦೦ರೂ. (ಶಾಲೆಯ ರಿಪೇರಿಗಾಗಿ) |
| | | ಶ್ರೀ ಇಮಾಮಸಾಬ ನಡಕಟ್ಟಿನ | ೩೬೦ರ. ಬೆಲೆಯ ಒಂದು ನೀರಿನ ಟಾಕಿ |
| ಮುದೇನೂರ (ರಾಣೆಬೆನ್ನೂರ) | ೨೬-೧-೫೯ | ಶ್ರೀ ಶಿವಾನಂದ ಸೊಸಾಯಿಟಿ ಮತ್ತು ಗ್ರಾಮ-ಪಂಚಾಯತಿಯವರು | ಗಡಿಯಾರ ( ೯೫ರೂ. ಬೆಲೆಯ ) |
| | | ಶ್ರೀ ಫಕ್ಕೀರಪ್ಪನವರು ಪುಟ್ಟಕ್ಕನವರ ಸ್ಮೃ. ಕ. ಜೇಆರಮನ್ | ೧ ತಾಮ್ರದ ಕೊಡ ( ರೂ. ೨೧=೫೦ ) |
| | | ಮೇ. ಬಸಯ್ಯನವರು ಬಳಸನ್ನೂರ ಮಠ ಸ್ಮೃ. ಕ ವ್ಹಾ. ಜೇಆರಮನ್ | ಹಿತ್ತಾಳಿ ನೀರಿನ ಟಾಕಿ ( ರೂ೨೪=೫೦ ) |
| | | ಶ್ರೀ ಷಣ್ಮುಖಗೌಡ್ರು ಪಾಟೀಲ ಸ್ಮೃ. ಕ. ಮೇಂಬರ | ೧ ಜಾಗಟೆ ರೂ. ೨೦=೦೦<br>೧ ತಂಬಿಗೆ ರೂ. ೫=೫೦ |
| | | ಶ್ರೀ ಕನ್ನಪ್ಪ ಜೋಗಿ ಸ್ಮೃ. ಕ. ಮೆಂಬರ | ಹಿತ್ತಾಳಿ ಬಕೀಟು ರೂ. ೨೦=೫೦ |
| | | ಶ್ರೀ ಚೌಡಪ್ಪನವರು ತರೀದಹಳ್ಳಿ ವ್ಹಿ. ಪಿ. ಸಿ. ಮೇಂಬರ | ಚರ್ಮದ ಹಲಿಗೆ ( ೮ರೂ. ) |
| ಹಿರೆಕೆರೂರ (ತಾ.ಅಣಜಿ) | ೨೭-೩-೫೯ | ಶ್ರೀ ಬಿ. ಬಿ. ಬಣಕಾರ ವ್ಹಿ. ಪಿ. ಸಿ. ಮೇಂಬರ | ೧ ನೀರಿನ ಟಾಕಿ, ತಂಬಿಗೆ, ಕಪ್ಪು ( ೫೧ರೂ. ಬೆಲೆಯ ) |
| | | ಶ್ರೀ ಎಸ್. ಬಿ. ಕರೀಗೌಡರ | ೨೫ ರೂ. ಬೆಲೆಯ ತಾಮ್ರದ ಕೊಡ ( ಆಶ್ವಾಸನ ) |

## ಶೈಕ್ಷಣಿಕ ಪ್ರವಾಸಗಳು

| ಊರು | ದಿನಾಂಕ | ಸ್ಥಳ |
|---|---|---|
| ಸುರೇಬಾನ | ೧೫-೩-೫೯ | ಹಂಪೆ, ಮುನಿರಾಬಾದ ಅಣೆಕಟ್ಟು |
| ರಾಯಬಾಗ | ೬-೩-೫೯ | ಉಗಾರ ಸಕ್ಕರೆಯ ಕಾರಖಾನೆ, ಕುಡಚಿ ಪೂಲ |

Regd. No. B. 5375

ಭಾಗ೧ ಕವಿತಾ ಸಂಕಲನ ೧೫೦ **ನಾವು ನಮ್ಮವರು** ಭಾಗ ೨ ಕಥಾ ಸಂಕಲನ ೧೫೦

( ಪ್ರಾಥಮಿಕ ಶಿಕ್ಷಕ ಸಾಹಿತಿಗಳ ಫೋಟೊ ಪರಿಚಯ ಕಥೆ ಕವನಗಳು )

ಮಾನ್ಯ ಎ. ಸಿ. ದೇನೇಗೌಡರು ಶಿಕ್ಷಣಾಧಿಕಾರಿಗಳು [D. P. I.] ಮೈಸೂರು ರಾಜ್ಯ ಅವರ ಮುನ್ನುಡಿ.

ಮಾನ್ಯ ಸಿದ್ಧಯ್ಯ ಪುರಾಣಿಕ 'ಕಾನ್ಯಾನಂದ'ರು ಡಿ. ಸೆಕ್ರೆಟರಿ ಶಿಕ್ಷಣ ವಿಭಾಗ ಇವರ ಹಿನ್ನುಡಿಗಳು.

- ಕೇವಲ ೩ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೩ನೆಯ ಮಾಲೆಯ ೧–೨ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಅಗಷ್ಟ ದಿಂದ ಅಗಷ್ಟಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೫ ಬೆಲೆಯಲ್ಲಿ [ಅಂಚೆಖರ್ಚ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅಲ್ಪಹಣ ತಮ್ಮ ಶಿಕ್ಷಕ ಮಿತ್ರ ಏಳ್ಗೆಗೆ ಮೀಸಲು. ಗಳೆಯರನ್ನು, ವಾಚನಾಲಯಗಳನ್ನು ಚಂದಾದಾರರನ್ನು ಮಾಡಿ ನೆರವಾಗಿರಿ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

**ಕಲ್ಯಾಣ ಕನ್ನಡ ಗುಡಿಯ ಕಾಣಿಕೆ**

**ಸುವರ್ಣ ಸಂಧಿ! ಸಚಿತ್ರ ಗ್ರಂಥ!! ಸುಂದರ ಮುದ್ರಣ!!**

## "ಶಿಕ್ಷಣ–ಶಿಕ್ಷಕ–ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು–ಮನ ತಣಿಸುವಂಥ, **ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಂಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ ಅಮೋಘ ಗ್ರಂಥ.**

**ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ.** ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ–ಶಿಕ್ಷಕಿಯರ ಬಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂಥ **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಅಗಸ್ಟ ೫೭ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ ಓ. ಸಾಹೇಬರ ಅಧ್ಯಕ್ಷತೆಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ

ವಿವರಗಳಿಗೆ ಇಂದೇ ಈಗಲೇ ಬರೆಯಿರಿ. ಪ್ರೋತ್ಸಾಹನೆ ಕೊಡಿರಿ.

**ಸಾದಾ ಪ್ರತಿ ೩ ರೂ. ]** **ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್.** **[ ಸುಂದರ ಪ್ರತಿ ೪ ರೂ**

**ವಿಳಾಸ :– ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಿಕೋಟಾ, ಜಿಲ್ಲಾ:— ವಿಜಾಪುರ.**

Printed by Shri S. F. Kattimani, at Manohar Power Printing Press, Hubli. Edited and Published by Sjts. M. G. Katti, B. M. Shintri, S. R. Tatti & Smti. P. A. Bhaskar, at the Kannada Jeevan Shikshan Office, Govt. Training College for Men, Dharwar.

# ಶಿವಮೊಗ್ಗ ಶಿಕ್ಷಣ

ಪ್ರಧಾನ ಸಂಪಾದಕರು: ಶ್ರೀ ಬಿ ಬಿ ಚನ್ನಣ್ಣವರ



ಪ್ರಕಟಣೆ: ಪರಾಮರ್ಶನ ಗ್ರಂಥಾಲಯ ಮತ್ತು ಜಿಲ್ಲಾ ಶಿಕ್ಷಣ ಸಂಸ್ಥೆ

# ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು: **ಶ್ರೀ ಎಮ್. ಜಿ. ಹಂದ್ರಾಳ,** ಬಿ.ಎ.(ಆನರ್ಸ),ಎಮ್.ಈಡಿ.,ಡಿ.ಬಿ.ಈಡಿ ,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು: **ಶ್ರೀ ವ್ಹಿ. ಬಿ. ಚವಣ್ಣವರ,** ಬಿ.ಎಸ್.ಸಿ.,(ಆನರ್ಸ),ಬಿ.ಟಿ.,
ಇನ್‌ಚಾರ್ಜ ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

**ಶ್ರೀಮತಿ ಪಿ. ಎ. ಭಾಸ್ಕರ,** ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

**ಶ್ರೀ ಬಿ. ಎಂ. ಶಿಂತ್ರಿ,** ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

**ಶ್ರೀ ಎಸ್. ಆರ್. ತಟ್ಟಿ,** ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

**ಸಂಪುಟ ೯ಳ** **ಮಾರ್ಚ ೧೯೫೯** **ಸಂಚಿಕೆ ೧೦**

## — ಪರಿವಿಡಿ —


| | | | | |
|---|---|---|---|---|
| ೧. | ಸಂಪಾದಕೀಯ | .... | .... | ೨ |
| ೨. | ಅನುಭವ ಸಾಹಿತ್ಯ | .... | ಡಾಕ್ಟರ ಬಿ. ಎಸ್. ಗದ್ದಗಿಮಠ | ೫ |
| ೩. | ಶಿಕ್ಷಣ–ನಗು | .... | ಶ್ರೀ ಎನ್. ವಾಯ್. ಕಾಟವಾ | ೯ |
| ೪. | ಜೀವನ ಶಿಕ್ಷಣ ಶಾಲೆಗಳಲ್ಲಿ ವಿವಿಧ ವಿನೋದಾವಳಿಗಳು | .... | ಶ್ರೀ ಎನ್. ಬಿ. ಮುದಿಕವಿ | ೧೧ |
| ೫. | ಮಹಾ ಶಿವರಾತ್ರಿ | .... | ಶ್ರೀ ವ್ಹಿ. ಎಮ್. ದಿಬ್ಬಿ | ೧೨ |
| ೬. | ಶ್ರೀಮತಿ ಸರೋಜಿನಿ ನಾಯಡು | .... | ಶ್ರೀ ಶಿಂತ್ರಿ ಬಸಪ್ಪನವರು | ೧೯ |
| ೭. | ದೃಷ್ಟಿದೋಷ (ಕವನ) | .... | ಶ್ರೀ ಭೀಮಪ್ಪ ನಡುವಿನಮನಿ | ೨೨ |
| ೮. | ಪದವೀಧರರ ಜೀ. ಶಿ. ಕೇಂದ್ರ, ಧಾರವಾಡ ಈ ಸಂಸ್ಥೆಯ ಹಳೇ ವಿದ್ಯಾರ್ಥಿಗಳ ವಿಚಾರ ಮಂಥನ, ಬೆಳಗಾಂವಿ (ವರದಿ) | .... | — | ೨೩ |
| ೯. | ನೂಲುವೆವು (ಕವನ) | .... | ಶ್ರೀ ಭೀಮಪ್ಪ ನಡುವಿನಮನಿ | ೨೭ |
| ೧೦. | ಜೀವನ ಶಿಕ್ಷಣ ಪ್ರಸಂಚರ | .... | — | ೨೮ |

Statement about ownership and other particulars about the news paper

# "Jeevan Shikshana"

Monthly to be published on the 15th of every month.

**Form IV** ( See Rule 8 )

| | | |
|---|---|---|
| 8. | Place of Publication | GOVT. T. C. M. DHARWAR |
| 2. | Periodicity of its Publication | MONTHLY |
| 3. | Printers Name | SHRI S. F. KATTIMANI |
| | Nationality | INDIAN |
| | Address | BELGUAM GALLI, HUBLI |
| 4. | Publisher's Name | V. B. CHAVANNAVAR |
| | Nationality | INDIAN |
| | Address | PRINCIPAL, GOVT. T.C.M.DHARWAR |
| 5. | Editor's Name | V. B. CHAVANNAVAR |
| | Nationality | INDIAN |
| | Address | PRINCIPAL, GOVT. T.C.M.DHARWAR |
| 6. | Names & Addresses of individuals who own the newspaper and partners or shareholders holding more then 1% of the total capital. | EDITORIAL BOARD GOVT. T. C. M. DHARWAR |

I, V. B. CHAVANNAVAR hereby declare that the perticulars given above are true to the best of my knowledge and belief.

Dated : March 2nd, 1959

**V. B. Chavannavar**

*Signature of Publisher*

# ಸಂಪಾದಕೀಯ

**ಶಿಕ್ಷಣದ ಬಗ್ಗೆ ರಾಜ್ಯಸರಕಾರದ ಆಸ್ಥೆ:—**

ಮೈಸೂರ ರಾಜ್ಯದ ೧೯೫೯—೬೦ನೆಯ ಸಾಲಿನ ಅಂದಾಜ ಪತ್ರಿಕೆಯು ಈಗಾಗಲೇ ಹೊರಬಿದ್ದಿದೆ. ಅದರಲ್ಲಿ ರಾಜ್ಯ ಸರಕಾರವು ಶಿಕ್ಷಣಕ್ಕಾಗಿ ಖರ್ಚು ಮಾಡುವ ಹಣವನ್ನು ಗಮನಿಸಿದರೆ, ಅದು ಶಿಕ್ಷಣದ ಬಗ್ಗೆ ಒಳ್ಳೇ ಆಸ್ಥೆ ತಳೆದಿದೆಯೆಂದು ಗೋಚರವಾಗದೆ ಇರಲಾರದು. ರಾಜ್ಯಸರಕಾರವು ತನ್ನ ಒಟ್ಟು ೫೫.೨೦ ಕೋಟಿ ರೂಪಾಯಿಗಳ ನೆಚ್ಚದಲ್ಲಿ ೧೧.೩೨ ಕೋಟಿ ರೂ.ಗಳಷ್ಟು ಅಂದರೆ ಸುಮಾರು ೧/೫ ಕ್ಕಿಂತ ಹೆಚ್ಚು ಹಣ ರಾಷ್ಟ್ರದ ಅಭಿವೃದ್ಧಿಗೆ ಮೂಲಭೂತವಾದ ಶಿಕ್ಷಣ ಕ್ಕೆಂದು ನೆಚ್ಚಮಾಡುವದು ಅತ್ಯಂತ ಸ್ತುತ್ಯಕಾರ್ಯ ವಾಗಿದೆ. ರಾಷ್ಟ್ರದ ಜೀವಾಳದಂತಿರುವ ಶಿಕ್ಷಣಕ್ಕೆ ಇಷ್ಟು ಅಧಿಕಾಂಶ ಹಣ ನೆಚ್ಚ ನೂಡುವದು ರಾಜ್ಯದ ಆರ್ಥಿಕ ಸುಸ್ಥಿತಿಯನ್ನು ತೋರಿಸುವದು. ಮತ್ತು ಶಿಕ್ಷಣ ದಂಥ ಮಹತ್ವದ ಕಾರ್ಯಕ್ಕೆ ಪ್ರಾಧಾನ್ಯತೆ ಕೊಟ್ಟುದು ಸರಕಾರದ ಜಾಣ್ಮೆಯನ್ನೂ ಚಾಣಾಕ್ಷತೆಯನ್ನೂ ತೋರಿಸುವದು.

ಮೈಸೂರ ರಾಜ್ಯಸರಕಾರವು ಜನಸಾಮಾನ್ಯರ ಕಲ್ಯಾಣಕಾರಕ ಪ್ರಾಥಮಿಕ ಶಿಕ್ಷಣದ ಬೆಳವಣಿಗೆಯ ಬಗ್ಗೆ ಒಳ್ಳೇ ಮಹತ್ವಾಕಾಂಕ್ಷೆಯ ಗುರಿಯನ್ನು ಇಟ್ಟು ಕೊಂಡಿದೆ. ರಾಜ್ಯದಲ್ಲಿಯ ಶಾಲಾ ವಯಸ್ಸಿನ ಎಲ್ಲ ಮಕ್ಕಳಿಗೆ ಶಿಕ್ಷಣ ದೊರೆಯುವ ಸೌಕರ್ಯವನ್ನೊದಗಿಸುವ ಉದ್ದೇಶದಿಂದ ಬರುವ ಎರಡು ವರ್ಷಗಳಲ್ಲಿ ಸುಮಾರು ೨೨೦೦ ಪ್ರಾಥಮಿಕ ಶಾಲೆಗಳನ್ನು ತೆರೆಯಲಿದೆಯೆಂದೂ ಮತ್ತು ಇದೇ ವರುಷದಲ್ಲಿ ೬೦೦ ಶಾಲೆಗಳನ್ನು ತೆರೆಯ ಲಾಗುವದೆಂದೂ ಹೇಳಿದೆ. ಈ ವಿಷಯದಲ್ಲಿ ತೀರ ಹಿಂದುಳಿದ ಭಾಗಗಳ ಬಗ್ಗೆ ವಿಶೇಷ ಪ್ರಾಶಸ್ತ್ಯವನ್ನು ಕೊಡುವ ಯೋಜನೆಯಿದೆ. ಕಡ್ಡಾಯದ ಪ್ರಾಥಮಿಕ ಶಿಕ್ಷಣವು ಜಾರಿಯಲ್ಲಿಲ್ಲದ ಹಳೆಯ ಮೈಸೂರ ಭಾಗಗಳಲ್ಲಿ ಈ ಶಾಲೆಗಳನ್ನು ಹೆಚ್ಚಾಗಿ ತೆರೆಯಲಾಗುವದು. ಹೀಗೆ ಒಂದು ಮೈಲಿಗಿಂತ ಹೆಚ್ಚು ದೂರವಿಲ್ಲದಷ್ಟು ಅಂತರದಲ್ಲಿ ಹೆಜ್ಜೆ ಹೆಜ್ಜೆಗೂ ಶಾಲೆಗಳಾಗಿ ಜನಸಾಮಾನ್ಯರ ಶಿಕ್ಷಣ ಸೌಕರ್ಯಗಳು ಹೆಚ್ಚುವಷ್ಟಲ್ಲದೆ ಸಾಕಷ್ಟು ಶಿಕ್ಷಣ ಪ್ರಚಾರ ಕಾರ್ಯವು ಸಾಧಿಸುವದು.

ಅದರಂತೆ ರಾಜ್ಯದ ಎಲ್ಲಕಡೆಗೂ ಪ್ರಾಥಮಿಕ ಶಿಕ್ಷಣದ ಎಲ್ಲ ಭಾರವನ್ನು ಸರಕಾರವೇ ವಹಿಸಿಕೊಂಡು ರಾಜ್ಯದಾದ್ಯಂತ ಏಕರೂಪ ಶೈಕ್ಷಣಿಕ ಆಡಳಿತೆಯನ್ನು ಜಾರಿಯಲ್ಲಿ ತರಲಿದೆ. ಈ ಧೋರಣೆಯ ಮೂಲಕ ರಾಜ್ಯದಲ್ಲಿಯ ಹಳೆಯ ಮುಂಬೈ, ಹೈದರಾಬಾದ, ಮದ್ರಾಸ ಮೊದಲಾದ ರಾಜ್ಯದಲ್ಲಿದ್ದ ಶಿಕ್ಷಣದ ಭಿನ್ನ ಭಿನ್ನ ಆಡಳಿತೆಯ ಕ್ರಮಗಳು ಹೋಗಿ ಅವುಗಳ ಬದಲಾಗಿ ಒಂದೇ ತೆರನಾದ ಶಿಕ್ಷಣ ಆಡಳಿತೆಯ ಕ್ರಮವು ಜಾರಿಯಲ್ಲಿ ಬಂದು ಹೊಸ ಹೊಸ ಸುಧಾರಣೆಗಳನ್ನು ಜಾರಿಯಲ್ಲಿ ತರಲು ಸಾಧ್ಯವಾಗುವದು. ಹಾಗು ಆಡಳಿತೆಯು ಸುಗಮವಾಗುವದು. ಸ್ಥಾನಿಕ, ಹಾಗು ಖಾಸಗೀ ಸಂಸ್ಥೆಗಳು ಮುಂದೆ ಬಂದು ಪ್ರಾಥಮಿಕ ಶಿಕ್ಷಣದ ಬದಲಾಗಿ ಮಾಧ್ಯಮಿಕ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಗೈಯಬೇಕೆಂದೂ ಅವರಿಗೆ ಸರಕಾರದಿಂದ ಸಾಕಷ್ಟು ಧನಸಹಾಯ ದೊರಕುವದೆಂದೂ ಆದೇಶವೀಯಲಾಗಿದೆ. ತೀರ ಹಿಂದುಳಿದ ಕ್ಷೇತ್ರಗಳಲ್ಲಿ ಸರಕಾರವೇ ತಾಲೂಕೆ ಗೊಂದರಂತೆ ಮಾಧ್ಯಮಿಕ ಶಾಲೆಗಳನ್ನು ತೆರೆಯುವ ಯೋಜನೆಯನ್ನೂ ಇಟ್ಟುಕೊಂಡಿದೆ.

ಉಚ್ಚ ಶಿಕ್ಷಣದ ಬಗ್ಗೆಯೂ ಮುದಲಿಯಾರ ಸಮಿತಿಯು ಮಾಡಿದ ಶಿಫಾರಸುಗಳನ್ನು ಸರಕಾರವು ಅಂಗೀಕರಿಸುವದಕ್ಕಾಗಿ ಪರಿಶೀಲನೆ ನಡೆಯಿಸಿದೆ.

**ಹೊಸ ಅಭ್ಯಾಸ ಕ್ರಮ ಹಾಗೂ ಪಠ್ಯಗಳು:—**

ಶಿಕ್ಷಣ ಪ್ರಸಾರದ ಜೊತೆಯಲ್ಲಿ ಶಿಕ್ಷಣದ ಸುಧಾರಣೆ ಗಾಗಿ ಸರಕಾರವು ವಿಶ್ವಪ್ರಯತ್ನ ನಡೆಯಿಸಿದೆ. ಇಡೀ ರಾಜ್ಯದ ಸಲುವಾಗಿ ಮೂಲಶಿಕ್ಷಣದ ಅಂಗಗಳನ್ನೊಳ ಗೊಂಡ ಪ್ರಾಥಮಿಕ ಶಿಕ್ಷಣದ ಅಭ್ಯಾಸ ಕ್ರಮವನ್ನು ನಿರೂಪಿಸುವ ಮಂಡಲವು ೧೯೫೮ರಲ್ಲಿ ಸಾದರಪಡಿಸಿದ ಅಭ್ಯಾಸ ಕ್ರಮವನ್ನು ರಾಜ್ಯಸರಕಾರವು ಅಂಗೀಕರಿಸಿತು. ರಾಜ್ಯದಾದ್ಯಂತ ಬರುವ ಜೂನ ತಿಂಗಳಲ್ಲಿ ೧ನೆಯ ಹಾಗೂ ೨ನೆಯ ವರ್ಗಗಳಲ್ಲಿ ಆ ಹೊಸ ಅಭ್ಯಾಸ ಕ್ರಮವು ಜಾರಿಯಲ್ಲಿ ಬರುವದು. ಆ ಅಭ್ಯಾಸ ಕ್ರಮಕ್ಕೆ ಅನುಗುಣವಾಗಿ ಪಠ್ಯಪುಸ್ತಕಗಳನ್ನು ರಚಿಸುವ ಸಲುವಾಗಿ ರಾಜ್ಯದ ನುರಿತ–ಹಾಗು ಅನುಭವಿಕ ಶಿಕ್ಷಣ ತಜ್ಞರ

ಸಮಿತಿಯೊಂದು ನಿರ್ಮಿತವಾಗಿದೆ. ಮತ್ತು ಈಗಾಗಲೇ ಬೇರೆ ಬೇರೆ ಪಠ್ಯಪುಸ್ತಕಗಳ ರಚನೆಯ ಬಗ್ಗೆ ಮಂಡಲಗಳು ಕಾರ್ಯಮಾಡುತ್ತಲಿವೆ. ಬರುವ ಜೂನ ತಿಂಗಳಲ್ಲಿ ೧ ನೆಯ ಹಾಗೂ ೨ ನೆಯ ವರ್ಗದ ಪಠ್ಯಗಳು ಹೊರಬೀಳಲಿವೆ. ಇಂಥ ಶಿಕ್ಷಣ ತಜ್ಞರ ಸಮಿತಿಗಳಿಂದ ರಚಿತವಾದ ಪಠ್ಯಪುಸ್ತಕಗಳು ಈಗಿದ್ದ ಪಠ್ಯಗಳಿಗಿಂತ ಹೆಚ್ಚಿನ ಮಟ್ಟಿನವು ಆಗುವವೆಂದು ಆಶಿಸುತ್ತೇವೆ. ಇದೇ ಸಂದರ್ಭದಲ್ಲಿ ಹೊಸ ಅಭ್ಯಾಸ ಕ್ರಮಕ್ಕನುಸಾರ ಹಾಗೂ ಹೊಸ ಪರಿಸ್ಥಿತಿಗೆ ಅನುಗುಣವಾಗಿ ಗಣಿತ, ಇತಿಹಾಸ, ಭೂಗೋಲ ಇತ್ಯಾದಿ ಪಠ್ಯಪುಸ್ತಕಗಳನ್ನು ಲೇಖಕರು ಬರೆಯಲು ಮುಂದೆ ಬರಬೇಕಾಗಿದೆ. ನಮ್ಮಲ್ಲಿ ಹೊಸ ಮಾರ್ಪಾಟುಗಳನ್ನೊಳಗೊಂಡ ಪುಸ್ತಕಗಳು ರಚಿತವಾಗಲು ವಿಳಂಬವಾಗುತ್ತಲಿದೆ. ಮೈಸೂರು ರಾಜ್ಯ ನಿರ್ಮಿತವಾಗಿ ಎರಡು ವರುಷ ಗತಿಸಿದರೂ ಆ ರಾಜ್ಯದ ಭೂಗೋಲ ಪಠ್ಯಪುಸ್ತಕವು ನಮ್ಮ ಕೈಸೇರಲಿಲ್ಲ. ಅದರಂತೆ ಹೊಸ ಭಾರತದ ಪುಸ್ತಕಗಳು ಬರಲು ವಿಳಂಬವಾಗಿದೆ. ಈಗಿನ ಜನಜೀವನದಲ್ಲಿ ಹಾಸುಹೊಕ್ಕಾಗಿರುವ ಗಣಿತ ವಿಷಯಗಳ ಬಗ್ಗೆಯೂ ಯೋಗ್ಯ ಪಠ್ಯಗಳು ಬಂದಿಲ್ಲ. ಲೇಖಕರು ಮುಂದೆ ಬಂದು ಕನ್ನಡದಲ್ಲಿ ಪಠ್ಯಗಳನ್ನು ರಚಿಸಬೇಕೆಂದು ಆಶಿಸುತ್ತೇನೆ.

ಪ್ರಾಥಮಿಕ ಶಿಕ್ಷಣ ಕ್ರಮದಂತೆಯೇ ಮಾಧ್ಯಮಿಕ ಶಿಕ್ಷಣದ ರೂಪವನ್ನು ನಿರ್ಧರಿಸಲು ಸಮಿತಿಗಳು ಏರ್ಪಟ್ಟಿವೆ, ಹಾಯರ ಸೆಕಂಡರಿ, ವಿವಿಧ ತಾಂತ್ರಿಕ ಮುಂತಾದ ಹೊಸ ಸ್ವರೂಪದ ಮಾಧ್ಯಮಿಕ ಶಾಲೆಗಳು ರೂಪಗೊಳ್ಳುತ್ತಲಿವೆ. ಅವುಗಳಿಗಾಗಿ ಹೊಸ ಸ್ವರೂಪದ ಅಭ್ಯಾಸ ಕ್ರಮವನ್ನು ನಿರ್ಧರಿಸಲಾಗಿದೆ.

ಈ ರೀತಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಉಚ್ಚ ಹೀಗೆ ಶಿಕ್ಷಣದ ಎಲ್ಲ ಹಂತಗಳಲ್ಲಿ ಪ್ರಗತಿಪರವಾದ ಧ್ಯೇಯ, ಗುರಿಯನ್ನಿಟ್ಟುಕೊಂಡ ನಮ್ಮ ಸರಕಾರವನ್ನು ಅಭಿನಂದಿಸದೆ ಇರಲಾರೆವು.

### ತರಬೇತಿ ಪಡೆಯುತ್ತಿರುವ ಶಿಕ್ಷಕರಿಗೆ ಸಂಬಳ:–

ಹಳೆಯ ಮೈಸೂರ ರಾಜ್ಯದ ವಿಭಾಗದಲ್ಲಿ ಎಲ್ಲ ಪ್ರಾಥಮಿಕ ಶಿಕ್ಷಕರು ಸರಕಾರೀ ನೌಕರರಾಗಿದ್ದು ಅವರಿಗೆ ತರಬೇತಿ ಪಡೆಯುವ ಅವಧಿಯಲ್ಲಿ ಪೂರ್ಣ ಸಂಬಳ ಹಾಗು ಕುಟುಂಬ ಭತ್ತೆಯನ್ನು ಕೊಡುವ ನಿಯಮವಿದೆ. ಈಗ ಉಳಿದ ಭಾಗಗಳಲ್ಲಿ ಟ್ರೇನಿಂಗ ಪಡೆಯುತ್ತಿರುವ ಬಹುಜನ ಶಿಕ್ಷಕರು ಜಿಲ್ಲಾ ಸ್ಕೂಲಬೋರ್ಡ ಹಾಗು ಮ್ಯು. ಸ್ಕೂಲಬೋರ್ಡ ನೌಕರರಾಗಿದ್ದು ಅವರಿಗೆ ಕೇವಲ ಶಿಷ್ಯವೇತನ ಅಥವಾ ಸಾಲರೂಪ–ಶಿಷ್ಯವೇತನವನ್ನು ಕೊಡಲಾಗುತ್ತಿತ್ತು. ಈ ಶಿಷ್ಯವೇತನಗಳು ಕ್ರಮವಾಗಿ ೩೫ ರೂ. ಹಾಗೂ ೪೫ ರೂ.ಯಂತೆ ಇದ್ದವು. ಈಗ ಅದರ ಬದಲಾಗಿ ಇಂಥ ಎಲ್ಲ ಶಿಕ್ಷಕರಿಗೂ ಕಳೆದ ಜೂನ್ ತಿಂಗಳಿಂದ ಪೂರ್ಣ ಸಂಬಳ ೪೦ ರೂ., ತುಟ್ಟಿಭತ್ತೆ ೨೫ರೂ.ಹಾಗು ಕುಟುಂಬ ಭತ್ತೆ ೭೨ರೂ. ಹೀಗೆ ಕೊಡುವದಾಗಿ ರಾಜ್ಯ ಸರಕಾರವು ನಿರ್ಧರಿಸಿದೆ. ಇದರಿಂದ ತರಬೇತಿ ಅವಧಿಯಲ್ಲಿ ಆರ್ಥಿಕ ತೊಂದರೆಗೀಡಾದ ಎಲ್ಲ ಶಿಕ್ಷಕರಿಗೂ ಒಳ್ಳೆಯ ನೆರವು ದೊರೆತಂತಾಗುವದು.

---

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

**ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ**

**ಆದರ್ಶ ಚಿತ್ರಕಲಾ**

**( Ideal Drawing )**

**ಶ್ರೀ ಎಸ್. ಕೆ. ಜೋಶಿ, ಮತ್ತು**
**ಶ್ರೀ ಜಿ. ಡಿ. ವಾಲಿ.**

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧—೧೫—೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ನೆಚ್ಚವಿಲ್ಲ.

ಇದು ಕನ್ನಡದಲ್ಲಿಯೂ ಸಿಗುತ್ತದೆ,

**ಜಿ. ವಾಯ್. ರಾಣೆ**
**ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.**

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

**ಸುವರ್ಣ ಸಂಧಿ!** **ಸಚಿತ್ರ ಗ್ರಂಥ!!** **ಸುಂದರ ಮುದ್ರಣ!!!**

# "ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮನ ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಿಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಂಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ, ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯರ ಬಣ್ಣ ಬಣ್ಣಗಳಲ್ಲಿ ಳಗ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ಳಒಖ ಪುಟಗಳ ಅಮರ ಸಾಹಿತ್ಯ ಗ್ರಂಥ ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.

ದಿ. ೧೫ ಆಗಸ್ಟ ೫೬ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯಕ್ಷತೆಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ. ಪ್ರೋತ್ಸಾಹನೆ ಕೊಡಿರಿ.

**ಸಾದಾ ಪ್ರತಿ ೩ ರೂ.** ] **ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್.** [ **ಸುಂದರ ಪ್ರತಿ ೪ ರೂ.**

**ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಿಕೋಟಾ, ಜಿಲ್ಲಾ:— ವಿಜಾಪುರ.**

# ಸುಬೋಧ ಹಿಂದೀ ಕನ್ನಡ ವ್ಯಾಕರಣ

● ★ ●

ಇದನ್ನು ಬರೆದವರು ಹಿಂದೀ ಕ್ಷೇತ್ರದಲ್ಲಿ ಹೆಸರು ಪಡೆದ **ಶ್ರೀ ಗುರನಾಥ ಜೋಶಿ** ಅವರು. ತಮ್ಮ ಅಳವಾ ಅನುಭವದಿಂದ ಅಲ್ಲಲ್ಲಿ ಕನ್ನಡ ವ್ಯಾಕರಣಕ್ಕೆ ಹೋಲಿಸಿ ಸುಲಭ ಭಾಷೆಯಲ್ಲಿ ಸರ್ವರಿಗೂ ತಿಳಿಯುವಂತೆ ಬರೆದಿದ್ದಾ ಇದರಲ್ಲಿ ಕೇವಲ ವ್ಯಾಕರಣದ ನಿಯಮಗಳು ಇರದೆ ಹಿಂದೀಯಿಂದ ಕನ್ನಡಕ್ಕೂ ಕನ್ನಡದಿಂದ ಹಿಂದಿಗೆ ಭಾಷಾಂತರ ಮಾಡುವದಕ್ಕೆ ವಾಕ್ಯಗಳೂ ಕೊಡಲ್ಪಟ್ಟಿವೆ. ಇದರಿಂದ ಕಲಿಯಬಯಸುವವರೆಲ್ಲರೂ ಸುಲಭವಾ ಹಿಂದಿಯನ್ನೂ ಕಲಿಯಬಹುದಾಗಿದೆ. ಈ ಪುಸ್ತಕವನ್ನು ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ, ಪ್ರಿನ್ಸಿಪಾ **ವಿ. ಕೆ. ಗೋಕಾಕ** ಅವರು ಸ್ವಾಗತಿಸಿದ್ದಾರೆ. ಇಂದೇ ಇದನ್ನು ತರಿಸಿಕೊಂಡು ಹಿಂದೀಯನ್ನು ಕಲಿಯಿ ಒಂದುನೂರಾ ಹನ್ನೆರಡು ಪುಟಗಳು! ಬೆಲೆ ಕೇವಲ ೧೪ ಆಣೆ. ವ್ಯಾಪಾರಸ್ಥರಿಗೆ ಯೋಗ್ಯ ಕಮಿಸನ್ನು !

ಕೆಳಗಿನ ಪತ್ತೆಗೆ ಬರೆಯಿರಿ.

**ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ.**

# ಅನುಭವ—ಸಾಹಿತ್ಯ

ಲೇಖಕರು : **ಡಾ. ಬಿ. ಎಸ್. ಗದ್ದಗಿಮಠ,** ಎಮ್.ಎ.,ಪಿಎಚ್.ಡಿ.

( ಹಿಂದಿನ ಸಂಚಿಕೆಯಿಂದ ಮುಂದುವರೆದುದು )

ಧಣ್ಣ ಧಣ್ಣ, ಶರಣರ ಘಂಟಿ ಮಾತಾಡತಾವ ‖ಪ‖
ಮುಲ್ಲಮುಲ್ಲಾಣಿ ಬರುವ ಸೊಲ್ಲ ಶಿವಲೋಕ ಕೇಳಿ
ಗಲ್ಲಿಗಲ್ಲಿಸಿ ಶಿವಜೀಕ- ।ಧ। ಶಿವಪಡಕ
ಪ್ರಣಯ ಹಾಡೆಂದು ದನಿದುಂಬಿ ‖ಧ್ರು‖

—ಮುಲ್ಲಮುಲ್ಲಾಣಿ ಮಹಾಶ್ಯಂಗಾರ ಹಾಡುಗಬ್ಬಳ. ಶಿವದರ್ಶನ ಎಂದು ಹಾಡಿ ಈ ಪ್ರಪಂಚವನ್ನು ಪಾವನ ಮಾಡಿ ಯುಗ-ಯುಗದಲ್ಲಿಯೂ ಬಾಳ್ವೆಗೆ ಹೊಸತನ ತಂದಿದೆ. ಅಚುದರಿಂದ ಕನ್ನಡ ಹೆಣ್ಣು, ಬಾಳಿನಲ್ಲಿ ಎಷ್ಟು ಆಸಕ್ತವಾದರೂ ಅವಳ ಹಾಡಿಯು "ಇರಬೇಕ । ಇದ್ದು ಗೆದಿಯಬೇಕ" ಎಂಬುದಾಗಿದೆ.

ಅನುಭವ ಸಾಹಿತ್ಯದಲ್ಲಿ ಹಾಡುಗಬ್ಬಕ್ಕಿಂತಲೂ ಬಿಡಿಹಾಡು (ಭಾವಗೀತೆ) ಗಳು ಜನತೆಯ ಮೆಚ್ಚುಗೆ ಪಡೆದಿದೆ. ಅವುಗಳಲ್ಲಿಯ ಅನುಭವ ಚುಂಬಕವು ಅತಿ ಪ್ರಖರವಾದುದು; ಅದರ ತೀವ್ರತೆ ಬಲು ಚುರುಕಾದುದು. ಹೇಳತಕ್ಕ ಮಾತು ಮಾರ್ಮಿಕವಾಗಿ ಭಾವ ತುಂಬಿ ನೇರವಾಗಿ ಒಲ್ಲೆಂದರೂ ಮನಕ್ಕೆ ಮುಟ್ಟಿ ಆತ್ಮವಿಶ್ವಾಸಕ್ಕೆ ಯತ್ನಿಸುವುದು. ಈ ಹಾಡುಗಳು ತಾಳ-ಲಯ-ವಿನ್ಯಾಸದೊಡನೆ ರಾಗಬದ್ಧವಾಗಿರುವುದರಿಂದ ವಾದ್ಯವು ಹಾಡುವಾಗ ಅನಿವಾರ್ಯ. ಆದುದರಿಂದ ನೃಪತುಂಗಾದಿ ಕನ್ನಡ ಲಾಕ್ಷಣಿಕರು ಇಂತಪ ಹಾಡುಗಳನ್ನು ಬಾಜನೆಗಬ್ಬವೆಂದು ಕರೆದಿದ್ದಾರೆ.

ನಾಗವರ್ಮನು ಕಾವ್ಯಾವ ಲೋಕನದಲ್ಲಿ 'ಹಾಡು' ಎಂಬ ಶಬ್ದವನ್ನು ಇಂದಿನ 'ಭಾವಗೀತೆ' ಎಂಬರ್ಥದಲ್ಲಿಯೇ ಉಪಯೋಗಿಸಿದ್ದಾನೆ. ಅವನು ಹೇಳಿರುವ ಒಂದೇ ಪದ್ಯದ 'ಇಡುಕಂ ಗಬ್ಬಂ', ಐದು ಪದ್ಯಗಳುಳ್ಳ 'ಕುಳಕ', ಹನ್ನೆರಡು ಪದ್ಯಗಳ 'ಮೇಲ್ವಾಡು' ಹಾಗು ಹದಿನೈದರಿಂದ ಇಪ್ಪತ್ತೈದು ಪದ್ಯಗಳುಳ್ಳ 'ಪಾಡು' ಇವು ಕನ್ನಡ ವಿವಿಧ ಭಾವಗೀತೆಗಳೆಂದೇ ಹೇಳಬಹುದು. ಕನ್ನಡ ಉದ್ದಾಮ ಪಂಡಿತರು ಇವುಗಳನ್ನು ಅಲಕ್ಷಿಸಿದ್ದಾರೆ. ತಮ್ಮ ಜೀವನವೇ ಕೇವಲ ಜನಪದಕ್ಕಾಗಿ, ಎಂದರಿತ ಕನ್ನಡ ಅನುಭಾವಿಗಳು ಮಾತ್ರ ವಿವಿಧ ವಿಷಯಗಳನ್ನು ವಿವಿಧ ಭಾವಗಳೊಂದಿಗೆ ಈ ಎಲ್ಲ ಹಾಡು (ಭಾವಗೀತೆ)ಗಳಲ್ಲಿ ಹಾಡಿದ್ದಾರೆ.

ಭಾಜನೆ ಗಬ್ಬವು ಇಂತಹ ವಿವಿಧ ಹಾಡು (ಭಾವಗೀತೆ)ಗಳ ಸಂಕಲನ. ತುಂಬಿ ಬಂದ ಅನುಭವವು ಅಖಂಡ ಕಾವ್ಯಗಳಂತೆ ಮುಂದುವರಿಯದೆ ಹಲಕೆಲವು ಪದ್ಯಗಳಲ್ಲಿ ಬಲು ಚರುಕಾಗಿ ಎದ್ದು ಕಂಡು ಮನಂಬುಗುವಂತೆ ಹಾಡಾಗಿ ನಿಲ್ಲುವುದು. ಇಂತಹ ಬಿಡಿಹಾಡುಗಳು, ಅನುಭವ ಪದಗಳೆಂದೂ ತತ್ವ ಪದಗಳೆಂದೂ ಕರ್ನಾಟಕದಲ್ಲಿ ಇಂದು ಬಳಕೆಯಲ್ಲಿವೆ. ಹೆಚ್ಚಾಗಿ ಶಿವಶರಣರೂ, ದಾಸರೂ, ಸಾಧುಸತ್ಪುರುಷರೂ ಇಂತಹ ಹಾಡುಗಳಲ್ಲಿ ತಮ್ಮ ಅನುಭವವನ್ನು ಹಾಡಿದ್ದಾರೆ.

ಕಾಡಲೇಕೆ ನರರುಗಳನು ।
ಬೇಡಿ ಬಳಲಲೇಕೆ ಮನವೆ ।
ರೂಢಿಗೀಶನೆಮಗೆ ದೈವವಾಗಿ ಇರುತಿರೆ ‖ಪ‖

ಮೃಡನ ಪೂಜೆ ಮಾಡುವುದಕೆ ।
ಮಡುವಿನಗ್ಗವಣಿಗಳುಂಟು
ಅಡವಿಯಲ್ಲಿ ಕಾಡಪತ್ರಿ ಪುಷ್ಪವುಂಟೆಲೈ ‖
ಒಡಲಿಗನ್ನ ದುಡಿದರುಂಟು ।
ಗುಡಿಗಳುಂಟು ಶಯನಕೆಮಗೆ
ಒಡೆಯರುಗಳು ಬಿಸುಟಿದರುವೆ ಶೀತಕುಂಟೆಲೈ‖೧‖

ಬುದ್ಧಿಯನ್ನು ಪೇಳುವುದಕೆ ।
ಆದ್ಯರುಗಳ ವಚನವುಂಟು
ಉದ್ಧರಿಸುವೊಡೆಮಗೆ ಶಿವನ ಮಂತ್ರವುಂಟೆಲೈ ‖
ಅರ್ಧನಾರಿಯೆಂಬ ದೈವ ।
ನಿದ್ದಬಳಿಕ ಕರದೊಳೆಮಗೆ
ಹೊದ್ದಲೇಕೆ- ನರರ ಆಶೆ ಮಾಡೆನಕ್ಕಟಾ ‖೨‖

ಮಿಗಿಲು ಮನೆಗಳೇತಕೆಮಗೆ ।
ಅಗಲಲೇಕ-ನುಭಾವಿಗಳನು
ಜಗದೊಳೆಮಗೆ ಹಲವು ಕೋಟಲೆಗಳು ಏತಕೈ ‖

ಸೊಗಸು ಷಡಕ್ಷರಿಯ ಲಿಂಗ |
ಅಗಲದೆಮ್ಮ ಕರದೊಳಿರಲು
ಬೆಗಡುಗೊಳ್ಳಲೇಕೆಮನವೆ ನರರ ಮಾಳ್ಕೆಯಿಂ||೩||

—ಮುಪ್ಪಿನ ಷಡಕ್ಷರಾರ್ಯ

ವಿರತಿ ಹೊಂದಿದ ಯೋಗಿಗೆ ಲೌಕಿಕವು ಹಂಗು; ವಿಪತ್ತು, ಸಂಪತ್—ಸಮೃದ್ಧ—ವಿಶ್ವಸೃಷ್ಟಿಯಿರಲು ನರರುಗಳ ಕಾಡಿ–ಬೇಡಿ–ಬಳಲದೆ ದೈವವಾಗಿಹ ನಿಸರ್ಗ ದೊಡನೆ ಅವನು ಸಮರಸನಾಗುತ್ತಾನೆ. ಅದೇ ಅವನು ಇಹಲೋಕದಲ್ಲಿ ಭೋಗಿಸುವ ಮೋಕ್ಷಾನಂದ! ಈ ಹಂಗಿಲ್ಲದ ಅನುಭವವನ್ನು ಅವನು ತನ್ನ ಆತ್ಮಾನಂದ ದೊಂದಿಗೆ ಹಾಡಿದ್ದಾನೆ. ಲೋಕವನ್ನೇ ತ್ಯಜಿಸಿದ ಅವನಿಗೆ ಲೋಕವೇ ಪೂಜ್ಯ ಭಕ್ತಿಯಿಂದ ಬೆನ್ನುಹತ್ತಲು ಆ ಪರಮಾನಂದನು "ಜಾಗ್ರತ! ಜಾಗ್ರತ!!" ಎಂದು ತನ್ನ ಆತ್ಮಕ್ಕೆ ಎಚ್ಚರವಿತ್ತು ಜನತೆಯೊಡಗೂಡುವನು.

ಜೋಕೆ ಕಂಡ್ಯಾ | ಆತ್ಮಾ | ಜೋಕೆ ಕಂಡ್ಯಾ ||
ಕಾಕು ಸ್ತ್ರೀಯರ ಬಳಗ | ವನೇಕ ಬರುತಿಹುದಿಲ್ಲಿ||ಪ||

ಮರವೆಯ ಮನೆಯೊಳ | ಗರುವಿಲ್ಲದಂಗನೆಯರು
ಪರಿ ಪರಿ ನೆರೆದು ನಿನ್ನ | ಮರುಳು ಮಾಡುವರಯ್ಯ ||೧||

ವಿರತಿ ವಿರತಿಯೆಂದು | ನಿರುತಾಗಿ ನುಡಿವೆ ನೀನು
ವಿರತಿಯೆಂತೆಂಬ ದೃಷ್ಟ | ಅರಿತರೆ ತಿಳಿವುದಿಲ್ಲಿ ||೨||

ನೋಡದೆ ನುಡಿಸದೆ | ಮಾಡಬಹುದು ವಿರತಿ
ನಾಡರಿಯಲು ಮಹಂತ | ಪ್ರೌಢನೊಳು ರತಿಯಿರಲಿ||೩||

—ಬಾಲಲೀಲಾ ಮಹಾಂತ ಶಿವಯೋಗಿಗಳು

ಎಂದು ವಿರತಿಯ ಗುಟ್ಟನ್ನು ಅನುಭವಿಸಿ ಹಾಡಿ ದ್ದಾನೆ ಶಿವಯೋಗಿ! ಪ್ರಪಂಚದ ಜಂಜಡದಲ್ಲಿ ಅಜ್ಞಾ ನದ ಪರಿಬಂದ, ಮಾನವನಿಗೆ ಇದಾವುದೂ ತಿಳಿಯದು. ಅಂತೆಯೆ ಅವನು ಅಹಂಕಾರ ಭಾವದಲಿ ಮಮಕಾರದಿಂದ ಸಂಸಾರ ಸಂತೆಯನ್ನು ಸ್ಥಿರವೆಂದು ನಂಬಿ ಚಿಂತಾಕ್ರಾಂತ ನಾಗುವನು. ಚಿಂತೆ ಎಂಥವರಿಗೂ ಬಿಟ್ಟಲ್ಲವೆಂದು ತಿಳಿದು ಏನ ನಂಬಿ ಇರಬೇಕೆಂಬುದನ್ನು ಮಹಾನುಭಾವಿ ಗಳಿಂದ ಅರಿತು ಅನುಭವ ಮಾರ್ಗವನ್ನು ಹಿಡಿದು ಶಿವನೆಂದು ನಿಶ್ಚಿಂತನಾಗುವನು. ಅಂತಹ ಮಾನವರಿಗೆ ಶಿವಯೋಗಿಗಳ ಅನುಭವ–ದಿವ್ಯ ಸಂದೇಶವಿದೆ.

ಎಲೆ ಮಾನವನೆ ಕೇಳು ಸ್ಥಿರವೆಂದು ಸಂಸಾರ
ಮಲದೇಹವನು ಮೆಚ್ಚಿ ಕೆಡಬೇಡ ಬರಿದೆ ||ಪ||

ನಾರಿ ನಿನ್ನವಳಲ್ಲ ಹೇಮ ನಿನ್ನದು ಅಲ್ಲ
ಧೀರ ಪುತ್ರಾಪ್ತರುಗಳಾರಾರು ಅಲ್ಲ ||
ಸಾರಿ ಹೇಳುವೆನೀಗ ತಿಳಿಯದದು ಮುಂದೆ ನೀ
ಘೋರ ನರಕಾರ್ಣವದೆ ಬೀಳ್ವಾಗ ತಿಳಿವೆ ||೧||

ಕದನ ಕರ್ಕಶದಿಂದ ಜರಿದೆ ನೀನನ್ಯರನು
ಮದ ಸೊಕ್ಕಿದಾನೆಯೊಲ್ ಜರಿಯದಿರು ಮನುಜಾ ||
ಕುದಿದು ನಾ ಹೆಚ್ಚು ತಾ ಹೆಚ್ಚೆಂದು ಒಣವಾದ
ಪದವಿಗಿದು ತರವಲ್ಲ ಕುತ್ತಹದು ಮುಂದೆ ||೨||

ಗುರುಹಿರಿಯರನು ಕಂಡು ಕೋಣನಂದದಿ ಮಲೆತು
ಸಿರಬಾಗದಿರೆ ಮುಂದೆ ಘನ ಬಾಧೆ–ಬಡುವೆ ||
ಮೊರೆವ ಕಾಲನ ಕೈಗೆ ಸೆರೆಯ ಸಿಕ್ಕುವೆ ನೀನು
ಭರದೊಳು ಮಹಂತೇಶನಡಿವಿಡಿಯೊ ಮರುಳೆ ||೩||

—ಬಾಲಲೀಲಾ ಮಹಾಂತ ಶಿವಯೋಗಿಗಳು

ಇದನರಿತು ನಂಬಿ ಭಕ್ತಿಯಿಂದ ಸದ್ಧರ್ಮಿಯಾಗಿ ನಡೆದರೆ ಅವುದು ಅಸಾಧ್ಯ? ಇಂತಹ ಚೆನ್ನುಡಿಗಳನ್ನು ಹಾಡಿದ ಶಿವಯೋಗಿಯು ಪರಮ ಪೂಜ್ಯನಲ್ಲವೇ? ಅವನನ್ನು ಹೆತ್ತ ಕನ್ನಡಮ್ಮನು ಧನ್ಯಳಲ್ಲವೇ? ಇಂತಹ ಲೀಲಾ ಮೂರ್ತಿಗಳ ಮಹಿಮೆಯ ತಿಳಿಯುವುದೇ ದುಸ್ತರ ವಾದುದು. ಅದು ಅಳಳೆಯಲಾಗದ ಮಹಿಮಾಸಾಗರ!

ಶರಣರ ಮಹಿಮೆ ತಿಳಿಯುವದೇ ಶಿವ
ಪರಿಪರಿ ಪಾಪದ ನರಗುರಿಗಳಿಗೆ ||ಪ||

ದುರುಳರ ಸಂಗದಿ ಸರಸವನಾಡುತ
ಪರದ್ರವ್ಯವನಪಹರಿಸುವವರಿಗೆ ||೧||
ಹೆಣ್ಣಿನ ರೂಪವ ಕಣ್ಣಿಲಿ ಕಂಡು
ಸಣ್ಣಾಗುವ ಈ ನರಗುರಿಗಳಿಗೆ ||೨||
ಧರೆಯೊಳು ಮೆರೆಯುವ ಪರತರ ಅಥಣಿಯ
ವರ ಶಿವಯೋಗಿಯ ನೆನೆಯದವರಿಗೆ ||೩||

"ಶರಣರನು ಮರಣದಲ್ಲಿ ನೋಡು" ಎಂಬ ನುಡಿಯು ಸಿದ್ಧವಾದುದು. ಅದನ್ನು ಪರಿಹಾಸ್ಯ ಮಾಡ ಕೂಡದು. ಮಾಡಿದರೆ 'ಸುಣ್ಣದ ಕಲ್ಲು ಮಡುಲಲ್ಲಿ

ಕಟ್ಟಿಕೊಂಡು ಮಡುವ ಬಿದ್ದಂತೆ' ಅವರ ಸಿಡಿಮಿಡಿ ನುಡಿಗಳಲ್ಲಿಯೂ ಕಲ್ಯಾಣ ಹುದುಗಿದೆ, ಎಂಬುದನ್ನು ಅನೇಕರ ಜೀವನದಿಂದ ಅರಿಯಬಹುದು. ಅವರು ಜ್ಞಾನಪೂರ್ಣ ಜಗಜ್ಯೋತಿಗಳು. ಅಂತೆಯೆ ಶರಣರಿಗೆ ಮರಣವಿಲ್ಲ, ಇಂತು ಹರಿದು ಬಂದಿದೆ ಅನುಭವ ಸಾಹಿತ್ಯವು ಬಾಜನೆಗಬ್ಬಗಳಲ್ಲಿ !

**ಜನಪದ ಸಾಹಿತ್ಯ :**

ಅನುಭವ ಸಂಸ್ಕೃತಿಯ ಕುಲುಮೆಯಲ್ಲಿ ಪಡಿಯಚ್ಚಾಗಿ ಬಂದ ಕನ್ನಡಿಗರಿಗೆ ಅಂತಃಕರಣಾನುಭವದ ಎದೆಗಣ್ಣಿದೆ. ಆದುದರಿಂದ ಆ ಸಂಸ್ಕೃತಿಯು ಶಬ್ದ ಚಾಪಲ್ಯತೆಯ ಒಣವಾದವಾಗದೆ, ನುಡಿನಡೆಯಾದ ವಿಶ್ವಸಮಾಜವಾಗಿದೆ. ಅಲ್ಲಿ ಎಲ್ಲವೂ ಅನುಭವದ ಕುಲುಮೆಯಲ್ಲಿ ಹಾಯ್ದು ದಾಸೋಹಂಭಾವದ ನೀರುಂಡೇ ಬರಬೇಕು. ಹೀಗೆ ಬಂದ ಈ ಜನತೆಯ ಲೋಕಸಾಹಿತ್ಯವು ಪರಂಪರೆಯಿಂದ ಉಳಿದುಬಂದ ಜನತೆಯ ಅನುಭವರಾಶಿಯಾಗಿದೆ. ಅದರಲ್ಲಿ ಪ್ರಪಂಚ ಪಾರಮಾರ್ಥಾದಿಗಳ ಸಮಸ್ಯೆಗಳು ಬಲು ಸಹಜವಾಗಿ ಬಿಡಿಸಲ್ಪಟ್ಟು, ಜೀವನವು ಸುಖಮಯವಾದುದನ್ನು ಮನಗಾಣಬಹುದು. ನಿರಕ್ಷರ, ಜನಪದ ಮಹಾಕವಿ, ಶ್ರೀ ಸಾವಳಿಗೇಶನು ಹಾಡಿದ ನೂರೊಂದು ಶಿವಶರಣರ ಹಂತಿಯ ಹಾಡುಗಳಲ್ಲಿ ಪ್ರಪಂಚದ ಅನುಭವ ರಸಾಯನವು ಸೂಸಾಡುತಿರುವುದು.

ಹೊಲೆಯುಲಲ್ಲದೆ ಲೋಕ ತಲೆಯಲ್ಲಿ ಹುಟ್ಟುವದೆ
ಹೊಲೆಯು ಎಣಿಸಿದರೆ ಕುಲವುಂಟೆ | ಶಣರಿಗೆ
ಹೊಲಬಳಿದು ಬೇರೆ ಕುಲವುಂಟೆ ||೨೫||–ಹರಳಯ್ಯ–
ಗಂಡ ಭಕ್ತನು ಹಣತೆ ಹೆಂಡತಿಯು ಶಿವಬತ್ತಿ
ಉಂಡಬಾಳುವೆಯು ಹಣತೆಣ್ಣೆ | ಕಾಯಕವು
ಕಂಡ ಶಿವಬೆಳಕು ಜಗದೊಳಗೆ ||೩೧||-ಮಾದರ ಚೆನ್ನಯ್ಯ
ಮುತ್ತೈದಿ ನಿನ ಮರಣ ಎತ್ತಹೋದರು ಪೂಜೆ
ಕತ್ತೂರಿ ನಾತವಿದ್ದಂತೆ | ಜಗದೊಳಗೆ
ಉತ್ತಮರ ಮನಕೆ ಕಾಯಕವು ||೬೦||
—ಮಡಿವಾಳ ಮಾಚಯ್ಯ

ಕಾಯಕವೆ ಕೈಲಾಸ ಮಾಯೆ ಕೊಲ್ಲುವ ಕೆಲಸ
ಆಯು ಬೆಳಸುವದಕೆ ಸಾಹಸವು | ಜಗದೊಳಗೆ
ಹೇಯ ಸಂಸಾರ ನೀಗುದಕೆ||೩೩||-ಹೂಗಾರ ಮಾದಯ್ಯ

—ಸಂಗ್ರಾಹಕರು : ಡಾ. ಬಿ. ಎಸ್. ಗದ್ದಗಿಮಠ

ಇಲ್ಲಿ ಕುಲಹೊಲೆಗಳ ನೆಲೆಯು ತೂಕವಿದೆ; ಕಾಯಕದ ಮಹತಿಯೊಡನೆ ಜೀವನ ಸ್ವಾರಸ್ಯವಿದೆ; ಹೆಣ್ಣಿಗೆ ದಿವ್ಯತೆಯೊಡನೆ ಮುತ್ತೈದಿ ದಂಡೆಯ ಆಶೀರ್ವಾದವಿದೆ. ಹೀಗೆ ಅನುಭವವು ಪ್ರಪಂಚದಲ್ಲಿ ಬೆಂದ ಜೀವಿಗೆ ಅಮೃತವಾಗಿ ಉದ್ಧಾರ ಮಾಡಲು ನಿಂತಿದೆ.

ಮಾತಿಗೆ ಮಲಕಿಲ್ಲ ನೀತಿಗೆ ತೊಡಕಿಲ್ಲ
ಸಾಸಿಕಾಳಿಗೆ ಹುಳಕಿಲ್ಲ ! ಅತ್ತಿಮನಿ
ಸೋಸಿ ನಡೆದರು ಅರಿಕಿಲ್ಲ ||
ಕಾಣದ ಮಾತಿಗೆ ಬಂಡಗಂದೇನ
ಬಂಡ ಮಾಡನರ ಗೊಡಪೇನ | ತುಂಬಿದ
ಬಂಡಿ ನಡೆದ್ದಂಗ ನಡೆದೇನ ||
ತನ್ನಂತೆ ನೋಡಿದರ ಭಿನ್ನಭೇದವನಿಲ್ಲ
ತನ್ನ ಹೊಟ್ಟಕಯು ಸಿಸುವಂತೆ | ನೋಡಿದರ
ಕಣ್ಣ ಮುಂದೈತೆ ಕೈಲಾಸ ||
—ಜನತಾ ಗೀತೆಗಳು ಪು. ೫೩.
ಸಂಗ್ರಾಹಕರು : ಡಾ. ಗದ್ದಿಗಿಮಠ

ಎಂಬ ತಿಳಿನುಡಿಗಳು ಬಾಳನಲ್ಲಿದ್ದು ಪ್ರಪಂಚವನ್ನು ಗೆದ್ದ ಅನುಭಾವಿಯ ಮಾರ್ಗದರ್ಶನವು ಅದು ಎಲ್ಲರಿಗೂ ಬೇಕಾದುದು. ಪ್ರಪಂಚದಲ್ಲಿ ಇದನ್ನರಿತು ಕೊಂಡ ಗಂಡು ಹೆಣ್ಣಿನ ಬಾಳು, ತುಂಬಿದ ಬಂಡಿ ನಡೆದಂತೆ ! ಇಂತಹ ಬಾಳನ್ನುಂಡ ಹೆಣ್ಣು ತವರ ಮನೆಯನ್ನು ನೆನೆದರೂ ಗಂಡನಿಗೆ ನೆಮ್ಮದಿಯಾಗಿ ಹೋಗುವಳು. 'ತಾಯಿಗಿಂತ ಬಂಧುವಿಲ್ಲ' ಎಂಬ ನಾಣ್ನುಡಿಯಿದ್ದರೂ ಹೆಣ್ಣಾಗಿ, ಹಣ್ಣಾಗಿ ಜೀವನ ಸಾಗಿಸುವ ಅವಳ ಹಾದಿ ಗಮನಾರ್ಹವಾದುದು. ಸಂಸಾರ–ಬಂಧನದಲ್ಲಿ ಸಿಲುಕಿ ಚಿಂತೆಯಿಂದ ವ್ಯಾಕುಲವಾದ ಅವಳ ಮನಸ್ಸು ನಿಶ್ಚಿಂತವಾಗಲೂ ಹವಣಿಸಿದೆ.

ಚಿಂತಿ ಚಿಂತ್ಯಾಗ ಬಂದೆ ಚಿಂತ್ಯಾಗ ನಾನಿದ್ದೆ
ಚಿಂತ್ಯಾಗ ಕಳವೆ ಅನುಗಾಲ | ಶಿವರಾಯ
ನಿಶ್ಚಿಂತನಾದೆ ನಿನ ನೆನೆದು ||

ಎಂದು ಆ ಪರಮಾತ್ಮನನ್ನು ಸ್ಮರಿಸಿ ನೋಕ್ಷಹೊಂದುವಳು.

ಕನ್ನಡ ಪ್ರಪಂಚ ಹುಟ್ಟಿದಂದಿನಿಂದ ಬಾಳನ ರಸವಿರಸಾದಿಗಳನ್ನೀಂಟಿದ ಹೆಣ್ಣು ಅವೆರಡರ ಸಮರಸವೇ

ಜೀವನವೆಂದು ಅರಿತು, ಅನುಭವ ಮಾರ್ಗದಲ್ಲಿ ತನ್ನ ಜೀವನವನ್ನು ಸಾರ್ಥಕ ಮಾಡಿಕೊಂಡಿದೆ. ಅದನ್ನು ತೇದುಂಡ ಹೆಣ್ಣು, ಅದರ ಮಹತಿಯನ್ನು ಮನಗಂಡು, ಪೀಳಿಗೆಯು ಉದ್ಧಾರವಾಗಲೆಂದು ಹಾಡಿ ಕನ್ನಡ ಪ್ರಪಂಚಕ್ಕೆ ಕಲ್ಯಾಣ ಮಾಡಿದೆ.

ಗೆಳತೀ ಹನಿಗೂಡಿದರ್ಹಳ್ಳ ||ಪ||
ಹನಿಹನಿಗೂಡಿದರ್ಹಳ್ಳ ತೆನಿತೆನಿಗೂಡಿದರ ರಾಸಿ
ಮನಕಮನಗೂಡಿದರ ಮನಿಮಾರಗೆಳತೀ ||ಅ.ಪ||

ಹರಿಯ ಹೊತ್ತಿಲೆದ್ದು ಉತ್ತನಾವಗ ಶರಣ
ಮತ್ತೊಂದು ಶರಣ ಸುರುವೀಗೆ |ಗೆ| ನಾಮಾಡಿ
ಹೊಕ್ಕೀನಿ ಮನಿಯ ದಗವಕ|ಗೆಹಾ|
ಕಲ್ಲೀಗ ಮುಕ್ಕಾಕಿ ಬಟ್ಟಿದರ ನೆನಪೇವ
ಸೊಲ್ಲ ಕೇಳಾಕ ಶಿವಮಂದಿ·ಗೆಮ್ಯಾಗಿರುವ
ಮುಕ್ಕಣ್ಣ ಮನಸ ನೋಡಾಕ|ಗೆ||೩||
ಸಂಸಾರವೆಂಬೂಮಿ ಸಾಗರ ಹೊಳಿಯಷ್ಟ
ಈಸುಬಲ್ಲವಗ ಎದೆಯುದ್ದ |ಗೆ|ಗಿಳರಾಮ
ಓದಬಲ್ಲವಗ ಕೈಲಾಸ|ಗೆ||೩||
ಸತಿಪತಿ ಇದ್ದರ ಹಿತವಂತರಜೀಕ
ಕುಂಬಾರ್ಡುಳದಂಗ ಸಂಸಾರ|ಗೆ|ಸಾಗಿದರ
ಮುಂದೈತಿ ತಂಗಿ ಕೈಲಾಸ|ಗೆ||೪||
ಹೆಣ್ಣೀನ ಈ ಜಲುಮ ಸಣ್ಣ ಮಾಡಲಿ ಬೇಕ
ಸುಣ್ಣಾರಳ ಮಾಡಿ ಸುಡಬೇಕ|ಗೆ|ಈ ಜಸುಮ
ಮಣ್ಣಾಡಿ ಮತೆರಗೆದಿಬೇಕ|ಗೆ||೫||
ಸಂಸಾರ ದಂದುಗ ಹಿಂಗದೊ ಶಿವರಾಯ
ಹಿಂಗುದಕ ಹಾದಿ ಶರಣರದ|ಗೆ|ತಿಳಕೊಂಡು
ಗೆದಿಬೇಕ ಇದ್ದು ಸಂಸಾರ|ಗೆ||೬|| –ಜನತಾ ಗೀ. ಪು.೭೬

ಇದೇ ನಮ್ಮ ಪ್ರಪಂಚದರ್ಶನ. ಕನ್ನಡಿಗರು ಕಂಡುಂಡ ಬಾಳಿನ ತಿಳಿಬೆಳಕು. ಕುಟುಂಬ–ಸಮಾಜ–ರಾಷ್ಟ್ರಾದಿಗಳ ತಳಕಟ್ಟು! ಇದರಲ್ಲಿ ಕಂಡುಂಡ ಅನುಭವವು ಹಪ್ಪುಗಟ್ಟಿ ನಿಂತಿದೆ. ಇಂತಹ ಅನುಭವ ಪದ್ಯಗಳು ಇನ್ನಿತರ ಸಾಹಿತ್ಯದಲ್ಲಿ ವಿರಳವೆಂದೇ ಹೇಳಬಹುದು. ಹೀಗೆ ಅನುಭವ ಸಾಹಿತ್ಯವು ಜನಪದ ಸಾಹಿತ್ಯದಲ್ಲಿಯೂ ಹಾಸುಹೊಕ್ಕಾಗಿ ಮನೆಮಾತಾಗಿದೆ. ಆದುದರಿಂದ ಸಮಯ ಬಂದಾಗ, ಹಳ್ಳಿಯ ಹೆಣ್ಣೂ ಮಾತಿಗೊಂದು ಅನುಭವ ನುಡಿದು ಮಾತಿನ ಮೇಲ್ಮೆಯನ್ನು ತೋರಿಸುವಳಲ್ಲದೆ, ತಾನು ಬಂದ, ಅನುಭವ ಪರಂಪರೆಯನ್ನೂ ವಿಶದಗೊಳಿಸದಿರಳು.

### ಅನುಭವ ಪದಗಳ ಛಂದ ಬಂಧ:

ಕನ್ನಡ ಅನುಭವ ಪದಗಳು ಕನ್ನಡ ಅನುಭಾವಿಗಳ ಹಾಡು(ಭಾವಗೀತೆ)ಗಳು, ಅವೆಲ್ಲವುಗಳೂ ಕರ್ನಾಟಕ ವಿಷಯ ಜಾತಿಯ ಮಟ್ಟುಗಳ ಅಚ್ಚುಗನ್ನಡ ಛಂದದಲ್ಲಿಯೇ ಬಂದಿವೆ. ಇದೇ ಕನ್ನಡ ಅಂಶಬಂಧ. ಈ ಮಟ್ಟುಗಳು ಕರ್ನಾಟಕಕ್ಕೆ ವಿಶಿಷ್ಟವಾದವುಗಳೆಂದು ಲಾಕ್ಷಣಿಕರು ಒಪ್ಪಿಕೊಂಡಿದ್ದಾರೆ. ಏಳೆ, ತ್ರಿಪದಿ ಚೌಪದಿ, ಷಟ್ಪದಿ, ಅಕ್ಕರ, ಉತ್ಸಾಹ ಮೊದಲಾದ ಹತ್ತು ಜಾತಿಗಳನ್ನು ನಾಗವರ್ಮನು ತನ್ನ ಛಂದೋಂಬುಧಿ, ಪಂಚಮಾಶ್ವಾಸದಲ್ಲಿ ಹೇಳಿದ್ದಾನೆ. ಇವೆಲ್ಲವುಗಳಿಗೆ ಮೂಲವು 'ತ್ರಿಪದಿ' ಕನ್ನಡ ಛಂದದಲ್ಲಿ ತ್ರಿಪದಿಯು ಹಿಗ್ಗಿ, ಹರವಿ, ಅನೇಕ ರೂಪ ತಾಳಿದೆ. ಆದುದರಿಂದ ಅದರ ಮಟ್ಟು ಬಹಳ ಮಹತ್ವದುದಾಗಿದೆ.

ತ್ರಿಪದಿಯು ಕನ್ನಡ ಛಂದಸ್ಸಿಗೆ ಓಂಕಾರ! ಜನಪದ ಸಾಹಿತ್ಯದ ಬೀಸುವ ಹಾಡಿನಿಂದ ಕನ್ನಡ ವರ್ಣಕಗಳಲ್ಲಿ ನೀನಾದವಾಗಿ ಝೇಂಕರಿಸುವ ಷಟ್ಪದಿಯ ವರೆಗೆ ಎಲ್ಲ ಛಂದಗಳಿಗೂ ತ್ರಿಪದಿಯೇ ತಳಹದಿ. ತ್ರಿಪದಿಯಿಂದ ಸಾಂಗತ್ಯ, ಪಿರಿಯಕ್ಕರ, ಮೂಲ ಷಟ್ಪದಿ, ಮಾತ್ರಾಗಣ ಷಟ್ಪದಿ, ಸೀಸ ಮೊದಲಾದ ಮಟ್ಟುಗಳು ಕನ್ನಡ ಅನುಭವ ಸಾಹಿತ್ಯದ ಒಳನಾಡಿಯಾಗಿ ಆ ಕಾವ್ಯಪ್ರಪಂಚದ ತುಂಬೆಲ್ಲ ಹರಿದಾಡಿವೆ. ಈ ಎಲ್ಲ ವೃತ್ತಗಳು ಹಾಡು(ಭಾವಗೀತೆ)ಗಳಿಗೆ ಒಪ್ಪುವ ಛಂದೋಬಂಧಗಳಾಗಿರುವುದರಿಂದ ಶಿವಶರಣರು ಕ್ರಿ.ಶ.೧೨ನೆಯ ಶತಮಾನದಿಂದ ಇವುಗಳನ್ನು ತಮ್ಮ ಅನುಭವವನ್ನು ಹಾಡಲು ಬಳಸಿಕೊಂಡಿದ್ದಾರೆ.

ತ್ರಿಪದಿ೧ (೧. ಡಾ.ಕರ್ಕಿ ಅವರ ಕನ್ನಡ ಛಂದೋವಿಕಾಸ. ಗತಿ ೫. ತ್ರಿಪದಿ ನೋಡಿರಿ·) ಯು ಕನ್ನಡ ಜನಾಂಗದ ಕಂಠಸ್ವರವಾಗಿ ಹುಟ್ಟಿ ಕನ್ನಡ ಜನಪದ ಕಾವ್ಯದ ಜೀವಾಳವಾಗಿ ಕಲ್ಬರೆಹಗಳಲ್ಲಿಯೂ ಕಾಣಿಸಿಕೊಂಡಿದೆ.೨ (೨. ಕಪ್ಪೆಯ ಅರಭಟ್ಟನ, ಬಾದಾಮಿಯ ಶಿಲಾಶಾಸನ ಕ್ರಿ.ಶ.ಸು.೭೦೦). ಹೀಗೆ ಅಂಶಗಣ ಬಂಧದಲ್ಲಿ ಬಂದ ತ್ರಿಪದಿಯು ಕವಿ ಪಂಪ–ಪೊನ್ನ ಮೊದಲಾದ

ಕವಿಗಳ ಕಾವ್ಯಗಳಲ್ಲಿ, ಒಡೆದುಕಾಣುವ ಹೆಚ್ಚುಕಡಿಮೆ ಗಳಿಲ್ಲದೆ ಕಾಣಿಸಿಕೊಳ್ಳುತ್ತದೆ. ಈ ಅಂಶಗಣವು ಮುಂದೆ ಎಣಿಕೆಯಾಗಿ ಮಾತ್ರಾಗಣಕ್ಕೆ ತಿರುಗಲು ನೊದಲು ಮಾಡಿದುದು. ಕ್ರಿ.ಶ ೧೩ನೆಯ ಶತಮಾನದಲ್ಲಿ, ಬಸವಾದಿ ಪ್ರಮಥರ ಜಾಗ್ರತ ಕಾಲದಲ್ಲಿ! ಇದನ್ನು ನಾವು ಮಹಾದೇವಿಯಕ್ಕನ 'ಯೋಗಾಂಗ ತ್ರಿವಿಧಿ' ಯಲ್ಲಿಯೂ ಕಾಣಬಹುದಾಗಿದೆ. ಕ್ರಿ. ಶ. ೧೫ನೆಯ ಶತಮಾನದಲ್ಲಿ ತ್ರಿವಿಧಿಯು ಸಂಪೂರ್ಣ ಮಾತ್ರಾ ಗಣಕ್ಕೆಳಿದು ನಿಜಗುಣ ಶಿವಯೋಗಿಗಳ 'ಅನುಭವ ಸಾರ' ದಲ್ಲಿಯೂ 'ಪುರಾತರ ತ್ರಿವಿಧಿ'ಯಲ್ಲಿಯೂ ತುಂಬಿ ಬಂದಿದೆ. ಸರ್ವಜ್ಞನ ವಚನಗಳಲ್ಲಿ ಅದು ಜನಪ್ರೀತ ವಾಗಿ, ಲೋಕಸಾಹಿತ್ಯದ ಜೀವಾಳವಾಗಿ ಲೋಕಪ್ರಿಯ ವಾಯಿತು. ಇಂದು ಉಪಲಬ್ಧವಿರುವ ಜನಪದ ಸಾಹಿತ್ಯವು ನೂರಕ್ಕೆ ತೊಂಬತ್ತರಷ್ಟು ತ್ರಿವಿಧಿಯಲ್ಲಿಯೇ ಇದೆ.

**ಮಂಗಲದ ನೋಟ:**

ಅನುಭವ ಸಾಹಿತ್ಯದಲ್ಲಿ ಪಲ್ಲವಿಯಿಲ್ಲದ ಹಾಡುಗಳೇ ಇಲ್ಲ. ಅದು ಬಿಡಿಹಾಡುಗಳ ರಾಶಿ ರಾಶಿ; ಹಾಡುಗಬ್ಬ ದಲ್ಲಿ ಸೊಲ್ಲಿಗೆ ಸಲಿಗೆ, ರಾಗಕ್ಕೆ ಪ್ರಾಧಾನ್ಯವಿದ್ದರೆ ಅನುಭವ ಸಾಹಿತ್ಯದಲ್ಲಿ ಹಾಡಿಗೆ ಪಲ್ಲವಿಯು ಮಂಗಲ ತಿಲಕ! ಅದು ಪ್ರತಿ ಹಾಡಿನಲ್ಲಿಯೂ ಔಚಿತ್ಯ ಪೂರಕ ವಾಗಿ, ಸಂದರ್ಭಕ್ಕೆ ವೈವಿಧ್ಯವಾಗಿ ಬೆರೆತುಕೊಳ್ಳುವುದು. ಅದು ಪ್ರತಿ ಪದ್ಯಕ್ಕೂ ಪುನರುಕ್ತವಾಗದಿದ್ದರೆ, ಗೇಯದ ಲಯವಿನ್ಯಾಸಕ್ಕೆ ಅಪಸ್ವರವಾಗುವುದು. ಮಾನವನ ಸಕಲ ಭಾವಗಳಲ್ಲಿ ಅನುಭವವು ಒಡಮೂಡುವುದರಿಂದ ಅನುಭವ ಸಾಹಿತ್ಯವು ಮಾನಸ ಶಾಸ್ತ್ರದ ಮನೋನಿಲಾಸ! ಅದರಲ್ಲಿ ದೇವಮಾನವ ಸಮರಸ ಜಮತ್ಕಾರದ ಮನೋವ್ಯಾಪಾರದ ಪರಿಜ್ಞಾನವನ್ನು ತುಂಬ ಕಾಣಬಹುದು. ಅದು ಸಾಹಿತ್ಯಕನಿಗೆ ಕಾವ್ಯ ವಿಲಾಸವಾದರೆ, ತತ್ವಜ್ಞಾನಿಗೆ ಜ್ಞಾನಪ್ರಕಾಶ; ಶಾಸ್ತ್ರಜ್ಞರಿಗೆ ನಿವಿಧ ಶಾಸ್ತ್ರಗಳ ತರ್ಕ ಪ್ರಪಂಚ; ಸಮುಯವಾದಿಗಳಿಗೆ ಸಕಲ ಸಮುಯಾದಿಗಳ ಸತ್ವಸಾರ; ಸಾಮಾನ್ಯರಿಗೆ ಕರುಣಾಳು ಬೆಳಕು. ಆದುದರಿಂದ ಅದು ಎಲ್ಲರಿಗೂ ಬೇಕಾದ ಸಾಹಿತ್ಯವಾಗಿದೆ.

— ಶುಭಂ ಮಂಗಲಂ —

# ಶಿಕ್ಷಣ—ನಗು

**ಲೇಖಕರು: ಶ್ರೀ ಎನ್. ವಾಯ್. ಕಾಟವಾ,** ಕ.ಗಂ.ಮ.ಶಾಲಾ, ಕೆರಕಲಮಟ್ಟಿ

ಜೀವನದಲ್ಲಿ ನಗುವಿಗೆ ಇರುವಂತಹ ಸ್ಥಾನ ಮತ್ತು ಮರ್ಯಾದೆ ಮತ್ತಾವದಕ್ಕೂ ಇರುವದಿಲ್ಲ. "ನಕ್ಕವನೇ ಗೆದ್ದವನು" ಎಂಬಂತೆ ಈ ಜೀವನ ಸಾಗರವನ್ನು ಗೆಲ್ಲ ಬೇಕಾದರೆ, ನಗುವೆಂಬ ನಾವು (ಚುಕ್ಕಾಣಿ) ಮುಖ್ಯ ವಾದದ್ದು. ಯಾವನ ವದನವು ಸದಾ ನಗೆಯಿಂದ, ಹಸನ್ಮುಖದಿಂದ ಶೋಭೆಗೊಳ್ಳುತ್ತಿರುವದೋ ಅವನ ಗುಣಗಾನವನ್ನು ಜಗತ್ತು ಸದಾ ಹೊಗಳಿ ಕೊಂಡಾಡುತ್ತದೆ; ಹಾಡಿ ಹರಸುತ್ತದೆ.

ನೀಗಲಾರದಂತಹ, ಮಿಗಿಲಾದ ಎಷ್ಟೋ ಕಜ್ಜೆಗಳು ನಗುವೆಂಬ ದೇವತೆಯ ಸಹಾಯದಿಂದ ಸರಳವಾಗಿ ಕಾರ್ಯಗತವಾಗುತ್ತವೆ. ಪೂಜ್ಯ ಗಾಂಧೀಜಿಯವರು ಭಾರತವನ್ನು ಪರಕೀಯರ ದಾಸ್ಯಶೃಂಖಲೆಯಿಂದ ಮುಕ್ತ ಮಾಡಿದುದು ನಗುವೆಂಬ ಅಸ್ತ್ರದಿಂದಲ್ಲವೆ! ಅವರ ನಗು ಮುಖಕ್ಕೆ, ಅವರ ತಾತ್ಮೈಯ ಮೂರ್ತಿಗೆ ನತಮಸ್ತಕರಾಗಿ, ಬ್ರಿಟೀಶರು ಭಾರತ ಮಾತೆಯನ್ನು ನಮಗೆ ಬಿಟ್ಟುಕೊಡ ಲಿಲ್ಲವೆ? ನಮ್ಮ ಭಾರತದ ಮುಖ್ಯ ಸಚಿವರು ಇಡೀ ಜಗತ್ತಿನಲ್ಲಿ ಎಲ್ಲರಿಂದಲೂ ಮರ್ಯಾದಿತರಾಗುತ್ತಿರುವದು ಇದೇ ನಗುವೆಂಬ ದೇವತೆಯ ಸಹಾಯದಿಂದ.

ನಕ್ಕು ಹೇಳಿದ ಮಾತನ್ನು ಎಲ್ಲರೂ ಅಕ್ಕರೆಯಿಂದ, ಭಕ್ತಿಯಿಂದ ಒಪ್ಪಿಕೊಳ್ಳುವರು. ಸಿಟ್ಟಿನಿಂದ ಹೇಳಿದ ನುಡಿಯನ್ನು, ಸಟೆ ಇದ್ದರೂ ಸಹ ಸೆಟೆದು ಬಿಟ್ಟು ಹೋಗುವರು. ಆದ್ದರಿಂದ ಶಿಕ್ಷಣ ರಂಗದಲ್ಲಿ ಶಿಕ್ಷಕನು ಈ ನಗುವನ್ನು ತನ್ನದನ್ನಾಗಿ ಮಾಡಿಕೊಂಡಿದ್ದಾದರೆ, ಅವನು ಸದಾ ಗೆಲುವೆಂಬ ದೇವತೆಯ ಸಹಾಯವನ್ನು ಪಡೆಯುವನು. ಎಲ್ಲ ಚಿಕ್ಕನುಕ್ಕೆಳು ಅಕ್ಕರೆಯಿಂದ ಅವನ ಮುತ್ತಿನ ಮಾತುಗಳನ್ನು ಸತ್ಕರಿಸುವರು.

ಈಗಿನ ವಿದ್ಯಾರ್ಥಿಗಳು, "ಹೊಸ ಶಿಕ್ಷಕನು ಬಂದಿರುವನು" ಎಂದು ಕೇಳಿದ ಕೂಡಲೆ ಪೆದರಿಕೊಂಡು

ಶಾಲೆಗೆ ಬರುವದೇ ಇಲ್ಲ. ಇದಕ್ಕೆ ಕಾರಣವೆಂದರೆ ಅವನ ಮುಖಲಕ್ಷಣವೇ ಮುಖ್ಯ. ಮಗುಗಳಿಗೆ ಹೊಸಬರ ಲಕ್ಷಣ ಹೊಸದೆಂದು ಕಾಣಿಸುವದು. ಅವರಿಗೆ ಅದು ಪರಿಚಿತವಾದ ಮೇಲೆ ತಾವೇ ಸಾಲೆಗೆ ಬರಹತ್ತುವರು. ಪಟ್ಟಣವಾಸಿ ಶಿಕ್ಷಕನು ನೊವಲ್ಟಾರಿಗೆ ಹಳ್ಳಿಯಲ್ಲಿ ಕಾಲಿಟ್ಟೊಡನೆ ವಿದ್ಯಾರ್ಥಿಗಳು ಹೆದರುವರು. ಅದ್ದರಿಂದ ಹೊಸತನದಲ್ಲಿ, ಅಪರಿಚಿತ ಮಗುಗಳ ಮಧ್ಯದಲ್ಲಿ ನಗುವು ಅಪಾರವಾದ ಸಹಾಯ ಮಾಡುವದು. ಹೊಸ ಶಿಕ್ಷಕನು ಹೊಸ ಮಕ್ಕಳ ಮೇಲೆ ನಗುವಿನ ಬಾಣವನ್ನು ಹೂಡಿ ಅವರನ್ನು ತನ್ನ ಸಹಪಾಠಿಗಳಂತೆ ಕಾಣಬಲ್ಲನು. ಅವರು ಹಸಿಮಣ್ಣಿನ ಮುದ್ದೆಯು ಮೊಂಡೆಗಳಂತೆ ಇರುವದಕ್ಕಿಂದ ಮೊದಲೇ ನಾವು ತಿದ್ದಿ ತೀಡಿ ಸುಂದರ ಮೂರ್ತಿಗಳನ್ನಾಗಿ ಮಾರ್ಪಡಿಸಬೇಕು. ಇದನ್ನೆಲ್ಲ ಬಿಟ್ಟು ಶಿಕ್ಷಕನು ಭಾರವನ್ನು ತಮ್ಮಲ್ಲಿ ಆಶ್ರಯಿಸಿಕೊಂಡು ಬಿದ್ದೆಮುಂದು ಮಡಿಯುವದೇ ಮೇಲು.

ವರ್ಗದಲ್ಲಿ ನಡತೆ ಅಭ್ಯಾಸ ಮೇಳೈಸುವದಕ್ಕಿಂದ ಮಗುಗಳು ಪಾಠಕೇಳುವದರಲ್ಲಿ ಬೇಸರವಿದ್ದುಕೊಳ್ಳುವದು ಸ್ವಾಭಾವಿಕವಾದಿದ್ದು. ಆ ಸಮಯದಲ್ಲಿ ಮಗುಗಳನ್ನು ನಗಿಸುವಂತಹ ಕೆಲವು ಕತೆ ಕವನಗಳು ಶಿಕ್ಷಕನಿಗೆ ಸಹಾಯ ನೀಡುವವು; ಮಕ್ಕಳನ್ನು ಮುತ್ತುವ್ವ ವಿದ್ಯೆಯ ಕಡೆಗೆ, ಆ ಪಾಠದ ಕಡೆಗೆ ಆಕರ್ಷಿಸಿಕೊಳ್ಳುವವು.

ಒಂದು ದಿವಸ ನಾನೇ ವಾರವಿದ್ಯಾರ್ಥಿಗಳಿಗೆ ಇಂಗ್ಲಿಷ ವಿಷಯ ಹೇಳಲು ಹೋಗಿದ್ದೆನು. ನಿಯ್ಯಾರ್ಥಿಗಳಿಗೆ ಇಂಗ್ಲಿಷ ವಿಷಯ ಹೊಸದು, ಅವರಿಗೆ ನಾನೂ ಹೊಸಬನು, ಹೊಸ ಇಂಗ್ಲಿಷ ವಿಷಯವೂ ವಿಷವಾಗಿದ್ದಿತು ಕೆಲವರಿಗೆ. ಅಂದು ನನಗೆ ಹೆದರಿಯೋ ಅಥವಾ ಇಂಗ್ಲಿಷ ವಿಷಯಕ್ಕೆ ಹೆದರಿಯೋ ಬಹಳ ಕಡಿಮೆ ವಿದ್ಯಾರ್ಥಿಗಳು ಬಂದಿದ್ದರು. ನಾಲ್ಕತ್ತು ವಿದ್ಯಾರ್ಥಿಗಳಲ್ಲಿ ಕೇವಲ ಹತ್ತು ವಿದ್ಯಾರ್ಥಿಗಳು ಮಾತ್ರ ಬಂದಿದ್ದರು. ವಿದ್ಯಾರ್ಥಿಗಳಿಂದ ಕಾರಣವೂ ವಿದಿತವಾಯಿತು. ಅಂದಿನಿಂದ ನನ್ನ ಸ್ವಭಾವವನ್ನು ಮಾರ್ಪಡಿಸಬೇಕಾಯಿತು. ಅವರು ಸಾಲೆಗೆ ಬಾರದ ಕಾರಣವನ್ನು ಅರಿತು; ನನ್ನ ನಗೆಯಿಲ್ಲದ ವದನದ ಮೇಲೆ ಒಮ್ಮಿಂದೊಮ್ಮೆಲೆ ನಗೆಗಳ ಬುಗ್ಗೆಗಳು ಎದ್ದುವು. ನಗುವಿನ ಮೊಗದಲ್ಲಿಯೇ ಮುತ್ತಿನಂತಹ ಮೂರು ನಗಿಸುವ ಹಾಸ್ಯಮಯವಾದ ಕತೆಗಳನ್ನು ಹೇಳಿಕಳಿದೆನು ಆ ಸಮಯ. ಅಂತೂ ಅಂದು ಆನಂದದಿಂದ, ನಗುವಿನಿಂದ, ಹಾಸ್ಯವಿನೋದಗಳಿಂದ ಕಳೆಯಿತು; ಆದರೆ ಮರುದಿವಸ ಸಾಲೆಯ ತುಂಬ, ವರ್ಗದ ತುಂಬ ವಿದ್ಯಾರ್ಥಿಗಳು! ನಾನು ವರ್ಗ ಒಳಗೆ ಅಡಿಯನ್ನಿಡುತ್ತಲೆ ಅವರ ಮುದ್ದು ವದನಗಳ ಮೇಲೆ ಸದ್ದಿಲ್ಲದೆ ನಗೆಯು ಅಲೆದಾಡುತ್ತ ನನ್ನನ್ನು ಸ್ವಾಗತಿಸಿತು. ಪಾಠವು ನಗುವಿನಿಂದ ಪ್ರಾರಂಭವಾಗಿ ನಗುವಿನಿಂದಲೇ ಮುಕ್ತಾಯವಾಯಿತು. ಕೆಲವು ದಿನಗಳಲ್ಲಿ ವರ್ಗದ ಎಲ್ಲ ಮಗುಗಳು ನನ್ನವರಾದರು. ನಾನು ಹೇಳಿದ ಗೃಹಪಾಠವನ್ನು ಮರೆಯದಲೆ ಮೊದಲುಮಾಡಿ ತರತೊಡಗಿದರು. ವಿಷವಾದ ಇಂಗ್ಲಿಷ ವಿಷಯ ಈಗ ಅಮೃತವಾಗಿದೆ ಅವರಿಗೆ. ಹೀಗಿದೆ ನಗುವಿನ ಸಹಾಯ, ನಗುವಿನ ಮಹತ್ವ.

ಶಿಕ್ಷಣ ರಂಗದಲ್ಲಿ ಶಿಕ್ಷಕರೆಲ್ಲ ನಗುವನ್ನು ತಮ್ಮ ವದನವನ್ನಾಗಿ ಮಾಡಿಕೊಂಡರೆ, ಶಾಲೆಯ ಮಗುಗಳನ್ನೂ ತಮ್ಮವನನ್ನಾಗಿ ಮಾಡಿಕೊಳ್ಳಲು ಸುಲಭಸಾಧ್ಯವಾಗುತ್ತದೆ. ಶಿಕ್ಷಕರೆ ರಾಷ್ಟ್ರದ ನಿಜವಾದ ನಿರ್ಮಾತೃಗಳು ಇರುವಾಗ ಅವರ ಮುಖಭಾವ ಸದಾ ಹಸನ್ಮುಖವಾಗಿರಬೇಕು. ಶಿಕ್ಷಕನು ಸಿಟ್ಟಿನ ಸ್ವಭಾವದವನಿದ್ದರೆ ಅವನು ಕಲಿಸಿದ ವಿದ್ಯೆ ಚಿಕ್ಕ ಸಸಿಗಳ ಮೇಲೆ ಜೋರಾಗಿ ಮಳೆ ಬಿದ್ದಂತೆ ಯಾವ ರೀತಿ ಚಿಕ್ಕ ಸಸಿಗಳಿಗೆ ತುಂತುರು ಹನಿಗಳಿಂದ ನೀರುಣ್ಣಿಸಿ ದೊಡ್ಡವುಗಳನ್ನಾಗಿ ಮಾಡುವೆವೋ ಅದೇ ರೀತಿ ಚಿಕ್ಕ ಮಕ್ಕಳಿಗೆ ಮಂದಹಾಸದಿಂದ ಕಲಿಸುತ್ತ ಹೋದರೆ ತೀವ್ರ ಕಲಿತುಕೊಳ್ಳುವರು. ಚಿಕ್ಕ ಮಕ್ಕಳ ಬುದ್ಧಿ, ಹೃದಯ ಸ್ವಚ್ಛವಾಗಿರುತ್ತದೆ. ಅವರು ಮೇಣದಂತೆ ಮೃದುವಾಗಿರುತ್ತಾರೆ. ಅವರಲ್ಲಿ ವಿಶ್ವಾಸ ಸ್ಫೂರ್ತಿ, ಹುಮ್ಮಸ್ಸು ಹುಟ್ಟಿಸಬೇಕಾದರೆ, ಎಲ್ಲವನ್ನು ನಗುಮುಖದಿಂದ ಅವರಿಗೆ ಒಗ್ಗುವಂತೆ ಹೇಳಿದರೆ ಮಾತ್ರ ಅದು ಸಾಧ್ಯ!

ಸದಾ ಹಸನ್ಮುಖಿಗಳಾದಲ್ಲಿ ಅವರಲ್ಲಿ ಸಹಕಾರ, ವಿನಯತೆ, ತಾಳ್ಮೆ ಮತ್ತು ಸಹನಶೀಲತೆ ತಾವಾಗಿಯೇ ಮನೆಮಾಡಿಕೊಳ್ಳುತ್ತವೆ. ಅಂತೆಯೇ ಶಿಕ್ಷಕರೆಲ್ಲ ನಗುತ್ತಿರಲಿ, ಮಗುಗಳ ಹೃದಯದಲ್ಲಿ ವಿದ್ಯೆಯ ಬೀಜವನ್ನು ಬಿತ್ತಿ ಬೆಳಸುತ್ತಿರಲಿ.

# ಜೀವನ ಶಿಕ್ಷಣ ಶಾಲೆಗಳಲ್ಲಿ ವಿವಿಧ-ವಿನೋದಾವಳಿಗಳು

ಲೇಖಕರು : ಶ್ರೀ ಎನ್. ಬಿ. ಮುದಿಕವಿ, ಎ.ಡಿ.ಇ.ಆಯ್. ಧಾರವಾಡ

ದುಡಿದಂಥ ಶರೀರಕ್ಕೆ ವಿಶ್ರಾಂತಿಯ ಅವಶ್ಯಕತೆ ಇದೆ ಎಂದು ಬೇರೆ ಹೇಳಬೇಕಾಗಿಲ್ಲ. ಸೂಕ್ಷ್ಮವಾದ ಬುದ್ಧಿಶಕ್ತಿಯನ್ನು ಹಾಸ್ಯಯುತವಾಗಿ ಪ್ರದರ್ಶಿಸುವ ಚಮತ್ಕಾರನೇ ವಿನೋದವು. ಅದಕ್ಕೆ ಮಿಂಚಿನ ವೇಗವಿದೆ, ವಜ್ರಾಯುಧದ ಕಾಠಿಣ್ಯವಿದೆ. ವಿನೋದವೆಂದರೆ ಪರ ನಿಂದೆಯಲ್ಲ, ಅದರಲ್ಲಿ ಅರ್ಥವಿದೆ, ಮನೋರಂಜಕತೆ ಇದೆ.

ವಿನೋದಾವಳಿಗಳು ಕಣ್ಮನಗಳಿಗೆ ವಿಶ್ರಾಂತಿಯನ್ನು ನೀಡುವವಲ್ಲದೆ ಮನಸ್ಸನ್ನು ಪ್ರಶಾಂತಯತವಾಗಿ ಇಡಲಿಕ್ಕೆ ಸಹಾಯಕವಾಗುವವು. ಜೀವನದಲ್ಲಿಯ ಸ್ವಾರಸ್ಯದ ವಿಶಿಷ್ಟ ಸಂಗತಿಗಳ ಚುಟುಕುಗಳನ್ನು ಆಯ್ದು ಕೊಂಡು ಜನರ ಮುಂದೆ ಇಡುವದು ಒಂದು ರೀತಿ. ಇದರಲ್ಲಿ ಅನುಕರಣೆಗೆ ಹೆಚ್ಚಿನ ಮಹತ್ವ. ಒಬ್ಬರಂತೆ ಮಾಡಿತೋರಿಸುವದೂ ಮತ್ತೊಬ್ಬರಂತೆ ಮಾತಾಡುವದೂ ಇನ್ನೊಬ್ಬರಂತೆ ನಕ್ಕು ತೋರಿಸುವದೂ ಇತ್ಯಾದಿ ಅನುಕರಣೆಗಳನ್ನು ಎಷ್ಟು ಜೆನ್ನಾಗಿ ಮಾಡುವನೋ ಅಷ್ಟು ಸನ್ನಿವೇಶಗಳು ಉತ್ತಮವಾಗುವವು. ಇದರಲ್ಲಿ ಕರ್ತಾರನ ಪ್ರತಿಭೆ, ಬುದ್ಧಿಮತ್ತೆ, ಪ್ರಸಂಗಗಳನ್ನು ಆಯ್ದುಕೊಳ್ಳುವಲ್ಲಿ ಅವನ ಸೂಕ್ಷ್ಮದೃಷ್ಟಿ ಇತ್ಯಾದಿ ಜಾಣತನಗಳನ್ನು ತೋರಿಸುತ್ತವೆ. ನೋಜಿನ ಪ್ರಸಂಗಗಳನ್ನು ಹೊಸದಾಗಿ ಕಲ್ಪಿಸುವ ಅಥವಾ ಅನುಕರಿಸುವ ಶಕ್ತಿ ಸಾಮಾನ್ಯವಾಗಿ ಎಲ್ಲರಲ್ಲಿಯೂ ಇರದೆ ಕೆಲವೇ ಹುಡುಗರಲ್ಲಿ ಇರುತ್ತದೆ. ಇಂಥವರನ್ನು ಹುಡುಕಿ ಅವರಿಗೆ ಸರಿಯಾದ ಮಾರ್ಗದರ್ಶನ ಮಾಡಿದಲ್ಲಿ ಅವರು ಉತ್ತಮ ಹಾಸ್ಯಗಾರರಾಗಬಹುದು; ಕಲಾವಿದರಾಗಬಹುದು. ಮುಂದೆ ಜೀವನದ ವಿವಿಧ ಪ್ರಸಂಗಗಳ ವಿಮರ್ಶಕರಾಗಬಹುದು.

ಶಾಲೆಗಳಲ್ಲಿ- ವಿಶೇಷ ಉತ್ಸವದ ದಿನಗಳಲ್ಲಿ, ದಿನಾಚರಣೆಗಳಲ್ಲಿ, ಶಾಲೆಯ ಹುಟ್ಟುಹಬ್ಬ ಇತ್ಯಾದಿ ಪ್ರಸಂಗಗಳಲ್ಲಿ ಇಂತಹ ವಿನೋದಾವಳಿಗಳ ಪ್ರಸಂಗಗಳನ್ನು ಸಂಘಟಿಸಿದಲ್ಲಿ ಈ ತರಹದ ಪ್ರವೃತ್ತಿ ಇದ್ದ ಬಾಲಕರಿಗೆ ಚಾಲನೆ ದೊರೆತು ಅವರಲ್ಲಿ ಸುಪ್ತವಾಗಿದ್ದ ಕಲೆಯು ಸ್ಫುಟವಾಗಿ ಬೆಳೆದು ಬರಬಹುದು. ವಿನೋದಾವಳಿಗಳನ್ನು ಸಂಘಟಿಸುವ ಶಿಕ್ಷಕರಲ್ಲಿ ಈ ಉದ್ದೇಶವು ನಿರಂತರವಾಗಿರಬೇಕು.

ಸಧ್ಯಕ್ಕೆ ಜೀವನ ಶಿಕ್ಷಣ ಶಾಲೆಗಳಲ್ಲಿ ನಡೆಯುತ್ತಿರುವ ವಿನೋದಾವಳಿಗಳನ್ನು ವಿಮರ್ಶಿಸಿದಲ್ಲಿ, ಅವುಗಳಲ್ಲಿ ಮೇಲೆ ವಿವರಿಸಿದ ಗುಣಗಳೂ ಅವುಗಳ ಕಡೆಗೆ ಚಾಲನೆ ಕೊಡಬೇಕೆಂಬ ನಿಚ್ಚಳ ದೃಷ್ಟಿಯೂ ಬಹುಜನ ಶಿಕ್ಷಕರಲ್ಲಿ ಕಂಡುಬರುವದಿಲ್ಲ. ಸಭೆಯ (ಸ್ಟೇಜ) ಮುಂದೆ ಬಂದು ವಿನೋದ (?) ವಿನೋದಗಳನ್ನು ಮಾಡಿತೋರಿಸುವ ಬಾಲ-ಬಾಲಿಕೆಯರ ಕೃತಿಗಳ ಗುಣಾವಗುಣಗಳನ್ನು ಪೂರ್ವಭಾವಿಯಾಗಿ ಒಮ್ಮೆಯಾದರೂ ನೋಡದೆ ಹಾಗೆಯೇ ರಂಗಸ್ಥಳಕ್ಕೆ ತಂದು ನಿಲ್ಲಿಸಿ, ತಮ್ಮ ಶಾಲೆಯ ಹಾಗೂ ತಮ್ಮ ಅಜ್ಞಾನತನದ ಪ್ರದರ್ಶನವನ್ನು ಬಯಲಿಗಿಟ್ಟಕೊಂಡ ಅನೇಕ ನಿದರ್ಶನಗಳು ಇವೆ. ಪ್ರಸಂಗಗಳ ಆಯ್ಕೆಯ ಬಗ್ಗೆಯೂ ದಕ್ಷತೆ ವಹಿಸಿದ್ದು ಕಂಡುಬರುವದಿಲ್ಲ. ಉತ್ಸಾಹಿ ಬಾಲಕನೇ ಮುಂದೆ ಬಂದು ತಾನು ಎಲ್ಲಿಯೋ ನೋಡಿದ್ದನ್ನು ಕೇಳಿದ್ದನ್ನು ತನ್ನ ಅಸ್ಪಷ್ಟವಾದ ರೀತಿಯಲ್ಲಿ, ಮೊದಲಿನದೂ ಅಲ್ಲ, ತನ್ನದೂ ಅಲ್ಲ ಎನ್ನುವ ರೀತಿಯಲ್ಲಿ ಪ್ರದರ್ಶನ ನಡೆಸಿ ಕೂಗು, ಚಪ್ಪಾಳೆಗಳ ಮಧ್ಯದಲ್ಲಿ ಹೋಗಿಬಿಡುತ್ತಾನೆ. ಇಂತಹ ವಿನೋದಾವಳಿಗಳಿಂದ ಯಾವ ಪ್ರಯೋಜಿಗವೂ ಆಗದೆ ವ್ಯರ್ಥ ಶ್ರಮ ವೇಳೆಯ ಹಾಳು ಮಾತ್ರ ಆಗುತ್ತದೆ.

ವಿನೋದಾವಳಿಗಳ ಮಾಲಿಕೆಯಲ್ಲಿ ಏಕಾಂಕ ನಾಟಕಗಳೂ ಬರತೊಡಗಿವೆ. ಏಕಾಂಕ ನಾಟಕಗಳನ್ನು ಆರಿಸಿಕೊಳ್ಳುವಾಗ ಕಥಾವಸ್ತು ಶಾಲೆಯ ಮಕ್ಕಳ ಜೀವನಕ್ಕೆ ಸಂಬಂಧಪಟ್ಟದ್ದಿದ್ದು ಅವರ ದೈನಂದಿನ ಚಟುವಟಿಕೆಗಳಿಗೆ, ಅವರ ಶೀಲ-ಸ್ವಭಾವಗಳ ಬೆಳವಣಿಗೆಗಳಿಗೆ ಉಪಯುಕ್ತ ಬೀಳುವಂತಹದೂ ಇದೆಯೋ ಹೇಗೆ? ಮುಂತಾದವುಗಳನ್ನೂ ಯಾವದನ್ನೂ ವಿಚಾರಿಸದೆ ತಮಗೆ ತಮ್ಮ ಮನಸ್ಸಿಗೆ, ಸುತ್ತಲಿನ ಸಮಾಜಕ್ಕೆ ಮೆಚ್ಚಿಕೆಯಾಗುವಂತಹ ಸ್ತ್ರೀ-ಪುರುಷ ಪಾತ್ರಗಳಿಂದ ಮತ್ತು ಸಂಗೀತದಿಂದ ಕೂಡಿದ ಭವ್ಯ, ಜಟಿಲವಾದ ಸಾಮಾಜಿಕ ಸಮಸ್ಯೆಗಳ ನಾಟಕಗಳನ್ನೂ ಆಯ್ದುಕೊಂಡು ಮಕ್ಕಳಿಗೆ

ಅದನ್ನು ಅಭಿನಯಿಸಲು ಹಚ್ಚುವದರಿಂದ ಮಕ್ಕಳ ಮನ ರಂಜನೆಯಾಗುವದೋ? ಅಥವಾ ಸಮಾಜದ ಮನ ರಂಜನೆಯಾಗುವದೋ ತಿಳಿಯದು. ಯಾರ ಹಿತಕ್ಕಾಗಿ ಅವ್ಯಾಹತವಾಗಿ ತಾವು ಹಗಲಿರಳು ದುಡಿಯಬೇಕಾಗಿದೆಯೋ ಆ ಗುರಿಯನ್ನು ಕಡೆಗಣಿಸಿ ಅತ್ಯಂತ ಪಟಲವಾದ ಸಾಮಾಜಿಕ ನಾಟಕಗಳನ್ನು ರಂಗಸ್ಥಳದ ಮೇಲೆ ಬಾಲಕರಿಂದ ಆಡಿಸುವದು ಯೋಗ್ಯವೆನಿಸುವದಿಲ್ಲ. ಉದಾ— ಸ್ತ್ರೀನು ವಿವಾಹ, ವಿಧವಾ ವಿವಾಹ, ವರ ದಕ್ಷಿಣೆ, ವಿಷಮ ವಿವಾಹ ಮುಂತಾದವುಗಳು; ಇಂತಹ ನಾಟಕ ಪ್ರದರ್ಶನಗನ್ನು ನಾಟಕ ಕಂಪನಿಗಳಿಗೋ ಅಥವಾ ಸಿನಿಮಾ ಪ್ರಪಂಚಕ್ಕೋ ಇಲ್ಲವೆ ಸಮಾಜ ಸುಧಾರಕರಿಗೋ ಬಿಟ್ಟು ಬಿಡೋಣ. ಅದು ಜೀವನ ಶಿಕ್ಷಣ ಶಾಲೆಗಳ ಶಿಕ್ಷಕರ ಕೆಲಸವೆಂದು ಎನಿಸುವದಿಲ್ಲ. ಮಕ್ಕಳ ನಾಟಕ, ಮಕ್ಕಳಿಂದ ನಾಟಕ. ಮಕ್ಕಳಿಗಾಗಿ ನಾಟಕ ಎಂಬ ತತ್ವವನ್ನು ಗುರುಗಳಾದವರು ಚೆನ್ನಾಗಿ ನೆನಸಿನಲ್ಲಿಟ್ಟುಕೊಂಡು ನಿರಾಡಂಬರದಿಂದಕೂಡಿದ ಸರಳವಾದ ಸಂಭಾಷಣೆಯುಳ್ಳ ಉದಾತ್ತ ಧ್ಯೇಯ ಅಡಕವಾಗಿರುವ ಐತಿಹಾಸಿಕ ನಾಟಕಗಳೂ ಅಥವಾ ಅದ್ಭುತ ಸಾಹಸದ ದೂರದೃಷ್ಟಿಯುಳ್ಳ ಮೇಧಾವಿಗಳ ಜೀವನ ಚರಿತ್ರಗಳೂ ಉತ್ತಮವಾದ ನಾಟಕಗಳ ಕಥಾವಸ್ತುಗಳೂ ಆಗಬಲ್ಲವು. ಶಿಕ್ಷಕರು ಇಂತಹ ನಾಟಕಗಳನ್ನು ಆಯ್ದುಕೊಂಡು ಎಲ್ಲ ಸಮಾಜದ ಎಲ್ಲ ಮಾನವರ ಪ್ರೀತಿಪಾತ್ರರಾಗಿ ಹಳ್ಳಿಗಳಲ್ಲಿ ಉಂಟಾಗಿರುವ ತೊಡಕು ವಿಷಮತೆಗಳನ್ನು ಹೋಗಲಾಡಿಸಿ, ರಾಷ್ಟ್ರೀಯ ಐಕ್ಯವನ್ನು ಸಾಧಿಸುವ ಭದ್ರವಾದ ಸಮಾಜದ ತಳಪಾಯ ಹಾಕುವ ಮಹಾ ಕಾರ್ಯವನ್ನು ಜೀವನ ಶಿಕ್ಷಣ ಶಾಲೆಗಳಲ್ಲಿ ಗುರುಗಳು ಮಾಡುವರೆಂದು ಆಶಿಸೋಣ.

ಜಯ ಹಿಂದ

# ಮಹಾ ಶಿವರಾತ್ರಿ

ಲೇಖಕರು : ಶ್ರೀ ಪ್ಹಿ. ಎಮ್. ದಿಬ್ಬಿ, ಎಮ್.ಎ.,ಬಿ.ಟಿ.,ಡಿ.ಬಿ.ಈ.

ಪ್ರಾಧ್ಯಾಪಕರು, ಜೆ. ಜಿ. ಕೆ. ಪಿ. ಟಿ. ಕಾಲೇಜ, ಹುಬ್ಬಳ್ಳಿ.

ಪ್ರತಿತಿಂಗಳ ಬಹುಳ ಚತುರ್ದಶಿಯು ಶಿವನ ಉಪಾಸನೆಯ ದಿನ. ಇದಕ್ಕೆ "ಮಾಸ ಶಿವರಾತ್ರಿ" ಎಂದು ಅನ್ನುವರು. ಇಂತಹ ಮಾಸ ಶಿವರಾತ್ರಿಗಳಲ್ಲಿ ಮಾಘ ಮಾಸದ ಶಿವರಾತ್ರಿಯು ಅತ್ಯಂತ ಪವಿತ್ರವಾದದ್ದು ಹಾಗೂ ವಿಶೇಷ ಮಹತ್ವ ಉಳ್ಳದ್ದು. ಆದ್ದರಿಂದ ಇದನ್ನು "ಮಹಾ ಶಿವರಾತ್ರಿ" ಎಂದು ಕರೆಯುತ್ತಾರೆ. ಇದು ಸಾಮಾನ್ಯವಾಗಿ ಮಾಘ ಬಹುಳ ಚತುರ್ದಶಿ ದಿನ, ಒಮ್ಮೊಮ್ಮೆ ತ್ರಯೋದಶಿಯ ದಿನ ಬರುತ್ತದೆ. ಅಂದು ಶಂಕರನ ಮಹಾತ್ಮೆಯು ವಿಶೇಷವಾಗಿದೆ. ಈ ಮಹಾ ಶಿವರಾತ್ರಿಯ ಮಹಿಮೆಯನ್ನು ಕುರಿತು "ಶಿವ ಲೀಲಾಮೃತ" ವೆಂಬ ಪುರಾಣದಲ್ಲಿ ಒಂದು ಕಥೆ ಇದೆ:

ಪೂರ್ವಕಾಲದಲ್ಲಿ ವಿಂಧ್ಯಾಟವಿಯಲ್ಲಿ ಒಬ್ಬ ದುಷ್ಟನಾದ ಬೇಡನು ಇರುತ್ತಿದ್ದನು. ಆತನು ಒಮ್ಮೆ ಮಾಘ ಬಹುಳ ಚತುರ್ದಶಿಯ ದಿನ ಬೇಟೆಗೆ ಹೋಗಿದ್ದನು, ಹಾದಿಯಲ್ಲಿ ಒಂದು ಶಿವ ದೇವಾಲಯವು ಅವನಿಗೆ ಕಂಡಿತು. ಅಲ್ಲಿ ಭಕ್ತರು ಭಕ್ತಿಯಿಂದ "ಶಿವಶಿವ" ಎನ್ನುತ್ತ ಆತನ ಆರಾಧನೆಯಲ್ಲಿ ತೊಡಗಿದ್ದರು. ಅದನ್ನು ನೋಡಿ ಆ ಬೇಡನಿಗೆ ವಿಶೇಷ ಆಶ್ಚರ್ಯವಾಯಿತು. ಏಕೆಂದರೆ ತನ್ನ ಜೀವಮಾನದಲ್ಲಿ ಒಮ್ಮೆಯಾದರೂ "ಶಿವ" ನಾಮವನ್ನು ಆತನು ಉಚ್ಚರಿಸಿದವನಲ್ಲ. ಆಗ ಆ ಬೇಡನು ಅವರಿಗೆ ಚೇಷ್ಟೆಮಾಡುವಂತೆ ತಾನೂ "ಶಿವಶಿವ" ಎನ್ನುತ್ತ ಮುಂದೆ ನಡೆದನು.

ಎಷ್ಟು ಹುಡುಕಿದರೂ ಆ ದಿನ ಬೇಡನಿಗೆ ಯಾವ ಬೇಟೆಯೂ ದೊರೆಯಲಿಲ್ಲ. ಕತ್ತಲೆ ಸಮೀಪಿಸಿದಂತೆ ವಿಶೇಷ ಹಸಿವೆಯೂ ಆಗತೊಡಗಿತು. ಮುಂದೆ ಸಾಗುತ್ತಿರಲು ಒಂದು ಸರೋವರವು ಕಾಣಿಸಿತು. ನೀರು ಕುಡಿಯಲು ಯಾವ ಪ್ರಾಣಿಯಾದರೂ ಅಲ್ಲಿಗೆ ಬರಬಹುದೆಂಬ ವಿಚಾರದಿಂದ ಒಂದು ವೃಕ್ಷದ ಮೇಲೆ ಏರಿ, ಅಡಗಿಕೊಂಡು ಬೇಟೆಗಾಗಿ ಕುಳಿತನು. ಆ ವೃಕ್ಷವು ಒಂದು ಬಿಲ್ವ ವೃಕ್ಷವಾಗಿತ್ತು. ಆದರೆ ಆ ಏರಿದ ಗಿಡದ ಟೊಂಗೆಗಳ ರುಂಡುಪಿನೊಳಗಿಂದ ತನ್ನ ಎದುರಿಗೆ ಬರುವ ಬೇಟೆಯು ಸರಳವಾಗಿ ಕಾಣುವದೆಂತು?

ಆದ್ದರಿಂದ ತನ್ನದೃಷ್ಟಿಗೆ ಅಡ್ಡಬರುವ ಟೊಂಗೆಗಳನ್ನು ಕಡಿದು ಹಾಕುತ್ತ ಬಿಲ್ವ ಪತ್ರಗಳನ್ನು ಹರಿದು ಒಗೆಯ ತ್ತಿದನು. ಆ ಬಿಲ್ವವೃಕ್ಷದ ಕೆಳಗೆ ಪುರಾತನ ಕಾಲದ ಒಂದು ಪಂಚಮುಹಾ ಶಿವಲಿಂಗ, ಅದು ಬೇಡನಿಗೆ ಕಂಡಿರ ಲಿಲ್ಲ. ಅತನು ಹರಿದು ಒಗೆಯುತ್ತಿದ್ದ ಬಿಲ್ವ ಪತ್ರಗಳು ಅತನ ಸುಯೋಗದಿಂದಲೋ ಎನೋ ಎಂಬಂತೆ ಆ ಶಿವಲಿಂಗದ ಮೇಲೆಯೇ ಬೀಳುತ್ತಿದ್ದವು. ಆ ಬೇಡನಿಗೆ ತಿಳಿಯದಂತೆ ಬಿಲ್ವವೃಕ್ಷದ ಕೆಳಗಿರುವ ಶಿವಲಿಂಗದ ಮೇಲೆ ಅತನು ಒಯ್ದ ನೀರಿನ ಚೀಲದೊಳಗಿಂದ ನೀರು ಹನಿ ಹನಿಯಾಗಿ ಬೀಳುತ್ತಿದ್ದವಲ್ಲದೆ, ಬಿಲ್ವಪತ್ರಗಳ ಅರ್ಪ ಣೆಯೂ ಶಿವನಿಗೆ ಆಗುತ್ತಿತ್ತು. ಅಂದು ಮಹಾಶಿವರಾತ್ರಿ. ಬೇಡನನ್ನು ಪಾಪದಿಂದ ಮುಕ್ತಮಾಡಿದ ರಾತ್ರಿ. ಆ ದಿನ ತ್ತಲಾದ ಕೆಲಹೊತ್ತಿನ ಮೇಲೆ ಗರ್ಭಿಣಿಯಾದ ಒಂದು ಹರಿಣಿಯು ನೀರು ಕುಡಿಯಲು ಅಲ್ಲಿಗೆ ಬಂದಿತು. ಕೂಡಲೇ ಬೇಡನು ಬಿಲ್ಲಿಗೆ ಬಾಣವನ್ನು ಹೂಡಲು ಆ ಹರಿಣಿಯು "ಎಲೈ! ಬೇಡನೇ, ನನ್ನನ್ನು ಹೊಡೆಯ ಬೇಡ! ಏಕೆಂದರೆ, ನಾನು ಗರ್ಭವತಿಯಾಗಿದ್ದೇನೆ! ಗರ್ಭಿಣಿಯನ್ನು ಕೊಂದರೆ ನಿನಗೆ ಮಹಾಪಾಪವು ತಟ್ಟುವ ದೆಂದು" ಹೇಳಿತು.

ಈ ರೀತಿಯಾಗಿ ಮಾತಾಡುವ ಆ ಹರಿಣಿಯನ್ನು ನೋಡಿ ಆಶ್ಚರ್ಯಗೊಂಡು "ನನಗೆ ನಿಜವಾಗಿಯೂ ಹಸಿವೆಯು ವಿಶೇಷವಾಗಿದೆ; ಹೆಂಡರು–ಮಕ್ಕಳು ಕೂಳಿಲ್ಲದೆ ಬಳಲುತ್ತಿದ್ದಾರೆ. ಆದರೆ ನಿನ್ನನ್ನು ನೋಡಿದರೆ ದಯೆ ಹುಟ್ಟಿ ಕೊಲ್ಲಬಾರದೆಂದೆನಿಸುತ್ತದೆ. ಕಾರಣ ನೀನು ಹೊದಲು ಯಾರು? ನಿನಗೆ ಇಷ್ಟು ಜ್ಞಾನವು ಹೇಗೆ ಪ್ರಾಪ್ತವಾಯಿತು? ಇದೆಲ್ಲವನ್ನು ಸರಿಯಾಗಿ ಹೇಳು" ಎಂದು ಬೇಡನು ಹರಿಣಿಗೆ ವಿನಂತಿ ಮಾಡಿಕೊಂಡನು. ಹರಿಣಿಯು "ಸಮುದ್ರ ಮಥನ ಕಾಲದಲ್ಲಿ *ಹದಿನಾಲ್ಕು ರತ್ನಗಳು ಹುಟ್ಟಿದವು, "ರಂಭೆ" ಎಂಬ ರತ್ನವೇ ನಾನು. ನನ್ನ ಸೌಂದರ್ಯವನ್ನು ಕಂಡು ನನಗೇ ಸೊಕ್ಕು, ಗರ್ವವಂತೂ ತಲೆಗೇರಿತು; ಮದ್ಯ ಸೇವನೆಯನ್ನೂ ಪ್ರಾರಂಭಿಸಿದೆ, ಶಿವರಾತ್ರಿಯ ದಿವಸ ಶಂಕರನ ಪೂಜೆ ಯನ್ನೂ ಮಾಡಲಿಲ್ಲ, ಅಷ್ಟೇ ಅಲ್ಲ; ಆತನ ಉಪಾಸನೆ ಯನ್ನೂ ಕೂಡ ಬಿಟ್ಟುಕೊಟ್ಟಿ; ಇಷ್ಟರಿಂದಲೇ ತೃಪ್ತ ಳಾಗದೆ ನನ್ನ ಕಾಮವನ್ನು ತೃಪ್ತಿಗೊಳಿಸುವ ಇಚ್ಛೆಯಿಂದ "ಹಿರಣ್ಯ"ನೆಂಬ ರಾಕ್ಷಸನ ಮನೆಯಲ್ಲಿ ಇರತೊಡಗಿದೆ.

"ಮುಂದೆ ಒಂದು ದಿನ ಹಿರಣ್ಯರಾಕ್ಷಸನು ಬೇಟೆಗೆ ಹೋದಾಗ ನಾನು ಶಂಕರನ ದರ್ಶನ ಪಡೆಯಬೇಕೆಂದು ಒಮ್ಮೆ ಕೈಲಾಸಕ್ಕೆ ಹೋದೆ. ಅಂದು ನನ್ನ ಪಾಪದ ಪರಿವರ್ತನೆಯ ದಿನ, ದುರಾಚಾರಿಣಿಯಾದ ನನ್ನನ್ನು ಕಂಡು ಶಂಕರನಿಗೆ ಭಯಂಕರ ಕೋಪ ಬಂದು "ನೀನು ಹರಿಣಿಯಾಗಿ ಹುಟ್ಟು" ಎಂದು ಶಾಪಕೊಟ್ಟನು. ಪಶ್ಚಾತ್ತಾಪಬಟ್ಟು ಮುಂದೆ ಶಂಕರನನ್ನು ಪ್ರಾರ್ಥಿಸಿ ಕೊಂಡದ್ದರಿಂದ ಅತನು "ಹನ್ನೆರಡು ವರ್ಷಗಳನಂತರ ನಿನಗೆ ಪುನಃ ಮೊದಲಿನ ಸ್ಥಾನವು ಸಿಗುವದು" ಎಂದು ಉಃಶಾಪಕೊಟ್ಟ ನನ್ನನ್ನು ಹರಿಸಿದನು.

"ಎಲೈ ಬೇಡನೆ! ಆ ಸುಸಂಧಿಯು ಈಗ ಬಂದು ಒದಗಿದೆ. ಈಗ ನಾನು ಪೂರಾ ಗರ್ಭಿಣಿ, ಆದ್ದರಿಂದ ನನ್ನನ್ನು ಬಿಟ್ಟುಬಿಡು; ತುಸು ಹೊತ್ತಿನಲ್ಲಿಯೇ ಮಕ್ಕಳನ್ನು ಹಡೆದು ಇಲ್ಲಿ ತಿರುಗಿ ಬರುತ್ತೇನೆ. ಆಮೇಲೆ ನನ್ನನ್ನು ಕೊಲ್ಲುವಿಯಂತೆ ಎಂದು ಹೇಳತಲ್ಲದೆ ತಿರುಗಿ ಬರಲು ಶಿವನ ಆಣೆ ಮಾಡಿ ನಾನಾ ರೀತಿಯಿಂದ ಬೇಡಿಕೊಂಡಿತು.

'ಶಿವ' ಈ ಶಬ್ದವು ಕಿವಿಗೆ ಬೀಳುವದೊಂದೇ ತಡ, ಬೇಡನ ಹೃದಯವು ಕರುಗಿತು. ಹರಿಣಿಯ ಮಾತಿನಲ್ಲಿ ವಿಶ್ವಾಸವಿಟ್ಟು, ಅದನ್ನು ಬಿಟ್ಟು ಬಿಟ್ಟನು. ಚಿಗರೆಯು ಆನಂದದಿಂದ ಹೊಟ್ಟೆತುಂಬ ನೀರು ಕುಡಿದು ಸಂತೋಷ ಚಿತ್ತದಿಂದ ತನ್ನ ವಾಸ ಸ್ಥಳಕ್ಕೆ ಹೊರಟು ಹೋಯಿತು.

ಮುಂದೆ ತುಸು ಹೊತ್ತಿನಲ್ಲಿಯೇ ಮತ್ತೊಂದು ಹರಿಣಿಯು ನೀರು ಕುಡಿಯಲಿಕ್ಕೆ ಅಲ್ಲಿಗೆ ಬಂದಿತು. ಬೇಡನು ತನ್ನ ಕರ್ಮಕ್ಕನುಸರಿಸಿ ಬಿಲ್ಲಿಗೆ ಬಾಣವನ್ನು ಹೂಡಿದನು. ಕೂಡಲೇ ಆ ಚಿಗರೆಯು, "ಅಯ್ಯೋ ಬೇಡನೆ, ನಿಲ್ಲು; ಬಾಣವನ್ನು ಬಿಡಬೇಡ; ಮನೆಯಲ್ಲಿ ಸಣ್ಣ ಸಣ್ಣ ಮಕ್ಕಳು ಹಸಿವೆಯಿಂದ ಬಳಲುತ್ತಿರಬಹುದು. ಅವುಗಳಿಗೆ ಮೊಲೆಯುಣಿಸಿ ತಿರುಗಿ ಬರುತ್ತೇನೆ. ಆ ಮೇಲೆ ನನ್ನನ್ನು ಕೊಲ್ಲು" ಎಂದು ಶಿವನ ಆಣೆ ಮಾಡಿ ಅತಿ ದೈನ್ಯದಿಂದ ಬೇಡಿಕೊಂಡಿತು. ಮೊದಲಿನಂತೆಯೇ ಬೇಡನ ಹೃದಯವು ಕರಗಿ ಎರಡನೆಯ ಹರಿಣಿಯನ್ನು

---

* ಹದಿನಾಲ್ಕು ರತ್ನಗಳು :— ೧) ಲಕ್ಷ್ಮೀ, ೨) ಕೌಸ್ತುಭ, ೩) ಪಾರಿಜಾತ, ೪) ಸುರೆ, ೫) ಧನ್ವಂತರಿ, ೬) ಚಂದ್ರ, ೭) ಕಾಮಧೇನು ೮) ಐರಾವತ ೯) ಅಪ್ಸರೆ (ರಂಭೆ) ೧೦) ಉಚ್ಚೈಶ್ರವ ೧೧) ಹಾಲಾಹಲ ೧೨) ಶಾರ್ಙ್ಗಧನು ೧೩) ಶಂಖ ಮತ್ತು ೧೪) ಅಮೃತ

ಬಿಟ್ಟುಬಿಟ್ಟನು. ಚಿಗರೆಯು ಬೇಡನನ್ನು ಕೊಂಡಾಡುತ್ತ ತನ್ನ ಮನೆಗೆ ಹೋಯಿತು.

ಇತ್ತ ಆ ಬೇಡನು ಮತ್ತೆ ಬಿಲ್ವ ವೃಕ್ಷದ ಟೊಂಗೆಗಳನ್ನು ಕಡಿದು ಅದರ ದಳಗಳನ್ನು ಹರಿದು ಶಿವಲಿಂಗದ ಮೇಲೆ ಚಲ್ಲುತ್ತಿದ್ದನು. ಆತನಿಂದ ಆ ಮಹಾಲಿಂಗದ ಶಿವರಾತ್ರಿಯ ಬಿಲ್ವಾರ್ಚನೆಯು ಯಥಾ ಪ್ರಕಾರ ನಡೆಯಿತು.

ಕೆಲಹೊತ್ತಿನ ಮೇಲೆ ಮೂರನೆಯ ಚಿಗರೆಯೊಂದು ಅದೇ ಸರೋವರಕ್ಕೆ ನೀರು ಕುಡಿಯಲು ಬಂದಿತು. ಕೂಡಲೇ ಬೇಡನು ಬಿಲ್ಲಿಗೆ ಬಾಣ ಹೂಡಿದನು. ಅದನ್ನು ನೋಡಿ ಚಿಗರೆಯು " ಅಯ್ಯಾ ಬೇಡನೆ ನನ್ನನ್ನು ಕೊಲ್ಲ ಬೇಡ, ನಾನೀಗ ಕಾಮುನಿಂದ ಸಂತಪ್ತಳಾಗಿರುವೆ. ಮನೆಗೆ ಹೋಗಿ ಪತಿಯೊಡನೆ ಭೋಗಿಸಿ ನಿನ್ನ ಬಳಿಗೆ ಬರುವೆ; ಆ ಮೇಲೆ ನಿನ್ನ ಇಚ್ಛೆಯನ್ನು ಪೂರ್ಣ ಮಾಡಿ ಕೊಳ್ಳು " ಎಂದು ಅತಿ ದೈನ್ಯದಿಂದ ಶಿವನ ಸಾಕ್ಷಿಯಾಗಿ ಪ್ರಾರ್ಥಿಸಿ ಕೊಂಡಿತು.

ಈ ಪ್ರಕಾರ ಚಿಗರೆಯು ಮಾತನಾಡುವದನ್ನು ನೋಡಿ; ದಯೆ ಹುಟ್ಟಿ, ಮನೆಗೆ ಹೋಗಿ ಬರಲಿಕ್ಕೆ ಆ ಚಿಗರೆಗೂ ಅಪ್ಪಣೆಯನ್ನು ಕೊಟ್ಟನು. ಚಿಗರೆಯು ಸಂತೋಷದಿಂದ ನೀರು ಕುಡಿದು ಮನೆಗೆ ಹೋಯಿತು.

ಹೀಗೆ ಮೊದಲಿನ ಚಿಗರೆಯು ಮನೆಗೆ ಹೋಗಿ ಈಯಿತು, ಎರಡನೆಯ ಚಿಗರೆಯು ತನ್ನ ಮಕ್ಕಳಿಗೆ ಮೊಲೆಯುಣಿಸಿ ಅನಂದ ಪಟ್ಟಿತು, ಮೂರನೆಯ ಚಿಗರೆಯು ತನ್ನ ಪತಿಯೊಡನೆ ಸಂತೋಷದಿಂದ ರಮಿಸಿತು.

ಇತ್ತ ಆ ಬೇಡನು ಸುಮ್ಮ ಸುಮ್ಮನೆ ಬಿಲ್ವ ಪತ್ರಿಗಳನ್ನು ಹರಿದು ಕೆಳಗೆ ಚಲ್ಲುತ್ತಿದ್ದನು. ಅವು ಅಕಸ್ಮಾತ್ ಶಿವಲಿಂಗದ ಮೇಲೆಯೇ ಬೀಳುತ್ತಿದ್ದವು. ಆದರೆ ಆ ಹರಿಣಿಗಳ ಆಗಮನದ ನಿರೀಕ್ಷಣೆಯಲ್ಲಿ ಆತನಿಗೆ ನಿದ್ರೆಯೇ ಬರಲಿಲ್ಲ, ಇಡೀ ರಾತ್ರಿ ಜಾಗರಣೆ ಯಾಯಿತು. ಚೀಲದೊಳಗಿನ ನೀರೂ ಹನಿ ಹನಿಯಾಗಿ ಆ ಲಿಂಗದ ಮೇಲೆಯೇ ಬೀಳುತ್ತಿದ್ದವು. ಈ ಪ್ರಕಾರ ಬೇಡನಿಗೆ ಗೊತ್ತಾಗದಂತೆ ಅನಾಯಾಸವಾಗಿ ಶಿವರಾತ್ರಿ ವ್ರತವು ಸಾಗಿತು.

ಇಷ್ಟಾದ ಮೇಲೆ ವಚನಕೊಟ್ಟಂತೆ ಮೂರೂ ಹರಿಣಿಗಳು ತಮ್ಮ ಮಕ್ಕಳೊಡನೆ ಬೆಳಗು-ಮುಂಜಾನೆ ಬೇಡನಿದ್ದಲ್ಲಿಗೆ ಬಂದು ಈಗ ' ಬೇಕಾದರೆ ನಮ್ಮನ್ನು ತೀವ್ರವಾಗಿ ಕೊಂದು ನಿನ್ನ ಹಸಿವೆಯನ್ನು ಹಿಂಗಿಸಿಕೊಳ್ಳು ಎಂದು ಹೇಳಿದವು. ಅವುಗಳ ವಿನಂತಿಯನ್ನು ಕೇಳಿ, ಬೇಡನಿಗೆ ದಯೆ ಹುಟ್ಟಿ ಕಣ್ಣುಗಳಲ್ಲಿ ನೀರು ತುಂಬಿದವು. ವಿವೇಕವು ಜಾಗ್ರತವಾಗಿ ' ಶಿವ ಶಿವಾ ನನಗಾಗಿ ಪ್ರಾಣ ಕೊಡಲು ಈ ಹರಿಣಿಗಳು ತಾವಾಗಿಯೇ ತಿರುಗಿ ಬಂದವು. ಪ್ರಾಣಿಗಳಲ್ಲಿ ಸಹ ಈ ಪ್ರಕಾರ ವಚನ ಪಾಲನೆಯು ಕಂಡು ಬರುತ್ತಿರುವಾಗ ಮನುಷ್ಯನಾಗಿ ಹುಟ್ಟಿದ ನಾನು ಪರಹಿಂಸೆ ಮಾಡಬಾರದೆಂಬ ಸದ್ಬುದ್ಧಿಯನ್ನು ಏಕೆ ಕಲಿಯ ಬಾರದು? ಎಂದು ವಿಚಾರಿಸ ತೊಡಗಿದನು. ಅಷ್ಟರಲ್ಲಿ ಶಿವನು ತನ್ನ ಪುಷ್ಪಕ ವಿಮಾನವನ್ನು ತೆಗೆದು ಕೊಂಡು ಅಲ್ಲಿಗೆ ಬಂದನು. ಆ ಮೃಗಗಳು ದಿವ್ಯ ದೇಹಧಾರಿಗಳಾದವು. ಅವರೆಲ್ಲರಿಗೂ ಶಾಶ್ವತ ಸುಖ ದೊರೆಯಿತು. ಆಗ ಶಿವನು ಮಹಾ ಶಿವರಾತ್ರಿಯ ವ್ರತವನ್ನು ಆಚರಿಸುವವರಿಗೆ, ಅಕ್ಷಯ ಸುಖವು ದೊರೆಯಲಿ; ಹಾಗು ಈ ದಿನ ತೀರಿಕೊಂಡವರಿಗೆ ಶಾಶ್ವತ ಸುಖವು ಲಭಿಸಲಿ ! ಎಂದು ಆಶೀರ್ವದಿಸಿ ಆ ಬೇಡನನ್ನೂ ದಿವ್ಯ ದೇಹಧಾರಿಗಳಾದ ಹರಣಿಗಳನ್ನು ವಿಮಾನದಲ್ಲಿ ಕುಳ್ಳಿರಿಸಿಕೊಂಡು ಕೈಲಾಸಕ್ಕೆ ಹೋದನು.

ಇಂತಹ ಮಹಾಶಿವರಾತ್ರಿಯ ದಿವಸ ಉಪವಾಸ, ಜಾಗರಣೆ, ಶಿವಲಿಂಗ ಪೂಜೆಗಳನ್ನು ಮಾಡುವವರಿಗೆ, ಕಥೆಯನ್ನು ಭಕ್ತಿಯಿಂದ ಕೇಳುವವರಿಗೆ ಶಿವ ಸಾಯುಜ್ಯವು ದೊರಕುವದು ಎಂಬುದೇ ಈ ಕಥೆಯ ತಾತ್ಪರ್ಯ.

## ಉತ್ತರ ಭಾರತದಲ್ಲಿ ಶಿವರಾತ್ರಿ

ದಕ್ಷಿಣ ಭಾರತದಲ್ಲಿಯಂತೆ ಉತ್ತರ ಭಾರತದಲ್ಲಿ ಸಹ ಈ ದಿನವನ್ನು ಅತಿ ಪವಿತ್ರವೆಂದು ತಿಳಿಯುತ್ತಾರೆ. ಅದರ ಬಗ್ಗೆ ಅಲ್ಲಿ ಅನೇಕ ಕಥೆಗಳು ಪ್ರಚಲಿತವಿದ್ದು ಅವುಗಳಲ್ಲಿ ಎರಡನ್ನು ಮಾತ್ರ ಇಲ್ಲಿ ಕೊಡಲಾಗಿದೆ.

(೧)

ಪೂರ್ವ ಕಾಲದಲ್ಲಿ ಉಜ್ಜಯಿನಿ ಎಂಬ ಪಟ್ಟಣದಲ್ಲಿ ಚಂದ್ರಸೇನನೆಂಬ ರಾಜನು ರಾಜ್ಯವಾಳುತ್ತಿದ್ದನು. ಅವನಲ್ಲಿ ಮಣಿಭದ್ರನೆಂಬ ಅಂಗ ರಕ್ಷಕನಿದ್ದನು. ಒಡೆಯ-ಸೇವಕರಿಬ್ಬರೂ ಪರಮ ಶಿವಭಕ್ತರಾಗಿದ್ದು ಚಂದ್ರಸೇನ ರಾಜನು ತನ್ನ ಊರಿನಲ್ಲಿಯ ಮಹಾಕಾಲೇಶ್ವರ ಜ್ಯೋತಿರ್ಲಿಂಗವನ್ನು ದಿನಾಲು ತಪ್ಪದೇ ಪೂಜಿಸುತಿದ್ದನು.

ಒಡೆಯನ ಶಿವ ಭಕ್ತಿಯನ್ನು ಕಂಡು ಸೇವಕನಾದ ಮಣಿಭದ್ರನು ತನ್ನಲ್ಲಿದ್ದ " ಚಿಂತಾಮಣಿ ", ಎಂಬ

ಅಮೌಲ್ಯವಾದ ರತ್ನವನ್ನು ಅವನಿಗೆ ಕಾಣಿಕೆಯಾಗಿ ಕೊಟ್ಟನು. ಈ ಚಿಂತಾಮಣಿ ರತ್ನದ ಸುದ್ದಿಯನ್ನು ಕೇಳಿ ನೆರೆದ ಶತ್ರು ರಾಜರು ಅದನ್ನು ತಮಗೆ ಕೊಡಬೇಕು ಎಂದು ಚಂದ್ರಸೇನ ರಾಜನಿಗೆ ಹೇಳಿ ಕಳುಹಿಸಿದರು. ಚಂದ್ರಸೇನನು ಅವರ ಮಾತನ್ನು ನಿರಾಕರಿಸಿದನು. ಆದ್ದರಿಂದ ಅವರೆಲ್ಲರೂ ಒಕ್ಕಟ್ಟಾಗಿ ಕೂಡಿಬಂದು ಉಜ್ಜಯಿನಿ ನಗರಕ್ಕೆ ಮುತ್ತಿಗೆಯನ್ನು ಹಾಕಿದರು. ಚಂದ್ರಸೇನನಾದರೂ ಬಂದ ಪರಿಸ್ಥಿತಿಯನ್ನು ಎದುರಿಸಿದನು. ಅವನು ಆ ಹೊತ್ತು ಉಪವಾಸವಿದ್ದು ಶಿವಪೂಜೆ ಶಿವಧ್ಯಾನಗಳಲ್ಲಿ ಮಗ್ನನಾಗಿ ಬಿಟ್ಟನು. ಹಾಗೂ ಮುತ್ತಿಗೆಯ ಗಡಿಬಿಡಿಯಲ್ಲಿ ಆ ದಿವಸ ಮಹಾ ಶಿವರಾತ್ರಿ ಎಂಬುದನ್ನೇ ಮರೆತು ಬಿಟ್ಟನು

ಹೀಗಿರಲು ಉಜ್ಜಯಿನಿಯಲ್ಲಿ ಆ ದಿನ ಒಂದು ವಿಚಿತ್ರವಾದ ಘಟನೆಯು ಸಂಭವಿಸಿತು. ಆ ಊರ ವಿಧವೆಯೋರ್ವಳ ಒಂದು ಮಗುವು ಚಂದ್ರಸೇನ ರಾಜನು ಮಾಡುತ್ತಿದ್ದ ಶಿವಲಿಂಗ ಪೂಜೆಯನ್ನು ದಿನಾಲು ನೋಡುತ್ತಿತ್ತು. ರಾತ್ರಿ ಆ ಮಗುವು ಕೂಡ ಒಂದು ಕಲ್ಲನ್ನಿಟ್ಟು ಅದನ್ನೇ ಶಿವಲಿಂಗವೆಂದು ಭಾವಿಸಿ ಪೂಜಿಸ ತೊಡಗಿತ್ತು. ಮಗುವಿನ ಭಕ್ತಿಗೆ ಮೆಚ್ಚಿ ಶಿವನು ಕಲ್ಲಿನ ಲಿಂಗವನ್ನು ಬಂಗಾರದ ಲಿಂಗವನ್ನಾಗಿ ಪರಿವರ್ತಿಸಿದನು. ಇದರಿಂದ ಎಲ್ಲರಿಗೂ ಆಶ್ಚರ್ಯವಾಯಿತು.

ಮರುದಿನ ಈ ಸುದ್ದಿ ಶತ್ರುರಾಜರಿಗೂ ತಲುಪಿ ಅವರು ಆಶ್ಚರ್ಯಗೊಂಡರು, ಮತ್ತು ಅವರೆಲ್ಲರೂ ಚಂದ್ರಸೇನ ರಾಜನ ಮೇಲಿನ ವೈರ ಭಾವವನ್ನು ಮರೆತು, ಅವನೊಡನೆ ಸ್ನೇಹದ ಒಪ್ಪಂದ ಮಾಡಿ ಕೊಂಡರು. ಹಾಗೂ ಶಿವಧ್ಯಾನ ಮಾಡಿ ಮಹಾದೇವನನ್ನು ತುಂಬಾ ಕೊಂಡಾಡಿದರು. ಈ ಶಿವರಾತ್ರಿಯ ವ್ರತದ ಮಹಿಮೆಯಿಂದ ಶತ್ರುಗಳು ಸಹ ಮಿತ್ರರಾಗುವರು. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಶಿವರಾತ್ರಿ ವ್ರತವನ್ನು ತಪ್ಪದೇ ಆಚರಿಸಬೇಕೆಂಬುದೇ ಈ ಕಥೆಯ ತಾತ್ಪರ್ಯವು ಇದೆ.

( ೨ )

ಈ ಶಿವರಾತ್ರಿ ವ್ರತದ ಬಗ್ಗೆ ಇನ್ನೊಂದು ಕಥೆಯು ಹೀಗಿದೆ :—

ಪೂರ್ವ ಕಾಲದಲ್ಲಿ ಉತ್ತರ ಭಾರತದಲ್ಲಿ ಶ್ವೇತ ಸೆಂಬ ರಾಜನು ಆಳುತ್ತಿದ್ದನು, ಅವನು ಮಹಾ ವಿಷಯ ಲಂಪಟನಾಗಿದ್ದು ಯಾವಾಗಲೂ "ಶಿವನಿ" ಎಂಬ ವೇಶ್ಯೆಯ ಮನೆಯಲ್ಲಿಯೇ ಇರುತ್ತಿದ್ದನು. ಅವನು ಪ್ರಜೆಗಳ ಕ್ಷೇಮದ ಬಗ್ಗೆ ಎಳ್ಳಷ್ಟೂ ಲಕ್ಷ್ಯವನ್ನೇ ಕೊಡಲಿಲ್ಲ. ಇದೇ ಸಂಧಿಯನ್ನು ಸಾಧಿಸಿ ನೆರೆಯ ರಾಜರು ಶ್ವೇತರಾಜನ ರಾಜ್ಯದ ಮೇಲೆ ದಂಡೆತ್ತಿಬಂದರು. ಶ್ವೇತನು ಯುದ್ಧದಲ್ಲಿ ಸೋತು ಓಡಿಹೋಗಿ ತನ್ನ ರಾಜಧಾನಿಯನ್ನು ಬಿಟ್ಟು ಬೇರೆ ಊರಿಗೆ ಹೋಗಿ ಅಲ್ಲಿಯೇ ತನ್ನ ಪ್ರೇಯಸಿಯೊಡನೆ ಇರಹತ್ತಿದನು. ಕಾಲವು ಗತಿಸಿದಂತೆ ಶ್ವೇತನ ಹತ್ತಿರವಿದ್ದ ಹಣವು ತೀರಿಹೋಯಿತು. ಶಿವನಿಯು ಬೇರೊಬ್ಬನನ್ನೂ ಆಶ್ರಯಿಸಿದಳು. ಆದರೂ ಅವಳಲ್ಲಿ ಅನುರಕ್ತನಾದ ಶ್ವೇತನು ಆಕೆಯ ಮೇಲಿನ ಮೋಹವನ್ನು ಸ್ವಲ್ಪವೂ ಕಡಿಮೆ ಮಾಡದೆ ಯಾರದೋ ತೋಟದಿಂದ ಆಕೆಗೆ ಹೂವು ತರುವ ಕಾರ್ಯದಲ್ಲಿ ನಿರತನಾದನು.

ಒಂದು ದಿನ ಶಿವನಿಯ ಸಲುವಾಗಿ ಹೂಗಳನ್ನು ಕೊಯ್ಯುತ್ತಿದ್ದಾಗ ಶ್ವೇತನು ತೋಟಿಗನ ಕೈಯಲ್ಲಿ ಸಿಕ್ಕುಬಿದ್ದನು. ತೋಟಿಗನು ಶ್ವೇತನನ್ನು ಜನ್ನಾಗಿ ಥಳಿಸಲು ಆತನ ಪ್ರಾಣವು ಹೋಗಿಬಿಟ್ಟಿತು. ಸಾಯುವ ಮುಂಚೆ ಶ್ವೇತನು ತಾನು ಕೊಯ್ದ ಹೂವುಗಳನ್ನು ಭೂಮಿಯ ಮೇಲೆ ಜೆಲ್ಲಿ "ನಾನು ಕೊಯ್ದ ಹೂವುಗಳು ಶಿವನಿಗೆ ಮುಟ್ಟಲಿ !" ಎಂದು ಹೇಳಿ ಪ್ರಾಣಬಿಟ್ಟನು.

ಅಂದು ಶಿವರಾತ್ರಿ, ಬೆಳಗಿನಿಂದಲೂ ಶ್ವೇತನು ಉಪವಾಸವಿದ್ದು ಸಾಯುವ ಮುಂಚೆ ಆ ಹೂವುಗಳು ತನ್ನ ಪ್ರೇಯಸಿಯಾದ ಶಿವನಿಗೆ ಮುಟ್ಟಲೆಂದು ಈ ಪ್ರಕಾರ ಶಿವನ ನಾಮವನ್ನು ಉಚ್ಚರಿಸಿ ಶ್ವೇತನು ಯಮಲೋಕಕ್ಕೆ ಹೋದಾಗ ಯಮರಾಜನು "ನೀನು ಸಾಯುವ ಮುಂಚೆ ಶಿವನ ಹೆಸರನ್ನು ಉಚ್ಚರಿಸಿರುವೆಯಾದ್ದರಿಂದ, ಈ ಹೊತ್ತು ರಾತ್ರಿ ನೀನು ಸ್ವರ್ಗದಲ್ಲಿ ಸುಖವಾಗಿದ್ದು ಬಾ ! ಹಾಗೂ ನಿನಗೇನು ಬೇಕು ? ಬೇಡು" ಎಂದನು. ಯಮನ ವಚನದ ಪ್ರಕಾರ ಶ್ವೇತನು "ದೇವಲೋಕದ ಅಪ್ಸರೆಯಾದ ಊರ್ವಸಿಯು ಬೇಕು" ಎಂದನು. ಅದರಂತೆ ಊರ್ವಸಿಯನ್ನು ಆತನ ಬಳಿಗೆ ಕಳಿಸಲಾಯಿತು. ಆಗ ಊರ್ವಸಿಯಾದರೂ ವ್ರತವನ್ನು ಆಚರಿಸುತ್ತಿದ್ದಳು. ಆದ್ದರಿಂದ ಅವಳು ಶ್ವೇತನಿಗೆ ಚನ್ನಾಗಿ ತಿಳಿಹೇಳಿ ಅವನಲ್ಲಿಯ ವಿಷಯ ವಾಸನೆಯನ್ನು ಹೋಗಲಾಡಿಸಿದಳು. ಹಾಗೂ ಅವನು ಶಿವರಾತ್ರಿಯ

ವ್ರತವನ್ನಾಚರಿಸುವಂತೆ ಮಾಡಿದಳು. ಆದ್ದರಿಂದ ಶ್ವೇತನಿಗೆ ಶಾಶ್ವತವಾದ ಶಿವಲೋಕವು ಪ್ರಾಪ್ತವಾಯಿತು. ಮತ್ತು ಆತನು ಪರಮಸುಖವನ್ನು ಹೊಂದಿದನು. ತಾತ್ಪರ್ಯ ವೇನೆಂದರೆ ಶಿವರಾತ್ರಿಯ ವ್ರತವನ್ನಾಚರಿಸುವದರಿಂದ ವಿಷಯಲಂಪಟರುಸಹ ಸ್ವರ್ಗಲೋಕವನ್ನು ಪಡೆಯುವರು.

ಮಹಾಶಿವರಾತ್ರಿಯು ಶಿವನಿಗೆ ಅತ್ಯಂತ ಪ್ರಿಯವಾದ ಹಾಗೂ ಪವಿತ್ರವಾದ ದಿನ. ಆದ್ದರಿಂದ ಆ ದಿನ ಶಿವಭಕ್ತರ ಮನೆಮನೆಗಳಲ್ಲಿ, ಮಠಗಳಲ್ಲಿ, ಶಿವಮಂದಿರಗಳಲ್ಲಿ, ಶಿವನ ವಿಶೇಷ ಉತ್ಸವ–ಆರಾಧನೆಗಳು ನಡೆಯುತ್ತವೆ. ಶಿವಪೂಜೆ, ಶಿವಮಂತ್ರ, ಶಿವಜಪ, ಶಿವ ಭಜನೆ, ಶಿವಕೀರ್ತನೆ, ಶಿವಕತೆ, ಶಿವಪುರಾಣ ಶ್ರವಣ ಇವು ಈ ದಿನದ ವಿಶೇಷ ಕಾರ್ಯಕ್ರಮಗಳು.

ಮಹಾ ಶಿವರಾತ್ರಿಯ ವ್ರತವು ಶಿವನಿಗೆ ಅತ್ಯಂತ ಪ್ರಿಯವಾಗಿದ್ದು ಅದು ಭಾರತದಾದ್ಯಂತ ಆಚರಿಸಲ್ಪಡುತ್ತದೆ. ಅಂದು ಶಿವಭಕ್ತರೆಲ್ಲರು ಬೆಳಿಗ್ಗೆ ನದಿಯಲ್ಲಿ ಸ್ನಾನಮಾಡಿ, ಪವಿತ್ರವಾದ ಉದಕ, ವಿಭೂತಿ, ಗಂಧ, ಬಿಲ್ವಪತ್ರಿ ಮುಂತಾದವುಗಳಿಂದ ಶಿವಲಿಂಗಕ್ಕೆ ಅಭಿಷೇಕ ಆರಾಧನೆಗಳನ್ನು ಮಾಡುವರು. ಶಕ್ಯವಿದ್ದರೆ ಒಂದು ಲಕ್ಷ, ಅಥವಾ ಒಂದು ಸಾವಿರ ಅಥವಾ ಒಂದುನೂರಾ ಎಂಟು ಬಿಲ್ವ ಪತ್ರಗಳನ್ನು ಏರಿಸುವರು. ಇಡೀದಿವಸ ಉಪವಾಸ ಮಾಡುವರು. ರಾತ್ರಿಯಲ್ಲಿ ಜಾಗರಣೆ ಮಾಡಿ ಶಿವಭಜನೆಯಿಂದ ವೇಳೆಯನ್ನು ಕಳೆಯುವರು. ಮರುದಿನ ಪಾರಣೆಯಿಂದ ಮಹಾ ಶಿವರಾತ್ರಿ ವ್ರತವನ್ನು ಪೂರೈಸುವರು. ಈದಿನ ಶಿವನ ದರ್ಶನವು ಅತ್ಯಂತ ಮಹತ್ವವಾದದ್ದು ಅಂತೆಯೇ ಅನ್ಯಮತೀಯರು ಕೂಡ ಈ ವ್ರತವನ್ನು ಪಾಲಿಸುವರು.

ಲಿಂಗ ಪೂಜೆಯು ಅತಿ ಪ್ರಾಚೀನ ಕಾಲದಿಂದ ಬಳಿಕೆಯಲ್ಲಿ ಬಂದಿದೆ. **ಲಿಂಗವೆಂದರೆ ಶಿವ.** ಭಾರತದಲ್ಲಿ ಕಾಶಿ, ಉಜ್ಜಯಿನಿ ಮುಂತಾದವುಗಳಲ್ಲಿ ಪ್ರಸಿದ್ಧವಾದ * ಹನ್ನೆರಡು ಜ್ಯೋತಿರ್ಲಿಂಗಗಳಿವೆ. ಮಹಾಶಿವರಾತ್ರಿಯ ದಿನ ಈ ಸ್ಥಳಗಳಲ್ಲಿ ಶಿವನ ದೊಡ್ಡ ದೊಡ್ಡ ಉತ್ಸವಗಳು ಆಗುತ್ತವೆ. ದೇಶದ ಬೇರೆ ಬೇರೆ ಭಾಗಗಳಿಂದ ಜನರು ಈ ಶಿವಲಿಂಗಗಳ ದರ್ಶನಕ್ಕಾಗಿ ಅಲ್ಲಿಗೆ ಹೋಗುತ್ತಾರೆ.

ನೇಪಾಳದ ರಾಜಧಾನಿಯಾದ ಕಾಟಮಾಂಡುವಿನಲ್ಲಿ ಮಹಾ ಶಿವರಾತ್ರಿಯ ನಿಮಿತ್ತ ನಡೆಯುವ ಶ್ರೀ ಪಶುಪತಿನಾಥ (ಶಿವ)ನ ಪೂಜೆಯು ಭಾರತದ ತುಂಬ ಪ್ರಸಿದ್ಧವಾಗಿದೆ. ಅಲ್ಲಿಯ ದೇವಾಲಯದಲ್ಲಿಯ ಚತುರ್ಮುಖ ಲಿಂಗವು ನೇಪಾಳ ಭಾರತಗಳಲ್ಲಿಯೇ ಅಪೂರ್ವವಾದುದು. ಶ್ರೀ ಪಶುಪತಿನಾಥನು ನೇಪಾಳದ ರಾಜ್ಯದ ಅಧಿದೇವತೆ. ಆಹೊತ್ತು ಶ್ರೀ ಪಶುಪತಿನಾಥನ ಗೌರವಾರ್ಥವಾಗಿ ೩೧ ತೋಪುಗಳನ್ನು ಹಾರಿಸುತ್ತಾರೆ. ದೇವಾಲಯದಲ್ಲಿ ಶಿವನಾಮ ಸಂಕೀರ್ತನೆಯೊಂದಿಗೆ ಜಾಗರಣೆ ನಡೆಯುವದು.

ಜಗದ್ಗುರು ಶ್ರೀ ಶಂಕರಾಚಾರ್ಯರು ಸುಮಾರು ೧೪೦೦ ವರ್ಷಗಳ ಹಿಂದೆ ಶ್ರೀ ಪಶುಪತಿನಾಥನ ಈ ದೇವಾಲಯವನ್ನು ಕಟ್ಟಿಸಿದರು. ಅವರ ಆದೇಶದ ಪ್ರಕಾರ ಈ ದೇವಾಲಯದ ಅರ್ಚಕರನ್ನೂ ದಕ್ಷಿಣಾಪಥದವರನ್ನೇ ಆರಿಸುತ್ತಾರೆ. ಈಗ ಅಲ್ಲಿಯ ಮುಖ್ಯ ಅರ್ಚಕರು ಕರ್ನಾಟಕದವರೇ ಇರುವರು. ಮಧ್ಯಪ್ರದೇಶದ ಖಜುರಾಹೋ ಎಂಬಲ್ಲಿ ಈ ದಿನ ಮಹಾದೇವನ ಉತ್ಸವವು ಅತಿ ದೊಡ್ಡ ಪ್ರಮಾಣದಿಂದ ಹಾಗೂ ವೈಭವದಿಂದ ನಡೆಯುವದು. ದೇಶದ ಬೇರೆ ಬೇರೆ ಭಾಗಗಳಿಂದ ಮಹಾದೇವನ ದರ್ಶನಕ್ಕಾಗಿ ಲಕ್ಷಗಟ್ಟಲೆ ಜನರು ಅಲ್ಲಿಗೆ ಹೋಗುವರು.

ಮಹೇಶ, ಮಹಾದೇವ, ಶಂಕರ, ರುದ್ರ, ಪರಮೇಶ್ವರ, ಸದಾಶಿವ, ಈಶ್ವರ ಮೊದಲಾದವು ಶಿವನ ವಿವಿಧ ಹೆಸರುಗಳು. ಈ ಎಲ್ಲ ಹೆಸರುಗಳಲ್ಲಿ ಒಂದುತರದ ಕಲ್ಯಾಣಕಾರಕ ಹಾಗೂ ಪ್ರಳಯಕಾರಕವಾದ ದಿವ್ಯ ಶಕ್ತಿಗಳು ಇದ್ದದ್ದು ಕಂಡುಬರುತ್ತದೆ. ಶ್ರೀ ರಾಮಚಂದ್ರನು ಮಾಡಿದ ಶಿವಧನುರ್ಭಂಗ, ಶಿವನು ಪರುಶುರಾಮನಿಗೆ ಕೊಟ್ಟ ಪರಶು, ಕರ್ಣ ಮತ್ತು ಅರ್ಜುನರು ಶಿವನಿಂದ ಪಡೆದ ದಿವ್ಯಾಸ್ತ್ರಗಳು ಇವೆಲ್ಲವೂ ಮಹಾದೇವನ ಮಹಾಶಕ್ತಿಯ ವಾಸಸ್ಥಾನಗಳು. "ಮಹಾದೇವ" ಎಂಬ ಈ ಪವಿತ್ರ ಶಬ್ದದಲ್ಲಿಯೇ ಒಂದು ತರದ ಪ್ರಳಯಕಾರೀ ಪ್ರಚಂಡ ಶಕ್ತಿಯು ಇದ್ದದ್ದು ಕಂಡುಬರುತ್ತದೆ

---

* **ಹನ್ನೆರಡು ಜ್ಯೋತಿರ್ಲಿಂಗಗಳು:** — ೧. ಸೋರಟೀ ಸೋಮನಾಥ ೨. ಉಜ್ಜಯಿನಿಯ ಮಹಾಕಾಲೇಶ್ವರ ೩. ಬದರೀ ಕೇದಾರನಾಥ ೪. ಕಾಶೀ ವಿಶ್ವೇಶ್ವರ ೫. ನರ್ಮದೆಯ ಓಂಕಾರೇಶ್ವರ ೬. ನಾಶಿಕದ ತ್ರ್ಯಂಬಕೇಶ್ವರ ೭. ವೇರೂಳದ ಘೃಷ್ಣೇಶ್ವರ ೮. ಪಾರುಕವನದ ನಾಗನಾಥ ೯. ಪರಳಿಯ ವೈಜನಾಥ ೧೦. ಡಾಕಿನೀವನದ ಭೀಮಾಶಂಕರ ೧೧. ಶ್ರೀಶೈಲದ ಮಲ್ಲಿಕಾರ್ಜುನ ಮತ್ತು ೧೨. ಸೇತುಬಂಧದ ರಾಮೇಶ್ವರ.

ಮಹಾದೇವನ ಶಕ್ತಿಯ ರೂಪವೇ "ರುದ್ರ." ಹನ್ನೊಂದು ವೇಳೆ ರುದ್ರಜಪವನ್ನು ಮಾಡಿದರೆ ಆತನಿಗೆ "ಏಕಾದಶಣಿ" ಅಥವಾ "ಲಘುರುದ್ರ" ಎಂದು ಅನ್ನುತ್ತಾರೆ. ಅದೇ ಪ್ರಕಾರ, ಶತರುದ್ರ, ಸಹಸ್ರ ರುದ್ರರೂ ಇರುವರು. ಈ ರುದ್ರ ರೂಪದಲ್ಲಿ ಶಕ್ತಿಯ ಪರಾಕಾಷ್ಠತೆಯು ಸಮಾವಿಷ್ಟವಾಗಿರುತ್ತದೆ. ಈ ರುದ್ರರೂಪವನ್ನೇ ಧರಿಸಿ ಶಿವನು ತ್ರಿಪುರಾಸುರನನ್ನು ಸಂಹಾರ ಮಾಡಿದನು. ಈ ರುದ್ರ ಸ್ವರೂಪನೇ ಶಿವನ ತೇಜ, ಅಗ್ನಿ ಮತ್ತು ಸೂರ್ಯರು.

ಶಿವನು ಮಹಾ ಪ್ರಳಯ ಕಾರಿಯು ಇದ್ದಂತೆ ಮಹಾ ಕಲ್ಯಾಣಕಾರಿಯೂ ಆಹುದು. ಅಂತೆಯೇ ಅಪ ಮೃತ್ಯುವು ಸಂಭವಿಸಬಾರದೆಂದು ಶಿವನ ಉಪಾಸನೆ ಯನ್ನು ಮಾಡುವರು. ಸತೀ ಸಾವಿತ್ರಿಯು ಸತ್ಯಗಂಡನ ಜೀವವನ್ನು ಪುನಃ ಪಡೆದದ್ದು, ಮಾರ್ಕಂಡೇಯನು ತನ್ನ ಅಪಮೃತ್ಯುವನ್ನು ತಪ್ಪಿಸಿಕೊಂಡದ್ದು ಶಿವನ ಕಲ್ಯಾಣ ಕಾರೀ ಪರಾಕಷ್ಠತೆಯ ಶಕ್ತಿಯ ಉದಾಹರ ಣೆಗಳು, ಅಲ್ಲದೆ ತ್ರೇತಾಯುಗದಲ್ಲಿ ರಾವಣನು ತನ್ನ ಅಪಾರವಾದ ಶಿವಭಕ್ತಿಯಿಂದ ಭೂಖಂಡದಲ್ಲಿ ಅಖಂಡ ವಾದ ಸಂಪತ್ತನ್ನು ಪಡೆದನು; ದ್ವಾಪರ ಯುಗದಲ್ಲಿ ಭೀಮಸೇನನು ರುದ್ರಾವತಾರಿಯಾದನು; ಸಾಕ್ಷಾತ್ ವಿಷ್ಣುವು ತನ್ನ ನೇತ್ರ ಕಮಲವನ್ನೇ ಶಿವನಿಗೆ ಅರ್ಪಿಸಿ ಸುದರ್ಶನ ಚಕ್ರವನ್ನು ಪಡೆದು ತ್ರೈಲೋಕ್ಯ ವಿಜಯಿ ಯಾದನು. ಇವೇ ಮುಂತಾದವು ಶಿವಭಕ್ತಿಯ ಕೆಲ ವೊಂದು ಒಳ್ಳೆಯ ಉದಾಹರಣೆಗಳು. ಹೀಗೆ ಶಿವೋ ಪಾಸನೆಯಲ್ಲಿ ಒಂದುತರದ ಶಕ್ತಿಯು ಕಂಡುಬರುತ್ತಿದ್ದು ಎಲ್ಲರೂ ಶಿವನ ಆರಾಧನೆಯನ್ನು ಅತಿಭಕ್ತಿಯಿಂದ ಮಾಡುತ್ತಾರೆ.

## ಪರಿಶಿಷ್ಟ (ಅ)
## ಬಿಲ್ವಪತ್ರದ ಮಹಿಮೆ

ಜಗನ್ನಿಯಾಮಕನಾದ ಶಂಕರನು ಜಗನ್ಮಾತೆ ಯಾದ ಪಾರ್ವತಿಗೆ ಬಿಲ್ವಪತ್ರದ ಮಹತ್ವವನ್ನು ಕುರಿತು ಹೇಳಿದ ಪೌರಾಣಿಕ ಕಥೆಯು ಹೀಗಿದೆ:—

ಒಮ್ಮೆ ವಿಷ್ಣುವಿನ ಭಾರ್ಯೆಯಾದ ಲಕ್ಷ್ಮಿಯು ಸಹಸ್ರ ಕಮಲಗಳಿಂದ ಶಂಕರನನ್ನು ಪೂಜಿಸಿದಳು. ಆಗ ಒಮ್ಮೆಲೇ ಒಂದು ಕಮಲವು ಕಡಿಮೆಯಾಯಿತು. ಇದನ್ನು ಕಂಡು ಭಕ್ತಿಪರಾಯಣಳಾದ ಲಕ್ಷ್ಮಿಯು ತನ್ನ ಮೊಲೆಯನ್ನೇ ಕೊಯ್ದು ಶಂಕರನ ಪಾದದ ಮೇಲೆ ಇಟ್ಟು ಪೂಜಿಸತೊಡಗಿದಳು. ಅವಳ ಭಕ್ತಿಗೆ ಮೆಚ್ಚಿ ಶಿವನು ಆಕೆಯ ಇಷ್ಟಾರ್ಥವನ್ನು ಪೂರ್ಣಮಾಡಿದನು; ಅಲ್ಲದೆ ಅವಳು ಇತ್ತ ಸ್ತನವನ್ನು ತನ್ನ ಮಸ್ತಕದ ಮೇಲೆ ಧರಿಸಿಕೊಂಡು ಹೋಗಿ ಅದನ್ನು ಭೂಮಿಯಲ್ಲಿ ಶ್ರೀಶೈಲ ಗಿರಿಯ ಮೇಲೆ ಸ್ಥಾಪಿಸಿದನು. ಅದರಿಂದ ಬಿಲ್ವವೃಕ್ಷದ ಉತ್ಪನ್ನವಾಯಿತು. ಮುಂದೆ ಅಲ್ಲಿ ಮೂರುಪರೆ ಕೋಟಿ ತೀರ್ಥಗಳು ಕೂಡಿಬಂದು ಈ ವೃಕ್ಷದಲ್ಲಿ ವಾಸಮಾಡಿ ದವಂತೆ. ಅಂದಿನಿಂದ ಈ ಬಿಲ್ವ ಫಲವು ಈ ಲೋಕದಲ್ಲಿ "ಶ್ರೀಫಲ" ಎಂಬ ಹೆಸರಿನಿಂದ ಕರೆಯಲ್ಪಟ್ಟಿತು. ಅಂತೆಯೇ ದೇವಾಧಿದೇವತೆಗಳಿಗೆ ಬಿಲ್ವವೃಕ್ಷವು ಪೂಜ್ಯ ವಾಯಿತು. ಮತ್ತು ಅದು ಭೂಲೋಕದಲ್ಲಿ 'ಪರಮ ವೃಕ್ಷ'ವಾಗಿ ಪೂಜಿಸಲ್ಪಡಹತ್ತಿತು.

ಆದ್ದರಿಂದ ಇಷ್ಟು ಪವಿತ್ರವಾದ ಈ ಬಿಲ್ವವೃಕ್ಷ ವನ್ನು ಪೂಜಿಸಿದವರೆ, ಧ್ಯಾನಿಸಿದವರ ಹಾಗೂ ಇದರಡಿ ಯಲ್ಲಿ ವಾಸಿಸಿದವರ ಪಾಪಗಳು ಪರಿಹಾರವಾಗುತ್ತವೆ. ಬಿಲ್ವದಳದಿಂದ ಪರಮಾತ್ಮನನ್ನು ಪೂಜಿಸುವವರಿಗೆ ಹಾಗೂ ಅದಕ್ಕೆ ಪ್ರತಿನಿತ್ಯ ಪ್ರದಕ್ಷಿಣೆ ಹಾಕುವವರ ಮನೆಯಲ್ಲಿ ಸಕಲ ಸಂಪತ್ತುಗಳು ಅಭಿವೃದ್ಧಿ ಹೊಂದು ತ್ತವೆಯಂತೆ.

ಸಾವಿರಾರು ಪುಷ್ಪಗಳ ಪೂಜೆಯೂ ಸಹ ಒಂದು ಬಿಲ್ವ ದಳದ ಪೂಜೆಗೆ ಸರಿಯಾಗಲಾರದಂತೆ. ಈ ಬಿಲ್ವವು ಯಾವಾಗಲೂ ಪವಿತ್ರ. ಅದಕ್ಕೆ ಮೈಲಿಗೆ ಎಂಬುದು ಇಲ್ಲವೇ ಇಲ್ಲ. ದಿನಾಲು ಶಿವಲಿಂಗವನ್ನು ಒಮ್ಮೆ ಯಾದರೂ ಬಿಲ್ವ ಪತ್ರದಿಂದ ಪೂಜಿಸಿದರೆ ಮಹತ್ ಪುಣ್ಯವು ಪ್ರಾಪ್ತವಾಗುವದು. ಈ ಬಿಲ್ವ ವೃಕ್ಷವನ್ನು ಶಿವನು ಭೂಲೋಕದ ಕಲ್ಯಾಣಕ್ಕಾಗಿಯೇ ಕೊಟ್ಟಿರುವ ನಂತೆ, ಆದ್ದರಿಂದ "ಇದರ ಮಹತ್ವವನ್ನು ಅರಿತು ಅದರಂತೆ ಆಚರಿಸಿದರೆ ಅಂಥವರು ಕೈಲಾಸವೇರಿ ನಿತ್ಯ ಸುಖಿಗಳಾಗಲಿ!" ಎಂದು ಪರಮಾತ್ಮನು ಹರಸಿರುವನು.

## ಪರಿಶಿಷ್ಟ (ಬ)
## ವಟವೃಕ್ಷದ ಮಹಿಮೆ

ಒಂದಾನೊಂದು ದಿನ ಪ್ರದೋಷ (ಮುಚ್ಚಂಜೆ) ಕಾಲದಲ್ಲಿ ಶಿವನು ಭಸ್ಮವನ್ನು ಹಚ್ಚಿಕೊಳ್ಳುವಾಗ ಅದರಲ್ಲಿ ಒಂದು ಹರಳು ಬಂದಿತು. ಅದನ್ನು ತೆಗೆದು ಭೂಮಿಯ ಮೇಲೆ ಒಗೆದ ಕೂಡಲೇ ಅದರಿಂದ ಒಬ್ಬ

ರಾಕ್ಷಸನು ಜನಿಸಿದನು. ಇವನನ್ನು ನೋಡಿ ಶಿವನು ಅವನಿಗೆ "ಭಸ್ಮಾಸುರನೆಂದು ಹೆಸರಿಟ್ಟನು.

ಭಸ್ಮಾಸುರನು ಶಿವನ ಪ್ರೀತಿಯನ್ನು ಸಂಪಾದಿಸುವದಕ್ಕಾಗಿ ಆತನಿಗೆ ದಿನಾಲು ಚಿತಾಭಸ್ಮವನ್ನು ತಂದು ಕೊಡಹತ್ತಿದನು. ಹೀಗಿರುತ್ತಿರಲು ಒಂದು ದಿನ ಭಸ್ಮಾಸುರನಿಗೆ ದೇವತೆಗಳು ರಾಕ್ಷಸ ಕುಲವನ್ನು ಹೀಯಾಳಿಸುತ್ತಿರುವದು ಕಂಡುಬಂದಿತು. ಅದಕ್ಕಾಗಿ ಸಕಲ ದೇವತೆಗಳನ್ನು ನಿರ್ನಾಮ ಮಾಡಿ ತಾನೇ ಸ್ವರ್ಗದ ಅಧಿಪತಿಯಾಗಬೇಕೆಂದು ಭಸ್ಮಾಸುರನು ಇಚ್ಛಿಸಿದನು.

ಹೀಗೆ ಆಲೋಚಿಸಿ ಒಂದು ದಿನ ಭಸ್ಮಾಸುರನು ಶಂಕರನೆಡೆಗೆ ಬಂದು, ಕಾಪಟ್ಯದಿಂದ "ದೇವಾ ಎಷ್ಟು ತಿರುಗಿದರೂ ಈ ಹೊತ್ತು ಭೂಮಿಯಲ್ಲಿ ಚಿತಾಭಸ್ಮವು ಸಿಗಲಿಲ್ಲ. ಆದ್ದರಿಂದ ನಾನು ಯಾರ ತಲೆಯ ಮೇಲೆ ಹಸ್ತವನ್ನಿಡುವೆನೋ ಅವರು ತತ್‌ಕ್ಷಣವೇ ನಾಶವಾಗಬೇಕು." ಎಂಬ ವರವನ್ನು ಕೊಟ್ಟರೆ ನೀನು ಬೇಡಿದಾಗ ಚಿತಾಭಸ್ಮವು ದೊರೆಯುವದು ಎಂದು ಹೇಳಿದನು. ರಾಕ್ಷಸನ ಕಪಟವನ್ನರಿಯದ ಶಂಕರನು ವರವನ್ನು ಕೊಡುವಾಗ ಎಲ್ಲ ದೇವತೆಗಳು ಎಷ್ಟೇ ವಿರೋಧಿಸಿದರೂ ಭಸ್ಮಾಸುರನ ಇಚ್ಛೆಯಂತೆ ವರವನ್ನು ಕೊಟ್ಟನು.

ಆ ಮೇಲೆ ಕೇಳುವದೇನು ? ಭಸ್ಮಾಸುರನು ಎಲ್ಲರಿಗೂ ತ್ರಾಸು ಕೊಡಹತ್ತಿದನು. ಅನೇಕರನ್ನು ಸಂಹಾರ ಮಾಡಿದನು. ಸಕಲ ಲೋಕಗಳಲ್ಲಿಯೂ ಹಾಹಾಕಾರವೆದ್ದಿತು. ನಾಕ್ಷಾತ್ ಶಂಕರನನ್ನೇ ಸಂಹರಿಸಿ ಪಾರ್ವತಿಯನ್ನು ವಶಮಾಡಿಕೊಳ್ಳುವ ನಿಮಿತ್ತ ಶಂಕರನ ತಲೆಯ ಮೇಲೆಯೇ ಹಸ್ತವನ್ನಿಡಲಿಕ್ಕೆ ಯತ್ನಮಾಡಿದನು.

ಇದನ್ನು ಕಂಡು ಎಲ್ಲ ದೇವತೆಗಳು ಪಲಾಯನ ಮಾಡಿದರು. ಶಂಕರನೂ ಅರಣ್ಯದ ಕಡೆ ಓಡಲಾರಂಭಿಸಿದನು. ಭಸ್ಮಾಸುರನು ಇವರೆಲ್ಲರನ್ನು ಬೆನ್ನಟ್ಟಿದನು. ಆದರೆ ಅನಾದ್ಯನಂತನಾದ ಪರಶಿವನು ಈ ದುಷ್ಟ ರಾಕ್ಷಸನ ಕೈಗೆ ಸಿಗುವದೆಂತು? ರಾಕ್ಷಸನು ಹಾಗೆಯೇ ಬಹುದೂರ ಬೆನ್ನಟ್ಟಿ ಹೋಗಿ ಕೈಗೆ ಸಿಗದೆ ನಿರರ್ಥಕನಾಗಿ ಕಂಗೆಟ್ಟು ಕಾಡಿನಲ್ಲಿ ಸಮ್ಮನೇ ಕುಳಿತನು. ಈಶ್ವರನು ಅಲ್ಲಿಯೇ ಒಂದು ವಟವೃಕ್ಷವಾಗಿ ನಿಂತುಕೊಂಡನು.

ಇತ್ತ ಪಾರ್ವತಿಯು ವಿಷ್ಣುವಿಗೆ ಶರಣಾಗತಳಾದಳು. ವಿಷ್ಣುವು ತ್ರಿಲೋಕ ಸುಂದರಿಯಾದ ಮೋಹಿನೀ ವೇಷವನ್ನು ಧರಿಸಿ ದೈತ್ಯನ ಎದುರಿಗೆ ಬಂದನು. ರಾಕ್ಷಸನು ಅವಳ ರೂಪಕ್ಕೆ ಮೋಹಿಸಿದನು. ಮತ್ತು ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಲು ಯತ್ನಿಸಿದನು. ಆಗ ಮೋಹನಿಯು " ರಾಕ್ಷಸನೇ ಯಾವ ಚಿಂತೆಯನ್ನೂ ಮಾಡಬೇಡ. ನಿನ್ನಿಚ್ಛೆಯಂತೆ ವರ್ತಿಸುವೆನು ! ಆದರೆ ನಾನು ನರ್ತನ ಮಾಡಿದಂತೆ ನೀನೂ ಮಾಡಬೇಕು, ಅಂದರೆ ಮಾತ್ರ ನಿನ್ನ ವಶಳಾಗುವೆನು " ಎಂದು ಹೇಳಿದಳು.

ರಾಕ್ಷಸನು ಮೋಹಿನಿಯ ಮಧುರ ಮಾತುಗಳಿಗೆ ಮರುಳಾಗಿ "ಹಾಗೇ ಆಗಲಿ" ಎಂದು ಒಪ್ಪಿಕೊಂಡನು. ಮೋಹಿನಿಯು ವಟವೃಕ್ಷದ ಅಡಿಯಲ್ಲಿ ನೃತ್ಯವನ್ನಾರಂಭ ಮಾಡಿದಳು. ರಾಕ್ಷಸನಾದರೂ ಇವಳಂತೆ ಕುಣಿಯಹತ್ತಿದನು. ಕೆಲಹೊತ್ತಿನಮೇಲೆ ರಾಕ್ಷಸನ ಚಿತ್ತವು ಮೋಹಿನಿಯಲ್ಲಿ ಲೀನವಾಯಿತು. ಮೋಹಿನಿಯು ಮನೋಹರ ರಾಗವನ್ನು ಹಾಡುತ್ತ ಹಾವಭಾವ ಮಾಡುತ್ತ ತನ್ನ ಹಸ್ತವನ್ನು ತನ್ನ ತಲೆಯಮೇಲೆ ಇಟ್ಟುಕೊಂಡಳು. ನೃತ್ಯದಲ್ಲಿ ತಲ್ಲೀನನಾದ ಭಸ್ಮಾಸುರನೂ ಮೋಹಿನಿಯಂತೆ ತನ್ನ ಹಸ್ತವನ್ನು ತನ್ನ ತಲೆಯಮೇಲೆ ಇಟ್ಟುಕೊಂಡನು. ಕೂಡಲೇ ರಾಕ್ಷಸನು ಭಸ್ಮವಾಗಿ ಭೂಮಿಯ ಮೇಲೆ ಬಿದ್ದು ಬಿಟ್ಟನು.

ದೇವತೆಗಳಿಂದ ಪುಷ್ಪವೃಷ್ಟಿಯಾಯಿತು. ಈಶ್ವರನು ನಿಜರೂಪ ತಾಳಿದನು. ಮೋಹಿನಿಯು ವಿಷ್ಣುವಾದನು.

ಆಮೇಲೆ ಹರಿಹರರು ಒಬ್ಬರನ್ನೊಬ್ಬರು ಅಲಿಂಗಿಸಿ ಕೈಲಾಸಕ್ಕೆ ಹೋದರು. ರಾಕ್ಷಸರಿಂದ ಎಲ್ಲರೂ ನಿಷ್ಕಂಟಕರಾದದ್ದನ್ನು ಕಂಡು, ಪಾರ್ವತಿ ಇಬ್ಬರನ್ನೂ ಪೂಜಿಸಿದಳು. ಭಸ್ಮಾಸುರನ ಸಂಹಾರದ ಸುದ್ದಿಯನ್ನು ಕೇಳಿ ಎಲ್ಲ ದೇವತೆಗಳು ಸಂತುಷ್ಟರಾಗಿ, ವಿಷ್ಣು, ಶಂಕರರನ್ನು ಧ್ಯಾನಿಸಿದರು ಮತ್ತು ಅವರೆಲ್ಲರೂ ಆನಂದ ಸಾಗರದಲ್ಲಿ ಮುಳುಗಿದರು.

ಶುಭಂ ಮಂಗಲಂ

**ದಿವಂಗತರಾದ**

# ಶ್ರೀಮತಿ ಸರೋಜಿನಿ ನಾಯಡು

ಲೇಖಕರು : **ಶ್ರೀ ಶಿಂತ್ರಿ ಬಸಪ್ಪನವರು,** ಬಿ.ಎ.,ಬಿ.ಟಿ.

## ಮನೆತನ ಹಾಗು ಪರಂಪರೆ

ಪೂರ್ವ ಬಂಗಾಲದಲ್ಲಿ ಚಟ್ಟೋಪಾಧ್ಯಾಯವೆಂಬ ಹೆಸರಿನದೊಂದು ಬ್ರಾಹ್ಮಣರ ಮನೆತನವಿದೆ. ಆ ಮನೆತನದವರು ಸಂಸ್ಕೃತ ಭಾಷೆಯ ಹಾಗು ವೇದಾಂತ ವಿಷಯದ ಅಭ್ಯಾಸಗಳಲ್ಲಿ ಹೆಸರುವಾಸಿಯಾದವರು. "ನನ್ನ ಪೂರ್ವಜರು ಗವಿ-ಕಾಡು-ಗಿರಿಗಳ ನಿವಾಸಕ್ಕೆ ಮೆಚ್ಚಿದವರು, ಮಹಾನುಭಾವಿಗಳು, ಪಂಡಿತರು, ವಿಚಾರ ಶೀಲರು" ಎಂದು ಶ್ರೀಮತಿಯವರೇ ಒಂದೆಡೆ ಅಂದಿದ್ದಾರೆ. ಹಲವರು ಶಾಸ್ತ್ರಾಭ್ಯಾಸದಲ್ಲಿ ಆಸಕ್ತಿಯನ್ನು ವಹಿಸಿದ್ದರೆ, ಹಲವರು ಕವಿಗಳಾಗಿ ಮಾನವನ ಬಾಳು ಹೇಗಿರಬೇಕು ಮತ್ತು ಅವನು ಹೇಗೆ ಬಾಳಬೇಕೆಂಬುದರ ಬಗೆಗೆ ಅಂದ ಚಂದವಾದ ಕವಿತೆಗಳನ್ನು ಬರೆದಿದ್ದಾರೆ. ಶ್ರೀಮತಿಯವರ ತಂದೆ ಡಾ. ಅಘೋರನಾಥ ಚಟ್ಟೋಪಾಧ್ಯಾಯವರು ತಮ್ಮ ವಂಶ ಪರಂಪರೆಗನು ಗುಣವಾಗಿ ಪಂಡಿತರಾಗಿದ್ದುದಲ್ಲದೆ ನಿಃಸ್ವಾರ್ಥಬುದ್ಧಿಯ ಹಾಗು ವಿಶಾಲ ಹೃದಯದ ಗೃಹಸ್ಥರಾಗಿದ್ದರು. ತಮ್ಮ ಪೂರ್ವಜರಂತೆ ವೇದಾಂತ-ಶಾಸ್ತ್ರಗಳಲ್ಲಿ ಮಗ್ನರಾಗದೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಯುರೋಪ ಖಂಡಕ್ಕೆ ಪಯಣ ಮಾಡಿ ಜರ್ಮನಿ ದೇಶದ ಬಾನ್ ವಿಶ್ವವಿದ್ಯಾಲಯದ ಹಾಗು ಸ್ಕಾಟಲಂಡದ ಎಡಿನ್‌ಬರೋ ವಿಶ್ವವಿದ್ಯಾಲಯದ "ಡಾಕ್ಟರ ಆಫ್ ಸಾಯಿನ್ಸ್" (Doctor of Science) ಎಂಬ ಪದವಿಯನ್ನು ಪಡೆದರು. ಸ್ವದೇಶಕ್ಕೆ ಮರಳಿದ ನಂತರ ಹೈದರಾಬಾದ (ದಕ್ಷಿಣ) ದಲ್ಲಿ ನೌಕರಿಗೆ ನಿಂತು ಅಲ್ಲಿ ನೈಜಾಮ ಕಾಲೇಜವನ್ನು ಹೊರಡಿಸಿ ಆ ಸಂಸ್ಥೆಯಲ್ಲಿ ಬಹಳ ವರ್ಷಗಳ ವರೆಗೆ ದುಡಿದರು. ಅವರ ತಾಯಿಯ ಹೆಸರು ಶ್ರೀಮತಿ ವರದಾ ದೇವಿ ಸುಂದರಿ. ಅವರು ಕವಯಿತ್ರಿಯರಾಗಿದ್ದು ಬಂಗಾಲಿ ಭಾಷೆಯಲ್ಲಿ ಸುಂದರವಾದ ಪದ್ಯಗಳನ್ನು, ಹಾಡುಗಳನ್ನು ಬರೆದಿದ್ದಾರೆ. ಅವರು ಆದರ್ಶ ಮಾತೆಯವರಾಗಿದ್ದರು. ಮಕ್ಕಳ ಒಲವನ್ನು ನೋಡಿಕೊಂಡು ಅವರವರ ಒಲವಿನ ವಿಷಯವನ್ನೇ ಕಲಿಯಲು ಪ್ರೋತ್ಸಾಹಿಸುತ್ತಿದ್ದರು. ಒಂದು ಮಗುವಿಗೆ ಸಂಗೀತವನ್ನು ಕಲಿಯಲು, ಮತ್ತೊಂದು ಮಗುವಿಗೆ ಕವಿತೆಗಳನ್ನು ರಚಿಸಲು, ಮಗದೊಂದು ಮಗುವಿಗೆ ಚಿತ್ರಕಲೆಯನ್ನು ಅಭ್ಯಸಿಸಲು ಹುರಿದುಂಬಿಸುತ್ತಿದ್ದರು.

## ಬಾಲ್ಯ ಮತ್ತು ಶಿಕ್ಷಣ

ಅಂತಹ ಆದರ್ಶ ದಂಪತಿಗಳಿಂದ ಶ್ರೀಮತಿಯವರು ೧೮೭೯ನೆಯ ಇಸವಿ ಫೆಬ್ರುವರಿ ತಿಂಗಳ ೧೩ ನೆಯ ದಿನಾಂಕ ದಕ್ಷಿಣ ಹೈದರಾಬಾದದಲ್ಲಿ ಜನಸಿದರು. ಆ ಊರಲ್ಲಿ ಅವರ ಮನೆತನವು ಸೌಖ್ಯದ ಬೀಡಾಗಿತ್ತು. ಚಿಕ್ಕಂದಿನಲ್ಲಿಯೇ ಅವರಿಗೆ ಎಲ್ಲ ತರಹದ ಸಂಪರ್ಕವಾದುದರಿಂದ ಜನರ ವಿವಿಧ ಆಚಾರ ವಿಚಾರಗಳನ್ನೂ ರೀತಿ-ನೀತಿಗಳನ್ನೂ ಅರಿತು ಕೊಂಡಿದ್ದರು. ಅವರ ಮನೆಯ ನೆರೆ-ಹೊರೆಯವರೆಲ್ಲ ಮಹಮ್ಮದೀಯ ಧರ್ಮದವರಿದ್ದುದರಿಂದ ಆ ಜನರ ನಡೆ-ನುಡಿಗಳೆಲ್ಲ ಅವರಿಗೆ ಗೊತ್ತಾಗಿದ್ದವು. ಆ ಕಾರಣದಿಂದಲೇ ಮುಂದೆ ಅವರು ಹಿಂದೂ-ಮುಸಲ್ಮಾನರ ಒಕ್ಕಟ್ಟಿನ ಸಲುವಾಗಿ ಮಹಾತ್ಮರ ಬಲಗೈಯಾಗಿ ಹೆಣಗಾಡಿದರೆಂಬಂತೆ ತೋರುತ್ತದೆ. ಅವರ ತಂದೆಯವರು ಅವರನ್ನು ಚಿಕ್ಕ ಮಗು ಇದ್ದಾಗಲೇ ಸಾಲೆಗೆ ಹಾಕಿದರು. ಸರೋಜನಿಯು ಇಂಗ್ಲೀಷ ಪಾಠಗಳನ್ನು ಚನ್ನಾಗಿ ಮಾಡುತ್ತಿದ್ದಿಲ್ಲವಾದುದರಿಂದ ತಂದೆಯವರು ಒಮ್ಮೆ ಸಿಟ್ಟಿಗೆದ್ದು ಒಂದು ಕೋಣೆಯಲ್ಲಿ ಅವಳೊಬ್ಬಳನ್ನೇ ಹಾಕಿ ಬಾಗಿಲುವನ್ನು ಮುಚ್ಚಿ ಬಹಳ ಹೊತ್ತಿನವರೆಗೆ ಅಲ್ಲಿಯೇ ಇಟ್ಟರು. ಆಕಶೋರ ಶಿಕ್ಷೆಯನ್ನು ವಿಧಿಸಿದುದು ಒಳ್ಳೇ ಪರಿಣಾಮವನ್ನುಂಟು ಮಾಡಿತು. ಆ ಕೋಣೆಯೊಳಗಿಂದ ಅವಳು ಭಾಷಾ ವಿಶಾರದಳಾಗಿಯೇ ಹೊರಬಿದ್ದಳೆಂಬಂತೆ ತೋರುತ್ತಿದೆ. ಯಾಕೆಂದರೆ, ಅಂದಿನಿಂದ ಅವಳು ಇಂಗ್ಲೀಷ ಹಾಗು ಉಳಿದ ಭಾಷೆಗಳಲ್ಲಿ ಉತ್ತಮ ಪ್ರಗತಿಯನ್ನು ಹೊಂದಿದಳು. ತಂದೆಯ ಮನಸ್ಸಿನಲ್ಲಿ ಅವರು ಗಣಿತ ಹಾಗು ಸಾಯನ್ಸ ವಿಷಯಗಳಲ್ಲಿ ಪ್ರವೀಣರಾಗಬೇಕೆಂದಿತ್ತು; ಆದರೆ ಅವರ ಒಲವು

ಅವರ ವಂಶದ ಪರಂಪರೆಗನುಸರಿಸಿ ಕವಿತೆಗಳನ್ನು ರಚಿಸುವದರತ್ತ ಪ್ರಯತ್ನಿಸುತ್ತಿತ್ತು. ಕೇವಲ ಹನ್ನೊಂದು ವರ್ಷದ ಬಾಲಿಕೆಯಾಗಿದ್ದಾಗ ಅವರು ತಮ್ಮ ಪ್ರಥಮ ಕವಿತೆಯನ್ನು ಇಂಗ್ಲೀಷಿನಲ್ಲಿ ರಚಿಸಿದರು! ಹದಿಮೂರು ವರುಷದವರು ಇದ್ದಾಗ ಇಂಗ್ಲೀಷ ಭಾಷೆಯ ಪ್ರಸಿದ್ಧ ಕವಿಯಾದ ಸರ್ ವಾಲ್ಟರ ಸ್ಕಾಟನ ಕೃತಿಗಳನ್ನು ಹೊಲುವಂಥ ಸುದೀರ್ಘವಾದದ್ದೊಂದು ಕವಿತೆಯನ್ನು ರಚಿಸಿದರು ! ಹನ್ನೆರಡು ವರ್ಷದವರಿದ್ದಾಗಲೇ ಮದ್ರಾಸ ವಿಶ್ವ ವಿದ್ಯಾಸಿಲಯದ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದರು. ಎಲ್ಲರೂ ಆಗ ಅವರ ಪಾಂಡಿತ್ಯಕ್ಕೆ ತಲೆದೂಗಿದರು.

## ಹೆಚ್ಚಿನ ಶಿಕ್ಷಣಕ್ಕಾಗಿ ವಿದೇಶ ಗಮನ

ತಂದೆ—ತಾಯಿಗಳು ತಮ್ಮ ಮಗಳಿಗೋಸ್ಕರ ಸರಕಾರದಿಂದ ಸ್ಕಾಲರಶಿಪ್ಪೊಂದನ್ನು ದೊರಕಿಸಿಕೊಂಡು ಅವರನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿಲಾಯತಿಗೆ ಕಳುಹಿದರು. ಮೊತ್ತ ಮೊದಲು ಲಂಡನ್ ಪಟ್ಟಣದಲ್ಲಿಯ ಕಿಂಗ್ಸ ಕಾಲೇಜದಲ್ಲಿ ಅಭ್ಯಾಸ ಮಾಡಿದರು. ಆ ಮೇಲೆ ಕೇಂಬ್ರಿಜ ವಿಶ್ವವಿದ್ಯಾಲಯದ ಪ್ರಸಿದ್ಧ ಗರ್ಟನ್ ಎಂಬ ಹೆಸರಿನ ಹೆಂಣು ಮಕ್ಕಳ ಕಾಲೇಜದಲ್ಲಿ ಅಭ್ಯಾಸ ಮಾಡಿದರು. ಲಂಡನ್ ಪಟ್ಟಣದಲ್ಲಿದ್ದಾಗ ದೊಡ್ಡ ವಿದ್ವಾಂಸರೂ ಇಂಗ್ಲೀಷ ಸಾಹಿತ್ಯದ ವಿಮರ್ಶಕರೂ ಆಗಿದ್ದ ಸರ್ ಉಡ್ಮಂಡ ಗಾಸ್‌ರವರ ಪರಿಚಯವು ಸುದೈವದಿಂದ ಅವರಿಗಾಯಿತು; ದೇವಿಯವರಿಂದ ರಚಿಸಲ್ಪಟ್ಟಿದ್ದ ಕವಿತೆಗಳನ್ನೆಲ್ಲ ಓದಿ ಆನಂದಪಟ್ಟರು. ಇಂಗ್ಲೀಷ ಭಾಷೆಯ ಮೇಲಿನ ಅವರ ಸ್ವಾಮಿತ್ವಕ್ಕೆ ಬಹಳಷ್ಟು ಮೆಚ್ಚಿದರು. ಆದರೆ, ಆ ಕವಿತೆಗಳೆಲ್ಲ ಇಂಗ್ಲಂಡ ಮತ್ತು ಇಂಗ್ಲಂಡದಲ್ಲಿಯ ವಸ್ತುಗಳನ್ನು ಕುರಿತು ಬರೆಯಲ್ಪಟ್ಟಿದ್ದವು. ಅದು ಸರ್ ಗಾಸ್‌ರವರಿಗೆ ಅಷ್ಟೊಂದು ರುಚಿಸಲಿಲ್ಲ. "ನಿಮ್ಮದೇ ಆದೊಂದು ವೈಶಿಷ್ಟ್ಯ ಇಲ್ಲವೆ ಹೊಸತನವು ಕವಿತೆಯಲ್ಲಿರಬೇಕು. ನೀವು ನಿಮ್ಮ ದೇಶದ ಬಗೆಗೂ ಅಲ್ಲಿಯ ವಸ್ತುಗಳ ಬಗೆಗೂ ಬರೆಯುವದು ಲೇಸು" ಎಂದು ಹಿತೋಪದೇಶ ವನ್ನಿತ್ತರು. ಅಂದಿನಿಂದ ದೇವಿಯವರ ವಿಚಾರಸರಣಿಯ ಹಾಗೂ ಕವಿತಾರಚನೆಯ ದಿಶೆಯೇ ಬದಲಾಯಿತು. ಅಂದಿನಿಂದ ಅವರು ಹಿಂದುಸ್ತಾನ ಮತ್ತು ಅಲ್ಲಿಯ ಸಂಗತಿಗಳ ಬಗೆಗೆ ಉತ್ತಮೋತ್ತಮವಾದ ಕಾವ್ಯಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳಾವ ವೆಂದರೆ:– ದಿ ಗೋಲ್ಡನ್ ಥ್ರೆಶೋಲ್ಡ (The Golden Threshold), ದಿ ಬರ್ಡ ಆಫ್ ಟಾಯಿಮ್ ( The Bird of Time ), ದಿ ಬ್ರೋಕನ್ ವಿಂಗ ( The Broken Wing), ದಿ ಫ್ಲ್ಯೂಟ ಪ್ಲೇಯರ್ ಆಫ್ ಬೃಂದಾವನ (The Flute Player of Brundawana). ಇವಲ್ಲದೆ ಅಸಂಖ್ಯ ಕವನಗಳನ್ನೂ ಪದ್ಯಗಳನ್ನೂ, ಹಾಡುಗಳನ್ನೂ ಬರೆದಿದ್ದಾರೆ. ಲಂಡನ್ ದಲ್ಲಿದ್ದಾಗ ಇನ್ನೋರ್ವ ಗ್ರಂಥಕಾರರು ಹಾಗೂ ವಿಮರ್ಶಕರಾಗಿದ್ದ ಮಿಸ್ಟರ ಆರ್ಥರ ಸಿಮನ್ಸರವರ ಸಂಪರ್ಕವಾಯಿತು. ಅವರಾದರೂ ದೇವಿಯವರ ಪಾಂಡಿತ್ಯಕ್ಕೆ ಮೆಚ್ಚಿ 'ದಿ ಗೋಲ್ಡನ್ ಥ್ರೆಶೋಲ್ಡ' ಎಂಬ ಹೊತ್ತಿಗೆಗೆ ಮುನ್ನುಡಿಯನ್ನು ಬರೆದಿದ್ದಾರೆ. ಅದರಂತೆ 'ದಿ ಬರ್ಡ ಆಫ್ ಟಾಯಿಮ' ಎಂಬ ಹೊತ್ತಿಗೆಗೆ ಸರ್ ಗಾಸ್‌ರವರಿಂದ ವಿವೇಕಪೂರ್ಣ ಮುನ್ನುಡಿಯು ಬರೆಯಲ್ಪಟ್ಟಿದೆ. ದೇವಿಯವರು ತಾವು ರಚಿಸಿದ ಪದ್ಯಗಳನ್ನು ಮಂಜುಳ ಸ್ವರದಿಂದ ಹಾಡಲಿಕ್ಕೆ ಕುಳಿತರೆಂದರೆ, ಕೇಳುವವರೆಲ್ಲ ಮುಗ್ಧರಾಗಿ ತಲೆದೂಗುತ್ತಿದ್ದರು. ಆದುದರಿಂದಲೇ 'ಭಾರತದ ಕೋಗಿಲೆ'ಯೆಂದು ಅಲ್ಲಿಯ ಜನರು ಅವರನ್ನು ಕರೆಯುತ್ತಿದ್ದರು.

## ಸ್ವದೇಶಾಗಮನ

೧೯೯೫ ರಲ್ಲಿ ಅವರು ಸ್ವದೇಶಕ್ಕೆ ಮರಳಿ ಹೈದರಾಬಾದದಲ್ಲಿ ನೆಲೆಸಿದರು. ವಿಲಾಯತಿಗೆ ಪ್ರಯಾಣ ಬೆಳೆಸುವ ಮೊದಲೇ ಡಾಕ್ಟರ ಎಮ್. ಜಿ. ನಾಯಡು ರವರನ್ನು ಲಗ್ನವಾಗಬೇಕೆಂದು ಅವರು ಬಯಸಿದ್ದರು. ಡಾಕ್ಟರ ನಾಯಡುರವರು ಹೈದರಾಬಾದ ಸಂಸ್ಥಾನದಲ್ಲಿ ಮೆಡಿಕಲ್ ಆಫೀಸರರೆಂದು ಕೆಲಸ ಮಾಡುತ್ತಿದ್ದರು. ದೇವಿಯವರ ಜಾತಿ ಬೇರೆ, ನಾಯಡುರವರ ಜಾತಿ ಬೇರೆ. ಈಗಿನ ಹಾಗೆ ಅಂತರ್ಜಾತೀಯ ವಿವಾಹಗಳು ಜಾರಿಯಲ್ಲಿರಲಿಲ್ಲ. ಸಾಮಾಜಿಕ ವಿರೋಧವನ್ನು ಲೆಕ್ಕಿಸದೆ ತಾವು ಮೊದಲೇ ಮನಸ್ಸಿನಲ್ಲಿ ಮಾಡಿಟ್ಟುಕೊಂಡಿದ್ದ ದೃಢಸಂಕಲ್ಪದಂತೆ ಧೈರ್ಯದಿಂದ ಡಾಕ್ಟರ ನಾಯಡು ರವರನ್ನೇ ಲಗ್ನವಾಗಿ ಸಾಮಾಜಿಕ ಸುಧಾರಣೆಯಲ್ಲಿ ಉತ್ತಮೋತ್ತಮವಾದ ಆದರ್ಶವೊಂದನ್ನು ಜನತೆಯ ಮುಂದಿಟ್ಟರು ! ಅಂದಿನಿಂದ ಮಿಶ್ರ ವಿವಾಹಗಳು ಅವ್ಯಾಹತವಾಗಿ ಸಾಗುತ್ತಲೇ ಬಂದಿವೆ. ಅವರೀರ್ವರು

ಆದರ್ಶ ದಂಪತಿಗಳಾಗಿ ಬಾಳಿದರು. ಅವರಿಗೆ ಎರಡು ಗಂಡು, ಎರಡು ಹೆಣ್ಣು, ಹೀಗೆ ಒಟ್ಟು ನಾಲ್ಕು ಜನ ಮಕ್ಕಳು. ಈಗ ಪಶ್ಚಿಮ ಬಂಗಾಲದ ಗವ್ಹರ್ನರಾಗಿದ್ದ ಶ್ರೀಮತಿ ಪದ್ಮಜಾ ನಾಯಡುರವರು ಅವರ ಪುತ್ರಿಯವರಲ್ಲೊಬ್ಬರು. ಪುರಾಣ ಮತವಾದಿಗಳಿಗೂ ಸುಧಾರಕ ಪಂಥದವರಿಗೂ ಮಧ್ಯವರ್ತಿಯಾಗಿ ಹೈದರಾಬಾದ ಪಟ್ಟಣದ ಸಾಮಾಜಿಕ ಜೀವನದಲ್ಲಿ ಅಗ್ರಭಾಗವನ್ನು ವಹಿಸಿ ಎಷ್ಟೋ ವರುಷಗಳ ವರೆಗೆ ಕೆಲಸ ಮಾಡಿದರು. ಆಗ ಆ ಊರಿನ ಸಾಂಸ್ಕೃತಿಕ ಕ್ಷೇತ್ರದಲ್ಲಿಯೂ ಅವರಿಂದ ಸಲ್ಲಿಸಲ್ಪಟ್ಟ ಸೇವೆಯು ಅಷ್ಟಿಷ್ಟಲ್ಲ. ಮುಂದೆ ಅವರು ಹೈದರಾಬಾದ ಪಟ್ಟಣವನ್ನು ತ್ಯಜಿಸಿ ರಾಜಕೀಯದಲ್ಲಿ ಕೈಹಾಕಲು ಅಣಿಯಾದರು. ಭಾರತದ ವಿನೋಜನೆಯ ಸಲುವಾಗಿ ತಮ್ಮ ಕೈಯಿಂದಾದಷ್ಟು ಸೇವೆಯನ್ನರ್ಪಿಸ ಬೇಕೆಂಬ ಉತ್ಕಟೇಚ್ಛೆಯು ಅವರನ್ನು ಬಹಳಷ್ಟು ಬಾಧಿಸಲಿಕ್ಕೆ ಹತ್ತಿತು. ಕೂಡಲೇ ಅವರು ರಾಜಕೀಯ ಕ್ಷೇತ್ರಕ್ಕಿಳಿದರು. ಅಲ್ಲಿಗೆ ಅವರ ಕವಿಯಿತ್ರಿಯ ಅವತಾರವು ಮುಗಿದಂತಾಯಿತು. ಯಾಕೆಂದರೆ, ಮುಂದೆ ಆಗೊಂದು ಈಗೊಂದು ಪದ್ಯವನ್ನು ರಚಿಸಿರುವರು.

## ಸ್ವಾತಂತ್ರ್ಯ ಸಂಗ್ರಾಮ

ಕಾಂಗ್ರೆಸಿನ ಗೂಡ ಅವರ ಸಂಬಂಧವು ಸುಮಾರು ೧೯೧೫ರಿಂದ ಪ್ರಾರಂಭವಾಗಿದೆಯೆಂದು ತೋರುತ್ತಿದೆ. ಕಾನೂನು ನುಂಡಳದಿಂದ ಪಾಸಾದ ಶಸ್ತ್ರಾಸ್ತ್ರ ಕಾಯಿದೆ (Arms Act) ಹಾಗೂ ರೌಲಟ್ ಕಾಯಿದೆ (Rowlatt Act) ಗಳನ್ನು ಅವರು ಬಲವಾಗಿ ವಿರೋಧಿಸಿದರು. ಮೊದಲನೆಯದು ನಮ್ಮ ರಾಷ್ಟ್ರದ ಕ್ಷಾತ್ರತೇಜವನ್ನು ಕುಗ್ಗಿಸುವದೆಂದೂ ಎರಡನೆಯದು ಸಾರ್ವಜನಿಕ ಜೀವನದ ಬೆಳವಣಿಗೆಯನ್ನು ಕಮರಿಸುವ ದೆಂದೂ ಅವರು ಸಾರಿದರು. ಸ್ವಾತಂತ್ರ್ಯ ಪ್ರಿಯರಾದ ಅವರು ಸರಕಾರದವರಿಂದ ಪಾಸಾದ ಅನ್ಯಾಯ ಕಾಯಿದೆ ಗಳನ್ನು ಪ್ರಬಲವಾಗಿ ವಿರೋಧಿಸಿದರಲ್ಲದೆ ಹಲವು ಸಲ ಅವುಗಳನ್ನು ಮುರಿಯಲು ಸಹ ಹಿಂದು-ಮುಂದು ನೋಡ ಲಿಲ್ಲ. ಮೊದಲಿನಿಂದಲೂ ಅವರು ಮಹಾತ್ಮಾ ಗಾಂಧಿ ಅವರ ಪಟ್ಟ ಶಿಷ್ಯರಾಗಿ ಕೆಲಸ ಮಾಡಿದರು. ೧೯೧೭ ರಿಂದ ದಕ್ಷಿಣ ಆಫ್ರಿಕೆಯಲ್ಲಿಯ ಭಾರತೀಯ ಕೂಲಿ-ಕಾರರ ಪ್ರಶ್ನೆಯು ಒಳ್ಳೇ ತುರಿಸಿನದಾಗಿತ್ತಷ್ಟೇ. ೧೯೨೪ ರಲ್ಲಿ ದಕ್ಷಿಣ ಮತ್ತು ಪೂರ್ವ ಆಫ್ರಿಕೆಗೋಸುಗ ನಿಯಮಿಸ ಲ್ಪಟ್ಟ ನಿಯೋಗದ ಸದಸ್ಯರಾಗಿ ಅಲ್ಲಿಗೆ ಹೋಗಿ ಅಲ್ಲಿಯ ನಿಜ ಸಂಗತಿಗಳನ್ನೆಲ್ಲ ತಿಳಿದುಕೊಂಡು ಬಂದು ವಲಸೆ ಹೋಗಿ ನಿಂತಿದ್ದ ಅಲ್ಲಿಯ ಕೂಲಿಕಾರರಿಗೆ ನಾಗರಿಕ ಹಕ್ಕು ಗಳನ್ನು ಆಯಾ ಸರಕಾರಗಳ ಕಡೆಯಿಂದ ಕೊಡಿಸಲು ಹಿಂದುನ್ತಾನ ಸರಕಾರದ ಮೇಲೆ ಒತ್ತಾಯವನ್ನು ಹೇರಿದರು. ರಾಷ್ಟ್ರಕ್ಕೆ ಅವರು ಸಲ್ಲಿಸಿದ ಅಪಾರವಾದ ಸೇವೆಯನ್ನೂ ಅವರ ವಾಕ್ಪಾಂಡಿತ್ಯವನ್ನೂ ಮನದಂದು ೧೯೨೫ ರಲ್ಲಿ ಕಾನಪೂರದಲ್ಲಿ ಕಲೆತ ರಾಷ್ಟ್ರೀಯ ಕಾಂಗ್ರೆಸ್ಸಿನ ಮಹಾಧಿವೇಶನದ ಅಧ್ಯಕ್ಷಿಣಿಯರೆಂದು ರಾಷ್ಟ್ರಕ್ಕೆ ರಾಷ್ಟ್ರನೇ ಅವರನ್ನು ಒಕ್ಕೊರಲಿನಿಂದ ಚುನಾಯಿಸಿತು. ಶ್ರೀಮಂತರ ಮನೆತನದಲ್ಲಿ ಹುಟ್ಟಿ ಶ್ರೀಮಂತಿಕೆಯ ಐಷಾರಾಮದಲ್ಲಿ ಬೆಳೆದು ದೊಡ್ಡವರಾದ ಅವರು ಸೆರೆಮನೆಯು ವಾಸಕ್ಕೆ ಎಂದೂ ಅಂಜಲಿಲ್ಲ. ಕಾಂಗ್ರೆಸ್ಸು ಹೂಡಿದ ಅಸಹಕಾರ, ಸತ್ಯಾಗ್ರಹ, ಸವಿನಯ ಕಾಯಿದೆ ಭಂಗ, ಮೊದಲಾದ ಪ್ರತಿಯೊಂದು ಚಳುವಳಿ ಯಲ್ಲಿ ಪ್ರಮುಖ ಪಾತ್ರವಹಿಸಿ ಮಹಾತ್ಮರ ಬಲಗೈ ಯಾಗಿ ಕೆಲಸ ಮಾಡಿ ರಾಷ್ಟ್ರದ ಸ್ವಾತಂತ್ರ್ಯಕ್ಕೋಸ್ಕರ ಎಷ್ಟೋ ಸಲ ಸೆರೆಮನೆಯನ್ನು ಕಂಡುಬಂದರು. ಸ್ವಾತಂತ್ರ್ಯವು ಪ್ರಾಪ್ತವಾದ ನಂತರ ಅವರು ಉತ್ತರ ಪ್ರದೇಶ ರಾಜ್ಯಪಾಲರಾಗಿದ್ದರು. ಮಹಿಳೆಯರಲ್ಲಿ ಅವರೇ ಪ್ರಪ್ರಥಮ ಗವ್ಹರ್ನರರು. ಆ ರಾಜ್ಯದ ಗವ್ಹರ್ನರ ರಾಗಿದ್ದಾಗ ಜನಪ್ರಿಯರಾಗಿ ಸೇವೆ ಸಲ್ಲಿಸಿ ದಿನಾಂಕ ೨-೩-೧೯೪೯ ರಂದು ಇಹಲೋಕ ಯಾತ್ರೆಯನ್ನು ಮುಗಿಸಿ ರಾಷ್ಟ್ರವನ್ನೆಲ್ಲ ಶೋಕಸಾಗರದಲ್ಲಿ ಮುಳುಗಿಸಿದರು! ಪರಮಾತ್ಮನು ಅವರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ!

## ಯೋಗ್ಯತೆ

ಅವರು ಸುಪ್ರಸಿದ್ಧ ಕವಯಿತ್ರಿಯರಾಗಿದ್ದರಲ್ಲದೆ ಪ್ರತಿಭಾನ್ವಿತ ಭಾಷಣಕಾರರೂ ಆಗಿದ್ದರು. ಹಿಂದೂ-ಮುಸಲ್ಮಾನರಲ್ಲಿ ಮೈತ್ರಿಯನ್ನು ಹುಟ್ಟಿಸಿ ಅವರಲ್ಲಿ ಒಕ್ಕಟ್ಟನ್ನುಂಟು ಮಾಡಬೇಕೆಂಬುದು ಅವರ ಬಾಳಿನ ದೊಂದು ಧ್ಯೇಯವಾಗಿತ್ತು. ಅದಕ್ಕೋಸ್ಕರ ಅವರು ಮಹಾತ್ಮರ ಕೂಡ ಬಹಳಷ್ಟು ಹೆಣಗಾಡಿದರು. ಹೋದಲ್ಲೆಲ್ಲ ಆ ಒಕ್ಕಟ್ಟಿನ ಸಲುವಾಗಿ ವಿಚಾರ ಪರಿಪ್ಲುತ ವಾದ ಉಪನ್ಯಾಸಗಳನ್ನು ಕೊಟ್ಟರು. ಆ ಭಾಷಣಗಳ ನ್ನೆಲ್ಲ ಶೇಖರಿಸಿ ಅಚ್ಚು ಹಾಕಿಸಿದರೆ, ಆ ವಿಷಯದ ಮೇಲೆ

ಅದೊಂದು ಉದ್‌ಗ್ರಂಥವಾಗುವುದರಲ್ಲಿ ಸಂದೇಹವಿಲ್ಲ. ಪುರುಷರಷ್ಟೇ ಸಮಾನ ಹಕ್ಕುಗಳು ಸ್ತ್ರೀಯರಿಗೂ ಇರತಕ್ಕದ್ದೆಂದು ಅವರು ಪ್ರಾರಂಭದಿಂದಲೂ ಘೋಷಿಸುತ್ತಿದ್ದರು. ಗೋಷಾ ಪದ್ಧತಿಯನ್ನು ತೆಗೆದು ಹಾಕಿ ಹೆಂಗಳೆಯರಿಗೆ ಶಿಕ್ಷಣವನ್ನು ಕೊಟ್ಟು ಅವರನ್ನು ಸುಸಂಸ್ಕೃತರನ್ನಾಗಿ ಮಾಡಿರೆಂದು ಹೋದಲ್ಲೆಲ್ಲ ಜನತೆಗೆ ಬೋಧಿಸುತ್ತಿದ್ದರು. ಯಾಕೆಂದರೆ ಮಹಿಳೆಯರನ್ನು ಅಜ್ಞಾನಾಂಧಕಾರದಲ್ಲಿಟ್ಟ ರಾಷ್ಟ್ರವು ಎಂದೂ ಮುಂದು ವರಿಯಲಾರದು. ಈಗಿನ ನಮ್ಮ ಹೊಸ ರಾಜ್ಯಘಟನೆಯಲ್ಲಿ ಸ್ತ್ರೀಯರಿಗೆ ಸಿಕ್ಕಿರುವ ಮತದಾನ ಹಾಗು ಉಳಿದ ಸಮಾನ ಹಕ್ಕುಗಳ ಶ್ರೇಯವು ಬಹುಮಟ್ಟಿಗೆ ಅವರಿಗೇ ಸಲ್ಲುತ್ತದೆ. ಪರದೇಶಗಳಿಗೆ ಸಂದರ್ಶನವಿತ್ತಾಗಲೆಲ್ಲ ಅಲ್ಲಿ ತಮ್ಮ ವ್ಯಾಖ್ಯಾನಗಳಿಂದ ತಮ್ಮ ವಿದ್ವತ್ತತೆಯನ್ನೂ ಪ್ರೌಢಿಮೆಯನ್ನೂ ಹೊರ ಹೊಮ್ಮಿಸಿ ನಮ್ಮ ರಾಷ್ಟ್ರದ ಬಗೆಗೆ ವಿದೇಶೀಯರಲ್ಲಿ ಗೌರವಾದರಗಳನ್ನುಂಟು ಮಾಡಿದ್ದಾರೆ. ಮಾತಿಗಿಂತ ಕೃತಿ ಲೇಸೆಂಬಂತೆ ಸಾಮಾಜಿಕ ಸುಧಾರಣೆಯನ್ನು ಕುರಿತು ಅವರು ಬಹಳಷ್ಟು ಮಾತನ್ನು ಆಡದೆ ಕೃತಿಯಿಂದಲೇ ಮಾಡಿ ತೋರಿಸಿದರು. ಅವರು ಜನಿಸಿದುದು ಬ್ರಾಹ್ಮಣರ ಅತ್ಯುಚ್ಚ ಮನೆತನದಲ್ಲಿ. ಲಗ್ನವಾದುದು ಬ್ರಾಹ್ಮಣರಲ್ಲದ ನಾಯಡು ಜಾತಿಯ ಗೃಹಸ್ಥರನ್ನು. ಹಿಂದೂ ಸಮಾಜಕ್ಕೆ ಸಮಾಜವೇ ಆ ವಿವಾಹದ ವಿರುದ್ಧವಾಗಿ ನಿಂತರೂ ಅವರು ಅದಕ್ಕೆ ಸೊಪ್ಪುಹಾಕಲಿಲ್ಲ. ಡಾಕ್ಟರ ನಾಯಡು ಅವರನ್ನು ಲಗ್ನವಾಗಿಯೇ ತೀರಿದರು. ಮತ್ತು ಸುಧಾರಕರಿಗೆ ಉತ್ತಮನಾದದ್ದೊಂದು ಮೇಲ್ಪಂಕ್ತಿಯನ್ನು ಹಾಕಿ ಕೊಟ್ಟರು. ಆ ಸಮಯದಲ್ಲಿ ಅದರಿಂದ ಆವಿರ್ಭವಿಸಿದ ಎದೆಗಾರಿಕೆಯನ್ನು ಎಷ್ಟು ಬಣ್ಣಿಸಿದರೂ ಕಡಿಮೆಯೇ ಸರಿ. ಸಾರಾಂಶವೆಂದರೆ ಅವರು ಆದರ್ಶ ಮಹಿಳೆಯರೂ ಆಹುದು; ಸುಪ್ರಸಿದ್ಧ ಕವಯಿತ್ರಿಯರೂ ಆಹುದು; ನಾಮಾಂಕಿತ ವಾಗ್ಮಿಗಳೂ ಆಹುದು; ಕೆಚ್ಚೆದೆಯ ಸಮಾಜ ಸುಧಾರಕರೂ ಆಹುದು; ನಿಷ್ಠಾವಂತ ರಾಷ್ಟ್ರಸೇವಿಕೆಯರೂ ಆಹುದು; ಮಹಾತ್ಮರ ಪಟ್ಟ ಶಿಷ್ಯರೂ ಆಹುದು.

ಜಯ್ ಹಿಂದ

## "ದೃಷ್ಟಿ ದೋಷ"

ದೇವನಾಟವು ಮನುಜಗಾಯಿತು
ಬರಿಯ ಬಯಲಾಡಂಬರ !
ಭಾವ ಶುದ್ಧಿಗೆ ಬುತ್ತಿ ಕಟ್ಟದೆ;
ದೇವನೊಲುಮೆಯ ಬಾಯ್‌ಬರ !

"ಮರದ ಹೆಸರಿನ ಮೇಲೆ ಫಲಗಳು
ಮಾರುತಿವೆ ಈ ಕಾಲದಿ !
ಪದವಿಗಾಸರ ಪಡೆದ ಜನವದು
ಬರೆಯುತಿರುವದು ಲೇಖದಿ !"

"ಸತ್ಯಸಂಗತಿ ಎತ್ತಿ ಬರೆದರೆ
ಲೇಖಕಾಯಿತು ಮೃತ್ಯುವು !"
"ಮಿಥ್ಯ ಜಗದಲಿ ಜಾಲಿಬೀಜದ
ತೋಟಕಾಯಿತು ಸತ್ಯವು !"

ಜ್ಞಾನದ್ಭರವಿಯು ತುಂಬಿಕೊಂಡಿದ
ತೆರೆಯಲಾರದೆ ಬಾಯಿಯು !
ಮಾನವಂತರ ನುಡಿಗೆ ಹೀಗೆಯೆ
ಕಾಲವಿರುವದು ಸಹಜವು !

ಪೂರ್ಣ ಪರಿವಿಡಿ ಪಡೆದ ಲೇಖವು
ಮಣ್ಣು ತಿಂದಿತು ಹಲಬುತ !
ಜೀರ್ಣವಾಗದ ಬರಿಹಕಾಯಿತು
ವರ್ಣ ದ್ವೇಷದಿ ಮೋಕ್ಷವು !

ಕನ್ನಡದ ಸಾಗರ ಕೆಸರಿನೊಳಗಡೆ
ಮುಚ್ಚಿಕೊಂಡಿವೆ ರತ್ನವು !
ಬನ್ನಪಡುತಲಿ ನಾಡ ಸೇವೆಯ
ಗೈದರೀ ಅವಸ್ಥೆಯೆ ?

**—ಭೀಮಪ್ಪ ನಡುವಿನಮನಿ**
**ನರಗುಂದ**

# ಪದವೀಧರರ ಜೀವನ ಶಿಕ್ಷಣ ಕೇಂದ್ರ, ಧಾರವಾಡ.
# ಈ ಸಂಸ್ಥೆಯ ಹಳೇ ವಿದ್ಯಾರ್ಥಿಗಳ ವಿಚಾರ ಮಂಥನ, ಬೆಳಗಾಂವಿ.

## [ ಸಂಕ್ಷಿಪ್ತ ವರದಿ ]

ಸರಕಾರದ ಆದೇಶದ ಮೇರೆಗೆ, ವರುವರುಷ ಜೀವನ ಶಿಕ್ಷಣದ ಸಪ್ತಾಹವನ್ನು ಆಚರಿಸಲಾಗುತ್ತಿದೆ. ಈ ಸಪ್ತಾಹದ ಅಂಗವಾಗಿ ಧಾರವಾಡದ ಪದವೀಧರರ ಜೀವನ ಶಿಕ್ಷಣ ಕೇಂದ್ರದ ಹಳೇ ವಿದ್ಯಾರ್ಥಿಗಳ ವಿಚಾರ ಮಂಥನವು ನಡೆಯುವದು ಒಂದು ಪರಿಪಾಠ. ಇದಕ್ಕನುಗುಣವಾಗಿ ಹೋದ ವರುಷ ಇಂತಹ ಒಂದು ವಿಚಾರ ಮಂಥನವು ಧಾರವಾಡದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಆವಾರದಲ್ಲಿ ನಡೆಯಿತು. ಅದರ ಫಲಶ್ರುತಿಯೆಂದು ಜೀವನ ಶಿಕ್ಷಣದ "ಪ್ರಗತಿ ಪರಿಶೀಲನೆ" ಎಂಬ ಪುಸ್ತಿಕೆಯು ಪ್ರಕಟವಾಯಿತು.

ಬೇರೆ ಬೇರೆ ಜಿಲ್ಲೆಗಳಲ್ಲಿಯ ಸದಸ್ಯರಿಗೆ ವಿಚಾರ ಮಂಥನದಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸಲು ಅನುಕೂಲತೆಯನ್ನು ಒದಗಿಸಿಕೊಡುವದಕ್ಕಾಗಿ ಹಾಗು ಬೇರೆ ಜಿಲ್ಲೆಗಳಲ್ಲಿ ಜೀವನ ಶಿಕ್ಷಣವನ್ನು ಪ್ರಸಾರ ಮಾಡುವದಕ್ಕಾಗಿ ಈ ವರುಷದಲ್ಲಿ ಜೀವನ ಶಿಕ್ಷಣ ವಿಚಾರ ಮಂಥನವನ್ನು ಧಾರವಾಡದಲ್ಲಿ ನಡೆಯಿಸುವದರ ಬದಲಾಗಿ, ಬೆಳಗಾವಿಯ ಎಸ್. ಟಿ. ಕಾಲೇಜದ ಆವಾರದಲ್ಲಿ ನಡೆಯಿಸಬೇಕೆಂದು ಹಳೇ ವಿದ್ಯಾರ್ಥಿ ಬಳಗದ ಕಾರ್ಯಕಾರಿ ಸಮಿತಿಯು ನಿರ್ಧಾರ ಮಾಡಿತು. ಮತ್ತು ಬೆಳಗಾವಿಯಲ್ಲಿ ಇದ್ದ ಬಳಗದ ಸ್ಥಾನಿಕ ಸದಸ್ಯರ ಒಂದು ಕಾರ್ಯಕಾರಿ ಸಮಿತಿಯನ್ನು ನೇಮಿಸಿ ಮುಂದಿನ ಕಾರ್ಯವನ್ನು ಅದಕ್ಕೆ ಒಪ್ಪಿಸಿತು. ಈ ಸ್ಥಾನಿಕ ಸಮಿತಿಗೆ ಬೆಳಗಾವಿ ಎಸ್.ಟಿ. ಕಾಲೇಜದಲ್ಲಿಯ ಪ್ರೊ. ರೋಹಿಡೇಕರ ಶಾಮರಾಯರನ್ನು ಚೇರಮನ್ನರೆಂದು ನಿಯಮಿಸಿತು.

ವಿಚಾರ ಮಂಥನಕ್ಕಾಗಿ ಕೆಳಗೆ ಕಾಣಿಸಿದ ೪ ವಿಷಯಗಳನ್ನು ಆಯ್ದುಕೊಳ್ಳಲಾಗಿತ್ತು.

ಜೀವನ ಶಿಕ್ಷಣದಲ್ಲಿ :—

೧) ಶಿಕ್ಷಕನ ಪಾತ್ರ
೨) ಮೌಲ್ಯಮಾಪನ
೩) ತಪಾಸಣೆ ಹಾಗು ಮೇಲ್ವಿಚಾರಣೆ
೪) ಸಮ್ಮೇಲನ ವಿಚಾರಮಂಥನ ಹಾಗು ಪ್ರದರ್ಶನಗಳ ಸಂಘಟನೆ

ಈ ಎಲ್ಲ ವಿವರಗಳನ್ನೊಳಗೊಂಡ ಪರಿಪತ್ರವನ್ನು ಹೊರಡಿಸಿ, ಕುಲಪತಿಗಳಾದ ಶ್ರೀ ತೇರಗಾಂವಕರರು ಧಾರವಾಡ ವಿಭಾಗದ ಶಿಕ್ಷಣ ಶಾಖೆಯ ಡೆ.ಡಾಯರೆಕ್ಟರರ ಹಾಗು ಜಿಲ್ಲಾ ಶಿಕ್ಷಣಾಧಿಕಾರಿಗಳ ಮುಖಾಂತರ ಬಳಗದ ಎಲ್ಲ ಸದಸ್ಯರಿಗೆ ವಿಚಾರ ಮಂಥನಕ್ಕೆ ಬರಲು ಆಮಂತ್ರಣ ವಿತ್ತರು. ವಿಚಾರ ಮಂಥನವನ್ನು ೧೯೫೯ನೇ ಫೆಬ್ರುವರಿ ೨೦ ಹಾಗು ೨೧ ದಿನಾಂಕಗಳಲ್ಲಿ ನಡೆಸಬೇಕೆಂದು ನಿರ್ಧರಿಸಲಾಯಿತು.

ಸ್ಥಾನಿಕ ಸಮಿತಿಯವರು ಸಭೆಗೂಡಿ ಪ್ರಾರಂಭದ ಸಿದ್ಧತೆಗಳನ್ನು ಮಾಡಿಕೊಂಡರಲ್ಲದೆ ವಿಚಾರ ಮಂಥನಕ್ಕೆ ಅವಶ್ಯಕವಾದ ಪೂರ್ವಾಭ್ಯಾಸ (Work-Papers) ಕರಡುಗಳನ್ನು ಸಿದ್ಧಪಡಿಸಿದರು. ಈ ಕಾರ್ಯವನ್ನು ಕೆಳಗೆ ಕಾಣಿಸಿದ ಪ್ರಕಾರ ಬೇರೆ ಬೇರೆ ಗುಂಪುಗಳು ಕೈಕೊಂಡವು.

೧. ಶಿಕ್ಷಕನ ಪಾತ್ರ— ಸರದಾರ್ಸ ಹಾಯಸ್ಕೂಲ
೨. ಮೌಲ್ಯಮಾಪನ– ಕೆ.ಎಲ್.ಇ.ಎಸ್.ಟ್ರೇ.ಕಾಲೇಜ
೩. ತಪಾಸಣೆ ಹಾಗು ಮೇಲ್ವಿಚಾರಣೆ– ಬೆಳಗಾಂವಿಯ ಉಪಶಿಕ್ಷಣಾಧಿಕಾರಿಗಳು
೪. ಸಮ್ಮೇಲನ ವಿಚಾರ ಮಂಥನ ಹಾಗು ಪ್ರದರ್ಶನಗಳ ಸಂಘಟನೆ— ಕೆ. ಎಸ್. ಎಸ್. ಟ್ರೇ. ಕಾಲೇಜ

ಸದರಿ ಗುಂಪುಗಳು ಸಿದ್ಧಪಡಿಸಿದ ಪೂರ್ವಾಭ್ಯಾಸ ಪತ್ರಿಕೆಗಳನ್ನು ಸ್ಥಾನಿಕ ಕಾರ್ಯನಿರ್ವಾಹಕ ಸಮಿತಿಯು ಚರ್ಚಿಸಿ ಅವುಗಳಿಗೆ ರೂಪಕೊಟ್ಟು, ಎಲ್ಲ ಪ್ರತಿನಿಧಿಗಳಿಗೆ ಹಂಚಲು ಅವುಗಳ ಪ್ರತಿಗಳನ್ನು ತಯಾರಿಸಿತು.

## ಉದ್ಘಾಟನಾ ಸಮಾರಂಭ

ಸುಯೋಗದಿಂದ ೧೯-೨-೧೯೪೯ರಂದು ಸಂಜೆಗೆ ಬೆಳಗಾವಿಗೆ ಬಂದ ಮೈಸೂರ ರಾಜ್ಯದ ಮುಖ್ಯ ಮಂತ್ರಿಗಳಾದ ಮಾನ್ಯ ಶ್ರೀ ಬಿ. ಡಿ. ಜತ್ತಿಯವರು ನಮ್ಮ ವಿಚಾರ ಮಂಥನದ ಉದ್ಘಾಟನಾ ಸಮಾರಂಭವನ್ನು ನೆರವೇರಿಸಲು ದಯವಿಟ್ಟು ಒಪ್ಪಿಕೊಂಡರು. ದಿನಾಂಕ ೨೦-೨-೪೯ರ ಮುಂಜಾನೆ ೮-೩೦ ಘಂಟೆಗೆ ಪ್ರಾರ್ಥನೆಯೊಂದಿಗೆ ವಿಚಾರ ಮಂಥನ ಸಭೆಯು ತನ್ನ ಕಾರ್ಯ ಕಲಾಪಗಳನ್ನು ಪ್ರಾರಂಭಿಸಿತು. ಪ್ರಾರ್ಥನೆಯ ನಂತರ ಪದವೀಧರರ ಜೀವನ ಶಿಕ್ಷಣ ಕೇಂದ್ರದ ಪ್ರಿನ್ಸಿಪಾಲರಾದ ಶ್ರೀ ತೇರಗಾಂವಕರರು ಮಾನ್ಯ ಮುಖ್ಯ ಮಂತ್ರಿಗಳನ್ನೂ ಪ್ರತಿನಿಧಿಗಳನ್ನೂ ಹಾಗು ಇತರರನ್ನೂ ಸ್ವಾಗತಿಸುತ್ತ ಬೆಳಗಾಂವಿಯಲ್ಲಿ ವಿಚಾರ ಮಂಥನವನ್ನು ನಡೆಸುವದಕ್ಕೂ ಅದೇ ಸಮಯಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿಗೆ ಆಗಮಿಸುವದಕ್ಕೂ ಒಂದು ವಿಶೇಷ ಯೋಗಾ ಯೋಗ ವಿದ್ದಿರಬೇಕೆಂದು ಹೇಳಿ, ಬಳಗದ ಹಳೇ ವಿದ್ಯಾರ್ಥಿಗಳ ಸಂಸ್ಥೆಯು ಸರಕಾರವು ಜೀವನ ಶಿಕ್ಷಣ ಧೋರಣವನ್ನು ಅಂಗೀಕರಿಸಿದೆ. ಅದಕ್ಕೆ ಅತ್ಯವಶ್ಯವಾಗಿ ಬೇಕಾದ ಜನರನ್ನು ಮೇಲ್ಕಟ್ಟದಲ್ಲಿ ತರಬೇತುಗೊಳಿಸುವ ಹೊಣೆಗಾರಿಕೆಯ ಕಾರ್ಯವನ್ನು ಕಳೆದ ೧೨ ವರ್ಷಗಳಿಂದ ಈ ಕೇಂದ್ರವು ನಡೆಸುತ್ತ ಬಂದಿದೆ. ಈ ಸಂಸ್ಥೆಗೆ ಯೋಗ್ಯ ಸ್ಥಾನಮಾನವು ದೊರೆಯುವದು ,ಅತ್ಯವಶ್ಯ. ದುರ್ದೈವದಿಂದ ವಿಶ್ವವಿದ್ಯಾಲಯದ ಮಾನ್ಯತೆಯು ಅದಕ್ಕೆ ಇನ್ನೂ ದೊರೆತಿಲ್ಲವಾದ್ದರಿಂದ ಜೀವನ ಶಿಕ್ಷಣದ ಪ್ರಚಾರಕ್ಕೆ ಹಾಗು ಸಂಸ್ಥೆಯ ಏಳ್ಗೆಗೆ ಹಾಗು ಯೋಗ್ಯ ಜನರನ್ನು ಈ ಕಾರ್ಯದತ್ತ ಆಕರ್ಶಿಸಲಿಕ್ಕೆ ಹೇಗೆ ಅಡೆತಡೆಯುಂಟಾಗಿದೆಯೆಂಬುದನ್ನು ಅವರು ವಿವರಿಸಿದರು. ಮತ್ತು ಈ ದಿಶೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಂದ ನೆರವು ಸಿಕ್ಕು ವಿಶ್ವವಿದ್ಯಾಲಯದ ಮನ್ನಣೆ ಹಾಗು ಇತರ ಸೌಕರ್ಯಗಳು ದೊರೆಯಲೆಂದು ಬಿನ್ನವಿಸಿಕೊಂಡರು. ಮಾನ್ಯ ಮುಖ್ಯ ಮಂತ್ರಿಗಳು ವಿಚಾರ-ಮಂಥನದ ಉದ್ಘಾಟನೆಯನ್ನು ನೆರವೇರಿಸುತ್ತ ಹಳೆಯ ಶಿಕ್ಷಣ ಪದ್ಧತಿಯಲ್ಲಿಯ ತಿಳಿವಳಿಕೆ ರಹಿತವಾದ ಬಾಯಿಪಾಠ ಮಾಡುವ ಪದ್ಧತಿಯು ಸರಿಯಲ್ಲವೆಂದೂ ಪ್ರತ್ಯಕ್ಷ ಅನುಭವಗಳ ಮುಖಾಂತರ ದೊರೆಯುವ ಜೀವನ ಶಿಕ್ಷಣವೇ ಸರಿಯಾದ ಮಾರ್ಗವೆಂದೂ ಹೇಳಿದರಲ್ಲದೆ ಪುಸ್ತಕೀಯ ವಿದ್ಯೆಯಲ್ಲಿ ಪ್ರಗತಿ ಕಡಿಮೆಯೆನಿಸುವದಕ್ಕೆ ಎಳ್ಳಷ್ಟೂ ನಾಚಿಕೆಪಟ್ಟುಕೊಳ್ಳದೆ ಜೀವನದ ಸಂದರ್ಭಗಳಲ್ಲಿ ಜಾಣ್ಮೆಯಿಂದ ಹಾಗು ಹಿತಕರವಾದ ರೀತಿಯಲ್ಲಿ ನಡೆವಳಿಕೆ ಬರುವಂತೆ ನಾಗಿಸುವ ಶಿಕ್ಷಣವೇ ಸರಿಯಾದ ಶಿಕ್ಷಣವೆಂದೂ ಈ ದೃಷ್ಟಿಯಿಂದ ಜೀವನ ಶಿಕ್ಷಣವು ಮಹತ್ಕಾರ್ಯವನ್ನು ಮಾಡುತ್ತಿದೆಯೆಂದೂ ಹೇಳಿದರು. ಹಳ್ಳಿಯ ಹೆಣ್ಣುಮಕ್ಕಳು ನಸುಕಿನಲ್ಲಿ ಮಜ್ಜಿಗೆಯನ್ನು ಕಡೆದು ಬೆಣ್ಣೆಯನ್ನು ತೆಗೆದಂತೆ ಈ ವಿಚಾರ ಮಂಥನದಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿಯುಳ್ಳ ಜನರು ಮಥಿಸಿ ತೆಗೆದ ಉತ್ತಮ ನಿರ್ಣಯಗಳೇ ಶಿಕ್ಷಣದ ಸುಧಾರಣೆಗೆ ಪೋಷಕವಾಗುವವೆಂದು ಬಹು ಮಾರ್ಮಿಕವಾಗಿ ಮನಂಬುಗುವಂತೆ ಬಿಂಬಿಸಿದರು. ಜೀವನ ಶಿಕ್ಷಣ ಕೇಂದ್ರಕ್ಕೆ ವಿಶ್ವವಿದ್ಯಾಲಯದ ಮನ್ನಣೆ ದೊರಕಿಸುವ ವಿಚಾರವನ್ನು ಕುರಿತು ಸಂಬಂಧಿಸಿದ ಅಧಿಕಾರಿಗಳನ್ನು ಕೇಳಿ ಹಾಗು ಕಾಗದಪತ್ರಗಳನ್ನು ಪರಿಶೀಲಿಸಿ ಶಕ್ಯವಾದುದನ್ನು ಮಾಡುವದಾಗಿ ಹೇಳಿದರು. ಕೊನೆಯಲ್ಲಿ ಸ್ಥಾನಿಕ ಸಮಿತಿಯ ಚೇರಮನ್ನರಾದ ಪ್ರೊಫೆಸರ್ ದೋಹಿಡೇಕರರು ಮಂತ್ರಿಗಳು ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ಕಳಕಳಿಯಿಂದ ಆಸ್ಥೆವಹಿಸುತ್ತ ಬಂದ ಕೆಲವು ಸಂದರ್ಭಗಳನ್ನು ಸಂಕ್ಷಿಪ್ತವಾಗಿ ವಿವರಿಸಿ ಮಾನ್ಯ ಮುಖ್ಯಮಂತ್ರಿಗಳ ಹಾಗು ಬೆಳಗಾವಿಯ ಡೆಪುಟಿ ಕಮೀಶನರರಾದ ಶ್ರೀ ರಾಮಚಂದ್ರನ್ ಮತ್ತು ಇತರರ ಆಭಾರವನ್ನು ಮನ್ನಿಸಿದರು.

## ವಿಚಾರ ಮಥನದ ಉದ್ದೇಶ ವಿವರಣೆ

ಪ್ರಿನ್ಸಿಪಾಲ ತೇರಗಾಂವಕರರು ಪ್ರಸ್ತುತ ವಿಚಾರ ಮಂಥನದ ವಿಷಯಗಳನ್ನು ಹಾಗೂ ಅವುಗಳ ಹಿನ್ನೆಲೆಯನ್ನು ಮತ್ತು ಪ್ರತಿನಿಧಿಗಳು ವಿಚಾರ ಮಂಥನವನ್ನು ನಡೆಯಿಸುವಾಗ ಲಕ್ಷದಲ್ಲಿಟ್ಟುಕೊಳ್ಳಬೇಕಾದ ಮುಖ್ಯ ಮಾತುಗಳನ್ನು ತಿಳಿಸಿ ಹೇಳಿ ಒಟ್ಟನಲ್ಲಿ ವಿಚಾರ ಮಂಥನವು ಫಲಕಾರಿಯಾಗಿ ಕಾರ್ಯಕರ್ತರಿಗೆ ಉಪಯುಕ್ತ ಸೂಚನೆಗಳನ್ನು ಕೊಡುವಂತಾಗಲೆಂದು ಆಶಿಸಿದರು. ಅವರು ವಿಶೇಷವಾಗಿ ಮೌಲ್ಯ ಮಾಪನ ಹಾಗು ತಪಾಸಣೆ ಈ ವಿಷಯಗಳ ವಿಶೇಷ ಮಹತ್ವವನ್ನು ಒತ್ತಿ ಹೇಳಿದರು. ಪ್ರತಿನಿಧಿಗಳನ್ನು ನಾಲ್ಕು ಗುಂಪುಗಳಲ್ಲಿ ಅವರವರ ಇಚ್ಛೆಗನುಸಾರವಾಗಿ ವಿಭಾಗಿಸಲಾಯಿತು.

## ಗುಂಪು ಗಳಲ್ಲಿ ಚರ್ಚೆ

ದಿನಾಂಕ ೨೦-೨-೧೯೫೯ ರಂದು ಮುಂಜಾವಿನ ಉಳಿದ ವೇಳೆ ಹಾಗು ಸಂಜೆಯಲ್ಲಿ, ಒಂದೊದು ಗುಂಪು ಒಂದೊಂದು ವಿಷಯವನ್ನು ಪೂರ್ವಾಭ್ಯಾಸ ಕರಡುಗಳ ಸಹಾಯದಿಂದಲೂ ಹಾಗೂ ಸ್ವಂತ ವಿಚಾರಗಳಿಂದಲೂ ಚರ್ಚೆಯನ್ನು ಸಾಗಿಸಿ ತಮ್ಮ ನಿರ್ಣಯಗಳನ್ನು ನಮೂದಿಸಿತು. ಅಂದೇ ರಾತ್ರಿ ನಾಲ್ಕೂ ಗುಂಪುಗಳ ವರದಿಗಳ ಸಾಕಷ್ಟು ಪ್ರತಿಗಳನ್ನು ಸಿದ್ಧ ಪಡಿಸಿ ಮರುದಿನ ಮುಂಜಾನೆ ಎಲ್ಲ ಪ್ರತಿನಿಧಿಗಳಿಗೆ ಪಂಚಲಾಯಿತು. ಅವುಗಳನ್ನು ಓದಿಕೊಂಡು ಎಲ್ಲರು ಸಾಮಾನ್ಯ ಸಭೆಯಲ್ಲಿ ನಡೆಯಬೇಕಾದ ಚರ್ಚೆಗೆ ಸನ್ನದ್ಧರಾದರು.

## ಸಾಮಾನ್ಯ ಸಭೆಯಲ್ಲಿ ಚರ್ಚೆ

ದಿನಾಂಕ ೨೧-೨-೧೯೫೯ ರಂದು ನಾಲ್ಕು ವಿಷಯಗಳಲ್ಲಿ ಅಂತ್ಯಂತ ಮಹತ್ವದ ವಿಷಯವಾದ ಹಾಗು ಹೋದ ವರುಷದ ವಿಚಾರ ಮಂಥನದಲ್ಲಿ ಸ್ಥೂಲವಾಗಿ ಚರ್ಚಿಸಲ್ಪಟ್ಟ "ಮೌಲ್ಯ ಮಾಪನ" ವನ್ನು ಮೊದಲು ಚರ್ಚೆಗೆ ಎತ್ತಿಕೊಳ್ಳಲಾಯಿತು. ಇಷ್ಟು ದಿವಸಗಳ ವರೆಗೆ ನಡೆದ ಮೌಲ್ಯ ಮಾಪನಗಳು ಕೇವಲ ಬೌದ್ಧಿಕ ಪ್ರಗತಿಯನ್ನು ಅಳೆಯುವಂಥವುಗಳಾದ್ದರಿಂದಲೂ ಮತ್ತು ಜೀವನ ಶಿಕ್ಷಣದ ಗುರಿಗಳಲ್ಲಿ ಮಹತ್ವದ್ದಾದ ನೈತಿಕ ವಿಕಾಸವನ್ನು ಅಳೆಯಲು ವಸ್ತುನಿಷ್ಠವಾದ ಪರೀಕ್ಷಣಗಳು ಇನ್ನೂ ಪ್ರಕಟಿಸಲ್ಪಟ್ಟಿಲ್ಲವಾದ್ದರಿಂದಲೂ ಮೌಲ್ಯ ಮಾಪನಕ್ಕೆ ಅಗ್ರಸ್ಥಾನವನ್ನು ಕೊಡಲಾಯಿತು. ಆ ಗುಂಪಿನ ಕಾರ್ಯವಾಹಕರಾದ ಶ್ರೀ ಲೋಕಾಪೂರ ಅವರು ತಮ್ಮ ವರದಿಯನ್ನು ಓದಿದರು. ಆ ವರದಿಯಲ್ಲಿಯ ಮುಖ್ಯಾಂಶಗಳನ್ನು ಕುರಿತು ನಡೆದ ಚರ್ಚೆಯಲ್ಲಿ ಜೀವನ ಶಿಕ್ಷಣದಿಂದಾಗ ಬೇಕಾದ ಮಕ್ಕಳ ನೈತಿಕ, ಬೌದ್ಧಿಕ, ಹಾಗೂ ಶಾರೀರಿಕ ವಿಕಾಸವನ್ನು ವಸ್ತುನಿಷ್ಠವಾಗಿ ಪರೀಕ್ಷಿಸುವ ವಿಧಾನಗಳನ್ನು ಪ್ರತಿನಿಧಿಗಳು ಸೂಚಿಸಬೇಕೆಂದು ನಿರ್ಧರಿಸಲಾಯಿತು. ಇದಕ್ಕೆ ಆಧಾರವೆಂದು ಜೀವನ ಶಿಕ್ಷಣದ ಗೊತ್ತು ಗುರಿಗಳನ್ನು ವಿವರವಾಗಿ ಹಾಗೂ ಕೋಷ್ಟಕವಾರ ನಮೂದಿಸಲಾಯಿತು. ಇದಕ್ಕನುಸರಿಸಿ ಪ್ರತಿನಿಧಿಗಳು ಕನಿಷ್ಠ ಒಂದೊಂದು ಗೊತ್ತು ಗುರಿಗೆ ಅನ್ವಯಿಸಿ ಒಂದೊಂದು ಪರೀಕ್ಷಣವನ್ನು ತಯಾರಿಸಿ ಕೊಟ್ಟರು. ತದನಂತರ "ಶಾಲೆಯ ತಪಾಸಣೆ ಹಾಗು ಮೇಲ್ವಿಚಾರಣೆ" ಈ ವಿಷಯದ ವರದಿಯನ್ನು ಶ್ರೀ ರಾವೂತ ಅ. ಡೆ. ಎ. ಇ. ಬೆಳಗಾವಿ, ಇವರು ಓದಿದರು. ತಪಾಸಣೆಯ ಅಧಿಕಾರಿಯು ನಡೆಸುವ ತಪಾಸಣೆಯ ವಿವರಗಳು ಹಾಗೂ ಧೋರಣೆ ಎಂತು ಇರಬೇಕು ಎಂಬ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಅಲ್ಲದೆ ತಪಾಸಣೆಯ ಅಧಿಕಾರಿಯು ಅನುಭವಿಸುವ ವಿವಿಧ ತೊಡಕು ತೊಂದರೆಗಳ ಬಗ್ಗೆ ಮತ್ತು ಅಡಳಿತ ಯಂತ್ರದಿಂದ ಉಂಟಾಗುವ ತೊಂದರೆಗಳ ಬಗ್ಗೆ ಚರ್ಚೆ ನಡೆಯಿತು. ಈ ಚರ್ಚೆಯಲ್ಲಿ ತಪಾಸಣೆಯ ವಿಷಯದಲ್ಲಿ ಅನುಭವಿಕರಾದ ಅ. ಡೆ. ಎ. ಇ. ರವರು ತಪಾಸಣೆಗೊಳಗಾದ ಶಿಕ್ಷಕರು ಅಲ್ಲದೆ ತಪಾಸಣಾಧಿಕಾರಿಗಳ ಮೇಲ್ವಿಚಾರಕರಾದ ಬೆಳಗಾವಿ ಜಿಲ್ಲೆಯ ಎ. ಇ. ಶ್ರೀ ವಾಯ್. ಬಿ. ಯರಗಲ್ಲ ಅವರು ಭಾಗ ವಹಿಸಿದ್ದರಿಂದ ಚರ್ಚೆಗೆ ವಿಶೇಷ ಕಳೆ ಉಂಟಾಗಿತ್ತು. ಇದೇ ಪ್ರಕಾರವಾಗಿ ಉಳಿದ ಎರಡು ವಿಷಯಗಳ ವರದಿಗಳನ್ನು ಶ್ರೀ ಎನ್. ಕೆ. ಇಂಚಲ ಹಾಗು ಶ್ರೀ ವ್ಹಿ. ಜಿ. ತೊರಗಲ್ಲ ಅವರು ಓದಿದರು. ಅವುಗಳ ಚರ್ಚೆಯಲ್ಲಿ ಶಿಕ್ಷಕನು ವಹಿಸಬೇಕಾದ ಮಹತ್ವದ ಪಾತ್ರವೇನು, ಅವನ ಕರ್ತವ್ಯದ ವಿವಿಧ ಮುಖಗಳಾವವು ಸರ್ವೋದಯ ಸಮಾಜದ ನಿರ್ಮಾಣ ಕಾರ್ಯದಲ್ಲಿ ಅವನ ಜೊತೆಗಾರಿಕೆಯಾವುದು ಎಂಬುವೇ ಮೊದಲಾದ ಸಮಸ್ಯೆಗಳೂ, ಮತ್ತು ಸದ್ಯಕ್ಕೆ ಸಭೆ, ಸಮ್ಮೇಲನ, ಪ್ರದರ್ಶನ ಹಾಗೂ ವಿಚಾರ ಮಂಥನಗಳನ್ನು ನಡೆಸುವ ರೀತಿಯಲ್ಲಿಯ ಕುಂದುಕೊರತೆಗಳು ಯಾವವು. ಅವುಗಳನ್ನು ಜೀವನ ಶಿಕ್ಷಣದ ಗೊತ್ತು ಗುರಿಗಳಿಗೆ ಅನುರೂಪವಾಗಿ ಹೇಗೆ ನಡೆಸಬೇಕು, ಅವುಗಳ ಯೋಜನೆ ಹಾಗು ವಿವರಗಳಾವವು ಎಂಬ ಮಾತುಗಳು ಚರ್ಚಿಸಲ್ಪಟ್ಟವು.

## ಮುಕ್ತಾಯ ಸಮಾರಂಭ

ಮುಕ್ತಾಯ ಸಮಾರಂಭಕ್ಕೆ ಎಸ್.ಟಿ. ಕಾಲೇಜದ ಪ್ರಿನ್ಸಿಪಾಲರಾದ ಶ್ರೀ ವ್ಹಿ. ಬಿ. ದೇಸಾಯಿಯವರು ಮುಖ್ಯ ಅತಿಥಿಗಳಾಗಿದ್ದರು. ಪ್ರಾರಂಭಕ್ಕೆ ಬಳಗದ ಕಾರ್ಯದರ್ಶಿಗಳಾದ ಕು. ಮುಳ್ಳೂರ ಅವರು ವಿಚಾರ ಮಂಥನದ ವರದಿಯನ್ನು ಒಪ್ಪಿಸಿದರು. ನಂತರ ನಾಲ್ಕು ಗುಂಪುಗಳ ಕಾರ್ಯವಾಹಕರು ತಮ್ಮ ತಮ್ಮ ವಿಷಯುಗಳ ಬಗೆಗೆ ಪರಿಷ್ಕೃತ ವರದಿಗಳನ್ನೂ ಓದಿದರು. ಅಲ್ಲದೆ ಕೆ. ಎಲ್. ಇ. ಎಸ್. ಟ್ರೇ.ಕಾ.ದ ಪ್ರಿನ್ಸಿಪಾಲರಾದ

ಶ್ರೀ ಭೋಜ ಅವರು ಎರಡುದಿನದ ವಿಚಾರ ಮಂಥನದ ಅನುಭವಗಳನ್ನು ಪ್ರತಿನಿಧಿಗಳ ಪರವಾಗಿ ಹೇಳಿದರು. ಆಮೇಲೆ ಪ್ರಿನ್ಸಿಪಾಲ ದೇಸಾಯಿಯವರು ತಮ್ಮ ನಿದರ್ಶನಕ್ಕೆ ಬಂದ ಜೀವನ ಶಿಕ್ಷಣ ಶಾಲೆಗಳ ನಿಜ ಸ್ಥಿತಿಯನ್ನು ವಿವರಿಸುತ್ತ ಜೀವನ ಶಿಕ್ಷಣದ ತತ್ವಗಳು ಶ್ರೇಷ್ಠವಾದವುಗಳಾದರೂ ಜೀವನ ಶಿಕ್ಷಣವು ಪ್ರತ್ಯಕ್ಷ ಕೃತಿಯಲ್ಲಿ ಅನೇಕ ಕಾರಣಗಳ ಮೂಲಕ ತನ್ನ ಗುರಿಯನ್ನು ಮುಟ್ಟಲು ಇನ್ನೂ ತೊಳಲಾಡುವ ಸ್ಥಿತಿಯಲ್ಲಿಯೇ ಉಳಿದಿದೆ ಎಂದೂ, ಆದರೂ ತಮ್ಮ ಈ ಮಾತುಗಳು ಜೀವನ ಶಿಕ್ಷಣದ ಬಗ್ಗೆ ನೈರಾಶ್ಯವನ್ನುಂಟು ಮಾಡಲು ಹೇಳಿದವುಗಳಲ್ಲವೆಂದು ನೆನಪಿನಲ್ಲಿಡ ಬೇಕೆಂದು ತಿಳಿಸಿದರು.

ಪ್ರಿನ್ಸಿಪಾಲ ತೇರಗಾಂವಕರರು ಶ್ರೀ ವ್ಹಿ. ಬಿ. ದೇಸಾಯಿಯವರಿಗೆ ಕೃತಜ್ಞತೆಗಳನ್ನು ಸಲ್ಲಿಸಿ ತಮ್ಮ ಸಮಾರೋಪಣ ಭಾಷಣದಲ್ಲಿ ಹೇಳಿದ್ದೇನೆಂದರೆ: ಜೀವನ ಶಿಕ್ಷಣದ ತಾತ್ವಿಕ ತಳಹದಿಯನ್ನು ನಾವು ಒಪ್ಪಿಕೊಂಡ ಬಳಿಕ ಅದರ ಗುರಿಯನ್ನು ಸಾಧಿಸುವುದರಲ್ಲಿ ಬರುವ ಅಡೆತಡೆಗಳ ಆಹ್ವಾನವನ್ನು ನಾವು ಧೈರ್ಯದಿಂದ ಅಂಗೀಕರಿಸಬೇಕೆಂದು ಮತ್ತು ಜೀವನ ಶಿಕ್ಷಣದ ಪ್ರಯೋಗವನ್ನೂ ಈಗ ದೊರೆತ ಅವಧಿಯು ಜೀವನ ಶಿಕ್ಷಣದ ಫಲಗಳನ್ನು ಕಂಡು ಕೊಳ್ಳಲಿಕ್ಕೆ ಅತ್ಯಲ್ಪವಾದುದರಿಂದ ನಾವು ಈಗ ನಿರಾಶೆಗೊಳ್ಳುವ ಕಾರಣವಿಲ್ಲವೆಂದೂ ಮತ್ತು ಇಲ್ಲಿಯ ವರೆಗೆ ನಡೆದ ಸಂಶೋಧನೆಗಳು ಜೀವನ ಶಿಕ್ಷಣಕ್ಕೆ ಉತ್ತೇಜನಕಾರಿಯಾಗಿವೆಯೆಂದೂ ಲೋಪ ದೋಷಗಳನ್ನು ಸರಿಪಡಿಸಲು ಸೂಕ್ತ ಸೂಚನೆಗಳನ್ನು ಶ್ರೀ ಜಿ. ರಾಮಚಂದ್ರನ್‌ರವರ ವರದಿಯಲ್ಲಿ ಕಾಣ ಬಹುದೆಂದೂ ಹೇಳಿದರು. ಕೊನೆಗೆ ಸ್ಥಾನಿಕ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ತ. ಚ. ಕಮತರು ಈ ಎರಡು ದಿನಗಳ ವಿಚಾರ ಮಂಥನದ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಲು ಸಹಾಯ ನೀಡಿದ ಪ್ರಿನ್ಸಿಪಾಲ ವ್ಹಿ. ಬಿ. ದೇಸಾಯಿ ಹಾಗು ಇತರ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿದರು.


೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

**ಶೇಲಾರ ಕೃತ**

# ಪ್ರಾಥಮಿಕ ಭೂಮಿತಿ

**[ಕ್ಷೇತ್ರಫಲ ಘನಫಲ ಸಹಿತ]**

೪ ರಿಂದ ೭ ನೇಯ ವರ್ಗದ ವರೆಗಿನ
ವಿಷಯವನ್ನೆಲ್ಲ ಒಳಗೊಂಡಿದೆ.

**ಬೆಲೆ: ೧ರೂ. ೮ಆಣೆ ಮಾತ್ರ**

**ದೊರೆಯುವ ಸ್ಥಳ:—**

**ಸಾಯಿ ಪಬ್ಲಿಶಿಂಗ್ ಹಾವುಸ್,**
ವಿಜಯ ರೋಡ, ಧಾರವಾಡ.

ಪ್ರಕಟವಾಗಿದೆ! ಪ್ರಕಟವಾಗಿದೆ!!

# "ಮಿರ್ಜಿ ಅಣ್ಣಾರಾಯ"

ಪ್ರಾಥಮಿಕ ಶಿಕ್ಷಕರೊಬ್ಬರ ವ್ಯಕ್ತಿತ್ವ ಹಾಗೂ ಸಾಹಿತ್ಯವನ್ನು ಪರಿಚಯ ಮಾಡಿಕೊಡುವ ಅಮೌಲ್ಯ ಗ್ರಂಥ.

ನಾಡಿನ ಅನೇಕ ವಿದ್ವಾಂಸರ ಮಿರ್ಜಿ ಅಣ್ಣಾ. ರಾಯರ ಸಾಹಿತ್ಯ ಕೃತಿಗಳನ್ನು ಇದರಲ್ಲಿ ವಿಮರ್ಶಿಸಿದ್ದಾರೆ

ಅಖಿಲ ಭಾರತ ಬಾನುಲಿಯವರು ತಕ್ಕೊಂಡ ಅಣ್ಣಾರಾಯರ ಸಂದರ್ಶನವೂ ಇದರಲ್ಲಿ ಪ್ರಕಟವಾಗಿದೆ,

ಅಣ್ಣಾರಾಯರ ವ್ಯಕ್ತಿತ್ವ ಸಾಹಿತ್ಯಗಳ ಸಂಪೂರ್ಣ ಪರಿಚಯಕ್ಕೆ ಈ ಗ್ರಂಥವನ್ನು ಅವಶ್ಯವಾಗಿ ಓದಿರಿ.

ಕ್ರಯ: ೧–೮–೦ ಮಾತ್ರ ಅಂಚೆವೆಚ್ಚ ಬೇರೆ.

**ಶಾಂತಿ ಸೇವಾ ಸದನ**
**ಪೋ. ಸೇಡಬಾಳ. ಜಿ. ಬೆಳಗಾಂವಿ.**

# " ನೂಲುವೆವು "

ನೂಲುವೆವು ! ನಾವು ! ನೂಲುವೆವು ।
ನೂಲನು ತೆಗೆಯುತ ಹಾಡುವೆವು !
''ಸೆಲೆ' ಯೊಡೆಯುವ ಈ ಜೀವನವರ್ತಿಗೆ"
ಬರೆಹದ ಸಾರವ ತಿಳಿಸುತ ನಾವು-ನೂಲುವೆವು||೧||

'ಗಾಂಧೀ ಅಜ್ಜ'ನ ನುಡಿಗಳ ಕಟ್ಟು
ಬಿಡದಲೆ ಭಾರತ ಮಕ್ಕಳು ಒಟ್ಟು
ಅಧಿ ದೇವತೆಯಲಿ ಜನ್ಮವ ಸುಟ್ಟು
ನೂಲುವೆವು ! ನಾವು ! ನೂಲುವೆವು ! ||೫||

ಕಾಲ-ಕಾಲದೊಳು ಜನಿಸಿದ ಮಹಾತ್ಮರ
ನುಡಿಗಳ ನೆಲ್ಲವ ಪಾಡುವೆವು !
ಅಲೆ ಅಲೆದಾಡುವ ಮಕ್ಕಳು ಕೂಡುತ
ನೂಲುವೆವು ! ನಾವು ! ನೂಲುವೆವು ! ||೨||

'ಧರ್ಮ'ದ ಮರ್ಮವ ಕರ್ಮದೊಳಿಟ್ಟು
'ವರ್ಮ'ದ ಗುಟ್ಟನು ಎಲ್ಲವು ಬಿಟ್ಟು
''ಅರುವಿನ ಬೆಂಕಿಯ ಕೊಳ್ಳಿಯ ಕೊಟ್ಟು"
ನೂಲುವೆವು ! ನಾವು ! ನೂಲುವೆವು ! ||೬||

ಜೀವನ ನೌಕೆಯ ನೂಕುವದೊಂದೆs–
ಸಾಧನವಿಹುದು ಚರಖಾಮಾತೆ !
''ಹಾದಿಯ ತೋರುವ' ಸರಸತಿ ಮಾತೆ"
ನೂಲುವೆವು ! ನಾವು ! ನೂಲುವೆವು ! ||೩||

''ಎಚ್ಚರಗೇಡಿಯ ಮಾನನ ಜನುಮಕೆ
ಬುದ್ಧಿಯ ಕದಿರಿನ ಮೊನೆಯನು ಹುಚ್ಚಿ"
ಹುಚ್ಚನು ಬಿಡಿಸುತ, ನಿಚ್ಚಳಮಾಡುತ
ನೂಲುವೆವು ! ನಾವು ! ನೂಲುವೆವು ! ||೭||

ಭಾವದ ಬೆಡಗಿಗೆ ಪೆರುಗನೆ ಇಟ್ಟು
"ಜೀವನ್ಮೃತರಿಗೆ ಚಾಲನೆಕೊಟ್ಟು ।"
'ಅಸೂಯೆ' ಭಾವವ ಪೂರ್ಣದಿ ಸುಟ್ಟು
ನೂಲುವೆವು ! ನಾವು ! ನೂಲುವೆವು ! ||೪||

ಭಾರತದೇವಿಯ ಮಕ್ಕಳು ನಾವು
'ನಿರಶನ ವ್ರತ'ಗಳ ತಾಳುತ ದಿನವು
"ಮಾನಪರಾಗುವ ಹಾದಿಯ ಹಿಡಿದು"
ನೂಲುವೆವು ನಾವು! ನೂಲುವೆವು ||೮||

—ಭೀಮಪ್ಪ ನಡುವಿನಮನಿ
ನರಗುಂದ

# ಜೀವನ ಶಿಕ್ಷಣ ಪ್ರಪಂಚದಲ್ಲಿ

## ಶೈಕ್ಷಣಿಕ ಸಮ್ಮೇಲನಗಳು

| | ಶಾಲೆಯ ಹೆಸರು | ದಿನಾಂಕ | ಅಧ್ಯಕ್ಷರು |
|---|---|---|---|
| ೧) | ಸುರೇಬಾನ (ತಾ. ರಾಮದುರ್ಗ) | ೮–೨–೧೯೫೯ | ಶ್ರೀ ಬಸವಣ್ಣೆಪ್ಪಾ ಉಪ್ಪಿನ |
| ೨) | ಸವದತ್ತಿ – | ೧೭–೨–೧೯೫೯ | ,, ಎಸ್. ಬಿ. ಪಡಕಿ |
| ೩) | ಜಮಖಂಡಿ – | ೧೫–೨–೧೯೫೯ | ಎ. ಓ. ಡಿ. ಎಸ್. ಬಿ. ಬಿಜಾಪೂರ |
| ೪) | ಯಡಹಳ್ಳಿ ಇಂಗಳಗಿ (ತಾ. ಮುಧೋಳ) | ೧೬–೨–೧೯೫೯ | ,, ಇ. ಆಯ್. ಬಿಜಾಪೂರ |
| ೫) | ಮಮದಾಪೂರ (ತಾ. ಗೋಕಾಕ) | ೨೩–೨–೧೯೫೯ | ,, ಬಿ. ಬಿ. ಮಮದಾಪೂರ |
| ೬) | ಬಸವನಾಳ (ತಾ. ಶಿಗ್ಗಾಂವ) | ೨೭–೨–೧೯೫೯ | ,, ಆರ್. ಎಚ್. ಕುಲಕರ್ಣಿ ಎ. ಡಿ. ಇ. ಆಯ್. ಧಾರವಾಡ |
| ೭) | ಹಿರೇಬಾಗೇವಾಡಿ (ತಾ. ಬೆಳಗಾಂವ) | ೨೭–೨–೧೯೫೯ | ,, ಎಲ್. ವಾಯ್. ಅಂಕಲಗಿ |
| ೮) | ನೇರಲಿ (ತಾ. ಹುಕ್ಕೇರಿ) | ೧೫–೨–೧೯೫೯ | ,, ಬೆಟಗೇರಿ ಕೃಷ್ಣಶರ್ಮ |
| ೯) | ಸಂಗನಹಳ್ಳಿ (ತಾ. ಶಿರಹಟ್ಟಿ) | ೧೯–೨–೧೯೫೯ | ,, ಡಿ. ಆರ್. ದೇಶಪಾಂಡೆ, ವಕೀಲ |
| ೧೦) | ರೆಡ್ಡೇರ ನಾಗನೂರ (ನವಲಗುಂದ) | ೩೧–೧–೧೯೫೯ | ,, ಎಮ್. ಸಿ. ಹಿರೇಮಲ್ಲ, ಹೆಡ್ ಮಾಸ್ತರ ನರಗುಂದ ಎಚ್. ಎಸ್. |
| ೧೧) | ಕಂಕಣವಾಡಿ (ರಾಯಭಾಗ) | ೩೧–೧–೧೯೫೯ | ,, ಬಸಯ್ಯಾ ಹಿರೇಮಠ |
| ೧೨) | ಹಳ್ಯಾರ (ಹಿರೇಕೆರೂರ) | ೨೪–೧–೧೯೫೯ | ,, ಆರ್. ಸಿ. ಕುಲಕರ್ಣಿ, ಎ.ಡಿ.ಇ.ಆಯ್. |
| ೧೩) | ಆಲದಕಟ್ಟಿ ಬೆಳಗಾಲಪೇಟ (ಹಾನಗಲ್ಲ) | ೧೪–೨–೧೯೫೯ | ,, ಆರ್. ಎನ್. ಕರಡಿ ಎ.ಡಿ.ಇ ಆಯ್. |

## ಶೈಕ್ಷಣಿಕ ಪ್ರವಾಸಗಳು

| | | | |
|---|---|---|---|
| ೧) | ನಂದಗಾಂವ ಖಾನಪೂರ (ಗೋಕಾಕ) | ೧೪, ೧೫–೨–೫೯ | ಆರಭಾವಿ ಫಾರ್ಮ, ಕರ್ನಾಟಕ ಆರೋಗ್ಯಧಾಮ ದುರದುಂಡೇಶ್ವರ ಮಠ |
| ೨) | ತೇರದಾಳ ಕ. ಗ. ಶಾಲೆ. | ೨೪, ೨೫–೨–೫೯ | ಬಾಗಿಲುಕೋಟೆ ಸಿಮೆಂಟ ಕಾರಖಾನೆ, ಪಾಟಿಯ ಕಾರಖಾನೆ, ಬಾದಾಮಿ, ಬನಶಂಕರಿ ಮಹಾಕೂಟ, ಶಿವಯೋಗ ಮಂದಿರ, ಹಂಪೆ, ವಿಜಯನಗರ, ತುಂಗಭದ್ರಾ ಆಣೇಕಟ್ಟು. |
| ೩) | ಯಾರಗುಡ್ಡ ಕ.ಗಂ.ಶಾ.(ತಾ.ಹುಕ್ಕೇರಿ) | ೩೧–೧–೫೯ | ಹಂಪಿ, ತುಂಗಭದ್ರಾ ಆಣೇಕಟ್ಟು, ವಿಜಯನಗರ |
| ೪) | ಸತ್ತಿ (ಅಥಣಿ) | ೧೦–೨–೫೯ | ರಾಮತೀರ್ಥ, ಗ್ರಾಮೋದ್ಯೋಗ ಸಂಸ್ಥೆ, ಹಾಗೂ ಸರಕಾರೀ ಟ್ರೇನಿಂಗ ಕಾಲೇಜ. |
| ೫) | ಬಳ್ಳಿಗೇರಿ (ಅಥಣಿ) | ೧೧–೨–೫೯ | ಬಡಗರೇಶ್ವರ ಗುಡ್ಡ. |
| ೬) | ಕ್ಯಾರಗಿ (ಸಿದ್ಧಾಪೂರ) | ೪, ೫, ೬–೨–೫೯ | ಭದ್ರಾವತಿ ಕಬ್ಬಿಣ, ಕಾಗದ, ಸಿಮೆಂಟ ಕಾರಖಾನೆಗಳು, ಶಿವಮೊಗ್ಗೆ ಸಕ್ಕರೆ ಕಾರಖಾನೆ. |
| ೭) | ಹಳ್ಳಿಗುಡಿ (ಗದಗ) | ೨೪–೧–೫೯ | ಬಾದಾಮಿ, ಮಹಾಕೂಟ, ಬನಶಂಕರಿ |
| ೮) | ಬೆಳಕೂಡ (ಚಿಕ್ಕೋಡಿ) | ೧೪–೨–೫೯ | ಉಗಾರ ಸಕ್ಕರೆಯ ಕಾರಖಾನೆ. ಕುಡಚಿ ಫ್ಲೂಲು, ವಿದ್ಯುತ್ ಕೇಂದ್ರ. |
| ೯) | ಜಮಖಂಡಿ | ೯–೨–೫೯ | ಹಂಪೆ, ತುಂಗಭದ್ರಾ ನದಿಯ ಆಣೇಕಟ್ಟು, ವಿಜಯ ನಗರದ ಐತಿಹಾಸಿಕ ಕಟ್ಟಡಗಳು. |

ಜೀವನ ಶಿಕ್ಷಣ ಶಾಲೆಗಳಿಗೆ

# ಉದಾರ ಸಹಾಯ

| | ಊರು | ದಿನಾಂಕ | ಸಹಾಯ ಮಾಡಿದವರ ಹೆಸರುಗಳು | ಸಹಾಯ |
|---|---|---|---|---|
| ೧. | ಭಗತವಾಡ (ಕಾರವಾರ) | ೩೦-೧-೫೯ | ಶ್ರೀ ಪಾಂಡುರಂಗ ಶಂಕರ ಭಗತ | ೯ ರೂ. ೨೫ ನಯಾ ಪೈಸಾದ ತಾಮ್ರದ ಕೊಡ |
| ೨. | ಹಳ್ಳದ ಗೆಣ್ಣೂರ (ಬಾಗೇವಾಡಿ) | ೨೦-೨-೫೯ | ,, ರಾಚಪ್ಪಾ ಶೇಖದಾರ | ಜಾಗಟೆ |
| | | | ,, ಪರಪ್ಪ ಸಂಗಳದ | ಹಿತ್ತಾಳಿ ನೀರಿನ ಟಾಕಿ |
| | | | ,, ಬಸಪ್ಪಾ ಹಡಪದ | ಕಪಾಟು |
| | | | ,, ಗುರುಲಿಂಗಪ್ಪಾ ಬಗಲಿ | ಬಕೇಟು |
| | | | ,, ಸೋಮಣ್ಣಾ ಪೂಜೇರ | ತಾಮ್ರದ ಕೊಡ |
| | | | ,, ರಾಮಚಂದ್ರ ಪೂಜೇರ | ಗುಡಾರ |
| | | | ,, ಗುರುಬಸಪ್ಪಾ ಪೂಜೇರ | ಕನ್ನಡಿ |
| | | | ,, ಈರಗೊಂಡ ಪಾಟೀಲ | ಕಂದೀಲು |
| | | | ,, ಆರ್. ಎಸ್. ಅನಂತಪೂರ | ಒಂದು ತಂಬಿಗೆ ೨ ವಾಟಿಗಗಳು |
| ೩. | ಬಾಳಂಬೀಡ (ಹಾನಗಲ್) | ೨೬-೧-೫೯ | ಊರ ನಾಗರಿಕರು | ೧೦೧ ರೂ.ಪಾಯಿಗಳನ್ನು ಗಡಿಯಾರಕ್ಕಾಗಿ ಕೊಟ್ಟರು |
| ೪. | ವರ್ಕವಾಡ (ಹಳಿಯಾಳ) | ೨೯-೧-೫೯ | ಊರ ನಾಗರಿಕರು | ೧೫ರೂ. ಬೆಲೆಯ ತಾಮ್ರದ ಕೊಡ ೧೦ರೂ. ಬೆಲೆಯ ಜಾಗಟೆ |
| ೫. | ಕುಡುಪಲಿ (ಹಿರೇಕೇರೂರ) | ೧೬-೨-೫೯ | ವೇ. ಗಂಗಾಧರ ಶಾಸ್ತ್ರಿಗಳು | ೨೫=೦೦ |
| | | | ಶ್ರೀ. ಮಲ್ಲಪ್ಪ ಮರಡೇರ | ೫=೦೦ |
| | | | ,, ಮಹದೇವಯ್ಯ ಗಚ್ಚಿನಮಠ | ೫=೦೦ |
| | | | ,, ಹಾಲಯ್ಯನವರು ಮಠದ | ೪=೦೦ |
| | | | ,, ನಾಗೇಂದ್ರಪ್ಪ ನಾಮದೇವ | ೪=೦೦ |
| | | | ,, ರುದ್ರಯ್ಯನವರು ಬೆಲ್ಲದ | ೩=೦೦ |
| | | | ,, ಮಹದೇವಪ್ಪಾ ಪೂಜೇರ | ೪=೦೦ |
| ೬. | ಶಾಗೋಟಿ(ಗದಗ) | ೧೫-೨-೫೯ | ಭಜನಾ ಮಂಡಳಿಯವರು | ೧೭=೦೦ |
| ೭. | ಬಾಟಾ ನಗರ (ವಿಜಾಪೂರು) | ೩೦-೧-೫೯ | ಶ್ರೀ ಎಸ್.ಬಿ. ಪಾಟೀಲರು ಕ.ಗ.ಮ.ಶಾ. ಶ್ರೀಮತಿ ಪಾಟೀಲರು ಕ. ಹೆ. ಮ. ಶಾ. | ೨ ನೀರಿನ ಹಿತ್ತಾಳಿ ಟಾಕಿಗಳನ್ನು ದೇಣಿಗೆಯಾಗಿ ಕೊಟ್ಟರು. |
| | | | ಈ ಮೊದಲು ಎಸ್. ಬಿ. ಪಾಟೀಲರು | ೩೦೦=೦೦ಬೆ.ಗಡಿಯಾರ,ಡ್ರಮ್ಮು |
| ೮. | ಗೋಟಿ (ಜಮಖಂಡಿ) | ೭-೨-೫೯ | ಪಂಚಾಯತಿಯವರು ಕ. ಗ. ಮ. ಶಾಲೆ. | ೨೫=೦೦ |
| | | | ಮ್ಹಾ. ಸ್ಕೂ. | ೧೦=೦೦ ಸಾಮಾನುಗಳ ನಾಗಾರ್ಜುನ |
| ೯. | ಮಾಡಬಾಳ (ಸಿಂದಗಿ) | ೩-೨-೫೯ | ಶ್ರೀ ಕೆ. ಸಿ. ಪಾಟೀಲ | ಈ ಮೂವರು ಸಂಯುಕ್ತ ಕರ್ನಾಟಕ |
| | | | ,, ಬಿ. ಸಿ. ದೇಶಪಾಂಡೆ | ದಿನಪತ್ರಿಕೆಯ ವಾ.ಚಂ. ಹಣವನ್ನು |
| | | | ,, ಎಸ್. ಎಸ್. ಪಾಟೀಲ | ತುಂಬಲು ಒಪ್ಪಿದ್ದಾರೆ. |
| | | | ,, ಡಿ. ಎಸ್. ಕುಲಕರ್ಣಿ | ಕರ್ಮವೀರ ವಾ.ಪ. ಒಂದು ವರ್ಷದ ಚಂದಾಹಣ ತುಂಬಲು ಒಪ್ಪಿದ್ದಾರೆ. |
| | | | ,, ಸಿದ್ದಪ್ಪ ಭಾಸ್ಗಿ | ೪=೦೦ |
| | | | ,, ಎಮ್. ಎಚ್. ಬನ್ನೆಟ್ಟಿ | ೪=೦೦ |
| | | | ,, ಎಸ್. ಎಸ್. ಪಾಟೀಲ | ಚಂದನಾಮ ಪತ್ರಿಕೆಯನ್ನು |

Regd. No. B. 5375


ಶ್ರೀ ಅರವಿಂದ ಪ್ರಭಾವಿತೆಯೂ ಶ್ರೀ ತಾಯಿಯವರ ಪ್ರಾಸಾದಿಕತೆಯೂ ಒಂದೆಡೆಗೆ ತೋರುವ ಪವಿತ್ರ ಸಾಹಿತ್ಯದಿಂದ

## ವಾಚನಾಲಯದ ಬೆಲೆ ಹೆಚ್ಚಿಸಬೇಡವೇ ?

**ಹಾಗಿದ್ದರೆ, ಕೆಳಗೆ ಕಾಣಿಸಿದ ಪುಸ್ತಕಗಳನ್ನು ತರಿಸಿಕೊಳ್ಳಿರಿ.**

| | | | |
|---|---|---|---|
| ೧. | ನನ್ನನಲ್ಲ ( ಅಂತರ್ಮುಖಗೊಳಿಸುವ ದಿ. ಮಧುರಚೆನ್ನರ ಸಮಗ್ರ ಕವನ ಸಂಗ್ರಹ | .... | ೧–೧೨– ೦ |
| ೨. | ಆತ್ಮಸಂಶೋಧನ ( ದಿ. ಮಧುರಚೆನ್ನರ ಜೀವನದ ಕಲಶಪ್ರಾಯದ ಪ್ರಾಂಜಲ ಸಾಹಿತ್ಯ ) | .... | ೧– ೮– ೦ |
| ೩. | ಪವಿತ್ರ ಜೀವನ ( ಹೊಸಕಾಲದ ಋಷಿ ಟಾಲಸ್ಟಾಯರ ಕಥಾಸಂಕಲನ ) | .... | ೧– ೨– ೦ |
| ೪. | ಸುಂದರ ಕಥೆಗಳು ( ಮಕ್ಕಳಿಗೂ ಮಕ್ಕಳಂಥವರಿಗೂ ಶ್ರೀ ತಾಯಿಯವರು ಹೇಳಿದುವು ) | .... | ೧– ೪– ೦ |
| ೫. | ಶ್ರೀ ಅರವಿಂದರು ( ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ ) | .... | ೧– ೮– ೦ |
| ೬. | ಶ್ರೀ ಅರವಿಂದರ ಪತ್ರಗಳು ( ಪೂರ್ಣಜೀವನದ ಸಿರಿಮೊಳಿಕೆ ) | | ೦– ೮– ೦ |
| ೭. | ಸ್ವರ್ಗದೋಲೆಗಳು ( ಕನ್ನಡಿಗರ ಕೈಗೆ ಬಂದ ಸಾಂಸ್ಕೃತಿಕ ಕನ್ನಡಿ ) | .... | ೧– ೮– ೦ |
| ೮. | ಮುಗಿಲ ಜೇನು ( ಮಿಂಚಿನ ಶಲಾಪೆಯಂಥ ಕವನ ಸಂಕಲನ ) | .... | ೧– ೮– ೦ |
| ೯. | ಸಪ್ತಸದಿ ( ವಿದ್ಯಾರ್ಥಿಗಳ ಮೆಚ್ಚಿಕೆಯ ಏಕಾಂಕಗಳು ) | .... | ೧– ೪– ೦ |
| ೧೦. | ಭಾರತದ ಭವ್ಯಸಿದ್ಧತೆ ( ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ ) | .... | ೧– ೦– ೦ |
| ೧೧. | ಬೆಟ್ಟದ ಹೂಳೆ ( ಜೀವನ ಪ್ರಬೋಧಕವಾದ ಕಾದಂಬರಿ ) | .... | ೧– ೪– ೦ |
| ೧೨. | ಗರತಿಯ ಬಾಳು ( ಹೆಣ್ಣಿನ ಮಾಯೆಯಲ್ಲಿ ಕಪಿಲ ಸಿದ್ಧಮಲ್ಲಿಕಾರ್ಜುನ ) | .... | ೧– ೪– ೦ |
| ೧೩. | ಬಾಳಬಟ್ಟೆ ( ಆಧುನಿಕ ಬಾಳಿನ ಒಂಡಾಟಕ್ಕೆ ಚಿಕಿತ್ಸೆ ) | .... | ೧– ೮– ೦ |
| ೧೪. | ಪೂಜಾ ( ಅತೀಂದ್ರಿಯ ಜಾಗೃತಿಯ ಮಿಸುಕು ) | .... | ೦–೧೨– ೦ |
| ೧೫. | ಜೀವನ ದೃಷ್ಟಿ ( ಭವ್ಯ ಬದುಕಿನ ಬೊಕ್ಕಸ ) | .... | ೧– ೨– ೦ |
| ೧೬. | ಕನ್ನಡ ಕುಲದೀಪ ಬಸವಣ್ಣ ( ಹಿಡಿದರೆ ಹಿಡಿಕೆಯಲ್ಲಿ ಚಿಟ್ಟುವ ಮನೆತುಂಬ ) | .... | ೧– ೦– ೦ |

ಕನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯ ಬೇಕಾದರೆ ಬರೆಯಿರಿ. ಮೇಲೆ ಕಾಣಿಸಿದ ಪುಸ್ತಕಗಳನ್ನೆಲ್ಲ ತರಿಸಿಕೊಂಡಲ್ಲಿ ಅಂಚೆವೆಚ್ಚ ನಾವೇ ವಹಿಸುವೆವು.

**ಶ್ರೀ ಅರವಿಂದ ಗ್ರಂಥಾಲಯ** ಪೋ:— **ಚಡಚಣ** ಜಿ. ವಿಜಾಪುರ

---

## 'ದೇವರಾಟ'

**ಶ್ರೀ 'ಜೈರಾಮು ಸುತರ' ಕಾದಂಬರಿ ೭೫ ನ.ಪೈ.**

## 'ಸಿವಳ್ಳಿ ಸಿಂಗ್ಲೀಕ'

**ಎನ್. ಎಸ್. ರಾಮಸ್ವಾಮಿಯವರ ಹಾಸ್ಯನಾಟಕ ೭೫ ನ.ಪೈ**

- ಕೇವಲ ೩ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೨ನೆಯ ಮಾಲೆಯ ೫–೬ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಏಪ್ರೆಲದಿಂದ ಏಪ್ರೆಲಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೫ ಜೆಲಿಯಲ್ಲಿ [ಅಂಚೆಖರ್ಚ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅತ್ಯಲ್ಪಹಣ ತಮ್ಮ ಶಿಕ್ಷಕ ವಿತ ಏಳ್ಗೆಗೆ ಮೀಸಲು. ಚಂದಾದಾರರ ಹೆಸರು ಪುಸ್ತಕದಲ್ಲಿ ಪ್ರಕಟಿಸುವುದರಿಂದ ಪೂರ್ತಿ ಹೆಸರು ವಿಳಾಸ ಬರೆಯಬೇಕು.

★ **ನಾವು ನಮ್ಮವರು—** ಪ್ರಾಥಮಿಕ [ ೧ರಿಂದ ೭ ವರ್ಗಗಳ ಶಾಲೆಯ ] ಶಿಕ್ಷಕರ ಕಥೆ ಕವನಗಳನ್ನು ಆಯಾ ಲೇಖಕ ಫೋಟೊ ಪರಿಚಯ ಇವುಗಳೊಂದಿಗೆ ಹೊರಡಿಸುವ ಪುಸ್ತಕ. ಕೃತಿಕಳಿಸುವ ಶಿಕ್ಷಕರು ವಿವರವಾದ ಪ್ರಕಟಣೆಗೆ ಬರೆಯಬೇಕ ಪ್ರಾರ್ಥಿಸಲಾಗುವದು.

**ಈಶ್ವರಚಂದ್ರ ಚಿಂತಾಮಣಿಯವರ** **ಪಾಪಪುಣ್ಯ** ಮೂರಂಕಿನ ನಾಟಕ **ಬೆಲೆ ೧೫**

( ಚಂದಾದಾರರಿಗೆ ೧೨ ನ.ಪೈ. ಅಂಚೆಸೇರಿ. ಕೆಲವೇ ಪ್ರತಿ ಉಳಿದಿವೆ )

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಆಂಚೆ: **ಬಮರನಾಳ** ಜಿಲ್ಲೆ: **ಬಿಜಾಪುರ**


---

Printed by Shri S. F. Kattimani, at Manohar Power Printing Press, Hubli. Edited and Published by Sjts. V.B.Chavannavar, B. M. Shintri, S. R. Tatti & Smti. P. A. Bhaskar, at the Kannada Jeevan Shikshan Office, Govt. Training College for Men, Dharwar.

# ಜಯಚಾಮರಾಜೇಂದ್ರ

ಪ್ರಧಾನ ಸಂಪಾದಕರು: ಶ್ರೀ ವ್ಹಿ. ಬಿ. ಚವಣ್ಣವರ

ಮೈಸೂರ ರಾಜ್ಯದ ಮುಖ್ಯಮಂತ್ರಿ, ಮಾನ್ಯ ಶ್ರೀ ಬಿ.ಡಿ.ಜತ್ತಿಯವರು

# ಜೀವನ ಶಿಕ್ಷಣ ಸಪ್ತಾಹದ ವಿವಿಧ ಕಾರ್ಯಕಲಾಪಗಳು

ಶ್ರೀ ಎಸ್. ವ್ಹಿ. ಜೀವೂಗ,
ಡಿ. ಡಾಯರೆಕ್ಟರರು ಭಾಷಣ ಮಾಡುತ್ತಿರುವರು.

ಡಿ. ಡಾಯರೆಕ್ಟರ, ಇ. ಆಯ್. ಧಾರವಾಡ,
ಡಿ. ಇ. ಆಯ್. ಇವರಿಂದ ಸೂತ್ರಯಜ್ಞ.



ಧಾರವಾಡದ ಎಲ್ಲ ಟ್ರೇನಿಂಗ ಕಾಲೇಜುಗಳ ಪ್ರಾಧ್ಯಾಪಕರು ಹಾಗು ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ
ಸೂತ್ರಯಜ್ಞ.

# ನಮ್ಮ ಹೊಸ ಸಂಚಾಲಕರು

ಶ್ರೀಮಾನ್ **ಮು. ಗು. ಹಂದ್ರಾಳ** ಅವರು ಈಗ ಜೀವನ ಶಿಕ್ಷಣ ಪತ್ರಿಕೆಯ ಸಂಚಾಲಕರಾಗಿರುವದು, ನಮ್ಮ ಒಳ್ಳೇ ಸುದೈವವಾಗಿದೆ. ಅವರು ಈ ಧಾರವಾಡ ವಿಭಾಗದಲ್ಲಿ ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ಕಳೆದ ಇಪ್ಪತ್ತು ವರುಷಗಳಿಂದ ಸೇವೆ ಸಲ್ಲಿಸುತ್ತಿರುವರು. ಅವರು ತಮ್ಮ ವಿದ್ವತ್ತೆ ಆಡಳಿತೆಯ ಕುಶಲತೆ ವಿಶೇಷತಃ ಜೀವನ ಶಿಕ್ಷಣದ ಅನುಭವಗಳಿಂದ ಶಿಕ್ಷಣ ಕ್ಷೇತ್ರಗಳಲ್ಲಿ ದುಡಿಯುವವರೆಲ್ಲರಿಗೂ ಪರಿಚಿತರಾಗಿರುವರು. ಮೇಲಾಗಿ ಪ್ರಚಲಿತವಿರುವ ಕನ್ನಡ ಪಠ್ಯಪುಸ್ತಕಗಳ ನಿರ್ಮಾಣ ಕ್ಷೇತ್ರದಲ್ಲಿಯೂ ವಿಶೇಷವಾಗಿ ಕಾರ್ಯಮಾಡಿ ಪ್ರಾಥಮಿಕ ಜೀವನ ಶಿಕ್ಷಣದಲ್ಲಿ ಪ್ರತಿಯೊಬ್ಬರಿಗೂ ಪರಿಚಿತರಾಗಿದ್ದಾರೆ

ಅವರು ಮೊಟ್ಟ ಮೊದಲು ಶಿಕ್ಷಣ ಖಾತೆಯಲ್ಲಿ ಶಿಕ್ಷಕರೆಂದು ನೇಮಕವಾಗಿ ತಮ್ಮ ಬುದ್ಧಿಯ ಮೇಲ್ಮೆ ಮತ್ತು ಕಾರ್ಯ ತತ್ಪರತೆಗಳ ಮೂಲಕ ೧೯೪೯ ರಲ್ಲಿ ಮೇಲಿನ ದರ್ಜೆಗೆ ಏರಿದರು. ಪ್ರಾಥಮಿಕ ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ಇಲ್ಲಿಯವರೆಗೆ ತಮ್ಮ ಸೇವೆ ಸಲ್ಲಿಸಿದರು. ಪ್ರಥಮ ವರ್ಗದ ಶಿಕ್ಷಣಾಧಿಕಾರಿಗಳೆಂದು ಹೆಚ್ಚಿನ ಹುದ್ದೆಯು ಈಗ ಅವರಿಗೆ ಮತ್ತೆ ದೊರೆತಿದೆ. ಅವರು ತುಂಬಾ ಸಾದಾ ಜೀವಿಗಳು, ಜನಪ್ರಿಯರು, ಒಳ್ಳೇ ಆಡಳಿತಗಾರರು, ಜೀವನ ಶಿಕ್ಷಣ ಕ್ಷೇತ್ರದಲ್ಲಿ ತುಂಬಾ ಅನುಭವ ಹಾಗೂ ಆಸಕ್ತಿ ಉಳ್ಳವರು, ಜೀವನ ಶಿಕ್ಷಣದ ತಿರುಳನ್ನು ತುಂಬಾ ಅರಗಿಸಿ ಕೊಂಡವರು, ಒಳ್ಳೆಯ ವಾಗ್ಮಿಗಳು, ಜೀವನ ಶಿಕ್ಷಣ ಕ್ಷೇತ್ರದ ಯಾವುದೇ ವಿಷಯವಾಗಿ ಮಾತನಾಡಿದರೂ ಅದು ಎಲ್ಲ ಸಂಶಯಗಳನ್ನು ದೂರ ಮಾಡುತ್ತದೆ

ಇಂಥ ಅಧಿಕಾರಿಗಳು ಈಗ " ಜೀವನ ಶಿಕ್ಷಣದ " ಸಂಚಾಲಕರಾಗಿರುವದು ಅದರ ಏಳ್ಗೆಗೆ ಕಾರಣವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

# ವರ್ಗಾಗಿ ಹೋದ ನಮ್ಮ ಪ್ರಧಾನ ಸಂಪಾದಕರು

ಶ್ರೀಮಾನ್ **ಎಸ್. ಪಿ. ಪಾಟೀಲರು** ಧಾರವಾಡ ಸರಕಾರಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲ ಹುದ್ದೆಯಿಂದ ಹೆಚ್ಚಿನ ಸ್ಥಳಕ್ಕೆ ಹಾಸನ ಜಿಲ್ಲೆಯ ವಿದ್ಯಾಧಿಕಾರಿಗಳೆಂದು ಹೋದರು. ಶ್ರೀಮಾನ್ ಪಾಟೀಲರು ಶಿಕ್ಷಣ ಕ್ಷೇತ್ರದಲ್ಲಿ ಒಳ್ಳೆಯ ಕರ್ತೃತ್ವಶಾಲಿಗಳೆಂದು ನಾಮಾಂಕಿತರು. ಅವರು ಹೋದ ಹೋದಲ್ಲಿ ಯಾವದೊಂದು ಸಂಸ್ಥೆಯ ಏಳ್ಗೆಗಾಗಿ, ಏಕನಿಷ್ಠೆಯಿಂದ ಅವಿಶ್ರಾಂತವಾಗಿ ದುಡಿಯುವವರೆಂದು ಹೆಸರಾಂತರು. ಧಾರವಾಡದ ಗಂ. ಮ. ಸರಕಾರಿ ಟ್ರೇನಿಂಗ ಕಾಲೇಜದ ಅವಾರದಲ್ಲಿ ಕಾಲಿಟ್ಟ ಪ್ರತಿಯೊಬ್ಬನಿಗೂ ಅವರ ಕಾರ್ಯತತ್ಪರತೆಯ ಕಲ್ಪನೆಯಾಗುತ್ತದೆ.

ಉ. ಕನ್ನಡ ಜಿಲ್ಲೆಗಳ ವಿದ್ಯಾಕೇಂದ್ರವೆನಿಸಿದ ಗಂ. ಮ. ಟ್ರೇನಿಂಗ ಕಾಲೇಜದ ಶತ-ಸಂವತ್ಸರ ಸಮಾರಂಭವು ಒಳ್ಳೇ ವಿಜೃಂಭಣೆಯಿಂದ ಜರುಗಿತು. ಇದನ್ನು ಯಶಸ್ವಿಯಾಗಿ ಪೂರ್ತಿಗೊಳಿಸಿದ ಶ್ರೇಯಸ್ಸು ಬಹುಮಟ್ಟಿಗೆ ಶ್ರೀಮಾನ್ ಪಾಟೀಲರಿಗೇ ಸಲ್ಲುವದು. ಅವರು ಯಾವದೇ ಸಂಸ್ಥೆಯಲ್ಲಿ ದುಡಿಯಲಿ, ಅದರಲ್ಲಿ ತುಂಬಾ ವಿಶ್ವಾಸ ಹಾಗು ಶ್ರದ್ಧೆಯಿಂದ ಕೆಲಸ ಮಾಡಿ ತಮ್ಮದೇ ಆದ ವೈಶಿಷ್ಟ್ಯತೆಯನ್ನು ತೋರಿಸುವಂಥವರು. ಟ್ರೇನಿಂಗ ಕಾಲೇಜವು ಈಗ ಜೀವನ ಶಿಕ್ಷಣದ ಮೂರ್ತಿಯಾಗಿ ಮೆರೆಯುತ್ತಲಿದೆ. ಅವರು ಜೀವನ ಶಿಕ್ಷಣದ ಎಲ್ಲ ಅಂಶಗಳನ್ನು ಅಕ್ಷರಶಃ ಕಾರ್ಯರೂಪಕ್ಕೆಳಿಸಿದರು. ಶ್ರೀಮಾನ್ ಪಾಟೀಲರು ತುಂಬಾ ಶ್ರಮಜೀವಿಗಳು, ನಾದಾ ಜೀವಿಗಳು, ನಿಷ್ಠುರವಾದಿಗಳು. ಅವರು ಈಗ ಹಾಸನ ಜಿಲ್ಲೆಯಲ್ಲಿ ಅಂದರೆ ಹಳೆಯ ಮೈಸೂರ ರಾಜ್ಯದಲ್ಲಿ ಮುಂಬೈ ಕರ್ನಾಟಕ ಭಾಗದಲ್ಲಿಯ ಮುಂದುವರಿದ ಎಲ್ಲ ಶಿಕ್ಷಣ ಕಾರ್ಯಗಳನ್ನು ಆಚರಣೆಗೆ ತರಲು ಒಳ್ಳೆ ಸಹಾಯಕರಾಗುವರೆಂಬುದು ನಿಸ್ಸಂದೇಹ.

# ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಎಮ್. ಜಿ. ಹಂದ್ರಾಳ, ಬಿ.ಎ.(ಆನರ್ಸ),ಎಮ್.ಈಡಿ.,ಡಿ.ಬಿ.ಈಡಿ ,
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಪ್ಹಿ. ಬಿ. ಚವಣ್ಣವರ, ಬಿ.ಎಸ್.ಸಿ.,(ಆನರ್ಸ),ಬಿ.ಟಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯ಳ ಫೆಬ್ರುವರಿ ೧೯೫೯ ಸಂಚಿಕೆ ೯

## — ಪರಿವಿಡಿ —


| | | | | |
|---|---|---|---|---|
| ೧. | ಸಂಪಾದಕೀಯ | .... | .... | ೨ |
| ೨. | ಶ್ರೀ ಅಂಣಾರಾವ ಗಣಮುಖಿಯವರು | .... | ಶ್ರೀ ಶಿಂತ್ರಿ ಬಸಪ್ಪನವರು | ೫ |
| ೩. | ಪ್ರಾ.ಶಾ.ಪ್ರ. ಪತ್ರ ಪರೀಕ್ಷೆಯ ವೇಳಾಪತ್ರಿಕೆ.... | | .... | ೭ |
| ೪. | ಅನುಭವ–ಸಾಹಿತ್ಯ | .... | ಶ್ರೀ ಡಾ. ಬಿ. ಎಸ್. ಗದ್ದಗಿಮಠ | ೯ |
| ೫. | ಜೀವನ ಶಿಕ್ಷಣ ಸಪ್ತಾಹ(ವಿಚಾರ ಸಂಕೀರ್ಣ).... | | | ೧೭ |
| ೬. | 'ಬಾಲಮಂದಿರ'ಗಳು | .... | ಶ್ರೀ ಪ್ಹಿ. ಆರ್. ದೇಶಪಾಂಡೆ | ೨೧ |
| ೭. | ಜೀವನ ಶಿಕ್ಷಣ ಪ್ರಸಂಚದಲ್ಲಿ | .... | .... | ೨೪ |
| ೮. | ಜೀವನ ಶಿಕ್ಷಣದಲ್ಲಿ ಶಿಕ್ಷಕ | .... | ಶ್ರೀ ಎಚ್. ಆರ್. ಬಂಡೀವಡ್ಡರ | ೨೬ |


ಮುಖಪುಟದ ಭಾವಚಿತ್ರ ಸಂಯುಕ್ತ ಕರ್ನಾಟಕ ಕೃಪೆಯಿಂದ

# ಸಂಪಾದಕೀಯ

## ಗಣರಾಜ್ಯದಿನ

ಜನೆವರಿ ದಿ. ೨೬ ಈ ದಿನವು ಇಡೀ ಭಾರತಕ್ಕೆ ಹಬ್ಬದ ದಿನವಾಗಿದೆ. ಅದು ಭಾರತವು ಹೆಮ್ಮೆಪಡುವ ದಿನವೂ ಹೌದು. ಈ ವರುಷವೂ ಆದಿನವನ್ನು ಒಳ್ಳೇ ಸಂಭ್ರಮದಿಂದಲೂ ಗೌರವದಿಂದಲೂ ಆಚರಿಸಲಾಯಿತು. ಭಾರತವು ಸ್ವಾತಂತ್ರ್ಯವನ್ನು ಗಳಿಸಿಕೊಂಡ ಎರಡು ವರುಷಗಳಲ್ಲಿಯೇ ತನ್ನದೇ ಆದ ಪ್ರಜಾಪ್ರಭುತ್ವದ ರಾಜ್ಯಘಟನೆಯನ್ನು ನಿರ್ಮಿಸಿಕೊಂಡಿತು. ಆ ರಾಜ್ಯ ಘಟನೆಯನ್ನು ಆಚರಣೆಯಲ್ಲಿ ತಂದುದು ೧೯೫೦ ನೆಯ ಇಸ್ವಿ ಜನೆವರಿ ೨೬ರಂದು. ಆ ಇತಿಹಾಸ ಪ್ರಸಿದ್ಧ ದಿನವನ್ನು ಪ್ರತಿ ವರುಷ ಗಣರಾಜ್ಯದಿನವೆಂದು ಹೆಮ್ಮೆಯಿಂದ ಆಚರಿಸುತ್ತ ಇದ್ದೇವೆ. ಇಂದಿಗೆ ನಮ್ಮ ರಾಜ್ಯ ಘಟನೆಯ ಒಂಬತ್ತು ವರುಷಗಳು ತುಂಬಿ ಹತ್ತನೆಯ ವರುಷದಲ್ಲಿ ಕಾಲಿಡುತ್ತಲಿದ್ದೇವೆ. ಈ ಒಂಬತ್ತು ವರುಷಗಳ ಅವಧಿಯಲ್ಲಿಯೇ ನಮ್ಮ ಘಟನೆಯು ಭಾರತದಲ್ಲಿ ಅಷ್ಟೇ ಅಲ್ಲ; ಇಡೀ ಪ್ರಪಂಚದಲ್ಲಿಯೇ ಹಿರಿಮೆಯ ಸ್ಥಾನವನ್ನು ಪಡೆದಿದೆ.

ಈ ಶುಭ ದಿನದಂದು ಭಾರತೀಯರೆಲ್ಲರೂ ಆದ ನಾವು ಸಾಧಿಸಿದ ಪ್ರಗತಿಯನ್ನು ಕಲ್ಪಿಸಿಕೊಳ್ಳಬಹುದು. ಭಾರತವು ಪ್ರಪಂಚದ ತುಂಬ ಗಳಿಸಿದ ಕೀರ್ತಿಯನ್ನು ಅವಲೋಕಿಸಿದರೆ ನಮ್ಮ ಗಣರಾಜ್ಯ ದಿನದ ಮಹತ್ವವೂ ಮತ್ತು ಅದರ ಬಗ್ಗೆ ನಾವು ಪಡಬಹುದಾದ ಹೆಮ್ಮೆಯೂ ಸ್ಪಷ್ಟವಾಗುವದು. ಭಾರತವು ಈಗ ಜಗತ್ತಿಗೆಲ್ಲ ಶಾಂತಿಯುತ ಮಾರ್ಗದರ್ಶನ ಮಾಡುತ್ತಲಿದೆ. ಎಲ್ಲ ದೇಶಗಳು ಭಾರತದ ಕಡೆಗೆ ಹೊರಳಿ ಆಶಾ ಪೂರಿತ ನೇತ್ರಗಳಿಂದ ನೋಡುತ್ತಲಿವೆ. ಇಷ್ಟೆಲ್ಲ ಕೀರ್ತಿಯನ್ನು ಮನವರಿಕೆ ಮಾಡಿಕೊಳ್ಳುವದಲ್ಲದೆ ಈ ದಿನ, ನಾವು ಮಾಡಬೇಕಾದ ಇನ್ನೂ ಗುರುತರವಾದ ಕಾರ್ಯಗಳಾವವೆಂದು ನೆನೆದು ರಾಷ್ಟ್ರದ ಸೇವೆಗಾಗಿ ಸಂಕಲ್ಪವನ್ನು ಮಾಡಬೇಕಾಗುವದು. ನಮ್ಮ ಪ್ರಜಾಪ್ರಭುತ್ವವೂ ತನ್ನ ಆಂತರಿಕ ಶಕ್ತಿಗಳಿಂದ ಮುನ್ನಡೆಯುತ್ತಲಿದೆ. ಭಾರತವು ಜಗತ್ತಿನಲ್ಲಿ ಗಳಿಸಿದ ಕೀರ್ತಿಯಲ್ಲಿಯೇ ನೈಮರೆಯದೆ ಪ್ರತಿ ವರುಷ ಅತಿ ತ್ವರಿತವಾಗಿ ತನ್ನ ಆಂತರಿಕ ಬಲವನ್ನು ಸಂವರ್ಧಿಸಿ ಕೊಳ್ಳುತ್ತಲಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯು ಒಳ್ಳೇ ಯಶಸ್ವಿಯಾಗಿ ಪೂರ್ತಿಗೊಂಡಿದೆ. ಅದಕ್ಕೂ ಹೆಚ್ಚಿನ ಮಹತ್ವಾಕಾಂಕ್ಷೆಯ ದ್ವಿತೀಯ ಯೋಜನೆಯನ್ನು ಅರ್ಧಕ್ಕಿಂತ ಹೆಚ್ಚಿಗೆ ಕಾರ್ಯರೂಪಕ್ಕಿಳಿಸಿದೆ. ಪ್ರಥಮ ಯೋಜನೆಯಲ್ಲಿ ಆಹಾರ ಸ್ವಾವಲಂಬನಕ್ಕೆ ಪ್ರಾಧಾನ್ಯತೆ ಕೊಟ್ಟರೆ, ದ್ವಿತೀಯ ಯೋಜನೆಯಲ್ಲಿ ದೊಡ್ಡ ದೊಡ್ಡ ಉದ್ದಿಮೆಗಳ ಬೆಳವಣಿಗೆಗೆ ಪ್ರಾಧಾನ್ಯತೆ ದೊರೆತಿದೆ. ದೇಶದ ಆರ್ಥಿಕ ಮಟ್ಟವನ್ನು ಏರಿಸಿ ಜನ ಸಾಮಾನ್ಯರ ಜೀವನದ ಮಟ್ಟವನ್ನು ಎತ್ತರಿಸುವ ಸರ್ವ ಪ್ರಯತ್ನಗಳೂ ನಡೆದಿವೆ. ಇದಲ್ಲದೆ ಸಮಾಜವಾದೀ ಗುರಿಯುಳ್ಳ ಪ್ರಜಾಪ್ರಭುತ್ವವನ್ನು ಬಳಿಕೆಯಲ್ಲಿ ತರುವ ಘೋರಣೆಯನ್ನು ನಮ್ಮ ಘಟನೆಯು ಅಂಗೀಕರಿಸಿದೆ. ಇವೆಲ್ಲ ಕಾರ್ಯಗಳನ್ನು ಸಾಧಿಸುವಂಥ ತೃತೀಯ ಪಂಚವಾರ್ಷಿಕ ಯೋಜನೆಯ ವಿಚಾರವೂ ನಡೆದಿದೆ.

ಈ ಯೋಜನೆಯನ್ನ್ವಯ ಸಮಾಜದ ಸರ್ವಾಂಗೀಣ ಕಲ್ಯಾಣವನ್ನು ಸಾಧಿಸುವದು ಮುಖ್ಯ ಗುರಿಯಾಗಿದೆ. ಸಾಧನೆಗೆ ನಾವೆಲ್ಲರೂ ಇನ್ನೂ ಹೆಚ್ಚಿಗೆ ದುಡಿಯ ಬೇಕಾಗಿದೆ.

ಇಂತಹ ಇಡೀ ಮಾನವ ಕುಟುಂಬದ ಕಲ್ಯಾಣದ ಈ ಸಂದರ್ಭದಲ್ಲಿ ನಮ್ಮ ಹಿರಿಯ ನಾಯಕರಾದ ರಾಜೇಂದ್ರ ಪ್ರಸಾದರು ಕೊಟ್ಟ ಉಪದೇಶವು ಗಮನಾರ್ಹವಾಗಿದೆ. ಪ್ರತಿಯೊಬ್ಬ ಭಾರತೀಯನು ತನ್ನ ಪಾಲಿನ ಸೇವೆ ಹಾಗು ತ್ಯಾಗವನ್ನು ಸಲ್ಲಿಸಬೇಕಾಗಿದೆ ಎಂದು ಕರೆ ಇತ್ತಿದ್ದಾರೆ. ಈ ಸಂದೇಶದ ಮೇರೆಗೆ ನಾವೆಲ್ಲರೂ ಸೇವೆ ಮತ್ತು ತ್ಯಾಗವನ್ನು ಸಲ್ಲಿಸಿ ಭಾರತದ ಭವಿತವ್ಯವನ್ನು ಇನ್ನೂ ಪ್ರಜ್ವಲಿತಗೊಳಿಸುವಾ.

## ಜೀವನ ಶಿಕ್ಷಣ ಸಪ್ತಾಹ

ಕೇಂದ್ರ ಸರಕಾರದ ಆದೇಶದ ಮೇರೆಗೆ ಇದೇ ಜನೆವರಿ ದಿ. ೨೦ ರಿಂದ ದಿ. ೨೬ರ ವರೆಗೆ ಭಾರತ ದಾದ್ಯಂತ "ಜೀವನ ಶಿಕ್ಷಣ ಸಪ್ತಾಹ"ವನ್ನು ಆಚರಿಸ ಲಾಯಿತು. ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವವರಿಗೆ ಇದೊಂದು ಮಹತ್ವದ ಹೆಜ್ಜೆಯೆನಿಸುವದು. ಜೀವನ ಶಿಕ್ಷಣವು ಭಾರತದ ರಾಷ್ಟ್ರೀಯ ಶಿಕ್ಷಣವಾಗಿದೆ. ವರುಷ ವರುಷಕ್ಕೂ ಈ ಶಿಕ್ಷಣ ಕ್ರಮವು ಪ್ರಗತಿಯಲ್ಲಿದೆ ಎಂದು

ಇಲ್ಲ ಹೇಳಬೇಕಾಗಿಲ್ಲ. ಭಾರತ ದೇಶದ ಶಿಕ್ಷಣದ ಧೋರಣೆಯಲ್ಲಿ ಮೂಲಶಿಕ್ಷಣವು ಮನ್ನಣೆ ಪಡೆದಂದಿನಿಂದ ಅದನ್ನು ದೇಶದ ಮೂಲೆ ಮೂಲೆಗೂ ಮುಟ್ಟುವಂತೆ ಮಾಡಲು ಸರ್ವ ಪ್ರಯತ್ನಗಳು ನಡೆದಿವೆ. ಅವುಗಳಲ್ಲಿ "ಜೀವನ ಶಿಕ್ಷಣ ಸಪ್ತಾಹ"ದ ಆಚರಣೆಯೂ ಒಂದಾಗಿದೆ. ಜೀವನ ಶಿಕ್ಷಣದ ಬಗ್ಗೆ ಸಕಲರಿಗೂ ಅದರ ಪರಿಚಯವು ಆಗಬೇಕೆಂದೂ ಆ ಶಿಕ್ಷಣ ಕ್ರಮವನ್ನು ಅತಿ ತ್ವರಿತವಾಗಿ ಬಳಿಕೆಯಲ್ಲಿ ತರಬೇಕೆಂದೂ ಅದರ ಕಾರ್ಯಕಲಾಪಗಳಲ್ಲಿ ಹೆಚ್ಚಿನ ಜೀವಕಳೆಯನ್ನು ತುಂಬಲು ಈ ಸಪ್ತಾಹವು ಬಹಳಷ್ಟು ಪರಿಣಾಮಕಾರಿ ಆಯಿತು.

ಇದರ ಅಂಗವಾಗಿ ಎಲ್ಲೆಡೆಗೂ ಸಭೆ ಸಮ್ಮೇಲನಗಳು ಜರುಗಿದವು. ಈ ಜೀವನ ಶಿಕ್ಷಣದ ಕ್ರಮದ ಬಗ್ಗೆ ವಿಚಾರ ಗೋಷ್ಠಿ, ವಿಚಾರ ಸಂಕೀರ್ಣ, ಪ್ರದರ್ಶನಗಳು ಜರುಗಿದವು. ಅದರಂತೆ ಶಿಕ್ಷಣ ಕೇಂದ್ರವಾದ ಧಾರವಾಡದಲ್ಲಿ ಈ ಸಪ್ತಾಹದ ಅಂಗವಾಗಿ ಗ. ಮ. ಸ. ಟ್ರೇನಿಂಗ ಕಾಲೇಜದಲ್ಲಿ ಜಿಲ್ಲಾ ಮಟ್ಟಿನ ಪ್ರದರ್ಶನ ಏರ್ಪಡಿಸಲಾಗಿತ್ತು. ಅದರ ಉದ್ಘಾಟನೆಯು ಮೈಸೂರ ರಾಜ್ಯದ ಮುಖ್ಯ ಮಂತ್ರಿಗಳಾದ ಮಾನ್ಯ ಜತ್ತಿ ಅವರ ಹಸ್ತದಿಂದ ಜರುಗಿತು. ಆ ಸಮಯಕ್ಕೆ ಅವರು ಮಾಡಿದ ಭಾಷಣವು ಜೀವನ ಶಿಕ್ಷಣದ ಮೇಲ್ಮೈಯನ್ನು ವಿವರಿಸಿತು. ಅದರ ಬಗ್ಗೆ ಸರಕಾರವು ತಳೆದ ಆಸ್ಥೆಯನ್ನು ವಿವರಿಸಿದರು. ಇದಲ್ಲದೆ ಸಾಮೂಹಿಕ ಪ್ರಾರ್ಥನೆ, ನಗರ ಸಂಕೀರ್ತನೆ, ಸೂತ್ರ ಯಜ್ಞ, ಬಾನುಲಿ ಭಾಷಣ ಮುಂತಾದ ಕಾರ್ಯ ಕಲಾಪಗಳೂ ಆದವು. ಇದರಂತೆ ಬೇರೆ ಬೇರೆ ಕಡೆಗೆ ಈ ಸಪ್ತಾಹವು ಜರುಗಿದ ಬಗ್ಗೆ ಅನೇಕ ವರದಿಗಳು ಬಂದಿವೆ.

ಈ ಸಪ್ತಾಹದ ಸಂದರ್ಭದಲ್ಲಿ ಹೇಳಬೇಕಾದ ಒಂದು ವಿಶೇಷ ಸಂಗತಿಯೆಂದರೆ ನಮ್ಮ ಸರಕಾರವು ಮೂಲ ಶಿಕ್ಷಣದ ಪ್ರಸಾರದ ಬಗ್ಗೆ ತಳೆದಿರುವ ಒಂದು ಯೋಜನೆಯೆಂದರೆ ಜೀವನ ಶಿಕ್ಷಣವನ್ನು ಎಲ್ಲ ಸಾಮಾನ್ಯ ಸಾಲೆಗಳಲ್ಲಿ ಒಂದಿಲ್ಲೊಂದು ಅಂಶದಷ್ಟಾದರೂ ಕಾರ್ಯ ರೂಪಕ್ಕೆ ಇಳಿಸಲು ದೃಢ ನಿಶ್ಚಯ ಮಾಡಿದೆ.

ಕೆಲವೊಂದು ಕಾರಣಗಳ ಮೂಲಕ ಎಲ್ಲ ಸಾಮಾನ್ಯ ಸಾಲೆಗಳನ್ನು ಕೂಡಲೆ ಜೀವನ ಶಿಕ್ಷಣ ಸಾಲೆಗಳನ್ನಾಗಿ ಪರಿವರ್ತಿಸೂನದು ಬಲು ಕಷ್ಟದಾಯಕವಾದುದರಿಂದ, ಜೀವನ ಶಿಕ್ಷಣದ ಮುಖ್ಯ ಮುಖ್ಯ ಅಂಶಗಳನ್ನು ಸಾಧ್ಯ ವಾದ ಮಟ್ಟಿಗೆ ಎಲ್ಲ ಸಾಲೆಗಳಲ್ಲಿ ಬಳಿಕೆಯಲ್ಲಿ ತರಲು ಆದೇಶ ಇತ್ತಿದ್ದಾರೆ. ಆ ಕಾರ್ಯಕ್ರಮಕ್ಕೆ ಮೂಲ ಶಿಕ್ಷಣ ಅನುಸ್ಥಾಪನೆಯೆಂದು ಕರೆಯುತ್ತಿದ್ದಾರೆ. ಇವೆಲ್ಲ ಪ್ರಯತ್ನಗಳ ಫಲವಾಗಿ ಬರುವ ಜೀವನ ಶಿಕ್ಷಣ ಸಪ್ತಾ-ಹದ ಸಮಯ ಬರುವಷ್ಟರಲ್ಲಿ ನಮ್ಮ ಎಲ್ಲ ಸಾಲೆಗಳಲ್ಲಿ ಜೀವನ ಶಿಕ್ಷಣದ ಮೆರಗು ಬೀರುವದೆಂದು ಆಶಿಸಲಾಗಿದೆ.

## ಗಾಂಧೀಜಿಯವರ ಪುಣ್ಯತಿಥಿಯ ಆಚರಣೆ

ಭಾರತದ ಪಿತಾಮಹರೆನಿಸಿದ ಗಾಂಧೀಜಿಯವರು ಕಣ್ಮರೆಯಾಗಿ ಜಾನೆವರಿ ೩೦ನೆಯ ದಿನಾಂಕಕ್ಕೆ ಹನ್ನೊಂದು ವರುಷಗಳು ತುಂಬಿದವು. ಅವರು ದೇಶಕ್ಕೆ ಸಲ್ಲಿಸಿದ ಅಪಾರ ಸೇವೆಯನ್ನು ನೆನೆದು ನಾವು ಆ ದಿನ ಅವರ ಪುಣ್ಯತಿಥಿಯನ್ನು ಭಾರತದ ತುಂಬಾ ಆಚರಿಸುವ ಕ್ರಮವನ್ನು ಇಟ್ಟುಕೊಂಡಿದ್ದೇವೆ. ಆ ದಿನ, ಗಾಂಧೀಜಿ ಯವರು ಮಾಡಿದ ತ್ಯಾಗ ಹಾಗೂ ಸೇವೆಗಳನ್ನು ಸ್ಮರಣೆಗೆ ತಂದು ಆಹೋರಾತ್ರಿ ದೇಶದ ಸಲುವಾಗಿ ಪ್ರಾಣಾರ್ಪಣೆ ಮಾಡಿದ ಎಲ್ಲ ಹುತಾತ್ಮರನ್ನು ನೆನೆದು ಅವರನ್ನು ಗೌರವಿ ಸುವ ಸಲುವಾಗಿ ಸರಿಯಾಗಿ ೧೧ ಗಂ.ಗೆ ಎರಡು ನಿಮಿ ಷಗಳ ಮೌನವನ್ನು ಆಚರಿಸುವ ಪರಿಪಾಠವೂ ಬಂದಿದೆ.

ಈ ಪುಣ್ಯತಿಥಿಯ ದಿನ ನಾವೆಲ್ಲರೂ ಆ ಮಹಾ ತ್ಮಾರ ಮೂಲ ತತ್ವಗಳಾದ ಸತ್ಯ, ಅಹಿಂಸೆ, ಪ್ರೇಮ, ತ್ಯಾಗ; ಸೇವೆಗಳನ್ನು ನೆನೆದು ಅವರು ಹಾಕಿಕೊಟ್ಟ ಮಾರ್ಗದಲ್ಲಿಯೇ ದೇಶದ ಅಭಿವೃದ್ಧಿಗಾಗಿ ಮುಂದೆ ದುಡಿ ಯುವೆವೆಂದು ಪ್ರತಿಜ್ಞೆಯನ್ನು ಮಾಡುವದಾಗಬೇಕು.

## "ಜೀವನ ಶಿಕ್ಷಣ"ದ ಸಂಪಾದಕ ಮಂಡಳ

ಕಳೆದ ತಿಂಗಳಲ್ಲಿ ಜೀವನ ಶಿಕ್ಷಣ ಪತ್ರಿಕೆಯ ಸಂಚಾಲಕರೂ ಧಾರವಾಡ ಜಿಲ್ಲೆಯ ಶಿಕ್ಷಣಾಧಿಕಾರಿ ಗಳೂ ಆದ ಶ್ರೀಮಾನ್ ಜಿ. ಕೆ. ಕೊಪ್ಪಿಕರರಿಗೆ ಬೆಂಗ ಳೂರಿಗೆ ವರ್ಗವಾಯಿತು. ಅವರ ಸ್ಥಳದಲ್ಲಿ ಜೀವನ ಶಿಕ್ಷಣದ ಹಿಂದಿನ ಪ್ರಧಾನ ಸಂಪಾದಕರೆಂದು ಕೆಲಸ ಮಾಡಿದ ಶ್ರೀಮಾನ್ ಮ. ಗು. ಹಂದ್ರಾಳರವರು ಧಾರ ವಾಡ ಜಿಲ್ಲೆಯ ಶಿಕ್ಷಣಾಧಿಕಾರಿಗಳಾಗಿ ಬಂದುದರಿಂದ ಅವರು ಈ ಪತ್ರಿಕೆಯ ಸಂಚಾಲಕರಾದದ್ದು ನಮ್ಮೆಲ್ಲರಿಗೂ ಹೆಮ್ಮೆಯ ಮಾತಾಗಿದೆ. ಶ್ರೀಮಾನ್ ಹಂದ್ರಾಳ ರವರು ಜೀವನ ಶಿಕ್ಷಣ ಕ್ರಮದಲ್ಲಿ ಒಳ್ಳೆಯ ಆಸಕ್ತಿ, ಅಭಿರುಚಿ, ಅನುಭವವುಳ್ಳವರಾಗಿದ್ದು ಜೀವನ ಶಿಕ್ಷಣ

ಕ್ರಮದ ಮುನ್ನಡೆಗೂ ಒಳ್ಳೇ ಚಾಲನ, ಸಿಗುವದರಲ್ಲಿ ಸಂದೇಹವಿಲ್ಲ. ಅವರು ಧಾರವಾಡ ಜಿಲ್ಲೆಯಲ್ಲಿಯಷ್ಟೇ ಅಲ್ಲ ಮುಂಬಯಿ ಕರ್ನಾಟಕ ವಿಭಾಗದಲ್ಲಿ ಜೀವನ ಶಿಕ್ಷಣದ ಬಗೆಗೆ ಅಧಿಕಾರ ವಾಣಿಯಿಂದ ಸಮಸ್ಯೆಗಳನ್ನು ಪರಿಹರಿಸ ಬಲ್ಲ ವ್ಯಕ್ತಿಯಾಗಿದ್ದಾರೆ. ಜೀವನ ಶಿಕ್ಷಣದ ಬಗೆಗೆ ಪುಸ್ತಕ ಗಳನ್ನೂ ಬರೆದಿದ್ದಾರೆ. ಇಂಥವರು ನಮ್ಮ ಜೀವನ ಶಿಕ್ಷಣ ಮಾಸ ಪತ್ರಿಕೆಯ ಸಂಚಾಲಕರಾಗಿ ದೊರೆತುದು ಸುದೈವವೇ ಸರಿ, ಇವರು ತಾವು ಪ್ರಧಾನ ಸಂಪಾದಕರಾಗಿ ಕೆಲಸ ಮಾಡಿದಾಗಿನ ಅನುಭವಗಳ ಹಿನ್ನಡೆಯಲ್ಲಿ ಈ ಪತ್ರಿಕೆಯ ಅಭಿವೃದ್ಧಿಗಾಗಿ ಸೂಕ್ತ ಸಲಹೆ ಸೂಚನೆ ಗಳನ್ನು ಕಾಲಕಾಲಕ್ಕೆ ಮಾಡಿ ಪತ್ರಿಕೆಯ ಇನ್ನಷ್ಟು ಪ್ರಗತಿಯನ್ನು ಸಾಧಿಸಲು ಸಹಾಯಕರಾಗುವದರಲ್ಲಿ ಸಂದೇಹವಿಲ್ಲ.

ಅದರಂತೆ ಕಳೆದ ನಾಲ್ಕೂವರೆ ವರುಷಗಳಿಂದ ಇಲ್ಲಿಯ ವರೆಗೆ ಜೀವನ ಶಿಕ್ಷಣ ಪತ್ರಿಕೆಯ ಪ್ರಧಾನ ಸಂಪಾದಕರಾಗಿ ಕೆಲಸಮಾಡಿದ ಶ್ರೀಮಾನ್ ಎಸ್. ಪಿ. ಪಾಟೀಲರಿಗೂ ವರ್ಗವಾಗಿ ಅವರು ಹಾಸನ ಜಿಲ್ಲೆಯ ಶಿಕ್ಷಣಾಧಿಕಾರಿಗಳಾಗಿ ಹೋದರು; ಶ್ರೀಮಾನ್ ಎಸ್. ಪಿ. ಪಾಟೀಲರ ಪ್ರಧಾನ ಸಂಪಾದಕತ್ವದ ಅವಧಿಯಲ್ಲಿ ನಮ್ಮ ಈ ಜೀವನ ಶಿಕ್ಷಣ ಪತ್ರಿಕೆಯು ವಿಶೇಷ ಪ್ರಗತಿಯನ್ನು ಸಾಧಿಸಿದ್ದುದನ್ನು ಇಲ್ಲಿ ವಿವರವಾಗಿ ಕೊಡುವದು ಅವಶ್ಯ ವಾಗಿದೆ. ಈ ಪತ್ರಿಕೆಯ ರೂಪ, ಮುದ್ರಣ, ಹೊದಿಕೆ ಮುಂತಾದವುಗಳು ಒಳ್ಳೇ ಆಕರ್ಷಣೀಯವಾದುವಲ್ಲದೆ, ಅದರಲ್ಲಿಯ ಲೇಖನಗಳು ಶಿಕ್ಷಣ ಸಾಹಿತ್ಯದ ಮಟ್ಟು ವಿಶೇಷ ಎತ್ತರವಾದದ್ದನ್ನು ಎಲ್ಲ ಓದುಗರು ಮನಗಂಡಿ ರಲುಸಾಕು. ಶಿಕ್ಷಣ ಕ್ಷೇತ್ರದ ಸಲುವಾಗಿ ಹೊರಡುವ ಕನ್ನಡ ಪತ್ರಿಕೆಗಳಲ್ಲಿ ಅತಿ ಬಹು ಕಾಲದ ಹಾಗು ಅವಿತರ ಸೇವೆ ಯನ್ನು ಸಲ್ಲಿಸುತ್ತಿರುವ ಪತ್ರಿಕೆಯೆಂದರೆ " ಜೀವನ ಶಿಕ್ಷಣ "ವೇ ಸರಿ. ಇಂತಹ ವಿರಳ ಪತ್ರಿಕೆಗೆ ಉನ್ನತ ಮಟ್ಟನ್ನು ತಂದುಕೊಟ್ಟ ಬಗೆಗೆ ಸದ್ಯದ ಸಂಪಾದಕ ಮಂಡಲವು ಶ್ರೀ ಪಾಟೀಲರಿಗೆ ಋಣಿಯಾಗಿದೆ. ಇದಲ್ಲದೆ ಶ್ರೀ ಪಾಟೀಲರು ತಮ್ಮ ಅವಿರತ ಪ್ರಯತ್ನ ಹಾಗು ಸಾಹಸಗಳ ಮೂಲಕ ಪತ್ರಿಕೆಯ ಆಡಳಿತೆಯ ಕ್ಷೇತ್ರವನ್ನು ಹೇಳಿಕೊಳ್ಳುವಷ್ಟು ಸುಗಮಗೊಳಿಸಿದ್ದಾರೆ. ಅದರ ಆರ್ಥಿಕ ಸ್ಥಿತಿಯನ್ನು ಬಹುಮಟ್ಟಿಗೆ ಸುಧಾರಿಸಿದ್ದಾರೆ. ಮುದ್ರಣಕಾರ್ಯ, ಮುದ್ರಣಕ್ಕೆ ಬೇಕಾಗುವ ಕಾಗದ ಮುಂತಾದ ಹಲವಾರು ವಿಷಯಗಳ ಬಗೆಗೆ ಸೌಕರ್ಯ ಗಳನ್ನು ಒದಗಿಸಿದ್ದಾರೆ. ಇಷ್ಟೆಲ್ಲ ಸೇವೆ ಸಲ್ಲಿಸಿದ ಶ್ರೀ ಪಾಟೀಲರಿಗೆ ಈ ಪತ್ರಿಕೆಯು ಚಿರ ಋಣಿಯಾಗಿದೆ.

ಇನ್ನು ಶ್ರೀಮಾನ್ ಪಾಟೀಲರು ಹೋದನಂತರ ಅವರ ಕೆಲಸವಾದ ಪ್ರಧಾನ ಸಂಪಾದಕತ್ವದ ಭಾರವು ತಾತ್ಪೂರ್ತಿಕವಾಗಿ ನನ್ನ ಮೇಲೆ ಬಂದಿದೆ. ಇಷ್ಟೊಂದು ಸುಗಮವಾಗಿ ನಡೆದ ಪತ್ರಿಕೆಯ ಸಂಪಾದಕತ್ವವನ್ನು ಸಾಗಿಸಿಕೊಂಡು ಹೋಗುವದಕ್ಕೆ ಯಾವ ಭಾರವೆನಿಸುವ ದಿಲ್ಲ. ಮೇಲಾಗಿ ಶ್ರೀಮಾನ್ ಮ. ಗು. ಹಂದ್ರಾಳರವ ರಂಥ ಸಂಚಾಲಕರೂ ನುರಿತ ಹಾಗು ಬಹುಕಾಲದ ಅನು ಭವವಿರುವ ಇನ್ನಿತರ ಸಂಪಾದಕ ಮಂಡಲದ ಸದಸ್ಯರೂ ಇರುವಾಗ ನನಗೆ ಅದನ್ನು ಸರಿಯಾಗಿ ನಡೆಯಿಸಿ ಕೊಂಡು ಹೋಗಲು ಸಾಕಷ್ಟು ಅನುಕೂಲವಾಗಿದೆ. ಈ ಪತ್ರಿಕೆಯ ಹಿರಿಮೆಯನ್ನು ಕಾಯ್ದುಕೊಂಡು ಹೋಗಲು ಸಕಲ ಪ್ರಯತ್ನವನ್ನು ಮಾಡುವೆನೆಂದು ಭರವಸೆಯನ್ನೀಯುವೆ.


ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

**ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ**

# ಆದರ್ಶ ಚಿತ್ರಕಲಾ

**( Ideal Drawing )**

**ಶ್ರೀ ಎಸ್. ಕೆ. ಜೋಶಿ, ಮತ್ತು**
**ಶ್ರೀ ಜಿ. ಡಿ. ವಾಲಿ.**

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. ಬೆಲೆ ೧—೧೨—೦ ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ,

**ಜಿ. ವಾಯ್. ರಾಣೆ**
**ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.**

# ಶ್ರೀ ಅಂಣಾರಾವ ಗಣಮುಖಿಯವರು

**( ನಮ್ಮ ರಾಜ್ಯದ ಶಿಕ್ಷಣ ಶಾಖೆಯ ಮಾನ್ಯ ಮಂತ್ರಿಗಳು )**

ಲೇಖಕರು :– **ಶ್ರೀ ಬ. ಮ. ಶಂತ್ರಿ,** ಬಿ.ಎ.,ಬಿ.ಟಿ.,

## ಮೊದಲ ಮಾತು

ಹೋದ ತಿಂಗಳು ದಿನಾಂಕ ೪ ರಂದು ಮಾನ್ಯ ಮಂತ್ರಿಗಳು ಧಾರವಾಡಕ್ಕೆ ಸಂದರ್ಶನವಿತ್ತಾಗ ಗುಲಗಂಜಿ ಕೊಪ್ಪದ ಜೀವನ ಶಿಕ್ಷಣ ಶಾಲೆಯ ಪ್ರಾರ್ಥನಾ ಮಂದಿರವನ್ನೂ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲೇರ್ಪಡಿಸಲ್ಪಟ್ಟಿದ್ದ ಜೀವನ ಶಿಕ್ಷಣತಜ್ಞರವಿಚಾರಗೋಷ್ಠಿಯನ್ನೂ ಉದ್ಘಾಟಿಸಿದರಷ್ಟೇ. ಆ ಎರಡೂ ಪ್ರಸಂಗಗಳಲ್ಲಿಮೂಲಶಿಕ್ಷಣದ ಬಗೆಗಿದ್ದ ತಮ್ಮನೈಜವಾದ ಅಭಿಪ್ರಾಯಗಳನ್ನು ಶ್ರೋತೃವೃಂದವು ತಲೆದೂಗುವಂತೆ ಅಲ್ಲಲ್ಲಿ ಸಂದರ್ಭೋಚಿತವಾದ ಸುಲಭ ದೃಷ್ಟಾಂತಗಳಿಂದ ತಿಳಿಯ ಪಡಿಸಿ ಹೊಸ ಶಿಕ್ಷಣದಲ್ಲಿ ಹುದುಗಿದ್ದ ಹಿರಿಮೆಗಳನ್ನೂ ಹಳೆಶಿಕ್ಷಣದ ಕಿರಿಮೆಗಳನ್ನೂ ಒಂದೊಂದನ್ನಾಗಿ ಮನಂಬುಗುವಂತೆ ವಿವರಿಸಿದರು. ತಲೆ-ಕೈ(ಬುದ್ಧಿ-ದುಡಿಮೆ)ಗಳ ಸಮನ್ವಯನೇ ಮೂಲ ಶಿಕ್ಷಣದ ತಳಹದಿಯೆಂದು ಸಾರಿದರು. ಹಳೆ ಶಿಕ್ಷಣವು ಕೈಯನ್ನು ಕಡೆಗಣಿಸಿದ್ದರಿಂದ ಅದು ಈಗ ಕೆಲಸಕ್ಕೆ ಬಾರದಂತಾಗಿದೆ. ಹೊಸ ಶಿಕ್ಷಣದಲ್ಲಿ ಕೈಯಿಂದಲೇ ತಲೆಯು ಪೋಷಣವನ್ನು ಹೊಂದಬೇಕು; ಅರ್ಥಾತ್ ದುಡಿಮೆಯಿಂದಲೇ ಮಗುವಿನ ಬುದ್ಧಿಯು ಬೆಳೆದು ಬರಬೇಕೆಂಬುದು ಮೂಲ ಶಿಕ್ಷಣದ ತಾತ್ವಿಕ ವಿಚಾರವೆಂಬುದನ್ನು ಅವರು ಸೋದಾಹರಣೆಗಳಿಂದ ಕೈಯೆತ್ತಿ ಚಿತ್ತಾಕರ್ಷಕವಾಗಿ ತೋರಿಸಿದುದನ್ನು ಸಭಿಕರು ಅತ್ಯತ್ತ ಅಲುಗಾಡದೆ ಏಕಾಗ್ರಚಿತ್ತರಾಗಿ ಕಿವಿಗೊಟ್ಟು ಕೇಳಿದರು. ನಕಾಶವು ದೊಡ್ಡದಿದ್ದರೆ ದೇಶವು ದೊಡ್ಡದಾಗಲಾರದು; ದೇಶದ ದೊಡ್ಡಸ್ತಿಕೆಯು ದುಡಿಮೆ(ಕಾರ್ಯ)ಯನ್ನೇ ಅವಲಂಬಿಸಿರುತ್ತಿದೆ. ಮಕ್ಕಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಶಿಕ್ಷಣವು ನಮಗೆ ಬೇಕು. ಅಂತಹ ಮಕ್ಕಳನ್ನು ತಯಾರು ಮಾಡುವ ಶಿಕ್ಷಕರು ಹರಿಯುವ ನಿರ್ಮಲ ಝರಿಯಂತಿರಬೇಕು. ನಿರ್ಮಲ ಝರಿಯು ನಿರ್ಮಲ ಜಲವನ್ನು ಪೂರೈಸುವಂತೆ ಶಿಕ್ಷಕರು ಜ್ಞಾನರೂಪಿಯಾದ ನಿರ್ಮಲ ಜಲವನ್ನು ಮಕ್ಕಳಿಗೆ ಕೊಡಬೇಕು. ತಾವೂ ಸ್ವಂತ ವಿಚಾರದವರಿದ್ದು ಮಕ್ಕಳಿಗೂ ಸ್ವಂತ ವಿಚಾರವನ್ನು ಮಾಡಲು ಅಣಿಗೊಳಿಸಬೇಕು. ಇಂತಹ ಮನನೀಯ ಭಾಷಣಗಳನ್ನು ಆ ಎರಡೂ ಸಮಾರಂಭಗಳಲ್ಲಿ ಮಾನ್ಯ ಮಂತ್ರಿಗಳು ಮಾಡಿದುದನ್ನು ಸಭಿಕರು ಮನಗಂಡಿರಲು ಸಾಕು. ಅಂತಹವರ ಜೀವನ ಚರಿತ್ರದ ಬಗೆಗೆ ಅಲ್ಪ ಪರಿಚಯವನ್ನಿಲ್ಲಿ ಮಾಡಿ ಕೊಡಲು ಪ್ರಯತ್ನಿಸಲಾಗಿದೆ.

## ಬಾಲ್ಯ ಹಾಗು ಶಿಕ್ಷಣ

ಕಲಬುರ್ಗಿ ಜಿಲ್ಲೆಯಲ್ಲಿ ಕಲಬುರ್ಗಿ ತಾಲೂಕಿನಲ್ಲಿ ತಡತೇಗನೂರವೆಂಬದೊಂದು ಗ್ರಾಮವಿದೆ. ಆ ಗ್ರಾಮದಲ್ಲಿ ಗಣಮುಖಿಯವರ ಮನೆತನವು ಎಂದಿನಿಂದಲೋ ಪ್ರಸಿದ್ಧಿಯನ್ನು ಪಡೆದಿರುವದರಿಂದ ಗಣಮುಖಿಯೆಂಬ ಹೆಸರಿಗೆ ಅನ್ವರ್ಥಕವಿದೆ. ಆ ಮನೆತನದಲ್ಲಿ ಶ್ರೀ ಗಣಮುಖಿಯವರು ೧೯೦೯ರಲ್ಲಿ ಜನಿಸಿದರು. ಇವರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವೆಲ್ಲ ಕಲಬುರ್ಗಿಯಲ್ಲಿಯೇ ಆಗಿರಲು ಸಾಕು. ತಮ್ಮ ಇಪ್ಪತ್ತೊಂದನೆಯ ಚಿಕ್ಕ ವಯಸ್ಸಿನಲ್ಲಿ ಅಂದರೆ ೧೯೩೦ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮುಂದೆ ಎರಡು ವರ್ಷಗಳ ವರೆಗೆ ಕಾಯಿದೆಯ ಅಭ್ಯಾಸವನ್ನು ಮಾಡಿ ಅದೇ ವಿಶ್ವವಿದ್ಯಾನಿಲಯದ ಎಲ್.ಎಲ್.ಬಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು.

## ವಕೀಲಿ ವೃತ್ತಿ ಮತ್ತು ಸಾರ್ವಜನಿಕ ಸೇವೆ

ಕಲಬುರ್ಗಿ ತಾಲೂಕಿನವರಿದ್ದುದರಿಂದ ಅವರು ಸ್ವಾಭಾವಿಕವಾಗಿ ತಮ್ಮ ವಕೀಲಿಯನ್ನು ಕಲಬುರ್ಗಿಯಲ್ಲಿಯೇ ಪ್ರಾರಂಭಿಸಿ ಸ್ವಲ್ಪದಿನಗಳಲ್ಲಿ ಉತ್ತಮ ವಕೀಲರೆಂದು ಹೆಸರನ್ನು ಗಳಿಸಿಕೊಂಡರು. ೧೯೩೨ ರಿಂದ

ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗವಹಿಸಿದರು. ಆ ಜಿಲ್ಲೆಯ ನಾನಾವಿಧ ಹಾಗು ರಾಜ್ಯಕೀಯ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು. ಯಾದಗಿರಿಯಲ್ಲಿಯ ರಂಕರ ಸಂಸ್ಕೃತ ಕಾಲೇಜಿನ ಅಧ್ಯಕ್ಷರಿದ್ದರು. ಕಲಬುರ್ಗಿ ಮುನಸಿಪಾಲಿಟಿಯ ಸದಸ್ಯರೆಂದು ಎರಡು ಸಲ ಚುನಾಯಿಸಲ್ಪಟ್ಟರು. ಸೊಲ್ಲಾಪುರದಲ್ಲಿ ನೆರವೇರಿದ ಕರ್ನಾಟಕ ರಾಜ್ಯಕೀಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಕಲಬುರ್ಗಿ ಜಿಲ್ಲಾ ಕಾಂಗ್ರೆಸ ಕಮೀಟಿಯ ಸೆಕ್ರೆಟರಿಗಳಾಗಿಯೂ,ಅಧ್ಯಕ್ಷರಾಗಿಯೂ ಕೆಲಸ ಮಾಡಿದರು. ಪ್ರಾರಂಭದಿಂದ ಹೈದರಾಬಾದ ಸಂಸ್ಥಾನದ ಕಾಂಗ್ರೆಸ ಕಾರ್ಯಕಾರಿ ಸಮಿತಿಯ ಸಭಾಸದರಿದ್ದರು. ಹೈದರಾಬಾದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಕಮೀಟಿಯ ಜನರಲ್ ಸೆಕ್ರೆಟರಿಗಳಾಗಿದ್ದರು. ಹೈದರಾಬಾದ ಸಂಸ್ಥಾನದ ತಾತ್ಪೂರ್ತಿಕ ಲೋಕಸಭೆಯ ಸದಸ್ಯರೆಂದು ಆಯ್ಕೆಯನ್ನು ಹೊಂದಿ ಹೈದರಾಬಾದ ಪ್ರದೇಶ ಕಾಂಗ್ರೆಸ ಕಮೀಟಿಯ ಸಭಾಸದರೂ ಆಗಿದ್ದರು. ಹೈದರಾಬಾದದಲ್ಲಿಯು ವಿದ್ಯಾವರ್ಧಕ ಸಂಘದ ಮತ್ತು ವಸತಿ ಗೃಹದ ಅಧ್ಯಕ್ಷರಿದ್ದರಲ್ಲದೆ ಮೊದಲಿನ ಹೈದರಾಬಾದ ರಾಜ್ಯದ ಮಂತ್ರಿಗಳೂ ಆಗಿದ್ದರು. ಹೈದರಾಬಾದ ರಾಜ್ಯ ಸರಕಾರದವರಿಂದ ನಿಯಮಿಸಲ್ಪಟ್ಟಿದ್ದ ಜಹಾಗೀರದಾರರ ಸಾಲ ನಿರ್ಮೂಲನೆಯ ಬೋರ್ಡಿನ ಕಾರ್ಯಾಧ್ಯಕ್ಷರಾಗಿದ್ದರು. ರಾಜ್ಯಗಳ ಪುನರ್ರಚನೆಯ ಕಾಲಕ್ಕೆ ಅಂತರ್ರಾಜ್ಯ ಮಂತ್ರಿಗಳ ಕಮೀಟಿಯ ಸೆಂಬರರು ಆಗಿದ್ದರು. ಹೈದರಾಬಾದ ಕರ್ನಾಟಕ ಪ್ರದೇಶ ಸ್ಪೆಶಲ್ ಕಾಂಗ್ರೆಸ ಕಮೀಟಿಯ ಅಧ್ಯಕ್ಷರು ಆಗಿದ್ದರು. ಅಫಝಲ್‌ಪುರ ಮತದಾರ ಕ್ಷೇತ್ರದಿಂದ ಮೈಸೂರ ವಿಧಾನ ಸಭೆಗೆ ಎರಡು ಸಲ ಚುನಾಯಿತರಾಗಿದ್ದಾರೆ.

**ಕೊನೆಯ ಮಾತು**

ಮೇಲಿನ ನಿವರಗಳನ್ನವಲೋಕಿಸಿದರೆ, ಅವರು ಚಿಕ್ಕ ವಯಸ್ಸಿನಲ್ಲಿಯೇ ಸಾರ್ವಜನಿಕ ಕ್ಷೇತ್ರದಲ್ಲಿ ಧುಮಿಕಿ ನಾನಾ ತರಹದ ರಂಗಗಳಲ್ಲಿ ಕೆಲಸ ಮಾಡಿದ ಅನುಭವವು ಅವರಿಗೆ ಸಾಕಷ್ಟಿದೆ ಎಂಬುದು ವ್ಯಕ್ತವಾಗುತ್ತಿದೆ. ತಮ್ಮ ಮುಖ್ಯ ಕಾಯಕವಾದ ವಕೀಲಿ ವೃತ್ತಿಯಲ್ಲಿ ಉತ್ತಮ ಕೀರ್ತಿಯನ್ನು ಪಡೆದುಕೊಂಡು ಸಾರ್ವಜನಿಕ ಹಿತಕೋಸ್ಕರ ತಮ್ಮ ಜೀವನವನ್ನು ಮುಡುಪಾಗಿ ಇಟ್ಟಿರುವುದು ನಿಜಕ್ಕೂ ಸ್ತುತ್ಯವು. ಹಲವು ವಕೀಲರು ಸಾರ್ವಜನಿಕ ಕ್ಷೇತ್ರದಲ್ಲಿ ಧುಮುಕಿ ತಮ್ಮ ವಕೀಲಿ ವೃತ್ತಿಯಲ್ಲಿ ಮನಸ್ಸು ಹಾಕದೆ ಅದನ್ನು ಕಳೆದುಕೊಂಡ ಉದಾಹರಣೆಗಳು ನಮ್ಮ ಕಣ್ಣೆದುರಿಗಿವೆ. ಬೇರೆ ಹಲವರು ಸಾರ್ವಜನಿಕ ರಂಗಕ್ಕೆಳಿಯದೆ ತಮ್ಮ ವಕೀಲಿಯಲ್ಲಿಯೇ ಮಗ್ನರಾಗಿ ಉತ್ತಮ ವಕೀಲರೆಂದು ಹೆಸರಾಗಿದ್ದಾರೆ. ಆದರೆ, ಶ್ರೀ ಅಂಣಾರಾವರವರು ಇವೆರಡರ ಹಿತಮಿತವಾದ ಸಂಯೋಜನೆಯನ್ನು ಮಾಡಿಕೊಂಡು ಎರಡೂ ಕ್ಷೇತ್ರಗಳಲ್ಲಿ ಹೆಸರನ್ನು ಪಡೆದಿದ್ದಾರೆ. ಇದು ಅವರಲ್ಲಿ ಹುದುಗಿದ್ದ ಯೋಗ್ಯತೆಯನ್ನು ಬೈಲಿಗೆಳೆದು ತೋರಿಸುತ್ತಿದೆ. ವಿಧಾನ ಸಭೆಯ ಚುನಾವಣೆಗಳಲ್ಲಿ ಆಯ್ಕೆಯನ್ನು ಹೊಂದುವದು ಎಂತಹ ಪ್ರಯಾಸದ ಮಾತು ಎಂಬುದು ಎಲ್ಲರ ಅನುಭವದ ಮಾತು. ಒಂದೇ ಮತದಾರ ಕ್ಷೇತ್ರ ಅಫಝಲ್‌ಪುರದಿಂದ ಎರಡು ಸಲ ಚುನಾಯಿಸಲ್ಪಟ್ಟ ಸಂಗತಿಯು ಅವರ ಹುಲುಸಾದ ಲೋಕ ಪ್ರಿಯತೆಯನ್ನು ನಿಚ್ಚಳವಾಗಿ ಪ್ರದರ್ಶಿಸುತ್ತದೆ. ಮೇಲಿ ವಿವರಿಸಿದ ಅವರ ಚಟುವಟಿಕೆಗಳನ್ನೆಲ್ಲ ಗಮನಕ್ಕೆ ತೆಗೆದುಕೊಂಡರೆ, ಅವರಲ್ಲಿ ಮನೆ ಮಾಡಿಕೊಂಡಿದ್ದ ಕಾರ್ಯಕ್ಷಮತೆಯು ನಮ್ಮ ನಿದರ್ಶನಕ್ಕೆ ಬಾರದಿರದು. ಇಂತಹ ಹಗಲಿರುಳು ದುಡಿಯುವ ಮಂತ್ರಿಗಳು ನಮ್ಮ ಶಿಕ್ಷಣ ಇಲಾಖೆಗೆ ಅತ್ಯವಶ್ಯನಾಗಿ ಈಗ ಬೇಕಾಗಿದ್ದರು. ನಮ್ಮ ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಮುಂಬಯಿ ಕರ್ನಾಟಕ, ಮದ್ರಾಸ ಕರ್ನಾಟಕ, ಹೈದರಾಬಾದ ಕರ್ನಾಟಕ, ಹಳೆ ಮೈಸೂರು, ಕೊಡಗು, ಹೀಗೆ ಒಂದಕ್ಕೊಂದು ಸಂಬಂಧವಿಲ್ಲದ ಬೇರೆ ಬೇರೆ ತರಹದ ಐದು ಘಟಕಗಳು ಕೂಡಿವೆ. ಪ್ರತಿಯೊಂದರ ಭಾಷಾಶೈಲಿಯು ಬೇರೆ, ಅಭ್ಯಾಸ ಪತ್ರಿಕೆಯು ಬೇರೆ, ಶಿಕ್ಷಕರು ಪಡೆಯಬೇಕಾದ ಪ್ರಮಾಣ ಪತ್ರಗಳು ಬೇರೆ, ವೃತ್ತಿಯ ತರಬೇತುಗಳು ಬೇರೆ, ಶಿಕ್ಷಕರ ಹಾಗು ಅಧಿಕಾರಸ್ಥರ ಸಂಬಳದ ಪ್ರಮಾಣಗಳು ಬೇರೆ, ಬಡತಿಯ ಪ್ರಮಾಣಗಳು ಬೇರೆ, ನೌಕರಿಯ ಅವಧಿಯು ಬೇರೆ, ನೌಕರಿಯ ನಿಯಮಾವಳಿಗಳು ಬೇರೆ, ಹೀಗೆ ಒಂದಲ್ಲ ಎರಡಲ್ಲ ಹಲವಾರು ತೊಡಕುಗಳು ಕೂಡಿವೆ. ಅವುಗಳನ್ನು ಆಮೂಲಾಗ್ರವಾಗಿ ತೊಡೆದು ಹಾಕಿ ಇಷ್ಟೊಂದು ಕಾರ್ಯದಕ್ಷತೆಯುಳ್ಳ ಮಾನ್ಯ ಮಂತ್ರಿಗಳು ಆವ ಘಟಕದವರಿಗೂ ಅನ್ಯಾಯವಾಗದಂತೆ ವಿವಿಧತೆಯಲ್ಲಿ ಏಕರೂಪತೆಯನ್ನುಂಟು ಮಾಡಿ ಇಡಿಯ ರಾಜ್ಯಕ್ಕೆ ಒಂದೇ ನಿಯಮಾವಳಿಯನ್ನು ರಚಿಸಿ ಈ ಪವಿತ್ರ ಕ್ಷೇತ್ರದಲ್ಲಿ ದುಡಿಯುವವರಿಗೆ ಬೇಗನೆ ನೆಮ್ಮದಿಯನ್ನೀಯುವರೆಂದು ಹಾರೈಸುತ್ತೇವೆ. ಹಾಗೆ ಮಾಡಲು ಪರಮಾತ್ಮನು ಅವರಿಗೆ ಹೆಚ್ಚಿನ ಶಕ್ತಿಯನ್ನು ದಯಪಾಲಿಸಲೆಂದು ಆತನನ್ನು ಪ್ರಾರ್ಥಿಸುತ್ತೇವೆ.

# ಗಂಡು ಮಕ್ಕಳ ಹಾಗು ಹೆಣ್ಣು ಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆ ೧೯೫೯

## ವೇಳಾಪತ್ರಿಕೆ

| ದಿನಾಂಕ | ವೇಳೆ | | | | | ಗುಣಗಳು |
|---|---|---|---|---|---|---|
| ೧೩-೪-೧೯೫೯ | ಮುಂ. | ೧೦-೩೦ | ರಿಂದ | ೧೧-೫೫ | | ಪರೀಕ್ಷೆಯ ಉಸ್ತೇದವಾರರ ಹಾಜರಿ |
| ಸೋಮವಾರ | ,, | ೧೧-೩೦ | ರಿಂದ | ೨-೦೦ | i ಪದರ | **ಪ್ರಾದೇಶಿಕ ಭಾಷಾ ಮತ್ತು ಸಾಹಿತ್ಯ** |
| | | | | | | ೨ನೆಯ ಕಾಗದ- ನಿಬಂಧ ಮತ್ತು ಬರೆಹ ೧೦೦ |
| | ಮಧ್ಯಾಹ್ನ | ೩-೦೦ | ರಿಂದ | ೬-೦೦ | iv ಪದರ | ಸಾಮಾನ್ಯ ವಿಜ್ಞಾನ ಹಾಗು ಗೃಹ ವಿಜ್ಞಾನ ೧೦೦ |
| ೧೪-೪-೧೯೫೯ | ಮುಂ. | ೧೧-೦೦ | ರಿಂದ | ೨-೦೦ | ii ಪದರ | ಗಣಿತ- ೧ನೆಯ ಕಾಗದ ಅಂಕಗಣಿತ ೧೦೦ |
| ಮಂಗಳವಾರ | ಮಧ್ಯಾಹ್ನ | ೩-೦೦ | ರಿಂದ | ೬-೦೦ | iii ಪದರ | ಇತಿಹಾಸ (ಪೌರನೀತಿ) ಮತ್ತು ಭೂಗೋಲ ೧೦೦ |
| ೧೫-೪-೧೯೫೯ | ಮುಂ. | ೧೧-೦೦ | ರಿಂದ | ೨-೦೦ | i ಪದರ | **ಪ್ರಾದೇಶಿಕ ಭಾಷಾ ಮತ್ತು ಸಾಹಿತ್ಯ** |
| ಬುಧವಾರ | | | | | | ೧ನೆಯ ಕಾಗದ- ಗದ್ಯ-ಪದ್ಯ ವ್ಯಾಕರಣ ೧೦೦ |
| | ಮಧ್ಯಾಹ್ನ | ೩-೦೦ | ರಿಂದ | ೬-೦೦ | ii ಪದರ | ಗಣಿತ- ೨ನೆಯ ಕಾಗದ (ಭೂಮಿತಿ-ಜಮಾಖರ್ಚು) ೧೦೦ |
| ೧೬-೪-೧೯೫೯ | ಮುಂ. | ೧೧-೦೦ | ರಿಂದ | ೨-೦೦ | vi ಪದರ | ಐಚ್ಛಿಕ ವಿಷಯ:- ಹಿಂದೀ ಭಾಷಾ ೧೦೦ |
| ಗುರುವಾರ | ಮಧ್ಯಾಹ್ನ | ೨-೦೦ | ರಿಂದ | ೬-೦೦ | v ಪದರ | ಅ) ಸೂಜಿಗೆಲಸ ೧೦೦ |
| | | | | | | ಬ) ಚಿತ್ರಕಲೆ |
| | | | | | | x ಕ) ಪ್ರಾಯೋಗಿಕ- ಒಕ್ಕಲತನ |
| | | | | | | x ಡ) ನೂಲುವದು ಮತ್ತು ನೇಯುವದು |
| | | | | | | x ಇ) ಕಟ್ಟಿಗೆಯ ಕೆಲಸ |
| | | | | | | x ಫ) ಹೂಲಿಗೆಯ ಕೆಲಸ |
| | | | | | vii ಪದರ | (ಕಡ್ಡಾಯದ ಹೆಚ್ಚಿನ ವಿಷಯ)ಆರೋಗ್ಯ ಶಿಕ್ಷಣ ಹಾಗು ಸಾಂಘಿಕ ಜೀವನ ೧೦೦ |
| ೧೭-೪-೧೯೫೯ | ಮುಂ. | ೧೧-೦೦ | ರಿಂದ | ೨-೦೦ | vi ಪದರ | ಸಂಗೀತ, ಕಾಗದ-ರಟ್ಟಿನ ಕೆಲಸ, ಬೆತ್ತದ ಕೆಲಸ ೧೦೦ |
| ಶುಕ್ರವಾರ | ಮಧ್ಯಾಹ್ನ | ೩-೦೦ | ರಿಂದ | ೪-೦೦ | i ಪದರ | ೩ನೆಯ ಕಾಗದ- ಪ್ರಾದೇಶಿಕ ಭಾಷಾ (ಉರ್ದು, ಮರಾಠಿ ವಿ.ಗಳಿಗೆ) ೫೦ |

x ಈ ಪ್ರಾಯೋಗಿಕ ಪರೀಕ್ಷೆಯು ಆಯಾಸಾಲೆಗಳಲ್ಲಿಯೇ ಮೊದಲೇ ತೆಗೆದುಕೊಳ್ಳಲಾಗುವದು.

**ಪ್ಪಿ. ಎಸ್. ಚವಣ್ಣವರ**
ಇನ್‌ಚಾರ್ಜ ಪ್ರಿನ್ಸಿಪಾಲ್ ಸರಕಾರಿ ಗಂ.ಟ್ರೇ.ಕಾ. ಧಾರವಾಡ

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

**ಸುವರ್ಣ ಸಂಧಿ!** **ಸಚಿತ್ರ ಗ್ರಂಥ!!** **ಸುಂದರ ಮುದ್ರಣ!!!**

# "ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮನ ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಿಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ, ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯರ ಬಣ್ಣ ಬಣ್ಣಗಳಲ್ಲಿ ಛಾಯಾ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂಥ. ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.

ದಿ. ೧೫ ಆಗಸ್ಟ ೫೬ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯಕ್ಷತೆಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ. ಪ್ರೋತ್ಸಾಹನೆ ಕೊಡಿರಿ.

**ಸಾದಾ ಪ್ರತಿ ೩ ರೂ. ]** **ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್.** **[ ಸುಂದರ ಪ್ರತಿ ೪ ರೂ**

**ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಿಕೋಟಾ, ಜಿಲ್ಲಾ:— ವಿಜಾಪುರ.**

# ಸುಬೋಧ ಹಿಂದೀ ಕನ್ನಡ ವ್ಯಾಕರಣ

● ★ ●

ಇದನ್ನು ಬರೆದವರು ಹಿಂದೀ ಕ್ಷೇತ್ರದಲ್ಲಿ ಹೆಸರು ಪಡೆದ **ಶ್ರೀ ಗುರನಾಥ ಜೋಶಿ** ಅವರು. ತಮ್ಮ ಆಳವಾ ಅನುಭವದಿಂದ ಅಲ್ಲಲ್ಲಿ ಕನ್ನಡ ವ್ಯಾಕರಣಕ್ಕೆ ಹೋಲಿಸಿ ಸುಲಭ ಭಾಷೆಯಲ್ಲಿ ಸರ್ವರಿಗೂ ತಿಳಿಯುವಂತೆ ಬರೆದಿದ್ದಾ ಇದರಲ್ಲಿ ಕೇವಲ ವ್ಯಾಕರಣದ ನಿಯಮಗಳು ಇರದೆ ಹಿಂದೀಯಿಂದ ಕನ್ನಡಕ್ಕೂ ಕನ್ನಡದಿಂದ ಹಿಂದಿಗ ಭಾಷಾಂತರ ಮಾಡುವದಕ್ಕೆ ವಾಕ್ಯಗಳೂ ಕೊಡಲ್ಪಟಿವೆ. ಇದರಿಂದ ಕಲಿಯಬಯಸುವವರೆಲ್ಲರೂ ಸುಲಭವಾ ಹಿಂದಿಯನ್ನೂ ಕಲಿಯಬಹುದಾಗಿದೆ. ಈ ಪುಸ್ತಕವನ್ನು ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ, ಪ್ರಿನ್ಸಿಪಾ **ವಿ. ಕೆ. ಗೋಕಾಕ** ಅವರು ಸ್ವಾಗತಿಸಿದ್ದಾರೆ. ಇಂದೇ ಇದನ್ನು ತರಿಸಿಕೊಂಡು ಹಿಂದೀಯನ್ನು ಕಲಿಯಿ ಒಂದುನೂರಾ ಹನ್ನೆರಡು ಪುಟಗಳು! ಬೆಲೆ ಕೇವಲ ೧೪ ಆಣೆ. ವ್ಯಾಪಾರಸ್ಥರಿಗೆ ಯೋಗ್ಯ ಕಮಿಸನ್ನು !

ಕೆಳಗಿನ ಪತ್ತೆಗೆ ಬರೆಯಿರಿ.

**ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ.**

# ಅನುಭವ—ಸಾಹಿತ್ಯ

ಲೇಖಕರು : **ಡಾ. ಬಿ. ಎಸ್. ಗದ್ದಗಿಮಠ,** ಎಮ್.ಎ.,ಪಿಎಚ್.ಡಿ.

ಅವರವರ ದರುಶನಕೆ | ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ ||
ಅವರವರ ಭಾವಕ್ಕೆ | ಅವರವರ ಪೂಜೆಗಂ
ಅವರವರಿಗೆಲ್ಲ ದೇವನೀನೊಬ್ಬನೆ ||

—ಮುಪ್ಪಿನ ಷಡಕ್ಷರಾರ್ಯ

ಎಂತಹ ಅನುಭವ ನುಡಿಯು ತುಂಬಿ ಬಂದಿದೆ ಇಲ್ಲಿ! ಇದು ಅನುಭವ ಸಾಹಿತ್ಯಕ್ಕೆ ನಾಂದಿ. ಪ್ರತಿಯೊಂದು ನಾಗರಿಕತೆಯೂ ಹೆಮ್ಮೆ ಪಡುವಂತಹ ಪಚನಾಮೃತ. ಕನ್ನಡ ನಾಗರಿಕತೆಯು ಸಹೋದರ ಧರ್ಮಗಳಲ್ಲಿ ತಾಳಿದ ಸಮತಾಭಾವ ದರ್ಶನ. ಈ ನುಡಿಯನ್ನು ಪ್ರತಿಯೊಬ್ಬ ಕನ್ನಡಿಗನೂ ತನ್ನ ಮನೆಯಲ್ಲಿ ಸುವರ್ಣಾಕ್ಷರಗಳಿಂದ ಬರೆಯಿಸಿ ಹಾಕಬೇಕು. ಇಂತಹ ಅನುಭವ ಸಾಹಿತ್ಯವನ್ನು ಪಡೆದ ಕನ್ನಡ ನಾಗರಿಕತೆಯೇ ಧನ್ಯ! ನಮ್ಮ ಇರುವಿಕೆಯೇ ನಮ್ಮ ನಾಗರಿಕತೆ. ನಾಗರಿಕತೆಯ ಒಳನಾಡಿಯೇ ಸಂಸ್ಕೃತಿ. ಸಂಸ್ಕೃತಿಯ ಉಸಿರೇ ಜನ ಜೀವನ. ನಾವು ತುಂಬಿದಂತೆ ನಮ್ಮ ಜೀವನ. ಜೀವನ ತುಂಬಿ ಬಂದಂತೆ ನಮ್ಮ ಸಾಹಿತ್ಯ. ಈ ಸಾಹಿತ್ಯವೇ ನಮ್ಮ ಸಂಸ್ಕೃತಿಯ ಹೊರಬೆಳಕು. ಸಹಜ ಸಾಜತ್ಯವು ಸತ್ಯ ಸುಂದರವು. ಇದು ಯುಗ-ಯುಗಕ್ಕೂ ಹೊಸತು. ಅಂತಃಸ್ಫೂರ್ತಿಯು ಅದರ ಉಸಿರಾಗಿ ಅನುಭವದ ನುಡಿಯಾಗಿ ನಿಲ್ಲುವುದು. ಅನುಭವ ಸಾಹಿತ್ಯವು ಅಮರವಾದುದು. ಅದು ಪ್ರತಿಯುಗದ ಜೀವನ ಮಾರ್ಗದ ಕರುಣಾಳು ಬೆಳಕು. ಅದರಿಂದ ಜೀವನವು ಸುಖಮಯವಾಗುವುದಲ್ಲದೆ ಉದ್ಧಾರವಾಗುವುದು. ಜಗತ್ತಿನಲ್ಲಿ ಯಾವ ಸಾಹಿತ್ಯವೇ ಆಗಲಿ ಅದಕ್ಕೆ ಧರ್ಮವೇ ಮೂಲ ಕಾರಣಭೂತವಾಗಿದೆ.

## ಧರ್ಮ

ವಿಶ್ವಸೃಷ್ಟಿಯಲ್ಲಿ ಮಾನವನೊಬ್ಬನೆ ವಿಚಾರ ವಿನಿಮಯ ಪ್ರಾಣಿ. ಅವನಿಗೆ ಮಾತ್ರ ಧರ್ಮವು (Religion) ಅಂಟಿಕೊಂಡಿದೆ. ಅವನು ಧರ್ಮದ ಮುಖಾಂತರ ಪ್ರಪಂಚದಲ್ಲಿ ಸೃಷ್ಟಿಯೊಡನೆ ತನ್ನ ವ್ಯವಹಾರವನ್ನು ಅವ್ಯಾಹತವಾಗಿ ಸಾಗಿಸುತ್ತ ಬಂದಿದ್ದಾನೆ. ಸದ್ಧರ್ಮಿಯಾಗಿ ಆತ್ಮಪರಮಾತ್ಮರ ಅನೇಕ ಜಟಿಲ ಪ್ರಶ್ನೆಗಳನ್ನು ಬಿಡಿಸಲು ಪ್ರಯತ್ನ ಮಾಡಿದ್ದಾನೆ. ಆತ್ಮ ಪರಮಾತ್ಮರನ್ನು ಲೌಕಿಕದಲ್ಲಿ ಅರಿತುಕೊಂಡು ಆ ಪರಮಾತ್ಮನಲ್ಲಿ ಬೆರೆಯಲು ಮಾಡಿದ ಮಾನವ ಪ್ರಯತ್ನವು ಧರ್ಮವೆಂದು ಸಾಮಾನ್ಯವಾಗಿ ಹೇಳಬಹುದು. ಈ ಲೋಕದಲ್ಲಿ ಪರಮಾತ್ಮನ ಮಹತಿಯನ್ನು ಅರಿತ, ಆತ್ಮನ ಚರಮ ಧ್ಯೇಯವು ಆ ಪರಮಾತ್ಮನಲ್ಲಿ ಬೆರೆಯುವುದು. ಇದೇ ಜೀವನ ಮುಕ್ತಿಯು ಅಥವಾ ಮೋಕ್ಷವು. ಪರಮಾತ್ಮನ ಅಗಾಧವಾದ ವಿಶ್ವರೂಪವನ್ನು ಸಮ್ಯಕ್ ಜ್ಞಾನೋದಯದಿಂದ ಅರಿತ ಅನುಭಾವಿಯು ಮಾತಿನ ಬಗೆಯೇ ಬೇರೆ. ಅವನು ಭಕ್ತಿಮಾರ್ಗವ ತಿಳಿದು ಶಿವಾಪೇಕ್ಷನಾಗಿ ಆ ಪರಶಿವನನ್ನು ಹೀಗೆ ಕಾಣುತ್ತಾನೆ. " ತನ್ನ ವಿನೋದಕ್ಕೆ ತಾನೇ ಸೃಜಿಸಿದ ಜಗತ್ತು. ತನ್ನ ವಿನೋದಕ್ಕೆ ತಾನೆ ಸುತ್ತಿದನದಕ್ಕೆ ಸಕಲ ಪ್ರಪಂಚ. ತನ್ನ ವಿನೋದಕ್ಕೆ ತಾನೆ ತಿರುಗಿಸಿದ ಅನಂತ ಭವದುಃಖಗಳಲ್ಲಿ. ಇಂತೆನ್ನ ಜೆನ್ನಮಲ್ಲಿಕಾರ್ಜುನನೆಂಬ ಪರಶಿವನು ತನ್ನ ಜಗದ್ವಿಲಾಸ ನಾಕಾದ ಮತ್ತೆ ತಾನೆ ಪಱಿದನದರ ಮಾಯಾ ಪಾಶವ. "

—ಮಹಾದೇನಿಯಕ್ಕ

ನಮಗೆ ಕಾಣುವ ಸಕಲವೂ ಆ ಪರಮಾತ್ಮನ ಸೈವಾಡು. " ಅಯ್ಯಾ ನೀ ಮಾಡಲಾದ ಜಗತ್ತು. ಅಯ್ಯಾ ನೀ ಮಾಡಲಾದ ಸಂಸಾರ. ಅಯ್ಯಾ ನೀ ಮಾಡಲಾದ ದುಃಖ. ಅಯ್ಯಾ ನೀ ಬಿಡಿಸಿದರೆ ಬಿಟ್ಟಿತ್ತು ತಾಮಸ. ಅಯ್ಯಾ ನಾನೀ ಪಾಯೆಯ ಗೆಪ್ಪೆನೆಂಬ ಹಮ್ಮಿನ್ನೇಕೆ ಕೂಡಲ ಸಂಗಮ ದೇವಾ ?"

—ಬಸವಣ್ಣ

ಹೀಗೆ, ಅವನ ಈ ಪರಮಾತ್ಮನ ವಿಚಾರ ನಡೆದು ಧರ್ಮ-ಮಾರ್ಗದಲ್ಲಿ ಆತ್ಮಪರಮಾತ್ಮರ ಸಂಬಂಧ ಅನೇಕ ಮತಗಳೂ ಸಿದ್ಧಾಂತಗಳೂ ಉದ್ಭವಿಸಿವೆ.

## ವೀರಶೈವವು

ಧರ್ಮವು ನೂತನವಾದಷ್ಟು ತತ್ವಪರಿಪೂರ್ಣವಾದುದು. ಇದನ್ನು ಗ್ರಹಿಸಿಕೊಂಡಾಗ ವೀರಶೈವದ

ಮಹತಿಯು ಒಡಮೂಡಿ ಬರುವುದು. ವೀರಶೈವವು ಮೂಲತಃ ಶೈವದ ಒಂದು ಶಾಖೆಯಾದರೂ ಅದು ಪರಿಪಕ್ವವಾಗಿ ಷಟ್‌ಸ್ಥಲ ಸಿದ್ಧಾಂತ ಪಡೆದದ್ದು ಬಸವಾದಿ ಪ್ರಮಥರಿಂದ. ಹೀಗಿದ್ದರೂ ಸಹ ಕೆಲವರು ಮೊದಲಿಗೆ ವೀರಶೈವ ಸಮಯಾಚಾರಿಗಳು ಸ್ಥಾಪಿಸಿ ಸಂಸ್ಕಾರ ಮಾಡಿದ ಮೇಲೆ ವಾದಸಮಾಯಿತಾಗಿ ಮಿಥ್ಯೆಯನ್ನು ಸನಾತನ ವೆಂದು ಸಮರ್ಥಿಸುವುದಕ್ಕಾಗಿ ವಿವಿಧಾಗಮಗಳಿಂದ ಆಧಾರಗಳನ್ನು ಕೊಟ್ಟಿರುವುದು 'ಆನೆಕೊಲಿಂಗಿ' ಎಂದು ಬಾಯಿಪಾಠ ಹೇಳುವುದು. ಇದನ್ನು ಗಮನಿಸಿದಾಗ ಶೈವದ ವಿಷಾದ್ವೈತಕ್ಕಿಂತಲೂ ವಿಶಿಷ್ಟಾದ್ವೈತಕ್ಕಿಂತಲೂ ಶಿವಭಕ್ತರಾಗಲಾರರು. ವಿಶಿಷ್ಟಾದ್ವೈತವು ವಿಷ್ಣುಭಕ್ತರಿಗೆ ಶಿವಭಕ್ತರಾಗಲಾರರು. ವಿಷ್ಣುಭಕ್ತರು ವಿಷ್ಣುವಾಚಾರಿಯಾದರೂ ಶಿವಶರಣರಾಗಲಾರರು. ಶಿವಶರಣರು ಮಾತ್ರ ಇನ್ನೆಲ್ಲವುಗಳನ್ನೊಳಗೊಂಡ ಉದ್ಭವಲಿಂಗದ ಚೌಕಟ್ಟಿನ ಪಂಚಾಚಾರ ಜಿನ್ಮಯ ಅನುಭಾವಿ! ಈ ಒಂದೊಂದು ಘಟ್ಟವು ಶೈವವನ್ನು ವೀರಶೈವವಾದ ಸ್ಥಿತಿಗತಿಯನ್ನು ಎತ್ತಿತೋರಿಸುವುದು. ವೀರಶೈವರಲ್ಲಿ ಬರುವ ಅರವತ್ತು-ಮೂರು ಪುರಾತರು ಕೇವಲ ಶೈವ ಶಿವಭಕ್ತರಲ್ಲದೆ ವೀರಶೈವ ಶಿವಶರಣರಾಗಲಾರರು. ಶಿವಶರಣರದು ಶರಣ ಮಾರ್ಗ. ಸಮಾಜ ಸುಧಾರಣೆಯ ಅತ್ಯುಚ್ಚಪದವಿಯನ್ನು ಮುಟ್ಟಿದ ಈ ಮಾರ್ಗವು ವೀರಶೈವರಿಗೆ ಅನುಭವ ಮಾರ್ಗವಾದುದರಿಂದ ಇವರಿಗೆ ಗ್ರಂಥಗಳ ಆಧಾರವೇ ಬೇಕಿಲ್ಲ. ಅಂತೆಯೆ ಶಿವಶರಣರು ವೇದಾಗಮಾದಿಗಳನ್ನು ನುಡಿಯಲ್ಲಿಯೂ ನಡೆಯಲ್ಲಿಯೂ ಅಲ್ಲಗಳೆದಿದ್ದಾರೆ. (ಗಬಸವಣ್ಣನವರ ಷಟ್‌ಸ್ಥಲದ ವಚನಗಳು. S. S. Basavanal ವಚನ-೨೦೮, ೨೦೯, ೨೬೦, ೭೧೬, ೭೪೪ ಇತ್ಯಾದಿ.) ಲಿಂಗಲೀಲಾ ವಿಲಾಸ ಚಾರಿತ್ರವನ್ನು ವಿರಚಿಸಿದ ಶ್ರೀ ಕಲ್ಲಮಠದ ಪ್ರಭುದೇವರು, "ಮಿಕ್ಕಿನ ವೇದಾಗಮಂಗಳು ಜಡ್ಡು ಗೊಜಜೆಂದು" ಹೇಳಿ ಪುರಾತನರ ವಚನಗಳ ಮುಖಾಂತರ ಷಟ್‌ಸ್ಥಲ ಮಾರ್ಗವನ್ನು ಬೋಧಿಸಿದ್ದಾರೆ.

ಷಟ್‌ಸ್ಥಲವು, ಭಕ್ತ-ಮಹೇಶ-ಪ್ರಸಾದಿ-ಪ್ರಾಣಲಿಂಗಿ-ಶರಣ-ಐಕ್ಯ ಎಂದು ಆರು ಹಂತಗಳಲ್ಲಿ ಹರವಿದೆ. ಭಕ್ತಿಯು ಇದರ ತಳಹದಿಯಾಗಿ, ಶೈವಶಿವಭಕ್ತರಂತೆ ಕೇವಲ ವ್ಯಕ್ತಿಗತವಾಗಿ ಆತ್ಮೋದ್ಧಾರವನ್ನೇ ಸಾಧಿಸದೆ ಇಡಿಯ ಮಾನವ ಸಮಾಜ ಕಲ್ಯಾಣವ ಸಾಮಾನ್ಯವಾಗಿ ಸಾಧಿಸಿ ಲೋಕೋದ್ಧಾರವನ್ನೇ ಮಾಡಿದೆ. ಅದು ಸಾಮಾನ್ಯ ವೈದಿಕ—ಶೈವ—ಮಂತ್ರೋಕ್ತಭಕ್ತಿಯಿರದೆ ಕಾಯಕ-ದಾಸೋಹ-ಅನುಭವ-ಅರ್ಪಣೆಯ ಜೀವನ್ಮುಕ್ತ ಭಕ್ತಿಯಾಗಿದೆ. ಅದೆ ಷಟ್‌ಸ್ಥಲದ ಐಕ್ಯಸ್ಥಲವು. ವೀರಶೈವರಿಗೆ ಲಿಂಗಾಂಗ ಸಮರಸವು, ಜೀವಪರಮಾತ್ಮ ಐಕ್ಯವು. ಈ ಷಟ್‌ಸ್ಥಲವು ತಾತ್ವಿಕವಲ್ಲದೆ ಭೌತಿಕವೂ ನಿಸ್ಸಲವಾದಂತೆ ಸಕಲವೂ ಅದ್ವೈತವಾದಂತೆ ದ್ವೈತವೂ ಆಗಿರುವುದರಿಂದ ಅನುಭಾವಕ್ಕೆ ಕ್ರಿಯಾಜ್ಞಾನಗಳ ಕೇಂದ್ರವಾಗಿದೆ. ಅಂತೆಯೆ ಅದನ್ನು ಶ್ರೀ ಶಿವಯೋಗಿ ಶಿವಾಚಾರ್ಯರು ಸಕಲ ಸಿದ್ಧಾಂತಶಿಖಾಮಣಿಯೆಂದು ಸಂಬೋಧಿಸಿದ್ದಾರೆ.

ವೀರಶೈವವು ಹೃದಯಾನುಭವ ಧರ್ಮ. (Veerashaivism is the Religion of Heart) ಆದುದರಿಂದ ಅದರಲ್ಲಿ ನುಡಿಯು ನಡೆಯಾಗಿ ಬಂದಿದೆ. ಅದರೊಳಗೆ ತ್ರಿಕರಣ-ಮನ-ವಚನ-ಕಾಯ-ಪೂರಕ ಸ್ವಾತಂತ್ರ್ಯವು ರೀತಿ-ನೀತಿ-ವಿಚಾರ-ಆಚಾರಗಳ ವ್ಯವಹಾರದಲ್ಲಿ ಕಾಯಕ-ದಾಸೋಹ-ಅನುಭವ ಅರ್ಪಣೆಗಳ ಚೌಕಟ್ಟಿನಲ್ಲಿಳಿದುದರಿಂದ ಅದು ಸ್ವಯಂಪೂರ್ಣ ಧರ್ಮವಾಗಿದೆ. ಇದನ್ನು ಜನತೆಗೆ ನಡೆದು ತೋರಿಸಿದವರು ಕರ್ನಾಟಕದಲ್ಲಿ ಶಿವಶರಣರು.

## ಶಿವಶರಣರು

ಕರ್ನಾಟಕದಲ್ಲಿ ಸಹೋದರ ಮತಗಳು ಈ ಶಿವಶರಣರನ್ನು ಕಡೆಗಾಣುತ್ತ ಬಂದಿವೆ. ಶಿವಶರಣರು ಕೇವಲ ಧರ್ಮೋಪದೇಶಕರಲ್ಲ. ಸಾರಮಾರ್ಥವನ್ನು ಲೌಕಿಕದೊಡನೆ ಕಂಡುಂಡ ಮತಿವಂತರು. ಅವರಿಗೆ ಪ್ರಪಂಚವಿದೆ; ಸಮಾಜವಿದೆ; ಈ ಪ್ರಪಂಚ ಸಮಾಜದಲ್ಲಿ ಶಿವನಿದ್ದಾನೆ; ಇದನ್ನೇ ಜನತೆಗೆ ಅರಿಕೆ ಮಾಡಿಕೊಡುವುದೇ ಅವರು ಆಚರಿಸಿದ 'ವಿಶ್ವಧರ್ಮ' ವೀರಶೈವ ಧರ್ಮ.

" ದೇಹಿಯಲ್ಲ ನಿರ್ದೇಹಿಯಲ್ಲ.
ಬೋಧಕನಲ್ಲ ನಿರ್ಬೋಧಕನಲ್ಲ
ಕಾಮಿಯಲ್ಲ ನಿಃಕಾಮಿಯಲ್ಲ.
ಆಳಿವಿಡಿದು ಬಂದ ಅನುಮಿಷನಲ್ಲ.
ಅವಗುಣವಿಲ್ಲದ ನಿರ್ಗುಣಿ ನೋಡಯ್ಯ!
ಕೂಡಲ ಜೆನ್ನಸಂಗ ನಿಮ್ಮ ಶರಣ ನೋಡಯ್ಯ"

—ಜೆನ್ನಬಸವಣ್ಣ

'ಶಿವಶರಣ' ಶಬ್ದಪ್ರಯೋಗವು ಕನ್ನಡ ಸಾಹಿತ್ಯದಲ್ಲಿ ಕ್ರಿ. ಶ. ೧೨ನೆಯ ಶತಮಾನಕ್ಕಿಂತಲೂ ಹಿಂದೆ ಎಲ್ಲಿಯೂ ಬಂದಿಲ್ಲ. 'ಶಿವಶರಣ' ಶಬ್ದವು ಒಂದು ಸಮಾಸ-ಪದ. 'ಶಿವ + ಶರಣ' ಎಂಬ ಎರಡು ಪದಗಳ ಸಮಾಸವಾಗಿದೆ. ಆಪನ್ನು ವಿಗ್ರಹ ಬಿಡಿಸಲು 'ಶಿವನ + ಶರಣು', ಅಂದರೆ ಪರಮಾತ್ಮನ ರಕ್ಷಣೆ, ಎಂದು ಅರ್ಥವಾಗುವುದು. ಈ ಸಂಭವಾರ್ಥಕ್ಕೆ ಯಾರಿಗೆ? ಎಂದು ಪ್ರಶ್ನೆಮಾಡಲು 'ಆಗಿನ ಕಾಲದಲ್ಲಿ ಅಧಃಪತನವಾಗಿ ಅಂಧಃಕಾರದಲ್ಲಿ ತೊಳಲುವ ಜನಾಂಗಕ್ಕೆ ಎಂಬ ಸೂಚಿತಾರ್ಥ ಹೊರಡುವುದು. ಇಂತಹ ಜನತೆಗೆ ಪರಮಾತ್ಮನ ಅಭಯ ರಕ್ಷಣೆಯನ್ನು ಕೊಡುವಂಥವರು ಶಿವಶರಣರಾಗಿದ್ದಾರೆ. ಈ ಶಬ್ದವನ್ನು ಬಸವಾದಿ ಪ್ರಮಥರೇ ನಿರ್ಮಾಣಮಾಡಿ ಅನುಭವ ಮಂಟಪದಲ್ಲಿ ಸಮಾಜ ಸೇವೆಯನ್ನು ಸಲ್ಲಿಸುತ್ತಿರುವ ಶಿವಭಕ್ತರಿಗೆ ಶಿವಶರಣರೆಂದು ಹೆಸರಿಟ್ಟು ಕರೆದರು. ಅಂದಿನಿಂದ ಖ್ಯಾತಿವೆತ್ತ ಈ ಶಿವಶರಣರು ಸಮಾಜ ಸೇವಕರಾಗಿ ಬಸವಾದಿ ಪ್ರಮಥರ ಅನುಭವ ಮಂಟಪದ ಯೋಜನೆಯಂತೆ 'ಶರಣಸಮಾಜ'ವನ್ನು ಕಟ್ಟಿದರು; 'ಕಲ್ಯಾಣ ರಾಜ್ಯ'ವನ್ನು ಹರವಿದರು. ಅವರ ಸೇವೆಯ ಮಹತಿಯನ್ನು ಅರಿತ ಕನ್ನಡಿಗರು ಅವರ ನುಡಿನಡೆಗೆ ಮನ್ನಣೆಯಿತ್ತು ಅವರ ಮಾರ್ಗವನ್ನೇ ನಿತ್ಯ ಜೀವನದಲ್ಲಿ ಆಚರಿಸುತ್ತ ಬರಲು ಕಾಯಕವು ನಾಡಿನ ಉಸಿರಾಗಿ ನಾಡು ಸಂಪತ್-ಸಮೃದ್ಧವಾಯಿತು. ಭಿಕ್ಷಾಟನವು ಮಾಯವಾಗಿ ಕಾಯಕವು ಕೈಲಾಸ (Work is Divine) ವೆಂಬ ನಾಣ್ಣುಡಿಯಾಯಿತು. ನಾಡ ತುಂಬೆಲ್ಲ ಜೀವನವು ಸುಖಮಯವಾಗಲು ಕನ್ನಡ ಸಂಸ್ಕೃತಿಯಲ್ಲಿ ಶಿವಶರಣರಿಗೆ ವಿಶಿಷ್ಟ ಸ್ಥಾನಮಾನಗಳು ದೊರೆತು, ಜನಪದ ಸಂಪ್ರದಾಯಗಳಲ್ಲಿಯೂ, ನಡೆನುಡಿಗಳಲ್ಲಿಯೂ ಶಿವಶರಣರು ಹಾಸುಹೊಕ್ಕಾಗಿ ಕನ್ನಡ ಜನಪದಕ್ಕೆ 'ಮರಣ ಗೆಲಿದ ಮಹಾಂತ' ರಾಗಿದ್ದಾರೆ.

ಜ್ಞಾನ – ಇಚ್ಛಾ – ಕ್ರಿಯಾಶಕ್ತಿಯ ಸಂಗಮವು ಅನುಭಾವವು. ಅನುಭಾವಿಯ 'ಅಂತರಂಗದಲ್ಲಿ ಅರಿವು, ಬಹಿರಂಗದಲ್ಲಿ ಕ್ರೀ'. 'ಅನುಭಾವವಿಲ್ಲದೆ ಅರಿಯಬಾರದು'. ಇದೇ ಶಿವಶರಣನ ಮೂಲ ಲಕ್ಷಣ. ಆವನಿಂದ ಎಲ್ಲರಿಗೂ ಈ ಭೂಲೋಕವೇ ಕೈಲಾಸವಾಯಿತು. "ಶಿವಭಕ್ತರಿದ್ದ ತಾವೇ ದೇವಲೋಕ. ಭಕ್ತನ ಅಂಗಳವೇ ವಾರಣಾಸಿ. ಕಾಯಕವೇ ಕೈಲಾಸ." ಅಲ್ಲದೆ 'ಶರಣರು ಮರಳಿ ಮಾನವರಾಗರು ಕ್ರೀಯವಳಿದು.' 'ಅರಿದೊಡೆ ಶರಣ ಮರೆದೊಡೆ ಮಾನವ' ಅಷ್ಟು ಅವನ ಜೀವನ ಸತ್ಯಸಂಪುಟ, ನಿತ್ಯನಿರ್ಮಲ! ಇಂತಹ ದಿವ್ಯಪುರುಷರ ಮುಖದಿಂದ ಹೊರಹೊಮ್ಮಿದುದೆಲ್ಲವೂ ಅನುಭವಸಾಹಿತ್ಯ.

## ಕನ್ನಡ ಸಾಹಿತ್ಯದಲ್ಲಿ

ಕನ್ನಡ ಸಾಹಿತ್ಯದಲ್ಲಿ ಅನುಭವ ಸಾಹಿತ್ಯವು ಜನ್ಮ ತೆತ್ತಿದುದು ಕ್ರಿ.ಶ. ೧೨ನೆಯ ಶತಮಾನದಲ್ಲಿ. ಶಿವಶರಣರ ಅನುಭವ ನುಡಿಗಳೇ ವಚನಾಮೃತವಾಗಿ ಹೊರಹೊಮ್ಮಿದ ಈ ಸಾಹಿತ್ಯವು ಅಖಂಡ ಕಾವ್ಯಕ್ಕಿಳಿದು ಓದುಗಬ್ಬಗಳಾಗಿ ಹಾಡುಗಬ್ಬ-ಬಾಜನೆಗಬ್ಬಗಳ ರೂಪತಾಳಿ ಹಾಡು (ಭಾವ ಗೀತೆ)ಗಳ ರಾಶಿರಾಶಿಯಾಗಿ ಜನಪದ ಸಾಹಿತ್ಯಕ್ಕಿಳಿದು ಹಳ್ಳಿಗರಿಗೂ ಮನೆಮಾತಾಗಿದೆ. ಉತ್ತರ ಕರ್ನಾಟಕವು ಶಿವಶರಣರಿಗೆ ಸಮಾಜಯೋಜನೆಯ ಕ್ರಾಂತಿಭೂಮಿ. ಈ ಕ್ರಾಂತಿಭೂಮಿಯಿಂದ ಉದ್ಭವಿಸಿದ ವಚನಾಮೃತ ಸೊನೆಯು ಕರ್ನಾಟಕದ ತುಂಬೆಲ್ಲ ಸುರಿದು ಅನುಭವ ಸಾಹಿತ್ಯ ವಾಹಿನಿಯಾಗಿ ರೋಮಂಕರಿಸಿ ಹರಿದು ದಕ್ಷಿಣ ಕರ್ನಾಟಕದ ಗುಬ್ಬಿಯ ಕ್ಷೇತ್ರದಲ್ಲಿ ರೂಪಗೊಂಡ, ಸಂಪಾದನೆಗಳಲ್ಲಿ ಹೆಪ್ಪುಗಟ್ಟಿದೆ.

ಹದಿನೈದನೆಯ ಶತಮಾನವು ವೀರಶೈವರ ಅನುಭವ ಗೀತೆಯ ಕಾಲ. ವಚನ ಸಾಹಿತ್ಯವು ಉತ್ತರದಿಂದ ಹರಿದು ಬಂದರೆ ವೀರಶೈವರ ಅನುಭವ ಗೀತೆಯು ದಕ್ಷಿಣದ ಶಂಭುಲಿಂಗ ಬೆಟ್ಟದಲ್ಲಿ ನಿಜಗುಣ ಶಿವಯೋಗಿ ಹಾಗು ಮುಪ್ಪಿನ ಷಡಕ್ಷರಾರ್ಯರ ಶಿವಯೋಗಾನಂದ ಅನುಭವ ಸಾಗರದಿಂದ ಉದಯಿಸಿ ಶೈವಲ್ಯ ಪದ್ಧತಿಯೆಂದು ಖ್ಯಾತಿವೆತ್ತ ಈ ಹೊನಲು, ಸರ್ವಭೂಷಣ ಶಿವಯೋಗಿಗಳ ಶೈವಲ್ಯ ಕಲ್ಪವಲ್ಲರಿಯಾಗಿ ತುಂಗಭದ್ರೆಯ ದಾಟಿ ಬೆಳುವಲದ ಬಯಲಿನಲ್ಲಿ ಆಧ್ಯಾತ್ಮ ಸುಂದರ ವನವನ್ನೇ ನಿರ್ಮಾಣ ಮಾಡಿದೆ. ಈ ಆಧ್ಯಾತ್ಮ ಸುಂದರ ವನದಲ್ಲಿ ಪುರಂದರ-ಕನಕದಾಸಾದಿಗಳ 'ಹರಿಭಕ್ತಸುಧೆ' ಯಿದೆ.೧ (೧ ಅದರ ಮಾರ್ಗವೇ ಬೇರೆ.) ವೈಲಾರ

---

೧ ದಾಸರ ಅನುಭವವು ದಾಸಸಾಹಿತ್ಯವಾಗಿದೆ. ಅದು ದಾಸಕೂಟದ ಸೊತ್ತು. ದಾಸಕೂಟವು ಅನುಭವಮಂಟಪದ ಅನುಕರಣವಾದರೂ ಕಾಯಕಬಾಹಿರವಾಗಿ ಪ್ರಚಾರವೇ ಅದರ ವೈಶಿಷ್ಟ್ಯವಾಗಲು ಅದರ ಮಾರ್ಗವೇ ಬೇರೆಯಾಗಿದೆ. ಕರ್ನಾಟಕದಲ್ಲಿ ದಾಸ ಮುಟ್ಟದ ಹಳ್ಳಿಯಿಲ್ಲ. ಉತ್ತರ ಕರ್ನಾಟಕದಲ್ಲಿ ಪುರಂದರ ವಿಠಲನ ಕೂಗು ಕೇಳಿದರೆ ದಕ್ಷಿಣದಲ್ಲಿ ಅದಿ ಕೇಶವರಾಯನ ಕೂಗು ಕೇಳಬರುವುದು.

ಬಸವಲಿಂಗ ಶರಣರ 'ಶಿವಾನುಭವ ದರ್ಪಣ'ವಿದೆ; ಬಾಲ ಲೀಲಾ ಮಹಾಂತ ಶಿವಯೋಗಿಗಳ 'ಕೈವಲ್ಯ ದರ್ಪಣ' ವಿದೆ. ಘನಮಠದಾರ್ಯ, ಅಥಣಿ ಶಿವಯೋಗಿ, ಗರಗದ ಮಡಿವಾಳಪ್ಪ, ನವಲಗುಂದ ನಾಗಲಿಂಗಪ್ಪ, ಕೋಡಿ ಕೊಪ್ಪದ ಹುಚ್ಚಯ್ಯಜ್ಜ, ಶಿಸುನಾಳ ಶರೀಫ, ಹುಬ್ಬಳ್ಳಿ ಸಿದ್ಧಾರೂಢ, ಇಂಚಲ ಸಕ್ಕರಿ ನಾಯಕ ಮೊದಲಾದ ಆಧ್ಯಾತ್ಮಾನುಭಾವಿಗಳ ಭಕ್ತಿ-ವೈರಾಗ್ಯ ಹಾಗು ಲೌಕಿಕ ಪಾರಮಾರ್ಥಿಕ ಅನುಭವ ಪದಗಳು ರಾಶಿರಾಶಿಯಾಗಿದೆ. ಈ ಎಲ್ಲ ಗೀತೆಗಳು ಸಾಮಾನ್ಯರಿಗಾಗಿ ಇರುವುದರಿಂದ ಅವು ಈ ಭಾಗಗಳಲ್ಲಿ ಲೋಕಪ್ರಿಯವಾಗಿವೆ.

### ವಚನಗಳು

ಕನ್ನಡಿಗರ ತತ್ವಜ್ಞಾನ (Philosophy) ಕ್ಕೆ ವಚನ ಸಾಹಿತ್ಯವು ಹೆಮ್ಮೆಯ ಸೊತ್ತು. ಅದರಲ್ಲಿ ತತ್ವ ಜ್ಞಾನದ ಅನೇಕ ಅಮೌಲ್ಯ ವಿಚಾರಗಳು ಗಡುಚಾಗಿ ಬಂದಿವೆ. ಈ ತತ್ವಜ್ಞಾನವನ್ನು ಶಿವಶರಣರು 'ಶಿವಾನು ಭವ'ವೆಂದು ಬೋಧಿಸಿದ್ದಾರೆ. ಈ ವಚನ ಸಾಹಿತ್ಯವು ವೀರಶೈವರಿಗೆ ಮಹಾ ಧರ್ಮ ಗ್ರಂಥ. ಅದಕ್ಕೆ 'ವಚನ ಶಾಸ್ತ್ರ'ವೆಂದೂ ವಚನಕಾರರಿಗೆ 'ವಚನ ಶಾಸ್ತ್ರಕಾರ' ರೆಂದೂ ವೀರಶೈವ ಗ್ರಂಥಗಳಲ್ಲಿ ಸಂಭೋಧಿಸಿದ್ದಾರೆ. ಅವುಗಳಲ್ಲಿ ಬರುವ ವಿಷಯ, ಅಷ್ಟಾವರ್ಣ ಪಂಚಾಚಾರಾದಿ ಷಟ್‌ಸ್ಥಲಸಿದ್ಧಾಂತ. ಇದುವರೆಗೆ ಸುಮಾರು ೨೬೦ಕ್ಕೆ ಮೇಲ್ಪಟ್ಟು ವಚನಕಾರರು ಬೆಳಕಿಗೆ ಬಂದದ್ದು ಅವರಲ್ಲಿ ೩೯ ಜನ ವಚನ ಕಾರ್ತಿಯರಿದ್ದಾರೆ ಬೆಳಕಿಗೆ ಬಾರದ ಅನೇಕ ವಚನಕಾರರ ದೊಡ್ಡಯಾದಿಯೂ ಇದೆ. ನವಕೋಟಿ ವಚನಕಾರರೆಂದೂ ತೊಂಬತ್ತಾರು ಸಾವಿರಕೋಟಿ ವಚನಂಗಳಿದ್ದವೆಂಬ ವೀರಶೈವ ಪರಂಪರೆಯೂ ಕೇಳಬರುತಿದೆ. ಅವುಗಳಲ್ಲಿ, ವೇದಕ್ಕೆಲ್ಲದ ಸ್ವತಂತ್ರ ವಿಚಾರ ದೃಷ್ಟಿಯ ಪಡೆದ ಉಪನಿಷತ್ತುಗಳ, ಸ್ವತಂತ್ರ ವಿಚಾರ ಮೀರಿ ಮಾನವ ಐಕ್ಯತೆ, ಉದಾತ್ತ ಜೀವನ, ವಿಶ್ವಬಂಧುತ್ವ, ಮಾನವ ಕಲ್ಯಾಣ ಮೊದಲಾದ ಪ್ರಜಾಪ್ರಭುತ್ವದ ಆಧ್ಯಾತ್ಮದ ಉನ್ನತ ವಿಶಾಲ ವಿಚಾರಗಳಿವೆ. 'ದಯವೇ ಧರ್ಮದ ಮೂಲವಯ್ಯ' 'ವಿಪ್ರನೊದಲು ಅಂತ್ಯಜ ಕಡೆಯಾಗಿ', 'ಅಯ್ಯಾ, ಯೆಂದಡೆ ಸ್ವರ್ಗ ಎಲವೊ ಯೆಂದಡೆ ನರಕ', 'ಸಕಲ ಜೀವಾತ್ಮರಿಗೆ ಲೇಸನೇ ಬಯಸುವ', 'ಆಚಾರವೇ ಸ್ವರ್ಗ ಅನಾಚಾರವೇ ನರಕ' ಮೊದಲಾದ ಉನ್ನತ ಭಾವಗಳು ಸೂಸಿಬರುವುವು.

ವಚನಗಳಲ್ಲಿಯ ಶೈಲಿಯನ್ನು ನಾವು—

೧) ಸಾಮಾನ್ಯ (ಲೌಕಿಕ) ಶೈಲಿ.

೨) ಆಧ್ಯಾತ್ಮಿಕ ಶೈಲಿ ಹಾಗು

೩) ಬೆಡಿಗಿನ ಶೈಲಿ, ಎಂದು ಮೂರು ತೆರನಾಗಿ ಕಾಣಬಹುದು. ಈ ಯಾವ ಶೈಲಿಯಲ್ಲಿಯೇ ಆಗಲಿ, ಲೋಕಾನುಭವವು ತೇಲಿಬರುವುದು. ಸಾಮಾನ್ಯ ಮಾನವನೂ ಅದನ್ನು ಅರಿಯಲು ಸಮರ್ಥನಾಗಿ ಅವನ ನೈತಿಕ ಜೀವನವೇ ಬದಲಾಗುವುದು. 'ಅಹಂಭಾವ'ವು ಕರಗಿ 'ದಾಸೋಹಂಭಾವ'ವು ಅಂಕುರಿಸಿ ಮಾನವ ಕಲ್ಯಾಣ ವಾಗುವುದು.

"ಏನಿ ಬಂದಿರಿ, ಹದುಳವಿದ್ದಿರೆ? ಎಂದರೆ
ನಿಮ್ಮ ನೈಸಿರಿ ಹಾಱುಹೋಹುದೆ?
'ಕುಳ್ಳಿರೆ'ಂದರೆ ನೆಲ ಕುಳಿಹೋಹುದೆ?
ಒಡನೆ ನುಡಿದರೆ ಶಿರ-ಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದ ದೊಂದು ಗುಣವಿಲ್ಲದಿರ್ದಡೆ,
ಕಡಹಿ ಮೂಗ ಕೊಯ್ಯದೆ ಮೂಣ್ಚನೆ ಕೂಡಲ-
ಸಂಗಮದೇವ?

—ಬಸವಣ್ಣ

ಆತ್ಮ ಪರಮಾತ್ಮರ ಸಮರಸವು ಆಧ್ಯಾತ್ಮದ ಗುರಿ. ಮಾಯೆಯ ಅರಿತು, ಕಾಮನಗೆದ್ದು, ಮನದ ಮುಂದಣ ಆಶೆ ಬಿಟ್ಟಾಗ ಆತ್ಮ ಚಿತ್ಪ್ರಕಾಶವಾಗುವುದು.

"ಭೂಮಿಸಿನ್ನದಲ್ಲ, ಹೇಮ ಸಿನ್ನದಲ್ಲ, ಕಾಮಿನಿ ಸಿನ್ನವಳಲ್ಲ, ಅದು ಜಗಕ್ಕೆಕ್ಕಿದ ವಿಧಿ. ನಿನ್ನೊಡವೆಯೆಂಬುದು ಜ್ಞಾನರತ್ನ. ಅಂತಪ್ಪ ದಿವ್ಯ ರತ್ನವ ಕೆಡಗುಡದೆ ಆ ರತ್ನವ ನೀನಲಂಕರಿಸಿದೆಯಾದಡೆ ನಮ್ಮ ಗುಹೇಶ್ವರ ಲಿಂಗದಲ್ಲಿ ನಿನ್ನಿಂದ ಬಿಟ್ಟು ಸಿರಿವಂತರಿಲ್ಲ ಕಾಣಾ ಎಲೆ ಮನವೆ!"

—ಪ್ರಭುದೇವ

ಶಿವ, ತನ್ನ ಕಾಣದಂತೆ ಹೊನ್ನು–ಹೆಣ್ಣು–ಮಣ್ಣೆಂಬ ಮಾಯಾ ವಿಧಿಯ ಹುಟ್ಟಿಸಿ ಪ್ರಪಂಚದಲ್ಲಿ ಜೀವರ ಗಾಸೆಮಾಡುವನು. ಇವು ತನ್ನವೆಂಬ ಭ್ರಾಂತಿ ಬಿಟ್ಟು ಸಮ್ಯಜ್ಞಾನವ ಸಾಧಿಸಿ ಪರಮನಲ್ಲಿ ಸಮರಸ ಹೊಂದಲಿ ಎಂದು ದಿವ್ಯೋಪದೇಶವಿದೆ ಇಲ್ಲಿ. ವಚನ ಶಾಸ್ತ್ರದಲ್ಲಿ. ಮಾತೇ ಜ್ಯೋತಿರ್ಲಿಂಗ.

"ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು,

ನುಡಿದರೆ ಲಿಂಗಮೆಚ್ಚಿ ಅಹುದಹುದು ಎನಬೇಕು."

ಎಂಬೀ ನುಡಿಗಳು ತೇದುಂಡ ಜೀವಿಯ ಪ್ರಪಂಚದ ಅನುಭವಾಮೃತ ಸಾರ.

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ;
ಮುನಿಯಬೇಡ, ಅನ್ಯರಿಗೆ ಅಸಯ್ಯ ಪಡಬೇಡ;
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ.
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ."

—ಬಸವಣ್ಣ

ಇದು ಸಮಾಜ-ಶಾಸ್ತ್ರದಲ್ಲಿ ನೀತಿಯ ನೆಲಗಟ್ಟು. ಎಲ್ಲರೂ ಪ್ರಪಂಚದಲ್ಲಿದ್ದು ಪಾರಮಾರ್ಥವನ್ನು ಹೊಂದ ಬೇಕಾದ ಅನುಭವ ಸಿದ್ಧ-ಮಾರ್ಗ! ಹೀಗೆ ಒಂದಿಲ್ಲೊಂದು ಪರಿಯಲ್ಲಿ ಹೇಗೆ ಅವಗೃಹಿಸಿದರೂ ಅನುಭವವು ವಚನ ಸಾಹಿತ್ಯದ ಜೀವಾಳವಾಗಿದೆ.

## ಬೆಡಗು

ಬೆಡಗು ವಚನಸಾಹಿತ್ಯದ ವೈಶಿಷ್ಟ್ಯ. ಅದಕ್ಕೆ ವಚನಸಾಹಿತ್ಯದಲ್ಲಿ ಒಂದು ಮಹತ್ವದ ಸ್ಥಾನವಿದೆ. ಶಿವಶರಣರು ಶಿವಯೋಗಾನಂದದಲ್ಲಿ ತುರಿಯಾವಸ್ಥೆಯೊಳಗಿನ ಅನುಭವವನ್ನು ಬೆಡಗಿನಲ್ಲಿ ಹಾಡಿದ್ದಾರೆ. ಬಹುತರವಾಗಿ ಎಲ್ಲ ವಚನಕಾರರೂ ಬೆಡಗಿನ ವಚನಗಳನ್ನು ರಚಿಸಿದ್ದಾರೆ. ಅವರೊಳಗೆ ಪ್ರಭುದೇವ, ಬಸವಣ್ಣ, ಚೆನ್ನಬಸವಣ್ಣ, ಅಕ್ಕಮಹಾದೇವಿ, ಮೋಳಿಗೆಯ್ಯ, ಆದಯ್ಯ, ಕಾಡಸಿದ್ಧೇಶ್ವರ, ಅರಪಿನ ಮಾರಿತಂದೆ, ತೋಂಟದ ಸಿದ್ಧಲಿಂಗಾದಿಗಳೇ ಬಹು ಪ್ರಖ್ಯಾತರು. 'ಜ್ಯೋತಿರ್ಮಯ ಶಾಂಭವೀ ಜ್ಞಾನ ದೀಕ್ಷಾ ಜೋಧೆ' ಎಂಬ ಗ್ರಂಥದಲ್ಲಿ "ಅಲ್ಲಮ ಪ್ರಭುದೇವರು ಕಲ್ಯಾಣ ಪಟ್ಟಣದಲ್ಲಿ ಬಸವಾದಿ ಪ್ರಮಥಗಣಂಗಳಿಗೆ ಎರಡೆಂಬತ್ತು ಕೋಟಿ ಬೆಡಗಿನ ವಚನಗಳಿಂದ ಉಪದೇಶ ಮಾಡಿದರು." ಎಂದು ಹೇಳಿದೆ. ಬೆಡಗು, ವಚನ ಸಾಹಿತ್ಯದಲ್ಲಿ ಹೆಚ್ಚಾಗಿ ಹರಿದು ಬಂದಿದೆ ಅದು ಸಾಮಾನ್ಯರ ತಲೆ ಹಿಡಿಯದು. ಅದುವರಿಂದ ಸಾಮಾನ್ಯರಿಗೆ ತಿಳಿಯಲು ಬೆಡಗಿನ ವಚನಗಳ ವ್ಯಾಖ್ಯಾನ-ಟೀಕೆ-ಟಿಪ್ಪಣಿಗಳೂ ಉಪಲಬ್ಧವಿವೆ. ಪುಲಿಗೆರೆಯ ಮಹಲಿಂಗ ದೇವ, ಅವನ ಶಿಷ್ಯ ಕುಮಾರ ಬಂಕನಾಥ, ವಿಜಯನಗರದ ಕಲ್ಲಮಠದ ಪ್ರಭುದೇವಾದಿಗಳು ಪ್ರೌಢರಾಯನ ಕಾಲ(ಕ್ರಿ.ಶ. ೧೪೧೯-೧೪೪೬)ದಲ್ಲಿಯೇ ಈ ಬೆಡಗಿನ ವಚನಗಳ ವ್ಯಾಖ್ಯಾನ-ಟೀಕೆ-ಟಿಪ್ಪಣಿಗಳನ್ನು ತಮ್ಮ ಗ್ರಂಥಗಳಲ್ಲಿ ಸೇರಿಸಿ ಬರೆದಿದ್ದಾರೆ. ಕೇವಲ ಬೆಡಗಿನ ವಚನಗಳನ್ನೇ ಸಂಗ್ರಹಿಸಿ ಪಾಂಡಿತ್ಯಪೂರ್ಣವಾದ ವ್ಯಾಖ್ಯಾನವನ್ನು ಮೊಟ್ಟ ಮೊದಲು ಬರೆದವರು ಸಿಂಗಳದ ಸಿದ್ಧಬಸವರಾಜ ದೇವರು. (ಕ್ರಿ. ಶ. ೧೫೫೦)

ಬೆಡಗು, ಈ ಶಬ್ದದ ಸಾಮಾನ್ಯ ಅರ್ಥವು, ಅಧ್ಯಾತ್ಮದಲ್ಲಿ ಅದು ಸುಂದರಾನುಭವ ರಹಸ್ಯ!

"ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು,
ಬಯಲು ಬಯಲಾಗಿ ಬಯಲಾಯಿತ್ತಯ್ಯ!
ಬಯಲ ಜೀವನ, ಬಯಲ ಭಾವನೆ,
ಬಯಲು ಬಯಲಾಗಿ ಬಯಲಾಯಿತ್ತಯ್ಯಾ!
ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು!
ನಾ ನಿಮ್ಮ ನಂಬಿ ಬಯಲಾದೆ ಗೊಹೇಶ್ವರಾ!!

ಟೀ: ಬಯಲೆಂದರೆ ನಿಃಕಲ ಪರಶಿವಲಿಂಗವು. ಅಂತಪ್ಪ ನಿಃಕಲ ಲಿಂಗವು ತನ್ನ ಲೀಲೆಯಿಂದ ತನ್ನ ನಿರವಯದ ನಿಜವ ತನ್ನ ತಾನುದ್ಭವಿಸಿ ಬೆಳೆದು [ಅಖಂಡ ತೇಜೋಮೂರ್ತಿಯಪ್ಪ ಮಹಾಲಿಂಗವಾಯಿತ್ತು. ಅಂತಾದ ಮಹಾಲಿಂಗವು ತನ್ನ ನಿರವಯದ ನಿಜಭಾವದಲ್ಲಿ ಭರಿತನಾಗಿಪ್ಪನೆಂಬುದೀಗ 'ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯಾ,' ಎಂಬ ಶಬ್ದಕ್ಕರ್ಥ. ಅಂತು ಮಹಾಲಿಂಗಾಕಾರವಾದಲ್ಲಿ ಆ ಲಿಂಗದ ತದಂಶಕವೇ ಜೀವಾತ್ಮನೆಂಬ ಅಂಗವಾಯಿತ್ತೆಂಬುದೀಗ 'ಬಯಲ ಜೀವ'ನೆಂಬ ಶಬ್ದಕ್ಕರ್ಥ. ಅಂತಪ್ಪ ಜೀವಾತ್ಮಂಗೆ ಲಿಂಗಭಾವ ಘಟಿಸಿತ್ತೆಂಬುದೀಗ 'ಬಯಲ ಭಾವನೆ'ಯೆಂಬ ಶಬ್ದಕ್ಕರ್ಥ. ಅಂತು ಆತ್ಮನಿಗೆ ಲಿಂಗಭಾವ ಘಟಿಸಿದಲ್ಲಿ ಮಿಥ್ಯಾದೇಹವೆಂಬ ಬಯಲು ಬಯಲಾಗಿ ಆತ್ಮನೆಲ್ಲಾ ಲಿಂಗವೆಂಬ ಬಯಲಾಯಿತ್ತೆಂಬುದೀಗ 'ಬಯಲು ಬಯಲಾಗಿ ಬಯಲಾಯಿತ್ತಯ್ಯಾ' ಎಂಬ ಶಬ್ದಕ್ಕರ್ಥ. ಅಂತಪ್ಪ ಶಿವಪೂಜಾಕ್ರಿಯೆಯಿಂದ ಪ್ರಾಣ ಮನಭಾವಂಗಳೆಲ್ಲವು ಲಿಂಗವೆಯಾದ ಬಳಿಕ ತಾನೇ ಲಿಂಗವೆಂಬ ಅಭಿನ್ನವಿರವಿನ ವಿಶ್ವಾಸ ಘಟಿಸಿ, ಲಿಂಗವ ಭಿನ್ನಪಟ್ಟು ಅರಿಯದೆ ಲಿಂಗವೆಯೊಳಗಿರ್ದ ಶರಣನೆಂಬುದೀಗ 'ನಿಮ್ಮ ಪೂಜಿಸಿ

ದವರು ಮುನ್ನವೆ ಒಯಲಾದರು! ನಾ ನಿಮ್ಮ ನಂಬಿ ಬಯಲಾದೆ' ನೆಂಬ ಶಬ್ದಕ್ಕರ್ಥ." (೧ ಲಿಂಗಲೀಲಾ ವಿಲಾಸಚಾರಿತ್ರ. ಪ್ರೌ ಭೂಸನೂರಮಠ ಪುಟ. ೩೮೭) ಹೀಗೆ ಬೆಡಗು ವಚನ ಸಾಹಿತ್ಯದಲ್ಲಿ ಶಿವಶರಣರ ಪರಮ ಜ್ಞಾನಾನುಭವವಾಗಿದೆ.

ಇಂತು ಹೊರಹೊಮ್ಮಿದ ಬೆಡಗು ವರಂಪರವಾಗಿ ಹರಿದು ಅನುಭವ ಪದಗಳಲ್ಲಿ ಪಲ್ಲವಿಸಿ ಜನಪದ ಸಾಹಿತ್ಯದ ಮೇಲೂ ತನ್ನ ಬೆಳಕು ಚೆಲ್ಲಿದೆ. ವೈರಾಗ್ಯಸಿರಿ, ನಿಜಗುಣ ಶಿವಯೋಗಿಗಳಿಂದ ಶಿಷ್ಟಸಾಹಿತ್ಯ ಶರೀಫರ ಏರಿಗೆ ಈ ಬೆಡಗು ಅನುಭವ ಗೀತೆಗಳಲ್ಲಿ ಸಾಮಾನ್ಯರಿಗೂ ತಿಳಿಯುವಂತೆ ಹಾಸು ಹೊಕ್ಕಾಗಿದೆ. ವಚನಗಳ ಬೆಳಕಿನಲ್ಲಿ ಬರುವ ಈ ಬೆಡಗು ತಾಳ-ರಾಗಭರಿತವಾಗಿರುವುದರಿಂದ ಆತ್ಮ ರಂಜನವೂ ಆಗಿದೆ.

ಶರೀರವೆಂತೆಂಬುವ ಹೊಲನ ಹಸನನೂಡಿ
ವರತತ್ವ ಬೆಳೆಯನೆ ಬೆಳೆದುಣ್ಣಿರೊ ||ಪ||
ಕಮಲವೆ ಎಂತೆಂಬ ಎರಡೆತ್ತುಗಳ ಹೂಡಿ
ವಿಮಲ ಮಾನಸವ ನೇಗಿಲನೇ ಮಾಡಿ ||
ಮಮಕಾರವೆಂಬೆಂಬ ಕರಿಕೆಯ ಕಳೆದಿಟ್ಟು
ನಮ ಶಿ ಎಂಕೆಂಬ ಗೊಬ್ಬರವ ಜೆಲ್ಲಿ ||೧||
ಗುರುವರನುಪದೇಶ ಎಂಬ ಬೀಜವ ಬಿತ್ತಿ
ಮನದೆನ ನರ್ವಾರ ವೃಷ್ಟಿಯ ಬಲದಿ ||
ಅರಿವೆಂಬ ವೈರನ್ನೆ ಬಳಸುತ್ತ ಮುಸುಕಿರ್ದ
ಮಡಿಕ ದುರ್ಜಾಣವೆಂಬ ಕಳಯಕಿತ್ತು ||೨||
ಸ್ಥಿರಮುಕ್ತಿ ಎಂತೆಂಬ ಧ್ಯಾನವ ಬೆಳೆದುಂಡು
ಪರಮಾನಂದದೊಳು ದಣ್ಣನೆ ದಣಿದು ||
ಗುರುಸಿದ್ಧನಡಿಗಳಿಗೆರಗುತ್ತ ಭವವೆಂಬ
ಬರವನು ತಮ್ಮ ಸೀಮೆಗೆ ಕಳುಹಿ ||೩||

—ಸರ್ವಭೂಷಣ ಶಿವಯೋಗಿಗಳು

ಬೆಡಗಿನ ಗಡಚು ತಿಳಿಯಾಗಿ ಸರ್ವಭೂಷಣರ ಅನುಭವದೊಂದಿಗೆ ಕಾಲು ನಾಲಿನಲ್ಲಿ ಅರಿಕೆಯಾಗಿದೆ ಇಲ್ಲಿ! ಅನುಭವ ಗೀತೆಗಳನ್ನು ಹಾಡಿದವರೆಲ್ಲರೂ ಇದೇ ಮಾರ್ಗವನ್ನೇ ಪಾಲಿಸಿದ್ದಾರೆ. ಅನುಭಾವಿಗಳ ಅನುಭವ ಗೀತೆಗಳನ್ನು ಕೇಳಿ ಮನಂಬುಗುವಂತೆ ಹಾಡಿ ತಣಿದ ಹಳ್ಳಿಗರೂ ಅವರವರ ಮಟ್ಟದಲ್ಲಿ ಬೆಡಗನ್ನು ಉಪಯೋಗಿಸಿದ್ದಾರೆ. ಅದುದರಿಂದ ಹಳ್ಳಿಗರ ಹಾಡು (ಭಾವಗೀತೆ)ಗಳಲ್ಲಿಯೂ ಒಗಟುಗಾದೆಗಳಲ್ಲಿಯೂ ಇದನ್ನು ನಾವು ಕಾಣಬಹುದು.

೧ನೆಯ ಜೌಕು:—
ಕಾಶಿಗೆ ನಾನು ಹೋಗಿದ್ದೆ ಈಶ್ವರ ಪೂಜೆಯ ಮಾಡಿದ್ದೆ
ಹ್ಯಾಂಗ್ಹ್ಯಾಂಗ ಬಾಳುವೆ ಮಾಡಿದ್ಹೀಳ ಹೂವಿನ ||ಪಲ್ಲ||
ಒಬ್ಬನ್ನ ಒಳಗಿಟ್ಟೆ ಒಬ್ಬನ್ನ ಹೊರಗಿಟ್ಟೆ
ಒಬ್ಬನ್ನ ನೋಡಿ ನಗತಿದ್ದೆ ಹೂವಿನ ||
ಯಾವನ್ನ ಒಳಗಿಟ್ಟೆ ಯಾವನ್ನ ಹೊರಗಿಟ್ಟೆ
ಯಾವನ್ನ ನೋಡಿ ನಗತಿದ್ದೆ ಹೂವಿನ ||
ಹಲ್ಲಿಟ್ಟ ಒಳಗಿಟ್ಟೆ ಕುಂಕುವ ಹೊರಗಿಟ್ಟೆ
ಕನ್ನಡಿ ನೋಡಿ ನಗುತ್ತಿದ್ದೆ ಹೂವಿನ ||

೨ನೆಯ ಜೌಕು.—
ಕಾಶಿಗೆ ನಾನು ಹೋಗಿದ್ದೆ ಈಶ್ವರ ಪೂಜೆಯ ಮಾಡಿದ್ದೆ
ಹ್ಯಾಂಗ್ಹ್ಯಾಂಗ ಬಾಳುವೆ ಮಾಡಿದ್ಹೀಳ ಹೂವಿನ ||ಪಲ್ಲ||
ಒಬ್ಬನ್ನ ಕೂಡ್ರಿಸಿದ್ದೆ ಒಬ್ಬನ್ನ ನಿಲಿಸಿದ್ದೆ
ಒಬ್ಬನ್ನ ಕೂಡ ಎಳದಾಟ ಹೂವಿನ ||
ಯಾವನ್ನ ಕೂಡ್ರಿಸಿದ್ದೆ ಯಾವನ್ನ ನಿಲ್ಲಿಸಿದ್ದೆ
ಯಾವನ್ನ ಕೂಡ ಎಳಿದಾಟ ಹೂವಿನ ||
ಮಜ್ಜಿಗಿ ಗಡಗಿ ಕೂಡ್ರಿಸಿದ್ದೆ ಕಡಗೋಡ ನಿಲಿಸಿದ್ದೆ
ಹಗ್ಗದ ಕೂಡ ಎಳಿದಾಟ ಹೂವಿನ ||

೩ನೆಯ ಜೌಕು :—
ಕಾಶಿಗೆ ನಾನು ಹೋಗಿದ್ದೆ ಈಶ್ವರ ಪೂಜೆಯ ಮಾಡಿದ್ದೆ
ಹ್ಯಾಂಗ್ಹ್ಯಾಂಗ ಬಾಳುವೆ ಮಾಡಿದ್ಹೀಳ ಹೂವಿನ ||ಪಲ್ಲ||
ಒಬ್ಬನ್ನ ಕಟ್ಟಿದ್ದೆ ಒಬ್ಬನ್ನ ಬಿಟ್ಟಿದ್ದೆ
ಒಬ್ಬನ ಕೈಕೊಟ್ಟು ಕರಕೊಂಡೆ ಹೂವಿನ ||
ಯಾವನ್ನ ಕಟ್ಟಿದ್ದೆ ಯಾವನ್ನ ಬಿಟ್ಟಿದ್ದೆ
ಯಾವನ್ನ ಕೈಕೊಟ್ಟು ಕರಕೊಂಡೆ ಹೂವಿನ ||
ಅಕಳವ ಕಟ್ಟಿದ್ದೆ ಕರವನ್ನು ಬಿಟ್ಟಿದ್ದೆ
ಕೆಚ್ಚಲಕ ಕೈಕೊಟ್ಟು ಕರಕೊಂಡೆ ಹೂವಿನ ||

೪ನೆಯ ಜೌಕು:—
ಕಾಶಿಗೆ ನಾನು ಹೋಗಿದ್ದೆ ಈಶ್ವರ ಪೂಜೆಯ ಮಾಡಿದ್ದೆ
ಹ್ಯಾಂಗ್ಹ್ಯಾಂಗ ಬಾಳುವೆ ಮಾಡಿದ್ಹೀಳ ಹೂವಿನ ||ಪಲ್ಲ||
ಒಬ್ಬನ್ನ ಇಕ್ಕಿದ್ದೆ ಒಬ್ಬನ್ನ ಎಳದಿದ್ದೆ
ಒಬ್ಬನ್ನ ಕೈಯಾಗ ಹಿಡದಿದ್ದೆ ಹೂವಿನ"

ಯಾವನ್ನ ಇಕ್ಕಿದ್ದೆ ಯಾವನ್ನ ಎಳದಿದ್ದೆ
ಯಾವನ್ನ ಕೈಯಾಗ ಹಿಡದಿದ್ದೆ ಹೂವಿನ"
ಕದವನ್ನ ಇಕ್ಕಿದ್ದೆ ಅಗಳಿನ್ನ ಎಳದಿದ್ದೆ
ದೀಪನ್ನ ಕೈಯಾಗ ಹಿಡದಿದ್ದೆ ಹೂವಿನ"

ಜನೆಯ ಚೌಕು :—

ಕಾಶಿಗೆ ನಾನು ಹೋಗಿದ್ದೆ ಈಶ್ವರ ಪೂಜೆಯ ಮಾಡಿದ್ದೆ
ಹ್ಯಾಂಗ್ಹ್ಯಾಂಗ ಬಾಳುವೆ ಮಾಡಿದ್ದೆಲ್ಲ ಹೂವಿನ ||ಪಲ್ಲ||
ಒಬ್ಬನ್ನ ಹಾಸಿದ್ದೆ ಒಬ್ಬನ್ನ ಇಟ್ಟಿದ್ದೆ
ಒಬ್ಬನ್ನ ಕೂಡ ಸೋಗಸಿದ್ದೆ ಹೂವಿನ"
ಯಾವನ್ನ ಹಾಸಿದ್ದೆ ಯಾವನ್ನ ಇಟ್ಟಿದ್ದೆ
ಯಾವನ್ನ ಕೂಡ ಸೋಗಸಿದ್ದೆ ಹೂವಿನ"
ಹಾಸಿಗೆಯ ಹಾಸಿದ್ದೆ ತಲಿಗಿಂಬ ಇಟ್ಟಿದ್ದೆ
ಹಚ್ಚಡಗೂಡ ಸೋಗಸಿದ್ದೆ ಹೂವಿನ"

—ಜನಪದ ಸಾಹಿತ್ಯ ರತ್ನಾಕರ

ಬೆಡಗು ಹಾಸ್ಯಭರಿತವಾಗಿ ರಸಿಕ ಜೀವನದ ಸತಿಪತಿಯರ ಸುಂದರ ಚಿತ್ರವಿದೆ ಇಲ್ಲಿ. ಪೆಣ್ಣು ತನ್ನ ಜೀವನದಲ್ಲಿ ಅನುಭವಿಸಿದ್ದನ್ನು ಬೆಡಗಿನ ಬಿಂಕದಲ್ಲಿ ಹಾಡಿದೆ.

## ಓದುಗಬ್ಬ

ಓದಿ, ಅರಿಯಲು ನವರಸಭರಿತ ಕಾವ್ಯಗಳಿಲ್ಲ ಓದುಗಬ್ಬಗಳಾದರೂ ಚಂಪೂಶೈಲಿಯಲ್ಲಿಯ ವಸ್ತುಕಗಳ ಮಾರ್ಗವೇ ಬೇರೆ. ತ್ರಿಪದಿ ಷಟ್ಪದ್ಯಾದಿಗಳ ಕನ್ನಡ ಛಂದದಲ್ಲಿ ಬಂದ ವರ್ಣಕಗಳಲ್ಲಿ ವೀರಶೈವರ ಓದುಗಬ್ಬಗಳ ಬಗೆಯೇ ಬೇರೆ. ಅನುಭವ ಮಾರ್ಗದಲ್ಲಿಯ ವೀರಶೈವ ಅನುಭಾವಿಗಳು ಇವುಗಳಲ್ಲಿ ಪ್ರಾಪಂಚಿಕ ಪಾರಮಾರ್ಥಿಕ ಅನುಭವವನ್ನು ಭಕ್ತಿಯ ಹೊದಿಕೆಯಲ್ಲಿ ತುಂಬಿದ್ದಾರೆ. ಆದುದರಿಂದ ಅವು ಕೇವಲ ಶಿವಶರಣರ ಚರಿತ್ರೆ ಅಥವಾ ಧರ್ಮಸಿದ್ಧಾಂತಗಳಿರದೆ ಅವರ ಅನುಭವ ಜೀವನಸಾರವಾಗಿವೆ. ವೀರಶೈವರ ಓದುಗಬ್ಬಗಳಲ್ಲಿ ಪುರಾಣಗಳಿವೆ, ಧರ್ಮಸಿದ್ಧಾಂತಗಳಿವೆ, ಶತಕಗಳಿವೆ; ಅಲ್ಲದೆ ಸ್ತೋತ್ರ ರೂಪದಲ್ಲಿ ಅನೇಕ 'ತ್ರಿವದಿ'ಗಳೂ ಇರುವುವು.

ಪುರಾಣಗಳಲ್ಲಿ ಪ್ರಭುಲಿಂಗಲೀಲೆ, ಚೆನ್ನಬಸವ ಪುರಾಣಾದಿಗಳೇ ಪ್ರಾತಿನಿಧ್ಯವಿವೆ. ಮಂತ್ರ ತಂತ್ರ ಯೋಗಾದಿಗಳು ಜೀವನ್ಮುಕ್ತನಾಗಲು ಸಾಧನವಾಗಲಾರುವು ಎಂಬ ಮಾತನ್ನು ಮಹಾಕವಿ ಚಾಮರಸನು ತನ್ನ ಪ್ರಭುಲಿಂಗಲೀಲೆಯಲ್ಲಿ ಅಲ್ಲಮಪ್ರಭುವಿನ ಮುಖಾಂತರ ಸಿದ್ಧಶ್ರೇಷ್ಠ, ಗೋರಕ್ಷನಿಗೆ ನುಡಿಸಿದ್ದಾನೆ.

ಕಾಯ ಬಲಿದರೆ ಮಾಯೆ ಬಲಿವದು
ಮಾಯೆ ಬಲಿದರೆ ಛಾಯೆ ಬಲಿವದು
ಕಾಯ ಮಾಯಾ ಛಾಯ ಬಲಿದರೆ ಸಿದ್ಧತನವಲ್ಲ ||
ಕಾಯ ಮಾಯಾ ಛಾಯದಾಗಿನ
ದಾಯವನು ಅಳಿದುಳಿದನಾದೊಡೆ
ರಾಯನಾತನು ಸಿದ್ಧರೊಳು ಗೋರಕ್ಷ ಕೇಳೆಂದ ||

—ಪ್ರಭುಲಿಂಗಲೀಲೆ, ಗತಿ ೧-೯, ಪ. ೩-೭

ಎಂಬ ಪ್ರಭುವಿನ ಅನುಭವ ನುಡಿಗೆ ಅಹಂಭಾವ ತಾಳಿದ ಗೋರಕ್ಷನು ದಾಸೋಹಂ ಭಾವಯುಕ್ತನಾಗಿ, ಶಿವಶರಣನಾಗಿ ಜೀವನ್ಮುಕ್ತನಾಗುವನು. ಇಂತಹ ಸಂಗತಿಗಳನ್ನು ವೀರಶೈವರ ಅನೇಕ ಪುರಾಣಗಳಲ್ಲಿ ನಾವು ಕಾಣಬಹುದು.

ಧರ್ಮಸಿದ್ಧಾಂತಗಳಲ್ಲಿ ಕವಿಸಿದ್ಧರಾಮನ ಷಟ್‌ಸ್ಥಲ ತಿಲಕ. (೧ ಇನ್ನೂ ಪ್ರಕಟವಾಗಿಲ್ಲ). ನಿಜಗುಣರ ಪರಮಾನುಭವ ಜೋಳಿ ಮೊದಲಾದ ಗ್ರಂಥಗಳೂ, ಮೈಲಾರ ಬಸವಲಿಂಗ ಶರಣರ 'ಷಟ್‌ಸ್ಥಲ ಸಿದ್ಧಾಂತ' ಮೊದಲಾದುವುಗಳು ಮಹತ್ವದುವು.

ವದನದೊಳ್ ಸತ್ಯ, ಕಾಯಕದಿ ಸತ್ಯತ್ಯ ತ್ರೈ
ವಿಧ ಲಿಂಗದೊಳ್ಭಕ್ತಿ ಜ್ಞಾನದೊಳ್ ಶಕ್ತಿ ನಿಜ
ಹೃದಯದೊಳ್ ನುಕ್ತಿ ಸಮರಸದೊಳನುರಕ್ತಿ
ವಿಷಯಾದಿಯೊಳ್‌ನೆರ ವಿರಕ್ತಿ ||

ನುದದಿ ಮನದೊಳ್ ಶಾಂತಿ ಬಾಹ್ಯಕರಣದಿ
ದಾಂತಿ
ವದವನಿಜ ಕರಣ ಹರಣಂಶರುರಲಿಂಗ ಬಾ-
ವದೊಳು ಕರಿಗೊಂಡು ಮಾಯೆಯ ಪಟಿವ
ಲಿಂಗಾತ್ಮರಿದ ಕೇಳಿ ಸಂತಸದೊಳ್ ||

—ಕವಿ ಸಿದ್ಧರಾಮ, ಷಟ್‌ಸ್ಥಲ ತಿಲಕ: ಸ್ಥಲ. ೨ ಪ. ೩

ಎಂಬುದು ಲಿಂಗಾಂಗ ಅನುಭಾವಿಯ ಇರುವು ಆಗಿದೆ.

ಪದ, ಗೋಷ್ಯ, ಶತಕ, ಸ್ತೋತ್ರ, ತ್ರಿಪದಿ ಮೊದಲಾದುವುಗಳು ಷಟ್‌ಸ್ಥಲಸಿದ್ಧಾಂತವನ್ನು ಅರಿತು ಕೊಳ್ಳಲು ಸಾಧನವಲ್ಲದೆ ಅನುಭವ ಪದಮಳ ತುಂಬಿ ಕೊಂಡಿವೆ, ಎಂಬ ಮಾತು ಗಮನಾರ್ಹವಾದುದು. ಇವು

ಗಳಲ್ಲಿ 'ತಿಪದಿ'ಗಳು ವಿಶಿಷ್ಟವಾಗಿವೆ. ಮಹಾದೇವಿಯಕ್ಕ, ಸೊನ್ನಲಿಗೆ ಸಿದ್ಧರಾಮ, ಶೀಲವಂತಯ್ಯ, ನಿಜಗುಣ ಶಿವಯೋಗಿ, ಸರ್ವಜ್ಞ, ಮೈಲಾರ ಬಸವಲಿಂಗ ಶರಣ ಮೊದಲಾವರ 'ತ್ರಿವದಿ'ಗಳು ಉಪಲಬ್ಧವಿವೆ. ಮಹಾದೇವಿಯಕ್ಕನವರ 'ಯೋಗಾಂಗ ತ್ರಿವದಿ'ಯಲ್ಲಿ ವಿರಾಗಿಣಿಯು ಸಾಧಿಸಿದ ಅನುಭವ ತರಂಗವನ್ನು ಗಮನಿಸಬೇಕು.

ಅಷ್ಟದಳ ಕಮಲದಾ ಬಟ್ಟ ಬಯಲೊಳಗೊಂದು
ಮುಟ್ಟಬಾರದಾ ಘನವಿಹುದು ಮನದೊಳಗೆ
ದೃಷ್ಟಿಯಿಟ್ಟವನೆ ಕಡುಜಾಣ೧"

(೧. ಕರ್ನಾಟಕ ಕವಿ ಚರಿತ್ರೆ ಭಾಗ ೧. ಪು. ೪೧೫) ಅನುಭವ ಕವಿಯಾದ ಶೀಲವಂತಯ್ಯನು 'ಆತ್ಮಲಿಂಗ' ತ್ರಿಪದಿಯಲ್ಲಿ ಲಿಂಗೋತ್ಪತ್ತಿಯನ್ನು ಅನುಭವಿಸಿದುದು ಸಮ್ಯಜ್ಞಾನ ಪೂರಕವಾಗಿದೆ.

ಬಿಂದು ರೂಪವೆ ಪೀಠ ಮುಂದೆ ನಾದವೆ ವೃತ್ತ
ಸಂದ ಗೋಮುಖವೆ ಕಳೆ ತ್ರಿವಿಧ ಹೃದಯದೊಳು
ನಿಂದ ಚೆನ್ನಯನೆ ಗುರುಲಿಂಗ"

—ಶೀಲವಂತಯ್ಯನ ಆತ್ಮಲಿಂಗ ತ್ರಿವದಿ

ಈ ವಿಷಯಾದಿಗಳಲ್ಲಿ ನಿಜಗುಣರ ಕೃತಿಗಳಂತೂ ಹೆಸರಾಂತವಾಗಿವೆ, ಎಂದು ಬೇರೆ ಹೇಳಬೇಕಾಗಿಲ್ಲ.

## ಹಾಡುಗಬ್ಬ–ಬಾಜನಗಬ್ಬ

ನೃಪತುಂಗನಿಂದಾಗಲೇ ಪೂರ್ವದಲ್ಲಿದ್ದ ಕವಿಗಳು ತಮ್ಮ ಗ್ರಂಥಗಳಲ್ಲಿ (೧ ಕವಿರಾಜಮಾರ್ಗ. ಪರಿಚ್ಛೇದ. ೧. ಪದ್ಯ ೩೫ರಿಂದ೩೫), (೨ ಕಾವ್ಯಾವಲೋಕನ. ಐಕ್ಯಪ್ರಕರಣ. ಸೂತ್ರ. ೨೬ರಿಂದ೨೬) ಹಾಡುಗಬ್ಬದ ಮಾತನ್ನೆತ್ತಿದರೂ ನಮಗೆ ಉಪಲಬ್ಧವಿರುವ ಹಾಡುಗಬ್ಬಗಳು ಒಂದೊ, ಎರಡೊ ! ಚೆನ್ನಪ್ಪ ಕವಿಯ 'ಶರಣಲೀಲಾಮೃತವೊಂದನ್ನು ಬಿಟ್ಟರೆ ಕನ್ನಡ ಸಾಹಿತ್ಯಕ್ಕೆ ಬೇರೊಂದು ಹಾಡುಗಬ್ಬ ವಿಲ್ಲವೆಂದೇ ಹೇಳಬಹುದು.

ಹಾಡುಗಬ್ಬವು ಕಥಾಸಂಪುಟವುಳ್ಳ ಹಾಡು (ಭಾವಗೀತೆ)ಗಳ ಸರಮಾಲಿ. ಅದಕ್ಕೆ ನೂರೊಂದುರಾಗ. ಈ ರಾಗ–ರಾಗಿಣಿಗಳಿಗೆ ನೂರೊಂದು ಧರತಿ. ಆ ನೂರೊಂದು ಧರತಿಗೆ ನೂರೊಂದು ಸೊಲ್ಲು. ಅಂತೆಯೇ ಅದು ಕೇಳಿದಾಗ ಮನರಂಜನ, ಅನುಭವಿಸಿದಾಗ ಆತ್ಮರಂಜನ ! ಈ ಹಿಡಿತವನ್ನರಿತು ಅನುಭಾವಿಗಳು ಸಾಮಾನ್ಯರಿಗಾಗಿ ಹಾಡುಗಬ್ಬವನ್ನು ಹಾಡಿದರು. ಅದರ ಮಹತ್ವವನ್ನರಿತು ಓದುಬರೆಹಬಾರದ ಹಳ್ಳಿಗರೂ ನಾಡ ಶರಣರ ಹಾಗೂ ವೀರರ ಹಾಡುಗಬ್ಬಗಳನ್ನು ಪರಂಪರೆಯಿಂದ ಹಾಡುತ್ತ ಬಂದಿದ್ದಾರೆ. ಅದು ಕನ್ನಡ ಹೆಣ್ಣು ಮಕ್ಕಳಿಗೆ ಇನ್ನಿಷ್ಟು ಪಾವನವಾಗಿ ಪೂಜ್ಯಭಾವ ಒಡಮೂಡಲೆಂದು.

ಶಿವಶಿವ ಶಿವನೆ ||ಪ||
ಹಾಡುವದು ಹಾಡಗಬ್ಬ ಬೇಡುವದು ಉಡಿಯಕ್ಕಿ
ಮಾಡುವದು ನಿತ್ಯ ಶಿವಕಾಯಕ |ಶಿ| ಹರಹರನೆ
ನೀಡುವದು ನಿತ್ಯ ಶಿವದಾನ ||ಶಿ||೪೦||
ಕಾವ್ಯಲ್ಲ ಕಥೆಯಲ್ಲ ನಾಡ ಶರಣರ ಹಾಡು
ಹಾಡಗಬ್ಬವ್ವ ಸಬದಾಗ |ಶಿ| ಏಜಾಣಿ
ದನಿಗೊಟ್ಟು ಹಾಡ ಕಲಿಯವ್ವ ||ಶಿ||೫೯||

ಮಲ್ಲ ಮಲ್ಲಾಣಿ, ಮಹಾಶೃಂಗಾರ ಹಾಡುಗಬ್ಬ. ೪. ಶಿವದರ್ಶನ.

—ಸಂಗ್ರಾಹಕರು. ಡಾ. ಬಿ. ಎಸ್ ಗದ್ದಗಿಮಠ.

ಎಂದು ಹಾಡಿ ಹಾಡುಗಬ್ಬದ ಪರಂಪರೆಯನ್ನು ಉಳಿಸಿ ತಂದಿದ್ದಾರೆ. ಈ ಹಾಡುಗಬ್ಬಗಳಲ್ಲಿ ಕನ್ನಡ ಹೆಣ್ಣು ಮಕ್ಕಳ ಪ್ರಪಂಚಾನುಭವದ ಪರಮ ಪರಿಮಳವನ್ನು ಅನುಭವಿಸಬಹುದು. ಅವಳಿಗೆ ಪ್ರಣಯ ದಾಂಪತ್ಯವನ್ನೊಳಗೊಂಡ ಒಗತನವು ದೇವತ್ವವಾಗಿದೆ. ಅವಳಿಗೆ ಪ್ರಣಯವು (Love) ದೇವ ಸಮಾನವಾದುದು. ಅಂತೆಯೆ ಅವಳ ಪ್ರಪಂಚವೂ ಪಾವನವು.

ಪ್ರಣಯ ಹಾಡುನ ಬಾರ ಪ್ರಣಮ ಮಾಡುನಬಾರ
ಪ್ರಣಯ ಪ್ರಣವೆರಡು ಸರಿಮಾಡಿ |ಶಿ| ಶಿವಭಕ್ತ
ಪ್ರಣಯಿ ಮುಲ್ಲಣನ ಶಿವಪದವ ||ಶಿ||೩||

ಮುಲ್ಲಮಲ್ಲಾಣಿ, ಮಹಾಶೃಂಗಾರ ಹಾಡುಗಬ್ಬ. ೧. ಪೀಠಿಕೆ

—ಸಂಗ್ರಾಹಕರು: ಡಾ. ಬಿ. ಎಸ್. ಗದ್ದಗಿಮಠ

ಇಲ್ಲಿ ಅವಳ ತೇದುಂಡ ಬಾಳಿನ ಅನುಭವವು ಸೂನಾಡುತಿದೆ ! 'Love is God' ಎಂಬ ಪರಮ ತತ್ವವನ್ನು ಪಾಶ್ಚಾತ್ಯರು ಇತ್ತೀಚೆಗೆ ಅರಿತು ಕೊಂಡರೆ ಈ ಮಾತನ್ನು ಕನ್ನಡ ಹೆಣ್ಣು ಎಂದೋ ಅರಿತುಕೊಂಡು ಅದನ್ನು ತನ್ನ ನಿತ್ಯ ಜೀವನದಲ್ಲಿ ಕೃತಿಗಿಳಿಸಿದೆ.

[ ಮುಂದುವರಿಯುವುದು ]

# ಜೀವನ ಶಿಕ್ಷಣ ಸಪ್ತಾಹ

[ ೨೦-೧-೧೯೫೯ ರಿಂದ ೨೬-೧-೧೯೫೯ ]

**( ಧಾರವಾಡ ಆಕಾಶವಾಣಿ ಕೇಂದ್ರದಿಂದ ಬಿತ್ತರಿಸಲಾದ ವಿಚಾರ ಸಂಕೀರ್ಣ )** ಆಕಾಶವಾಣಿ ಕೃಪೆಯಿಂದ

---

**ಈ ಸಂಕೀರ್ಣದಲ್ಲಿ ಭಾಗವಹಿಸಿದ ಮಹನೀಯರ ಹೆಸರುಗಳು**

೧) ಶ್ರೀ. ಎಸ್. ವ್ಹಿ. ಜೇವೂರ, ಡೆ. ಡಾಯರೆಕ್ಟರ ಧಾರವಾಡ
೨) ಶ್ರೀ. ಕೆ. ಬಿ. ತೆರಗಾಂವಕರ, ಪ್ರಿನ್ಸಿಪಾಲ, ಜಿ.ಬಿ.ಟಿ.ಸಿ. ಧಾರವಾಡ
೩) ಶ್ರೀ. ಎಮ್. ಜಿ. ಹಂದ್ರಾಳ, ಎ. ಇನ್‌ಸ್ಪೆಕ್ಟರ ಧಾರವಾಡ
೪) ಶ್ರೀಮತಿ ಪಿ. ಎ. ಭಾಸ್ಕರ, ಲೇ. ಸು. ಟಿ. ಸಿ. ಡಬ್ಲ್ಯು. ಧಾರವಾಡ
೫) ಶ್ರೀ. ವ್ಹಿ. ಬಿ. ಚವಣ್ಣವರ, I/c. ಪ್ರಿನ್ಸಿಪಾಲ ಗಂ.ಸ.ಟ್ರೇ.ಕಾ. ಧಾರವಾಡ
೬) ಶ್ರೀ. ಎಫ್. ಸಿ. ಉಣಕಲ್, ಕ್ಯಾಸ್ಟ್ ಅಗ್ರನಾಯರಧುರ ಧಾರವಾಡ
೭) ಶ್ರೀ. ಎಸ್. ಸಿ. ಗೋಕಾವಿ ಪ್ರಿನ್ಸಿಪಾಲ ಬಾ.ಮಿ.ಟ್ರೇ.ಕಾ. ಧಾರವಾಡ

---

ಜೀವನ ಶಿಕ್ಷಣ ಚಟುವಟಿಕೆಗಳನ್ನು ತೋರಿಸುವ ಸಪ್ತಾಹಗಳು ಒಂದಿಲ್ಲೊಂದು ರೀತಿಯಿಂದ ಭಾರತದ ತುಂಬೆಲ್ಲ ನಡೆಯುತ್ತ ಬಂದಿವೆ. ಕಳೆದ ವರ್ಷದಿಂದ ವಿಶೇಷವಾಗಿ ಈ ಜೀವನ ಶಿಕ್ಷಣ ಪ್ರಸಾರಕ್ಕಾಗಿ ಹೆಚ್ಚು ವಿಚಾರ ಮಾಡುವ ಪ್ರಸಂಗ ಬಂದದ್ದರಿಂದ ಜೀವನ ಶಿಕ್ಷಣ ಸಪ್ತಾಹವನ್ನು ಭಾರತ ಸರಕಾರದವರು ಪ್ರತಿ ವರುಷವೂ ಆಚರಿಸಬೇಕೆಂದು ರಾಜ್ಯಸರಕಾರಗಳ ಮುಖಾಂತರ ನಿವೇದಿಸಿದ್ದಾರೆ. ಅದರ ಮುಖ್ಯ ಉದ್ದೇಶಗಳು ಹೀಗಿವೆ—

೧) ಜೀವನ ಶಿಕ್ಷಣವು ೨೦ ವರ್ಷಗಳ ಹಿಂದೆ ಆರಂಭವಾಗಿದ್ದರೂ ಒಳಪ್ರದೇಶದ ಜನಸಾಮಾನ್ಯರಿಗೆ ಸಹ ಅದಷ್ಟು ಹೆಚ್ಚು ಅದರ ಬಗೆಗೆ ಮನದಟ್ಟು ಆಗುವಂತೆ ಮಾಡುವದು.

೨) ಭಾರತ ಸರಕಾರವು ಹಾಗೂ ರಾಜ್ಯ ಸರಕಾರಗಳು ಜೀವನ ಶಿಕ್ಷಣವನ್ನು ತಮ್ಮ ಪ್ರಾಥಮಿಕ ಶಿಕ್ಷಣದ ಧೋರಣೆಯನ್ನಾಗಿ ರೂಪಿಸಿಕೊಂಡದ್ದಲ್ಲದೆ, ಜೀವನ ಶಿಕ್ಷಣದ ವೈಶಿಷ್ಟ್ಯಗಳನ್ನು ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣದ ಹಂತಗಳಲ್ಲಿಯೂ ಕೂಡ ಸೇರಿಸುವ ಧೋರಣೆಯನ್ನು ತಳೆದಿವೆ. ಅದಕ್ಕಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ಈ ಶಿಕ್ಷಣದ ಪ್ರಗತಿಯನ್ನು ತಿಳಿದು ಕೊಳ್ಳುವದು ಅವಶ್ಯ.

೩) ಈ ಶಿಕ್ಷಣ ಕ್ಷೇತ್ರದಲ್ಲಿ ದುಡಿಯುವಾಗ ಬಂದ ಅನುಭವಗಳ ವಿಚಾರ ವಿನಿಮಯ ಮಾಡಿಕೊಳ್ಳಬೇಕು. ಹಾಗೂ ಅನುಭವಿಸಿದ ಸಮಸ್ಯೆಗಳನ್ನು ಕಾರ್ಯಕರ್ತರು ಒಂದೆಡೆಗೆ ಕೂಡಿಕೊಂಡು ಅವುಗಳನ್ನು ಪರಿಹಾರಮಾಡುವ ರೀತಿಗಳನ್ನು ಕಂಡುಕೊಳ್ಳಬೇಕು.

೪) ಜೀವನ ಶಿಕ್ಷಣವು ಹೆಚ್ಚು ಭರದಿಂದ ಪ್ರಸಾರವಾಗುವಂಥ ಯೋಜನೆಗಳನ್ನು ಚರ್ಚಿಸುವದು. ಹಾಗು ಆ ಬಗ್ಗೆ ಜನತೆಯ ಸಹಕಾರವನ್ನು ಕೋರುವದು. ಈ ಉದ್ದೇಶಗಳನ್ನು ಸಫಲ ಮಾಡುವಂತೆ ಕಾರ್ಯಕ್ರಮಗಳನ್ನು ಕೈಕೊಂಡಾಗ ಶಿಕ್ಷಣ ಖಾತೆಯಲ್ಲಿ ಕೆಲಸ ಮಾಡುವವರೆಲ್ಲರೂ ಭಾಗವಹಿಸುವದು ಅಗತ್ಯವಿದೆ ಯಾಕೆಂದರೆ ಜೀವನ ಶಿಕ್ಷಣವು ಕೇವಲ ಕೋಣೆಯೊಳಗೇ ಕುಳಿತುಕೊಂಡು ಕಲಿಯುವ ಒಂದು ಶಿಕ್ಷಣ ಪದ್ಧತಿಯಾಗಿರದೆ, ಅದರಲ್ಲಿ "ಜೀವನಕ್ಕಾಗಿ ಶಿಕ್ಷಣ ಜೀವನದಿಂದ ಶಿಕ್ಷಣ" ಎಂಬ ತತ್ವವು ಅಡಕವಾಗಿರುವದರಿಂದ ಜನಸಾಮಾನ್ಯರೆಲ್ಲರಿಗೂ ಇದು ಸಂಬಂಧಪಟ್ಟದ್ದಾಗಿದೆ.

**ಸಪ್ತಾಹದಲ್ಲಿಯ ಕಾರ್ಯಕ್ರಮಗಳು.**

೧) ಸಾಮೂಹಿಕ ಪ್ರಾರ್ಥನೆ ಹಾಗೂ ನಗರ ಸಂಕೀರ್ತನೆ.

೨) ಜೀವನ ಶಿಕ್ಷಣ ವಿಷಯವನ್ನು ಕುರಿತು ವಿಚಾರ ಸಂಕೀರ್ಣ, ವಿಚಾರ ಗೋಷ್ಠಿ, ಹಾಗೂ ಶಿಕ್ಷಣ ತಜ್ಞರ ಭಾಷಣಗಳು.

೩) ಪ್ರದರ್ಶನಗಳು.

೪) ಮೂಲೋದ್ಯೋಗ ಹಾಗೂ ಇತರ ಶೈಕ್ಷಣಿಕ ಚಟುವಟಿಕೆಗಳ ಸ್ಪರ್ಧೆಗಳು.

೫) ಶ್ರಮದಾನ, ಗ್ರಾಮ ಸಫಾಯಿ ಇತ್ಯಾದಿ ರಚನಾತ್ಮಕ ಕಾರ್ಯಕ್ರಮಗಳು.

೬) ಸಮಾಜ ಸೇವೆಯ ಕೆಲಸ.

೭) ಜೀವನ ಶಿಕ್ಷಣ ಶಾಲೆಗಳಲ್ಲಿಯ ಚಟುವಟಿಕೆಗಳನ್ನು ತೋರಿಸುವ ಚಲಚಿತ್ರಗಳು.

೮) ಸಾಂಸ್ಕೃತಿಕ ಹಾಗೂ ಮನರಂಜನೆಯ ಚಟುವಟಿಕೆಗಳು.

೯) ಸೂತ್ರಯಜ್ಞ ಹಾಗೂ ವಸ್ತ್ರಯಜ್ಞ.

## ಜೀವನ ಶಿಕ್ಷಣದ ಬೆಳವಣಿಗೆ.

೧೯೩೭ ರಲ್ಲಿ ಪೂಜ್ಯ ಬಾಪೂಜಿಯವರು ತಮ್ಮ ಪ್ರಾಯೋಗಿಕ ಫಲಿತಾಂಶದ ರೂಪವಾಗಿ ಜೀವನ ಶಿಕ್ಷಣದ ಅವಶ್ಯಕತೆಯನ್ನು ಕುರಿತು ತಮ್ಮ ವಿಚಾರ ಗಳನ್ನು ಭಾರತೀಯರಮುಂದೆ ಇಟ್ಟರು. ಭಾರತ ಸರಕಾರವು ಅವರ ವಿಚಾರದ ತಥ್ಯಾಂಶವನ್ನು ಮನಗಂಡು ಜೀವನ ಶಿಕ್ಷಣವನ್ನು ಕಾರ್ಯರೂಪದಲ್ಲಿ ತರುವದಕ್ಕಾಗಿ ಶೀಘ್ರ ಉಪಾಯಗಳನ್ನು ಕೈಕೊಂಡಿತು. ಕೆಲವು ರಾಜ್ಯ ಸರಕಾರಗಳು ಕೂಡ ಈ ದಿಶೆಯಲ್ಲಿ ಹೆಚ್ಚತ್ವರಿತಗತಿಯಿಂದ ಜೀವನ ಶಿಕ್ಷಣವನ್ನು ಪ್ರಾರಂಭಿಸಲು ವಿಶೇಷ ಯೋಜನೆ ಗಳನ್ನು ಕೈಕೊಂಡವು. ಇಂಥ ರಾಜ್ಯಗಳಲ್ಲಿ ಬಿಹಾರ, ಹಳೇಮುಂಬಯಿ, ಆಸಾಮ ಮತ್ತು ಇತ್ತೀಚೆಗೆ ಮದ್ರಾಸ ಮತ್ತು ಓರಿಸಾ ಇವೇ ಮೊದಲಾದ ರಾಜ್ಯಗಳು ಸಾಧಿಸಿದ ಪ್ರಗತಿಯು ಗಮನಾರ್ಹವಾಗಿದೆ. ಉದಾ ಹರಣಾರ್ಥವಾಗಿ ಧಾರವಾಡ ವಿಭಾಗದಲ್ಲಿ ಕಳೆದ ೨೦ ವರ್ಷಗಳಿಂದ ಸರಕಾರವು ಸಾಧಿಸಿದ ಪ್ರಗತಿಯು ಹೀಗಿದೆ:—

೧೯೫೯ರಲ್ಲಿ ಧಾರವಾಡ ತಾಲೂಕಿನಲ್ಲಿ ೧೭ ಶಾಲೆಗಳ ಹೊಂದಿಕೆಯ ಪ್ರಾಯೋಗಿಕ ಕ್ಷೇತ್ರವನ್ನು ಪ್ರಾರಂಭಿಸಿದರು. ಮುಂದೆ ಇಂತಹ ಹೊಂದಿಕೆಯ ಕ್ಷೇತ್ರಗಳನ್ನು ಬಾಗಲಕೋಟ, ಕುಮಟಾ ಹಾಗೂ ಹೊಸರಿತ್ತಿಗಳಲ್ಲಿ ವಿಸ್ತರಿಸಿದರು. ೧೯೪೯–೪೯ರಲ್ಲಿ ಮೊದಲ ಹೆಜ್ಜೆಯೆಂದು ಅನೇಕ ಸಾದಾ ಶಾಲೆಗಳಲ್ಲಿ ಮೂಲೋದ್ಯೋಗ ಕಲಿಸುವದನ್ನು ಪ್ರಾರಂಭಿಸಿದರು. ಜೀವನ ಶಿಕ್ಷಣ ಶಾಲೆಗಳಿಗೆ ಜೀವನ ಶಿಕ್ಷಣದಲ್ಲಿ ತರಬೇತು ಪಡೆದ ಶಿಕ್ಷಕರನ್ನು ಒದಗಿಸುವ ಕುರಿತು ೧೯೫೦ರಷ್ಟರಲ್ಲಿ ಎಲ್ಲ ಪ್ರಾಥಮಿಕ ಟ್ರೇನಿಂಗ ಕಾಲೇಜುಗಳನ್ನು ಜೀವನ ಶಿಕ್ಷಣ ಟ್ರೇನಿಂಗ ಕಾಲೇಜುಗಳನ್ನಾಗಿ ಪರಿವರ್ತಿಸಿದರು. ಇಂಥ ಕಾಲೇಜುಗಳಲ್ಲಿ ಕಲಿಸುವ ಪ್ರಾಧ್ಯಾಪಕರನ್ನು ಹಾಗೂ ಜೀವನ ಶಿಕ್ಷಣ ಶಾಲೆಗಳ ಮೇಲ್ವಿಚಾರಕರನ್ನು ತರಬೇತು ಗೊಳಿಸುವದಕ್ಕಾಗಿ ೧೯೪೯ರಲ್ಲಿ ಧಾರವಾಡ ವಿಭಾಗದಲ್ಲಿ ಪದವೀಧರರ ಜೀವನ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಲಾಯಿತು. ಇಂಥವರ ತರಬೇತಿಯು ಮೊದಲು ಸೇವಾಗ್ರಾಮದಲ್ಲಿ ಜರಗುತ್ತಿತ್ತು. ಪ್ರಾಥಮಿಕ ಶಾಲೆ ಗಳ ಶಿಕ್ಷಕರು ಟ್ರೇನಿಂಗ ಕಾಲೇಜುಗಳ ಪ್ರಿನ್ಸಿಪಾಲರು ಹಾಗೂ ಶಿಕ್ಷಣಾಧಿಕಾರಿಗಳಿಗಾಗಿ ಅಲ್ಪಾವಧಿ ತರಬೇತಿ ವರ್ಗಗಳನ್ನು ತೆರೆಯಲಾಯಿತು. ಧಾರವಾಡ ವಿಭಾಗದ ನಾಲ್ಕು ಜಿಲ್ಲೆಗಳಲ್ಲಿ ಜೀವನ ಶಿಕ್ಷಣ ಚಟುವಟಿಕೆಗಳನ್ನು ಸಂಯೋಜಿಸುವ ಉದ್ದೇಶದಿಂದ ಕ್ಯಾಫ್ಟ ಅರ್ಗನಾಯ ಜರ ಜಾಗೆಯನ್ನು ೧೯೪೯ರಲ್ಲಿ ನಿರ್ಮಾಣಮಾಡ ಲಾಯಿತು. ಹಳೇಮುಂಬಯಿ ರಾಜ್ಯದಲ್ಲಿ ಇವೆಲ್ಲ ಕಾರ್ಯಕಲಾಪಗಳ ಮೇಲ್ವಿಚಾರಣೆಗಾಗಿ ಶಿಕ್ಷಣ ಶಾಖೆಯ ಡಾಯರೆಕ್ಟರರ ಕಚೇರಿಯಲ್ಲಿ ಜೀವನ ಶಿಕ್ಷಣ ಡೆಪ್ಯೂಟಿ ಡಾಯರೆಕ್ಟರರೆಂಬ ಜಾಗೆಯನ್ನೂ ನಿರ್ಮಿಸಿದರು.

ಮೇಲಿಂದ ಮೇಲೆ ಜೀವನ ಶಿಕ್ಷಣದ ಪ್ರಗತಿಯನ್ನು ಅಳೆಯುವದಕ್ಕಾಗಿ ಹಾಗೂ ಅವಶ್ಯಕಂಡ ಮಾರ್ಪಾಟು ಗಳನ್ನು ಮಾಡುವದಕ್ಕಾಗಿ ಕೆಲವು ಸಮಿತಿಗಳನ್ನು ನೇಮಿಸಿ ಸಮಿತಿಯವರ ಸಲಹೆ ಸೂಚನೆಗಳನ್ನು ಪಡೆಯ ಲಾಯಿತು. ಜೀವನ ಶಿಕ್ಷಣದ ಪ್ರಯೋಗದ ಮೊದಲಿನ ೫ ವರ್ಷಗಳ ಒಂದು ಸಾಧನೆಯನ್ನು ಅಳೆದು ಅದರ ಪ್ರಗತಿಯನ್ನು ಪರಿಶೀಲಿಸಿ ಜೀವನ ಶಿಕ್ಷಣವನ್ನು ಮುಂದುವರಿಸುವದಕ್ಕಾಗಿ ನಿಯಮಿಸಿದ ೧) ಸಾರ್ಜಂಟ್ ಸಮಿತಿಯು ೧೯೪೪ರಲ್ಲಿ ತನ್ನ ವರದಿಯನ್ನು ಒಪ್ಪಿಸಿತು. ೨) ಇದಲ್ಲದೆ ಡಾ. ವ್ಹಿ. ವ್ಹಿ. ಕಾಮತ ಇವರು ಜೀವನ ಶಿಕ್ಷಣ ಶಾಲೆಗಳಲ್ಲಿಯ ಹಾಗೂ ಇತರ ಶಾಲೆಗಳಲ್ಲಿಯ ವಿದ್ಯಾರ್ಥಿಗಳ ಅಭ್ಯಾಸವನ್ನು ತುಲನಾತ್ಮಕವಾಗಿ ಪರಿಶೀಲಿಸುವದಕ್ಕಾಗಿ ನಿಯಮಿಸಲ್ಪಟ್ಟರು ೩) ಶ್ರೀ ರಾಮಚಂದ್ರನ್ ಇವರ ನೇತೃತ್ವದಲ್ಲಿ ಕೇಂದ್ರ ಸರಕಾರದಿಂದ ನಿಯಮಿಸಲ್ಪಟ್ಟ ಮೌಲ್ಯಮಾಪನ (ಅಸೆಸ್ಮೆಂಟ) ಸಮಿತಿಯು ಸಹ ಈ ದಿಶೆಯಲ್ಲಿ ಮಹತ್ವ ವಾದ ಹಾಗೂ ವಿವರವಾದ ಸಲಹೆ ಸೂಚನೆಗಳನ್ನು

ಕೊಟ್ಟಿದೆ. ಈ ಮಹನೀಯರು ಮಾಡಿದ ಶಿಫಾರಸುಗಳು ಜೀವನ ಶಿಕ್ಷಣ ಬೆಳವಣಿಗೆಗೆ ಒಳ್ಳೇ ಸಹಾಯಕಾರಿಯಾಗಿ ಪರಿಣಮಿಸಿದವು.

ಇದೇ ಪ್ರಕಾರ ಮೈಸೂರ ರಾಜ್ಯದವರು ಇತ್ತೀಚೆಗೆ ಜೀವನ ಶಿಕ್ಷಣದ ಪ್ರಗತಿಗಾಗಿ ಕೈಕೊಂಡಂಥ ಯೋಜನೆಗಳು ಗಮನಾರ್ಹವಾಗಿವೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಧಾರವಾಡ ವಿಭಾಗದಲ್ಲಿ ಸಾದಾ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳನ್ನಾಗಿ ಪರಿವರ್ತಿಸುವದಕ್ಕಾಗಿ ೧೯೫೬–೫೭ರಲ್ಲಿ ೨೪,೫೦೦ ರೂಪಾಯಿಗಳನ್ನೂ ೧೯೫೭–೫೮ರಲ್ಲಿ ೧.೫೦,೭೦೦ ರೂಪಾಯಿಗಳನ್ನೂ ವೆಚ್ಚಮಾಡಿದ್ದಾರೆ. ಅಲ್ಲದೆ ೧೯೫೮–೫೯ರಲ್ಲಿ ಈ ಕಾರ್ಯಕ್ಕಾಗಿ ೧,೧೭,೬೧೧ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದಾರೆ. ಮೂಲೋದ್ಯೋಗ ಕೋಣೆಗಳನ್ನು ಕಟ್ಟಿಸುವದಕ್ಕಾಗಿ ಕಳೆದ ೨ವರ್ಷಗಳಲ್ಲಿ ೬೦,೨೦೦ ರೂಪಾಯಿಗಳನ್ನು ವೆಚ್ಚಮಾಡಿದ್ದಾರೆ. ಹಾಗೂ ೨೮ ಹೊಸ ಜೀವನ ಶಿಕ್ಷಣ ಶಾಲೆಗಳನ್ನು ತೆರೆದಿದ್ದಾರೆ. ಪ್ರಾಥಮಿಕ ಶಾಲೆಗಳ ವಿಚಾರಗೋಷ್ಠಿಗಾಗಿ ೧೭೦೦೭ ರೂಪಾಯಿಗಳನ್ನು ವೆಚ್ಚಮಾಡಿದ್ದಾರೆ. ಅಲ್ಲದೆ ೧೯೫೮–೫೯ರಲ್ಲಿ ೧೩,೧೨೫ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದಾರೆ. ಮತ್ತು ಅಲ್ಪಾವಧಿ ತರಬೇತಿಗಾಗಿ ೭೦೦೦ ರೂಪಾಯಿಗಳನ್ನು ವೆಚ್ಚಮಾಡಿದ್ದಾರೆ. ಈ ಯೋಜನೆಯ ಅಂಗವಾಗಿ ಅಖಿಲ ಭಾರತ ಜೀವನ ಶಿಕ್ಷಣ ವಿಚಾರಗೋಷ್ಠಿಯು ನಮ್ಮ ಮೈಸೂರ ರಾಜ್ಯದಲ್ಲಿ ಹಾಂಸಭಾವಿಯಲ್ಲಿ ೧೯೫೮ರಲ್ಲಿ ಜರುಗಿತು. ಪೂಜ್ಯ ವಿನೋಬಾಜಿಯವರೂ ಭಾಗವಹಿಸಿದ ಎಲ್ಲ ರಾಜ್ಯಗಳ ಡಾಯರೆಕ್ಟರರೂ ಕೆಲ ಶಿಕ್ಷಣ ಮಂತ್ರಿಗಳೂ ಇತರ ಉಚ್ಚಮಟ್ಟದ ಶಿಕ್ಷಣಾಧಿಕಾರಿಗಳೂ ಇವರೆಲ್ಲರಿಗೆ ಸೂಕ್ತ ಹಿತೋಕ್ತಿಯನ್ನು ಕೊಟ್ಟರು. ಜ್ಞಾನ ಸ್ವಾವಲಂಬನ ತತ್ವವನ್ನು ಬಿಂಬಿಸಿದರು. ೧೯೫೯ನೆಯ ಜಾನೇವರಿಯಲ್ಲಿ ಧಾರವಾಡ ಹಾಗು ಗುಲ್ಬರ್ಗಾ ವಿಭಾಗಗಳ ಕೆಲವು ಪ್ರಾಥಮಿಕ ಶಿಕ್ಷಕರು, ಶಿಕ್ಷಣಾಧಿಕಾರಿಗಳು, ಪ್ರಾಧ್ಯಾಪಕರು–ಇವರ ವಿಚಾರಗೋಷ್ಠಿಯು ಧಾರವಾಡದಲ್ಲಿ ಸೇರಿ "ಸಾದಾ ಶಾಲೆಗಳನ್ನು ಜೀವನ ಶಿಕ್ಷಣ ಶಾಲೆಗಳನ್ನಾಗಿ ಅತಿ ಶೀಘ್ರದಲ್ಲಿಯೇ ಪರಿವರ್ತಿಸುವದು" ಈ ವಿಷಯವನ್ನು ಕುರಿತು ವಿಚಾರ ವಿನಿಮಯ ಮಾಡಿತು. ಇದಲ್ಲದೆ ಜೀವನ ಶಿಕ್ಷಣ ಶಾಲೆಗಳಿಗೆ ಉಪಕರಣಗಳನ್ನು ಪೂರೈಸುವದು, ಸ್ಥಳಾವಕಾಶವನ್ನು ಒದಗಿಸಿ ಕೊಡುವದು, ಜೀವನ ಶಿಕ್ಷಣ ವೈಶಿಷ್ಟ್ಯಗಳಿನಿಸಿದ ಚಟುವಟಿಕೆಗಳನ್ನು ಕೈಕೊಳ್ಳುವದರಲ್ಲಿ ವಿಶೇಷ ಯೋಜನೆಗಳನ್ನು ಕೈಕೊಂಡಿದ್ದಾರೆ.

ಇನ್ನು ಜೀವನ ಶಿಕ್ಷಣವು ಸಾಧಿಸಿದ ಪ್ರಗತಿಯ ಬಗೆಗೆ ಸಂಕ್ಷಿಪ್ತದಲ್ಲಿ ಹೇಳಬೇಕಾದರೆ ಬಾಲಕನಲ್ಲಿ ಶ್ರಮ ಗೌರವ, ಸಮಾನತೆ, ಸ್ವಾವಲಂಬನ, ಪ್ರೇಮ, ಸಹಕಾರ, ಸಹಜೀವನ, ಆತ್ಮವಿಶ್ವಾಸ, ದಿಟ್ಟತನ, ನಾಗರಿಕತೆ ಮೊದಲಾದ ಗುಣಗಳು ಒಡಮೂಡಿ ಆತನ ಜೀವನ ದೃಷ್ಟಿಕೋನವನ್ನೇ ಉಚ್ಚಮಟ್ಟಕ್ಕೆ ಬದಲಾಯಿಸಿದೆ. ಆತನಲ್ಲಿರುವ ಉತ್ಪಾದಕ ಶಕ್ತಿಯನ್ನು ಬೆಳಿಸಿಕೊಳ್ಳಲು ಅವಕಾಶ ಕೊಟ್ಟಿದೆ. ಇದಲ್ಲದೆ ವಿಷಯಾಭ್ಯಾಸದ ಮಟ್ಟವನ್ನು ಎತ್ತರಿಸಲು ತಕ್ಕ ಅವಕಾಶವನ್ನು ಕೊಟ್ಟಿದೆ; ಆತನ ಬೌದ್ಧಿಕ, ಶಾರೀರಿಕ ಹಾಗು ಮಾನಸಿಕ ಸರ್ವಾಂಗೀಣ ಉನ್ನತಿಯಾಗುವದರಲ್ಲಿ ಸಂದೇಹವಿಲ್ಲ.

## ಜೀವನ ಶಿಕ್ಷಣದ ಸಮಸ್ಯೆಗಳು

ಜೀವನ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಕಾರ್ಯರೂಪದಲ್ಲಿ ತರುವದಕ್ಕಾಗಿ ದೊಡ್ಡ ಪ್ರಮಾಣದಿಂದ ಬಂದಂಥ ಸಮಸ್ಯೆಗಳಲ್ಲಿ ಕೆಳಗಿನವುಗಳು ಮುಖ್ಯವಾಗಿವೆ.

೧) ಅನೇಕ ರಾಜ್ಯ ಸರಕಾರಗಳಲ್ಲಿ ಕಂಡುಬರುವ ಹಣದ ಕೊರತೆ.

೨) ಸಾಕಷ್ಟು ತರಬೇತಿ ಹೊಂದಿದ ಶಿಕ್ಷಕರನ್ನು ಹಾಗು ಅಧಿಕಾರಿಗಳನ್ನು ಪೂರೈಸುವ ಕೊರತೆ ಮತ್ತು ಶ್ರದ್ಧೆಯಿಂದ ದುಡಿಯುವವರ ಕೊರತೆ.

೩) ಜೀವನ ಶಿಕ್ಷಣದ ತತ್ವ, ಇತಿಹಾಸ, ಬೋಧನ ಕ್ರಮ ಇತ್ಯಾದಿ ಸಂಗತಿಗಳನ್ನು ತಿಳಿದುಕೊಳ್ಳಲು ತಕ್ಕ ಸಾಹಿತ್ಯದ ಅಭಾವ.

ಈ ಸಮಸ್ಯೆಗಳನ್ನು ಹೋಗಲಾಡಿಸುವದಕ್ಕಾಗಿ ಸರಕಾರದವರು ಅನೇಕ ಯೋಜನೆಗಳನ್ನು ಕೈಕೊಂಡಿದ್ದು ಕೆಳಗೆ ಕಾಣಿಸಿದವುಗಳು ಹೆಚ್ಚು ಪರಿಣಾಮಕಾರಿಯಾಗಿ ಕಂಡುಬಂದಿವೆ.

೧) ಅದಷ್ಟು ಶೀಘ್ರದಲ್ಲಿ ಯಾವತ್ತು ಸಾದಾ ಪ್ರಾಥಮಿಕ ಶಾಲೆಗಳನ್ನು ತೀರ ಕಡಿಮೆ ವೆಚ್ಚದಿಂದ ಶಕ್ಯವಾದಷ್ಟು ಏನೂ ವೆಚ್ಚವಿಲ್ಲದೆ ಜೀವನ ಶಿಕ್ಷಣ ಶಾಲೆಗಳನ್ನಾಗಿ ಪರಿವರ್ತಿಸುವ ಕುರಿತು ಶ್ರೀ. ಜಿ. ರಾಮಚಂದ್ರನ್ ಅವರು ಭಾರತ ಸರಕಾರದ ವತಿಯಿಂದ ಸೂಕ್ತ ಸಲಹೆ ಸೂಚನೆಗಳನ್ನು ನಿವೇದಿಸಿದ್ದಾರೆ. ಅವುಗಳನ್ನು ಧಾರವಾಡ ವಿಭಾಗದಲ್ಲಿ ಈಗಾಗಲೆ ಕಾರ್ಯರೂಪ

ದಲ್ಲಿ ತರಲಾಗಿದೆ. ಮತ್ತು ರಾಜ್ಯದ ಇತರ ಭಾಗದಲ್ಲಿ ಕಾರ್ಯರೂಪಕ್ಕಿಳಿಸುವದಕ್ಕಾಗಿ ಅಲ್ಲಲ್ಲಿ ವಿಚಾರ ಗೋಷ್ಠಿಗಳನ್ನು ಏರ್ಪಡಿಸಲಾಗಿದೆ.

೨) ಜೀವನ ಶಿಕ್ಷಣದಲ್ಲಿ ತರಬೇತಿ ಗೊಳಿಸುವದಕ್ಕಾಗಿ ಪ್ರಾಥಮಿಕ ಹಾಗು ಮಾಧ್ಯಮಿಕ ಹಂತಗಳಲ್ಲಿ ಅಲ್ಪಾವಧಿ ತರಬೇತಿ ವರ್ಗಗಳನ್ನು ಹೆಚ್ಚಾಗಿ ತೆರೆಯ ಬೇಕೆಂದು ಯೋಜಿಸಲಾಗಿದೆ.

ಮೈಸೂರ ರಾಜ್ಯದಲ್ಲಿ ಮಾಧ್ಯಮಿಕ ಮಟ್ಟದಲ್ಲಿ ಜೀವನ ಶಿಕ್ಷಣ ತರಬೇತುಗೊಳಿಸಿದೆ. ಈಗಾಗಲೇ ಧಾರವಾಡ ಹಾಗು ಹೊಸ್ಪೇಟೆಯಲ್ಲಿ ಎರಡು ಸಂಸ್ಥೆಗಳು ಕಾರ್ಯ ಮಾಡುತ್ತಿವೆ. ಇಂತಹ ನ್ನಾತ-ಕೋತ್ತರ ತರಬೇತಿ ಸಂಸ್ಥೆಗಳನ್ನು ಹೆಚ್ಚಿಸುವದಕ್ಕಾಗಿ ಕೇಂದ್ರಸರಕಾರವು ವಿಚಾರ ಮಾಡುತ್ತಿದೆ.

ಆಗಾಗ್ಗೆ ಜೀವನ ಶಿಕ್ಷಣದ ಯೋಜನೆಗಳಲ್ಲಿ ಮಾರ್ಗದರ್ಶನ ದೊರೆಯುವದಕ್ಕಾಗಿ ಕೆಲವು ತಾಲೂಕಿಗೆ ಒಂದರಂತೆ ಮಾದರಿ ಜೀವನ ಶಿಕ್ಷಣ ಶಾಲೆಯನ್ನು ತೆರೆ ಯುವದಕ್ಕಾಗಿ ಯೋಜನೆಯನ್ನು ಕೈಕೊಳ್ಳಲಾಗಿದೆ.

೩) ಶಿಕ್ಷಕರ ಮಾರ್ಗದರ್ಶನಕ್ಕಾಗಿ ಕೇಂದ್ರಸರಕಾರವು ಹಾಗು ಕೆಲವು ರಾಜ್ಯಸರಕಾರಗಳು ಶಿಕ್ಷಕರ ಕೈಪಿಡಿಗಳನ್ನು ಪ್ರಕಟಿಸಿವೆ.

ಇದಲ್ಲದೆ ಇತರ ಉಪಯುಕ್ತ ಸಾಹಿತ್ಯವನ್ನು ನಿರ್ಮಿಸುವದಕ್ಕಾಗಿ ಕೇಂದ್ರ ಸರಕಾರದಲ್ಲಿ ಒಂದು ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಇದರಂತೆ ಮೈಸೂರ ಹಾಗು ಇತರ ರಾಜ್ಯಸರಕಾರಗಳು ಇತ್ತೀಚೆಗೆ ಸಂಶೋಧನ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ.

ಇನ್ನು ಜೀವನ ಶಿಕ್ಷಣವು ಕೇವಲ ಪ್ರಾಥಮಿಕ ಮಟ್ಟದಲ್ಲಿ ಉಳಿಯದೆ ಅದನ್ನು ಮಾಧ್ಯಮಿಕ ಹಾಗು ಉಚ್ಚಮಟ್ಟದ ಶಿಕ್ಷಣ ಹಂತದಲ್ಲಿ ವಿಸ್ತರಿಸುವದಕ್ಕಾಗಿ ನಾನಾ ಯೋಜನೆಗಳನ್ನು ಕೈಕೊಳ್ಳಲಾಗಿದೆ. ಅವುಗಳಲ್ಲಿ ಕೆಳಗಿನವುಗಳು ಕೆಲವೊಂದಾಗಿವೆ.

ರಾಜ್ಯಸರಕಾರಗಳು ಜೀವನ ಶಿಕ್ಷಣೋತ್ತರ ಶಾಲೆಗಳನ್ನು ಸ್ಥಾಪಿಸುವ ಯೋಜನೆಯು ಈ ದಿಶೆಯಲ್ಲಿ ಬಿಹಾರ ಸರಕಾರವು ಜೀವನ ಶಿಕ್ಷಣೋತ್ತರ ಶಾಲೆಗಳನ್ನು ಸ್ಥಾಪಿಸಿದೆ. ಮುಂಬಯಿ ರಾಜ್ಯದಲ್ಲಿ ಈಗಾಗಲೇ ಕೆಲವು ಕೆಲಸ ಮಾಡುತ್ತಿವೆ. ಇದಲ್ಲದೆ ಮೈಸೂರ ರಾಜ್ಯದಲ್ಲಿ ಜಿಲ್ಲೆಗೊಂದರಂತೆ ಇಂಥ ಶಾಲೆಗಳನ್ನು ಬೇಗನೆ ತೆರೆಯುವ ಯೋಜನೆ ಕೈಕೊಂಡಿರುವರು.

ಮಾಧ್ಯಮಿಕ ಶಾಲೆಯ ಅಭ್ಯಾಸ ಪತ್ರಿಕೆಯಲ್ಲಿ ಜೀವನ ಶಿಕ್ಷಣ ತತ್ವಕ್ಕನುಸರಿಸಿ ಜೀವನ ಶಿಕ್ಷಣದ ಅನೇಕ ವೈಶಿಷ್ಟ್ಯಗಳನ್ನು ಅಂದರೆ ಉದ್ಯೋಗ, ಸಮಾಜಸೇವೆ, ಸ್ವಯಂ ಶಾಶ್ವತ ಅಡಳಿತೆ, ಸಾಂಸ್ಕೃತಿಕ ಚಟುವಟಿಕೆಗಳು ಉಚ್ಚಮಟ್ಟದ ಶಿಕ್ಷಣದಲ್ಲಿ ಜೀವನ ಶಿಕ್ಷಣದ ಅಂಶಗಳು ಬರುವಂತೆ ಗ್ರಾಮೀಣ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸುವ ವಿಚಾರ ನಡೆದಿದೆ.

## ಜನರಲ್ಲಿ ಜೀವನ ಶಿಕ್ಷಣದ ಬಗೆಗೆ ಇರುವ ತಪ್ಪು ಕಲ್ಪನೆಗಳು ಹಾಗು ಅವುಗಳನ್ನು ಹೋಗಲಾಡಿಸುವ ಬಗೆ

ಸಾಮಾನ್ಯವಾಗಿ ಜನತೆಯಲ್ಲಿ ತಪ್ಪು ತಿಳವಳಿಕೆಯು ಕಂಡುಬರುವದೇನಂದರೆ, ಈ ಔದ್ಯೋಗೀಕರಣ ಯುಗದಲ್ಲಿ ನೂಲುವದು, ನೆಯ್ಗೆ, ಒಕ್ಕಲತನ, ಬಡಿಗತನ, ಇಂತಹ ಹಸ್ತವ್ಯವಸಾಯಗಳನ್ನಿಟ್ಟುಕೊಳ್ಳುವದರಿಂದ ಅದು ದೇಶದ ಪ್ರಗತಿಗೆ ಪೂರಕವಾಗಿದೆ. ಇದಲ್ಲದೆ ಮಕ್ಕಳನ್ನು ನೇಕಾರರನ್ನಾಗಿ ಬಡಿಗರನ್ನಾಗಿ ಬುದ್ಧಿರಹಿತ ಕೆಲಸಗಾರರನ್ನಾಗಿ ಮಾಡುವದು ಮಕ್ಕಳ ವಿಷಯಾಭ್ಯಾಸದ ಮಟ್ಟವನ್ನು ಕಡಿಮೆ ಮಾಡುತ್ತದೆ.

ಇದಕ್ಕೆ ಕೇಂದ್ರ ಶಿಕ್ಷಣ ಮಂತ್ರಿಗಳಾದ ಡಾ. ಶ್ರೀಮಾಳಿಯವರು ಒಳ್ಳೇ ಮಾರ್ಮಿಕವಾಗಿ ಜೀವನ ಶಿಕ್ಷಣವು ಔದ್ಯೋಗೀಕರಣಕ್ಕೆ ತಾರಕವಾಗಿದೆಯೇ ಹೊರತು, ಮಾರಕವಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಯಾವದಾದರೊಂದು ತಾಂತ್ರಿಕ ಕೆಲಸಕ್ಕೆ ಹಸ್ತಚಪಲತೆ, ಸತತ ಪ್ರಯತ್ನ, ಸಹಕಾರಿ ಪ್ರಯತ್ನ, ವೈಜ್ಞಾನಿಕ ದೃಷ್ಟಿಯ ಬೆಳವಣಿಗೆ ಮೊದಲಾದ ಗುಣಗಳು ತಳಹದಿಯಾಗಿವೆ. ಇಂತಹ ಗುಣಗಳನ್ನು ಜೀವನ ಶಿಕ್ಷಣವು ಚಿಕ್ಕಂದಿನಿಂದಲೇ ಮಕ್ಕಳಲ್ಲಿ ಒಡಮೂಡಿಸುವದು.

ವಿಷಯಾಭ್ಯಾಸದ ಮಟ್ಟದ ಪರಿಶೀಲನೆಯನ್ನು ಕುರಿತು ಡಾ. ಕಾಮತರವರು ಬಿಹಾರ ರಾಜ್ಯದಲ್ಲಿ ಶ್ರೀ ಮೋಹಸಿನ್ ಹಾಗು ಪ್ರೊ. ಚಟರ್ಜಿಯವರು ಅನೇಕ ರೀತಿಯಿಂದ ಪರಿಶೀಲಿಸಿ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಆ ಅಭಿಪ್ರಾಯಗಳ ಮೂಲಕ ಜೀವನ ಶಿಕ್ಷಣ ಶಾಲೆಯಲ್ಲಿಯ ಮಕ್ಕಳಲ್ಲಿ ಶ್ರಮ ಗೌರವ, ಸಾಹಸ, ಸ್ವಾವಲಂಬನ, ಸೇವೆ, ತ್ಯಾಗ ಇತ್ಯಾದಿ ಗುಣಗಳು ಒಡೆದು ಕಾಣಿಸುತ್ತವಲ್ಲದೆ ಕೆಲವೊಂದು ವಿಷಯಾಭ್ಯಾಸದಲ್ಲಿ ಕೆಳಗಿನ ವರ್ಗಗಳಲ್ಲಿ ಜೀವನ ಶಿಕ್ಷಣ ಶಾಲೆಯ

ಮಕ್ಕಳು ಹೆಚ್ಚು ಪ್ರಗತಿಯುಳ್ಳವರಾಗಿರುವರೆಂದು ಕಂಡು ಬರುತ್ತದೆ.

ಎಷ್ಟೇ ಭಿನ್ನಾಭಿಪ್ರಾಯಗಳು ಕಂಡುಬಂದರೂ ರಾಷ್ಟ್ರದಲ್ಲಿ ಜೀವನ ಶಿಕ್ಷಣಕ್ಕೆ ಒಲುವನ್ನು ತೋರಿಸುವಂತಹ ಯೋಜನೆಗಳು ಸಮಾಜದಲ್ಲಿ ಕಂಡುಬರುತ್ತವೆ: ಉದಾಹರಣಾರ್ಥವಾಗಿ ರಾಷ್ಟ್ರೀಯ ವಿಸ್ತರಣಾಯೋಜನೆ ಗ್ರಾಮೋದ್ಯೋಗಗಳು ಕಲ್ಯಾಣ ಕೇಂದ್ರಗಳು ಹೆಚ್ಚು ಆಹಾರ ಧಾನ್ಯ ಬೆಳೆಯಿಸುವ ಯೋಜನೆಗಳು ಇತ್ಯಾದಿ ಯೋಜನೆಗಳಲ್ಲಿ ಇರುವ ಕಾನೂನ ಕ್ರಮಗಳು ಜೀವನ ಶಿಕ್ಷಣ ಬೆಳವಣಿಗೆಗೆ ಪೋಷಕವಾಗಿವೆ.

### ಜೀವನ ಶಿಕ್ಷಣವು ಹೆಚ್ಚು ವೆಚ್ಚದಾಯಕವಾಗಿದೆಯೇ ಹೇಗೆ?

ಆರಂಭದಲ್ಲಿ ಇದಕ್ಕೆ ಸಾದಾ ಶಾಲೆಯಲ್ಲಿಯಕಿಂತ ಹೆಚ್ಚು ಹಣ ಬೇಕಾಗುತ್ತದೆಂಬುದು ನಿಜ. ಒಳ್ಳೇ ಶಿಕ್ಷಣವು ಸಿಗುತ್ತಿದ್ದರೆ ಹಣ ಹೆಚ್ಚು ವೆಚ್ಚವಾದರೂ ಅದು ಅಗತ್ಯವೆಂದು ತಿಳಿಯಬೇಕೆಂದು ಕೆಲವರ ಅಭಿಪ್ರಾಯವಿದೆ. ಅನುಭವದಿಂದ ಹಾಗು ಯೋಗ್ಯವಾದ ಸಂಘಟನೆ ಹಾಗು ಮಾರ್ಗದರ್ಶನದಿಂದ ಜೀವನ ಶಿಕ್ಷಣ ಶಾಲೆಯಲ್ಲಿಯು ಪ್ರತಿ ಮಗುವಿನ ಮೇಲೆ ಉಂಟಾಗುತ್ತಿರುವ ವೆಚ್ಚವು ಕಡಿಮೆಯಾಗುತ್ತ ಹೋಗುತ್ತಿರುವದೆಂದು ಅಂಕಿ ಸಂಖ್ಯೆಗಳಿಂದ ಗೊತ್ತಾಗಿದೆ. ಅಲ್ಲದೆ ಜೀವನ ಶಿಕ್ಷಣ ಶಾಲೆಗಳಲ್ಲಿಯ ೫-೬-೭ನೆಯ ಇಯತ್ತೆಗಳ ಮಕ್ಕಳ ಪ್ರತಿ ಮಗುವಿನ ವೆಚ್ಚವನ್ನು ಸಾಂಪ್ರದಾಯಕ ಶಾಲೆಗಳ ಅವೇ ತರಗತಿಯ ಮಕ್ಕಳ ಪ್ರತಿ ಮಗುವಿನ ವೆಚ್ಚದ ಗೂಡ ತುಲನೆ ಮಾಡಿ ನೋಡಲಾಗಿ ಜೀವನ ಶಿಕ್ಷಣ ಶಾಲೆಗಳ ಪ್ರತಿ ಮಗುವಿನ ವೆಚ್ಚವು ಉಳಿದ.ಮಗುವಿನ ವೆಚ್ಚಕ್ಕಿಂತ ಕಡಿಮೆ ಇರುವದೆಂದು ರಾಷ್ಟ್ರೀಯ ಸಂಶೋಧನಾ ಮೂಲ ಶಿಕ್ಷಣ ಕೇಂದ್ರದವರು ಸಿದ್ಧಪಡಿಸಿದ ಅಂಕಿಗಳಿಂದ ಗೊತ್ತಾಗುತ್ತದೆ.

ಧಾರವಾಡ ವಿಭಾಗದ ಬಗೆಗೆ ಹೇಳಬೇಕೆಂದರೆ ಜೀವನ ಶಿಕ್ಷಣಕ್ಕಾಗಿಯೇ ಎಂದು ಪ್ರತಿವರ್ಷ ಮಾಡುತ್ತಿರುವ ವೆಚ್ಚವು ಮಕ್ಕಳ ಮೂಲೋದ್ಯೋಗದ ಫಲಿತಾಂಶದಿಂದ ಹೊರಟು ಹೋಗುತ್ತದೆ.

ಒಟ್ಟಿನಲ್ಲಿ ಜೀವನ ಶಿಕ್ಷಣವು ಜೀವಂತ ಶಿಕ್ಷಣವಾಗ ಬೇಕಾಗಿರುವದರಿಂದ ಅದರಲ್ಲಿ ಹೆಜ್ಜೆಹೆಜ್ಜೆಗೂ ಜೀವನ ಶಕ್ತಿಯನ್ನೂ ಚೈತನ್ಯವನ್ನೂ ತುಂಬುತ್ತ ಹೊರಟಿದ್ದಾಗಿದೆ.

ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಹಾಜರಿಯನ್ನು ಹೆಚ್ಚಿಸಲು ಒಂದು ಉಪಾಯ–

# 'ಬಾಲ ಮಂದಿರ'ಗಳು

ಲೇಖಕರು: ವ್ಹಿ. ಆರ್. ದೇಶಪಾಂಡೆ, ಬಿ.ಎ., ಎಮ್.ಇಡಿ. ಧಾರವಾಡ

ನಮ್ಮ ಭಾರತದ ಏಳ್ಗೆಗಾಗಿ, ಪ್ರಜಾಪ್ರಭುತ್ವದ ಬೆಳವಣಿಗೆಗಾಗಿ ನಮ್ಮ ದೇಶದಲ್ಲಿಯ ಎಲ್ಲ ಜನರು ಸುಶಿಕ್ಷಿತರು ಮತ್ತು ಸಾಕ್ಷರಿಗಳಾಗುವದು ಅತ್ಯಂತ ಅವಶ್ಯಕವಾಗಿದೆ. ನಮ್ಮ ದೇಶದಲ್ಲಿಯ ಎಲ್ಲ ಜನರೂ ಸಾಕ್ಷರರಾಗಬೇಕಾದರೆ ನಮ್ಮ ದೇಶದ ಎಲ್ಲ ಬಾಲಕರು ಪ್ರತಿದಿವಸ ಶಾಲೆಗಳಿಗೆಹೋಗಿ ವಿದ್ಯಾಭ್ಯಾಸ ಮಾಡುವದು ಅವಶ್ಯ. ಪ್ರಾಥಮಿಕ ಶಿಕ್ಷಣವು ವಿದ್ಯಾಭ್ಯಾಸದ ತಳಹದಿಯನ್ನು ಹಾಕಿಕೊಡುವದರಿಂದ ೬ರಿಂದ ೧೪ ವಯಸ್ಸಿನ ಎಲ್ಲ ಬಾಲಕರೂ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಪ್ರತಿದಿವಸ ಸರಿಯಾಗಿ ಹಾಜರಿದ್ದು ಅಭ್ಯಾಸ ಮಾಡಬೇಕು. ಆದರೆ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಹಾಜರಿಯು ಒಂದು ದೊಡ್ಡ ಪ್ರಶ್ನೆಯೇ ಆಗಿದೆ. ಅದರಲ್ಲಿಯೂ ಮೊದಲಿನ ೪ ವರ್ಗಗಳಲ್ಲಿಯ ಹಾಜರಿಯು ವರ್ಷದಲ್ಲಿಯ ಯಾವ ದಿವಸವೂ ೧೦೦ಕ್ಕೆ ೭೫ ರಷ್ಟು ಕೂಡ ಇರುವದಿಲ್ಲವೆಂದು ನಿರಾತಂಕವಾಗಿ ಹೇಳಬಹುದು. ಅದರಂತೆ ಮೇಲಿನ ವರ್ಗಗಳಿಂದ ಕೆಳಗಿನ ವರ್ಗಗಳಿಗೆ ಬಂದಂತೆ ಪಟದ ಮೇಲಿನ ಮಕ್ಕಳ ಸಂಖ್ಯೆ ಮತ್ತು ಅವುಗಳಿಗೆ ಗೈರಹಾಜರಿ ಪ್ರಮಾಣ ಕೂಡ ಹೆಚ್ಚಾಗುತ್ತ ಹೋಗುವದೆಂಬ ಮಾತು ಕೆಳಗೆ ಕಾಣಿಸಿದ ಒಂದು ಹಳ್ಳಿಯ ಶಾಲೆಯ ಅಂಕಿಸಂಖ್ಯೆಗಳಿಂದ ಗೊತ್ತಾಗುವದು.

| ವರ್ಗ | ಪಟದಮೇಲಿನ ಸಂಖ್ಯೆ | ತಿಂಗಳದ (ಡಿಸೆಂಬರ) ೧೯ಜಣ ಹಾಜರಿ ಸರಾಸರಿ | ನೂರಕ್ಕೆ ಪ್ರಮಾಣ (ಗೈರಹಾಜರಿ) |
|---|---|---|---|
| vii | ೭ | ೬ | ೧೪ |
| vi | ೭ | ೫ | ೨೯ |
| v | ೬ | ೪ | ೩೩ |
| iv | ೧೭ | ೧೧ | ೩೫ |
| iii | ೨೪ | ೧೩ | ೪೬ |
| ii | ೩೩ | ೧೫ | ೫೫ |
| i | ೧೩೧ | ೪೯ | ೬೩ |

ಮೇಲೆ ಕಾಣಿಸಿದ ಪರಿಸ್ಥಿಯು ನಮ್ಮ ಧಾರವಾಡ ಜಿಲ್ಲೆಯಲ್ಲಿಯ ಪ್ರತಿಯೊಂದು ಶಾಲೆಯಲ್ಲಿ ಅದರಲ್ಲಿಯೂ ಗ್ರಾಮಾಂತರ ಪ್ರದೇಶದ ಶಾಲೆಗಳಲ್ಲಿ ವಿಶೇಷವಾಗಿ ಇದೆ ಎಂದು ಯಾರಿಗಾದರೂ ಕಂಡು ಬರುವದು. ಇಂಥ ಪರಿಸ್ಥಿತಿಯಲ್ಲಿ ಸಾರ್ವಜನಿಕರ ಎಷ್ಟು ಹಣ ಮತ್ತು ಶಕ್ತಿಯ ನಿರರ್ಥಕ ವ್ಯಯ ವಾಗುವದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇದೊಂದು ರಾಷ್ಟ್ರೀಯ ಮಹಾ ಅಪವ್ಯಯವೇ ಸರಿ. ಶಾಲೆಗಳಲ್ಲಿಯ ಈ ಪರಿಸ್ಥಿತಿಯನ್ನು ಸುಧಾರಿಸಲು ಸರಕಾರವು ತಕ್ಕಮಟ್ಟಿಗೆ ಪರಿಶ್ರಮ ಪಟ್ಟಿದೆ. ಅದು ಹಾಜರಿ ಸಂಖ್ಯೆಯನ್ನು ಸುಧಾರಿಸಲು ವಿಶೇಷ ಆಫೀಸರರ ಒಂದು ತಂಡವನ್ನೇ ನಿರ್ಮಿಸಿತ್ತು; ಈಗ ಮಧ್ಯಾಹ್ನ ಉಪಹಾರದ ಯೋಜನೆಯನ್ನು ಸಾವಕಾಶ ವಾಗಿ ಜಾರಿಯಲ್ಲಿ ತರುತ್ತಿದೆ. ಅದರಂತೆ ಕೆಲವು ಹಳ್ಳಿಗಳಲ್ಲಿ ಗ್ರಾಮಪಂಚಾಯತಿಗಳು ಒಬ್ಬ ಪ್ರತ್ಯೇಕ ಸಿಬ್ಬಂದಿಯನ್ನು ನೇಮಿಸಿ ಶಾಲೆಗೆ ಊರಲ್ಲಿಯ ಮಕ್ಕಳನ್ನು ಕರೆತರುವ ವ್ಯವಸ್ಥೆಯನ್ನು ಕೂಡ ಮಾಡಿತು. ಆದರೆ ಈ ಎಲ್ಲ ಉಪಾಯಗಳು ಕೂಡ ಶಾಲೆಗಳಲ್ಲಿ ಮಕ್ಕಳ ಹಾಜರಿ ಸುಧಾರಿಸುವಲ್ಲಿ ವಿಶೇಷ ಪರಿಣಾಮಕಾರಿಯಾಗಲಿಲ್ಲ ವೆಂಬುದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ.

**ಸೂಚಿತ ಉಪಾಯ :—** ಆದ್ದರಿಂದ ಈ ಪ್ರಶ್ನೆಯನ್ನು ಸಧ್ಯ ಜನತೆಯೇ ಮುಂದೆ ಬಂದು ಬಿಡಿಸದಿದ್ದರೆ ಬೇರೆ ಹಾದಿಯೇ ಉಳಿದಿಲ್ಲ. ಸರಕಾರದ ಎಲ್ಲ ಉಪಾಯಗಳು ನಿರರ್ಥಕವಾಗಲು ಶಿಕ್ಷಣದಲ್ಲಿ ಜನತೆಯ ಅನಾಸ್ಥೆ ಮತ್ತು ದಾರುಣ ಬಡತನಗಳೇ ಕಾರಣ. ಶಿಕ್ಷಕರು ಮತ್ತು ಸಂಬಂಧಿಸಿದ ಶಿಕ್ಷಣ ಖಾತೆಯ ಅಧಿಕಾರಿಗಳು ಜನರಿಗೆ ಶಾಲೆಗೆ ತಮ್ಮ ಮಕ್ಕಳನ್ನು ಕಳಿಸಿಕೊಡದಿರುವ ದಕ್ಕೆ ಕಾರಣಗಳನ್ನು ಕೇಳಿದರೆ ಅವರು ಹೇಳುವ ಕಾರಣ ಸಾಮಾನ್ಯವಾಗಿ ಕೆಳಗಿನಂತೆ ಇರುವವು. ಅ) ಮಕ್ಕಳನ್ನು ಹೊಲ–ಮನೆ ಕೆಲಸಕ್ಕೆ ಉಪಯೋಗಿಸಿಕೊಳ್ಳುವೆವು. ಬ) ಅವರನ್ನು ದನಕಾಯಲು ಕಳಿಸುವೆವು. ಕ) ಅವರನ್ನು ಮನೆಯಲ್ಲಿಯ ಸಣ್ಣ ಮಕ್ಕಳನ್ನು ಆಡಿಸಲು, ಎತ್ತಿ ಕೊಳ್ಳಲು ಉಪಯೋಗಿಸುವದು. ಡ) ಅವರು ಸುಗ್ಗಿಯಲ್ಲಿ ಕೂಲಿ ಗಳಿಸಲು ಹೋಗುವರು ಇತ್ಯಾದಿ. ಈ ಎಲ್ಲ ಕಾರಣಗಳನ್ನು ಹೆಕ್ಕಿ ನೋಡಿದರೆ ಅವುಗಳಲ್ಲಿ ಕೆಲವು ಕೇವಲ ನೆವಗಳು ಮಾತ್ರ ಇವೆ ಎಂಬುದು ತಿಳಿಯುವದು. ಆದರೆ ಅವೆಲ್ಲ ಕಾರಣಗಳಿಗೆ ಉಪಾಯ ಯೋಜಿಸಲು ಶಕ್ಯವಿದೆ ಎಂಬುದು ಕಂಡುಬರುವದು.

ಗೈರಹಾಜರಿ ಪ್ರಮಾಣವು ತೀಕ್ಷ್ಣವಿದ್ದ ವರ್ಗಗಳನ್ನು ನೋಡಿದರೆ, ಅಂದರೆ ಮೊದಲಿನ ೪ ವರ್ಗಗಳು. ಅವುಗಳಲ್ಲಿ ಅಭ್ಯಾಸ ಮಾಡುವ ಮಕ್ಕಳ ವಯೋಮಾನ ೬ ವರ್ಷದಿಂದ ೧೦ ವರ್ಷದ ವರೆಗೆ ಇರುತ್ತದೆ. ಇಷ್ಟು ಸಣ್ಣ ಮಕ್ಕಳು ದಿನವೆಲ್ಲವೂ ಶಾಲೆಯನ್ನು ತಪ್ಪಿಸಿ ಹೊಲ ಮನೆಯ ಕೆಲಸಗಳನ್ನು ಪಕ್ವತೆಯಿಂದ ನಿರ್ವಹಿಸುವನೆಂಬ ಮಾತು ಅರ್ಧ ಸತ್ಯ. ಮೇಲಾಗಿ ಅವರನ್ನು ಶಾಲೆಯ ವೇಳೆಯನ್ನು ಹೊರ್ತುಪಡಿಸಿ ತಮ್ಮ ಹೊಲ ಮನೆಯ ಕೆಲಸಗಳಿಗೆ ಉಪಯೋಗಿಸಿಕೊಳ್ಳಲು ಪಾಲಕರಿಗೆ ಬರುತ್ತದೆ. ಅವರು ದನಕಾಯುವ ಕೆಲಸಕೂಡ ಸರಿಯಾಗಿ ನಿರ್ವಹಿಸದೆ ಎಲ್ಲಿಯಾದರೂ ಆಟವಾಡುತ್ತ ನಿಂತು ಕೊಂಡು ಪಾಲಕರ ಕೋಪಕ್ಕೆ ಪ್ರತಿದಿವಸವೂ ಗುರಿಯಾಗುವ ಉದಾಹರಣೆಗಳು ಹೇರಳ. ಅವರು ಸುಗ್ಗಿಯಲ್ಲಿ ಕೂಲಿ ಮಾಡಿ ಗಳಿಸುವದೂ ಅಷ್ಟಕ್ಕಷ್ಟೇ. ಹೆಚ್ಚಾಗಿ ಶೂನ್ಯವೇ. ಇನ್ನು ಸಣ್ಣ ಮಕ್ಕಳನ್ನು ಎತ್ತಿಕೊಳ್ಳುವದು ಆಡಿಸುವದು ಕೂಡ ಅವರಿಗೆ ಒಗ್ಗದ ಮಾತು. ಒತ್ತಾಯದಿಂದ ಮಾಡಿದರೂ ಕೂಡ ಸಣ್ಣ ಮಕ್ಕಳಿಗೇ ಹೆಚ್ಚು ಅಪಾಯ ಮತ್ತು ಪಾಲಕರಿಗೆ ತೊಂದರೆ.

ಈ ಎಲ್ಲ ವಿಷಯಗಳನ್ನು ಪಾಲಕರಿಗೆ ತಿಳಿಹೇಳಿ ಅವರಲ್ಲಿ ಮಾನಸಿಕ ಭೂಮಿಕೆಯನ್ನು ತಯಾರ ಮಾಡುವದರ ಸಂಗಡ ಪ್ರತಿಯೊಂದು ಹಳ್ಳಿಯಲ್ಲಿ ಕನಿಷ್ಠ ಒಂದು **"ಬಾಲಮಂದಿರ"**ವನ್ನು ಸ್ಥಾಪಿಸಬೇಕು.

"ಬಾಲಮಂದಿರ"ದ ಕಲ್ಪನೆಯು ಕಾರ್ಯದಲ್ಲಿ ತರಲು ಸುಲಭವು, ಮತ್ತು ಇಚ್ಛಿತ ಪ್ರತಿಫಲದಾಯಿಯು ಇದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಬಾಲಮಂದಿರವು ಬಾಲಕರ ಮನೆ. ಅಲ್ಲಿ ೩ ರಿಂದ ೬ ವರ್ಷದ ವರೆಗಿನ (ಇನ್ನೂ ಪ್ರಾಥಮಿಕ ಶಾಲೆಗಳಲ್ಲಿ ಪ್ರವೇಶ ಪಡೆಯದೆ ಇದ್ದ) ಎಲ್ಲ ಬಾಲ–ಬಾಲಿಕೆಯರು ಬಂದು ಸೇರುವರು. ಸರಿಯಾಗಿ ವ್ಯವಸ್ಥೆಯಾದರೆ ೨ ವರ್ಷದ ಕೆಳಗಿನ ಮಕ್ಕಳಿಗೂ ಕೂಡ ಅಲ್ಲಿ ಪ್ರವೇಶವಿರಬೇಕು. ಅವುಗಳ ಮೇಲ್ವಿಚಾರಣೆ ಮಾಡುವವರು ಹಳ್ಳಿಯಲ್ಲಿಯ ಕೂಲಿ ಕೆಲಸ ಕೂಡ ಆಗದೆ ಸುಮ್ಮನೆ ಮನೆ ಹಿಡಿದು ಜುಳತುಕೊಂಡಿರುವ ಒಬ್ಬಿಬ್ಬರು ಮುದಿಕೆಯರು. ಅವರನ್ನು ಅಲ್ಪ ವೇತನ (ಹಣ ಅಥವಾ ಕಾಳು ಕಡಿ ರೂಪದಲ್ಲಿ) ದ ಮೇಲೆ ಊರ ಪ್ರಮುಖರು ಅಥವಾ ಪಂಚಾಯತಿಯವರು ನೇಮಿಸಬಹುದು. ಹಳ್ಳಿಯ ಸಾರ್ವಜನಿಕ ದೇವಾಲಯಗಳು ಈ 'ಬಾಲಮಂದಿರ'

ಗಳಾಗಬೇಕು. ಗ್ರಾಮದ ಕೆಲಸ ಮಾಡುವ ಸ್ತ್ರೀಯರು ತಮ್ಮ ಎಳೆಯ ಮಕ್ಕಳನ್ನು ಈ ಬಾಲಮಂದಿರಗಳಲ್ಲಿ ಕೊಟ್ಟು ೬ ವರ್ಷಕ್ಕೆ ಮೇಲ್ಪಟ್ಟ ಮಕ್ಕಳಿಗೆ ಶಾಲೆಗಳಿಗೆ ಹೋಗಲು ಅನುವು ಮಾಡಿಕೊಟ್ಟು ತಾವು ತಮ್ಮ ಕೆಲಸಕ್ಕೆ ಹೋಗಬೇಕು. ತಾವು ತಿರುಗಿ ಬರುವಾಗ ಬಾಲಮಂದಿರಗಳಿಂದ ತಮ್ಮ ಮಕ್ಕಳನ್ನು ಮನೆಗೆ ಕರೆದು ಕೊಂಡು ಹೋಗಬೇಕು. ಎರಡು ವರ್ಷಕ್ಕೆ ಕೆಳಗಿನ ಮಕ್ಕಳಿಗಾಗಿ ಬಾಲಮಂದಿರಗಳಲ್ಲಿ ಪಂಚಾಯತಿಯವರು 'ಹಾಲಿನ ಬಾಟ್ಲಿ'ಗಳ ವ್ಯವಸ್ಥೆ ಮಾಡಬಹುದು. ಉಳಿದವರಿಗೆ ಪಾಲಕರೇ ಮಧ್ಯಾಹ್ನದ ಉಪಹಾರವನ್ನು ಒದಗಿಸಬೇಕು. ಸ್ಥಳಿಕ ಪಂಚಾಯತಿಯವರು ಅಥವಾ ಹಿರಿಯರು ಈ ಬಾಲಮಂದಿರಗಳ ಮೇಲ್ವಿಚಾರಣೆ ಮಾಡಬೇಕು. ಈ ಬಾಲಮಂದಿರಗಳಲ್ಲಿ ಯಾವ ತರಹದ "ಪೈಕ್ಷಣಿಕ" ಕಾರ್ಯಕ್ರಮ ನಡೆಯಬಾರದು. ಕಥೆ, ಹಾಡು, ಆಟಗಳು ಮುಂತಾದವು ಈ ಮಂದಿರದ ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳಾಗಬಲ್ಲವು. ನೇಮಿಸಲ್ಪಟ್ಟ ಮುದುಕಿಯರು ಮಕ್ಕಳಿಗೆ ಕಥೆ ಹೇಳುವದು, ಮತ್ತು ಆಟವಾಡಿಸುವ ಕೆಲಸ ಮಾಡುವರು. ಗ್ರಾಮದಲ್ಲಿಯ ಉದಾರಿಗಳು ಮಂದಿರದ ಮಕ್ಕಳಿಗೆ ಆಟಿಗೆ ಸಾಮಾನು, ಮಧ್ಯಾಹ್ನದಲ್ಲಿ ಹಾಲು ವಗೈರೆ ಪೂರೈಸಬಹುದು.

ಪ್ರತಿಯೊಂದು ಗ್ರಾಮಕ್ಕೆ ಒಂದಾದರೂ ಇಂಥ ಮಂದಿರಗಳಿರಬೇಕು. ದೊಡ್ಡ ಗ್ರಾಮಗಳಲ್ಲಿ ೩-೪ ಓಣಿಗಳಿಗೆ ಒಂದು ಮಂದಿರಗಳಿರಬೇಕು.

"ಬಾಲಮಂದಿರ"ಗಳು ಗ್ರಾಮದ ಬಾಲಕರ ಅಕ್ಷರಶಃ ಉದ್ಧಾರವಾಗುವದೆಂದು ನನ್ನ ನಂಬಿಕೆ. ಅವರಿಗೆ ಅವು ವೈಯಕ್ತಿಕ ಸ್ವಚ್ಛತೆ, ನಿಯಮಿತತನ, ಸಾಂಘಿಕ ಜೀವನ, ಮಾನಸಿಕ ವಿಕಾಸ, ದೈಹಿಕ ಹಾಗು ಮಾನಸಿಕ ಆರೋಗ್ಯವನ್ನೂ ದೊರಕಿಸಿಕೊಡುವವು, ಮಕ್ಕಳು ಕೂಡ ಉಲ್ಲಾಸದಿಂದ ಕಾಲಕಳೆಯುವವು. ಮತ್ತು ಧಿಟ್ಟರೂ ಆಗುವರು. ಪಾಲಕರಿಗೆ, ಹೆಚ್ಚಾಗಿ ದೊರಗೆಲಸ ಮಾಡುವವರಿಗೆ ಮಕ್ಕಳ ರಕ್ಷಣೆ, ಪಾಲನ ಪೋಷಣೆಯ ಭಾರವು ಅಲ್ಪಾದರೂ ಕಡಿಮೆಯಾಗುವದು. ಇವು ಮಕ್ಕಳ ಹಾಜರಿಯನ್ನು ಸುಧಾರಿಸಲು ಪರಿಣಾಮಕಾರಿಯಾಗಿ ಸಹಾಯ ಮಾಡುವವಲ್ಲದೆ ಶಾಲೆಗಳಿಗೆ ಒಳ್ಳೇ ಧಿಟ್ಟ ಮತ್ತು ಶಿಸ್ತು ಪಾಲಿಸುವ ಮಕ್ಕಳನ್ನು ಪೂರೈಸಿ ಶಿಕ್ಷಣದ ಮಟ್ಟವನ್ನು ಹೆಚ್ಚಿಸುವವು. ಊರಲ್ಲಿ ನಾಗರಿಕರಿಗೂ ಇವು ಆರ್ಥಿಕ ದೃಷ್ಟಿಯಿಂದ ಭಾರವಾಗಲಾರವು ಮತ್ತು ಸ್ಥಳಿಕ ಒಬ್ಬಿಬ್ಬರು ಬಡ ಮುದಿಯರಿಗೆ ಅನ್ನದಾನ ಮಾಡಿದಂತಾಗುವದು.

ಈ ಎಲ್ಲ ಕಾರಣಗಳ ಮೂಲಕ 'ಬಾಲಮಂದಿರ'ಗಳು ಹಳ್ಳಿಯ ಬಾಳಿನ ಜೀವಾಳವಾಗಿ, ಅದನ್ನು ಪೆಚ್ಚಿನ ಮಟ್ಟಕ್ಕೆ ಒಯ್ಯಲು ಸಹಾಯವಾಗುವವಾದ್ದರಿಂದ ಪ್ರತಿಯೊಂದು ಹಳ್ಳಿಯಲ್ಲಿ ಇವುಗಳನ್ನು ಪ್ರಾರಂಭಿಸಿ ಲಾಭಪಡೆಯಬೇಕು.

(ಈ ಲೇಖನವು ಮುಂದಿನ ಸಂಚಿಕೆಯಲ್ಲಿ ಮುಂದು ವರೆಯುವದು.)

---

## ವಿನಂತಿ.

**ಲೇಖಕರಲ್ಲಿ:—** ಸರಿಯಾಗಿ ಓದಲಿಕ್ಕೆ ಬರುವಂತೆ ಸ್ಪಷ್ಟವಾಗಿ ಬರೆದು ಲೇಖನಗಳನ್ನು ಕಳುಹಿಸಬೇಕು. ಕಾಗದದ ಒಂದೇ ಮಗ್ಗಲು ಬರೆದರೆ ಒಳಿತು.

**ಚಂದಾದಾರರಲ್ಲಿ:—** ಪ್ರತಿ ತಿಂಗಳು ೧೫ನೆಯ ದಿನಾಂಕದ ನಂತರ ೧-೨ ದಿನಗಳಲ್ಲಿ ಜೀವನ ಶಿಕ್ಷಣವು ತಮಗೆ ಮುಟ್ಟಲೇಬೇಕು. ಮುಟ್ಟದಿದ್ದರೆ ಸಂಬಂಧಿಸಿದ ಅಂಚೆ ಮನೆಯಲ್ಲಿ ವಿಚಾರಿಸಿ. **ಪ್ರಧಾನ ಸಂಪಾದಕರು**

---

ಪ್ರಕಟವಾಗಿದೆ! ಪ್ರಕಟವಾಗಿದೆ!!

# "ಮಿರ್ಜಿ ಅಣ್ಣಾರಾಯ"

ಪ್ರಾಥಮಿಕ ಶಿಕ್ಷಕರೊಬ್ಬರ ವ್ಯಕ್ತಿತ್ವ ಹಾಗೂ ಸಾಹಿತ್ಯವನ್ನು ಪರಿಚಯ ಮಾಡಿಕೊಡುವ ಅಮೂಲ್ಯ ಗ್ರಂಥ.

ನಾಡಿನ ಅನೇಕ ವಿದ್ವಾಂಸರ ಮಿರ್ಜಿ ಅಣ್ಣಾರಾಯರ ಸಾಹಿತ್ಯ ಕೃತಿಗಳನ್ನು ಇದರಲ್ಲಿ ವಿಮರ್ಶಿಸಿದ್ದಾರೆ

ಅಖಿಲ ಭಾರತ ಖ್ಯಾತಿಯವರು ತಕ್ಕೊಂಡ ಅಣ್ಣಾರಾಯರ ಸಂದರ್ಶನವೂ ಇದರಲ್ಲಿ ಪ್ರಕಟವಾಗಿದೆ,

ಅಣ್ಣಾರಾಯರ ವ್ಯಕ್ತಿತ್ವ ಸಾಹಿತ್ಯಗಳ ಸಂಪೂರ್ಣ ಪರಿಚಯಕ್ಕೆ ಈ ಗ್ರಂಥವನ್ನು ಅವಶ್ಯವಾಗಿ ಓದಿರಿ.

ಕ್ರಯ: ೧-೮-೦ ಮಾತ್ರ ಅಂಚೆಪೆಚ್ಚು ಬೇರೆ.

**ಶಾಂತಿ ಸೇವಾ ಸದನ**

**ಪೋ. ಸೇಡಬಾಳ. ಜಿ. ಬೆಳಗಾಂವಿ.**

# ಜೀವನ ಶಿಕ್ಷಣ ಪ್ರಪಂಚದಲ್ಲಿ

## ಗ್ರುಪ್ ಶಿಕ್ಷಕ-ಶಿಕ್ಷಕಿಯರ ಶೈಕ್ಷಣಿಕ ಸಮ್ಮೇಲನ

| | ಶಾಲೆಯ ಹೆಸರು | ದಿನಾಂಕ | ಅಧ್ಯಕ್ಷರು |
|---|---|---|---|
| ೧. | ತಿರಗೂರ | ೩೦-೧೨-೧೯೫೮ | ಶ್ರೀ ಖತೀಬ |
| ೨. | ಪಾಳಾ | ೨೭-೧೧-೧೯೫೮ | ,, ಹುಕ್ಕೇರಿ |
| ೩. | ಸಿಂದಗಿ | ೧೪-೧೨-೧೯೫೮ | ಮೆ|| ಶಾಸನಾಧಿಕಾರಿಗಳು |
| ೪. | ತಿರಗಂಬಿ | ೨೩-೧೨-೧೯೫೮ | ,, ಆರ್. ಸಿ. ಕುಲಕರ್ಣಿ |
| ೫. | ನುಸಿಕೋಟಿ | ೨೦-೧೨-೧೯೫೮ | ,, ಎಸ್. ಆರ್. ಬೆಟಗೇರಿ |
| ೬. | ಹಿರೇನಂದಿಹಳ್ಳಿ | ೧೯-೧೨-೧೯೫೮ | ಮೆ. ಅ. ಡೆ. ಎ. ಇ. |
| ೭. | ಅಂಬಡಗಟ್ಟಿ | ೨೪-೧೨-೧೯೫೮ | ಮೆ|| ದಳವಾಯಿ, ಎ. ಓ. |
| ೮. | ಇಟಗಿ | ೩೦-೧೧-೧೯೫೮ | ,, ಆರ್. ಬಿ. ಲಕ್ಷ್ಮೇಶ್ವರ |
| ೯. | ಅರಳೇಶ್ವರ | ೧೪-೧೨-೧೯೫೮ | ,, ಬಿ. ಆರ್. ಮೊರಬ |
| ೧೦. | ಮಾಸೂರ | ೧೬-೧೨-೧೯೫೮ | ,, ಎಮ್. ಕೆ. ಪಾಟೀಲ |
| ೧೧. | ತಿಗಡಿ | ೨೪-೧೨-೧೯೫೮ | ಶ್ರೀ ಬಿ. ಬಿ. ಸತ್ತಿಗೇರಿ |
| ೧೨. | ಹಿರೇಕೆರೂರ | ೩೦-೧೧-೧೯೫೮ | ,, ಅ. ಡೆ. ಎ. ಇ. |

## ಸಮಾಜ ಶಿಕ್ಷಣ ಸಪ್ತಾಹ

| | ಶಾಲೆಯ ಹೆಸರು | ಆಚರಿಸಿದ ದಿನಾಂಕ | ಅಧ್ಯಕ್ಷರು |
|---|---|---|---|
| ೧. | ಕ.ಗಂ.ಮ.ಶಾ. ಗುಲಗಾಲಜಂಬಗಿ | ೧-೧೨-೧೯೫೮ | ಶ್ರೀ ಎಮ್. ಆರ್. ರಾಮತೀರ್ಥ |
| ೨. | ,, ಹಾರೊಬೆಳವಡಿ | ೭-೧೨-೧೯೫೮ | ,, ಶಿ. ಶ. ಪಾಟೀಲ |
| ೩. | ,, ಹಂಗನಕಟ್ಟಿ | ೧-೧೨-೧೯೫೮ | — |
| ೪. | ,, ಮದರಖಂಡಿ | ,, | — |
| ೫. | ,, ಮೊರಬ | ,, | ಶ್ರೀ ಬಿ. ಬಿ. ಹಂಜಿ |
| ೬. | ,, ಮಳಲಿ | ,, | ,, ಚ. ಶಿ. ಬೆಳವತ್ತಿ |
| ೭. | ,, ಇಲಕಲ್ಲ | ,, | ,, ಚನ್ನಪ್ಪನವರು ಹರಿಹರ |
| ೮. | ಉ.ಗಂ.ಮ.ಶಾ. ಇಲಕಲ್ಲ | ,, | ,, ಕೆ. ಎಲ್. ಗಡಾದ |
| ೯. | ಕ.ಗಂ.ಮ.ಶಾ. ಜೋಯಿಸರ-ಹರಳಹಳ್ಳಿ | ,, | ,, ಎಸ್. ಆರ್. ಪಾಟೀಲ |
| ೧೦. | ,, ಹಳಿಯಾಳ | ೭-೧೨-೧೯೫೮ | ,, ಜಿ. ಬಿ. ಕಿತ್ತೂರ |
| ೧೧. | ,, ತಿರಹಟ್ಟಿ | ೧-೧೨-೧೯೫೮ | ,, ಬಿ. ಡಿ. ಬುರ್ಲಿ |

## ಶೈಕ್ಷಣಿಕ ಪ್ರವಾಸ

| ಶಾಲೆಯ ಹೆಸರು | ಯಾವ ವರ್ಗದ ವಿದ್ಯಾರ್ಥಿಗಳು | ಸಂದರ್ಶನವಿತ್ತ ಮುಖ್ಯ ಸ್ಥಳಗಳು |
|---|---|---|
| ೧. ಬೇಲೂರ | ೭ ನೆಯ | ವಿಜಯ ನಗರ, ಹಂಪೆ, ತುಂಗಭದ್ರಾ ಆಣೆಕಟ್ಟು, ಸಕ್ಕರೆಯ ಕಾರಖಾನೆ ಮತ್ತು ಹುಲಗಮ್ಮನ ದೇವಸ್ಥಾನ. |
| ೨. ತಿಳವಳ್ಳಿ | ೬-೭ ನೆಯ | ಹಂಪೆ. ತುಂಗಭದ್ರಾ ಆಣೇಕಟ್ಟು, ಹುಬ್ಬಳ್ಳಿ. |
| ೩. ಶಿರೋಳ | ೪-೫-೬-೭ ನೆಯ | ವಿಜಾಪುರ, ಬಾದಾಮಿ, ಬನಶಂಕರಿ. |
| ೪. ಹುನಗುಂದ | ೫ ನೆಯ | ವಿಜಯನಗರ, ತುಂಗಭದ್ರಾ ಆಣೆಕಟ್ಟು, ಹೊಸಪೇಟೆ ಸಕ್ಕರೆಯ ಕಾರಖಾನೆ. |
| ೫. ಕೋತಬಾಳ | — | ವಿಜಯ ನಗರ, ತುಂಗಭದ್ರಾ ಆಣೇಕಟ್ಟು, ಮುನಿರಾಬಾದ ಸಕ್ಕರೆಯ ಕಾರಖಾನೆ. |
| ೬. ಹಳ್ಳೂರ | — | ಹಂಪೆ, ಹೊಸಪೇಟೆಯ ಆಣೇಕಟ್ಟು. |
| ೭. ಜೇಕಿನಕಟ್ಟಿ | — | ಹುಬ್ಬಳ್ಳಿ, ಧಾರವಾಡ, ಹಂಪಿ. |
| ೮. ಅನವಾಲ | ೭ ನೆಯ | ಗದಗ, ಹುಬ್ಬಳ್ಳಿ, ಹೊಸಪೇಟೆ, ಹಂಪೆ, ವಿಜಯನಗರ, ಪಂಪಾ ಸರೋವರ, ತುಂಗಭದ್ರಾ ಆಣೇಕಟ್ಟು. |

## ಜೀವನ ಶಿಕ್ಷಣ ಸಪ್ತಾಹದ ಅಂಗವಾಗಿ ಏರ್ಪಡಿಸಿದ ಜಿಲ್ಲಾ ಮಟ್ಟದ ಮೂಲೋದ್ಯಮ ಪ್ರದರ್ಶನ ಧಾರವಾಡ

ದಿ. ೨೫—೧—೫೯ ರಂದು ಪ್ರಾಸ್ತಾವಿಕವಾಗಿ ಶ್ರೀ ಎಸ್.ವ್ಹಿ. ಜೇವೂರ ಡಿ. ಡಾಯರೆಕ್ಟರ, ಧಾರವಾಡ ವಿಭಾಗ ಅವರು ಮುಖ್ಯ ಮಂತ್ರಿಗಳನ್ನು ಸ್ವಾಗತಿಸುತ್ತ ಈ ನಾಲ್ಕೂ ಜಿಲ್ಲೆಗಳು ಕಳೆದ ೨೦ ವರ್ಷಗಳಿಂದ ಜೀವನ ಶಿಕ್ಷಣ ಕ್ಷೇತ್ರದಲ್ಲಿ ಆದ ಪ್ರಗತಿಯನ್ನು ಸಂಕ್ಷಿಪ್ತವಾಗಿ ನಿವೇದಿಸಿ ಜೀವನ ಶಿಕ್ಷಣ ಸಪ್ತಾಹ ಹಾಗೂ ಅದರ ಅಂಗವಾಗಿ ಏರ್ಪಡಿಸಿದ ಜಿಲ್ಲಾಮಟ್ಟದ ಮೂಲೋದ್ಯಮ ಪ್ರದರ್ಶನದ ಉದ್ದೇಶಗಳನ್ನು ವಿವರಿಸಿದರು. ಮಾನ್ಯ ಮುಖ್ಯ ಮಂತ್ರಿಗಳು ಎಡೆಬಿಡದ ಕಾರ್ಯಕ್ರಮಗಳ ಮಧ್ಯದಲ್ಲಿ ಈ ಪ್ರದರ್ಶನದ ಉದ್ಘಾಟನೆಗಾಗಿ ತುಸು ಸಮಯ ಕಲ್ಪಿಸಿಕೊಂಡು ತಮ್ಮಲ್ಲಿಗೆ ಆಗಮಿಸಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿ ಮಾಲಾರ್ಪಣೆ ಮಾಡಿದರು.

ನಂತರ ಮಾನ್ಯ ಮುಖ್ಯ ಮಂತ್ರಿಗಳು ಈ ನೊದಲು ಉದ್ಘಾಟಿಸಿದ ಪ್ರದರ್ಶನ ಕುರಿತು ಪ್ರಸ್ತಾಪಿಸುವ ಪೂರ್ವದಲ್ಲಿ ತಮಗೆ ಪ್ರದರ್ಶನದ ಹಾಗೂ ಶಿಕ್ಷಣವನ್ನು ಕುರಿತು ವಿಶದವಾಗಿ ಚರ್ಚಿಸಲು ಸಮಯವು ಅತ್ಯಲ್ಪ ವಿದ್ದುದಕ್ಕೆ ವಿಷಾದಿಸಿದರು. ಮುಂದುವರೆದು ಪ್ರದರ್ಶನವು ಚಿಕ್ಕದಾಗಿದ್ದರೂ ಶಾಲೆಯ ಸಣ್ಣ ಮಕ್ಕಳು ತಯಾರಿಸಿದ ವಸ್ತುಗಳಿಂದ ಒಳ್ಳೇ ಆಕರ್ಷಕವಾಗಿಯೂ ಜೊಕ್ಕಟವಾಗಿಯೂ ಏರ್ಪಟ್ಟಿದ್ದುದು ಒಂದು ವಿಶೇಷವೆಂದು ಹೇಳಿ, ಮಕ್ಕಳಲ್ಲಿ ಹುದುಗಿದ್ದ ಶಕ್ತಿಗಳನ್ನೂ ಹಾಗೂ ಕಲೆಗಳನ್ನೂ ಅರಳಿಸಲು ಇದೊಂದು ಯೋಗ್ಯ ಸಾಧನವೆಂದು ಹೇಳಿದರು. ಮತ್ತು ಮುಂದುವರಿದು ಅವರು ಮಕ್ಕಳು ತಯಾರಿಸಿದ ಒಕ್ಕಲುತನದ ಉಪಕರಣಗಳನ್ನು ಕೊಂಡಾಡಿ ಅವರ ಪ್ರಾತ್ಯಕ್ಷಿಕೆಯ ಬಗೆಗೂ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಹಿಂದೆ ನಮ್ಮಲ್ಲಿ ಬಳಕೆಯಲ್ಲಿದ್ದ ಕಸೂತಿ ಮುಂತಾದ ಹೆಣ್ಣು ಮಕ್ಕಳ ಬಗೆಗೆ ಹೇಳುತ್ತ ಅವೀಗ ಮತ್ತೆ ಪುನರುಜ್ಜೀವನ ಗೊಳ್ಳುತ್ತಿರುವದು ಸಂತೋಷದ ಸಂಗತಿ ಎಂದರು. ಶಾಲೆಗಳಲ್ಲಿ ಒಕ್ಕಲುತನದ ಜ್ಞಾನವು ಚಿಕ್ಕಮಕ್ಕಳಿಗೆ ದೊರೆತು ಮುಂದೆ ನಮ್ಮಲ್ಲಿ ಇಂಥ ಸುಶಿಕ್ಷಿತ ಒಕ್ಕಲಿಗರಿಂದ ಒಕ್ಕಲುತನವ ಉತ್ಪಾದನೆಯು ಇಮ್ಮಡಿಗೊಳ್ಳುವ ದೆಂದೂ ಹಾರೈಸಿದರು. ಶಿಕ್ಷಣದ ಬಗೆಗೆ ಮುಂದುವರಿದು ಮಾತನಾಡುತ್ತ ಹಿಂದಿನ ಕೇವಲ ಪುಸ್ತಕೀಯ ಶಿಕ್ಷಣಕ್ಕೂ

ಇಂದಿನ ಜೀವನ ಶಿಕ್ಷಣಕ್ಕೂ ಅಂತರವನ್ನು ವಿವರಿಸಿ ಶಿಕ್ಷಣಕ್ಕೂ ಜೀವನಕ್ಕೂ ನಿಕಟವಾದ ನಿಬಿಡವಾದ ಸಂಬಂಧ ವಿರಬೇಕೆಂಬ ಮಾತನ್ನು ಒತ್ತಿಹೇಳಿದರು. ಮಕ್ಕಳಿಗೆ ಮೂಲೋದ್ಯಮದಲ್ಲಿ ತರಬೇತಿಯನ್ನು ಕೊಡುವದರಿಂದ ಮುಂದೆ ಅವರು ಜೀವನದಲ್ಲಿ ಸ್ವಾವಲಂಬಿ ವ್ಯಕ್ತಿಗಳಾಗಿ ಬಾಳಲು ಸಾಧ್ಯವಾಗುವದೆಂದು ತಿಳಿಯಪಡಿಸಿದರು.

ಉತ್ತರ ಕರ್ನಾಟಕದಲ್ಲಿ ಜೀವನ ಶಿಕ್ಷಣದಲ್ಲಿ ಆದ ಪ್ರಗತಿಯನ್ನು ನಾನೂ ಕಂಡುಕೊಂಡಿದ್ದೇನಲ್ಲದೆ ಅದನ್ನು ಇತರರೂ ಕೊಂಡಾಡುವದನ್ನು ನಾನು ಕೇಳಿದ್ದೇನೆ. ಇಲ್ಲಿ ಹೀಗೆ ಜೀವನ ಶಿಕ್ಷಣದಲ್ಲಿ ಪ್ರಗತಿಯಾಗಲು ಇಲ್ಲಿಯ ಶಿಕ್ಷಕರೂ ಹಾಗೂ ಅಧಿಕಾರಿಗಳೂ ಶ್ರದ್ಧೆಯಿಂದ ದುಡಿಯುತ್ತಿರುವದೇ ಕಾರಣವಾಗಿದೆ ಎಂದರು. ನವ ಮೈಸೂರು ರಾಜ್ಯದ ಇತರೆಡೆಗಳಲ್ಲಿಯೂ ಜೀವನ ಶಿಕ್ಷಣದ ಪ್ರಸಾರಕ್ಕಾಗಿ ಇಲ್ಲಿಯ ನುರಿತ ಜನರನ್ನು ಆ ಭಾಗಗಳಿಗೆ ವರ್ಗಾಯಿಸಿದಲ್ಲಿ ಇಲ್ಲಿಯ ಕಾರ್ಯಕರ್ತರು ಅಲ್ಲಿಗೆ ಹೋಗಲು ಹಿಂಜರಿಯಬಾರದೆಂದೂ ಹೇಳಿದರು.

ನಂತರ ಜಿಲ್ಲಾ ಶಿಕ್ಷಣಾಧಿಕಾರಿಗಳಾದ ಶ್ರೀ ಎಂ. ಜಿ. ಹಂದ್ರಾಳ ಅವರು ಮುಖ್ಯ ಮಂತ್ರಿಗಳ ಹಾಗೂ ಇತರರ ಆಭಾರ ಮನ್ನಿಸಿದ ನಂತರ ಸಭೆಯ ಕಾರ್ಯವು ಮುಕ್ತಾಯವಾಯಿತು.

# ಜೀವನ ಶಿಕ್ಷಣದಲ್ಲಿ ಶಿಕ್ಷಕ....

**ಲೇಖಕರು:– ಶ್ರೀ ಎಚ್. ಆರ್. ಬಂಡೀವಡ್ಡರ,** ಹಾರೋಬೆಳವಡಿ.

ಇಂದು ಪ್ರಚಲಿತವಿರುವ ಜೀವನ ಶಿಕ್ಷಣವು ನಮ್ಮ ದೇಶದ ಭವಿತವ್ಯತೆಯನ್ನು ನಿರ್ಧರಿಸುತ್ತಿರುವದು. ಪಾರತಾಂತ್ರಿಕ್ಯದ ಪ್ರಭಾವದಲ್ಲಿ ದೇಶ, ಜನತೆ ತನ್ನತನವನ್ನು ಕಳೆದುಕೊಂಡು ಅಸಾಯಕ ಸ್ಥಿತಿಯಲ್ಲಿ ಬಾಳುತ್ತಿತ್ತು. ಸ್ವಾತಂತ್ರ್ಯ ಪಡೆದ ನಂತರ ದೇಶ ಜಾಗೃತಗೊಂಡು ತನ್ನರುವಿನ ದಾರಿ ಹಿಡಿದಿದೆ. ಕಾಲಕಾಲಕ್ಕೆ ಪರಿಸರದ ಪ್ರಭಾವದಿಂದ ನಿಸರ್ಗದಲ್ಲಿ ಬದಲಾವಣೆ ಹೊಂದುವಂತೆ ಸಾಮಾಜಿಕ ರಂಗದಲ್ಲಿ ಬದಲಾವಣೆಯಾಯಿತು. ಮಾನವನ ಸರ್ವತೋಮುಖ ಅಭಿವೃದ್ಧಿ ಸಾಧನೆಯಾಗಬೇಕೆಂದು ಮನದಂದು ಹೊಸ ಶಿಕ್ಷಣವು ತಲೆ ಎತ್ತಿತ್ತು. ಜೀವನ ಶಿಕ್ಷಣವು ಸಮಾಜದ, ರಾಷ್ಟ್ರದ ಬೇಕು ಬೇಡಿಕೆಗಳನ್ನು ಪೂರೈಸುವದಾಗಿರುವದೆಂಬದು ನಿರ್ವಿವಾದ. ಆದರೆ, ಅಂಥ ಉಚ್ಚತಮವಾಗಿ ಜೀವನ ಶಿಕ್ಷಣವು ಸಾಗಬೇಕಾದುದು ಶಿಕ್ಷಣ ರಂಗದಲ್ಲಿ ಪ್ರಮುಖ ನಾಯಕನಾಗಿರುವ ಶಿಕ್ಷಕನ ಪ್ರಪ್ರಥಮ ಕರ್ತವ್ಯ! ಶಿಕ್ಷಕನಲ್ಲಿ ಸಜೀವ ಹೊಣೆಗಾರಿಕೆಯು ರೂಪಗೊಳ್ಳಬೇಕಾಗಿರುವದು.

ಶಿಕ್ಷಣ ರಂಗದಲ್ಲಿ ಶಿಕ್ಷಕನು ಮುಖ್ಯ ಸೂತ್ರಧಾರಿ. ಮಕ್ಕಳ ಭವಿಷ್ಯ ಜೀವನದ ಬುನಾದಿ ರಚಿಸುವ ಶಿಲ್ಪಜ್ಞ. ಅರಳುವ ಹೂವಿನ ಮೇಲಿನ ಮಂಜು, ಧೂಳು ಜಾಡಿಸಿದರೆ ಅದು ಪಕ್ವ ಹಾಗೂ ಸುಂದರವಾಗಿ ಅರಳುವದು. ಹೂವಿನಂತೆ ವ್ಯದು ಮಕ್ಕಳ ಮನಸ್ಸು! ಅಂಥ ಮೃದು ಮನಸ್ಸಿನಲ್ಲಿ ಶಿಕ್ಷಕನು ಸದ್ಗುಣಗಳ ಗಂಧ ಹೊಮ್ಮುವಂತೆ ಮಾಡಬೇಕಾಗಿದೆ. ಅಂಥ ಹೊಣೆಗಾರಿಕೆಯ ಅರಿವು ಶಿಕ್ಷಕನಲ್ಲಿ ಮೂಡಿ ನಿಲ್ಲಬೇಕಾಗಿರುವದು. ಇದು ಶಿಕ್ಷಕನ ವೃತ್ತಿಯಾಗಿ ಪರಿಣಮಿಸಬಾರದು. ಸಂಬಳದ ಆಳಿನಂತಿರಕೂಡದು. ಮೇಲು-ಕೀಳು, ಬಡ-ಬಲ್ಲಿದರೆಂಬ ಕೀಳ್ತನಕ್ಕೆ ಅವಕಾಶವಿರಬಾರದು. ವಿಶಾಲ ನೀಲಾಕಾಶದಂತೆ ಶಿಕ್ಷಕನ ಮನಸ್ಸು ಸ್ವಚ್ಛಂದ ಹಾಗು ನಿರ್ಮಲವಾಗಿರಬೇಕು. ಅಂದರೆ ಶಿಕ್ಷಕನಾಗಿ ಬಾಳಿದ್ದಕ್ಕೂ ಸಾರ್ಥಕವಾಗುವದು.

ಶಿಕ್ಷಣವು ಹಣದ ಸಂಪಾದನೆಯ ಮಾರ್ಗವಲ್ಲ. ಅದು ಕೈ-ಮನಗಳಿಗೆ ಸಂಸ್ಕಾರ ಕೊಡುವ ಸಾಧನ ಅಸ್ತ್ರ. ಹಿಂದಿನ ಗುಲಾಮಗಿರಿ, ಕಾರಕೂನಿ ಶಿಕ್ಷಣವು "ಇನ್ನೊಬ್ಬರ ತುತ್ತನ್ನು ಪರ್ಯಾಯವಾಗಿ ಅಪಹರಿಸಿ ತಿನ್ನುವದೆಂಬದಾಗಿತ್ತು. ಆದರೆ ಇಂದಿನ ಶಿಕ್ಷಣ ಅಂಥ ಅಶ್ಲೀಲ ವಿಚಾರಗಳಿಂದ ದೂರವಿದೆ. ಅಂದು ಶಿಕ್ಷಣ ಪ್ರಾಧಾನ್ಯವಾದರೆ, ಇಂದು ಮಗುವು ಪ್ರಾಧಾನ್ಯವಾಗಿರಿಸಿಕೊಂಡಿದೆ. ಮಾನವನು ತನ್ನ ಜೀವನಾದ್ಯಂತದವರೆಗೆ ಸುಖ-ಸಮೃದ್ಧಿ ಜೀವಿಯಾಗಿ ಬಾಳಲೂ, ಸಮಾಜದ ಐಕ್ಯತೆಯನ್ನು ಸಾಧಿಸಲೂ, ರಾಷ್ಟ್ರದ ಭದ್ರ ಬುನಾದಿಯನ್ನು ನಿರ್ಮಿಸಲೂ ಜೀವನ ಶಿಕ್ಷಣವು ಯೋಗ್ಯವಾಗಿದೆ. ಅದರ ಯೋಗ್ಯಾಯೋಗ್ಯತೆಗಳನ್ನು ಎತ್ತಿ ತೋರಿಸುವ ಹೊಣೆ ಶಿಕ್ಷಕನದು. ಸಮಾಜ ಜೀವನದ ವಿವಿಧ ಹಂತಗಳಲ್ಲಿ ತನ್ನತನದರುವಿನೊಂದಿಗೆ ಸರ್ವರೂ ಸದಾ ಸುಖಿಯಾಗಿ ಬಾಳಬೇಕೆಂಬುವ ಬೃಹತ್ ಬೆಳಕು. ಆ ಬೆಳಕನ್ನು

ಹಿಡಿದ ದಾರ್ಶನಿಕ ವ್ಯಕ್ತಿ ಶಿಕ್ಷಕ. ವ್ಯಕ್ತಿಯನ್ನು ಬೆಳಿಸಿ, ಸಮಾಜವನ್ನು ಉಳಿಸಿ, ರಾಷ್ಟ್ರವನ್ನು ಪ್ರಗತಿಯ ಮೇರುವಿನತ್ತ ಎಳೆದೊಯ್ಯುವ ಸಾಧಕ ರಥವನ್ನು ನಡೆಸುವ ಸಾರಥಿಯಂತೆ ಜೀವನ ಶಿಕ್ಷಣರಥವನ್ನು ಸಮಾಜವನ್ನು ಹತ್ತಿ ಸರಿಯಾದ ದಾರಿಗೆ ತರುವ ಸಾರಥಿ ಇಂದಿನ ಶಿಕ್ಷಕನು. ಶಿಕ್ಷಕನು ಉದಾತ್ತ ಹಾಗೂ ಸುಂದರ ಸ್ವರೂಪದ ದಿಗ್ದರ್ಶಕ. ಪ್ರೇಮ್ಮ, ತಾಳ್ಮೆ, ಸಹಕಾರ, ಸಹಾನುಭೂತಿಯ ಖಣಿ, ರಾಷ್ಟ್ರದ ರನ್ನವಣಿ. ಆದರೆ ಶಿಕ್ಷಕನ ಸ್ವರೂಪ ನೈಜವೇರಿ ಮಕ್ಕಳ ಮನುವಾಗಿರಬೇಕಾದುದು ಸ್ತುತ್ಯ ! ಮಕ್ಕಳಲ್ಲಿ ಶಾಲೆಯೆಂದರೆ ದಂಡಿಸುವ ಕೋಣೆ, ಶಿಕ್ಷಕನೆಂದರೆ ದಂಡಾಧಿಕಾರಿ, ದರ್ಪದ ತುತೂರಿ ಎಂಬ ಭಾವನೆ ಮೂಡಿಸಿಂತರೆ ಶಿಕ್ಷಣದ ಸಜೀವ ಕೊಲೆ. ಅಂಥ ಉದ್ವಿಘ್ನ ಕಲ್ಪನೆಗಳು ಎಳೆ ಮನದೆಲೆ ಮೊಳಕೆಯೊಡೆಯದಂತೆ ಶಾಲೆಯು ಮಕ್ಕಳ ಮಾನಸಿಕ ರಸದೂಟವನ್ನೂ, ಶಾರೀರಿಕ ಸಂವರ್ಧನೆಯನ್ನೂ ನೀಡುವ ಅಮೃತಮಯ ಮಂದಿರವೆಂಬ ಭಾವ ಬೆಳಗುವಂತೆ ಮಕ್ಕಳೊಡನೆ ಮೃದುವಾಗಿ ಶಿಕ್ಷಕ ಇಡಬೇಕಾಗಿರುವದು. ಸನ್ನಿವೇಶ ಹಾಗು ಸಮಯೋಚಿತವಾಗಿ ಮಕ್ಕಳ ಮನಸ್ಸಿನ ವಿಕಾಸವನ್ನೂ, ದೇಹದ ಬೆಳವಣಿಗೆಯನ್ನೂ ಮಾಡುವ ಗರಡಿಮನೆಯಾಗಿಯೂ ಇರಬೇಕು. ಆಗ ಶಿಕ್ಷಕ ವೃತ್ತಿಯ ಸಾಫಲ್ಯತೆಯು ಮೂಡಿ ನಿಲ್ಲುವದು. ಶಿಕ್ಷಕನು ಮಕ್ಕಳ ಮನು, ಸಮಾಜದ ಆಧಾರಸ್ತಂಭ, ದೇಶದ ಆನುಗೋಲು ಎಂದು ಹೇಳುವ ಮಾತು ಮಾರ್ಮಿಕವಾಗಿದೆ. ಶಿಕ್ಷಕ ವೃತ್ತಿ ತ್ಯಾಗದ ಮೂರ್ತಿಯು. ಸಮಾಜವಾಗಲೀ, ರಾಷ್ಟ್ರವಾಗಲೀ ಶಿಕ್ಷಕನಿಂದ ಬಯಸುವದು ತ್ಯಾಗವನ್ನು. ಶಿಕ್ಷಣ ಸಂಪತ್ತನ್ನು ಸಮಾಜಕ್ಕಾಗಿ, ರಾಷ್ಟ್ರಕ್ಕಾಗಿ, ಧಾರೆ ಎರೆಯುವ ದಾನಿಯಾಗಬೇಕು ಶಿಕ್ಷಕ. ಶಿಕ್ಷಕನು ಶ್ರೀಮಂತನಾಗಬೇಕಾಗಿಲ್ಲ. ಅವನು ಧೀಮಂತನಾಗಬೇಕು, ಜ್ಞಾನನಿಧಿಯಾಗಬೇಕು ಎಂಬುದೇ ಶಿಕ್ಷಣದ ಗುರಿ. ಧೀಮಂತನಾಗಿ, ಧೀಮಂತ ವ್ಯಕ್ತಿಗಳನ್ನು ಸೃಷ್ಟಿಸುವ ಸಿಲ್ಪಜ್ಞನಾಗಬೇಕಾಗಿರುವದು. ಶಿಕ್ಷಕನ ಸಂಪತ್ತು ಮಕ್ಕಳು. ಅವರನ್ನು ಯೋಗ್ಯ ಹಾಗು ಸದ್ಗುಣ ಮೂರ್ತಿಗಳನ್ನಾಗಿ ಮಾಡಿದರೆ ಸಮಾಜಕ್ಕೇವ ದಿವ್ಯ ಕೊಡುಗೆಯಾಗುವದು. ಅಂಥ ಪ್ರಗಲ್ಭ ಸಾಧನ ಶಿಕ್ಷಕನದು. ಅಂದಿಗಾತ ಗೌರವಿಸಿಕೊಳ್ಳುವನು. ವೃತ್ತಿಯು ಪೂಜ್ಯನೀಯವಾಗುವದು.

ಮಕ್ಕಳ ಜೀವನದಲ್ಲಿ ಧೈರ್ಯ, ಸಾಹಸ, ಪ್ರೇಮ ತಾಳ್ಮೆ, ಸಹಕಾರ, ಸದಾಚಾರ, ಧಾರ್ಮಿಕ ಮನೋಭಾವನೆ ಮುಂತಾದ ಉಚ್ಚತಮ ಗುಣಗಳನ್ನು ಎರಕ ಹೊಯ್ಯುವ ಮಹತ್‌ಕಾರ್ಯ ಶಿಕ್ಷಕನದು. ಅಂಥ ಸಾಧನೆಯಲ್ಲಿ ರೂಪಿತವಾಗಿರುವದೇ ಜೀವನ ಶಿಕ್ಷಣವು. ಆದರ್ಶ ಹಾಗು ಯಥಾರ್ಥಕಲ್ಪನೆಗಳನ್ನು ಮಾಡಿಕೊಡುವಲ್ಲಿ ಕರ್ಮ-ಜ್ಞಾನಗಳ ಸಮನ್ವಿತಗೊಳಿಸಬೇಕು. ಅಂಜಿಕೆ-ಅಳಕುತನವನ್ನು ನಿವಾರಿಸಿ ಸ್ವತಂತ್ರ ಹಾಗು ಸಮೃದ್ಧತಮವಾಗಿ ಬಾಳುವ ನಾಗರಿಕನನ್ನಾಗಿರಿಸುವದೇ ಇಂದಿನ ಶಿಕ್ಷಣದ ಮುಖ್ಯ ಹೊಣೆ.

ಇಂದಿನ ಶಿಕ್ಷಣದ ಬಗ್ಗೆ ತಿಳಿದೋ, ತಿಳಿಯದೋ ಅನೇಕ "ಕಸಬಿನ ಕೋಣೆ" ಎಂದು ಮೂಗು ಮುರಿಯುತ್ತಿರುವದು ಕೇಳಬರುತ್ತಿದೆ, ಅದರೊಂದಿಗೆ ಶಿಕ್ಷಕನೆಂದರೆ ಮಕ್ಕಳನ್ನು ಆಡಿಸುವ ಸಂಬಳದಾಳು ಎಂಬ ಕೆಲ್ಮಷ ಕಲ್ಪನೆಯು ಸಮಾಜದಲ್ಲಿ ಮೂಡಿರುವದು ವಿಷಾದಕರವೇ ಸರಿ. ಆದರೆ ಆ ಬಗ್ಗೆ ಅದರ ಸಜೀವ ಕಲ್ಪನೆಯನ್ನು ಮಾಡಿಕೊಡುವಲ್ಲಿ ಶಿಕ್ಷಕನು ಇಂದು ಪಾತ್ರವಹಿಸಬೇಕು. ಸಮಾಜದ ತಪ್ಪು ಕಲ್ಪನೆಗಳನ್ನು ದೂರಿಕರಿಸಲು ತನ್ನದೆ ಆದ ವಾಗ್ಝರಿಯಿಂದ ಎಚ್ಚರಿಸಿ ಅವರಿಗೆ ತಿಳುವಳಿಕೆ ಮಾಡಿಕೊಡುವ ಹೊಣೆಯೂ ಇದೆ. ಅದರರಿವು ಶಿಕ್ಷಕನಿಗೆ ಬೇಕಲ್ಲವೇ ?

ಇನ್ನು ಶಿಕ್ಷಕನು ತನ್ನ ಅರಿವು ಅರಗದಂತೆ ಅರಳಿಸಿಕೊಂಡಿರಬೇಕಾಗಿದೆ. ಸಮಾಜ ರಂಗದಲ್ಲಿ ವಿಷಗ್ರಾಯುವಾದ ವಾದ-ವಿವಾದಗಳನ್ನು ತಡೆದು ನಿಲ್ಲಿಸಲು ಸಮಾಜ ಜೀವಿಯಾಗಬೇಕು. ಅಲ್ಲವೆ ಸರಿಕರೊಂದಿಗೆ ತಾನು ವರ್ತಿಸುವ ವರ್ತನಿಕೆಗಳನ್ನು ಮಕ್ಕಳು ಅನುಕರಣ ಮಾಡಿಕೊಳ್ಳುವನೆಂಬದನ್ನು ಮರೆಯಬಾರದು. ಮಕ್ಕಳಲ್ಲಿ ಪ್ರಬಲವಾದ ಅನುಕರಣ ಪ್ರವೃತ್ತಿಯನ್ನು ಸದಾಚಾರಗಳ ಕಡೆಗೆ ತಿರುಗಿಸಬೇಕು. ಇದನ್ನು ಅರಿತು ಶಿಕ್ಷಕ ಎಲ್ಲ ರೀತಿಯಿಂದಲೂ ಆದರ್ಶ ಮೂರ್ತಿಯಾಗಬೇಕಾಗಿದೆ. ಅದರೊಂದಿಗೆ ಶಾಲೆಯ ಕ್ಷೇತ್ರ ಮಕ್ಕಳ ಪ್ರಪಂಚದ್ದು ಎನ್ನುವದೆ ಅದನ್ನು ವಿಸ್ತರಿಸಿಕೊಳಿಸಿ ಸಮಾಜದ ಪ್ರಾಪಂಚಿಕ ಕ್ಷೇತ್ರವಾಗಿರಿಸಬೇಕು. ಆದರೆ, ಇಂಥ ದಾರ್ಶನಿಕ ರಂಗ ಸ್ಥಲನಲ್ಲಿ ಶಿಕ್ಷಕನ ಮನಾಘಾತವಾಗುವದು ಖಂಡಿತ. ಸಮಾಜ ಆದರಿಸುವಲ್ಲಿ ಹಿಂಜರಿಯುವದು. ಶಿಕ್ಷಕನೆಂದರೆ ತಮ್ಮ ಅಳು-ಕಾಳುಗಳಿಗಿಂತಲೂ ಕಡೆಗೆಣಿಸಿಸೋಡುವದು. ಆದರೆ ಅದಕ್ಕಾಗಿ ಕುಗ್ಗ ಬೇಕಾಗಿಲ್ಲ. ಶಿಕ್ಷಕನು ಒಮ್ಮೆ ಕುಗ್ಗಿದರೆ ಅವನ ಬಾಳೇ ನೀರಸ. ವೃತ್ತಿ ನಿರುತ್ಸಾಹದಾಯಕ.

ಇನ್ನು ಶಿಕ್ಷಣದ ಪ್ರಗತಿ ಕೇವಲ ಶಿಕ್ಷಕನಿಂದಲೇ ಸಾಧ್ಯವೆಂದರೆ ಶಿಕ್ಷಕನು ಉಬ್ಬಿ ನಿಲ್ಲಬಹುದು. ತಾನೇ

ಶ್ರೀಷ್ಮನೆಂಬ ಗರುಪಿಕೆ ಮೂಡಬಹುದು. ಅವನ ಜತೆಗೆ ಸಮಾಜ ದುರಭಿಮಾನಕ್ಕೆ ಬಿದ್ದು, ಶಿಕ್ಷಕನತ್ತ ಕಾಕ ದೃಷ್ಟಿಯನ್ನು ತೂರಬಹುದು. ಅವನಿಗೆ ಸಹಾನುಭೂತಿ ತೋರದಿರಬಹುದು. ಅದರಂತೆ ಸರಕಾರವೂ ವಕ್ರೀಯ ದೃಷ್ಟಿಯನ್ನು ಹರಿಜಾಡಲೂ ಸಾಕು. ಕೇವಲ ಒಂದೇ ಹಸ್ತದಿಂದ ಚಪ್ಪಾಳೆ ನಾದ ಹೊರಡದು. ಶಿಕ್ಷಣ ಪ್ರಗತಿಗೆ ಶಿಕ್ಷಕ, ಸಮಾಜ, ಸರಕಾರ ಮೂರೂ ಏಕೀಕೃತವಾಗ ಬೇಕು. ಏಕರೂಪದಿಂದ ತಂಬೂರಿಯ ಮೂರು ತಂತಿ ಗಳಂತೆ ಹೊಂದಿಕೊಳ್ಳಬೇಕು, ಏಕನಾದವಾಗಿರಬೇಕು. ಅಂದರೆ ಎಲ್ಲವೂ ಸಾಧ್ಯ! ಆದರೆ ಇಂದು ಹಾಗಿಲ್ಲ. ಶಿಕ್ಷಕನ ಬಗ್ಗೆ ಸಮಾಜ ಯಾವ ತ್ಯಾಗ ಮಾಡಿದೆ? ಮಾಡುತ್ತಿದೆ? ಸರಕಾರವಾದರೂ ಎಷ್ಟು ಸಹಾಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ? ಕೊಡಲಿದೆ? ಶಿಕ್ಷಕನ ಜೀವನ ಎಂತಿದೆ? ಹೇಗಿದೆ? ಅವನ ಗತಿ-ಮತಿ ಗಳೇನು? ಅವನ ಅನುಭವ ಎಂತಹದು? ಎಂಬ ಪ್ರಶ್ನೆ ಗಳು ಉದ್ಭೂತವಾದಾಗ ಹೊರಡುವ ಉತ್ತರವೇನು? ಅನುಭವದ ಅಳತೆ ಲಾಕ್ಷಣಿಕವಾಗಿಲ್ಲ. ವಿದ್ಯಾರ್ಥಿಗಳ ಪಾಸಿನ ಸಂಖ್ಯೆ ಅವರು ಪರೀಕ್ಷೆಯಲ್ಲಿ ಪಡೆದ ಗುಣಗಳನ್ನೇ ಅಳತೆ ಗೋಲಾಗಿರಿಸಿಕೊಂಡಿರುವದು ವಿಷಾದಕರ. ಶಿಕ್ಷಣದಿಂದಾಗಲೀ, ಶಿಕ್ಷಕನಿಂದಾಗಲೀ ಬಯಸುವದು ಮಕ್ಕಳ ಪರೀಕ್ಷೆಯ ತೇರ್ಗಡೆ ಮಾತ್ರ! ಅವನ (ಮಕ್ಕಳ) ನಿಜವಾದ ಬುದ್ಧಿ ವಿಕಾಸವನ್ನು ಗುರುತಿಸುವಷ್ಟು ಶಕ್ತ ರಾಗಿರದ ಕಾರಣದಿಂದ ಶಿಕ್ಷಕನ ಜೀವನ ಇಂಥ ಬಿಗು ಮಾನದಲ್ಲಿ ರಹೀನವಾಗಿದೆ. ಸಮಾಜವು ಶಿಕ್ಷಕನನ್ನು ದೂರಿಕರಿಸಿರುವದು. ಬಯಸುವದು ಮಾತ್ರ ತ್ಯಾಗ! ಆ ತ್ಯಾಗಕ್ಕೆ ಕೊಡುವದು ಸಮಾಜದಿಂದ ದೂರಿಸುವ ಕಾಣಿಕೆ. ಇದಕ್ಕೂ ಒಂದಡಿ ಮುಂದಿಟ್ಟರೆ ಸಮಾಜ ಮುಸಿದು ಶಿಕ್ಷಕನಬಗ್ಗೆ ದೂರಿನ ದಳ್ಳುರಿಯನ್ನು ಹೊತ್ತಿಸಿ ಸರಕಾರದ ಮುಂದೆ ಅಪರಾಧಿಯನ್ನಾಗಿ ನಿಲ್ಲಿಸುವದು. ಸರಕಾರವು ಸಮಾಜದ ನುಡಿಯೇ ಸತ್ಯ. ಶಿಕ್ಷಕನ ನುಡಿ ಸತ್ಯವಿದ್ದರೂ ಅದು ಮಿಥ್ಯವೆಂದು ತೀರ್ಮಾನಿಸುವದು. ಇದಕ್ಕೆ ಕಾರಣವೇನು? ಎಂದರೆ ಬಹುಮತದ ಬಲವಾದ ಬಲೆಯೊಂದೇ ಸರಿ! ಈ ರೀತಿಯಾಗುವದರಿಂದ ಶಿಕ್ಷಕನು ಎಂಥ ಆದರ್ಶವಾದಿಯಾದರೂ ಆದರ್ಶದಿಂದ ಇಳಿ ಮುಖವಾಗುವದು. ಆದಕ್ಕಾಗಿ ಶಿಕ್ಷಣದ ಪ್ರಗತಿಯಲ್ಲಿ ಶಿಕ್ಷಕನಷ್ಟೇ ಹೊಣೆಗಾರ ವ್ಯಕ್ತಿಗಳೆಂದರೆ ಸಮಾಜ ಹಾಗು ಸರಕಾರವೆಂದು ನಿಃಸಂದೇಹವಾಗಿ ಹೇಳಬಹುದು. ಶಿಕ್ಷಕ ನಾದರೂ ಸಮಾಜದಿಂದ ಬಯಸುವದೇನು? ಕೇವಲ ಸಹಕಾರ–ಸಹಾನುಭೂತಿ, ಸರಕಾರದಿಂದಲಾದರೂ ಬಯಸುವದು ಹೆಚ್ಚಿನ ಸಂಬಳವನ್ನಲ್ಲ, ಕೇವಲ ಅನು ಕೂಲ ಸಗಿಸರ. ಇದಕ್ಕಿಂತ ಹೆಚ್ಚಿನದೇನಿದೆ? ಅದಕ್ಕಾಗಿ ಶಿಕ್ಷಣ ತಂಬೂರಿ ಅದಕ್ಕೆ ಬಿಗಿದತಂತಿಗಳು ಶಿಕ್ಷಕ,ಸಮಾಜ, ಸರಕಾರ. ಇವುಗಳ ಸಮನ್ವಿತ ಧ್ವನಿತನೇ ಪ್ರಗತಿಯ ಬೆಳಕು. ಇದರಿಂದ ತಜ್ಞರು ತಲೆ ತುರಿಸಿಕೊಂಡು ಪ್ರಗತಿ ಏಕೆಲ್ಲ ಎಂದು ಗೊಣಗುಟ್ಟುವರು. ಯಾವದೇ ಪ್ರಗತಿ ಗಾಮಿಯಾಗಬೇಕಾದರೆ ಅದಕ್ಕೆ ಹೊಂದಿಕೆಯಾದ ಸರ್ವರ ಏಕೀಕೃತ ಕರ್ಮಸಾಧನೆಯಿಂದಸಾಧ್ಯವು.

ಇಂದಿನ ಜೀವನ ಶಿಕ್ಷಣದಲ್ಲಿ ಶಿಕ್ಷಕನ ಪಾತ್ರ ಮುಖ್ಯ. ಆದರೆ ಕೇವಲ ಮುಖ್ಯ ಪಾತ್ರದಿಂದ ಏನಾಗ ಬೇಕು. ಅದಕ್ಕೆ ಪೋಷಕ ಪಾತ್ರಗಳ ಸಹಕಾರ ಅತಿ ಅವಶ್ಯ. ಸರಕಾರ-ಸಮಾಜ ಶಿಕ್ಷಕನಬಗ್ಗೆ ಸಹಾನುಭೂತಿ ಮಾರ್ಗ ದರ್ಶಕತ್ವವನ್ನು ತೋರುತ್ತ ಕರ್ತವ್ಯದಲ್ಲಿ ಪಳಗುವಂತೆ ಮಾಡಬೇಕು. ಶಿಕ್ಷಕನಾದರೂ ತನ್ನರುವಿನಿಂದ ಇದ್ದ ಅನುಕೂಲ ವಾತಾವರಣದಲ್ಲಿಯೇ ತೃಪ್ತಿಗೊಂಡು ತನ್ನ ಹೊಣೆಗಾರಿಕೆಯನ್ನು ಸುಸಂಬದ್ಧವಾಗಿ ಪೂರೈಸುತ್ತ ಸಾಗಿದರೆ ಶಿಕ್ಷಕ ವೃತ್ತಿಯು ಶ್ರೀಷ್ಮ! ಶಿಕ್ಷಣವೂ ಪ್ರಗತಿ ಗಾಮಿಯಾಗುವದು.

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

**ಶೇಲಾರ ಕೃತ**

# ಪ್ರಾಥಮಿಕ ಭೂಮಿತಿ

**[ಕ್ಷೇತ್ರಫಲ ಘನಫಲ ಸಹಿತ]**

೪ ರಿಂದ ೭ ನೇಯ ವರ್ಗದ ವರೆಗಿನ
ವಿಷಯವನ್ನೆಲ್ಲ ಒಳಗೊಂಡಿದೆ.

**ಬೆಲೆ: ೧ರೂ. ೮ಆಣೆ ಮಾತ್ರ**

**ದೊರೆಯುವ ಸ್ಥಳ:—**

**ಸಾಯಿ ಪಬ್ಲಿಶಿಂಗ್ ಹಾವುಸ್,**
**ವಿಜಯ ರೋಡ, ಧಾರವಾಡ.**

# ಗಂಡು ನುಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

೧) ಗಾಂಧಿ ಜಯಂತಿ ಸಪ್ತಾಹದಲ್ಲಿ ಏರ್ಪಡಿಸಿದ ಪ್ರದರ್ಶನ.

೨) ಕಾಲೇಜದ ಕಾರಂಜಿಯ ದೃಶ್ಯ.

೩) ಡಾ. ಹುಮಾಯೂನ ಕಬೀರರು ಸಂದರ್ಶಿಸಿದಾಗ ಅವರ ಸಹಿಯನ್ನು ಇಲ್ಲಿ ಕಾಣಬಹುದು.

೪) ಪ್ರದರ್ಶನದ ಮತ್ತೊಂದು ದೃಶ್ಯ.

೫) ಡಾ. ಹುಮಾಯೂನ ಕಬೀರರು ಸಂದರ್ಶಿಸಿದಾಗ ತೆಗೆದ ಚಿತ್ರ.

Regd. No. B. 5375


ಶ್ರೀ ಅರವಿಂದ ಪ್ರಭಾವಿತೆಯೂ ಶ್ರೀ ತಾಯಿಯವರ ಪ್ರಾಸಾದಿಕತೆಯೂ ಒಂದೆಡೆಗೆ ತೋರುವ ಪವಿತ್ರ ಸಾಹಿತ್ಯದಿಂದ

# ವಾಚನಾಲಯದ ಬೆಲೆ ಹೆಚ್ಚಿಸಬೇಡವೇ ?

**ಹಾಗಿದ್ದರೆ, ಕೆಳಗೆ ಕಾಣಿಸಿದ ಪುಸ್ತಕಗಳನ್ನು ತರಿಸಿಕೊಳ್ಳಿರಿ.**

| | | | |
|---|---|---|---|
| ೧. | ನನ್ನನಲ್ಲ ( ಅಂತರ್ಮುಖಗೊಳಿಸುವ ದಿ. ಮಧುರಚೆನ್ನರ ಸಮಗ್ರ ಕವನ ಸಂಗ್ರಹ | .... | ೧–೧೨– ೦ |
| ೨. | ಆತ್ಮಸಂಶೋಧನ ( ದಿ. ಮಧುರಚೆನ್ನರ ಜೀವನದ ಕಲಶಪ್ರಾಯದ ಪ್ರಾಂಜಲ ಸಾಹಿತ್ಯ ) | .... | ೧– ೮– ೦ |
| ೩. | ಪವಿತ್ರ ಜೀವನ ( ಹೊಸಕಾಲದ ಋಷಿ ಟಾಲಸ್ಟಾಯರ ಕಥಾಸಂಕಲನ ) | .... | ೧– ೨– ೦ |
| ೪. | ಸುಂದರ ಕಥೆಗಳು ( ಮಕ್ಕಳಿಗೂ ಮಕ್ಕಳಂಥವರಿಗೂ ಶ್ರೀ ತಾಯಿಯವರು ಹೇಳಿದುವು ) | .... | ೧– ೪– ೦ |
| ೫. | ಶ್ರೀ ಅರವಿಂದರು ( ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ ) | .... | ೧– ೮– ೦ |
| ೬. | ಶ್ರೀ ಅರವಿಂದರ ಪತ್ರಗಳು ( ಪೂರ್ಣಜೀವನದ ಸಿರಿಮೊಳಕೆ ) | | ೦– ೮– ೦ |
| ೭. | ಸ್ವರ್ಗದೋಲೆಗಳು ( ಕನ್ನಡಿಗರ ಕೈಗೆ ಬಂದ ಸಾಂಸ್ಕೃತಿಕ ಕನ್ನಡಿ ) | .... | ೧– ೮– ೦ |
| ೮. | ಮುಗಿಲ ಜೇನು ( ಮಿಂಚಿನ ಶಲಾಕೆಯಂಥ ಕವನ ಸಂಕಲನ ) | .... | ೧– ೮– ೦ |
| ೯. | ಸಪ್ತಪದಿ (ವಿದ್ಯಾರ್ಥಿಗಳ ಮೆಚ್ಚಿಕೆಯ ವಿಕಾಂಕಗಳು ) | .... | ೧– ೪– ೦ |
| ೧೦. | ಭಾರತದ ಭವ್ಯಸಿದ್ಧತೆ ( ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ ) | .... | ೧– ೦– ೦ |
| ೧೧. | ಬೆಟ್ಟದ ಹೂಳಿ ( ಜೀವನ ಪ್ರಚೋದಕವಾದ ಕಾದಂಬರಿ ) | .... | ೧– ೪– ೦ |
| ೧೨. | ಗರತಿಯ ಬಾಳು ( ಹೆಣ್ಣಿನ ಸಾಯೆಯುಳ್ಳ ಕವಿಲ ಸಿದ್ಧಮಲ್ಲಿಕಾರ್ಜುನ ) | .... | ೧– ೪– ೦ |
| ೧೩. | ಬಾಳಬಟ್ಟೆ ( ಆಧುನಿಕ ಜೀವನ ಒಡಾಟಕ್ಕೆ ಟಿಕೆಟ್ಟೆ ) | .... | ೧– ೮– ೦ |
| ೧೪. | ಪೂಜಾ ( ಅತೀಂದ್ರಿಯ ಜಾಗೃತಿಯ ವಿಸುಲು ) | .... | ೦–೧೨– ೦ |
| ೧೫. | ಜೀವನ ದೃಷ್ಟಿ ( ಭವ್ಯ ಚಿಮಿಕಿನ ಜೊಕ್ಕಸ ) | .... | ೧– ೨– ೦ |
| ೧೬. | ಕನ್ನಡ ಕುಲದೀಪ ಒಪಪಣ್ಣ ( ಹುಡಿದರೆ ಹಿಡಿಕೆಯಲ್ಲಿ ಬಿಟ್ಟರೆ ಮನೆತುಂಬ ) | .... | ೧– ೦– ೦ |

ಕನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯ ಜೀಕಾವಣೆ ಬರೆಯಿರಿ. ಮೇಲೆ ಕಾಣಿಸಿದ ಪುಸ್ತಕಗಳನ್ನೆಲ್ಲ ತರಿಸಿಕೊಂಡಲ್ಲಿ ಅಂಚೆವೆಚ್ಚ ನಾವೇ ವಹಿಸುವೆವು.

**ಶ್ರೀ ಅರವಿಂದ ಗ್ರಂಥಾಲಯ** ಪೋ:— **ಚಡಚಣ** ಜಿ. ವಿಜಾಪುರ

---

## 'ದೇವರಾಟ'

ಶ್ರೀ 'ಜೈರಾಮ ಸುತರ' ಕಾದಂಬರಿ ೭೫ ನ.ಪೈ.

## 'ಸಿವಳ್ಳಿ ಸಿಂಗ್ಲೀಕ'

ಎನ್. ಎಸ್. ರಾಮಸ್ವಾಮಿಯವರ ಹಾಸ್ಯನಾಟಕ ೭೫ ನ.ಪೈ.

- ಕೇವಲ ೩ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೨ನೆಯ ಮೂಲೆಯ ೫–೬ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ೪೦೦ ಪುಟಗಳಲ್ಲಿ.
- ಏಪ್ರೆಲದಿಂದ ಏಪ್ರೆಲಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ೩ ಜೆಲೆಯಲ್ಲಿ [ಅಂಚೆಜೇರಿ]
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅತ್ಯಲ್ಪಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ಮೀಸಲು. ಚಂದಾದಾರರ ಹೆಸರು ಪುಸ್ತಕದಲ್ಲಿ ಪ್ರಕಟಿಸುವುದರಿಂದ ಪೂರ್ತಿ ಹೆಸರು—ವಿಳಾಸ ಬರೆಯಬೇಕು.
- ★ **ನಾವು ನಮ್ಮವರು—** ಪ್ರಾಥಮಿಕ [ ೧ರಿಂದ ೭ ವರ್ಗಗಳ ಶಾಲೆಯ ] ಶಿಕ್ಷಕರ ಕಥೆ ಕವನಗಳನ್ನು ಆಯಾ ಲೇಖಕರ ಫೋಟೊ ಪರಿಚಯಗಳೊಂದಿಗೆ ಹೊರಡಿಸುವ ಪುಸ್ತಕ. ಕೃತಿಕಳಿಸುವ ಶಿಕ್ಷಕರು ವಿವರವಾದ ಪ್ರಕಟಣೆಗೆ ಬರೆಯಬೇಕು ಪೂರೈಸಲಾಗುವದು.

**ಈಶ್ವರಚಂದ್ರ ಚಿಂತಾಮಣಿಯವರ** **ಪಾಪಪುಣ್ಯ** ಮೂರಂಕಿನ ನಾಟಕ **ಬೆಲೆ** ೧–೫೦

( ಚಂದಾದಾರರಿಗೆ ೧–೪೦ ನ.ಪೈ. ಅಂಚೆಸೇರಿ. ಕೆಲವೇ ಪ್ರತಿ ಉಳಿದಿವೆ )

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**


---

Printed by Shri S. F. Kattimani, at Manohar Power Printing Press, Hubli. Edited and Published by Sjts. V.B.Chavannavar, B. M. Shintri, S. R. Tatti & Smti. P. A. Bhaskar, at the Kannada Jeevan Shikshan Office, Govt. Training College for Men, Dharwar.

# ಪ್ರಜಾಮಿತ್ರ

ಪ್ರಧಾನ ಸಂಪಾದಕರು: ಶ್ರೀ ಎಸ್. ಪಿ. ಪಾಟೀಲ



ನಿಜ ಓದುಗರ ಜನಪರ ಧ್ವನಿ ವಾ. ಚಂ. ೪ ರೂ.

# ಜೀವನ ಶಿಕ್ಷಣ


— ಸಂಪಾದಕ ಮಂಡಲ —

ಸಂಚಾಲಕರು: ಶ್ರೀ **ಜಿ. ಕೆ. ಕೊಪ್ಪಿಕರ** ಬಿ.ಎ.(ಆನರ್ಸ), ಬಿ.ಎಸ್.ಸಿ.,ಎಮ್.ಇಡಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು: ಶ್ರೀ **ಎಸ್. ಪಿ. ಪಾಟೀಲ,** ಬಿ.ಎ., ಬಿ.ಟಿ, ಡಿ.ಪಿ.ಇಡಿ,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ **ಪಿ. ಎ. ಭಾಸ್ಕರ,** ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ **ಬಿ. ಎಂ. ಶಿಂತ್ರಿ,** ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣ ಭಾಗ (ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್, ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ **ಎಸ್. ಆರ್. ತಟ್ಟಿ,** ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.



**ಸಂಪುಟ ೬೪** **ಜನವರಿ ೧೯೫೯** **ಸಂಚಿಕೆ ೪**


## — ಪರಿವಿಡಿ —


| | | | |
|---|---|---|---|
| ೧. | ಸಂಪಾದಕೀಯ .... | .... | ೧ |
| ೨. | ಶಿಕ್ಷಣದ ಆಕರ ಆಕಾಶವಾಣಿ | ಶ್ರೀ ಸಿದ್ಧಯ್ಯ ಪುರಾಣಿಕ | ೫ |
| ೩. | ಬಾಪುವಿನ ಆತ್ಮಕ್ಕೆ ಶಾಂತಿಯೆಂತು ? | ಶ್ರೀ ಗ. ಬೈ. ಇಚ್ಚಂಗಿ | ೮ |
| ೪. | ಸರ್ಪಭೂಷಣ ಶಿವಯೋಗಿಗಳು | ಶ್ರೀ ಶಿಂತ್ರಿ ಬಸಪ್ಪನವರು | ೧೨ |
| ೫. | ಸತ್ತದ್ದು ಸಾವು— ಬಸವನಾಳರಲ್ಲ | ಶ್ರೀ ಮಲ್ಲಭದ್ರನ ವರದಿ | ೧೪ |
| ೬. | ಶಿಕ್ಷಕರ ತಳಪಾಯ | ಶ್ರೀ ಮುಳ್ಳೂರ ವಾಸುದೇವ | ೧೭ |
| ೭. | ಭಾಷಾ ಕಲಿಸಿದ ನನ್ನ ಅನುಭವಗಳು | ಶ್ರೀ ರಂ. ಕೃ. ಅಗಸನಕೊಪ್ಪ | ೨೦ |
| ೮. | ಉದಕ ಮಂಡಲ | ಶ್ರೀ ಶಿಂತ್ರಿ ಬಸಪ್ಪನವರು | ೨೩ |
| ೯. | ಮಕ್ಕಳ ಮಾರ್ಗದರ್ಶಿಗರಾದ ಗುರುಗಳ ಚಾರಿತ್ರ್ಯ ಹೇಗಿರಬೇಕು ? | ಶ್ರೀ ಈಶ್ವರಚಂದ್ರ ಚಿಂತಾಮಣಿ | ೨೫ |
| ೧೦. | ಪಿ. ಟಿ ಸಿ. ಪರೀಕ್ಷೆಯ ವೇಳಾಪತ್ರಿಕೆ (೧೯೫೯) | | ಕವರ ೩ |

# ಸಂಪಾದಕೀಯ

## ಮಹಾತ್ಮಾ ಏಸು ಕ್ರೈಸ್ತರ ಜಯಂತಿ

ಸತ್ಯ, ತ್ಯಾಗ, ಪ್ರೇಮ ಮತ್ತು ಸಹಿಷ್ಣುತೆಗಳ ಮುಖಾಂತರ ವಿಶ್ವಕ್ಕೆ ಬೆಳಕನ್ನು ನೀಡಿದ ಮಹಾನುಭಾವ ರಾದ ಏಸು ಕ್ರೈಸ್ತರ ಜಯಂತಿಯು ಕಳೆದ ತಿಂಗಳ ದಿನಾಂಕ ೨೫ ರಂದು ವಿಶ್ವದ ಎಲ್ಲ ಕಡೆಗೂ ಆಚರಿಸಲ್ಪ ಟ್ಟಿತು. ಮಾನವತೆಯ ಉದ್ಧಾರಕ್ಕಾಗಿ ಉದಯಿಸಿದ ಕ್ರೈಸ್ತರಿಂದ ಬೋಧಿಸಲ್ಪಟ್ಟ ತತ್ವಗಳು ಅಮರವಾಗಿವೆ. ಅವೆಲ್ಲ ತತ್ವಗಳಲ್ಲಿ ಅಡಗಿದ ಸಾರವು "ನಿನ್ನ ನೆರೆಯವರನ್ನು ಪ್ರೀತಿಯಿಂದ ಕಾಣು" ಎಂಬುದಾಗಿದೆ. ಜಗತ್ತಿನಲ್ಲಿ ಬಂದು ಹೋದ ಮಹಾನುಭಾವರೆಲ್ಲರೂ ಹೇಳಿರಿಸಿದ ಹಾದಿ ಒಂದೇ ಆಗಿದೆ. ಕ್ರೈಸ್ತರ ಧರ್ಮ ಬೋಧನೆಯನ್ನು ನಮ್ಮ ಜೀವನದಲ್ಲಿ ಉಪಯೋಗಿಸಿದರೆ ನಾವು ಎದುರಿಸಬೇಕಾದ ಸಮಸ್ಯೆಗಳೆಲ್ಲವೂ ತಮ್ಮಿಂದ ತಾವೇ ಪರಿಹಾರಗೊಳ್ಳುವವು. ವೈಜ್ಞಾನಿಕ ಸಂಶೋಧನೆಗಳ ಪರಿಣಾಮವಾಗಿ ಹುಟ್ಟುವ ಶಸ್ತ್ರಾಸ್ತ್ರಗಳಿಂದ ವೈಯಕ್ತಿಕ ಹಾಗೂ ಸಾಮೂಹಿಕ ಶಾಂತತೆಯು ನೆಲೆಗೊಳ್ಳಲಾರದು. ಆದುದರಿಂದ ವಿಶ್ವ ಶಾಂತಿಗೆ ಅವಶ್ಯವಾದುದು ಅಸ್ತ್ರಗಳನ್ನು ಬಿಟ್ಟು ಬೇರೆ ಕಡೆಗೆ ನೋಡಬೇಕು. ಅದೇ ಮಹಾತ್ಮಾ ಏಸೂ ಕ್ರೈಸ್ತರ ಸಂದೇಶ.

## ಕನ್ನಡ ಗ್ರಂಥ ಪ್ರಕಟನೆಯ ಸಮಸ್ಯೆ

ನಮ್ಮ ರಾಜ್ಯದ ವರಿಷ್ಠ ಶಿಕ್ಷಣಾಧಿಕಾರಿಗಳಾದ ಶ್ರೀ ಎ. ಸಿ. ದೇವೇಗೌಡರು ಹೋದ ತಿಂಗಳಾಂತ್ಯದಲ್ಲಿ ಧಾರವಾಡಕ್ಕೆ ಸಂದರ್ಶನವಿತ್ತರು. ಆ ತಿಂಗಳ ದಿನಾಂಕ ೨೭ ರಂದು ಕರ್ನಾಟಕ ಸಾಹಿತ್ಯ ಸಂಘದ ವಿಳನೆಯ ಪುಷ್ಪವಾದ, ಪ್ರೊ. ಜಿ. ಎಸ್. ಹಾಲಪ್ಪನವರು ರಚಿಸಿದ "ರಾಜಕಾರಣದ ಮೂಲ ಸೂತ್ರಗಳು" ಎಂಬ ಗ್ರಂಥವನ್ನು ಉದ್ಘಾಟನೆ ಮಾಡುತ್ತ, ಶ್ರೀ ಎ. ಸಿ. ದೇವೇಗೌಡರು ಕನ್ನಡ ನಾಡಿನಲ್ಲಿ ಪುಸ್ತಕ ಬರೆಯುವವರ ಹಾಗೂ ಮಾರುವವರ ಸಮಸ್ಯೆಗಳನ್ನು ಬಹಳ ಮಾರ್ಮಿಕವಾಗಿ ಚರ್ಚಿಸಿದರು. ಪ್ರಪಂಚದಲ್ಲಿ ಇಂಗ್ಲಿಷ, ಫ್ರೆಂಚ ಭಾಷೆ ಗಳನ್ನಾಡುವ ಜನಸಂಖ್ಯೆಗೆ ಹೋಲಿಸಿದರೆ ಕನ್ನಡ ಸಂಖ್ಯೆ ತೀರ ಸಣ್ಣದು. ಭಾರತದಲ್ಲಿಯೇ ಹಿಂದಿ, ತಮಿಳು ಮಾತ ನಾಡುವವರ ಸಂಖ್ಯೆಗಿಂತಲೂ ಕನ್ನಡ ಜನಸಂಖ್ಯೆ ಕಡಿಮೆ ಯಾಗಿದೆ. ಸುಮಾರು ಎರಡು ಕೋಟಿ ಕನ್ನಡಿಗರೆಂದು ತಿಳಿದರೆ ಅವರಲ್ಲಿ ವಿದ್ಯಾವಂತರ ಸಂಖ್ಯೆ ಇನ್ನೂ ಕಡಿಮೆ ಯಾಗುವದು. ಅದು ಹೆಚ್ಚೆಂದರೆ ೧೦೦ ಕ್ಕೆ ೨೦ ರಷ್ಟು ಆಗಬಹುದು. ಹೀಗೆ ಓದುವವರ ಸಂಖ್ಯೆಯೇ ಕಡಿಮೆ ಇದ್ದಾಗ ರೊಕ್ಕ ಕೊಟ್ಟು ಕೊಂಡು ಓದುವವರ ಸಂಖ್ಯೆ ಮತ್ತಿಷ್ಟು ಕಡಿಮೆ. ಇದರಿಂದ ಪುಸ್ತಕ ಪ್ರಕಟಿಸುವವರು ಮುಂದೆಬರುವದಿಲ್ಲ. ಇದು ಅವರಿಗೆ ಲಾಭದಾಯಕ ವೃತ್ತಿ ಯಾಗುವದಿಲ್ಲ; ಅದರಲ್ಲಿಯೂ ಗಹನ ವಿಚಾರಗಳ ಗ್ರಂಥ ಗಳನ್ನು ಪ್ರಕಾಶನಗೊಳಿಸುವದು ಮಾರಾಟದ ದೃಷ್ಟಿಯಿಂದ ಎಂದೂ ಲಾಭದಾಯಕವಿಲ್ಲ. ಕಥೆ–ಕಾದಂಬರಿಗಳನ್ನು ಒಮ್ಮೊನ್ಮೆ ಜನರು ಓದಬಹುದು, ಆದರೆ ಗಹನವಾದ ಗ್ರಂಥಗಳನ್ನು ಓದುವವರನ್ನು ಕೈಬೆರಳಿನಿಂದಲೇ ಎಣಿಸ ಬೇಕು. ಇಂದಿನ ಯುಗದಲ್ಲಿ ನಮ್ಮ ತರುಣರು ಪ್ರಪಂಚ ಜ್ಞಾನವನ್ನು ಅರಿಯಲು ಗಹನ ಗ್ರಂಥಗಳನ್ನು ಓದಲು ಮನಸ್ಸು ಮಾಡಬೇಕು. ಇಂಥ ವಾಚಕರ ಸಂಖ್ಯೆ ಹೆಚ್ಚಾ ದಂತೆ ವೈಜ್ಞಾನಿಕ ಹಾಗೂ ಸಾಮಾಜಿಕ ಶಾಸ್ತ್ರಗಳನ್ನು ಕುರಿತು ಹೆಚ್ಚು ಪುಸ್ತಕಗಳು ಹೊರಬರುವವು. ಕರ್ನಾಟಕ ಸಾಹಿತ್ಯ ಸಂಘದವರ ಪ್ರಯತ್ನ ಸ್ತುತ್ಯವಾಗಿದೆ. ಇದುದ ರಿಂದ ಕರ್ನಾಟಕ ಸಹಕಾರಿ ಸಾಹಿತ್ಯ ಸಂಸ್ಥೆಯು ಇಂಥ ಸಾಹಿತ್ಯವನ್ನು ಪ್ರಕಟನೆಗೊಳಿಸುವದರಲ್ಲಿ ಮುಂಚೆ ಬಂದಿ ರುವದು ಅಭಿನಂದನೀಯವಾಗಿದೆ ಎಂದು ಹೇಳುತ್ತ ಭಾಷಣವನ್ನು ಮುಗಿಸಿದರು.

ಪ್ರೊ. ಹಾಲಪ್ಪನವರು ತಮ್ಮ ಗ್ರಂಥವನ್ನು ಪರಿಚಯ ಮಾಡಿಕೊಡುತ್ತ ರಾಜ-ಕಾರಣ ಎಂಬ ಪದದ ವಿಷಯವಾಗಿ ಒಳ್ಳೇ ವಿಚಾರಪೂರಿತ ಭಾಷಣ ಮಾಡಿದರು. ಶ್ರೀ ಎ. ಸಿ. ದೇವೇಗೌಡರ ಪ್ರತಿಭೆ, ವೈಜ್ಞಾನಿಕ ಅರ್ಹತೆ, ಅನುಭವ ಮತ್ತು ಸಂಸ್ಕೃತಿಗಳನ್ನು ಪ್ರಶಂಸಿಸುತ್ತ ಮನುಷ್ಯನಲ್ಲಿ ಯೌವನ, ಶ್ರೀಮಂತಿಕೆ ಮತ್ತು ಅಧಿಕಾರ ಇವುಗಳಲ್ಲಿ ಯಾವುದಾದರೊಂದು ಇದ್ದರೂ ತಲೆತಿರುಗುವದು. ಆದರೆ ಇವುಗಳ ಜೊತೆಗೆ ವಿದ್ಯೆ ಹಾಗೂ ಸಂಸ್ಕೃತಿಗಳನ್ನು ಪಡೆ ದಿರುವ ಶ್ರೀ ದೇವೇಗೌಡರು ನಮ್ಮ ರಾಜ್ಯದ ಶಿಕ್ಷಣ ಇಲಾಖೆಗೆ ಅಮೂಲ್ಯ ಆಸ್ತಿಯಾಗಿ ದೊರೆತಿರುವ ರೆಂದೂ ಅವರು ಬೇರೆ ಯಾವದೇ ರಾಜ್ಯದಲ್ಲಿ ಇದ್ದರೆ ಐದಾರು ವರುಷಗಳ ಹಿಂದೆಯೇ ವರಿಷ್ಠ ಶಿಕ್ಷಣಾಧಿಕಾರಿ ಗಳಾಗುತ್ತಿದ್ದರೆಂದೂ ಪ್ರೊ. ಹಾಲಪ್ಪನವರು ಹೇಳಿದರು. ಅಂದಿನ ಸಭೆಯ ಅಧ್ಯಕ್ಷತೆ ವಹಿಸಿದ ಶ್ರೀ ವ್ಹಿ. ಎಸ್. ಬಸವನಾಳರು ತಮ್ಮ ಸಾಹಿತ್ಯ ಸಂಸ್ಥೆಯ ಬಗೆಗೆ ನಾಲ್ಕು

ಮಾತುಗಳನ್ನು ಹೇಳಿ ಶಿಕ್ಷಣ ತಜ್ಞರೂ ಶ್ರೇಷ್ಠ ಅಡಳಿತ ಗಾರರೂ ಆದ ಶ್ರೀ ದೇವೇಗೌಡರನ್ನು ವರಿಷ್ಠ ಶಿಕ್ಷಣಾಧಿ ಕಾರಿಗಳಾಗಿ ನೇಮಿಸಿದ್ದರ ಬಗೆಗೆ ನಮ್ಮ ರಾಜ್ಯ ಸರಕಾರ ವನ್ನು ಅಭಿನಂದಿಸಿದರು.

## ನಮ್ಮ ಶಿಕ್ಷಣಮಟ್ಟ ಇಳಿಯುತ್ತಿರುವುದೇಕೆ ?

ದಿನಾಂಕ ೩೦ ರಂದು ಮುಂಜಾನೆ ಧಾರವಾಡ ನಗರದ ಶೈಕ್ಷಣಿಕ ಸಂಸ್ಥೆಗಳ ಪರವಾಗಿ ಕರ್ನಾಟಕ ಸಾಯನ್ಸ ಕಾಲೇಜದಲ್ಲಿ ಶ್ರೀ ಎ. ಸಿ. ದೇವೇಗೌಡರಿಗೆ ಸ್ವಾಗತ ಸತ್ಕಾರವನ್ನು ಏರ್ಪಡಿಸಲಾಗಿತ್ತು. ಕರ್ನಾಟಕ ವಿಶ್ವ–ವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಡಿ. ಸಿ. ಪಾವಟೆಯವರು ಅಧ್ಯಕ್ಷತೆ ವಹಿಸಿದ್ದರು. ಈ ಸಮಾರಂಭ ದಲ್ಲಿ ಶಿಕ್ಷಣ ಸಂಸ್ಥೆಗಳ ಪರವಾಗಿ ಕೆಲ ಮಹನೀಯರು ಶ್ರೀ ಎ. ಸಿ. ದೇವೇಗೌಡರನ್ನು ಅಭಿನಂದಿಸಿ ಅವರ ಕಾರ್ಯ ದಲ್ಲಿ ತಾವು ಹೃತ್ಪೂರ್ವಕವಾಗಿ ಸಹಕರಿಸುವೆವೆಂದು ಹೇಳಿದರು. ಮುಖ್ಯ ಅತಿಥಿಗಳ ವಿದ್ವತ್ತೆ, ಶೈಕ್ಷಣಿಕ ದೀರ್ಘ ಅನುಭವ, ಶಾಂತ ಸ್ವಭಾವ, ಶಿಕ್ಷಕರ ಬಗೆಗೆ ಅವರಲ್ಲಿರುವ ಸಹಾನುಭೂತಿ, ಅಭಿಮಾನ, ಅವರ ಮನೆತನದ ಸಾಂಸ್ಕೃತಿಕ ಪರಂಪರೆ ಮೊದಲಾದ ಗುಣಗಳನ್ನು ಪ್ರಶಂಸಿಸಿ ಅವರ ನೇಮಣೂಕೆಯನ್ನು ಅತ್ಯಂತ ಗೌರವಪೂರ್ಣವಾಗಿ ಸ್ವಾಗತಿಸಿದರು. ಅನೇಕರ ಭಾಷಣಗಳಿಗೆ ಸಮರ್ಪಕ ಉತ್ತರಕೊಡುತ್ತ ಶ್ರೀ ದೇವೇಗೌಡರು ಸುಮಾರು ಒಂದು ತಾಸಿನವರೆಗೆ ಇಂಗ್ಲೀಷಿನಲ್ಲಿ ಅಸ್ಖಲಿತ ಭಾಷಣ ಮಾಡಿ ಶಿಕ್ಷಣದ ಮೇಲೆ ಇರುವ ತಮ್ಮ ಅಸಾಧಾರಣವಾದ ಹಿಡಿತ ವನ್ನು ಪ್ರಕಟಪಡಿಸಿದರು, ಐದು ಬೇರೆ ಬೇರೆ ಕ್ಷೇತ್ರ ಗಳಿಂದ ರಚಿತವಾದ ನಮ್ಮ ರಾಜ್ಯದ ಶೈಕ್ಷಣಿಕ ಸಮಸ್ಯೆ ಗಳನ್ನು ಪ್ರಸ್ತಾಪಿಸುತ್ತ ಶಿಕ್ಷಣ ಮಟ್ಟವು ಇಳಿಮುಖ ವಾಗುತ್ತಿರುವ ಬಗೆಗೆ ಶಿಕ್ಷಕರನ್ನೇ ಹೊಣೆಗಾರರನ್ನಾಗಿ ತಿಳಿಯುವ ಪ್ರವೃತ್ತಿ ನಮ್ಮ ಸಮಾಜದಲ್ಲಿ ಕಾಣುತ್ತಿರು ವದು ಯೋಗ್ಯವೆನಿಸದೆಂದರು. ತಮ್ಮ ಅಭಿಪ್ರಾಯದಲ್ಲಿ ಅದರ ಕಾರಣಗಳು ಬೇರೆಯಾಗಿವೆಯೆಂದು ಸೂಚಿಸಿದರು. ಅನೇಕ ಕಾರಣಗಳಲ್ಲಿ ಶಿಕ್ಷಕರನ್ನು ಆರಿಸುವ ಕ್ರಮ, ಅವರಿಗೆ ಕೊಡುತ್ತಿರುವ ವೇತನ, ಶೈಕ್ಷಣಿಕ ಹಾಗೂ ಇತರ ಸೌಕರ್ಯಗಳ ಅಭಾವ, ಸಮಾಜದಲ್ಲಿ ಅವರಿಗಿದ್ದ ಅನಾದರ ಇವೇ ಮುಖ್ಯವಾಗಿವೆಯೆಂದು ಹೇಳಿದರು. ಸುಧಾರಿಸಿದ ಬೇರೆ ರಾಷ್ಟ್ರಗಳಲ್ಲಿರುವ ಶಿಕ್ಷಕರ ಸ್ಥಾನ–ಮಾನಗಳನ್ನು ಹೋಲಿಸಿ ನೋಡಿದಾಗ ನಮ್ಮ ಶಿಕ್ಷಕರು ಬಹಳ ದುರ್ದೈವಿಗಳೆಂದು ತಿಳಿಯಬೇಕಾಗುವದು. ಸಾಕಷ್ಟು ಅರ್ಹತೆ ಇರದ ಶಿಕ್ಷಕರನ್ನು ನೇಮಿಸಿದರೆ ಅವ ರಿಂದ ಶೈಕ್ಷಣಿಕ ಮಟ್ಟ ಸುಧಾರಿಸುವದೆಂತು ? ಶಿಕ್ಷಕರಾದ ಮೇಲೆ ಕಾಲಕಾಲಕ್ಕೆ ಯೋಗ್ಯವಾದ ಉತ್ತೇಜನ ದೊರೆಯದಿದ್ದರೆ ಅವರಲ್ಲಿ ಹೆಚ್ಚಿನ ಹುರುಪು–ಹುಮ್ಮಸ್ಸು ಗಳು ಹುಟ್ಟುವದೆಂತು ? ಈ ದೃಷ್ಟಿಯಿಂದ ಸರಕಾರವೂ ನಾಡಿನ ಮುಖಂಡರೂ ವಿಚಾರಿಸುವದು ವಿಹಿತ. ಸುಮ್ಮನೆ ಶಿಕ್ಷಕರನ್ನು ಟೀಕಿಸುತ್ತ ಹೋದರೆ ಯಾರಿಗೂ ಒಳಿತಾ ಗದು. ಇಂಥ ಪರಿಸ್ಥಿತಿಯಲ್ಲಿಯೂ ಕೂಡಾ ಸಾಮಾನ್ಯ ವಾಗಿ ಶಿಕ್ಷಕರು ಶ್ರಮವಹಿಸಿ ದುಡಿದು ನಾಡಿಗೆ ತಮ್ಮ ಪಾಲಿನ ಸೇವೆಯನ್ನು ಸಲ್ಲಿಸುತ್ತಾರೆಂಬುದೇ ತಮ್ಮ ಅಭಿ ಪ್ರಾಯವಾಗಿದೆಯೆಂದು ಹೇಳಿದರು. ಧಾರವಾಡದ ಶಿಕ್ಷಕರನ್ನು ಒಂದೇ ಕಡೆಯಲ್ಲಿ ಕಾಣುವ ಸುಪ್ರಸಂಗ ದೊರೆತದ್ದಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಮಾಡಿ ರಾಜ್ಯದ ಶೈಕ್ಷಣಿಕ ಸಮಸ್ಯೆಗಳನ್ನು ಅಭ್ಯಸಿಸಿ ಸರಕಾರವು ಕೈಕೊಂಡ ಯೋಜನೆಗಳನ್ನು ಕಾರ್ಯಗತ ಮಾಡಲು ಸಹಕಾರವನ್ನೀಯಬೇಕೆಂದು ಸಭಿಕರನ್ನು ಪ್ರಾರ್ಥಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಪಾವಟೆ ಯವರು ಸಮಾರೋಪ ಮಾಡುತ್ತ, ವೈಸೂರಿನಲ್ಲಿ ಹಿಂದೆ ರೆಜ್ಡಿನ್ಯೂ ಅಡಳಿತೆಗಾರರೇ ಶಿಕ್ಷಣಾಧಿಕಾರಿಗಳಾಗುವ ಸಂಪ್ರದಾಯವಾಗಿತ್ತೆಂದೂ ಶಿಕ್ಷಣ ತಜ್ಞರಾದ ಶ್ರೀ ದೇವೇಗೌಡರ ನೇಮಣೂಕೆಯಿಂದ ಹಳೆಯ ಸಂಪ್ರದಾಯ ಹೋಗಿ ಹೊಸಯುಗ ಪ್ರಾರಂಭವಾದ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಮಾಡಿದರು. ಶ್ರೀ ದೇವೇಗೌಡರು ತಮ್ಮ ಹೊಸ ಪದವಿಯಲ್ಲಿ ಒಳ್ಳೆ ಯಶಸ್ವಿಯಾಗುವ ಬಗ್ಗೆ ತಮಗೆ ಸಂದೇಹವಿಲ್ಲವೆಂದೂ ಹೇಳಿದರು. ಸ್ಥಾನಿಕ ಸಂಸ್ಥೆಗಳ ಸಂಚಾಲಕರೂ ಶಿಕ್ಷಕರೂ ಒಂದೆಡೆ ಕೂಡಿ ಶೈಕ್ಷಣಿಕ ಸಮಸ್ಯೆಗಳನ್ನು ವಿಚಾರಿಸುತ್ತಿರುವ ಬಗ್ಗೆ ತಮ ಗಾದ ಸಂತೋಷವನ್ನು ವ್ಯಕ್ತಮಾಡಿ ತಮ್ಮ ಭಾಷಣ ವನ್ನು ಮುಗಿಸಿದರು.

## ಹೊಸ ವರುಷಕ್ಕೆ ಸ್ವಾಗತ

ಈ ತಿಂಗಳ ದಿನಾಂಕ ೧ ರಂದು ಮತ್ತೊಂದು ಹೊಸ ವರುಷದಲ್ಲಿ ಕಾಲಿಟ್ಟಿವು. ಹಿಂದಿನ ವರುಷದಲ್ಲಿ ನಡೆದ ಅನೇಕ ಘಟನೆಗಳನ್ನು ನೆನಪಿಗೆ ತಂದುಕೊಂಡಾಗ ನಾವೆಲ್ಲರೂ ಮಹಾ ಘಟನೆಗಳ ಯುಗದಲ್ಲಿ ಜೀವಿಸುತ್ತಿ ದ್ದೆವೆಂಬುದು ಸ್ಪಷ್ಟವಾಗುತ್ತದೆ. ಈ ಘಟನೆಗಳ ಮಧ್ಯ ದಲ್ಲಿ ವಿಶ್ವದ ಜನರೆಲ್ಲರೂ ಶಾಂತಿ ಬಯಸುತ್ತಿರುವದೂ ಹೆಚ್ಚು ಸ್ಪಷ್ಟವಾಗಿದೆ. ವೈಜ್ಞಾನಿಕ ಸಂಶೋಧನೆಯಿಂದ

ತಯಾರಾಗುತ್ತಿರುವ ಬೀಜಾಣು ಅಸ್ತ್ರಗಳ ಸಂಗ್ರಹದಿಂದ ಜಾಗತಿಕ ಶಾಂತಿಯನ್ನು ಕದಡಿಸುವ ಯುದ್ಧದ ಭಯವೊಂದು ಕಡೆ ಇದ್ದರೂ ಪಂಚಶೀಲ ಶಕ್ತಿಯಿಂದ ಶಾಂತಿ ನೆಲೆಗೊಳ್ಳುವದೆಂಬ ಭರವಸೆ ಉಳಿದೆಲ್ಲ ಕಡೆ ಹೆಚ್ಚಾಗುತ್ತಿರುವದು ಮುಂದಿನ ವರುಷದ ಶುಭಲಕ್ಷಣವೆನ್ನಬೇಕು. ಯುದ್ಧದಂಚಿನಲ್ಲಿ ತೂಗಾಡುತ್ತಿರುವ ಬುದ್ಧಿಹೀನರ ಹುಚ್ಚುತನ ಹೋಗಿ ಒಳ್ಳೇ ಜನರ ಆಕಾಂಕ್ಷೆಗಳು ಗರಿಗರಿಯಲ್ಲಿ ಕೈಗೂಡುವವೆಂದು ನಾವು ಖಚಿತವಾಗಿ ನಂಬಿ ಈಗ ತಾನೇ ಪ್ರಾರಂಭವಾದ ಹೊಸ ವರುಷವು ನಮ್ಮ ವಾಚಕರಿಗೆ ಶಾಂತಿ, ಸುಖ, ಸಂಪದಭಿವೃದ್ಧಿಗಳನ್ನು ಕೊಡಲೆಂದು ಕೋರುತ್ತೇವೆ.

## ಪ್ರಧಾನ ಸಂಪಾದಕರ ಅರಿಕೆ

ಈ ಸಂಸ್ಥೆಯ ಮುಖ್ಯ ಸಂಚಾಲಕರಾಗಿಯೂ, ಈ ಪತ್ರಿಕೆಯ ಸಂಪಾದಕರಾಗಿಯೂ ಗತಿಸಿದ ಮೇ ತಿಂಗಳಿನಿಂದ ಇಲ್ಲಿಯವರೆಗೆ ಸೇವೆ ಸಲ್ಲಿಸುವ ಪ್ರಸಂಗ ಬಂದುದು ನಮ್ಮ ಭಾಗ್ಯವೆಂದೇ ತಿಳಿದು ಇನ್ನು ಮುಂದೆ ಈ ಹೊಣೆಗಾರಿಕೆಯನ್ನು ಹೆಚ್ಚು ಯಶಸ್ವಿಯಾಗಿ ನಿರ್ವಹಿಸಲು ಮುಂಬರುವ ಪಿನ್ನಿಪಾಲರಿಗೆ ಬಿಟ್ಟುಕೊಡಲು ನಮಗೆ ಸಂತೋಷವೆನಿಸಿದೆ. ಈ ದೀರ್ಘಾವಧಿಯಲ್ಲಿ ನಮಗೆ ಸಹಕಾರ–ಸಹಾನುಭೂತಿಗಳಿಂದ ಕೂಡಿದ ಸಲಹೆಗಳನ್ನಿತ್ತು ಈ ಮಹಾಸಂಸ್ಥೆಗೆ ನಮ್ಮಿಂದೂ ಅಲ್ಪಸೇವೆ ಮುಟ್ಟುವಂತೆ ಅನುಕೂಲವಾದಿಕೊಟ್ಟ ಅಧಿಕಾರಿಗಳಿಗೂ, ಸಂಪಾದಕ ಮಂಡಲದ ಸದಸ್ಯರಿಗೂ, ಗೆಳೆಯರಿಗೂ ಹಾಗೂ ವಾಚಕರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸಿ, ಅದೇ ತರದ ನೆರವನ್ನು ಮುಂಬರುವ ಪ್ರಧಾನ ಸಂಪಾದಕರಿಗೆ ನೀಡಬೇಕೆಂದು ಅವರೆಲ್ಲರನ್ನೂ ಪ್ರಾರ್ಥಿಸುತ್ತೇವೆ. "ಜೀವನ ಶಿಕ್ಷಣ"ವು ಎಲ್ಲ ದೃಷ್ಟಿಯಿಂದಲೂ ಸ್ವಾವಲಂಬಿಯಾಗಿರುವದಲ್ಲದೆ ಮುಂದಿನ ಮೇ ತಿಂಗಳ ಕೊನೆಗೆ ಎಂಟು ಸಾವಿರ ರೂಪಾಯಿಗಳಿಗೂ ಮಿಕ್ಕವಷ್ಟು ಹಣ ಬ್ಯಾಂಕಿನಲ್ಲಿ ಶಿಲ್ಕು ಉಳಿಯುವದೆಂಬುದನ್ನು ವಾಚಕರಿಗೆ ತಿಳಿಸಲು ನಮಗೆ ಒಳ್ಳೇ ಸಮಾಧಾನವಾಗುವದೆಂದು ಹೇಳಿ ಅವರೆಲ್ಲರ ಅಪ್ಪಣೆ ಪಡೆಯುತ್ತೇವೆ.

## ಬುದ್ಧಿ ಮತ್ತು ದುಡಿಮೆಯ ಸಮನ್ವಯವೇ ಮೂಲ ಶಿಕ್ಷಣದ ಮುಖ್ಯ ತತ್ವ

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದಲ್ಲಿ ದಿನಾಂಕ ೪–೧–೫೯ರಂದು ಧಾರವಾಡ ಹಾಗೂ ಗುಲಬರ್ಗಾ ವಿಭಾಗದ ಮೂಲ ಶಿಕ್ಷಣ ತಜ್ಞರ ವಿಚಾರ ಗೋಷ್ಠಿಯನ್ನು ಉದ್ಘಾಟಿಸುತ್ತ ಮಾನ್ಯ ಮಂತ್ರಿ ಶ್ರೀ ಅಣ್ಣಾರಾವ ಗಣಮುಖಿಯವರು ಮಾಡಿದ ಭಾಷಣದ ಸಾರವು ಇಂತಿದೆ:–

ಹಿಂದಿನ ಕಾಲದಲ್ಲಿ ಪುಸ್ತಕೀ ವಿದ್ಯೆಗೆ ಬಹಳ ಮಹತ್ವ ಕೊಡಲಾಗುತ್ತಿದ್ದಿತು. ಅದು ಕೇವಲ ಮಿದುಳಿನ ಶಿಕ್ಷಣವಾಗಿದ್ದಿತು. ಅದರಿಂದಾಗಿ ಆಲಸ್ಯವು ಮಕ್ಕಳಲ್ಲಿ ಬೆಳೆದು ಬರುತ್ತಿದ್ದಿತು. ಸ್ವಂತದ ಕೆಲಸ ಮಾಡಲು ನಾಚಿಕೆ ಬರುತ್ತಿತ್ತು. ಇದನ್ನು ದೂರ ಮಾಡುವದಕ್ಕಾಗಿ ಮೂಲ ಶಿಕ್ಷಣವು ಮುಂದೆ ಬಂದಿತು. ಬುದ್ಧಿ ಮತ್ತು ದುಡಿಮೆಯ ಸಮನ್ವಯವೇ ಮೂಲ ಶಿಕ್ಷಣದ ಮುಖ್ಯ ತತ್ವ. ಇದರಲ್ಲಿ ಪುಸ್ತಕೀ ವಿದ್ಯೆಯ ಜೊತೆಗೆ–ಮಿದುಳಿನ ಶಿಕ್ಷಣದ ಜೊತೆಗೆ–ದುಡಿಮೆಯ–ಕೈಯ ಶಿಕ್ಷಣವು ಹಾಸು-ಹೊಕ್ಕಾಗಿ ಸೇರಿಕೊಂಡಿದೆ. ಮೂಲ ಶಿಕ್ಷಣವು ಸಾಮಾಜಿಕ ಪರಿಸ್ಥಿತಿಗೆ ಹೊಂದಿಕೊಳ್ಳುವಂಥದಾಗಿದೆ.

ಅಮೇರಿಕೆಯಲ್ಲಿ ಈಗ ನಾಲ್ಕು 'ಎಚ್'ಗಳ ಕ್ಲಬ್ಬುಗಳು ಸ್ಥಾಪಿತವಾಗಿವೆ. ಅವು ತಲೆ (ಹೆಡ್), ಕೈ (ಹ್ಯಾಂಡ), ಹೃದಯ (ಹಾರ್ಟ) ಮತ್ತು ಆರೋಗ್ಯ (ಹೆಲ್ಥ) ಇವುಗಳಿಗೆ ಬೇಕಾಗುವ ಸುಂದರ ಸಮಸ್ಥಿತ ಶಿಕ್ಷಣ ಕೊಡುವ ಪದ್ಧತಿಯನ್ನು ಅನುಸರಿಸುತ್ತಿವೆ. ಇದನ್ನು ನೋಡಿದರೆ ನಮ್ಮ ಮೂಲ ಶಿಕ್ಷಣವು ಇದೇ ತತ್ತ್ವವನ್ನು ಅಳವಡಿಸಿಕೊಂಡಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. 'ತನು ಮನವ ಬಳಲಿಸಿ' ಎಂದು ಬಸವಣ್ಣನವರು ಹೇಳಿದ ವಚನವು ಮೂಲ ಶಿಕ್ಷಣವನ್ನು ಪುರಸ್ಕರಿಸುತ್ತವೆ ನಕಾಶವು ದೊಡ್ಡದಿದ್ದರೆ ದೇಶವು ದೊಡ್ಡದಾಗುವುದಿಲ್ಲ; ದೇಶದ ದೊಡ್ಡಸ್ತಿಕೆ ದುಡಿಮೆಯನ್ನು. ಕಾರ್ಯವನ್ನು ಅವಲಂಬಿಸಿದೆ.

ಮೂಲ ಶಿಕ್ಷಣವು ಜೀವಾರವನ್ನು ಕಳೆದು ಮಕ್ಕಳಿಗೆ ತಿಳಿವಳಿಕೆ–ಜ್ಞಾನ ತಂದುಕೊಡುವಂಥದು. ಮಕ್ಕಳಿಗೆ ಸ್ವಂತ ವಿಚಾರ ಮಾಡಲಿಕ್ಕೂ ಶಿಕ್ಷಕರು ಕಲಿಸಬೇಕು. ಮತ್ತು ತಾವೂ ಸ್ವಂತ ವಿಚಾರ ಮಾಡಲು ಕಲಿಯಬೇಕು.

ಶಿಕ್ಷಕರು ಹರಿಯುವ ನಿರ್ಮಲ ಝರಿಯಂತಿರಬೇಕು. ನಿರ್ಮಲ ಝರಿಯು ಸದಾ ನಿರ್ಮಲ

ನೀರನ್ನು ಪೂರಯಿಸುವಂತೆ, ನಿರ್ಮಲ-ತಾಜಾ ಜ್ಞಾನವನ್ನು ಸಂಪಾದಿಸಿಕೊಂಡು ನಿರ್ಮಲ ಜ್ಞಾನರೂಪಿ ಜಲವನ್ನು ಮಕ್ಕಳಿಗೆ ಕೊಡುವಂಥವರಾಗಿರಬೇಕು. ಶಿಕ್ಷಕರು ನಿಂತ ನೀರಿನಂತಾಗಿರಬಾರದು. ಅವರು ಕಾಲದ ಬೆನ್ನು ಹತ್ತಬೇಕು. ಹೊಸ ಹೊಸ ಜ್ಞಾನ ಗಳಿಸಿಕೊಳ್ಳಬೇಕು. ಟ್ರೇನಿಂಗ ಪಡೆಯಬೇಕು. ಶಿಕ್ಷಣ ಶಾಸ್ತ್ರ ಹಾಗೂ ಕಲೆಯಲ್ಲಿ ಟ್ರೇನಿಂಗ ಪಡೆಯಬೇಕು. ನಮಗೆ ಈಗ ಬಿ. ಎಡ್ ಪದವಿಧರರಿಗಿಂತ ಹೆಚ್ಚಾಗಿ ಡಿಪ್ಲೋಮಾ ಇನ್ ಬೇಸಿಕ್ ಎಜ್ಯುಕೇಶನ್ ಪಡೆದ ಪದವಿಧರರು ಬೇಕಾಗಿದ್ದಾರೆ. ಸಮಸ್ತ ಮೈಸೂರ ರಾಜ್ಯದಲ್ಲಿ ಮೂಲ ಶಿಕ್ಷಣದ ಪ್ರಸಾರವನ್ನು ಮಾಡಬೇಕಾಗಿದೆ. ಧಾರವಾಡದ ಭಾಗದಲ್ಲಿ ಮೂಲ ಶಿಕ್ಷಣವು ತೃಪ್ತಿಕರ ರೀತಿಯಲ್ಲಿ ಪ್ರಗತಿಯನ್ನು ಸಾಧಿಸಿದೆ. ಇದರಂತೆಯೆ ಉಳಿದ ಕಡೆಗಳಲ್ಲಿಯೂ ಪ್ರಗತಿಯನ್ನು ಸಾಧಿಸಬೇಕಾಗಿದೆ.

ಬೇಸಿಕ್ ಶಾಲೆಗಳಲ್ಲಿ ಸಿದ್ಧಗೊಳಿಸಿದ ವಸ್ತುಗಳು ಪೇಟೆಗೆ ಹೋಗಿ ಉತ್ಪನ್ನವನ್ನು ತರಬೇಕು. ಕನಿಷ್ಠ ಪಕ್ಷ ಅವು ನಮಗೆ ಹಾನಿಯನ್ನಾದರೂ ತರುವಂಥವು ಆಗಿರಕೂಡದು. ಅವುಗಳಿಂದ ಲಾಭವಾಗದಿದ್ದರೂ ಪರವಾ ಇಲ್ಲ.

ಮೂಲ ಶಿಕ್ಷಣವು ಪ್ರಾರಂಭವಾಗಿ ಇಪ್ಪತ್ತು ವರ್ಷಗಳಾಗಿದ್ದರೂ ಅದರ ಬಗೆಗೆ ಇನ್ನೂ ನಮ್ಮ ಮುಂದೆ ಅನೇಕ ಸಮಸ್ಯೆಗಳು ಇವೆ, ಅದರ ಸಂಬಂಧವಾಗಿ ಇನ್ನೂ ಅಲ್ಲಲ್ಲಿ ವಿರೋಧದ ಧ್ವನಿಯು ಕೇಳಿಬರುತ್ತಿದೆ. ಇದಕ್ಕೆ ಕಾರಣಗಳನ್ನು ಕಂಡುಹಿಡಿದು, ಅವುಗಳ ನಿವಾರಣೋಪಾಯಗಳನ್ನು ಕೈಕೊಳ್ಳಬೇಕು.

ನೀವೆಲ್ಲರೂ ಮೂಲ ಶಿಕ್ಷಣದಲ್ಲಿ ದುಡಿಯುತ್ತಿರುವವರು, ಅನುಭವಿಗಳು. ನೀವು ಮೂಲ ಶಿಕ್ಷಣದ ಬಗೆಗೆ ಜೆನ್ನಾಗಿ ಚರ್ಚೆಮಾಡಿರಿ, ಸಮುದ್ರ ಮಥನದಿಂದ ಅನ್ಯ ತವು ಹೊರಟಂತೆ ನಿಮ್ಮ ಚರ್ಚೆಗಳಿಂದ ಒಳ್ಳೆಯ ನಿರ್ಣ ಯಾವ್ಯತವು ಹೊರಬೀಳಲೆಂದು ಪಾರ್ಥಿಸಿ ವಿಚಾರ ಗೋಷ್ಠಿಯು ಉದ್ಘಾಟಿಸಲ್ಪಟ್ಟಿತೆಂದು ಸಾರುತ್ತೇನೆ.

## ಗುರುಗಳ ಚಾರಿತ್ರ್ಯ ಹೇಗಿರಬೇಕು ?

( ೨೭ ನೇ ಪುಟದಿಂದ ಬಂದುದು )

ನುಡಿಯ ಸೇವೆಗೈದು ಪುನೀತರಾಗಿ-ನಿವೃತ್ತರಾಗಿ ಇನ್ನು ಅಲ್ಲಿ ಇಲ್ಲಿ ಬದುಕಿರುವುದನ್ನು ನಾವು ಕೇಳುತ್ತಿದ್ದೇವೆ. ಕನ್ನಡ ನಾಲೆಯ ಗುರುಗಳಾಗಿ, ತಮ್ಮ ಅಳವಾದ ಅಭ್ಯಾಸದ ಬಲದಿಂದ ನಮಗೆಲ್ಲರಿಗೂ ಅಷ್ಟೇಕೆ ಶ್ರೇಷ್ಠ ನಾಡಿತಿಗಳಿಗೂ ದಾರಿದೀಪವಾಗಿರುವ ಶ್ರೀ ಸಿಂಪಿ ಲಿಂಗಣ್ಣ ನವರು, ಶ್ರೀ ಮಿರ್ಜಿ ಅಣ್ಣಾರಾಯರು ಇನ್ನೂ ನಿವೃತ್ತ ರಾಗಿಲ್ಲವಲ್ಲ ? ಇಂಥ ಪವಿತ್ರ ಜೀವಗಳು- ಗುರುಗಳು ನಾವಿರಕ್ಕೊಬ್ಬರಾಗದೆ ಈ ಬಳಗ ಗುಣದಿಂದ-ಪಾಂಡಿತ್ಯ ದಿಂದ-ತಮ್ಮ ಸೇವೆ ಪ್ರತಿಭೆಗಳಿಂದ ಬೆಳಯುತ್ತ ನಡೆದರೆ ಅಂಥ ಸುವರ್ಣ ಕಾಲ ಬೇರೊಂದಿಲ್ಲ.

ಯಾವ ಶಿಕ್ಷಣ ಕ್ರಮವೇ ಬರಲಿ, ಎಂಥ ಸೂತ್ರ ನಿಯಮಗಳೇ ಬರಲಿ ಗುರುಗಳ ಅಭ್ಯಾಸ ಕಟ್ಟುಮಾಡುವ ಸೂತ್ರಗಳಂತೂ ಬರುವದಿಲ್ಲ. ಇಂದು ದಿನಪತ್ರಿಕೆ ಮಾಸಿಕ ಪತ್ರಿಕೆ ಇತ್ಯಾದಿಗಳನ್ನು ವರುಷದಲ್ಲಿ ಒಮ್ಮೆ ಯಾದರೂ ಕಣ್ಣೆತ್ತಿ ನೋಡದ ಅವುಗಳ ಪರಿಚಯವಿರದ ಬಳಗವನ್ನು ನಾವು ಕಾಣುತ್ತಿರುವುದು ಅತ್ಯಂತ ಶೋಚ ನೀಯ ಸಂಗತಿಯಾಗಿದೆ. ಪ್ರತಿಯೊಬ್ಬ ಜಾಗರೂಕ ನವನಾಗರಿಕನ ದೃಷ್ಟಿ ಇಂದು ವಿಶ್ವದ ತುಂಬ ಚಣ ಚಣಕ್ಕೂ ಹರಿಯುತ್ತಿದೆ. ನಮ್ಮ ದೃಷ್ಟಿ....? ದಿನಂಪ್ರತಿ ಧಾರಾಳವಾಗಿ ಚಟಗಳಿಗಾಗಿ ವೆಚ್ಚಮಾಡುವ ಹಣದಲ್ಲಿಯ ಕೊಂಚ ಭಾಗವನ್ನು ನಾವು ನಮ್ಮ ಅಭ್ಯಾಸಕ್ಕಾಗಿ ವ್ಯಯ ಮಾಡಿದರೆ ಲೋಕದ ಸುದ್ದಿ ಮನೆ ಬಾಗಿಲಿಗೆ ದಿನವೂ ಬಂದು ನಮಗಾಗಿ ಕಾಯುತ್ತದೆ: ಅಮೌಲ್ಯ ಗ್ರಂಥಗಳು ಸಿಕ್ಕುತ್ತವೆ. ಗುರುವಿನ ಭಂಡವಲ ಹಣವಲ್ಲ ! ಹೊತ್ತಿಗೆ ಗಳು. ಅಂದರೆ ಜ್ಞಾನ-ತಿಳುವಳಿಕೆ. ವಿಷಯಜ್ಞಾನವಿಲ್ಲದ ಗುರುವು ಅಂಜಿಕೊಂಡು, ಹುದುಗುತ್ತ, ಎಲ್ಲರಿಗೂ ಕೇಳಾಗಿ ಬಾಳುವುದು ತನ್ನ ಸಣ್ಣತನ ಪ್ರದರ್ಶಿಸುವುದು ತಪ್ಪಲಾ ರದು. ತಕ್ಕಮಟ್ಟಿಗೆ ಜ್ಞಾನ ಸಂಪಾದಿಸಿದ, ಓದುತ್ತ ವಿಶ್ವಜೀವಿಯಾಗಿ ಬಾಳುತ್ತಿರುವ ಗುರುವಿನ ಮುಖದಲ್ಲಿ ಮಂದಹಾಸ-ಅನುಭವದ ಕಳೆ-ತನ್ನ ನಾಮರ್ಥ್ಯದ ಪ್ರತಿ ಛಾಯೆ ಎದ್ದುಕಾಣುತ್ತದೆ. ಈ ಛಾಯೆ-ಈ ಬೆಳಕು ಎಲ್ಲ ಗುರುಗಳ ಮುಖದಲ್ಲಿ ಮಿನುಗುವಂತಾಗಲಾರದೇ .... ?

# ಶಿಕ್ಷಣದ ಆಕರ ಆಕಾಶವಾಣಿ

ಶ್ರೀ ಸಿದ್ಧಯ್ಯ ಪುರಾಣಿಕ, ಬಿ. ಏ., ಎಲ್‌ಎಲ್. ಬಿ., ಅಂಡರ್ ಸೆಕ್ರೆಟರಿ, ವಿದ್ಯಾಶಾಖೆ, ಮೈಸೂರು ಸರಕಾರ

ಕಲೆಯಂತೆ ಬಾನುಲಿಯ ಉದ್ದೇಶಗಳ ಬಗೆಗೂ ಭಿನ್ನಾಭಿಪ್ರಾಯಗಳಿದ್ದರೆ ಅಚ್ಚರಿಯೇನಿಲ್ಲ. ಆದರೆ "ಕಲೆಯು ಕಲೆಗಾಗಿ" ಎಂಬ ವಾದವೊಂದಿರುವಂತೆ "ಬಾನುಲಿಯು ಬಾನುಲಿಗಾಗಿ" ಎಂಬ ವಾದವೊಂದು ಇರಲಾರದು. ಪ್ರಮೋದ ಪೂರ್ಣ ಪ್ರಬೋಧವದರ ಮುಖ್ಯ ಉದ್ದೇಶ.

ಶಾಲೆಗಳಿಗಾಗಿ ಏರ್ಪಡಿಸುವ ಪ್ರತ್ಯೇಕ ಕಾರ್ಯಕ್ರಮಗಳು ರಂಜನೆ ಬೋಧನೆಗಳ ಸಾಧನ. ಇವು ಶಾಲೆಯನ್ನು ಪ್ರಪಂಚಕ್ಕೂ ಪ್ರಪಂಚವನ್ನು ಶಾಲೆಗೂ ಎಳೆದು ತರುವ ಪ್ರಯತ್ನದ ಪ್ರತೀಕಗಳು. ಆದುದರಿಂದ ಆಕಾಶವಾಣಿಯು ಶಿಕ್ಷಣದ ಮಹತ್ವದ ಆಕರವಾಗುತ್ತ ನಡೆದಿದೆ. ಇದಕ್ಕೆ ಗಾಳಿಯಲ್ಲಿಯ ಶಾಲೆಯೆನ್ನುವುದೂ ಇದೇ ಕಾರಣದಿಂದಲೇ.

ಪ್ರಾಚೀನ ಕಾಲದಲ್ಲಿ ಕರ್ಣವೊಂದೇ ಜ್ಞಾನಾವತಾರಕ್ಕೆ ದ್ವಾರವಾಗಿದ್ದಿತು. ಸಾಕ್ಷರತೆ, ಅಚ್ಚಿನ ಸೌಕರ್ಯಗಳಿರಲೂ ಅಪರೂಪವಾಗಿದ್ದ ಆ ಕಾಲದಲ್ಲಿ ಶ್ರೋತ್ರೇಂದ್ರಿಯವೊಂದೇ ಶಿಕ್ಷಣ ಸ್ರೋತಸ್ವಿನಿಗೆ ದಾರಿಯಾಗಿದ್ದಿತು. ಆಗಿನ ಭಾರತೀಯರೂ, ಗ್ರೀಕರೂ ಓದಿಯಲ್ಲ, ಕೇಳಿ ಕಲಿಯುತ್ತಿದ್ದರು. ಕಾವ್ಯ, ಇತಿಹಾಸ, ವೀರಕಥೆ, ಗಾದೆ, ಲಾವಣಿ, ಕೀರ್ತನೆ, ಭಜನೆ, ಪುರಾಣ ಪ್ರವಚನ ಮುಂತಾದವುಗಳ ಶ್ರವಣ, ನಾಟಕ, ಯಕ್ಷಗಾನ, ಬಯಲಾಟ, ಬೊಂಬೆಯಾಟ, ಮುಂತಾದವುಗಳ ಪ್ರೇಕ್ಷಣ ಅಂದಿನ ಶಿಕ್ಷಣದ ಸಾಧನಗಳಾಗಿದ್ದುವು. ಗುರುಮುಖದಿಂದ ಕೇಳಿ ಅದನ್ನು ನೆನಪಿಡುವುದೇ ವಿದ್ಯಾಭ್ಯಾಸ ಕ್ರಮವಾಗಿದ್ದಿತು. ಶ್ರುತಿ ಮತ್ತು ಸ್ಮೃತಿ ಶಬ್ದಗಳಲ್ಲಿ ಅಂದಿನ ಶಿಕ್ಷಣ ಕ್ರಮ ಅಡಕವಾಗಿದೆ. ಕೇಳಿ ಕಲಿಯುವ (Learning By listening) ಕ್ರಮ ನಾವು ತಿಳಿದಿರುವಂತೆ ಹೊಸದಲ್ಲ, ಬಹಳ ಹಳೆಯದು.

ಅಚ್ಚಿನ ಸೌಕರ್ಯಗಳು ಹೆಚ್ಚುತ್ತ ನಡೆದಂತೆ ಕಿವಿಯ ಕೆಲಸ ಕಡಿಮೆಯಾಗುತ್ತ ಕಣ್ಣಿನ ಕೆಲಸ ಹೆಚ್ಚಾಗುತ್ತ ಕನ್ನಡಕಗಳ ಯುಗ ಪ್ರಾರಂಭವಾಯಿತು. ಈಗ ಮತ್ತೆ ಕೇಳಿ ಕಲಿಯುವುದಕ್ಕೆ ಪ್ರಾಶಸ್ತ್ಯ ಬರತೊಡಗಿದೆ. ಇದಕ್ಕೆ ಆಕಾಶವಾಣಿ ಸುಲಭ ಸಾಧನವಾಗಿ ಮುಂದೆ ಬಂದಿದೆ. ಮೊದಲು ಹೇಳುವವರಿದ್ದಲ್ಲಿಗೇ ಕೇಳುವವರು ಹೋಗಬೇಕಾಗುತ್ತಿದ್ದಿತು; ಈಗ ಆಕಾಶವಾಣಿಯ ಮೂಲಕ ಹೇಳುವವರೇ ಕೇಳುವವರ ಮನೆ ಬಾಗಿಲಿಗೆ ಹೋಗುತ್ತಾರೆ. "ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ" ಇದ್ದಷ್ಟು ಜನ ಬಲ್ಲವರ ಪ್ರಯೋಜನ ಎಲ್ಲರಿಗೆ ದೊರೆಯುವಂತೆ ಮಾಡಲು ಎರಡೇ ದಾರಿಗಳಿವೆ. ಮೊದಲನೆಯದು ಗ್ರಂಥ ಪ್ರಕಾಶನ, ಎರಡನೆಯದು ಆಕಾಶವಾಣಿಯ ಮೂಲಕ ಅವರ ವಿದ್ಯೆಯ ವಿಸರಣ. ಭಾರತದಲ್ಲಿ ಸಾಕ್ಷರರ ತೆಯ ಪ್ರಮಾಣ ೧೮೫೧ ರಲ್ಲಿ ಪ್ರತಿ ಶತ ೫.೮ ಇದ್ದಿತು; ಸುಮಾರು ಒಂದು ನೂರು ವರ್ಷಗಳ ತರುವಾಯ ೧೯೫೧ ರಲ್ಲಿ ಅದು ನೂರಕ್ಕೆ ೮ ರಷ್ಟಾಯಿತು; ೧೯೫೧ ರಲ್ಲಿ ೧೬.೬ ಆಯಿತು; ಈಗ ಇನ್ನಷ್ಟು ಹೆಚ್ಚಾಗಿರಬಹುದು. ನೂರಕ್ಕೆ ೨೦ ರಷ್ಟು ಎಂದು ಎಣಿಸಿದರೂ ಉಳಿದ ೮೦ ರಷ್ಟು ಜನರಿನ್ನೂ ನಿರಕ್ಷರರು. ಸಾಕ್ಷರರಾಗಿರುವ ನೂರಕ್ಕೆ ೫೦ ರಷ್ಟು ಜನರೂ ವಿಶೇಷವಾಗಿ ನಗರ ಪಟ್ಟಣಗಳಲ್ಲಿ ವಾಸಿಸುವವರು. ಬಹುಸಂಖ್ಯಾಕರಾದ ಹಳ್ಳಿಗರು ನಿರಕ್ಷರರು. ಕಾರಣ ಗ್ರಂಥ ಪ್ರಕಾಶನದ ಮೂಲಕ ಅವರನ್ನು ಬಲ್ಲವರನ್ನಾಗಿ ಮಾಡುವುದು ಸದ್ಯಕ್ಕಂತೂ ಸಾಧ್ಯವಿಲ್ಲ. ಸಾಕ್ಷರತೆಯೊಂದು ಸಾಧನ, ಸಾಧ್ಯವಲ್ಲ. ಆದರ ಗುರಿ ವಿದ್ಯಾರ್ಜನೆ. ಸಾಕ್ಷರತೆಯಿಲ್ಲದೆಯೇ ಆ ಗುರಿ ಆಕಾಶವಾಣಿಯ ಮೂಲಕ ಸಾಧಿಸುವುದು ಸಾಧ್ಯವಿರುವ ಕಾರಣ ಆಕಾಶವಾಣಿ ಶಿಕ್ಷಣದ ಮುಖ್ಯ ಆಕರವಾಗುತ್ತ ನಡೆದಿದೆ; ಮನೆ ಮನೆಯ ಪಾಠಶಾಲೆಯಾಗಬಲ್ಲುದು.

ಆಕಾಶವಾಣಿಯು ಶಿಕ್ಷಕರಿಲ್ಲದ ನಿರಕ್ಷರರಿಗಷ್ಟೇ ಶಿಕ್ಷಣಾವಕಾಶವನ್ನೀಯುವದಿಲ್ಲ; ಶಿಕ್ಷಕರಿರುವ ಶಾಲಾಬಾಲಕ ಬಾಲಕಿಯರಿಗೂ ಅಷ್ಟೇ ಪ್ರಯೋಜನಕರವಾದುದಾಗಿದೆ. ಎಂಥ ಒಳ್ಳೆಯ ಶಾಲೆಯಿದ್ದರೂ ಅದರ ಶಿಕ್ಷಕರ ಸಂಖ್ಯೆ, ಅದರ ಶಿಕ್ಷಣ ಸಾಧನ ಸಂಪತ್ತಿ ನೇಮಿತವಾಗಿರುತ್ತವೆ. ಅಲ್ಲಿಗೆ ರೇಡಿಯೋ ಕೇಂದ್ರ ಬಂದಿದ್ದಾದರೆ ದೇಶದ ಎಲ್ಲ ಶಿಕ್ಷಣ ತಜ್ಞರ, ಶ್ರೇಷ್ಠ ಶಿಕ್ಷಕರ, ವ್ಯುತ್ಪನ್ನ ವಿದ್ಯಾರ್ಥಿಗಳ ಜ್ಞಾನ ಮತ್ತು ಅನುಭವಗಳು ಅಲ್ಲಿಯೇ ಅವರಿಗೆ ದೊರೆಯುವಂತಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಉತ್ಸಾಹ ಹೆಚ್ಚುತ್ತದೆ; ಶಿಕ್ಷಕರಿಗೆ

ಇದ್ದಲ್ಲಿಯೇ ಪ್ರಶಿಕ್ಷಣ (Inservicetraining) ದೊರೆಯುತ್ತದೆ. ಇದಿಲ್ಲದಿದ್ದರೆ ಅವರು ಹಳಬರಾಗಿ ಅವರ ವಿದ್ಯಾರ್ಥಿಗಳು ಹೊಸ ಜ್ಞಾನ—ವಿಜ್ಞಾನಗಳಿಗೆ ಎರವಾಗುತ್ತಾರೆ.

ಶಾಲೆಗಳಲ್ಲಿ ಉಪಯೋಗಿಸುವ ಪಠ್ಯ ಪುಸ್ತಕಗಳೂ ಒಂದು ದೃಷ್ಟಿಯಿಂದ ಹಳೆಯವೇ. ಜ್ಞಾನ ವಿಜ್ಞಾನಗಳ ಪ್ರಗತಿ ಮಿಂಚಿನ ಗತಿಯಿಂದ ಮುಂದುವರಿಯುತ್ತಲಿರುವ ಈ ಯುಗದಲ್ಲಿ ಎಂಥ ಪಠ್ಯ ಪುಸ್ತಕಗಳನ್ನು ಬರೆಸಿದರೂ ಅವು ಅಚ್ಚಾಗಿ ಹೊರಗೆ ಬರುವ ಹೊತ್ತಿಗೆ ಜಗತ್ತು ಇನ್ನೂ ಮುಂದೆ ಹೋಗಿರುತ್ತದೆ. ಆದುದರಿಂದ ಪಠ್ಯ ಪುಸ್ತಕಗಳಿಗೆ ಪೂರಕವಾಗಿ ಆಕಾಶವಾಣಿಯ ಶೈಕ್ಷಣಿಕ ಕಾರ್ಯಕ್ರಮಗಳು ಅನಿವಾರ್ಯ. ವಿಜ್ಞಾನ, ಸಾಮಯಿಕ ಇತಿಹಾಸ, ಪ್ರಚಲಿತ ವಿಷಯಗಳು, ಪ್ರಪಂಚ ಜ್ಞಾನ, ಇತ್ಯಾದಿಗಳನ್ನಂತೂ ಆಕಾಶವಾಣಿಯ ಮೂಲಕವೇ ಸುಲಭವಾಗಿ ತಿಳಿದುಕೊಳ್ಳಬಹುದು.

ಆಕಾಶವಾಣಿಯ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಇನ್ನೂ ಕೆಲವು ವೈಶಿಷ್ಟ್ಯಗಳಿವೆ. ಆಕಾಶವಾಣಿಯು ಸ್ಥಲಕಾಲಗಳ ಕಟ್ಟನ್ನೂ ಹರಿದು ಜ್ಞಾನ ವಿಜ್ಞಾನಗಳ ಸಾರ್ವತ್ರಿಕವಾದ ಕೊಡುಕೊಳ್ಳುವಿಕೆಯನ್ನು ಸಾಧ್ಯವಾಗಿಸಿ ವಿಶ್ವದ ಸರ್ವ ಜ್ಞಾನವು ಸರ್ವರ ಸೊತ್ತಾಗುವಂತೆ ಮಾಡುತ್ತದೆ; ಎಲ್ಲಿಯೋ, ಎಂದೋ ನಡೆದ, ಇಂದೂ ನಡೆಯುವ ಘಟನೆಗಳನ್ನೂ ತನ್ನ ನಾಟಕೀಯತೆಯ ಮೂಲಕ ನಮ್ಮ ಕಣ್ಣೆದುರಿಗೇ ನಡೆಯುತ್ತಿರುವುವೋ ಎನ್ನುವಷ್ಟು ಸಮೀಪವರ್ತಿಯಾಗಿ ಮಾಡುತ್ತದೆ; ಎಲ್ಲಿಯೋ ನಿಂತು ಹಾಡುತ್ತಿರುವ, ಮಾತನಾಡುತ್ತಿರುವ, ಅಭಿನಯಿಸುತ್ತಿರುವ ಗಮಕಿಗಳ, ಮಾತುಗಾರರ, ನಟವರ್ಗದ ಭಾವ ಪ್ರಭಾವವು ವಿದ್ಯಾರ್ಥಿಗಳ ಮೇಲಾಗಿ ಅವರ ಭಾವನಾ ಪ್ರಪಂಚವನ್ನೂ ರೂಪಿಸುತ್ತದೆ. ವಿದ್ಯಾರ್ಥಿಗಳಿಗೆ ಸರಿಯಾದ ಉಚ್ಚಾರ, ಸ್ಪಷ್ಟವಾದ ಮಾತುಗಾರಿಕೆ, ಸಮಯನಿಷ್ಠೆ, ಕಲಾಭಿರುಚಿ, ಕೂಡಿ ಹೇಳುವ ರೂಢಿ, ಪ್ರಕಟವಾಗುವ ಹೊರ ಹೊಸ ಪುಸ್ತಕಗಳ ಪರಿಚಯ ಆಕಾಶವಾಣಿಯ ಮೂಲಕವೇ ದೊರೆಯುತ್ತವೆ.

ಆಕಾಶವಾಣಿಯ ಅಧಿಕಾರಿಗಳು ತಜ್ಞರ ಸಹಾಯದಿಂದ ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಏರ್ಪಡಿಸುವ ಕಾರಣ ಈ ಕಾರ್ಯಕ್ರಮಗಳಲ್ಲಿ ಪ್ರಸಾರವಾಗುವ ವಿಷಯಗಳು ಅಧಿಕೃತವಾಗಿದ್ದು ಅವುಗಳಿಂದ ಅಗ್ಗದ ಹೊತ್ತಿಗೆಗಳ ಹೆಚ್ಚುಗೆಯಿಂದ ಉದಿಸುತ್ತಲಿರುವ ಅಪರಿಪಕ್ವ ವಿಚಾರಗಳು ದೂರಾಗುವುವು. ಆಕಾಶವಾಣಿಯಿಂದ ಒದಗುವ ನಿಶ್ಚಿತ ಜ್ಞಾನದಿಂದ ಉತ್ತಮ ಕ್ರಿಯೆಗಳೂ ಜಾಲಿತವಾಗುವುವು.

ಇಷ್ಟೆಲ್ಲ, ಪ್ರಯೋಜನಗಳನ್ನು ನೀಡುವ ರೇಡಿಯೋ ಉಳಿದೆಲ್ಲ ಶ್ರವಣೇಕ್ಷಣ ಶಿಕ್ಷಣ ಸಾಧನಗಳಿಗಿಂತ ಹೆಚ್ಚು ಮಿತವ್ಯಯದ ಸಾಧನ, ಹೆಚ್ಚು ಶೀಘ್ರ ಫಲಕಾರಿ, ಹೆಚ್ಚು ವೈವಿಧ್ಯಮಯವಾದುದು, ಹೆಚ್ಚು ವ್ಯಾಪಕವಾದುದು, ಹೆಚ್ಚು ಪರಿಣಾಮಕಾರಿಯಾದುದು.

ಆದರೆ ಇದೊಂದು ಸಾಧನ ಮಾತ್ರವೆಂಬುದನ್ನು ಮರೆಯಲಾಗದು. ಇದನ್ನು ಶಿಕ್ಷಕರೂ ವಿದ್ಯಾರ್ಥಿಗಳೂ ಸರಿಯಾಗಿ ಉಪಯೋಗಿಸಿಕೊಳ್ಳದಿದ್ದರೆ ಅದರ ಉಪಯುಕ್ತತೆ ಕಡಮೆಯಾಗುತ್ತದೆ; ಸರಿಯಾಗಿ ಉಪಯೋಗಿಸಿಕೊಂಡರೆ ಅದರ ಉಪಯುಕ್ತತೆ ಹೆಚ್ಚುತ್ತದೆ. ಈ ಕಾರ್ಯಕ್ರಮಗಳ ಉಪಯುಕ್ತತೆಯನ್ನು ಹೆಚ್ಚಿಸಲು ಕೈಕೊಳ್ಳಬಹುದಾದ ಕೆಲವು ಕ್ರಮಗಳನ್ನಿಲ್ಲಿ ಸೂಚಿಸಬೇಕು.

ಮೊದಲನೆಯದಾಗಿ ವಿದ್ಯಾರ್ಥಿಗಳಲ್ಲಿ ಈ ಕಾರ್ಯಕ್ರಮಗಳ ಬಗ್ಗೆ ಕುತೂಹಲ ಕೆರಳಬೇಕು. ಆಸಕ್ತಿ ಅರಳಬೇಕು. ಹಾಗೆ ಎತ್ತುಗಡೆಯಾಗಬೇಕು. ಮೊದ ಮೊದಲು ಅವರ ಅಭಿರುಚಿಗೆ ಒಗ್ಗುವ ಕಾರ್ಯಕ್ರಮಗಳನ್ನೇ ಆಯ್ದುಕೊಂಡು ಬರುಬರುತ್ತ ಕ್ಲಿಷ್ಟ ವಿಷಯಗಳನ್ನೂ ಲವಲವಿಕೆಯಿಂದ ಕೇಳುವಷ್ಟು ಉತ್ಸುಕತೆಯನ್ನು ಅವರಲ್ಲಿ ಬೆಗುರಿಸಬೇಕು. ಈ ಕಾರ್ಯಕ್ರಮಗಳನ್ನು ಕೇಳುವ ಮೊದಲು ಅವರಿಗೆ ಅದಾಗಲೇ ಆಯಾ ವಿಷಯಗಳ ಬಗೆಗೆ ಮಾಹಿತಿಯೇನಾದರೂ ಇದೆಯೆ ಎಂಬುದನ್ನು ಪರೀಕ್ಷಿಸಿ ಇನ್ನೂ ಹೆಚ್ಚಿನ ವಿವರಗಳನ್ನು ಮೊದಲೇ ಅವರಿಗೆ ತಿಳಿಸಿಕೊಟ್ಟು ಅವರು ಈ ಕಾರ್ಯಕ್ರಮಗಳನ್ನು ಸರಿಯಾಗಿ ತಿಳಿದುಕೊಂಡು ಮನನಮಾಡಿಕೊಳ್ಳುವಂತೆ ಮಾಡಬೇಕು. ರೇಡಿಯೋ ಇಟ್ಟ ಸ್ಥಳ ಜೋಕ್ಕಾಟವಾಗಿದ್ದು ಕೇಳುವವರ ಸಂಖ್ಯೆಯೂ ಗಡಿಬಿಡಿಗೆ ಎಡೆಗೊಡದಷ್ಟು ಮಿತವಾಗಿರಬೇಕು. ಮೊದಲು ಮೌನ ಮಂತ್ರದ ಮಹತ್ವವನ್ನು ಮನಗಾಣಿಸಿಕೊಡಬೇಕು. ಕೇಳುವಾಗ ಮಾತನಾಡುವುದಿರಲಿ, ಟಿಪ್ಪಣಿಗಳನ್ನೂ ತೆಗೆದುಕೊಳ್ಳಲಾಗದು. ಮೈಯೆಲ್ಲ ಕಿವಿಯಾಗಿ ಕೇಳಬೇಕು. ಕೇಳುವುದು ಮುಗಿದ ಮೇಲೆ ಬೇಕಾದಷ್ಟು ಚರ್ಚಿಸಲಿ, ವಾದಿಸಲಿ, ಪ್ರತಿಪಾದಿಸಲಿ, ಸಾಧ್ಯವಾದರೆ

ಅವುಗಳನ್ನು ತಾವೂ ಮತ್ತೊಮ್ಮೆ ಮಾಡಿ ತೋರಿಸಲಿ– ನಾಟಕವಿದ್ದರೆ ಅಡಿತೋರಿಸಲಿ; ಪ್ರಯೋಗವಿದ್ದರೆ ಮಾಡಿ ತೋರಿಸಲಿ; ಭಾವಗೀತೆಯಿದ್ದರೆ ಹಾಡಿತೋರಿಸಲಿ; ವಿಷಯವಿದ್ದರೆ ಅದರ ಬಗ್ಗೆ ಮಾತಾಡಿ ತೋರಿಸಲಿ.

ಕಾರ್ಯಕ್ರಮಗಳನ್ನು ಕೇಳುವಾಗ ಅವುಗಳಿಗೆ ಸಂಬಂಧಿಸಿದ ಸಹಾಯಕ ಸಾಮಗ್ರಿಗಳನ್ನು ಮೊದಲೇ ಸಂಗ್ರಹಿಸಿಟ್ಟುಕೊಂಡಿದ್ದರೆ ಇನ್ನೂ ಲೇಸು. ಉದಾಹರಣೆಗಾಗಿ ಯಾವುದಾದರೊಂದು ವೈಜ್ಞಾನಿಕ ಪ್ರಯೋಗದ ಬಗ್ಗೆ ಕಾರ್ಯಕ್ರಮವಿದ್ದರೆ ಆ ಪ್ರಯೋಗಕ್ಕೆ ಬೇಕಾಗುವ ಸಾಮಗ್ರಿಯನ್ನೂ ಸಿದ್ಧವಾಗಿರಿಸಿಕೊಂಡು ಆಕಾಶವಾಣಿಯಲ್ಲಿ ಆ ಪ್ರಯೋಗದ ಬಗ್ಗೆ ಹೇಳುತ್ತ ಹೋದಂತೆ ಒಬ್ಬಿಬ್ಬರು ವಿದ್ಯಾರ್ಥಿಗಳು ಅದರಂತೆ ಮಾಡುತ್ತ ಹೋದರೆ ಕೇಳುವುದೊಂದು ಏಕಮುಖಿ ವ್ಯಾಪಾರವೆಂಬ ದೂರು ದೂರಾಗಿ ನೋಡುವ ಕೇಳುವ ದ್ವಿಮುಖ ವ್ಯಾಪಾರದಲ್ಲಿ ವಿದ್ಯಾರ್ಥಿಗಳ ಉತ್ಸಾಹ ವಿಮ್ಮಡಿಸುವುದು. ಇದರಂತೆ ನಕ್ಷೆ, ಕೋಷ್ಟಕ, ಕರಿಹಲಗೆ ಇತ್ಯಾದಿ ಸಲಕರಣೆಗಳ ಉಪಯೋಗವನ್ನೂ ಕಾರ್ಯಕ್ರಮಗಳನ್ನು ಕೇಳುವಾಗ ಮಾಡಿಕೊಳ್ಳಬಹುದು.

ವಿದ್ಯಾರ್ಥಿಗಳ ಶಬ್ದ ಸಂಪತ್ತಿ ಹೆಚ್ಚಿದಂತೆ ಇಂಥ ಕಾರ್ಯಕ್ರಮಗಳ ಉಪಯುಕ್ತತೆಯೂ ಹೆಚ್ಚುತ್ತದೆ. ಎಲ್ಲ ವಿಷಯಗಳಿಗೂ ಅವುಗಳಿಗೇ ವಿಶಿಷ್ಟವಾದ ಅರ್ಥದ ಕೆಲವು ಪದಗಳಿರುತ್ತವೆ. ಶಿಕ್ಷಕರು ಮೊದಲೇ ಇಂಥ ಶಬ್ದಗಳನ್ನು ಊಹಿಸಿ ಅವುಗಳ ಅರ್ಥ ವಿದ್ಯಾರ್ಥಿಗಳಿಗೆ ತಿಳಿಸಿರಬೇಕು; ಕರಿ ಹಲಗೆಯ ಮೇಲೆ ಬರೆದಿಟ್ಟರೂ ಸರಿಯೆ. ಕೇಳುವಾಗ ಇವುಗಳಲ್ಲದೆ ಬೇರೆ ಶಬ್ದಗಳೇನಾದರೂ ಬಳಸಲ್ಪಟ್ಟರೆ ಕೇಳುವುದು ಮುಗಿದ ಮೇಲೆ ಅವುಗಳ ಅರ್ಥವನ್ನೂ ತಿಳಿಸಿಕೊಡಬೇಕು. ಅವೇ ಶಬ್ದಗಳನ್ನು ಬಳಸಿಕೊಂಡು ಕೇಳಿದ ವಿಷಯಗಳ ಬಗ್ಗೆ ನಿಬಂಧಗಳನ್ನೂ ಬರೆಯಲು ಕಲಿಸಬೇಕು. ಆಕಾಶವಾಣಿ ಬಿಟ್ಟ ಬಾಣವನ್ನು ಮತ್ತೆ ಬಿಡೆನೆಂದು ಪ್ರತಿಜ್ಞೆಗೈದ ಕರ್ಣನಂತೆ. ಆದುದರಿಂದ ಬರೆದಿಟ್ಟ ಹೊರತು ಈ ಕಾರ್ಯಕ್ರಮಗಳನ್ನು ಕಾಯ್ದಿರಿಸಲಾಗದು. ಒಮ್ಮೊಮ್ಮೆ ಒಳ್ಳೆಯ ಕಾರ್ಯಕ್ರಮಗಳನ್ನು ಪ್ರಕಟಿಸುವುದೂ ಉಂಟು. ಹಾಗೆ ಮಾಡಿದಾಗ ಆವುಗಳನ್ನು ತರಿಸಿ ಕೇಳಿದವರಿಂದ ಮತ್ತೆ ಓದಿಸಬಹುದು; ಅಣಕ ಆಕಾಶವಾಣಿಯನ್ನೂ ಶಾಲೆಯಲ್ಲಿಯೇ ಏರ್ಪಡಿಸಿ ತೋರಿಸಬಹುದು.

ನಡೆದ ಕಾರ್ಯಕ್ರಮಗಳ ಬಗ್ಗೆ ವಿದ್ಯಾರ್ಥಿಗಳ ಅಭಿಪ್ರಾಯಗಳನ್ನೂ ಶಿಕ್ಷಕರು ತಿಳಿದುಕೊಳ್ಳಬೇಕು. ಶಾಲಾ ಪ್ರಸಾರದ ಪುಸ್ತಕಗಳು ವೇಳಾಪತ್ರಿಕೆಗಳ ಸಹಾಯದಿಂದ ಈ ಕಾರ್ಯಕ್ರಮಗಳಲ್ಲಿ ಅವರಿಗೆ ಹೆಚ್ಚಾಗಿ ಹಿಡಿಸಿದ ವಿಷಯವಾವುದು? ಉಪಯೋಗಿಸಿದ ಭಾಷೆ, ನಿರೂಪಣ ಶೈಲಿ, ಧ್ವನಿ ಪರಿಣಾಮಗಳು, ಅಭಿನಯ, ಸ್ವರ ಸಾಮಂಜಸ್ಯ ಇತ್ಯಾದಿಗಳ ಬಗ್ಗೆ ಅವರ ಪ್ರತಿಕ್ರಿಯೆಗಳನ್ನು ತಿಳಿದುಕೊಳ್ಳಬೇಕು. ಜೊತೆಗೆ ತಮ್ಮ ಅಭಿಪ್ರಾಯಗಳನ್ನೂ ಶಿಕ್ಷಕರು ಸೇರಿಸಿ ನಡೆದ ಕಾರ್ಯಕ್ರಮಗಳ ಸಫಲತೆ–ವಿಫಲತೆಗಳ ಬಗೆಗೂ ಮುಂದೆ ನಡೆಯಬೇಕಾಗಿರುವ ಕಾರ್ಯಕ್ರಮಗಳ ರೂಪ–ರೇಷೆಗಳ ಬಗೆಗೂ ಆಕಾಶವಾಣಿಯ ಅಧಿಕಾರಿಗಳಿಗೆ ವರದಿ–ಸಲಹೆಗಳನ್ನು ಕಳಿಸಬೇಕು. ತಮ್ಮ ವಿದ್ಯಾರ್ಥಿಗಳಲ್ಲಿ ಯಾರಾದರೂ ಆಕಾಶವಾಣಿಯ ಯಾವುದೊಂದು ಕಾರ್ಯಕ್ರಮದಲ್ಲಿ ಭಾಗವಹಿಸುವಷ್ಟು ಯೋಗ್ಯತೆಯುಳ್ಳವರಾಗಿದ್ದರೆ ಅದನ್ನೂ ತಿಳಿಸಬೇಕು.

ಒಟ್ಟಿನಲ್ಲಿ ಆಕಾಶವಾಣಿಯ ವೈಕ್ಷಣಿಕ ಕಾರ್ಯಕ್ರಮಗಳು ಪಠ್ಯಪುಸ್ತಕಗಳಲ್ಲಿ ಪ್ರಾಣಪ್ರತಿಷ್ಠಾಪನೆ ಗೈವ ಪ್ರಯತ್ನಗಳು ಅವುಗಳಿಗೆ ಮೊದಲೂ ಅನಂತರವೂ ವಿದ್ಯಾರ್ಥಿಗಳ ಉತ್ಸುಕತೆಯನ್ನು ಪ್ರಜ್ವೋದಿಸುವ ಮತ್ತು ಸ್ಥಿರೀಕರಿಸುವುದರ ಸಲುವಾಗಿ ಶಿಕ್ಷಕರು ಮಾಡುವ ನಾಧ್ಯನಿರುವ ಪ್ರಯತ್ನಗಳ ಮೇಲೆ ಅವುಗಳ ಉಪಯುಕ್ತತೆ ಅವಲಂಬಿಸಿರುತ್ತದೆ. ಇಲ್ಲಿ ಇನ್ನೂ ಚಿತ್ರಪ್ರಸರಣೆ ಎಂದರೆ Television ಬಂದಿಲ್ಲ. ಆದುದರಿಂದ ಕೇಳುವಿಕೆಯು ಫಲಪ್ರದವಾಗಲು ಇವೆಲ್ಲ ಶ್ರವಣಪೂರ್ವ, ಶ್ರವಣೋತ್ತರ ಪ್ರಯತ್ನಗಳು ಅಗತ್ಯ. ಚಿತ್ರಪ್ರಸರಣೆ ಬಂದ ಮೇಲೆ ಧ್ವನಿಚಿತ್ರ ಪವಾಡವು (Sound and sight miracle) ಶಿಕ್ಷಣ ಪ್ರಪಂಚದ ಸ್ವರೂಪವನ್ನೇ ಮಾರ್ಪಡಿಸಿಬಿಡುವುದು.

ಕೊನೆಯದಾಗಿ ಒಂದು ಸೂಚನೆ. ಎಲ್ಲ ಶಾಲೆಗಳಿಗೂ ಕ್ರಮೇಣ ರೇಡಿಯೋ ಕೇಂದ್ರ ದೊರೆಯಬಹುದು. ಆದರೆ ಅದರ ತಂತ್ರವನ್ನು ಬಲ್ಲ ಒಬ್ಬ ಶಿಕ್ಷಕರಾದರೂ ಪ್ರತಿಯೊಂದು ಶಾಲೆಯಲ್ಲಿಯೂ ಇರಬೇಕು. ಇಲ್ಲದಿದ್ದರೆ ಅದು ಕೆಡದಂತೆ ಉಪಯೋಗಿಸುವುದು ಸಾಧ್ಯವಾಗುವುದಿಲ್ಲ. ಕೆಟ್ಟರೆ ನೆಟ್ಟಗೆ ಮಾಡಿಸಲೆಂದು ಪಟ್ಟಣಕ್ಕೇ ಹೋಗಬೇಕು. ಆದುದರಿಂದ ಶಿಕ್ಷಕರಿಗೆ ರೇಡಿಯೋ ತಂತ್ರದ ಶಿಕ್ಷಣದ ವ್ಯವಸ್ಥೆಯಾಗಬೇಕು.

ಬಾನುಲಿ ಭಾಷಣ. ಆಕಾಶವಾಣಿ ಬೆಂಗಳೂರು,

ಅವರ ಸೌಜನ್ಯವನ್ನು ಸ್ಮರಿಸಿ.

# ಬಾಪುವಿನ ಆತ್ಮಕ್ಕೆ ಶಾಂತಿಯೆಂತು ?

ಬರೆದವರು: **ಶ್ರೀ ಗ. ಬೈ. ಇಜ್ಜಂಗಿ,** ಉಪಗುರು ಜೀ. ಶಿ. ಕ. ಗಂ. ಮ. ೧ನೇ. ನಂ. ಶಾಲಾ ಹಾವೇರಿ

ಜನೇವರಿ ೩೦ನೇ ದಿನಾಂಕವು ಭಾರತೀಯರಿಗೆ ಅಷ್ಟೇ ಏಕೆ ವಿಶ್ವದ ಮಾನವ ಕುಲಕ್ಕೇ ಮರೆಯದ ದಿನ. ಯಾಕೆಂದರೆ ವಿಶ್ವಶಾಂತಿಯ ದೇವದೂತರಾದ ಗಾಂಧೀಜಿಯವರ ಜಡದೇಹವು ಕಣ್ಮರೆಯಾದ ದಿನವದು. ಅಂದು ವಿಶ್ವವಾದ್ಯಂತ ಬಾಪೂಜಿಯವರ ಭಾವಚಿತ್ರದ ಪೂಜೆ, ಮೆರವಣಿಗೆ, ಸಾರ್ವಜನಿಕ ಭಾಷಣಗಳು ಜರುಗಿ ಅವರ ಗುಣಗಾನವನ್ನು ಮಾಡಲಾಗುತ್ತದೆ. ಆದರೆ ಸ್ವರ್ಗವಾಸಿ ಬಾಪುವಿನ ಆತ್ಮವು ಶಾಂತಿಯಾಗಲಾರದು. ಯಾಕಂದರೆ ಬಾಪುವಿಗೆ ಬೇಕಾಗಿರುವದು ಮಾತಿನ ಮನ್ನಣೆಯಲ್ಲ ಕಾರ್ಯಪರಿಪೂರ್ಣತೆ.

ಬಾಪುವಿನ ಆತ್ಮಕ್ಕೆ ಮಾನವನು ಸಲ್ಲಿಸುವ ನಿಜವಾದ ಶಾಂತಿಯೆಂದರೆ ಅವರು ಜೀವಿಸಿರುವಾಗ ಮಾನವ ಕೋಟಿಯ ಕಲ್ಯಾಣಕ್ಕಾಗಿ ಹಾಕಿದ ಅನೇಕ ತಳಪಾಯಗಳ ಮೇಲೆ ಭದ್ರವಾಗಿ ಕಟ್ಟುವ ಮಂದಿರಗಳಲ್ಲಿದೆ. ಅಂದರೆ ಅವರು ಜೀವಿಸಿರುವಾಗ ಕಂಡ ಕನಸುಗಳಾದ ಖಾದಿ ಮತ್ತು ಗ್ರಾಮೋದ್ಯೋಗಗಳ ಪುನರುಜ್ಜೀವನ, ಹಳ್ಳಿಯ ಆರೋಗ್ಯ, ಅಸ್ಪೃಶ್ಯತಾ ನಿವಾರಣೆ, ಜಾತೀಯ ಐಕ್ಯ, ದುರ್ವ್ಯಸನಗಳ ಉಚ್ಚಾಟನೆ, ಸ್ವದೇಶಿ ವಸ್ತುಗಳ ಬಳಕೆ, ಸರ್ವರಿಗೂ ಸಮಾನಾವಕಾಶ, ಮೂಲಶಿಕ್ಷಣ, ಸಮಾಜ ಶಿಕ್ಷಣ ಪ್ರಸಾರ ಇವೇ ಮೊದಲಾದ ವಿಧಾಯಕ ಕಾರ್ಯಗಳನ್ನು ಸಮಾಜ ಮತ್ತು ಸರಕಾರ ಇವರು ಯಶಸ್ವಿಯಾಗಿ ಮುಂದುವರಿಸಿಕೊಂಡುಹೋಗುವದು ಅವಶ್ಯವಿದೆ. ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ ಈ ಎಲ್ಲ ಕಾರ್ಯಗಳು ಯಶಸ್ವಿಯಾಗಲು ಸಮಾಜ ಮತ್ತು ಸರಕಾರ ಒಮ್ಮನಸ್ಸಿನಿಂದ, ನಿಷ್ಠೆಯಿಂದ, ಸಹಕಾರದಿಂದ ಕಾರ್ಯ ಮಾಡಬೇಕಾಗುತ್ತದೆ. ಯಾಕಂದರೆ ಸಮಾಜ ಮತ್ತು ಸರಕಾರಗಳೆಂದರೆ ನಾಣ್ಯದ ಎರಡು ಮುಖಗಳಿದ್ದಂತೆ. ಒಂದು ಮತ್ತೊಂದಕ್ಕೆ ಪೂರಕವಾದಾಗಲೇ ಆ ನಾಣ್ಯಕ್ಕೆ ಬೆಲೆಬರುವದು; ಒಂದಕ್ಕೊಂದು ಸಂಬಂಧವಿಲ್ಲದಾಗ ಆ ನಾಣ್ಯಕ್ಕೆ ಕವಡಿಯ ಬೆಲೆಯೂ ಬಾರದು.

ಮಹಾತ್ಮರು ಖಾದಿ ಮತ್ತು ಗ್ರಾಮೋದ್ಯೋಗಗಳ ಪ್ರಸಾರಕ್ಕೆ ಮೊದಲ ಪ್ರಾಶಸ್ತ್ಯ ಕೊಟ್ಟಿದ್ದರು. ಯಾಕೆಂದರೆ ಪರಕೀಯರ ಆಳಿಕೆ, ಅವರ ಸ್ವಾರ್ಥ ಸಾಧನೆಗಳ ಫಲವಾಗಿ ಹಳ್ಳಿಗಳ ಬೀಡಾದ ಭಾರತವು ತನ್ನ ಗ್ರಾಮೋದ್ಯೋಗಗಳನ್ನು ಮೂಲೆಗುಂಪಾಗಿಸಿ ನಿರುದ್ಯೋಗಿಗಳ ಬೀಡಾಗಿ ಅನೇಕ ಅನ್ಯಾಯ ಅತ್ಯಾಚಾರಗಳಿಗೆ ಒಳಗಾಗಿತ್ತು. ಈ ಎಲ್ಲ ಅನೈತಿಕ ವ್ಯವಹಾರಗಳು ಮಾಯವಾಗಿ ಭಾರತೀಯರ ಹೊಟ್ಟೆ ತುಂಬ ಅನ್ನ, ಮೈಮುಚ್ಚುವಷ್ಟು ಬಟ್ಟೆಗಳು ದೊರೆತು ನಿರುದ್ಯೋಗ ನಿವಾರಣೆಯಾಗಲು ಖಾದಿಪ್ರಸಾರ, ಗ್ರಾಮೋದ್ಯೋಗಗಳ ಪುನರುಜ್ಜೀವನವೇ ತಾರಕ ಮಂತ್ರವೆಂದು ಮನಗಂಡ ಮಹಾತ್ಮರು ತಮ್ಮ ಜೀವಮಾನದಲ್ಲೆಲ್ಲ ಈ ಕಾರ್ಯಕ್ಕಾಗಿ ಪ್ರಯತ್ನಿಸಿದರು. ಸ್ವತಂತ್ರ ಭಾರತವು ಈ ದಿಶೆಯಲ್ಲಿ ಉದಾರವಾಗಿ ಪ್ರಯತ್ನಿಸುವದಾದರೂ ಗಾಂಧೀಜಿಯವರು ಬಯಸಿದ ಖಾದಿಶಾಸ್ತ್ರ, ಗ್ರಾಮೋದ್ಯೋಗಗಳ ಉತ್ಕರ್ಷೆಗಳು ಪೂರ್ತಿಯಾಗಲು ಇನ್ನೂ ಅನೇಕ ಮೈಲುಗಲ್ಲುಗಳನ್ನ ಕ್ರಮಿಸಬೇಕಾಗಿದೆ.

ಒಕ್ಕಲುತನವೇ ರಾಷ್ಟ್ರಜೀವಾಳವಾದ ಭಾರತದಲ್ಲಿ ಈ ಉದ್ಯೋಗದಲ್ಲಿ ತೊಡಗಿರುವ ಅಸಂಖ್ಯಾತ ಹಳ್ಳಿಗರು ಆರೋಗ್ಯವಂತರಾಗಿ, ಸದೃಢಕಾಯದವರಾಗಿ, ಶಕ್ತಿವಂತರಾಗಿರುವದು ಅತ್ಯವಶ್ಯ. ಯಾಕಂದರೆ ಭಾರತ ಬೇಸಾಯಕ್ಕೆ ಮಾನವ ಶಕ್ತಿಯೇ ಮೂಲಧನವಾಗಿದೆ. ಅದಿಲ್ಲದೆ ಎಂಥ ಫಲವತ್ತಾದ ಭೂಮಿ ಇದ್ದರೇನು ? ಎಷ್ಟು ಮಳೆಯಾದರೇನು ಪ್ರಯೋಜನ. ಕಾರಣ ಹಳ್ಳಿಗಳ ಆರೋಗ್ಯವನ್ನು ಅಲಕ್ಷಿಸುವದೆಂದರೆ ಬರಗಾಲಕ್ಕೆ ಆಮಂತ್ರಣ ಕೊಟ್ಟಂತೆಯೇ ಎಂದು ಬಾಪು ಬಲ್ಲವರಾಗಿದ್ದರು. ಭಾರತ ಸರಕಾರವು ಸಾರ್ವಜನಿಕ ಆರೋಗ್ಯ ಖಾತೆ, ಗ್ರಾಮ ಪಂಚಾಯತಿ ಮೊದಲಾದವುಗಳ ಮುಖಾಂತರ ಪ್ರಯತ್ನ ಮಾಡುತ್ತಿದೆ. ಆದರೂ ಈ ದಿಶೆಯಲ್ಲಿ ಇನ್ನೂ ಹೆಚ್ಚಿನ ಕಾರ್ಯವಾಗುವದು ಅನಿವಾರ್ಯವಾಗಿದೆ.

ಈಗ್ಗೆ ಎಂಟು ಶತಮಾನಗಳ ಪೂರ್ವದಲ್ಲಿಯೇ ಜಗಜ್ಜ್ಯೋತಿ ಬಸವೇಶ್ವರರು ಕಲ್ಯಾಣ ಪಟ್ಟಣದಲ್ಲಿ ಬಿತ್ತಿದ ಅಸ್ಪೃಶ್ಯತಾ ನಿವಾರಣೆ ಬೀಜವು ಮೊಳೆತು ಸಸಿಯಾಗಿ ಬೆಳೆಯುವಷ್ಟರಲ್ಲಿಯೇ ಪಾಶ್ಚಾತ್ಯ ಮಿಡಬೆಗಳ ಪಾವಳಿಯಿಂದ ಎಲೆ, ಟೊಂಗೆಗಳನ್ನು ಕಳೆದುಕೊಂಡು ಸಿಡಿಪಾಯುವ ಸ್ಥಿತಿಯಲ್ಲಿದ್ದ ಈ ಗಿಡಕ್ಕೆ ನೀರು, ಗೊಬ್ಬರ ಕೊಟ್ಟು

ಬಲವಾಗಿ ಬೆಳೆಯಿಸಿ ಅದರ ಹರಿ ಟೊಂಗೆಗಳು ಭಾರತ ದಾದ್ಯಂತ ಪಸರಿಸಲೆಂಬುದೇ ಮಹಾತ್ಮರ ಜೀವನದ ಉಸಿರಾಗಿತ್ತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ತಾವು ಜೀವಿಸಿರುವಾಗ ತಮ್ಮ ಆಯುಷ್ಯದ ಬಹು ಭಾಗವನ್ನು ಆ ಗಿಡದ ನೆರಳಿನಲ್ಲಿಯೇ ಕಳೆದರು. ಈಗ ಆ ರಕ್ಷಣೆಯ ಹೊರೆಯನ್ನು ಭಾರತೀಯರ ತಲೆಯ ಮೇಲಿಟ್ಟು ಹೋಗಿದ್ದಾರೆ. ಅಂತೆಯೇ ಭಾರತ ಸರಕಾರವು ಜನತೆಯ ಸಹಕಾರ, ಸಹಾನುಭೂತಿ, ಪ್ರೀತಿ, ತಕ್ಕ ಕಾನೂನುಗಳೆಂಬ ಚತುರ್ವಿಧ ಯೋಧರ ಸರ್ವಗಾವಲಿನಲ್ಲಿ ಆ ಗಿಡವನ್ನು ಬೆಳೆಯಿಸತೊಡಗಿದೆ. ಆದರೂ ವರ್ಣ ಭೇದಗಳೇ ಮೊದಲಾದ ಕೇಡಿಗಳ ಅಪ್ರತ್ಯಕ್ಷ ಪ್ರಾಬಲ್ಯದಿಂದ ಈ ಮರವು ಮಹಾತ್ಮರ ಮನಸ್ಸಿನಂತೆ ಸಲವತ್ತಾಗಿ ಬೆಳೆದಿಲ್ಲ; ಬೆಳೆಯುವ ಲಕ್ಷಣಗಳಿವೆ.

ಅಸಂಖ್ಯಾತ ಧರ್ಮ–ಜಾತಿಗಳ ತವರುಮನೆಯಾದ ಭಾರತದ ಸಹಸ್ರಾರು ವರ್ಷಗಳ ಇತಿಹಾಸ ಪುಟಗಳನ್ನು ಮುಗುಚಿ ನೋಡಿದರೆ ಈ ಧರ್ಮ–ಧರ್ಮಗಳಲ್ಲಿಯ ಜಾತಿ–ಜಾತಿಗಳಲ್ಲಿಯ ಅನೈಕ್ಯತೆ, ಅಸೂಯೆ, ಮತ್ಸರಗಳ ಪರಿಣಾಮವಾಗಿ ಭಾರತವು ಅನೇಕ ಸಾರೆ ಪರಕೀಯರ ಕೈಸೇರಿದ್ದು ತಿಳಿಯದಿರಲಾರದು. ಈ ಜಾತೀಯ ಭೇದ ಭಾವವೆಂಬ ಕುಟಿಲ ನೀತಿಯಿಂದಲೇ ಬ್ರಿಟಿಶರು ನಮ್ಮನ್ನು ಶತಮಾನ ಪರ್ಯಂತ ದಾಸ್ಯ ಶೃಂಖಲೆಯಿಂದ ಬಂಧಿಸಿದ್ದರು. ಅಷ್ಟೇಕೆ ವಿಶ್ವದ ತಂದೆಯಂತಿದ್ದ ಬಾಪೂಜಿಯವರ ಪ್ರಾಣಪಕ್ಷಿಯು ಗುಂಡಿನೇಟಿಗೆ ತುತ್ತಾದದ್ದೂ ಈ ಜಾತೀಯ ರಕ್ಕಸನಿಂದಲೇ ಎಂಬುದನ್ನು ನೆನೆದರೆ ನಮ್ಮಷ್ಟು ಮೂರ್ಖರು ಯಾರೆಂದು ಸ್ವಶ್ನೆಮಾಡಿಕೊಂಡರೆ ನಾವೇ ಎಂದು ತಲೆತಗ್ಗಿಸಿ ಹೇಳದೆ ಗತ್ಯಂತರವಿಲ್ಲ. ಇದು ಭಾರತೀಯರಾದ ನಮಗೆ ಅಳಿಸಲಾರದ ಅವಮಾನವಾಗಿದೆ. ಈ ಜಾತೀಯ ರಕ್ಕಸನ ಕರಾಳ ಕೃತ್ಯಗಳನ್ನು ಅರಿತ ಬಾಪೂಜಿಯವರು ಸ್ವತಂತ್ರ ಭಾರತ ಮಂದಿರವು ಭದ್ರವಾಗಿ ಅಚಂದ್ರಾರ್ಕ ಬೆಳಗಬೇಕಾದರೆ ಜಾತೀಯ ಐಕ್ಯವೆಂಬ ತಳಪಾಯವು ಅತ್ಯವಶ್ಯವೆಂಬುದನ್ನು ಮನಗಂಡು ಅದಕ್ಕಾಗಿ ನಾಕಷ್ಟು ಹೆಣಗಿದರು. ಭಾರತ ಸರಕಾರವೂ ಈ ಅನಿಷ್ಟಪರಂಪರೆಯ ನಾಶಕ್ಕಾಗಿ ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಆದರೂ ಬಹುಕಾಲದ ಅಂಧಾನುಕರಣೆ, ವೈಶಾಲ್ಯಮನೋಭಾವನೆಯ ಅಭಾವಗಳಿಂದಾಗಿ ಆಗಾಗ ಚಿಕ್ಕಪುಟ್ಟ ಕಿಡಿಗಳು ಕಾಣಿಸಿಕೊಳ್ಳುತ್ತವೆ. ಇಂಥ ಘಟನೆಗಳ ಪುನರಾವೃತ್ತಿಯಾಗದಂತೆ ನೋಡಿಕೊಳ್ಳುವದು ಸಮಾಜ ಮತ್ತು ಸರಕಾರದ ಆದ್ಯಕರ್ತವ್ಯವೆಂದು ಹೇಳಬಹುದು.

ಮಾದಕಪೇಯಗಳ ಸೇವನೆಯಿಂದ ಮಾನವನು ದ್ರವ್ಯವಿಹೀನನಾಗುವನಲ್ಲದೆ ಅವನ ದೇಹವು ರೋಗಗಳ ನೆಲೆವೀಡಾಗಿ ಅವನಲ್ಲಿ ಅನೇಕ ದುರ್ಗುಣಗಳು ನೆಲೆಸುವವು. ಇಂಥವರು ಸಮಾಜಕಂಟಕರಾಗಿ ಕಳವು, ಕೊಲೆ, ಸುಲಿಗೆಗಳೇ ಮೊದಲಾದ ಸಮಾಜಘಾತಕ ಕಾರ್ಯಗಳಲ್ಲಿ ತೊಡಗುವರು. ಇಂಥ ಉಪದ್ರಗಳಿಂದ ಸಾರ್ವಜನಿಕ ಸಂರಕ್ಷಣೆಗಾಗಿ ಸರಕಾರವು ಅಧಿಕ ವೆಚ್ಚಮಾಡಬೇಕಾಗುತ್ತದೆ. ಮೇಲಾಗಿ ಇಂಥವರನ್ನು ಪೊರೆಯುವ ಭಾರದಿಂದ ಸಮಾಜವು ದಿನದಿನಕ್ಕೆ ಕ್ಷೀಣಿಸುತ್ತ ನಡೆಯುತ್ತದೆ. ಅಂತೆಯೇ ಈ ದುರ್ವ್ಯಸನಗಳ ಉಚ್ಚಾಟನೆಯು ಮಹಾತ್ಮರ ಮನೀಷೆಯಾಗಿತ್ತು. ಈ ಕಾರಣದಿಂದಾಗಿ ಸರಕಾರದವರು ಅತ್ಯಧಿಕ ಆದಾಯವನ್ನು ಗಮನಿಸದೆ "ಮದ್ಯಪಾನ ನಿರೋಧ" ಕಾನೂನನ್ನು ಜಾರಿಯಲ್ಲಿ ತಂದಿದ್ದಾರೆ. ಆದರೂ ಸುರಾ ರಾಕ್ಷಸನ ಅಪ್ರತ್ಯಕ್ಷ ತಾಂಡವ ನೃತ್ಯವು ಅವ್ಯಾಹತವಾಗಿ ಸಾಗಿಯೇ ಇದೆ. ಈ ಸುರಾ ರಾಕ್ಷಸನ ಸಂಹಾರ ಕಾರ್ಯದಲ್ಲಿ ಸಾರ್ವಜನಿಕರು ಸಹಕಾರದಿಂದ ವರ್ತಿಸಿದರೆ ಮಾತ್ರ ಯಶ ದೊರೆಯುತ್ತದೆ. ಯಾಕಂದರೆ ಕೇವಲ ಕಾನೂನುಗಳಿಂದ ಯಾವ ಕಾರ್ಯವೂ ಬಯಸಿದಷ್ಟು ಪರಿಪೂರ್ಣವಾಗಲಾರವು. ಕಾಯಿದೆಗಳಿಗೆ ಸಾರ್ವಜನಿಕರ ಹೃತ್‌ಪೂರ್ವಕ ಸಹಕಾರ, ಬೆಂಬಲ, ಆಶೀರ್ವಾದಗಳು ದೊರೆತಲ್ಲಿ ಎಂಥ ಕ್ಲಿಷ್ಟ ಕಾರ್ಯಗಳೂ ಸುಲಭದಲ್ಲಿ ಕೈಗೂಡಿ, ಸಮಾಜದಲ್ಲಿ ಸುಖ ಶಾಂತಿ ನೆಲೆಸುತ್ತವೆ.

ಪಾಶ್ಚಾತ್ಯರ ಆಕ್ರಮಣದ ಪ್ರಭಾವದಿಂದಾಗಿ ಭಾರತೀಯರು ಅವರ ಸಂಸ್ಕೃತಿ, ಉಡಿಗೆ–ತೊಡಿಗೆ, ರೀತಿ–ನೀತಿಗಳಿಗೆ ಮರುಳಾಗಿ ಸ್ವದೇಶಿ ವಸ್ತುಗಳನ್ನು ತುಚ್ಛೀಕರಿಸಿದರು. ಇದರಿಂದಾಗಿ ಭಾರತದಲ್ಲಿ ನಿರುದ್ಯೋಗವು ಬೃಹದಾಕಾರ ತಾಳಿ ನಿಂತು ನಮ್ಮ ಆರ್ಥಿಕ ಭದ್ರತೆಯು ಸಡಿಲಾಗಿ ಬಡತನಕ್ಕೆ ತುತ್ತಾಗಿ ಅನ್ನಕ್ಕಾಗಿ ಅನ್ಯರ ಮುಖ ನೋಡುವ ಪ್ರಸಂಗ ಬಂದಿತು. ಈ ನಿರುದ್ಯೋಗ, ಆರ್ಥಿಕ ಅಭದ್ರತೆ ನಿರ್ಮೂಲನಕ್ಕೆ ಸ್ವದೇಶಿ ವಸ್ತುಗಳ ಬಗ್ಗೆ ಅಭಿಮಾನ ಮತ್ತು ಪ್ರೀತಿಗಳೇ ಮುಖ್ಯ. ಸ್ವದೇಶಿ ವಸ್ತುಗಳ ಬಳಕೆಯಿಂದ ಸರ್ವರಿಗೂ ಉದ್ಯೋಗಕ್ಕೆ ಅವಕಾಶ ದೊರೆತು ನಿರುದ್ಯೋಗ–ಬಡತನಗಳು ಹೇಳಹೆಸರಿಲ್ಲದಂತಾಗಿ ನಮ್ಮ ಆರ್ಥಿಕ ಭದ್ರತೆಯು ಸುರಕ್ಷಿತವಾಗುತ್ತದೆ. ಅಲ್ಲದೆ ನಮ್ಮ ಪಂಚವಾರ್ಷಿಕ ಯೋಜನೆಗಳಿಗೆ ಪರ

ರಾಷ್ಟ್ರದ ನಾಲದ ಹಣದ ದಾರೀ ಕಾಯದೆ ಸ್ವಾವಲಂಬಿ ರಾಷ್ಟ್ರವಾಗಲು ಮಾರ್ಗವಾಗುತ್ತದೆ. ಇದನ್ನರಿತೇ ಸರ ಕಾರವು ಭಾರತೀಯರಿಗೆ ಅವಶ್ಯವಿರುವ ಎಲ್ಲ ವಸ್ತುಗಳ ಉತ್ಪಾದನೆಗೆ ಶಕ್ತಿಮೀರಿ ಸಹಾಯಮಾಡುತ್ತಿದೆ. ಆದರೂ ಇನ್ನೂ ದೆಚ್ಚಾಗಿ ಈ ದಿಶೆಯಲ್ಲಿ ಪ್ರಯತ್ನಿಸುವದವಶ್ಯವಿದೆ.

ಭಾರತವು ಸ್ವತಂತ್ರ ರಾಷ್ಟ್ರವಾಗಿ ಸರ್ವರಿಗೂ ಸ್ವಾತಂತ್ರ್ಯತೆಯ ಸುಖ ಶಾಂತಿಗಳು ನೆಲೆಸಬೇಕಾದರೆ ಇಲ್ಲಿ "ಸಮಾಜವಾದಿ ಸಮಾಜ" ರಚನೆ ಅಂದರೆ ಸರ್ವರಿಗೂ ಸಮಾನಾವಕಾಶವಿರುವುದವಶ್ಯ. ಬಡವ-ಶ್ರೀಮಂತ, ಹೆಚ್ಚಿನ ವ-ಕಡಿಮೆಯವನೆಂಬ ತಾರತಮ್ಯಕ್ಕೆ ಅವಕಾಶವಿರ ಕೂಡದು. ಐಶ್ವರ್ಯ, ಅಧಿಕಾರ, ದುಡಿತ, ಸೇವೆಗಳ ಯೋಗ್ಯ ವಿತರಣೆಯಾಗಬೇಕು. ಅಂದರೆ ದೇಶದಲ್ಲಿ ಅಸೂಯೆ, ಮತ್ಸರ, ಲೋಭ, ಅಭಾವಗಳಿಗೆ ಅವಕಾಶ ವಿಲ್ಲದಾಗಿ ಪ್ರತಿಯೊಬ್ಬನೂ ಸುಖ ಶಾಂತಿಯಿಂದ ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ಬದ್ಧಕಂಕಣನಾಗುತ್ತಾನೆ. ಇಂದಿನ ಜನಪ್ರಿಯ ಕಾಂಗ್ರೆಸ್ ಸಂಸ್ಥೆಯು ಈ ಗುರಿಯನ್ನಿಟ್ಟು ಕೊಂಡಿರುವದು ಶುಭಚಿಹ್ನವೆಂದು ಹೇಳಬಹುದು.

ಸ್ವಾತಂತ್ರ್ಯ ಪೂರ್ವದಲ್ಲಿ ಬಳಕೆಯಲ್ಲಿದ್ದ ಪ್ರಾಥ ಮಿಕ ಶಿಕ್ಷಣವು ಅಪಾಯಕರವಾದದ್ದೆಂದು ಹೇಳುವ ಮಹಾತ್ಮರ ವಾಕ್ಯ ಎಷ್ಟೊಂದು ಅರ್ಥಗರ್ಭಿತವಾಗಿದೆ ನೋಡುವಾ. ಈ ನಿಷ್ಪ್ರಯೋಜಕ ಶಿಕ್ಷಣದಿಂದ ಎಷ್ಟೋ ಮನ್ಷಳು ತಮ್ಮ ತಂದೆ-ತಾಯಿ, ಬಂಧು-ಬಳಗ ಮತ್ತು ಮನೆತನದ ಉದ್ಯೋಗಗಳಿಗೆ ವಿರಾಗಿದ್ದಾರೆ. ದುಶ್ಚಟ ಗಳಿಗೆ ಒಲಿಯಾಗಿದ್ದಾರೆ. ನಗರದ ರೀತಿ-ನೀತಿಗಳಿಗೆ ಮನ ಸೋತು ಹಳ್ಳಿಗಳನ್ನು ತಾಳಿಕೆಡಿಸಿ ನಗರವಾಸಿಗಳಾಗಿ ದುರ್ವ್ಯಸನಿಗಳೂ, ದುಂದುಗಾರರೂ ಆಗಿದ್ದಾರೆ. ಯಾಕೆಂದರೆ ಜೀವನಕ್ಕೂ ಈ ಶಿಕ್ಷಣಕ್ಕೂ ಯಾವ ಸಂಬಂಧವೂ ಇರಲಿಲ್ಲ. ಕಲಿಯುವದೊಂದು ನಡೆಸಲಿಕ್ಕೆಬೇಕಾದ್ದು ಬೇರೆಯಾಗಿರುತ್ತಿತ್ತು. ಆದ್ದರಿಂದ ಕಲಿತ ವರು ದೈಹಿಕ ಶ್ರಮವಿರುವ ಕೆಲಸ ಮಾಡುವದೆಂದರೆ ಅವಮಾ ನವ ಕೆಲಸವೆಂದು ಅವರ ಗ್ರಹಿಕೆಯಾಗಿತ್ತು. ಇಷ್ಟೇ ಏಕೆ ಸುಶಿಕ್ಷಿತರು ಅಶಿಕ್ಷಿತರ ಸಂಗವು ಮಾತನಾಡುವದೂ ಒಡ ನಾಟವಿರುವದೂ ಅವಮಾನವೆಂದು ಭಾವಿಸಿದ್ದರು. ಹೀಗಾಗಿ ಸಮಾಜ ಮತ್ತು ಸುಶಿಕ್ಷಿತರ ನಡುವಳಿಯು ಕೊಂಡಿ ಗಳು ಕಳಚಿ ಸಮಾಜದ ಹಿತವು ಅಲಕ್ಷಿಸಲ್ಪಟ್ಟಿತು. ವ್ಯಕ್ತಿಯ ಸ್ವಾರ್ಥಸಾಧನೆಯು ಪ್ರಬಲವಾಯಿತು. ಇದ ರಿಂದ ಸಮಾಜದ ಅಡಿಪಾಯವೇ ಅಭದ್ರವಾಯಿತು. ಈ ಎಲ್ಲ ಅನಿಷ್ಟಗಳನ್ನು ದೂರೀಕರಿಸಲು ಸಹಾಯಕವಾಗು ವಂತೆ ಭಾರತದ ಪರಿಸ್ಥಿತಿಗೆ ಅನುಗುಣವಾಗುವಂಥ, ಅಂದರೆ ಜೀವನದ ವಿವಿಧ ರಂಗಗಳಲ್ಲಿ ತಲೆದೋರುವ ಸಕಲ ಸಮಸ್ಯೆಗಳನ್ನು ಜಯಪ್ರದವಾಗಿ ಬಗೆಹರಿಸಲು ಸಮರ್ಥ ರಾಗುವಂತ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸುಪ್ತ ಶಕ್ತಿ ಯನ್ನು ಹೊರಹೊಮ್ಮಿಸಿ ಪ್ರಜ್ಞೋದನೆಗೊಳಿಸುವಂತಹ ಅಮೂಲ್ಯವಾದ ವಿದ್ಯೆ ನೀಡಬಲ್ಲ ಮೂಲ ಶಿಕ್ಷಣವನ್ನು ಮಹಾತ್ಮರು ಬಳಕೆಯಲ್ಲಿ ತಂದರು. ಇದರಿಂದ ಮಕ್ಕಳು ಯಾವದಾದರೊಂದು ಉದ್ಯೋಗದಲ್ಲಿ ಪರಿಣತರಾಗಿ ಭಾವೀ ಜೀವನವನ್ನು ಸುಖಮಯವಾಗಿ ಕಳೆಯಲು ಮಾರ್ಗವಾಯಿತು. ಮೇಲಾಗಿ ಮಕ್ಕಳಲ್ಲಿ ಶ್ರಮಗೌರವ ವುಂಟಾಗಿ "ಕಾಯಕವೇ ಕೈಲಾಸ"ವೆಂಬ ಬಸವಣ್ಣನವರ ತತ್ವಕ್ಕೆ ಶರಣುಹೋಗುವಂತಾಯಿತು. ಇದರಿಂದ ಹಳ್ಳಿಯ ಕುಲಕಸಬುಗಳಿಗೂ ಎಷ್ಟೋ ಉತ್ತೇಜನ ಕೊಟ್ಟಂತಾ ಯಿತು. ಈ ಮೂಲಶಿಕ್ಷಣವೇ ಕಾಲಕ್ರಮೇಣ ಮಾರ್ಪ ಡುತ್ತ "ಜೀವನ ಶಿಕ್ಷಣ" "ನಯೀ ತಾಲೀಮ" ಎಂಬ ಹೆಸರಿನಿಂದ ಪ್ರಚಲಿತವಿರುತ್ತದೆ. ಜೀವನ ಶಿಕ್ಷಣವೆಂದರೆ ಜೀವನಕ್ಕೆ ಅತ್ಯವಶ್ಯವಾದ ಆಹಾರ, ಬಟ್ಟೆ, ವಸತಿಗಳ ವಿಷಯವಾಗಿ ಸ್ವಾವಲಂಬಿಯಾಗುವಂಥ ಶಿಕ್ಷಣ ಕೊಡು ವದು. ಅಂದರೆ ಪ್ರತಿಯೊಬ್ಬನು ತನಗೆ ಅವಶ್ಯವಿರುವಷ್ಟು ಆಹಾರ, ಬಟ್ಟೆಗಳನ್ನು ಸ್ವಂತ ಪರಿಶ್ರಮದಿಂದಲೇ ಉತ್ಪಾ ದಿಸಿಕೊಳ್ಳಬೇಕು. ತನ್ನ ವಸತಿಯ ಏರ್ಪಾಟನ್ನೂ ತಾನೇ ಮಾಡಿಕೊಳ್ಳಬೇಕು. ಈ ಹೊಸ ಶಿಕ್ಷಣದಲ್ಲಿ ಕೊಡಲಾಗುವ ವಾಠಗಳು ಆರ್ಥಿಕ, ನಾಮಾಜಿಕ, ನೈಸರ್ಗಿಕ, ಶಾರೀರಿಕ ಚಟುವಟಿಕೆಗಳ ಮುಖಾಂತರ ಸಾಗುತ್ತವೆ. ಆದ್ದರಿಂದ ಇವುಗಳ ಮೂಲಕ ದೊರೆಯುವ ಜ್ಞಾನವು ಶಿಲಾಲಿಪಿಯಂತೆ ಶಾಶ್ವತವಾಗಿ ಉಳಿಯುವದಲ್ಲದೆ ನಿಷ್ಪ್ರಯೋಜಕ ಶಿಕ್ಷಣದ ಜಲಲಿಪಿಯಂತೆ ಕೂಡಲೇ ಮಾಯವಾಗುವದಿಲ್ಲ. ಅಲ್ಲದೆ ಮಕ್ಕಳಲ್ಲಿ ಆರ್ಥಿಕ ಮಹತ್ವ, ಶ್ರಮಗೌರವ, ಸಮಾಜಕ್ಕೂ ತಮಗೂ ಇರುವ ನಿಕಟ ಸಂಬಂಧ, ಅಲ್ಲದೆ ಸಮಾಜದ ಹಿತಾಹಿತ ಗಳ ಕಲ್ಪನೆ, ಸೃಷ್ಟಿನೈಜಿತ್ಯದಿಂದ ದೇವಭಕ್ತಿಗಳೇ ಮೊದ ಲಾದ ಉಚ್ಚ ಗುಣಗಳು ನೆಲೆಗೊಳ್ಳುತ್ತವೆ. ಶಾರೀರಿಕ ಚಟುವಟಿಕೆಗಳಿಂದ ಸಾಕಷ್ಟು ವ್ಯಾಯಾಮ ದೊರೆತು ಸದೃಢರಾಗಿ ನಾಳಿನ ನಾಡ ನಾಯಕರಾಗುವಲ್ಲಿ ಸಂಶಯ ವಿಲ್ಲ. ಆದರೂ ಈ ಶಿಕ್ಷಣವು ಮಹಾತ್ಮರು ಬಯಸಿದಷ್ಟು ವ್ಯಾಪಕವಾಗಿ ಜನಪ್ರೀತಿಯನ್ನು ಗಳಿಸಿಲ್ಲ. ಇದಕ್ಕೆ ಬಹು

ಕಾಲದಿಂದ ನೆಲೆಯೂರಿದ ಪಾಶ್ಚಿಮಾತ್ಯ ಶಿಕ್ಷಣದ ವ್ಯಾಮೋಹದ ಜೊತೆಗೆ ಎಷ್ಟೋ ಸ್ಥಾನಿಕ ಪರಿಸ್ಥಿತಿಗಳೂ ಕಾರಣವಿವೆ. ಆದರೂ ಈಗೀಗ ಈ ಶಿಕ್ಷಣದ ಒಳ್ಳೇ ಪರಿಣಾಮವು ಸಮಾಜದ ಮೇಲೆ ಆಗುತ್ತಿದ್ದು ದಿನೇ ದಿನೇ ಪ್ರಗತಿಪಥದಲ್ಲಿದೆಯೆಂದು ಅನ್ನಲಡ್ಡಿಯಿಲ್ಲ.

ಮಾನವನು ಮಾನವನಾಗಿ ಮಾನದಿಂದ ಬಾಳ ಬೇಕಾದರೆ ಅವನು ಸುಶಿಕ್ಷಿತನಾಗಿರಬೇಕು. ಸುಶಿಕ್ಷಿತ ನೆಂದರೆ ಕೇವಲ ನಾಲ್ಕಕ್ಷರಗಳ ಓದುಬರಹವಲ್ಲ. ತಾನು, ತನ್ನ ನೆರೆಹೊರೆ, ತನ್ನ ದೇಶ ಇವುಗಳ ಯಥಾರ್ಥ ಜ್ಞಾನ ದೊಂದಿಗೆ ಅವುಗಳೊಡನೆ ತನ್ನ ನಿಕಟ ಸಂಬಂಧ ಬೇಗಿರ ಬೇಕು, ಅವುಗಳಿಗಾಗಿ ತಾನು ಮಾಡತಕ್ಕ ಕರ್ತವ್ಯ–ತ್ಯಾಗಗಳು ಯಾವವು ಎಂಬುದರ ಸಂಪೂರ್ಣ ಅರಿವುಳ್ಳವ ನಾಗಿರಬೇಕು. ತಾನು ಸಮಾಜದ ಒಂದು ಘಟಕ, ಸಮಾ ಜದ ಹಿತವೇ ತನ್ನ ಹಿತ, ಅದರ ಕೇಡುಗಳೇ ತನ್ನ ಕೇಡು ಗಳು ಎಂಬ ವಿಜ್ಞಾನವುಳ್ಳವನಾಗಿರಬೇಕು. ಅಂದರೆ ಮಾತ್ರ ಭಾರತವು ಸಮಾಜವಾದಿ ಸಮಾಜರಚನೆಯತ್ತ ಕ್ರಮಿಸುವಂತಾಗುತ್ತದೆ. ಈ ಎಲ್ಲ ಸಮಾಜ ಶಿಕ್ಷಣವು ದೊರೆಯಬೇಕಾದರೆ ಪ್ರತಿಯೊಬ್ಬರು ಅಕ್ಷರಸ್ಥರಾಗಿರ ಬೇಕಾಗುತ್ತದೆ. ಅಂತೆಯೇ ನಿರಕ್ಷರಿಗಳೇ ಅಧಿಕವಾಗಿರುವ ಭಾರತದಲ್ಲಿ ಪ್ರೌಢಶಾಲೆಗಳ ಮುಖಾಂತರ ಜನರನ್ನು ಸಾಕ್ಷರರನ್ನಾಗಿ ಮಾಡಲು ಗಾಂಧೀಜಿಯವರು ಆತುರ ರಾಗಿದ್ದರು. ಅದಕ್ಕಾಗಿ ಶಿಕ್ಷಣಾಸಾಜೆಯವರು ಇಂಥ ಶಾಲೆ ಗಳನ್ನು ಹಳ್ಳಿ ಹಳ್ಳಿಗೂ ಸ್ಥಾಪಿಸಿ, ಅದಕ್ಕಾಗಿ ಹಣವನ್ನು ಸಾಕಷ್ಟು ವ್ಯಯಮಾಡುತ್ತಾರೆ. ಆದರೂ ಆ ಕಾರ್ಯವು ಆಗಬೇಕಾದಷ್ಟು ಆಗಿಲ್ಲ. ಯಾಕೆಂದರೆ ಜನರಲ್ಲಿ ಆ ಬಗ್ಗೆ ಸಾಕಷ್ಟು ಜಾಗ್ರತಿಯಾಗಿಲ್ಲ; ಕಾಲಕ್ರಮೇಣ ಆಗಬಹುದು.

ಭಾರತದ ಉದ್ಧಾರಕ್ಕಾಗಿ, ಭಾರತೀಯರ ಸುಖ ಶಾಂತಿಗಾಗಿ, ವಿಶ್ವದ ಮಾನವಕೋಟಿಯ ಕಲ್ಯಾಣಕ್ಕಾಗಿ ಮಹಾತ್ಮಾಜಿಯವರು ಜೀವನ ಪರ್ಯಂತರವೂ ಶ್ರಮಿಸಿ ನಮಗಾಗಿ ಅನೇಕ ದಾರಿ ದೀಪಗಳನ್ನು ಬೆಳಗಿಸಿ ಪರಂ ಧಾಮವನ್ನು ಸೇರಿದ್ದಾರೆ. ಭಾರತೀಯರಾದ ನಾವು ತಾವು ತೋರಿಸಿದ ದಾರಿಯಲ್ಲಿ ಎಷ್ಟು ದೂರ ಕ್ರಮಿಸಿದ್ದೇವೆ; ಕ್ರಮಿಸುತ್ತಿದ್ದೇವೆ ಎಂಬುದನ್ನು ಅವರು ಸ್ವರ್ಗದಿಂದ ಅಂಜನ ಹಚ್ಚಿ ಈಕ್ಷಿಸುತ್ತಿದ್ದಾರೆ. ಅವರ ಆತ್ಮಕ್ಕೆ ನಾವು ಚಿರಶಾಂತಿಯನ್ನು ಕೊಡಬೇಕಾಗಿದ್ದಲ್ಲಿ ಅವರ ವಿಧಾಯಕ ಕಾರ್ಯಗಳನ್ನು ಒಳ್ಳೇ ಶಿಸ್ತೆ, ಶ್ರದ್ಧೆ, ಧೈರ್ಯ, ಆತ್ಮವಿಶ್ವಾಸ ಗಳಿಂದ ಪ್ರಗತಿಪಥದಲ್ಲಿ ಮುನ್ನಡೆಸಿಕೊಂಡುಹೋಗಬೇಕು, ಇದಕ್ಕಾಗಿ ಎಂಥ ತಾಗಕ್ಕೂ ಸಿದ್ಧರಾಗಬೇಕು. ಅಂದ ರೇನೇ ಅವರ ಆತ್ಮಕ್ಕೆ ಶಾಂತಿಯುಂಟಲ್ಲದೆ ಕೇವಲ ಅವರ ಪೂಜೆ–ಪುನಸ್ಕಾರ, ಹೊಗಳಿಕೆ, ಪ್ರಚಾರಗಳಿಂದ ಅವರ ಆತ್ಮಕ್ಕೆ ಶಾಂತಿಯು ಬದಲು ನೋವನ್ನುಂಟು ಮಾಡಿ ದಂತೆಯೇ. ಯಾಕಂದರೆ, ಅವರಿಗೆ ನಾವು ಸಲ್ಲಿಸುವ ಪೂಜೆ–ಪುರಸ್ಕಾರ, ಹೊಗಳಿಕೆಗಳು ಅವರಿಗೆ ಸ್ವರ್ಗದಲ್ಲಿ ಪ್ರತಿನಿತ್ಯವೂ ದೊರೆಯುತ್ತವೆ. ಅವುಗಳನ್ನು ಅವರು ಇಲ್ಲಿ ಯಂತೆ ಅಲ್ಲಿಯೂ ಖಂಡಿಸುತ್ತಾರೆ. ಯಾಕಂದರೆ ಅವರಿಗೆ ಅವು ಇಷ್ಟವಿಲ್ಲ. ಅವರೇ ಅಂದಿರುವಂತೆ "ಪ್ರತಿಯೊಬ್ಬರ ಕಣ್ಣಲ್ಲಿಯ ಕಣ್ಣೀರನ್ನು ಒರೆಸುವದೇ ನನ್ನ ಜೀವನದ ಗುರಿ" ಎಂದು ಪ್ರತಿಯೊಬ್ಬ ಭಾರತೀಯನೂ ಪ್ರತಿಜ್ಞೆ ಮಾಡಿ ಕಾರ್ಯೋನ್ಮುಖನಾದಲ್ಲಿ ಅಜ್ಜನ ಆತ್ಮಕ್ಕೆ ಅಂದೇ ಶಾಂತಿ ಲಭಿಸುತ್ತದೆ.

— ಜೈ ಜಗತ್ —

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

**ಜನಪ್ರಿಯವಾದ ಮತ್ತು ಸರಕಾರದಿಂದ ಮಂಜೂರಾದ ಒಂದೇ ಒಂದು ಪುಸ್ತಕ**

## ಆದರ್ಶ ಚಿತ್ರಕಲಾ

**( Ideal Drawing )**

**ಶ್ರೀ ಎಸ್. ಕೆ. ಜೋಶಿ, ಮತ್ತು**
**ಶ್ರೀ ಜಿ. ಡಿ. ವಾಲಿ.**

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧—೧೨—೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ,

**ಜಿ. ವಾಯ್. ರಾಣೆ**
**ಪ್ರಕಾಶಕರು, ಖಳಿ, ಕಸಬಾ ಪೇಟ ಪುಣೆ.**

# ಸರ್ಪಭೂಷಣ ಶಿವಯೋಗಿಗಳು

ಲೇಖಕರು : ಶ್ರೀ ಬ. ಮು. ಶಿಂತ್ರಿ, ಬಿ. ಎ., ಬಿ. ಟಿ.

## ಮೊದಲ ಮಾತು

ಕನ್ನಡ ಸಾಹಿತ್ಯದಲ್ಲಿ ಪದ್ಯ, ರಗಳೆ, ತ್ರಿವಿಧಿ, ಷಟ್ಪದಿ ಮೊದಲಾದ ಸಾಹಿತ್ಯಕ್ಕೊಂದು ಶ್ರೇಷ್ಠ ಸ್ಥಾನವಿದೆ. ಅದರಷ್ಟೇ ಮಹತ್ವವು ಕೈವಲ್ಯ ಸಾಹಿತ್ಯಕ್ಕೂ ಇದೆ. ಕರ್ನಾಟಕ ಮಾತೆಯ ಉದರದಲ್ಲಿ ಆಗಾಗ ಉದಯಿಸಿದ ಶಿವಯೋಗಿಗಳೇ ಈ ಸಾಹಿತ್ಯದ ನಿರ್ಮಾಣಕರು. ಬೇರೆ ಮತಗಳ ಸನ್ಯಾಸಿಗಳಂತೆ ಈ ಪ್ರಪಂಚದ ಜಂಜಾಟವನ್ನೇ ತೊರೆದು ನಿಷ್ಕಾಮಿಗಳನ್ನು ಸೇರಿ ತನ್ನೋನುಷ್ಠಾನದಿಂದ ತನ್ಮೂಲಕ ಮೋಕ್ಷ ( ಮೋಕ್ಷ ) ವನ್ನು ಸಾಧಿಸುವ ಗೋಜಿಗೆ ಈ ಶಿವಯೋಗಿಗಳು ಎಂದೂ ಹೋಗಲಿಲ್ಲ. ಕೆಸರಿನಲ್ಲಿಯೇ ಹುಟ್ಟಿ ಕೆಸರಿನಲ್ಲಿಯೇ ಬೆಳೆದು ಕೆಸರಿಂದ ಅಲಿಪ್ತವಾಗಿರುವ ಕಮಲದಂತೆ ಈ ಶಿವಯೋಗಿಗಳ ವರ್ಗವು ಜನ ಸಾಮಾನ್ಯರಲ್ಲಿಯೇ ಇದ್ದುಕೊಂಡು, ಅವರಲ್ಲಿಯೇ ಬೆರೆತು, ಯಾರ ಜಂಗಿಗೂ ಧಕ್ಕೆ-ಧಾರಣೆಗಳಿಗೂ ಒಳಗಾಗದೆ, ಜನತೆಯಲ್ಲಿ ಮನೆಮಾಡಿಕೊಂಡಿದ್ದ ಲೋಷ-ದೋಷಗಳನ್ನೆಲ್ಲ ನಿರಾಕ್ಷಣ್ಯವಾಗಿ ಜ್ವಲಿಗೆಡದು ಕೈಯತ್ತಿ ತೋರಿಸಿ, ಅವುಗಳನ್ನು ಪಾಮರರಿಗೂ ಅರ್ಥವಾಗುವ ತಿಳಿಗನ್ನಡದಲ್ಲಿ ರಸಭರಿತನಾದ ಹಾಡುಗಳಿಂದ ಹಳಿಹಳಿದು, ಮಾನವ ಕುಟುಂಬದ ಕಲ್ಯಾಣವನ್ನೇ ಬಯಸುವ ಕಾಯಕವನ್ನು ಕೈಕೊಂಡಿದ್ದಿತು. ವಿಶ್ವಬಂಧುತ್ವ ( Universal Brotherhood ) ವೇ ಅವರ ಹೆಗ್ಗುರಿಯಾಗಿದ್ದಿತು. ಇಂತಪ್ಪ ಅವರ ಉಪದೇಶಾವ್ಯಕ್ತವು ಯಾವದೊಂದು ವಿಶಿಷ್ಟ ಸಮಾಜಕ್ಕೆ ಸಂಬಂಧಿಸದೆ, ಮಾನವ ಕುಟುಂಬಕ್ಕೇ ಅನ್ವಯಿಸುತ್ತಿದೆ. ಸಿದ್ಧಗಿರಿ ಶಿವಯೋಗಿಗಳು, ಮುಪ್ಪಿನ ಷಡಕ್ಷರಿ ದೇವರು, ಪೈಲಾರದ ಬಸವಲಿಂಗ ಶರಣರು, ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳು, ಘನಮಠದ ನಾಗಭೂಷಣ ಸ್ವಾಮಿಗಳು, ನಂಜುಂಡ ಶಿವಯೋಗಿಗಳು ಮುಂತಾದವರು ಈ ಶಿವಯೋಗಿಗಳ ಮಾಲಿಕೆಯಲ್ಲಿ ಬರುವದುಂಟು. ಬೆಂಗಳೂರಿನ ಸರ್ಪ ಭೂಷಣ ಶಿವಯೋಗಿಗಳು ಇವರಲ್ಲೊಬ್ಬರು.

## ಬಾಲ್ಯ ಮತ್ತು ಶಿಕ್ಷಣ

ಬೆಂಗಳೂರಿನಲ್ಲಿ ಪುರಾಣ ಪ್ರಸಿದ್ಧ ಬೆಟ್ಟದಯಲ್ಲಿ ಬೆಳ್ಳಿ ಬಸವೇಶ್ವರ ದೇವಾಲಯವಿರುವ ಬಳಿಯಲ್ಲಿ ಬಾಣಾವರದವರ ದೊಂದು ವ್ಯಾಪಾರಸ್ಥರ ಮನೆತನವಿದೆ. ಆ ಮನೆತನದ ಶ್ರೀ ಮಲ್ಲಿಕಾರ್ಜುನಪ್ಪನವರು ಈ ಶಿವಯೋಗಿಗಳ ತಂದೆಯವರು. ಇವರ ತಾಯಿಯವರ ಹೆಸರು ಶ್ರೀಮತಿ ಚನ್ನವ್ವ. ಈ ದಂಪತಿಗಳ ಹೊಟ್ಟೆಯಿಂದ ಶಿವಯೋಗಿಗಳು ೧೯೦೫ರಲ್ಲಿ ಜನಿಸಿದರು. ಅವರಿಗೆ ಸರ್ಪಭೂಷಣರೆಂದು ಹೆಸರಿಟ್ಟಿದ್ದರೂ ರೂಢಿಯಲ್ಲಿ ಎಲ್ಲರೂ ಸಪ್ಪಂಣನೆಂದು ಕರೆಯುತ್ತಿದ್ದರು. ಹಳ್ಳಿಗಾಡದಲ್ಲಿಯ ಜನರು ಸಪ್ಪಂಣಪ್ಪನ ಪದಗಳನ್ನು ಒಳ್ಳೇ ಪ್ರೇಮದಿಂದ ಹಾಡುವದುಂಟು ಮತ್ತು ಹಾಡುವದನ್ನು ಉಳಿದವರು ಒಳ್ಳೇ ಆಸ್ಥೆಯಿಂದ ಕೇಳುವದುಂಟು. ಸಪ್ಪಂಣನು ಎಂಟು ವರುಷದವನಾಗುವ ವರೆಗೆ ಸಾಲೆಗೆ ಹೋಗಲಿಲ್ಲ ಮತ್ತು ಓದು-ಬರಹ ಕಲಿಯಲಿಲ್ಲ. ಮುಂಜಾನೆಯಿಂದ ಸಂಜೆಯ ವರೆಗೆ ತುಂಟತನದಲ್ಲಿಯೇ ಕಾಲ ಕಳೆಯುತ್ತಿದ್ದನು. ಒಂದು ದಿನ ಇವರ ಕುಲಗುರುಗಳಾದ ಗುರುಸಿದ್ಧ ಸ್ವಾಮಿಗಳು ಇವರ ಮನೆಗೆ ಆಗಮಿಸಿದಾಗ, ಅವರ ದಿವ್ಯ ದೃಷ್ಟಿಯು ಈ ತುಂಟನ ಮೇಲೆ ಬಿತ್ತು. ಅವನನ್ನು ಕಕ್ಕುಲತೆಯಿಂದ ಕೈಹಿಡಿದೆತ್ತಿಕೊಂಡು ಮುದ್ದಾಡಿ " ಈ ತುಂಟನು ಕಿಡಿಗೇಡಿಯಲ್ಲ; ಈತನು ಕಾರಣಿಕ ಮಹಾಪುರುಷನಾಗುವನು " ಎಂದು ಹೇಳಿ ಗುರುಸಿದ್ಧ ಯತಿವರರು ಅವನನ್ನು ತಮ್ಮ ಮಠಕ್ಕೆ ಕರೆದುಕೊಂಡು ಹೋಗಿ ಅಲ್ಲಿಯೇ ಇಟ್ಟುಕೊಂಡು ವಿದ್ಯಾಭ್ಯಾಸವನ್ನು ಮಾಡಿಸಿದರು. ಉಳಿದ ಶಿಷ್ಯರಿಗಿಂತ ಈತನು ಹೆಚ್ಚಿನ ಜುರುಕುತನ ಮತ್ತು ಮೇಧಾಶಕ್ತಿಯನ್ನು ತೋರಿದ್ದರಿಂದ ಗುರುಗಳು ಮೆಚ್ಚಿ ಈತನಿಗೆ ತಮ್ಮ ಉಭಯ ಭಾಷಾ ( ಕನ್ನಡ ಮತ್ತು ಸಂಸ್ಕೃತ ) ಪಾಂಡಿತ್ಯವನ್ನೆಲ್ಲ ಅತ್ಯಸಂತೋಷದಿಂದ ಕಲಿಸಿದರು.

## ವಿರಕ್ತಾಶ್ರಮ ಸ್ವೀಕಾರ ಮತ್ತು ದೇಶ ಸಂಚಾರ

ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಮಿಕ್ಕಿದ ಪಾಂಡಿತ್ಯವನ್ನು ಹೊಂದಿದ ಸಪ್ಪಂಣನು ತನ್ನ ತಂದೆ-ತಾಯಿಗಳ ಅಪ್ಪಣೆ ಪಡೆದುಕೊಂಡು ಗುರುಸಿದ್ಧ ಸ್ವಾಮಿಗಳಿಂದ ವಿರಕ್ತಾಶ್ರಮವನ್ನು ಹೊಂದಿ ಶಿವಯೋಗಿಯಾದನು. ಇಂತಪ್ಪ ಶಿವಯೋಗಿಗಳು ತಮ್ಮ ಗುರುವಿನ ಆಜ್ಞೆಯಂತೆ ಕಾಶೀ ಯಾತ್ರೆಗಾಗಿ ದೇಶಾಟನ

ಕೈಕೊಂಡರು. ಕಾಶೀ ಯಾತ್ರೆಗೆ ಹೋಗುವಾಗಲೂ ಅಲ್ಲಿಂದ ಮರಳುವಾಗಲೂ ಕರ್ನಾಟಕದ ತುಂಬೆಲ್ಲ ಸಂಚಾರಮಾಡಿದ್ದಾರೆ. ತಾವು ಹೋದಲ್ಲೆಲ್ಲ ತಮ್ಮ ಅನುಭವಾಮೃತವನ್ನೂ ಉಪದೇಶಾಮೃತವನ್ನೂ ಜನತೆಗೆಲ್ಲ ನೀಡಿ ತಣಿಸಿದ್ದಾರೆ. ಕರ್ನಾಟಕದ ಸಂಚಾರವನ್ನೆಲ್ಲ ಮುಗಿಸಿಕೊಂಡು ತಮ್ಮ ಹುಟ್ಟಿದ ಊರಾದ ಬೆಂಗಳೂರಿಗೆ ಬಂದು ಅಲ್ಲಿಯೇ ನೆಲೆಸಿದರು. ಸುಮಾರು ೧೯೧೫ ರಲ್ಲಿ ಸಂಚಾರಕ್ಕೆ ಹೊರಟವರು ೧೯೩೮ ರಲ್ಲಿ ಮರಳಿದರು. ಸಂಚಾರದಲ್ಲಿ ಸುಮಾರು ಹದಿಮೂರು ವರುಷಗಳನ್ನು ಕಳೆದಂತಾಯಿತು.

## ಕೈವಲ್ಯ ಸಾಹಿತ್ಯ ಮತ್ತು ಲಿಂಗೈಕ್ಯರಾದದ್ದು

ಬೆಂಗಳೂರಿನಲ್ಲಿಯೇ ಸ್ಥಿರವಾಗಿ ನಿಂತ ಮೇಲೆ ಶಿವಯೋಗಿಗಳ ಲಕ್ಷ್ಯವು ಕೈವಲ್ಯ ಸಾಹಿತ್ಯದತ್ತ ಹೊರಳಿತು. ತಾವು ಹೋದಲ್ಲೆಲ್ಲ ಜನತೆಗೆ ಉಪದೇಶ ಮಾಡುತ್ತ ಹಾಡಿದ ಪದಗಳನ್ನೆಲ್ಲ ಶೇಖರಿಸಿ ಹೊಂದಿಸಿ "ಕೈವಲ್ಯ ಕಲ್ಪವಲ್ಲರಿ" ಎಂಬ ಹೊತ್ತಿಗೆಯನ್ನು ರಚಿಸಿದರು. ಮುಂದೆ ಕೆಲ ದಿನಗಳಲ್ಲಿಯೇ "ಜ್ಞಾನ-ಶತಕ" ಎಂಬ ಮತ್ತೊಂದು ಪೊತ್ತಿಗೆಯನ್ನು ಹೊರಡಿಸಿದರು. ಇವೆರಡೂ ಗ್ರಂಥಗಳು ಕೈವಲ್ಯ ಸಾಹಿತ್ಯದಲ್ಲಿ ಶ್ರೇಷ್ಠ ಸ್ಥಾನವನ್ನು ಪಡೆದಿವೆ. ೧೯೩೯ ರಲ್ಲಿ ಒಂದು ದಿನ ಸಂಜೆಯಲ್ಲಿ ಲಿಂಗಪೂಜೆಗೆ ಕುಳಿತವರು ಆ ಪೂಜೆಯ ಯೋಗದಲ್ಲಿಯೇ ಲಿಂಗೈಕ್ಯರಾಗಿದ್ದರು! ಆದುದರಿಂದಲೇ, "ಶರಣನ ಗುಣ ಮರಣದಲ್ಲಿ ನೋಡು" ಎಂಬ ನಾಣ್ನುಡಿಯು ಬಳಿಕೆಯಲ್ಲಿದೆಯಲ್ಲವೇ? ತಾವು ಲಿಂಗೈಕ್ಯರಾಗುವದನ್ನು ಮುನ್ನಾ ದಿನವೇ ತಮ್ಮ ಸಂಗಡಿಗರಿಗೆ ಅರುಹಿದ್ದರು.

## ಕೊನೆಯ ಮಾತು

ಶ್ರೀ ಮಲ್ಲಾಬಾದಿ ವೀರಭದ್ರಪ್ಪನವರು ವ್ಯಯಾಸಪಟ್ಟು ಸುಮಾರು ಹದಿಮೂರು ಮೂಲಾಧಾರಗಳಿಂದ ವಿವರಗಳನ್ನು ಸಂಗ್ರಹಿಸಿ ಯೋಗೀಶ್ವರರ ಚರಿತ್ರವನ್ನು ಬರೆದಿದ್ದಾರೆ. ಅದರೊಳಗಿನ ಮುಖ್ಯಾಂಶಗಳನ್ನಷ್ಟೇ ಎತ್ತಿಕೊಂಡು ಸುಸಂಬದ್ಧವಾಗಿ ಹೊಂದಿಸಿ ನಮ್ಮ ಓದುಗರ ಅವಗಾಹನೆಗಾಗಿ ಈ ಲೇಖನವನ್ನು ಬರೆದುಕೊಟ್ಟಿದೆ. ಸಪ್ಪಣಪ್ಪನವರು ಯೋಗೀಶ್ವರರೂ ಆಹುದು; ಉದ್ದಾಮ ಸಾಹಿತಿಗಳೂ ಆಹುದು; ವರ ಕವಿಗಳೂ ಆಹುದು; ಸಂಗೀತಗಾರರೂ ಆಹುದು. ಪ್ರತಿಯೊಂದು ಪದವನ್ನು ರಾಗ-ತಾಳಗಳಿಗನುಸರಿಸಿ ತಿಳಿಗನ್ನಡದಲ್ಲಿ ರಚಿಸಿದ್ದಾರೆ. ಆದುದರಿಂದ ಇವರ ಪದಗಳನ್ನು ಜನ ಸಾಮಾನ್ಯರು ಒಳ್ಳೇ ಪ್ರೇಮದಿಂದಲೂ ಅಭಿಮಾನದಿಂದಲೂ ಹಾಡುವದುಂಟು. ಇವರ ಪದಗಳನ್ನು "ಸಪ್ಪಣಪ್ಪನ ಪದಗಳು" ಎಂದು ನಮ್ಮ ನಾಡಿನ ಜನತೆಯು ಕರೆಯುವದುಂಟು. "ಕೈವಲ್ಯಕಲ್ಪವಲ್ಲರಿ"ಯೊಳಗಿನದೊಂದು ಪದವನ್ನು ಇಲ್ಲಿ ಉದಾಹರಿಸಬಾಗಿದೆ:—

ರಾಗ— ಶಂಕರಾಭರಣ

ಬಿಡು ಬಾಹ್ಯದೊಳು ಡಂಭವ | ಮಾನಸದೊಳ–
ಗೆಡೆಯಿಡದಿರು ಶಂಭುವ
ಒದಲೊಳು ಪಂಚಿಸಿ ಹೊರಗೆ ನೀ ಕೀರ್ತಿಯ
ಪಡೆದರೆ ಶಿವ ನಿನಗೊಲಿವನೇ ಮರುಳೇ ‖ ಪಲ್ಲವಿ ‖
ಜನಮೆಚ್ಚಿ ನಡೆಕೊಂಡರೇನುಂಟು ಲೋಕದಿ
ಮನಮೆಚ್ಚಿ ನಡೆಕೊಂಬುವವೆ ಜೆಂದವು
ಜನರೇನು ಬಲ್ಲರು ಒಳಗಾಗೊ ಕೃತ್ಯವ
ಮನವರಿಯದ ಕರ್ಮತನವಿಲ್ಲವಲ್ಲಾ ‖ ೧ ‖
ಜನರು ಮೆಚ್ಚುತೆ ನಿನ್ನ ಕೈಲಾನಕೊಯ್ಯರೆ
ಜನ ಮೆಚ್ಚದಿರೆ ಶಿವ ಬಿಮುಖನಪನೇ
ಜನರಲ್ಲಿ ಸಿನ್ನನು ದೊಡ್ಡತನವೆಂದರೆ
ಜಿನುಮಯ ಶಿವನಲ್ಲೆ ಆಸಿಯನೆ ಮರುಳೇ ‖ ೨ ‖
ಮನದೊಳು ಶಿವ ತಾನು ಮನೆಮಾಡಿಕೊಂಡಿಹ
ಮನಮೆಚ್ಚಿ ನಡೆದರೆ ಶಿವ ಮೆಚ್ಚುವ
ಮನಕಂಜ ನಡೆಯದೆ ಜನಕಂಜ ನಡೆದರೆ
ಮನದಾಣ್ಮ ಗುರುಸಿದ್ಧ ಮರೆಯಾಗೊನಲ್ಲ ‖ ೩ ‖

ನೋಡಿರಿ! ಎಂತಹ ಉದಾತ್ತ ವಿಚಾರಗಳನ್ನು ಪಾಮರರಿಗೂ ಸಹ ತಿಳಿಯುವಂತೆ ಎಂತಹ ತಿಳಿಗನ್ನಡದಲ್ಲಿ ರಾಗ-ತಾಳಗಳಿಗನುಗುಣವಾಗಿ ಶಿವಯೋಗಿಗಳು ರಚಿಸಿರುವರು! ಇದು ಸಚ್ಚಕ್ತಿಯಿಂದ ತುಂಬಿ ತುಳುಕುತ್ತಿದೆಯಲ್ಲವೇ? ಇಂತಹ ಪದವನ್ನು ನಾಲೆಯ ಚಿಕ್ಕಮಕ್ಕಳು ಒಳ್ಳೇ ಪ್ರೇಮದಿಂದ, ಭಕ್ತಿಯಿಂದ ಮತ್ತು ಸುಸ್ವರದಿಂದ ಹಾಡುವದುಂಟು. ನಮ್ಮ ನಾಡಿನ ಪ್ರಾಥಮಿಕ ಶಾಲೆಗಳೂ ಟ್ರೇನಿಂಗ ಸಂಸ್ಥೆಗಳೂ ಈ ಭಕ್ತಿತತ್ಪರ ಪದವನ್ನು ತಮ್ಮ ಮುಂಜಾನೆಯ ಪ್ರಾರ್ಥನೆಗೆ ಏಕೆ ಇಟ್ಟುಕೊಳ್ಳಬಾರದು? ಕೆಲವು ಶಾಲೆಗಳು ಇದನ್ನು ತಮ್ಮ ಪ್ರಾರ್ಥನೆಗೆ ಇಟ್ಟುಕೊಂಡ ಸಂಗತಿಯು ನಮ್ಮ ಕೇಳಿಕೆಯಲ್ಲಿದೆ. ಉಳಿದ ಶಾಲೆಗಳೂ ಇದರತ್ತ ಗಮನವೀಯುವವೊಳಿತು.

**ಜಯ ಹಿಂದ**

# ಸತ್ತದ್ದು ಸಾವು, — ಬಸವನಾಳರಲ್ಲ

## ಲಿಂಗೈಕ್ಯ ಪ್ರೊ. ಬಸವನಾಳರ ಏಳನೇಯ ವಾರ್ಷಿಕೋತ್ಸವ

### [ ಮುಲ್ಲಭದ್ರನ ವರದಿ ]

ಲಿಂಗೈಕ್ಯ ಪ್ರೊಫೆಸರ ಶಿ. ಶಿ. ಬಸವನಾಳ ಅವರ ಸ್ಮಾರಕ ಸಂಸ್ಥೆಯವರು ದಿನಾಂಕ ೨೨-೧೨-೧೯೫೫ರಲ್ಲಿ ಸೋಮವಾರ ಸಾಯಂಕಾಲ ೬ ಗಂಟೆಗೆ ಏಳನೆಯ ವಾರ್ಷಿಕ ಲಿಂಗೈಕ್ಯ ದಿನಾಚರಣೆಯ ಸಮಾರಂಭವನ್ನು ಲಿಂಗಾಯತ ಭವನದಲ್ಲಿ ಪದ್ಧತಿ ಪ್ರಕಾರ ಏರ್ಪಡಿಸಿದ್ದರು. ಈ ಸಮಾರಂಭದ ಮುನ್ಸೂಚನೆಯೋ ಏನೋ ಸೂರ್ಯಾಸ್ತಮಯದೊಡನೆ ಬಹು ಪ್ರಶಾಂತ ವಾತಾವರಣ ನಿರ್ಮಿತವಾಗಿತ್ತು. ಲಿಂಗಾಯತ ಭವನದ ಹೂದೋಟದಲ್ಲಿ ಪ್ರೊ. ಬಸವನಾಳರ ಸಮಾಧಿ ಗದ್ದುಗೆಯ ಸುತ್ತಲೂ ಮುತ್ತೈದೆಯರು–ನಿಟ್ಟೈದೆಯರು, ಮಕ್ಕಳು–ಮರಿಗಳು ಕಳಶ–ಕನ್ನಡಿಗಳಿಂದ ಪೂಜಾದಿಗಳನ್ನು ಅರ್ಪಿಸಿದರು. ಶ್ರೀ ಬಸವನಾಳರ ಆತ್ಮೀಯರಾದ ಹುಬ್ಬಳ್ಳಿ ಸೂಜ್ಯ ಚಿಕ್ಕ ವೀರಪ್ಪನವರು ಹಾಗು ಅಭಿನ್ನಾತ್ಮರಾದ ಶ್ರೀ ಕಟ್ಟೆಮನಿ ಮಾಸ್ತರ,ಎಂ.ಎಲ್.ಸಿ.ಅವರು ಆಗಮಿಸಿ ಅಮೃತಪುತ್ಥಳಿಗೆ ಹೂಮಾಲೆಗಳನ್ನು ಅರ್ಪಿಸಿ ಗೌರವ ಸಲ್ಲಿಸಿದರು. ಸ್ಮಾರಕ ಸಂಸ್ಥೆಯವರ ಕಾಣಿಕೆಯನ್ನು ಹೂಮಾಲೆಗಳಿಂದ ಶ್ರೀ ಬಿ. ಎಂ. ಶಿಂತ್ರಿಯವರು ಅರ್ಪಿಸಿದರು. ತರಿಕೆರೆ ದೊಡ್ಡಮನಿ ಶಿವಲಿಂಗಯ್ಯನವರು ಅರ್ಪಿಸಿದ ಪೊಸಪೂಮಾಲೆ ಇವೆಲ್ಲವುಗಳ ಪರಿಮಳದ ಭಾರದಿಂದ ತಂಗಾಳಿ ತೀಡುತ್ತಿತ್ತು. ಮಂಗಳ ನಿನಾದದ ಸಮಧುರ ಶಾಂತಿಯುತ ಸನ್ನಿವೇಶದಲ್ಲಿ ಲಿಂಗಾಯತ ಭವನದಲ್ಲಿ ಸಭೆಯ ಕಾರ್ಯಕ್ರಮ ಆರಂಭವಾಯಿತು.

ಧಾರವಾಡದ ಸಿವ್ಹಿಲ್ ಜಜ್ಜರೂ ಸುಪ್ರಸಿದ್ಧ ವಿದ್ವಾಂಸರೂ ಸಂಗೀತಕಲಾ ಪ್ರವೀಣರೂ ತಾತ್ವಿಕ ಸಮಾಲೋಚನೆಯ ಸಿದ್ಧಿಪಡೆದವರೂ ಆದ ಶ್ರೀ ಆರ್. ಬಿ. ನಾಯಕ್, ಎಂ. ಎ., ಎಲ್‌ಎಲ್. ಎಂ. ಅವರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕಲಾಪಗಳು ಸಾಂಗವಾದವು. ಕುಮಾರಿ ಪಂಪಾಂಬಿಕೆ ಮಲ್ಲಾಬಾದಿ ಹಾಗೂ ಕುಮಾರಿ ಮುಕ್ತಾಯಕ್ಕ ಮಲ್ಲಾಬಾದಿ ಸಹೋದರಿಯರು ಮಂಜುಳ ರವದಲ್ಲಿ— ದೇವತಾ ಸ್ತಾರ್ಥನೆ ಮಾಡಿ ಸಭೆಯನ್ನು ಪ್ರಸನ್ನಗೊಳಿಸಿದರು. ಸ್ಮಾರಕ ಸಂಸ್ಥೆಯ ಸದಸ್ಯರಾದ ಶ್ರೀ ಬಿ. ಎಂ. ಶಿಂತ್ರಿಯವರು ಅಧ್ಯಕ್ಷರ ಹಾಗೂ ಉಪನ್ಯಾಸಕರ ಬಗ್ಗೆ ಪರಿಚಯಾತ್ಮಕ ಪ್ರಾಸ್ತಾವಿಕ ಭಾಷಣ ಮಾಡುತ್ತ ಸರ್ವರಿಗೂ ಸ್ವಾಗತವನ್ನು ಬಯಸಿದರು.

ರೇಡಿಯೋ ಸ್ಟಾರ ಜನಪದ ಸಾಹಿತ್ಯ ರತ್ನ ಬಾಳಪ್ಪ ಹುಕ್ಕೇರಿ, ಮುರಗೋಡ ಅವರು, ಹುಬ್ಬಳ್ಳಿಯ ಸುಪ್ರಸಿದ್ಧ ಶ್ರೀ ವಾಲಿ ಗಂಗಪ್ಪ ಕವಿಗಳಿಂದ ರಚಿತವಾದ ಬಸವನಾಳರ ಗೀತೆಯನ್ನು ಹಾಡಿ ಸಭಿಕರಲ್ಲಿ ಚೈತನ್ಯವನ್ನು ಒಡಮೂಡಿಸಿದರು.

### ಶ್ರೀ ಟಿ. ಆರ್. ರಾಜಶೇಖರಯ್ಯ ಇವರ ಭಾಷಣ

ಕರ್ನಾಟಕ ವಿಶ್ವವಿದ್ಯಾಲಯದ ಇಂಗ್ಲಿಷ ಭಾಷೆಯ ರೀಡರ್ ಆಗಿರುವ ಶ್ರೀ ಟಿ. ಆರ್. ರಾಜಶೇಖರಯ್ಯ ಎಂ. ಎ. ಅವರು ತಮ್ಮ ವಿದ್ಯಾರ್ಥಿ ಜೀವನದಿಂದಲೇ ಹೃದಯದಲ್ಲಿ ನಿರ್ಮಿಸಿಕೊಂಡ ಪ್ರೊ. ಬಸವನಾಳರವರ ಆದರ್ಶ ದಿವ್ಯ ಜೀವನ ಹಾಗೂ ಬಹುಮುಖ ಭವ್ಯ ವ್ಯಕ್ತಿತ್ವದ ಸುಂದರ ಚಿತ್ರವನ್ನು ಕುರಿತು ಮಂದಸ್ಮಿತವದನರಾಗಿ ತಮ್ಮದೇ ಆದ ಭಾಷಾ ಪ್ರಭುತ್ವದ ಹೊಸ ಸೊಬಗಿನ ಕವಿತಾಶೈಲಿಯ ರಸಿಕತೆಯ ಕುಶಲತನದ ಸಂತಸದ ಠೀವಿಯಲ್ಲಿ ಇಂಗ್ಲಿಷಿನಲ್ಲಿ ಮಿಾಸಲ ಭಾಷಣ ಮಾಡಿದರು. ಮೊದಲೇ ಪ್ರಸನ್ನರೂ ಚೈತನ್ಯಶಾಲಿಗಳೂ ಆದ ಸಭಿಕರು ಬೆಬ್ಬೆರಗಾಗಿಬಿಟ್ಟರು. ಧಾರವಾಡದ ನಾಗರಿಕರು ಸಾರ್ವಜನಿಕವಾಗಿ ಅವರ ಭಾಷಣ ಕೇಳಿದ್ದು ಇದೇ ಮೊದಲು. ತ್ಯಾಗಮಯ ಜೀವನದಿಂದ ಕಟ್ಟಿದ ಹಲವಾರು ವಿದ್ಯಾಸಂಸ್ಥೆಗಳಿಂದ ವಿಶ್ವವಿದ್ಯಾನಿಲಯ; ಅವರು ಸಂಪಾದಿಸಿದ ಹಲವಾರು ಉದ್ಗ್ರಂಥಗಳು, ಅವರು ನಾನಾ ಸಭೆ–ಸಮ್ಮೇಳನಗಳಲ್ಲಿ ಮಾಡಿರುವ ಭಾಷಣಗಳು— ವಿಶ್ವವಿದ್ಯಾಲಯಕ್ಕಾಗಿ ಜೀವನದ ಉಸಿರಿರುವ ಕಡೆಯ ಗಳಿಗೆಯ ವರೆಗೆ ಸಲ್ಲಿಸಿರುವ ಚಿರಸ್ಮರಣೀಯ ಸೇವೆ ಇವೆಲ್ಲವುಗಳಿಂದ ಪ್ರೊ. ಬಸವನಾಳರು ಸತ್ತಿಲ್ಲ; ಆದರೆ ವೃತ್ಯು ಸತ್ತಿದ್ದಾನೆ. ( Prof. Basawanal is not dead but Death is dead ) ಎಂದು ಹೇಳುತ್ತ ಅವರ ಸೌಜನ್ಯ ಸಹನಶೀಲತೆ ಅಜ್ಞಾನ ನಿವಾರಣೆಗಾಗಿ ಅವರು

ಕೈಕೊಂಡ ವಿದ್ಯಾಪ್ರಸಾರ ದೀಕ್ಷೆ ಎಡಬಿಡದೆ ಬಿಡುವಿಲ್ಲದ ಕೆಲಸದಲ್ಲಿ ಸತತೋತ್ಸಾಹಿಗಳಾಗಿ ದುಡಿಯುತ್ತಿದ್ದ ರೀತಿ ಅವರ ಮಧುರಮಯ ಪ್ರಕಾಶಮಯ ಸಂಸಾರ ಜೀವನ ಅವರ ಪ್ರತಿಭಾನ್ವಿತ ಪಾಂಡಿತ್ಯವನ್ನು ಪ್ರತಿನಿಧಿಸುವ ವಿಶಾಲ ಹಣೆ, ನಿರಾಕಾರದ ಸುಳುವುಹಿಡಿಯುವ ಲೋಚನಗಳು, ಕುಶಾಗ್ರಬುದ್ಧಿಯ ಚೇತನವನ್ನು ಸೂಚಿಸುವ ನಾಸಿಕ, ಅವರ ತುಂಬುಹೃದಯದ ಭಕ್ತಿಪ್ರೇಮವನ್ನು ಹೊರಹೊಮ್ಮಿಸುವ ಪ್ರಸನ್ನ ಮುಖಮುದ್ರೆ, ಅವರ ಸ್ನೇಹ ರಸಭರಿತ ಸಜ್ಜನಿಕೆ ಅವರ ಆತ್ಮೀಯ ಆಕರ್ಷಣೆ ಇವೆಲ್ಲವೂ ನಮ್ಮನ್ನು ಮುಗ್ಧಗೊಳಿಸಿಬಿಟ್ಟಿವೆ."

ಖಡ್ಗದ ಬಲದಿಂದ ಕಟ್ಟಿದ ನೆಪೋಲಿಯನ್‌ನ ಸಾಮ್ರಾಜ್ಯ ಉಳಿಯಲಿಲ್ಲ; ಅಳಿಯಿತು. ಆದರೆ ಸ್ವಾರ್ಥತ್ಯಾಗ ಸೇವೆ-ಪ್ರೇಮ-ದಾಸೋಹಂಭಾವದಿಂದ ಲೇಖನಿ ಬಲದಿಂದ ನಿರ್ಮಿಸಿದ ಅವರ ವಿದ್ಯಾ ಸಂಸ್ಥೆಗಳಲ್ಲಿ, ಸಾಹಿತ್ಯ ಗ್ರಂಥಗಳಲ್ಲಿ ಅವರಿಂದ ಸೇವಾ ದೀಕ್ಷೆ ಪಡೆದ ಸಹಸ್ರಾರು ವ್ಯಕ್ತಿಗಳ ಹೃದಯದಲ್ಲಿ ಪ್ರೊ. ಬಸವನಾಳರು ಜೀವಂತ ಇದ್ದಾರೆ. ಇದೇ ಈ ಕ್ಷಣದಲ್ಲಿ ಇದ್ದಾರೆ ಎಂದು ಬಹು ವಿನಮ್ರಿತ ಭಾವದಿಂದ ಪ್ರೊ. ಬಸವನಾಳರವರಿಗೆ ತಮ್ಮ ಭಾವದ ಕಾಣ್ಕೆಯನ್ನು ಸಲ್ಲಿಸುತ್ತ ಸ್ಮಾರಕ ಸಂಸ್ಥೆಯವರಿಗೆ ಈ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ ತಮ್ಮ ಭಾಷಣ ಮುಗಿಸಿದರು.

### ಪ್ರಿನ್ಸಿಪಾಲ ಎಸ್. ಪಿ. ಪಾಟೀಲರ ಭಾಷಣ

ಗಂಡುಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜ್ ಪ್ರಿನ್ಸಿಪಾಲರಾದ ಶ್ರೀ ಎಸ್.ಪಿ.ಪಾಟೀಲರು ಪ್ರೊಫೆಸರ್ ಬಸವನಾಳರನ್ನು ನೆನೆದು ಪುಣ್ಯತಿಥಿಗಳ ಆಚರಣೆ ಯಾತಕ್ಕಾಗಿ ಮಾಡಬೇಕು ಎಂದು ವಿವರಿಸುತ್ತ ಶಿಕ್ಷಕರ ಸ್ಥಾನಮಾನದ ಮಹೋನ್ನತ ಆದರ್ಶವನ್ನು ಬಸವನಾಳರ ವ್ಯಕ್ತಿತ್ವದಿಂದ ವೀರಗಂಭೀರ ಶೈಲಿಯಲ್ಲಿ ನಿರೂಪಿಸಿದರು. ಅವರು ಪಡೆದ ಗೃಹಶಿಕ್ಷಣದಿಂದ ಪ್ರೌಢಶಿಕ್ಷಣ ಹಾಗೂ ಪುಣೆಯಲ್ಲಿ ಡೆಕ್ಕನ್ ಕಾಲೇಜ ಪ್ರಿನ್ಸಿಪಾಲ್ F. W. ಬೇನ್ ಸಾಹೇಬರವರ ಆದರ್ಶದಿಂದ ಲೋಕಮಾನ್ಯ ಟಿಳಕರ ವರ್ಚಸ್ಸು ಅವರು ಕಟ್ಟಿದ ವಿದ್ಯಾ ಸಂಸ್ಥೆಯ ವಾತಾವರಣದಿಂದ ಕರ್ನಾಟಕಕ್ಕೆ ಬಂದು ನಾಲ್ಕಾರು ಜನ ಸಹೋದ್ಯೋಗಿಗಳೊಡನೆ ತ್ಯಾಗ ಗುಣದಿಂದ ನಿಸ್ವಾರ್ಥ ಜೀವನದಿಂದ ಉದಾತ್ತ ಧ್ಯೇಯದಿಂದ ಅಪಾರ ಪಾಂಡಿತ್ಯ ಸೌಜನ್ಯಗಳಿಂದ, ಕಟ್ಟಿದ ಕೆ.ಎಲ್.ಇ. ಸೊಸಾಯಿಟಿಯಿಂದ ಈ ನಾಡಿಗೆ ಎಷ್ಟೊಂದು ಉಪಕಾರವಾಗಿದೆ. ಶಿಕ್ಷಕರು ಮನಸ್ಸು ಮಾಡಿದರೆ ಸಮಾಜದ ಗುರುಗಳಾಗಿ ಎಂತಹ ಮಹತ್ಕಾರ್ಯ ಸಾಧಿಸಬಹುದೆಂಬುದು ಪ್ರೊ. ಬಸವನಾಳರವರ ಆದರ್ಶ ವ್ಯಕ್ತಿತ್ವದಿಂದ ಸಿದ್ಧವಾಗಿರಲು. ೧೯ನೆಯ ಶತಮಾನದಲ್ಲಿ ಕನ್ನಡ ಹುಲಿ ಡೆಪೂಟಿ ಚಿನ್ನಬಸಪ್ಪನವರು ಮಾಡಿದ ಮಹತ್ಕಾರ್ಯವನ್ನು ೨೦ನೆಯ ಶತಮಾನದಲ್ಲಿ ಪ್ರೊ. ಬಸವನಾಳರವರು ಇನ್ನೂ ವಿಧಾಯಕವಾಗಿಯೂ ವ್ಯವಸ್ಥಿತವಾಗಿಯೂ ಮುಂದುವರಿಸಿಕೊಂಡು ಬಂದರು. ತ್ಯಾಗ

## ಲಿಂಗೈಕ್ಯ ಶ್ರೀ ಬಸವನಾಳರ ಸ್ಮರಣೆ

ಶ್ರೀ ಆರ್. ಬಿ. ನಾಯಿಕ, M. A., LL. M.

ಕನ್ನಡದ ನಾಡು ನುಡಿಗಳ ಸುಸೇವೆಯಿಂ
ಕನ್ನಡತ್ವದ ನೈಜ
ತಪವನಾಚರಿಸಿದಿರಿ ‖ ೧ ‖
ವಿದ್ಯೆಯಿಂದಲಿ ಸಕಲ
ಅಭ್ಯುದಯವು ಬಹುದೆಂಬ
ಸತ್ಯವನು ಮನಗಂಡು
ಶೈಕ್ಷಣಿಕ ಕ್ಷೇತ್ರದಲಿ ‖ ೨ ‖
ತ್ಯಾಗಮಯ ನಿಷ್ಠೆಯಿಂ
ಜ್ಞಾನದೀಪವ ಬೆಳಗಿ
ಜನಪದಕೆ ಸಂಸ್ಕೃತಿಯ
ಸುಗಮ ಮಾರ್ಗವ ತೋರಿ ‖ ೩ ‖
ಇಂದು ಉದಯಿಸಿತವ್ವದ
ನವರಾಜ್ಯ ನಿರ್ಮಾಣ
ಪೂರ್ವ ಕಾಯಕದಲ್ಲಿ
ಶಿಲ್ಪಿವರ್ಯರು ಎನಿಸಿ ‖ ೪ ‖
ಪುಣ್ಯತಮ ಜೀವನವ
ಪರಿಪನಿಯ ರೀತಿಯೊಳು
ಕನ್ನಡದ ಕುಲಕಾಗಿ
ಅರ್ಪಿಸಿದ ಶಿವಯೋಗಿ ‖ ೫ ‖
ಪರಮಪೂಜ್ಯರೆ ನಿಮ್ಮ
ಸ್ಮರಣೆ ನಿರತವು ಕರಲಿ
ಶರಣು, ಶರಣರೆ ನಮ್ಮ
ವರ ಬಸವನಾಳರೇ ‖ ೬ ‖

ವೀರ ಲಿಂಗರಾಜರ ಕಟ್ಟೆಯಮೇಲೆ ಕುಳಿತು ಹೇಳುತ್ತಿದ್ದ ಅವರ ಸಂತಸದ ಸವಿನುಡಿಗಳನ್ನು ಕೇಳದೆ ನಾನು ಹೋಗುತ್ತಿರಲಿಲ್ಲ. ಎಂ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾದಾಗ ಕಾಯಿದೆ ದೃಷ್ಟಿಯಿಂದ ಬಸವನಾಳರಿಗೆ ಸಲ್ಲಬೇಕಾಗಿದ್ದ ಬಹುಬೆಲೆಯ ಪಾರಿತೋಷಿಕವನ್ನು ಇಬ್ಬರಿಗೂ ಹಂಚಿರಿ ಎಂದು ಸಮಿತಿಯವರಿಗೆ ಹೇಳಿ ತ್ಯಾಗ ಗುಣವನ್ನು, ಕಾರ್ಯದ ಸುಲಭ ಮಾರ್ಗವನ್ನು ಏಕ ಕಾಲಕ್ಕೆ ತೋರಿಸಿದರು. ಕರ್ನಾಟಕ ಏಕೀಕರಣಕ್ಕಾಗಿ ಸುಭದ್ರವಾದ ರಚನಾತ್ಮಕ ತಳಹದಿ ಹಾಕಿದುದಲ್ಲದೆ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ "ಕೇಸ್ ಫಾರ್ ಕರ್ನಾಟಕ ಯುನಿವರ್ಸಿಟಿ" ಎಂದು ಬರೆದು-ಹಗಲಿರುಳೂ ಶ್ರಮಿಸಿದರು. ಶಿಕ್ಷಕರಾಗಿದ್ದರೂ ಅವರ ಕ್ಷೇತ್ರ ವಿಶಾಲವಾಗಿದ್ದಿತು. ಅವರು ಮಾಡಿದ ಸಾಹಿತ್ಯ ಸಂಶೋಧನೆ, ಚನ್ನಬಸವ ಪುರಾಣ ಇತ್ಯಾದಿಗಳಿಗೆ ಬರೆದ ಪ್ರಭಾವಯುತ ಪ್ರಸ್ತಾವನೆ, ಬಸವಣ್ಣನವರ ವಚನಗಳ ಸಂಸ್ಕರಣದಲ್ಲಿ ಅವರು ತೋರಿರುವ ಜಾಣ್ಮೆ ಎಲ್ಲವೂ ನನಗೆ ಮಾರ್ಗದರ್ಶನವಾಗಿರುವುವಲ್ಲದೆ ಅವರ ಜೊತೆಯಲ್ಲಿ ಬರುವ "ಮಾಸ್ತರ" ಈ ಪದದಿಂದ, ಅದರ ಸ್ಥಾನ ಮಾನ ಗೌರವವೂ ಹೆಚ್ಚಾಗಿದೆ ಎಂದು- ಬಹು ಮಮತೆ ಆತ್ಮೀಯತೆ ವಾತ್ಸಲ್ಯ ಭಕ್ತಿಗೌರವಗಳಿಂದ ತಮ್ಮ ಭಾಷಣ ಮಾಡಿ ಪ್ರೊ. ಬಸವನಾಳರವರಿಗೆ ಸೇವೆ ಸಲ್ಲಿಸಿದರು.

### ಶ್ರೀ ಗುಂಜಾಳ ಮಾಸ್ತರರ ಭಾಷಣ

ಆರ್. ಎಲ್. ಎಸ್. ಹೈಸ್ಕೂಲಿನ ಶ್ರೀ ಎಸ್. ಆರ್. ಗುಂಜಾಳ ಮಾಸ್ತರ ಅವರು ಪ್ರೊ. ಬಸವನಾಳರು ವಿದ್ಯಾರ್ಥಿಗಳಿಗಾಗಿ ಮಾಡುತ್ತಿದ್ದ ಅಪಾರವಾದ ಉಪಕಾರವನ್ನು ತಮಗಾಗಿ ಅವರು ಮಾಡಿದ ಉಪಕಾರವನ್ನು ಸ್ಮರಿಸುತ್ತ ಲೇಸೆನಿಸಿಕೊಂಡು ಏಸು ದಿನ ಬಾಳಿದರೇನು ? ಎಂಬ ವಚನದ ನಿರ್ವಚನವನ್ನು ವಿವರಿಸುತ್ತ ಕೆ. ಎಲ್. ಇ. ಸೊಸಾಯಿಟಿ ಕಟ್ಟಲು ಅವರು ಮಾಡಿದ 'ಸ್ಯಾಕ್ರಿಫೈಸ್' (ಸ್ವಾರ್ಥತ್ಯಾಗ) ಈಗ ಹೇಗೆ 'ಸಕ್ಕರಿ ಪಾಯಸ' ವಾಗಿದೆ ಎಂದು ಬಹು ಜಾಣ್ಮೆಯಿಂದ ಮೆಲ್ಲನೆಲ್ಲನೆ ವಿವರಿಸಿ ಉಪಕಾರಿಗಳ ದಿವ್ಯಸ್ಮರಣೆಯನ್ನು ನೆನಪಿಗೆ ತಂದರು.

### ಅಧ್ಯಕ್ಷರ ಉಪಸಂಹಾರ ಭಾಷಣ

ಅಧ್ಯಕ್ಷರಾದ ಶ್ರೀ ಆರ್. ಬಿ. ನಾಯಿಕ ನ್ಯಾಯಾಧೀಶರು ಆರಂಭದಲ್ಲಿಯೇ ಪ್ರೊ. ಬಸವನಾಳರ ಸ್ಮರಣೆಗಾಗಿ ಅಂದೇ ಅವರು ರಚಿಸಿದ ಕವಿತೆಯನ್ನು ಅಂದು ತೋರಿಸಿದರು. ನಂತರ ಪ್ರೊ. ಬಸವನಾಳರವರ ದಿವ್ಯ ಸ್ಮರಣೆಯ ಈ ಸಭೆಗೆ ತಾವು ಒಪ್ಪಿದ ಔಚಿತ್ಯವನ್ನು ಬಹು ಸಹೃದಯತೆಯಿಂದ ಹೇಳಿದರು. ರಬಕವಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ದಾವಣಗೆರೆಯ ಶ್ರೀ ಜಿ. ಎಸ್. ಸಾವಳಿಗಿಯವರ ಮೂಲಕ ಪ್ರೊ. ಬಸವನಾಳರವರ ಪರಿಚಯ ಆದ ವಿವರವನ್ನು ಹೇಳುತ್ತ ಅಂದು ಅವರು ಅಪ್ಪಣೆ ಕೊಡಿಸಿದ ಕನ್ನಡ ಮುನ್ನಡೆವ ಬಗೆಯ ಅಧ್ಯಕ್ಷರ ಭಾಷಣವನ್ನು ಮನವಾರೆ ನೆನೆದರು. ಪ್ರೊ. ಬಸವನಾಳರವರ ಪರಿಚಯ ನಿಕಟವಾಗುತ್ತ ಬಂದದ್ದು ಕರ್ನಾಟಕ ವಿಶ್ವವಿದ್ಯಾಲಯದ ಕೆಲವು ಸಮಿತಿಗಳ ಮೂಲಕವೆಂದೂ ತಿಳಿಸುತ್ತ ೧೯೪೯ ರಲ್ಲಿ ತಾವು ಇಂಗ್ಲೀಷಿನಲ್ಲಿ ಬರೆಯುತ್ತಿದ್ದ ಪುಸ್ತಕವನ್ನು ಕನ್ನಡಿಗರ ವಿಶೇಷ ಉಪಯೋಗಕ್ಕಾಗಿ ಸ್ವತಃ ತಾವೇ ಭಾಷಾಂತರಿಸುತ್ತೇನೆಂದು ಔದಾರ್ಯ ತೋರಿದರು. ಆಗ ನನಗೆ ಬಹಳ ಆಶ್ಚರ್ಯವೆನಿಸಿತು. ಇದೇನಪ್ಪಾ ಒಬ್ಬ ಚಿಕ್ಕವನು ಬರೆದರೆ- ಅದನ್ನೂ ತನಗಿಂತ ಚಿಕ್ಕವರಾದವರು ಅಥವಾ ವಿದ್ಯಾರ್ಥಿಗಳಾದವರು ಭಾಷಾಂತರಿಸಬೇಕು; ಅದು ಬಿಟ್ಟು ಪ್ರೊ. ಬಸವನಾಳರವರಂಥ ಪ್ರಾಜ್ಞರೂ ಮೇಧಾವಿಗಳೂ ನನಗಾಗಿ ಈ ಮಾತು ಹೇಳುವುದು ಅವರ ಮೇಲ್ಮೈಯಕುರುಹು ಎಂದಾಗ " ಭಾಷಾಂತರವು ವೇಷಾಂತರವಾಗಬಾರದು " ಎಂದೆನ್ನುತ್ತಿದ್ದರು. ದಕ್ಷಿಣ ಸಂಸ್ಥಾನಗಳ ವಿಚಾರದಲ್ಲಿ ಅವರೂ ನಾನೂ ಅನೇಕ ಸಾರಿ ರಬಕವಿ, ಬನಹಟ್ಟಿ ಮುಂತಾದೆಡೆಗಳಲ್ಲಿ ಕೂಡುತ್ತಿದ್ದೆವು. ಆಗ ಅವರು ಇಡೀ ಕನ್ನಡ ನಾಡಿನ ಬಗ್ಗೆ ತೋರಿಸುತ್ತಿದ್ದ ತೀವ್ರವಾದ ಆಸಕ್ತಿ ಮಾರ್ಗದರ್ಶನ ಇವೆಲ್ಲವೂ ಬಹು ಹಿತಕರವಾಗಿದ್ದವು. ಶ್ರೀ ಅಬಕಾರ ಚನ್ನಮಲ್ಲಪ್ಪನವರ ಮನೆಯಲ್ಲಿ ನಾವು ಕೂಡಿ ಕೆಲಸ ಮಾಡುತ್ತಿದ್ದೆವು. ಅಹಾ ! ಅವರಿಗೆ ಸಂಗೀತದ ಮೇಲೆ ಎಷ್ಟೊಂದು ಮಮತೆ ಇತ್ತು ! ಹರಿಹರದೇವನ ಲಲಿತ ರಗಳೆ ಮುಂದಾಸಿಲರಗಳೆಗಳನ್ನು ಹಾಡಲು ಪ್ರೊ. ಮಲ್ಲಿಕಾರ್ಜುನ ಮನಸೂರು ಅವರಿಂದ ಹಾಡಿಸುತ್ತಿದ್ದದ್ದನ್ನು ಕೇಳಿದ್ದು ಒಂದು ಸಲ. ಸಂಗೀತ ಸಮಾರಾಧನೆಯಲ್ಲಿ ತಲ್ಲೀನರಾದ ಪ್ರೊ. ಬಸವನಾಳರು ಮಾತನಾಡುತ್ತ " ಶಿಶುಗಳಿಗೂ-ಪಶುಗಳಿಗೂ-ಫಣಿಗಳಿಗೂ ಸಂಗೀತ ತಿಳಿಯುತ್ತದೆ " ಎನ್ನುತ್ತಾರೆ. ಆದರೆ ನಾನು ಶಿಶುವೂ ಅಲ್ಲ, ಪಶುವೂ ಅಲ್ಲ, ಫಣಿ ಮೊದಲೇ ಅಲ್ಲ- ಎಂದು ಎಷ್ಟೊಂದು ಸೊಗಸಿನ ಭಾವದಲ್ಲಿ ವಿಚಾರವನ್ನು ಅಳವಡಿಸಿ- ಪ್ರೊ. ಬಸವನಾಳರು ಸಂಗೀತವನ್ನು ಮೆಚ್ಚಿಕೊಂಡು ಆರಾಧಿಸುತ್ತಿದ್ದರು.

ಈ ದಿವಸ ಪ್ರೊ. ರಾಜಶೇಖರಯ್ಯನವರೂ, ಪ್ರಿನ್ಸಿ ಪಾಲ್ ಪಾಟೀಲರೂ ಮತ್ತು ಶ್ರೀ ಗುಂಜಾಳರವರೂ ಅವರ ವ್ಯಕ್ತಿತ್ವದ ನಾನಾಮುಖವನ್ನು ಕುರಿತು ಬಹಳ ಭಾವರಮ್ಯವಾಗಿ ಮಾತನಾಡಿದ್ದಾರೆ.

ಈ ನಾಡಿನಲ್ಲಿ ಬಸವನಾಳರ ಭಕ್ತರೂ, ಶಿಷ್ಯರೂ, ಸ್ನೇಹಿತರೂ ಅಪಾರವಾಗಿ ತುಂಬಿದ್ದಾರೆ. ಬಸವನಾಳರಂತೆ ರಾಷ್ಟ್ರವನ್ನು ಕಟ್ಟುವ ಸಾಹಿತ್ಯವನ್ನು ಜೆಳೆಸುವ ಸಂಘಶಕ್ತಿಯನ್ನು ಹೆಚ್ಚಿಸುವ ಸತತೋದ್ಯೋಗಿಗಳಾಗುವ ಆದರ್ಶ ಶಕ್ತಿ ನಮ್ಮ ಓಳಿಗೆಯಲ್ಲಿ ಮುಂದುವರಿಯಬೇಕು. ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಾಗಿ ಅವರು ಮಾಡಿದ ಸೇವೆ–ಮಾರ್ಗದರ್ಶನ ಅಪಾರವಾಗಿದೆ. ಈ ರೂಪದಲ್ಲಿ ನನ್ನ ಸೇವೆಯನ್ನು ಸಲ್ಲಿಸುವ ಅವಕಾಶ ಒದಗಿಸಿಕೊಟ್ಟಿರುವ ಕ್ಕಾಗಿ ಸ್ಮಾರಕ ಸಂಸ್ಥೆಯವರಿಗೆ ಆಭಾರಿಯಾಗಿದ್ದೇನೆ ಎಂದೂ ತಮ್ಮ ಸಹಜವಾದ ಸೌಜನ್ಯಶೀಲ ಶೈಲಿಯಲ್ಲಿ ಉಪಸಂಹಾರ ಭಾಷಣ ಮಾಡಿದರು. ಸ್ಮಾರಕ ಸಂಸ್ಥೆಯ ಪರವಾಗಿ ಶ್ರೀ ಎಂ. ಎಸ್. ಪಾಟೀಲ ವಕೀಲರವರಿಂದ ಮಾನ್ಯ ಅತಿಥಿ ಅಧ್ಯಕ್ಷರಿಗೂ ಭಾಷಣಕಾರರಿಗೂ ಪುಷ್ಪಮಾಲೆ ಅರ್ಪಿಸಲಾಯಿತು. ಜಯಪ್ರದವಾಗಿ ಸಭಾ ಕಾರ್ಯ ಸಾಂಗವಾದುದಕ್ಕೆ ಸಭಿಕರ ಪರವಾಗಿ ತುಂಬಿದ ಹೃದಯದಿಂದ ಆನಂದ ವ್ಯಕ್ತಪಡಿಸುತ್ತ ಸ್ಮಾರಕ ಸಂಸ್ಥೆಯ ಪರವಾಗಿ, ಸರ್ವರಿಗೂ ಆಭಾರವನ್ನಣೆಯನ್ನು ಸಭಾರಂಜಕ ಮಲ್ಲಾಬಾದಿ ವೀರಭದ್ರಪ್ಪನವರು ಸಲ್ಲಿಸಿದರು. ಸಭಾಭೂಷಣ ಹುಕ್ಕೇರಿ ಬಾಳಪ್ಪನವರು ಮಂಗಲ ಗೀತೆಯನ್ನು ಹಾಡಿದರು.

ಇಂದು ಪ್ರೊ. ರಾಜಶೇಖರಯ್ಯನವರು ಇಂಗ್ಲಿಷಿನಲ್ಲಿ ಮಾಡಿದ ಭಾಷಣವನ್ನು ಕೇಳಿ ಸ್ಮಾರಕ ಸಂಸ್ಥೆಯ ಕೋಶಾಧಿಕಾರಿಗಳಾದ ಶ್ರೀ ಎನ್.ಕೆ. ಭಾವಿಕಟ್ಟಿಯವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತ ಮೊದಲಿಗೆ ಗೊತ್ತಾಗಿದ್ದಲ್ಲಿ ಪ್ರೇಪರಿಕಾರ್ಡ ಮಾಡುಹುದಾಗಿತ್ತು ಎಂದು ಉದ್ಗಾರತೆಗೆದರು. ಈ ಏಳನೇ ವಾರ್ಷಿಕ ಸ್ಮಾರಕ ಸಮಾರಂಭದ ಭಾಷಣಗಳ ದಿವ್ಯ ಪರಿಣಾಮದಿಂದ ಪೋಷಣೆಗೊಂಡ ಭಾವದಲ್ಲಿ ತಿಂಗಳ ಬೆಳಕಿನಲ್ಲಿ ನಲಿದಾಡುತ್ತ ಸಭಿಕರು ಸಂತಸದಿಂದ ಮನೆಯನ್ನು ಸೇರಿದರು.

---

# ಶಿಕ್ಷಕರ ತಳಪಾಯ

ಅನು:– **ಶ್ರೀ ಮುಳ್ಳೂರ ವಾಸುದೇವ,** ಅಮೀನಗಡ (ಜಿಲ್ಲಾ:– ವಿಜಯಪುರ)

ವಸ್ತುತಃ ಇಂದು ಮುಖ್ಯವಾಗಿ ಆರ್ಥಿಕ, ಸಾಮಾಜಿಕ ಅಥವಾ ರಾಜಸೀತಿಕ ಸಮಸ್ಯೆ ಇಲ್ಲ, ನಿಜವಾಗಿಯೂ ಮಾನವತೆಯ ರಕ್ಷಣೆಯ ಸಮಸ್ಯೆಯಿದೆ. "ಈ ಪ್ರಕಾರ ಮಾಡಿರಿ, ಈ ಪ್ರಕಾರ ಮುಂದುವರೆಯಿರಿ" ಎಂದು ವಿಶ್ವ ವಂದ್ಯ ಬಾಪೂಜಯವರು ಪ್ರಕಾಶ ತೋರಿರುವರಷ್ಟೇ ಅಲ್ಲ ಕೈಹಿಡಿದು ಹಾದಿ ತೋರಿಸಿದ್ದಾರೆ. ಪಥಭ್ರಷ್ಟ ಮಾನವನಿಗೆ ಪೂಜ್ಯ ಬಾಪೂಜಿಯವರು ವರದಾನವಾಗಿದ್ದಾರೆ. ಅಸಮರ್ಥ ಮಾನವನಿಗೆ ಮಾತ್ರ ಬೆಳಕು ಬೀಗಿದರೆ ಕಾರ್ಯ ಆಗದು. ಸಂಯೋಜನೆಯನ್ನೂ ಕಲಿಸುವದು ಅಪರಿಹಾರ್ಯವಾಗಿರುತ್ತದೆ. ಜಾತಿ-ಪಂಥವಿರಹಿತ, ಶೋಷಣ ರಹಿತ, ಸಮೂಹ ಹಾಗೂ ವ್ಯಕ್ತಿ ವಿಕಾಸವಾಗುವಂಥ ಸಮಾಜವನ್ನು ನಿರ್ಮಿಸಬೇಕು. 'जात पात पूछे नहीं कोई' ಇದು ತುಲಸೀದಾಸರ ಕಲ್ಪನಾ ಸಾಮ್ರಾಜ್ಯ ವಾಗಲಿ, ಜಾತಿವಾದ, ಸಂಪ್ರದಾಯವಾದ ಮತ್ತು ಗುಟವಾದದ ಹೆಸರೂ ಸಹ ಇರಬಾರದು; ಯಾಕಂದರೆ ಮೂಲ ಪ್ರಶ್ನೆಯು ಮನುಷ್ಯನೊಡನೆ ಆಗುವ ವ್ಯವಹಾರದ್ದಿರುತ್ತದೆ. ಮಾನವೀಯ ಸಂಪರ್ಕದಲ್ಲಿಯೇ ಮಾನವತೆಯ ಒರೆಗಲ್ಲಿದೆ, ಅಂದರೆ ಶಿಕ್ಷಣದ ಸುಧಾರಣೆಯೇ, ಅದರ ಸುಧಾರಣೆಯ ರೀತಿಯು,ಅಷ್ಟೊಂದು ಮಹತ್ವವಾದುದಲ್ಲ, ಮಾನವನು ಮಾನವನೊಡನೆಯ ಸಂಬಂಧ ಮತ್ತು ವ್ಯವಹಾರ ಯಾವ ಪ್ರಕಾರದ್ದಾಗಬೇಕು, ಇಂದು ಯಾವ ಪ್ರಕಾರವಿದೆಯೆನ್ನುವದೇ ಮೂಲ ಪ್ರಶ್ನೆಯು. ವಿಜ್ಞಾನವು ಕರ್ಮಮಯ ವ್ಯವಹಾರಿಕವಾಗಿ ಸತ್ಯವಾಗುತ್ತದೆ, ಅದೇ ನಿಜವಾದದ್ದು, ಸ್ಥಾಯಿಯಾದದ್ದು. ಅವುಗಳಿಂದಲೇ ಜೀವನವು ಸಮೃದ್ಧ ಮತ್ತು ಉಪಲಬ್ಧಯುಕ್ತವಾಗುತ್ತದೆ.

ಸ್ವರ್ಗೀಯ ಅಮರನಾಥ ಝಾ ಅವರ ಹೇಳಿಕೆಯ ಪ್ರಕಾರ "ಶಿಕ್ಷಕ ಸಮಾಜವು ಅಸಂತುಷ್ಟವಾದರೆ ಯಾರೂ ಹಿಡಿಯಲಾರದಂಥ ಅಶಾಂತಿ ಹಬ್ಬುತ್ತದೆ." ಇದ್ದರಿಂದ ಶಿಕ್ಷಕರ ಅವಶ್ಯಕತೆಯ ಭಾರವನ್ನು ಸರಕಾರ ಹಾಗೂ ಸಮಾಜ ಹೊರಬೇಕು. ಅಭಾವಗ್ರಸ್ತ ಶಿಕ್ಷಕನು ದೇಶ

ಅಥವಾ ಸಮಾಜಕ್ಕೆ ಬಹಳ ದೊಡ್ಡ ಆತಂಕ ಹಾಗೂ ಭಯಾನಕವಾಗಿ ಪರಿಣಮಿಸುತ್ತಾನೆ. ಸಮಾಜದಲ್ಲಿ ಶಿಕ್ಷಕರ ಪ್ರತಿಷ್ಠೆ ಹೆಚ್ಚಾಗಬೇಕು, ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು, ಅವರೇ ನಿಜವಾದ ರಾಷ್ಟ್ರದ ನಿರ್ಮಾತೃಗಳು, ಇದನ್ನು ಮರೆತುಬಿಟ್ಟಿದ್ದಾರೆ. ಶಿಕ್ಷಕನು ಯೋಗ್ಯ ಹಾಗು ಸಚ್ಚಾರಿತ್ರ್ಯವುಳ್ಳವನಾಗಿ ಸಮಾಜದಲ್ಲಿ ಪ್ರತಿಷ್ಠೆ ಪಡೆಯುವದವಶ್ಯವಿದೆ. ಅಧಿಕಾರಿಗಳಿಗೆ 'ಜೀ-ಹುಜೂರ' ಎನ್ನುವುದನ್ನು ಬಿಟ್ಟು ಸ್ವಾರ್ಥ ಸಾಧನೆಯನ್ನು ತೊರೆದು ಪ್ರಾಮಾಣಿಕತೆಯಿಂದ ತನ್ನ ಕರ್ತವ್ಯವನ್ನು ನಿರ್ವಹಿಸಬೇಕು. ಮಕ್ಕಳ ಮಾನಸಿಕ ವಿಕಾಸದೆಡೆಗೂ ಶಿಕ್ಷಕನು ಪ್ರಯತ್ನಿಸಬೇಕು.

ಪ್ರಾಧ್ಯಾಪಕ ಹುಮಾಯೂನ ಕಬೀರರ ಹೇಳಿಕೆಯಂತೆ " ಇಂದು ಸಮಾಜದಲ್ಲಿ ಎಷ್ಟೋ ಅನಿಷ್ಟ ಪದ್ಧತಿಗಳು ಮನೆಮಾಡಿಕೊಂಡಿವೆ, ಅವುಗಳನ್ನು ನಿವಾರಿಸುವ ಮಾತುಗಳು ಕೇಳಬರುತ್ತವೆ. ಅವುಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹೆಚ್ಚು ಉಪೇಕ್ಷೆಯಿಂದ ಕಾಣುವದೂ ಒಂದು ಪ್ರಮುಖವಾದುದು." ಏಕೆ? ಶಿಕ್ಷಣ-ದಾನವು ಬಹು ಪವಿತ್ರ ಕಾರ್ಯವು ಮತ್ತು ಶಿಕ್ಷಕನನ್ನು ಆದರದಿಂದ ಕಾಣುವದವಶ್ಯವಿದೆ; ಆದರೆ ಹೀಗಾಗುವಲ್ಲ. ಶಿಕ್ಷಕನ ಪ್ರತಿಷ್ಠೆ ಹೆಚ್ಚಿದಲ್ಲೆಲ್ಲ ಅದರ ಪ್ರಭಾವ ಮಗುಗಳ ಮೇಲೆ ಬೀಳುವದು ಸ್ವಾಭಾವಿಕವು. ರಾಷ್ಟ್ರ ಮತ್ತು ಸಮಾಜವು ಸುವ್ಯವಸ್ಥಿತವಾಗಬೇಕಾದರೆ ಪ್ರಾಥಮಿಕ ವಿದ್ಯಾಲಯ ಹಾಗೂ ಅಲ್ಲಿಯ ಶಿಕ್ಷಕರ ಸ್ಥಿತಿ ಸುಧಾರಿಸುವದವಶ್ಯವಿದೆ. ಶಿಕ್ಷಕನು ಜೀವನಕ್ಕಾಗಿ ಮಾಡಿಯುವ ಪರಿಶ್ರಮ ಜೀವಿ ಎಂದು ತಿಳಿದುಕೊಳ್ಳಬಾರದು, ಸಮಾಜದಲ್ಲಿ ಪ್ರತಿಷ್ಠೆ ಗಳಿಸಲು ಪ್ರಯತ್ನಿಸಬೇಕು. ಅಯೋಗ್ಯ ಶಿಕ್ಷಕನನ್ನಿಡಬಾರದು, ಇಟ್ಟರೆ ಪ್ರತಿಷ್ಠೆಯುಳ್ಳವನಾಗುವಂಥ ಸ್ಥಿತಿಯಲ್ಲಿರಿಸಬೇಕು.

ಕಾಕಾ ಕಾಲೇಲಕರ ಅವರು ಹೇಳಿದಂತೆ " ಎಲ್ಲ ಪ್ರಕಾರದ ಗುಣಗಳ ಉತ್ಕರ್ಷ ಸಾಧನಕ್ಕಾಗಿ, ತನ್ನ ಆದರ್ಶದಲ್ಲಿ ಎಲ್ಲಿಯೂ ವಿಕೃತ ಅಥವಾ ಮೂಢತೆ ತಲೆದೋರಬಾರದು. ಆದ್ದರಿಂದ ಸಮಗ್ರ ಜೀವನವು ಅಖಂಡ ವಿಚಾರಮಯ ಮತ್ತು ಆಚರಣ ಪರಾಯಣವಾಗಬೇಕು. ಜೀವನ ರಥವು ಸಾಗಲು ವಿಚಾರದೊಡನೆ ಆಚಾರವು ಬೆಳೆದುಬರಬೇಕು. ವಿಚಾರ ಮತ್ತು ಕಲ್ಪನೆಯನ್ನು ಜೀವನದ ದೃಷ್ಟಿಯಿಂದ ಕೂಡಿಸಬೇಕು. ಆದ್ದರಿಂದ ಆಚಾರ ಅಂದರೆ ಪ್ರತ್ಯಕ್ಷ ಕ್ರಿಯೆ, ಪ್ರಯೋಗ, ನಿರೀಕ್ಷಣೆ, ಪರೀಕ್ಷಣ ಮತ್ತು ಅನುಭವ ಇವೆಲ್ಲವುಗಳ ಅವಶ್ಯಕತೆಯಿದೆ." ಇದ್ದರಿಂದ ಶಿಕ್ಷಕರ ವರ್ತಮಾನ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಮಾಡಬೇಕು. ಶಿಕ್ಷಕನು ಭಾವಿ ನಾಗರಿಕರ ಚರಿತ್ರ ನಿರ್ಮಾತೃವು, ಆದರೂ ಸಹ ಚಪರಾಶಿಗಿಂತಲೂ ಕಡಿಮೆ ಪಗಾರ ಸಿಗುತ್ತದೆ. ಯೋಗ್ಯತಮ ಶಿಕ್ಷಕರ ಅಭಾವಕ್ಕೆ ಇದೂ ಕಾರಣ. ಉಪೇಕ್ಷೆ, ಅಸಮವಿಧೆಗಳು, ಅಲ್ಪವೇತನ, ಮಾನ-ಪ್ರತಿಷ್ಠೆಯ ಅಭಾವದಲ್ಲಿ ಇಂದು ಎರಡನೇ ಕಡೆಗೆ ನೌಕರಿಯನ್ನು ದೊರಕಿಸಲು ಅಸಫಲನಾದವನು ಶಿಕ್ಷಕನಾಗಬಯಸುತ್ತಾನೆ. ನಮ್ಮದು ಬಹುದೊಡ್ಡ ದೇಶವು. ಉಚಿತ ಮತ್ತು ಸರ್ವವ್ಯಾಪಿ ಶಿಕ್ಷಣದ ಅವಶ್ಯಕತೆಯಿದ್ದಂತೆ ಆ ರೀತಿಯಾಗಿ ಅದು ಸಿಗುವದಿಲ್ಲ. ಶಿಕ್ಷಣದ ಮುಖಾಂತರವೇ ನಮ್ಮ ರಾಷ್ಟ್ರದ ಉನ್ನತಿಯಾಗಬೇಕಾದರೆ ಯೋಗ್ಯ ಹಾಗೂ ಸಚ್ಚಾರಿತ್ರ್ಯ ಶಿಕ್ಷಕರ ಹೊರತು ಅಸಂಭವವು.

ನಿಸ್ಸಂದೇಹವಾಗಿ ಮಾನವನು ತನ್ನ ಅಸ್ತಿತ್ವ ಮತ್ತು ವಿಕಾಸಕ್ಕಾಗಿ ಇಲ್ಲಿಯ ವರೆಗೆ ನಿರಂತರವಾಗಿ ಸಂಘರ್ಷ ಮಾಡುತ್ತ ಬಂದಿದ್ದಾರೆ. ಇಂದೂ ಸಹ ಯಾವದೋ ರೂಪದಲ್ಲಿ ನಡೆಯುತ್ತಿದೆ. ಲೋಕತಾಂತ್ರಿಕ ವ್ಯವಸ್ಥೆ, ಮರ್ಯಾದೆ ಹಾಗೂ ಉತ್ತರದಾಯಿತ್ವದ ಸಫಲ ನಿರ್ವಾಹದ ನಿಮಿತ್ತವಾಗಿ ದೇಶದ ಪ್ರತಿವ್ಯಕ್ತಿಯು ಸಾಕ್ಷರನಾಗಬೇಕು, ಸುಯೋಗ್ಯನಾಗುವದು ಅವಶ್ಯವಿದೆ. ಈ ರೀತಿಯಾಗದ ಹೊರತು ಲೋಕತಂತ್ರವು ಸಫಲವಾಗಲಾರದು. ಇದು ಪ್ರಾಥಮಿಕ ಶಿಕ್ಷಣದಿಂದಲೇ ಪ್ರಾರಂಭವಾಗಬೇಕು. ಚಿಕ್ಕಮಗುಗಳ ಬುದ್ಧಿ ಕೋಮಲವಿರುತ್ತದೆ, ಹೃದಯ ಸ್ವಚ್ಛವಿರುತ್ತದೆ, ಹೇಳಿದ್ದನ್ನು ತೀವ್ರವಾಗಿ ಕಲಿತುಕೊಳ್ಳುತ್ತವೆ. ಆದ್ದರಿಂದ ಪ್ರಾಥಮಿಕ ಶಿಕ್ಷಣವು ಆದರ್ಶಮಯವಾಗಬೇಕು. ಬಾಲ್ಯದ ಶಿಕ್ಷಣದಮೇಲೆಯೇ ಅವರ ಜೀವನ ರೂಪುಗೊಳ್ಳುತ್ತಿದೆ. ಶಿಕ್ಷಣ ಕೊಡುವಾಗ ವಿದ್ಯಾರ್ಥಿಗಳ ಮಟ್ಟ ಹಾಗೂ ಮಾನಸಿಕ ದೃಷ್ಟಿಕೋನದೆಡೆಗೆ ವಿಶೇಷ ಲಕ್ಷ್ಯವೀಯುವದಿಲ್ಲ. ಮಾಧ್ಯಮಿಕ ಶಿಕ್ಷಣದಲ್ಲಿ ಮಾನಸಿಕ ವಿಕಾಸದಲ್ಲಿ ಅವರ ಸಾಂಸ್ಕೃತಿಕ ಏಳ್ಗೆಗೆ ಸಹಾಯವಾಗುವದಿಲ್ಲ. ಅದರಲ್ಲಿ ವ್ಯವಸಾಯಿಕ ಹಾಗೂ ಸಾಮಯಿಕದೆಡೆಗೆ ಲಕ್ಷ್ಯವೀಯುವದಿಲ್ಲ. ಇಂಥ ಸ್ಥಿತಿ ಎಂದೂ ಯೋಗ್ಯವೆನಿಸಲಾರದು. ಇದರೆಡೆಗೆ ಲಕ್ಷವೀಯುವಂತೆ ಶಿಕ್ಷಕರ ನೈತಿಕತೆ ಜಾಗೃತವಾಗಲು ಅವರ ಆರ್ಥಿಕ ನಿಷಮತೆಯನ್ನು ದೂರೀಕರಿಸಬೇಕು. ವಿದೇಶೀ ಮಿಶನದ ಕಾರ್ಯಕರ್ತರಂತೆ ಸರಕಾರಿ ಶಿಕ್ಷಣ ಸಂಸ್ಥೆಗಳಾಗಬೇಕು, ಪ್ರತಿ ವ್ಯಕ್ತಿ-ಸದಸ್ಯ-ನೈತಿಕತಾಪೂರ್ಣರಾಗಲಿ. ರಾಷ್ಟ್ರದ

ಭಾವಿ ನಿರ್ಮಾತೃಗಳ ಮೇಲೆ ಒಳ್ಳೆಯ ಸಾಂಸ್ಕೃತಿಕ ಪ್ರಭಾವಬೀಳುವಂತೆ ಶಿಕ್ಷಣದ ತಳಪಾಯ, ವಾತಾವರಣ ಹಾಗೂ ಉಳಿದ ಸ್ಥಿತಿಗಳು ಅನುಕೂಲವಾಗಿರಬೇಕು. ಶಿಕ್ಷಕರು ಮನೋನಿಜ್ಞಾನಿಯಾಗುವದೇನೂ ಕಡಿಮೆ ಆವಶ್ಯಕತೆಯಿಲ್ಲ.

ಎಲ್ಲರೂ ಶಿಕ್ಷಣಪಡೆದು ತಮ್ಮ ಶಕ್ತಿಗಳ ಸಮುಚಿತ ವಿಕಾಸ ಮಾಡಿಕೊಂಡು ಸದುಪಯೋಗಪಡಿಸಿಕೊಳ್ಳ ಬೇಕು. ಶಿಕ್ಷಣದಲ್ಲಿ ಶಿಕ್ಷಕನ ಸ್ಥಾನವೂ ಹಿರಿದಾಗಿದೆ, ಸುಯೋಗ್ಯ ಶಿಕ್ಷಕನ ಹೊರತು ಇದು ಸಾಧ್ಯನಿಲ್ಲ. ಪರಿ ಶ್ರಮಕ್ಕೆ ಫಲ ಸಿಗದಿದ್ದರೆ ಮನಸ್ಸುಗೊಟ್ಟು ಕಲಿಸುವ ದಾಗುವದಿಲ್ಲ, ಆದ್ದರಿಂದ 'ಟ್ಯೂಶನ್'ದ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ವರ್ತಮಾನ ಜೀವನದಲ್ಲಿ ಮಹತ್ವ ವಿಲ್ಲ, ಭವಿಷ್ಯದ ಸುಂದರ ಚಿತ್ರ ಅಥವಾ ಸುಂದರ ಕಲ್ಪನೆ ಶಿಕ್ಷಕ ಜೀವನದಲ್ಲಿಲ್ಲ. ಆದ್ದರಿಂದಲೇ ನಮ್ಮ ಸಾಮಾಜಿಕ ಜೀವನವು ವಿಶೃಂಖಲ, ವಿಪರ್ಯಸ್ತ ಹಾಗೂ ಅಸ್ವ್ಯವಸ್ಥಿತವಾಗುತ್ತ ನಡೆದಿದೆ. ಹೀಗಾಗಲು ಕಾರಣವೆಂದರೆ ಶಿಕ್ಷಣ ವೃತ್ತಿಯನ್ನೂ ಸಹ ಕೂಲಿಯೆಂದು ತಿಳಿಯಲ್ಪಟ್ಟಿದೆ. ಕಾರ್ಯ-ಅಕಾರ್ಯಗಳ ಮೇಲೆ ಹಣ ಹಂಚುವದು ಕಠಿಣವಾದುದು, ಮತ್ತು ಪರ್ಯಾಪ್ತದ ಅಭಾವದಿಂದ ಅಸಂತೋಷವು ಹಬ್ಬುತ್ತದೆ. ಇದನ್ನು ತಡೆಯದಿದ್ದರೆ ನಮ್ಮ ಸಾಮಾಜಿಕ ಜೀವನದ ಮೇಲೆ ಬಲವಾದ ಪೆಟ್ಟು ಬೀಳುತ್ತದೆ. ನಾವು ಗೌರವಕೊಡುವ, ಸಂಸ್ಕೃತಿ, ಸಾಹಿತ್ಯ, ಕಲೆ ಹಾಗೂ ಆದರ್ಶಗಳು ಲುಪ್ತವಾಗುವವು. ಇದೇ ಕ್ರಮವಿದ್ದರೆ ಸಹೃದಯತೆ, ಸಹಾನುಭೂತಿ ಮತ್ತು ಮಹಾನುಭಾವನೆಯಿರಲಾರದು. ಅರ್ಥಲೋಲುಪತೆಯು ಮನುಷ್ಯನನ್ನು ಗ್ರಸ್ತನನ್ನಾಗಿ ಮಾಡುತ್ತದೆ ಮತ್ತು ಜೀವನದಲ್ಲಿ ಉಚ್ಚಾದರ್ಶಗಳ ಬೆಲೆ ಹಾಗೂ ಮಹತ್ವ ವಿರಲಾರದು.

ವಸ್ತುತಃ ಶುದ್ಧೀಕರಣದ ಹಿರಿಯ ಸಾಧನೆ ಕರ್ಮವು, ವ್ಯವಹಾರವು. ಶುದ್ಧಿಯ ಬಾಹ್ಯ ಪ್ರಯತ್ನ ಎಷ್ಟೇ ಮಾಡಿದರೂ ಸಫಲವಾಗದು. ಸಮಯದ ಸದುಪಯೋಗ ತೆಗೆದುಕೊಂಡು ಆತ್ಮಶುದ್ಧಿ ಮಾಡಿಕೊಳ್ಳುವದು ಅವಶ್ಯ ವಿದೆ. ನವೀನ ಸಮಾಜವನ್ನು ನಿರ್ಮಿಸುವ ಕೃತಸಂಕಲ್ಪ ವಿದ್ದರೆ ಮೊದಲನೆಯದಾಗಿ ಸಂಘಟನೆಯಿಂದ ರಾಷ್ಟ್ರದ ಶುದ್ಧಿ ಮತ್ತು ಅದನ್ನು ಸುಧಾರಿಸುವದರೆಡೆಗೆ ಲಕ್ಷವಹಿಸ ಬೇಕು. ಶಿಕ್ಷಕರ ಕೈಯಲ್ಲಿಯೇ ಭಾರತದ ಭಾವೀ ನಾಗರಿಕರು ತಯಾರಾಗುತ್ತಾರೆ. ಆದ್ದರಿಂದ ಅವರ ಪಾತ್ರಬಹು ಹಿರಿದು. ಆದ್ದರಿಂದ ವಿದ್ಯಾರ್ಥಿಗಳ ಚರಿತ್ರ ನಿರ್ಮಾಣದ ಕಡೆಗೆ ವಿಶೇಷ ಲಕ್ಷನೀಯಬೇಕು. ಮತ್ತು ಇದಕ್ಕಾಗಿ ಆತ್ಮ ಚರಿತ್ರ ನಿರ್ಮಾಣವು ಅಪರಿಹಾರ್ಯವು. ರಾಷ್ಟ್ರ ನಿರ್ಮಾಣ ಕ್ಕಾಗಿ ಬಾಲಕರ ನಿರ್ಮಾಣ ಅವಶ್ಯವಿದೆ. ಪ್ರತಿಯೊಬ್ಬ ನಾಗರಿಕನೂ ರಾಷ್ಟ್ರ-ಭವನದ ಇಟ್ಟಂಗಿಯಿದ್ದಂತೆ. ಒಂದೇ ಇಟ್ಟಂಗಿಯನ್ನು ತೆಗೆದರೆ ಗೋಡೆಗೆ ತೂತುಬೀಳುತ್ತದೆ. ಆದರೆ ಇಂದು ಆಗುತ್ತಿರುವದೇನು ? ಬಾಲಕರು ಗದ್ದಲ ಮಾಡದೆ ಅಂಜಿ ಸುಮ್ಮನೆ ಕುಳಿತುಕೊಳ್ಳಬೇಕೆಂದು ಶಿಕ್ಷ ಕನು ಇಚ್ಛಿಸುತ್ತಾನೆ. ಗೈರಹಾಜರಿ, ಕಡಿಮೆ ಶಿಕ್ಷಣಪಡೆದ ಶಿಕ್ಷಕನು ವ್ಯರ್ಥವಾದ ಮಾತುಗಳಿಂದಲ್ಲದೆ ತನ್ನ ಹೀನ ಆಚರಣೆಯಿಂದ ಬಾಲಕರ ನೈತಿಕ ಚಾರಿತ್ರ್ಯವನ್ನು ಸದ ಭ್ರಷ್ಟಗೊಳಿಸುವದು ಬೇಡ. ತಂದೆ-ತಾಯಿಗಳಿಂದ ಪೇಳಿ ದ್ದನ್ನು ಸುಮ್ಮನೆ ತರಲು ಹಚ್ಚುವದು ಆಚರಣ ಭ್ರಷ್ಟತೆಯು. ವಿದ್ಯಾರ್ಥಿಗಳೆದುರಿಗೂ ನಕಲಿ ಪ್ರಮಾಣಪತ್ರ ಮಾರುವದು ಯಾತರ ಜ್ಯೋತಕ? ಬೆದರಿಸುವದು ಹಾಗೂ ಆಚರಣ ಹೀನತೆಯಿಂದ ವಿದ್ಯಾರ್ಥಿಗಳಿಗೆ ಶಿಕ್ಷ ಣವು ಭಾರವಾಗಿ ಪರಿಣಮಿಸುತ್ತದೆ ಮತ್ತು ಕಲಿಯುವದು ಆನಂದದ ವಿಷಯವೆನಿಸದೆ ಕಷ್ಟದ ಕಾರ್ಯವೆನಿಸುತ್ತದೆ. ಸುಯೋಗ್ಯ ಸಚ್ಚಾರಿತ್ರ್ಯ ಶಿಕ್ಷಕನಿದ್ದು ಬಾಲಕರ ರುಚಿ ಹಾಗೂ ಯೋಗ್ಯತೆಯನ್ನು ಗುರುತಿಸಿ ಕಲಿಸುವಂಥವನು ಅವಶ್ಯವಾಗಿ ಎಲ್ಲರನ್ನೂ ಉಪಯೋಗಿ ನಾಗರಿಕರನ್ನಾಗಿ ಮಾಡಬಲ್ಲನು. ಶಿಕ್ಷಕರ-ಶಿಕ್ಷಣಾರ್ಥಿಗಳ ಸಂಬಂಧವು ಬಹಳ ಪವಿತ್ರ ಮತ್ತು ವಾತ್ಸಲ್ಯಪೂರ್ಣವಾದುದು. ಶ್ರದ್ಧೆಯ ಸ್ಥಾನವು ಹರಟೆಗೆ ಸಿಗುವಾರದು. ಟ್ಯೂಶನ್ ಹೇಳಿ ಹಣ ಗಳಿಸುವ ಭರದಲ್ಲಿ ಅಭಿಭಾವದ ಮುಖಾಂತರ ಅಶಿಷ್ಟ, ಅಪ್ರತ್ಯಕ್ಷ ಮಾತುಗಳೂ ಸಹ ಮಗುವಿನ ಮನಸ್ಸಿನಲ್ಲಿ ಗುರುಗಳ ಪ್ರತಿಯಾಗಿ ಅಶ್ರದ್ಧೆಯನ್ನು ಹುಟ್ಟಿಸುತ್ತವೆ. ಆದ್ದರಿಂದ ರಾಷ್ಟ್ರ ನಿರ್ಮಾಣಕ್ಕಾಗಿ ರಾಷ್ಟ್ರ ನಿರ್ಮಾತೃ ವಾದ ಶಿಕ್ಷಕನು ಸುಯೋಗ್ಯ ಮತ್ತು ಸಚ್ಚಾರಿತ್ರ್ಯವುಳ್ಳವನಾಗುವದವಶ್ಯವಿದೆ. ರಾಷ್ಟ್ರದ ಭಾವಿ ಕರ್ಣಧಾರರ ಮೇಲೆ ಹಾಗೂ ರಾಷ್ಟ್ರ ನಿರ್ಮಾತೃಗಳ ಮೇಲೆ ಕುಪ್ರಭಾವ ಬೀಳ ದಂತೆ ಸರಕಾರಿ ಅಧಿಕಾರಿ ಹಾಗೂ ಅಧಿಕಾರೇತರರು ನಡೆದುಕೊಳ್ಳಬೇಕು ಆದರೆ ಈ ಕಡೆಗೆ ಸ್ವಲ್ಪಾದರೂ ವಿಚಾರ ಮಾಡಿರುವರೇ ?

(ಬನಾರಸದಿಂದ ಹೊರಡುವ ಹಿಂದಿ ಅರ್ಧ ಸಾಪ್ತಾಹಿಕ 'ಸಂಸಾರ' ಪತ್ರಿಕೆಯ ೧೭ನೇ ಆಕ್ಟೋಬರ ೧೯೫೮ರ ಸಂಚಿಕೆಯಲ್ಲಿ ಶ್ರೀ ರಾಮ ಸ್ವರೂಪ ಶರ್ಮಾ ಅವರು ಬರೆದ "शिक्षकों का स्तर" ಎಂಬ ಲೇಖನದ ಭಾವಾನುವಾದ.)

# ಭಾಷಾ ಕಲಿಸಿದ ನನ್ನ ಅನುಭವಗಳು

## [ ೧ನೆಯ ಇಯತ್ತೆ ]

( ಮಾನ್ಯ ಶಾಸನಾಧಿಕಾರಿಗಳು ನಗರ ಪ್ರಾಥಮಿಕ ಶಿಕ್ಷಣ ಮಂಡಳ, ಹುಬ್ಬಳ್ಳಿ ಇವರು ಏರ್ಪಡಿಸಿದ ಶೈಕ್ಷಣಿಕ ಸಭೆಯಲ್ಲಿ **ಶ್ರೀ ರಂ. ಕೃ. ಅಗಸನಕೊಪ್ಪ** ಇವರು ಮಾಡಿದ ಭಾಷಣ. )

ಮಗುವು ಸರ್ವಸಾಧಾರಣವಾಗಿ ತನ್ನ ವಯಸ್ಸಿನ ಮೊದಲನೆಯ ಘಟ್ಟವಾದ ಶೈಶವಾವಸ್ಥೆಯಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳಾದ ಕಿಂಟರಗಾರ್ಟನ್, ಮಾಂಟೇ ಸರಿ ಮುಂತಾದ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶವನ್ನು ಪಡೆಯುತ್ತದೆ. ಈ ಸಂಸ್ಥೆಗಳಲ್ಲಿ ಸಾಧಾರಣ ಮಟ್ಟಿಗೆ ಮಾತನಾಡಲು, ಆಟಿಗೆಯ ಸಾಮಾನುಗಳ ಸಂಗಡ ವ್ಯವಸ್ಥಿತ ರೂಪದಿಂದ ಆಟವಾಡಲು ಮುಂತಾದವುಗಳನ್ನು ಕಲಿಯುತ್ತದೆ. ಸಂತರ ಮಗುವು ಬಾಲ್ಯಾವಸ್ಥೆಯಲ್ಲಿ ಹೆಜ್ಜೆಯನ್ನು ಇಡುವದು. ಈ ಅವಸ್ಥೆಯಲ್ಲಿಯೇ ಮಗುವು ಪ್ರಾಥಮಿಕ ಶಾಲೆಯಲ್ಲಿ ಪ್ರವೇಶವನ್ನು ಪಡೆಯುವದು.

ಪ್ರಾರಂಭದಲ್ಲಿ ಮಗುವಿನ ಶಬ್ದಭಾಂಡಾರವು ಅತಿ ಕಡಿಮೆ ಇರುವದು. ಮಗುವಿನ ಈ ಶಬ್ದಭಾಂಡಾರವನ್ನು ಅನೇಕ ವಿಧದಿಂದ ಮಗುವಿಗೆ ಬೇಸರವಾಗದ ಹಾಗೆ ಬೆಳೆಯಿಸುವದು ಶಿಕ್ಷಕರ ಪರಮ ಕರ್ತವ್ಯವಾಗಿದೆ.

ಇಂದಿನ ವಿಷಯ " ಮೊದಲನೆಯ ಇಯತ್ತೆಗೆ ಭಾಷಾ ಕಲಿಸಿದ ನನ್ನ ಅನುಭವಗಳು" ಎಂಬುದು ಆಗಿದೆ. ಮಾತೃ ಭಾಷೆಯೆಂದರೆ ತಾಯಿ ಆಡುವ ಭಾಷೆ. ಮಗುವು ಚಿಕ್ಕದಿದ್ದಾಗ ಯಾವಾಗಲೂ ತಾಯಿಯ ಜೊತೆಯಲ್ಲಿಯೇ ಇರುವದರಿಂದ ತಾಯಿ ಆಡುವ ಭಾಷೆಯನ್ನು ಕಲಿತುಕೊಳ್ಳುವದು. ಹೀಗೆ ತಾಯಿ ಆಡುವ ಭಾಷೆಗೆನೇ ಮಾತೃ ಭಾಷೆಯೆಂದು ನಾವು ಸಂಕುಚಿತ ಅರ್ಥವನ್ನು ಮಾಡಬಹುದು. ಇದಕ್ಕೂ ಸ್ವಲ್ಪ ಆಳವಾಗಿ ಮಾತೃಭಾಷೆಯ ವಿಷಯಕ್ಕೆ ವಿಚಾರಿಸಿದ್ದಾದರೆ ಪ್ರಾದೇಶಿಕ ಭಾಷೆಗೇನೇ ನಾವು ಮಾತೃಭಾಷೆಯೆಂದು ಹೇಳಬಹುದು. ಯಾಕಂದರೆ ಆ ಪ್ರದೇಶದಲ್ಲಿ ಯಾವ ಭಾಷೆಯು ಜನತೆ ಹೆಚ್ಚಾಗಿರುವದೋ ಆ ಭಾಷೆಯು ಹೆಸರನ್ನು ಆ ಪ್ರದೇಶಕ್ಕೆ ಇಡುವ ಕಾರಣ ಎಲ್ಲ ವ್ಯವಹಾರಗಳು ಆ ಪ್ರಾದೇಶಿಕ ಭಾಷೆಯಲ್ಲಿ ನಡೆಯುವವು. ಆದ ಕಾರಣ ನಮಗೆ ಆ ಭಾಷೆಯೇ ಮಾತೃಭಾಷೆಯಾಗಿ ಪರಿಣಮಿಸುವದು.

ಭಾಷೆ ನಮ್ಮ ಜೀವನದಲ್ಲಿ ಎಲ್ಲ ವ್ಯವಹಾರಗಳಿಗೂ ಮೂಲವಾದುದು. ಕೃತಿ, ವಸ್ತು, ಭಾವ, ವಿಚಾರ ಇವು ನಮ್ಮ ಜೀವನದ ನಾಲ್ಕು ಮುಖಗಳಾಗಿವೆ. ಅನುಭವದಿಂದ ಮಗುವು ಇವೆಲ್ಲವುಗಳ ಪರಿಚಯವನ್ನು ಮಾಡಿಕೊಳ್ಳುವದು. ಇದಕ್ಕೆ ಎರಡನೆಯದಾಗಿ ಜ್ಞಾನ ಸಂಪಾದನೆಯೆಂದು ಹೇಳಬಹುದು. ಈ ಜ್ಞಾನ ಸಂಪಾದನೆಯ ಗತಿಯು ಮಾತೃಭಾಷೆಯ ಹೊರತಾಗಿ ಬೇರೆ ಯಾವ ಭಾಷೆಗಳಿಂದಲೂ ತೀವ್ರವಾಗಿ ಸಾಗಲಾರದು.

ಚಿಕ್ಕ ಮಗುವಿಗೆ ಸ್ವತಂತ್ರ ರೀತಿಯಿಂದ ಮಾತನಾಡುವ ರೂಢಿಯಾಗಬೇಕು. ಅವನು ತನ್ನ ಮನೆಯಲ್ಲಿಯ, ಶಾಲೆಯಲ್ಲಿಯ ಮತ್ತು ಹೊರಗಿನ ಅನುಭವಗಳನ್ನು ಎರಡನೆಯವರಿಗೆ ವಿವರಿಸಲಿಕ್ಕೆ, ಸಣ್ಣ ಕಥೆಗಳನ್ನು ಹೇಳಲಿಕ್ಕೆ, ಜನರಲ್ ಪದ್ಯ ಹಾಗೂ ಪುಸ್ತಕದಲ್ಲಿಯ ಕವಿತೆಗಳನ್ನು ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ಅನ್ನಲಿಕ್ಕೆ ಸಮರ್ಥನಾಗಬೇಕು. ಮಗುವು ಸರಳವಾಗಿ ಹಾಗೂ ಸ್ಪಷ್ಟವಾಗಿ ಎರಡನೆಯವರಿಗೆ ಕೇಳಿಸುವಂತೆ ಮಾತನಾಡಲು ಸಮರ್ಥನಾಗಬೇಕು. ಎರಡನೆಯವರು ಕೇಳಿದ ಪ್ರಶ್ನೆಗಳಿಗೆ ಬಾಲಕನು ಪೂರ್ಣ ಮಾತಿನಲ್ಲಿ ಚಿಕ್ಕಚಿಕ್ಕ ವಾಕ್ಯಗಳಲ್ಲಿ ಸರಿಯಾಗಿ ಉತ್ತರಕೊಡಲು ಸಮರ್ಥನಾಗಬೇಕು. ಬಾಲಕನಲ್ಲಿ ಶಬ್ದ ಸಂಗ್ರಹವು ಬೆಳೆಯಬೇಕು. ಗ್ರಾಮ್ಯ ಶಬ್ದಗಳನ್ನು ಉಪಯೋಗಿಸುವ ಚಟವನ್ನು ತೆಗೆದುಹಾಕಿ ವ್ಯಾಕರಣಕ್ಕೆ ಅನುಸರಿಸಿ ಮಾತನಾಡಲು ಸಮರ್ಥನಾಗಬೇಕು. ಹೀಗೆ ಒಂದನೆಯ ಇಯತ್ತೆಗೆ ಭಾಷಾವಿಷಯ ಕಲಿಸುವ ಉದ್ದೇಶಗಳನ್ನು ಮೂರು ತೆರನಾಗಿ ವಿಂಗಡಿಸಬಹುದು- (೧) ಬಾಯಿಯಿಂದ ಹೇಳುವದು (೨) ಓದುವದು ಮತ್ತು ಕವಿತೆ ಅನ್ನುವದು (೩) ಕೈಬರೆಹ.

ಮೊದಲನೆಯ ಉದ್ದೇಶವನ್ನು ಯಶಸ್ವಿಗೊಳಿಸಲು ನಾನು ಸಂಭಾಷಣ ಪದ್ಧತಿ, ( ಪ್ರಶ್ನೋತ್ತರ ಪದ್ಧತಿ ) ನಟನಾ ಪದ್ಧತಿ, ಪ್ರಸಂಗ ಪದ್ಧತಿ, ಕ್ರೀಡನ ಪದ್ಧತಿ ಮುಂತಾದ ಪದ್ಧತಿ ( ಕಲಿಸುವ ) ಗಳನ್ನು ಉಪಯೋಗಿಸಿದ್ದೇನೆ. ಅದೇ ಹೊಸದಾಗಿ ಶಾಲೆಯಲ್ಲಿ ಕಾಲಿಟ್ಟ ಮಕ್ಕಳಲ್ಲಿ ಕೆಲವರು ಧೈರ್ಯವಂತರು, ಹಲವರು ಹೆದರುವಂಥ

ವರು, ಕೆಲವರು ಹಟಮಾರಿಗಳು, ಮತ್ತೆ ಕೆಲವರು ಮೃದು ಸ್ವಭಾವದವರು, ಹಲವರು ನಾಚುವಂಥವರು ಇದ್ದುದು ನನ್ನ ಅನುಭವಕ್ಕೆ ಬಂದಿದೆ. ಈ ಬೇರೆ ಬೇರೆ ಪ್ರಕಾರದ ಮಕ್ಕಳಲ್ಲಿಯ ನ್ಯೂನತೆಗಳನ್ನು ತೆಗೆದುಹಾಕಿದ ನನ್ನ ಅನುಭವಗಳು ಕೆಳಗಿನಂತೆ ಇವೆ:— ಧೈರ್ಯವಂತ ಬಾಲಕರು ನಾನು ಕೇಳಿದ ಪ್ರಶ್ನೆಗಳಿಗೆ ಧೈರ್ಯವಾಗಿ ಅರ್ಧ ಮರ್ಧ ಉತ್ತರಕೊಡುವದನ್ನು ಪುನರುಕ್ತಿಯ ಸಹಾಯದಿಂದ ಹೋಗಲಾಡಿಸಿದ ಅನುಭವವು ಬಂದಿದೆ. ಹೆದರಿ ಮಾತನಾಡದ ಬಾಲಕರನ್ನು ಹತ್ತಿರ ಕರೆದು ಪ್ರೀತಿಸಿ ಶಾಲೆಯ ಮೂತ್ರಿ, ಶೌಚಕೂಪ, ಇನ್ನಿತರ ಶಾಲೆಯ ಭಾಗಗಳನ್ನು ಒಳ್ಳೆಯ ಸ್ನೇಹದಿಂದ ತೋರಿಸುವದರಿಂದ ಅವರ ಹೆದರಿಕೆ ತಪ್ಪಿ ಕೇಳಿದ ಪ್ರಶ್ನೆಗಳಿಗೆ ಸಾವಧಾನದಿಂದ ಉತ್ತರಿಸಲು ಧೈರ್ಯವುಳ್ಳವರಾಗುವರೆಂದು ನನ್ನ ಅನುಭವದ ಮಾತಾಗಿದೆ.

ಶಾಲೆ ಪ್ರಾರಂಭವಾದ ಕೂಡಲೇ ಸಂಭಾಷಣ ಪದ್ಧತಿಯಿಂದ ಅವರ ಹೆಸರು, ತಂದೆಯ ಹೆಸರು, ಅಜ್ಜ ಹೆಸರು, ಅವರ ಓಣಿಯ ಹೆಸರು ಮುಂತಾದವುಗಳನ್ನು ಕೇಳುವದರಿಂದ ಸ್ವಲ್ಪೇ ದಿವಸಗಳಲ್ಲಿ ತಮ್ಮ ಬಗ್ಗೆ, ತಮ್ಮ ಮನೆಯವರ ಬಗ್ಗೆ ಪೂರ್ಣ ವಾಕ್ಯಗಳಲ್ಲಿ ವಿವರಿಸಲು ಸಮರ್ಥರಾಗುವರೆಂಬುದು ನನ್ನ ಅನುಭವಕ್ಕೆ ಬಂದಿದೆ. ಚಿಕ್ಕಮಕ್ಕಳು ಶಿಕ್ಷಕರ ರೀತಿ-ನೀತಿ, ಭಾಷೆ ಮುಂತಾದವುಗಳನ್ನು ಅನುಕರಿಸುತ್ತಾರೆಂಬುದು ಮಾನಸಶಾಸ್ತ್ರದ ತತ್ವವಾಗಿದೆ. ಇದರಂತೆ ನಾನು ಶಾಲೆಯಲ್ಲಿ ಯಾವಾಗಲೂ ಶುದ್ಧವಾಗಿ, ಸ್ಪಷ್ಟವಾಗಿ ಗ್ರಾಮ್ಯ ಶಬ್ದಗಳನ್ನು ಬಿಟ್ಟು ಕೊಟ್ಟು ಬಾಲಕರ ಸಂಗಡ ಮಾತನಾಡುತ್ತಿರುವೆನಾದುದರಿಂದ ವಿದ್ಯಾರ್ಥಿಗಳೂ ಸ್ಪಷ್ಟವಾಗಿ, ಸರಿಯಾಗಿ, ಗ್ರಾಮ್ಯ ಶಬ್ದಗಳನ್ನು ಬಿಟ್ಟುಕೊಟ್ಟು ಮಾತನಾಡಲು ಸಮರ್ಥರಾಗುವರು.

ಚಿಕ್ಕಮಕ್ಕಳಲ್ಲಿ ನಟನಾ ಪ್ರವೃತ್ತಿಯು ಅಧಿಕವಾಗಿರುತ್ತದೆ. ಈ ಮಾನಸಶಾಸ್ತ್ರದ ತತ್ವದ ಮೇಲಿಂದ ನಾನು ಮಕ್ಕಳಿಗೆ ಹೇಳುವ ಕಥೆಯನ್ನು ಅವರಿಂದಲೇ ನಟನೆ ಮಾಡಿಸಿ ಆ ಕಥೆಗಳನ್ನು ನಾನೂ ಹಾವಭಾವಯುಕ್ತವಾಗಿ ಹೇಳುವೆನಾದುದರಿಂದ ಬಾಲಕರೂ ಸಹ ಅದೇ ಕಥೆಯನ್ನು ನಟನೆಯ ಸಂಗಡ ಹೇಳುವರೆಂಬುದು ನನ್ನ ಪ್ರತ್ಯಕ್ಷ ಅನುಭವವಾಗಿದೆ. ಮಕ್ಕಳ ಶಬ್ದಸಂಗ್ರಹವನ್ನು ಹೆಚ್ಚಿಸುವದರ ಸಲುವಾಗಿ ಪ್ರಸಂಗ ಪದ್ಧತಿಯ ಮುಖಾಂತರ ಜೀವನಸ್ಪರ್ಶಿಗಳಾದ ವಿವಿಧ ಚಟುವಟಿಕೆಗಳು, ಮಕ್ಕಳ ಆಟಗಳು, ಊಟ ಉಡಿಗೆಗಳು, ಹಬ್ಬ ಹುಣ್ಣಿವೆಗಳು ಈ ಮುಂತಾದ ಪ್ರಸಂಗಗಳನ್ನು ಬಾಲಕರ ಎದುರಿಗೆ ತಂದು ನಿಲ್ಲಿಸಿ ಆಯಾ ಸಂದರ್ಭಗಳಲ್ಲಿ ಅವುಗಳ ಬಗ್ಗೆ ತಿಳಿಸಿಕೊಟ್ಟರೆ ಮಕ್ಕಳ ಶಬ್ದಭಾಂಡಾರವು ಹೆಚ್ಚಾಗುವದೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲೆಂದು ನಾನು ಹೇಳಬಯಸುತ್ತೇನೆ.

ಮಕ್ಕಳ ಭಾಷಾ ಶುದ್ಧತೆಗಾಗಿ ನಾನು ಕ್ರೀಡನ ಪದ್ಧತಿಯನ್ನು ಉಪಯೋಗಿಸುತ್ತಲಿದ್ದೇನು. ಹೇಗೆಂದರೆ:- ಚಿಕ್ಕ ವಾಕ್ಯಗಳ ಕರ್ತೃಗಳನ್ನು ಏಕವಚನದಲ್ಲಿ ಹೇಳಿ ಕ್ರಿಯಾಪದಗಳನ್ನು ಬಹುವಚನದಲ್ಲಿ ಹೇಳುವದು ಹಾಗು ಕರ್ತೃಗಳನ್ನು ಪುಲ್ಲಿಂಗದಲ್ಲಿ ಇಟ್ಟು ಕ್ರಿಯಾಪದಗಳನ್ನು ಸ್ತ್ರೀಲಿಂಗದಲ್ಲಿ ಹೇಳುವದು. ಹೀಗೆ ತಪ್ಪು ವಾಕ್ಯಗಳನ್ನು ಬಾಲಕರಿಂದಲೇ ಸರಿಗೊಳಿಸಲು ಪ್ರಯತ್ನಿಸಿದ ಕಾರಣ ಬಾಲಕರು ಬೇಗನೆ ಶುದ್ಧಭಾಷೆಯನ್ನು ಆಡಲು ಸಮರ್ಥರಾಗುವರೆಂದು ನಾನು ಕಂಡುಕೊಂಡಿದ್ದೇನೆ.

ಎರಡನೆಯ ಉದ್ದೇಶವಾದ "ಓದುವದು ಮತ್ತು ಕವಿತೆ ಅನ್ನುವದು" ಇದನ್ನು ಈಡೇರಿಸಲು ನಾನು ಅನುಕರಣೆ, ಪುನರುಕ್ತಿ, ಸಂದರ್ಭೋಚಿತವಾಗಿ ಸನ್ನಿವೇಶಗಳಿಗೆ ಅಥವಾ ನಿಸರ್ಗದ ಪರಿಸ್ಥಿತಿಗಳೊಡನೆ ಹೊಂದಿಕೊಳ್ಳುವದು ಮುಂತಾದವುಗಳನ್ನು ಉಪಯೋಗಿಸಿದ್ದೇನೆ. ಬಾಲಕರಿಗೆ ಓದುವ ಅಭಿರುಚಿಯನ್ನು ಹುಟ್ಟಿಸುವದರ ಸಲುವಾಗಿ ಮೊದಲಿನ ಒಂದೆರಡು ತಿಂಗಳು ಹೆಚ್ಚಾಗಿ ಕಥೆಗಳನ್ನು ಹೇಳಿದುದರಿಂದ ಹಾಗೂ ನಾನು ಅಂದ ವಾಕ್ಯಗಳನ್ನು ಹಿಂದಿನಿಂದ ಬಾಲಕರು ಅನ್ನುವದರಿಂದ ಸ್ವಲ್ಪೇ ದಿವಸಗಳಲ್ಲಿ ಆ ಪಾಠಗಳನ್ನು ಓದಲು ಸಮರ್ಥರಾಗುವರು.

ಮಕ್ಕಳು ಶಬ್ದಗಳನ್ನು ಗುರುತಿಸುವದರ ಸಲುವಾಗಿ ನಾಕ್ಯ ಪದ್ಧತಿ, ಸಾವಯವ ಪದ್ಧತಿ, ಚಿತ್ರ ಪದ್ಧತಿ ಮುಂತಾದವುಗಳನ್ನು ನಾನು ಉಪಯೋಗಿಸುತ್ತಲಿದ್ದೇನು. ಇದರ ಪರಿಣಾಮವಾಗಿ ಬಾಲಕರು ಎರಡು ಅಥವಾ ಮೂರು ತಿಂಗಳುಗಳಲ್ಲಿಯೇ ಶಬ್ದಗಳನ್ನು ಗುರುತಿಸಲು ಸಮರ್ಥರಾಗುವರು. ಸಾಕಷ್ಟು ವೇಗವಾಗಿ ಓದುವ ರೂಢಿಗಾಗಿ ಪುನರುಕ್ತಿ ಪದ್ಧತಿಯು ಒಳ್ಳೆಯ ದಿವ್ಯ ಔಷಧವಾಗಿದೆ. ಸಾಮೂಹಿಕ ಕವಿತೆಯನ್ನು ಅನ್ನುವದರ ಸಲುವಾಗಿ ವಿದ್ಯಾರ್ಥಿಗಳ ಅನುಭವವನ್ನು ಆಧಾರವಾಗಿಟ್ಟುಕೊಂಡು ಸಂವಾದ, ಕಥನ, ಚಿತ್ರದರ್ಶನ, ನಟನೆ ಮೊದ

ಲಾದ ಕ್ರಮಗಳಿಂದ ಮಕ್ಕಳಲ್ಲಿ ಕವಿತೆಯ ಬಗ್ಗೆ ಕುತೂ ಹಲವನ್ನು ಹುಟ್ಟಿಸುತ್ತಿದ್ದೆನು. ಹೀಗಾಗಿ ಒಂದನೆಯ ವರ್ಗದ ಬಾಲಕರು ಒಳ್ಳೆಯ ಉತ್ಸುಕರಾಗಿ ಸಾಮೂಹಿಕ ರೀತಿಯಿಂದ ಪದ್ಯಗಳಿಗೆ ಸರಿಯಾಗಿ ಅನುಕರಣೆಮಾಡುತ್ತ ಪದ್ಯಗಳನ್ನು ಅನ್ನಲು ತಯಾರಾದದ್ದು ನನ್ನ ಪ್ರತ್ಯಕ್ಷ ನಿದರ್ಶನಕ್ಕೆ ಬಂದುದಾಗಿದೆ. ಇದಲ್ಲದೆ ಮಕ್ಕಳಲ್ಲಿಯ ಪುನ ರುಕ್ತಿಯ ಉಪಯೋಗದಿಂದ ಸ್ವಲ್ಪ ದಿವಸಗಳಲ್ಲಿಯೇ ವೈಯಕ್ತಿಕವಾಗಿ ಅದೇ ಪದ್ಯಗಳನ್ನು ಅನ್ನಲು ತಯಾರಾಗುವರು.

ಮೂರನೆಯ ಉದ್ದೇಶವಾದ ಕೈಬರೆಹದ ಬಗ್ಗೆ ವಿಚಾರಿಸೋಣ. ಈ ಉದ್ದೇಶದ ಸಾಧನೆಗಾಗಿ ನಾನು ಚಿತ್ರ ಪದ್ಧತಿ, ಸಾವಯವ ಪದ್ಧತಿ, ಅಕ್ಷರ ಪದ್ಧತಿ ಮುಂತಾದವುಗಳನ್ನು ಉಪಯೋಗಿಸುತ್ತಿದ್ದೆನು. ಪ್ರಾರಂಭ ದಲ್ಲಿ ಮಕ್ಕಳು ಚಿತ್ರ ಪದ್ಧತಿಯ ಪರಿಣಾಮವಾಗಿ ಅಕ್ಷರ ಗಳ ಆಕಾರಗಳನ್ನು ಮೂಡಿಸಲು ಸಮರ್ಥರಾಗುವರು. ನಂತರ ಬೋರ್ಡಿನ ಮೇಲೆ ಬರೆದ ದೊಡ್ಡ ಅಕ್ಷರಗಳನ್ನು ಅನುಕರಣ ಪದ್ಧತಿಗನುಸರಿಸಿ ನೋಡಿ ಬರೆಯಲು ಸಮರ್ಥರಾಗುವರು. ಮುಂದೆ ಬರಬರುತ್ತ ವಾಕ್ಯಗಳ ಮೊದಲನೆಯ ಭಿನ್ನ ಸ್ವರ ರಹಿತ ಅಕ್ಷರಗಳನ್ನು ಗುರುತಿಸಿ ಬರೆಯಲು ಸಮರ್ಥರಾಗುವರು. ನಂತರ ಸಾವಯವ ಪದ್ಧತಿಯಿಂದ ಶಬ್ದಗಳ ಎಲ್ಲ ಅಕ್ಷರಗಳನ್ನು ತಿಳಿದು ಕೊಂಡು ಬರೆಯಲು ಸಮರ್ಥರಾಗುವರು.

ಕೊನೆಯದಾಗಿ ಒಂದನೆಯ ಇಯತ್ತೆಗೆ ಭಾಷಾ ಕಲಿಸಿದ ನನ್ನ ಅನುಭವಗಳ ಬಗ್ಗೆ ಹೇಳುವದಾದರೆ ಭಾಷಾ ಕಲಿಸುವ ಮೂರು ಉದ್ದೇಶಗಳಾದ (೧) ಬಾಯಿ ಯಿಂದ ಹೇಳುವದು (೨) ಓದುವದು ಮತ್ತು ಕವಿತೆ ಅನ್ನುವದು (೩) ಕೈಬರೆಹ. ಇವುಗಳಲ್ಲಿ ಮೊದಲನೆಯ ಭಾಗ ಸಂಪೂರ್ಣವಾಗಿ, ಎರಡನೆಯ ಭಾಗ ಕವಿತೆ ಅನ್ನು ವದು ಇವು ಅತ್ಯಂತ ಸಮಾಧಾನಕರವಾಗಿ ಯಶಸ್ವಿಯನ್ನು ಹೊಂದಿದವು. ವರ್ಷ ಮುಗಿಯುತ್ತ ಬಂದರೂ ಸಹ ಅಕ್ಷರ ಪದ್ಧತಿಯನ್ನು ಉಪಯೋಗಮಾಡದ ಹೊರತಾಗಿ ಅನೇಕ ಬಾಲಕರಿಗೆ ಶಬ್ದ ಗುರುತಿಸುವದರಲ್ಲಿ ಕಠಿಣತೆಯು ಬಂದೊದಗಿತು. ಓದುವ ತ್ವರಿತವು ನಿಧಾನವಾಯಿತು. ಹೇಳಿದ ಶಬ್ದಗಳನ್ನು ಬರೆಯುವ ಶಕ್ತಿ ಬಾಲಕರಲ್ಲಿ ಬರ ಬೇಕಾದರೆ ಹಳೆಯ ಪದ್ಧತಿ ಬಳಿಸಿ ಕಲಿಸುವದನ್ನು ಸ್ವಲ್ಪ ಮಟ್ಟಿಗೆ ಉಪಯೋಗಿಸಬೇಕಾಗುವದು. ಆದರೂ ಸಹ ನಾವು ಈಗ ಆಧುನಿಕ ಶಿಕ್ಷಣರಂಗದಲ್ಲಿ ಸಾಗುತ್ತಲಿದ್ದೇವೆ. ಆಧುನಿಕ ಶಿಕ್ಷಣ ತಜ್ಞರ ಅಭಿಪ್ರಾಯದ ಪ್ರಕಾರ ಮಗು ವಿಗೆ ಮೊದಲನೆಯ ಸ್ಥಾನ ಕೊಡಬೇಕಾಗಿದೆ. ಹಿಂದಿನ ಬೆತ್ತದ ಬೆದರಿಕೆಯ ಪದ್ಧತಿಯನ್ನು ಹೊಡೆದುಹಾಕಿ ಇಂದು ಮಗುವಿನ ಓಘವನ್ನು ತಿಳಿದುಕೊಂಡು ಅವನಿಗೆ ಬೇಕಾದವು ಬಾರದಂತಹ ರೀತಿಯಲ್ಲಿ ಸಾಗಿ ಇಂದಿನ ಬಾಲಕರನ್ನು ನಾಳಿನ ನಾಡನಾಯಕರನ್ನಾಗಿ ಮಾಡ ಬೇಕಾಗಿದೆ. ಆದುದರಿಂದ ನಾವು ಆಧುನಿಕ ಶಿಕ್ಷಣ ತಜ್ಞರ ಶಿಕ್ಷಣ ಪದ್ಧತಿಯ ತತ್ವಗಳನ್ನು ಅವಶ್ಯವಾಗಿ ಅನುಸರಿಸಲೇ ಬೇಕು. ಹೀಗೆ ನಾವು ಮೊದಲನೆಯ ವರ್ಗದ ಮಕ್ಕಳಿಗೆ ಮಾರ್ಗದರ್ಶನ ಮಾಡುತ್ತ ಹೋದೆವೆಂದರೆ ಅವರ ಭಾಷೆಯು ತೀವ್ರ ಹಾಗೂ ಉತ್ತಮ ಸ್ಥಿತಿಯಲ್ಲಿ ಸುಧಾ ರಿಸುವದೆಂಬುದರಲ್ಲಿ ಯಾವ ಅಭ್ಯಂತರವೂ ಇಲ್ಲವೆಂದು ನಾನು ನಿಸ್ಸಂದೇಹವಾಗಿ ಹೇಳುವೆನು.

**ಜೈ ಹಿಂದ**

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

**ಶೇಲಾರ ಕೃತ**

**ಪ್ರಾಥಮಿಕ ಭೂಮಿತಿ**

**[ಕ್ಷೇತ್ರಫಲ ಘನಫಲ ಸಹಿತ]**

೪ ರಿಂದ ೭ ನೇಯ ವರ್ಗದ ವರೆಗಿನ
ವಿಷಯವನ್ನೆಲ್ಲ ಒಳಗೊಂಡಿದೆ.

**ಬೆಲೆ: ೧ರೂ. ೮ಆಣೆ ಮಾತ್ರ**

ದೊರೆಯುವ ಸ್ಥಳ:—

**ಸಾಯಿ ಪಬ್ಲಿಶಿಂಗ್ ಹಾವುಸ್,**
**ವಿಜಯ ರೋಡ, ಧಾರವಾಡ.**

# ಉದಕಮಂಡಲ

ಲೇಖಕರು : ಶ್ರೀ ಶಿಂತ್ರಿ ಬಸಪ್ಪನವರು, ಬಿ ಎ.,ಬಿ.ಟಿ.

## ಪ್ರಸ್ತಾವನೆ

ಉದಕಮಂಡಲವು ನೀಲಗಿರಿ ಪರ್ವತದ ತುಟ್ಟ ತುದಿಯಲ್ಲಿ ರಮಣೀಯವಾಗಿ ಶೋಭಿಸುವ ಗಿರಿನಿವಾಸದ ಸ್ಥಳವಷ್ಟೆ. ಅದನ್ನು ಇಂಗ್ಲಿಷರು ಉಟ್ಯಾಕಮಂಡ (Ootacamund) ಎಂದು ಕರೆದರು. 'ಉದಕಮಂಡಲ' ಶಬ್ದವು ಅವರಿಗೆ ಸರಿಯಾಗಿ ಉಚ್ಚರಿಸಲು ಬಂದಿಲ್ಲ ವೆಂಬಂತೆ ತೋರುತ್ತಿದೆ. ಆ ಶಬ್ದವು ಅವರ ಬಾಯಲ್ಲಿ ವಿಕೃತಿಹೊಂದಿ ಉಟ್ಯಾಕಮಂಡ ಎಂದು ಆಗಿರಬೇಕೆಂದು ನಮ್ಮ ಊಹೆ. ಊಟಿ (Ooty) ಎಂಬ ಬೇರೊಂದು ಹೆಸರೂ ಅದಕ್ಕಿದೆ. 'ಊಟಿ'ಯು 'ಉಟ್ಯಾಕಮಂಡ'ದ ಸಂಕ್ಷಿಪ್ತ ರೂಪವು. ಉದಕಮಂಡಲವು ಸಮುದ್ರ ಸಪಾಟಿಯಿಂದ ೭,೨೩೦ ಅಡಿ ಎತ್ತರವಿದೆ. ಅದು ದೊಡ್ಡ ಬೆಟ್ಟ (Doddabetta), ಸ್ನೋಡನ್ (Snowdon), ಕ್ಲಬ್ (Club) ಹಾಗೂ ಎಲ್ಕ (Elk) ಎಂಬ ನಾಲ್ಕು ಗುಡ್ಡಗಳಿಂದ ಸುತ್ತುವರಿಯಲ್ಪಟ್ಟಿದೆ. ಅಲ್ಲಿಯ ತಂಪು ಹವೆಯು ಆಲ್ಹಾದಕರವೂ ಸ್ಫೂರ್ತಿದಾಯಕವೂ ಶಕ್ತಿವರ್ಧಕವೂ ಆಗಿದೆ. ಭಾರತದ ಬೈಲು ಪ್ರದೇಶಗಳಲ್ಲಿ ಬೇಸಿಗೆಯ ಬಿಸಿಲಿನ ಪ್ರಖರವು ಪ್ರಾರಂಭವಾಯಿತೆಂದರೆ ಅಲ್ಲಿಯ ಸಂಸ್ಥಾನಿಕರೂ ಭಾರಿ ಶ್ರೀಮಂತರೂ ದೊಡ್ಡ ಹುದ್ದೆಯವರೂ ಬಿಸಿಲಿನ ತಾಪವನ್ನು ತಪ್ಪಿಸಿಕೊಳ್ಳಲೋಸುಗ ಉದಕಮಂಡಲದತ್ತ ಧಾವಿಸುವದುಂಟು. ಸಂತೋಷ ವಾಸಕ್ಕಾಗಿ ಧಾವಿಸಿ ಬಂದ ಮಹನೀಯರಿಗೆಲ್ಲ ಸುಸ್ವಾಗತವನ್ನಿತ್ತು ಅವರು ಬಯಸಿದ ವಸತಿ ಗೃಹಗಳನ್ನು ಪೂರೈಸಿ ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಟ್ಟು ಆದರಾತಿಥ್ಯವನ್ನು ಮಾಡಲು ಉದಕಮಂಡಲವು ಸದಾ ಬದ್ಧಕಂಕಣವಾಗಿರುವದುಂಟು.

## ನಿಸರ್ಗದೇವಿಯ ಲಾವಣ್ಯ

ಪಶ್ಚಿಮ ಹಾಗೂ ಪೂರ್ವ ಘಟ್ಟಗಳು ದಕ್ಷಿಣದಲ್ಲಿ ಬಂದು ಕೂಡುವಲ್ಲಿಯೇ ನೀಲಗಿರಿ ಪರ್ವತವಿದೆ. ಆ ಪರ್ವತದ ರಮಣೀಯತೆಯನ್ನು ಕವಿಗಳೂ ಕಾದಂಬರಿಕಾರರೂ ಮನವಾರೆ ಹೊಗಳಿದ್ದಾರೆ. ದೂರಿಂದ ನೋಡುವವರಿಗೆ ನೀಲಿಯು ಬಣ್ಣ ಬಳೆದ ಗುಡ್ಡಗಳ ಸಾಲುಗಳೇ ಕಾಣುವದರಿಂದ ಆ ಪರ್ವತಕ್ಕೆ ನೀಲಗಿರಿ (ನೀಲ+ಗಿರಿ) ಎಂಬ ಹೆಸರು ಪ್ರಾಪ್ತವಾಗಿರಲು ಸಾಕು. ಅಂತಹ ರಮಣೀಯವಾದ ಪರ್ವತವು ಉದಕಮಂಡಲ ಪಟ್ಟಣವನ್ನು ತನ್ನ ತಲೆಯ ಮೇಲೆ ಹೊತ್ತುಕೊಂಡು ನಿಂತಂತಿದೆ. ಪರ್ವತವನ್ನು ಮೇಲಕ್ಕೇರುತ್ತ ನಡೆದಂತೆ ಸುಮಾರು ೬,೫೦೦ ಅಡಿ ಎತ್ತರದ ವರೆಗೆ ಎರಡೂ ಪಕ್ಕಗಳಲ್ಲಿ ಅಡಿಕೆ ಗಿಡಗಳ ವನಗಳೂ ಎತ್ತರವಾದ ಬಿದುರಿನ ಮೆಳೆಗಳೂ ಕಂಗೊಳಿಸುತ್ತಿವೆ. ಆಮೇಲೆ ಚಹ ಮತ್ತು ಕಾಫಿ ಗಿಡಗಳ ತೋಟಗಳೂ ನೀಲಗಿರಿ ಎಂಜೆ (Eucalyptus) ಯ ಮತ್ತು ಸಜಾತೀಯ ಗಿಡಗಳ ಹಳುವುಗಳೂ ಶೋಭಿಸುತ್ತಿವೆ. ಬೈಲು ಸೀಮೆಯ ಪ್ರವಾಸಿಕರು ಆ ಹಳುವುಗಳನ್ನು ನೋಡಿ ನೋಡಿ ಅಚ್ಚರಿಗೊಳ್ಳುತ್ತಾರೆ. ಜಣಜಣಕ್ಕೆ ಮಂದ ಮಾರುತನು ಇಕ್ಕೆಲಗಳಲ್ಲಿಯ ನೀಲಗಿರಿ ಎಂಜೆಯ ಗಿಡಗಳಿಂದ ಹೊರಸೂಸುವ ಸುಗಂಧವನ್ನು ತನ್ನ ಗೂಡ ತಂದು ಪ್ರಯಾಣಿಕರನ್ನು ಆ ಸುಗಂಧದಿಂದ ತಣಿಸುತ್ತಿರುವದುಂಟು. ಉದಕಮಂಡಲವು ನಾಲ್ಕು ಗುಡ್ಡಗಳಿಂದ ಸುತ್ತುವರಿಯಲ್ಪಟ್ಟಿದೆಯೆಂಬ ಮಾತನ್ನು ಮೇಲೆ ಹೇಳಿದೆಯಷ್ಟೆ. ಆ ಗುಡ್ಡಗಳು ಉದಕಮಂಡಲಕ್ಕೊಂದು ಹೆಚ್ಚಿನ ಮೆರುಗನ್ನು ತಂದುಕೊಟ್ಟಿವೆ. ಇವಲ್ಲದೆ ಮೂರು-ನಾಲ್ಕು ತಿಳಿನೀರಿನ ಸರೋವರಗಳಿವೆ, ಉದ್ಯಾನಗಳಿವೆ, ಹೂದೋಟಗಳಿವೆ, ಸಸ್ಯ ಶಾಸ್ತ್ರಕ್ಕೆ ಸಂಬಂಧಿಸಿದ ತೋಟ (Botanical Garden) ವೊಂದಿದೆ, ಎಡ-ಬಲ ಮಗ್ಗಲುಗಳಲ್ಲಿ ಸುಂದರವಾದ ಗಿಡಗಳ ಸಾಲುಗಳುಳ್ಳ ಉತ್ತಮ ಮಾರ್ಗಗಳಿವೆ. ಮೈಸೂರು, ಬಡೋದೆ, ಜೋಧಪುರ ಹಾಗೂ ನವಾನಗರ ಸಂಸ್ಥಾನಿಕರು ಬೇಸಿಗೆಯಲ್ಲಿರಲು ತಮ್ಮ ಸಲುವಾಗಿ ಕಟ್ಟಿಸಿಟ್ಟುಕೊಂಡ ಪ್ರೇಕ್ಷಣೀಯವಾದ ಅರಮನೆಗಳಿವೆ. ಅದರಂತೆ ಮದ್ರಾಸದ ಗವ್ಹರ್ನರರ ಸಲುವಾಗಿ ಕಟ್ಟಿದ ಸುಂದರವಾದ ರಾಜಭವನ (Government House) ವೊಂದಿದೆ. ಅದು ನಾಲ್ಕಂತಸ್ತಿನ ಇಮಾರತಿಯಿದೆ. ಅಚ್ಚರಿಯೆಂದರೆ, ಅದರ ಗೋಡೆಗಳೆಲ್ಲ ಸಾಗವಾನಿ ಕಟ್ಟಿಗೆಯಿಂದಲೇ ಕಟ್ಟಲ್ಪಟ್ಟಿವೆ. ಒಟ್ಟಿನಲ್ಲಿ, ನೋಡಲು ಬಂದ ಪ್ರವಾಸಿಕರು ಉದಕಮಂಡಲದ ನೈಜವಾದ ಚಲುವಿಕೆಯನ್ನೂ ಅದರ ಸುತ್ತಲು ಅವರಿಸಿಕೊಂಡಿದ್ದ

ನೈಸರ್ಗಿಕ ಸೌಂದರ್ಯವನ್ನೂ ನೋಡಿ ನೋಡಿ ಹಿರಿ ಹಿರಿ ಹಿಗ್ಗುವರು. ಆ ಕಾರಣದಿಂದಲೇ ಉದಕಮಂಡಲವು 'ಗಿರಿ ನಿವಾಸಗಳ ರಾಣಿ' (Queen of the Hill Stations) ಎಂದು ಕರೆಯಲ್ಪಡುತ್ತಲಿದೆ.

## ಸಂದರ್ಶಕರಿಗೆ ಅಧುನಿಕ ಸೌಕರ್ಯಗಳು

ಅಲ್ಲಿಗೆ ಹೋಗಬಯಸುವವರು ಕೊಯಿಮತ್ತೂರ ರೇಲ್ವೆ ಸ್ಟೇಶನ್‌ದಲ್ಲಿ 'ನೀಲಗಿರಿ ಎಕ್ಸಪ್ರೆಸ್' ಎಂಬ ಗಾಡಿಯಿಂದ ಹೊರಟು ಮೆಟ್ಟುಪಾಳಯಮ್ ರೇಲ್ವೆ ಸ್ಟೇಶನ್‌ದ ವರೆಗೆ ಹೋಗಬೇಕು. ಅಲ್ಲಿಂದ ಉದಕಮಂಡಲದ ವರೆಗೆ ಸುಮಾರು ೯೦ ಮೈಲುದ್ದದೊಂದು ಸಂಣ ರೇಲ್ವೆ ಶಾಖೆಯು ಒಡೆದಿದೆ. ದಿನಾಲು ಒಂದು ಗಾಡಿಯು ಅಲ್ಲಿಂದ ಉದಕಮಂಡಲಕ್ಕೆ ಹೋಗಿ ಅದೇ ಗಾಡಿಯು ಹೊರಳಿ ಪುನಃ ಅಲ್ಲಿಗೆ ಬರುತ್ತದೆ. ರೇಲ್ವೆ ಮಾರ್ಗದ ಹೊರತು ಅಲ್ಲಿಂದ ಉದಕಮಂಡಲಕ್ಕೆ ಹೋಗಲು ಸುಮಾರು ೩೫ ಮೈಲುದ್ದದೊಂದು ಲೈನ ರಸ್ತೆಯೂ ಇದೆ. ಅದರ ಮೇಲೆ ನಾಕಷ್ಟು ನೋಟರ ಬಸ್ಸುಗಳು ಓಡಾಡುತ್ತಿವೆ. ಉದಕಮಂಡಲದಲ್ಲಿ ಪ್ರವಾಸಿಕರಿಗೆ ಉಳಿದು ಕೊಳ್ಳಲು ಬಹಳಷ್ಟು ಖಾನಾವಳಿಗಳಿವೆ. ಆ ಖಾನಾವಳಿ ಗಳಲ್ಲಿ ಊಟ–ವಸತಿಗಳ ಸೌಕರ್ಯಗಳೆಲ್ಲ ಒದಗಿಸಲ್ಪಡುತ್ತಿವೆ. ಸಂದರ್ಶಕರು ಬಯಸಿದರೆ ಪ್ರೇಕ್ಷಣೀಯವಾದ ಸ್ಥಳಗಳನ್ನು ತೋರಿಸುವ ವ್ಯವಸ್ಥೆಯನ್ನು ಅವರು ಮಾಡಿ ಕೊಡುವರು. ರೇಲ್ವೆ ಸ್ಟೇಶನ್‌ದ ಪಕ್ಕದಲ್ಲಿ ಸಂದರ್ಶಕರಿಗೆ ಮಾರ್ಗದರ್ಶನ ಮಾಡುವದೊಂದು ಸಂಘವಿದೆ. ಆ ಸಂಘ ದವರು ಅಲ್ಲಿ ನೋಡತಕ್ಕಂತಹ ಸ್ಥಳಗಳನ್ನೆಲ್ಲ ತೋರಿಸಿ ಕೊಂಡು ಬರುವ ವ್ಯವಸ್ಥೆಯನ್ನು ಮಾಡುವರು. ಅಲ್ಲಿ ನೋಡತಕ್ಕಂತಹ ಸರೋವರಗಳೂ ತೋಟಗಳೂ ಇಮಾರತುಗಳೂ ಉದ್ಯಾನಗಳೂ ಶಿಖರಗಳೂ ಕೊಳ್ಳಗಳೂ ಬಹಳಷ್ಟಿವೆ. ಅವುಗಳನ್ನೆಲ್ಲ ಸಂದರ್ಶಿಸಿ ಕೂಲಂಕಷವಾಗಿ ಅಭ್ಯಸಿಸಲು ಏಸಿಲ್ಲೆಂದರೂ ಎಂಟು–ಹತ್ತು ದಿವಸಗಳು ಹಿಡಿಯಬಹುದು. ಆ ಪಟ್ಟಣವು ಇನ್ನೂ ಬೆಳೆಯುವದರಲ್ಲಿ ಇದೆ ಅಲ್ಲಿ ಒಂದು ಮುನಸಿಪಾಲಿಟಿಯಿದೆ. ಶಾಲೆಗಳು, ದವಾ ಖಾನೆಗಳು, ವಿದ್ಯುತ್ತು, ನಳಗಳು, ಸಿನೆಮಾ ಗೃಹಗಳು, ಉಪಹಾರ ಗೃಹಗಳು, ಕ್ಲಬ್ಬುಗಳು, ವಾಹನಗಳು ಮೊದ ಲಾದ ಅಧುನಿಕ ಜೀವನದ ಸೌಕರ್ಯಗಳೆಲ್ಲ ಅಲ್ಲಿ ಸಾಕ ಷ್ಟಿವೆ. ಹವೆಯು ಅತ್ಯುತ್ತಮವಾಗಿದೆ. ಮನರಂಜನದ ವಸ್ತು ಗಳ ವೈವಿಧ್ಯತೆಯಿದೆ.

## ಕೊನೆಯ ಮಾತು

ಸಾರಾಂಶವೇನಂದರೆ, ನೋಡಲು ಬಂದ ಪ್ರವಾಸಿಕ ರನ್ನು ಉದಕಮಂಡಲವು ಮುಗ್ಧರನ್ನಾಗಿಮಾಡದೆ ಬಿಡುವ ದಿಲ್ಲ. ಆದುದರಿಂದಲೇ ಭಾರತವನ್ನು ನೋಡಲು ಬಂದ ಪರದೇಶಗಳ ಸಂಚಾರಕರು ಉದಕಮಂಡಲವನ್ನು ಸಂದ ರ್ಶಿಸದೆ ಹೋಗುವದಿಲ್ಲ. ಸಂದರ್ಶಿಸಿದವರು ಅಲ್ಲಿ ಒಂದು ವಾರದ ವರೆಗೆ ಉಳಿದುಕೊಂಡು ನಿಸರ್ಗದೇವಿಯ ಸೌಂದರ್ಯವನ್ನು ಕಣ್ತುಂಬ ನೋಡಿ ಸಂತೋಷಭರಿತ ರಾಗಿ ತಮ್ಮ ದೇಶಕ್ಕೆ ಮರಳುವರು. "ಮಾಡರ್ನ ರಿವ್ಯೂ" ದಲ್ಲಿ ದೊರೆತ ವಿವರಗಳನ್ನು ಕೂಡಹಾಕಿ ಚಂದ ಕಾಣುವಂತೆ ಹೊಂದಿಸಿ ಈ ಪುಟ್ಟ ಲೇಖವೊಂದನ್ನು ಬರೆಯಲಾಗಿದೆ.


## ಪ್ರಕಟನೆ

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡದಲ್ಲಿ ಹಿಂದೆ ನಡೆದ ಹಿಂದೀ ಅಲ್ಪಾವಧಿ ತರಬೇತಿ ವರ್ಗಗಳಲ್ಲಿ ಪಾಸಾದವರ ಪ್ರಮಾಣಪತ್ರಗಳನ್ನು ಅವರವರ ಸ್ಕೂಲಬೋರ್ಡುಗಳಿಗೆ ಕಳಿಸಿ ಬಹಳ ದಿನಗಳಾ ದವು. ಸಂಬಂಧಿಸಿದ ಶಿಕ್ಷಕ-ಶಿಕ್ಷಿಕೆಯರು ತಮ್ಮ ಪ್ರಮಾಣಪತ್ರಗಳನ್ನು ತಮ್ಮ ಸ್ಕೂಲ ಬೋರ್ಡುಗಳಿಂದ ತರಿಸಿಕೊಳ್ಳಬೇಕಾಗಿ ವಿನಂತಿ.

**ಎಸ್. ಪಿ. ಪಾಟೀಲ**

ಪ್ರಿನ್ಸಿಪಾಲ


## ವಿನಂತಿ.

**ಲೇಖಕರಲ್ಲಿ:—** ಸರಿಯಾಗಿ ಓದಲಿಕ್ಕೆ ಬರು ವಂತೆ ಸ್ಪಷ್ಟವಾಗಿ ಬರೆದು ಲೇಖನಗಳನ್ನು ಕಳುಹಿಸ ಬೇಕು. ಕಾಗದದ ಒಂದೇ ಮಗ್ಗಲು ಬರೆದರೆ ಒಳಿತು.

**ಚಂದಾದಾರರಲ್ಲಿ:—** ಪ್ರತಿ ತಿಂಗಳು ೧೫ನೆಯ ದಿನಾಂಕದ ನಂತರ ೧–೨ ದಿನಗಳಲ್ಲಿ ಜೀವನ ಶಿಕ್ಷಣವು ತಮಗೆ ಮುಟ್ಟಲೇಬೇಕು. ಮುಟ್ಟದಿದ್ದರೆ ಸಂಬಂಧಿಸಿದ ಅಂಚೆ ಮನೆಯಲ್ಲಿ ವಿಚಾರಿಸಿರಿ. **ಪ್ರಧಾನ ಸಂಪಾದಕರು**

### ಮಕ್ಕಳ ಮಾರ್ಗದರ್ಶಿಗರಾದ

# ಗುರುಗಳ ಚಾರಿತ್ರ್ಯ ಹೇಗಿರಬೇಕು ?

**ಲೇಖಕರು: ಶ್ರೀ ಈಶ್ವರಚಂದ್ರ ಚಿಂತಾಮಣಿ**, ಮುಖ್ಯ ಗುರುಗಳು, ಜೀವನ ಶಿಕ್ಷಣ ಶಾಲೆ, ಜೈನಾಪೂರ (ವಿಜಾಪೂರ)

"ಮಕ್ಕಳ ಮನಸು ಮಡಿಮಾಡಿದ ಬಿಳಿಯ ಬಟ್ಟೆಯ ಹಾಗೆ" ಎಂದು ಮಹಾತ್ಮರ ಅನುಭವ ವಾಣಿ. ಸತ್ಯವನ್ನೇ ಎತ್ತಿ ತೋರಿಸಿದೆ. ಇಂಥ ಸ್ವಚ್ಛ ಮನಸಿನ ಈ ಮುದ್ದು ಮಕ್ಕಳಲ್ಲಿ ಕಂಡುಬರುವ–ನಾವಿಂದು ಬಹುಕಡೆಯಲ್ಲಿ ಕಾಣುತ್ತಿರುವ, ಅವಿಧೇಯತೆ, ಒರಟುತನ, ಜಿಗುಪ್ಸೆ, ಅಸತ್ಯ ಮಾತಾಡುವುದು ಮುಂತಾದ ಸಲ್ಲದ ಗುಣಗಳನ್ನು ಯಾರು ಕಲಿಸಿದರು ? ಅವರ ಸುತ್ತಲಿನ ವಾತಾವರಣ ದಿಂದ, ಅವರ ಕಣ್ಮುಂದೆ ಕಾಣುವ–ನಡೆಯುವ ಘಟನೆ–ಮಾತುಕತೆ–ಕೃತಿಗಳಿಂದ ಅವರು ನೋಡಿ ಕಲಿಯುತ್ತಾರೆಂದು ನಾವೆಲ್ಲರೂ ಒಪ್ಪುತ್ತೇವೆ.

ಮನೆಯೆ ಮೊದಲನೆಯ ಪಾಠಶಾಲೆಯಾಗಿ ಜನನಿ–ಜನಕರೆ ಮಕ್ಕಳ ಮೊದಲ ಗುರುಗಳಾಗಿ ಮಕ್ಕಳನ್ನು ಮೇಲಿನ ಗುಣಗಳ ಜಾಲದಲ್ಲಿಂದ ಪಾರುಮಾಡಲು ಅಸಮರ್ಥರಾಗಿರುತ್ತಾರೆ. ಅಶಿಕ್ಷಿತತನ ಮನೆಮಾಡಿಕೊಂಡಿರುವ ನಮ್ಮ ದೇಶದಲ್ಲಿ ಜನನಿ–ಜನಕರಿಂದ ಯೋಗ್ಯ ಪಾಠ ಕಲಿತು, ಶಾಲೆಯಲ್ಲಿ ಕಾಲಿಡುವ ಮಕ್ಕಳು ಸಾವಿರಕ್ಕೊಬ್ಬರಿಲ್ಲವೆಂದರೆ ತಪ್ಪಾಗಲಾರದು. ಈ ನಮ್ಮ ಮಕ್ಕಳ ಪಾಲಕರು ಸುಶಿಕ್ಷಿತರಾಗದ್ದ ಹೊರತು ಇಲ್ಲವೆ ತಮ್ಮ ಪಾಲಿನ ಕರ್ತವ್ಯ ಅರಿಯದ ಹೊರತು ಇಂದಿನ–ಈ ವರೆಗಿನ ಮಕ್ಕಳ ಅವಿಧೇಯತೆಯ ಸಮಸ್ಯೆಯು ಸಮಸ್ಯೆಯಾಗಿಯೇ ಉಳಿಯುತ್ತದೇನೋ.

ಕಳೆದ ಹತ್ತು ವರುಷಗಳ ನನ್ನ ಗುರುಜೀವನದಲ್ಲಿ ಬೇರೆಬೇರೆ ಊರುಗಳಲ್ಲಿ ವಿವಿಧ ಸಮಸ್ಯೆಗಳ ಬಾಲಕರನ್ನು ಕಂಡಿದ್ದೇನೆ; ಕಾಣುತ್ತ ಬಂದಿದ್ದೇನೆ; ಕಾಣುತ್ತಲೇ ಇದ್ದೇನೆ. ಮಕ್ಕಳು ಯಾವ ಸಮಸ್ಯೆಯವರೇ ಇರಲಿ, ಅವರು ಎಂಥ ಉಡಾಳರೇ ಇರಲಿ, ಗುರುಗಳಾದ ನಾವು ಅವರನ್ನು ಮಮತೆಯಿಂದ, ಆತ್ಮೀಯತೆಯಿಂದ–ವಾತ್ಸಲ್ಯ ದಿಂದ ಕಾಣುತ್ತ ಸರಿದಾರಿಗೆ ತರಲು ಪ್ರಯತ್ನಿಸಬೇಕು. ಮತ್ತು ಅವರ ನಡೆ–ನುಡಿಯು ಕೆಡಲು ಕಾರಣವೇನೆಂಬುದನ್ನು ಬಹು ಕುತೂಹಲದಿಂದ–ಅಭ್ಯಾಸದ ದೃಷ್ಟಿಯಿಂದ ಹುಡುಕಿ ನೋಡುತ್ತಲೇ ಸಾಗಿದ ನಾನು ಬಹು ಸಲ ನಮ್ಮ ತಪ್ಪುಗಳಿಗಾಗಿ ವ್ಯಥೆಪಟ್ಟಿದ್ದೇನೆ; ಪಾಲಕರ ತಪ್ಪುಗಳಿಗಾಗಿ ಬಹುಜನ ಎಲ್ಲ ಕಡೆಯ ಸಮಸ್ಯೆ ಇದಾದ್ದರಿಂದ–ಅನಿವಾರ್ಯವಾದುದರಿಂದ ಸಂತೋಷದಿಂದ ಸರಿಸಡಿಸಲು ಪಣತೊಟ್ಟಿದ್ದೇನೆ. ಮಕ್ಕಳ ಸಮಸ್ಯೆ ಸರಿಪಡದಿದ್ದರೆ ಜ್ಞಾನದಾನದ ಪರಿಣಾಮವೂ ಸಮಸ್ಯೆಯಾಗಿಯೇ–ಅತೃಪ್ತಿಕರವಾಗಿ ಸಾಗುತ್ತದೆ.

ಶಾಲೆಯ ಎಡೆಬಿಡದ–ಸತತ ನಡೆಯುವ ವಿವಿಧ ಚಟುವಟಿಕೆಗಳು ಸುಖರೂಪದಿಂದ ಜರುಗಲಾರದ್ದಕ್ಕೆ ನಾವು ಮಕ್ಕಳನ್ನೇ ಕಾರಣರನ್ನಾಗಿ ಅನೇಕ ಸಲ ತೋರಿಸುವದುಂಟು. ಯೋಜನೆ ಸರಿಪೇರದ್ದಕ್ಕಾಗಿ, ಕಾರ್ಯ ಜಯಪ್ರದವಾಗದ್ದಕ್ಕಾಗಿ ಮಕ್ಕಳನ್ನೇ ತಪ್ಪುಗಾರರನ್ನಾಗಿ ನಿಲ್ಲಿಸುವ ನಮ್ಮ ಆಚರಣೆಯಲ್ಲಿ ಬಹು ಸಲ ತಪ್ಪುವದುಂಟು.

ಮಕ್ಕಳು ಎಂಥ ವಾತಾವರಣದಲ್ಲಿಯೇ ಬೆಳೆದು ಬಂದಿರಲಿ, ಅವರು ಗುರುವನ್ನು ಪರೀಕ್ಷಿಸಿ–ಪರಿಕಿಸಿ–ಪ್ರೀತಿಯಿಂದ–ಕುತೂಹಲದಿಂದ ಕಾಣುವಂತೆ ಬೇರೆ ಯಾರನ್ನೂ ನೋಡಲಾರರು. ಅವರ ಮನಸಿನ ಮೇಲೆ ಗುರುವಿನ ವ್ಯಕ್ತಿತ್ವ ಪರಿಣಾಮಕಾರಿಯಾಗಿ ಪರಿಣಮಿಸದ ಹೊರತು, ಗುರುವಿನ ನಡೆನುಡಿ, ಆಚಾರವಿಚಾರ, ಮಾತು–ಕೃತಿಗಳೆಲ್ಲ ವೇಷಭೂಷಣ ಸಹಿತ ಮಕ್ಕಳಿಗೆ ಮೆಚ್ಚುಗೆಯವಾಗದಿದ್ದರೆ ಅವರಲ್ಲಿ ಒರಟುತನ-ಅವಿಧೇಯತೆ ಬೆಳೆಯುತ್ತದೆ. ಇದು ಬಹುತರವಾಗಿ ಎಲ್ಲರ ಅನುಭವಕ್ಕೆ ಬಂದಿರಲು ಸಾಕು.

ಈ ಸಂದರ್ಭದಲ್ಲಿ ನಮ್ಮವೇ ಆದ ಅಂದರೆ ಗುರುಗಳ ಕೆಲವು ಕೆಟ್ಟ ಪ್ರವೃತ್ತಿ-ಗಳನ್ನು ವಿವರಿಸಿದಲ್ಲಿ–ಗುರುಗಳ ನಡೆನುಡಿಯ ಪರಿಣಾಮದಿಂದ ದಾರಿಗೆಟ್ಟ ಮಕ್ಕಳ ಸತ್ಯ ಚಿತ್ರಗಳನ್ನು ವಿವರಿಸಿದಲ್ಲಿ ಗುರುಕುಲದ್ರೋಹಿ ಎಂದು ಸಹೋದ್ಯೋಗಿಗಳು ಅನ್ನದಿರಲಾರರು. ಸ್ಪಷ್ಟವಾದಿಯಾದ ನಾನು, ಬಹು ನಮ್ರನಾಗಿ ಕೆಲವು ಕಂಡುಂಡ, ಪರಿಶೀಲಿಸಿ ಕಾಣುತ್ತ ಬಂದ ಸಮಸ್ಯೆ–ಪರಿಣಾಮಗಳನ್ನು ಇಲ್ಲಿ ಹೇಳದಿದ್ದರೆ ತಪ್ಪಾದೀತು.

(೧) ಒಕ್ಕಲಿಗರ ವರ್ಗದ ಬಾಲಕರೆಲ್ಲರು ತಮ್ಮ ಗುರುಗಳನ್ನು ಸಹಜವಾಗಿಯೇ ಟೀಕೆ ಮಾಡುತ್ತಿದ್ದರು. ನಾನು ಕೇಳಿ–ಕಂಡು ಅಚ್ಚರಿಗೊಂಡು ಮಕ್ಕಳ ಈ ವರ್ತನೆಯ ಹಿನ್ನೆಲೆಯನ್ನು ತಿಳಿದುಕೊಳ್ಳಲು ತಡವಾಗಲಿಲ್ಲ. ವರ್ಗದ ಬಾಲಕರ ಸಮ್ಮುಖದಲ್ಲಿಯೇ ಆ ಗುರುಗಳನ್ನು ತಪಾಸಣೆಗೆ ಬಂದ ಅಧಿಕಾರಿಗಳು ಅವರ ಸಂಗಡ ಸಾಲೆಯ ಮುಖ್ಯ ಗುರುಗಳು ಕೂಡಿಯೇ ಕಲಿಸಲು ಬರುವದಿಲ್ಲೆಂದು ಛೀಷಾಕಿದ್ದರು. ಅಭ್ಯಾಸದ ಬಲವಿಲ್ಲದ ವಾಸ ಆ ಗುರುಗಳಿಗೆ ಮಾರ್ಗದರ್ಶನಮಾಡದೆ ಬಾಲಕರ ಎದುರಿನಲ್ಲಿಯೇ ಹೀಯಾಳಿಸುವ ಹಿರಿಯರು ಮಕ್ಕಳನ್ನು ಅಡ್ಡದಾರಿಗೆಳೆದಂತಾಗಲಿಲ್ಲವೇ? ಇಂದು ಅನನುಭವಿಕರಾದ ಆ ಗುರುಗಳು ಅಭ್ಯಾಸ-ಪರಿಶ್ರಮಗಳಿಂದ ನಾಳೆಯಾದರೂ ಸಮರ್ಥರಾದಾರು! ಆದರೆ ಅವರ ಬಗ್ಗೆ ಮಕ್ಕಳಲ್ಲಿ ಒಮ್ಮೆ ಮೂಡಿದ ತಿರಸ್ಕಾರ ಭಾವನೆಯನ್ನು ಅಳಿಸುವದು ಅಷ್ಟೊಂದು ಸುಲಭವಲ್ಲ; ಅವರ ಆ ಗುಣ ಮುಂದೆ ಬೆಳೆಯುತ್ತದಲ್ಲದೆ ಅಳಿಯುವದು ಕಠಿಣ.

(೨) ಆ ಸಾಲೆಯಲ್ಲಿ ೮-೧೦ ಜನ ಗುರುಗಳಿದ್ದರು. ಎಲ್ಲ ರೀತಿಯಿಂದಲೂ ಮುಂದೆ ಬಿದ್ದ– ಪ್ರಗತಿಯ ಸಾಲಿ ಆದು ಅನ್ನುತ್ತಿದ್ದರು. ನಂತರ ಅಲ್ಲಿಯ ಮುಖ್ಯ ಗುರುಗಳಿಗೂ ಒಬ್ಬ ಶಾಸನಗುರುಗಳಿಗೂ ಅವೇಕೋ ನಾ ಹೆಚ್ಚು ನೀ ಹೆಚ್ಚು ಎಂಬ ಅಹಂಕಾರದ ತಿಕ್ಕಾಟದಿಂದ ವೈರ ಬೆಳೆಯಿತು. ಗುರುಗಳಲ್ಲಿ ಪಂಗಡವಾಗಿ ಮಕ್ಕಳಲ್ಲೂ ಎರಡು ಪಂಗಡಗಳಾಗಲು ಅನುವಾಯಿತು. ದಿನವೂ ಜಗಳ, ಒದರಾಟ, ಬೈಗುಳ ಮುಂತಾದ ಮತ್ತೊಬ್ಬರ ಟೀಕೆ ಎಲ್ಲವನ್ನೂ ದಿನವೂ ಕೇಳಿ, ಕಂಠಪಾಠಮಾಡಿದರು– ಮುದ್ದು ಮಕ್ಕಳು. ಅಭ್ಯಾಸ ಹೇಳಿಸಿಕೊಳ್ಳಬೇಕಾದ ಮಕ್ಕಳೇ ಮುಖ್ಯ ಗುರುಗಳ ಮೇಲೆ ಕೈಮಾಡಬಹುದಾದ ತರಬೇತುಯೊಂದಿದ್ದರು– ಗುರುಗಳಿಂದ. ಹಾಗಾ ಜಟಾಪಟಿಯಲ್ಲಿ, ಕಾಟುಕಾಟು ಜೀವಹಿಡಿದು, ಬದುಕುತ್ತಿರುವ ಆ ಸಾಲೆಯ ಹಿಂದಿನ ಸುಂದರ ಸ್ಥಿತಿ ಇನ್ನೆಂದು ಕಾಣಬೇಕಾಗುವದೋ ದೇವರೇ ಬಲ್ಲ. ಬೆಳೆಸುವದು, ಪ್ರಗತಿ ಸಾಧಿಸುವದು ಕಠಿಣ; ಕೆಡಿಸುವದು ಸುಲಭ. ಗುರುಗಳ ಒಳಜಗಳ, ಅಲ್ಪತನಗಳಿಂದ ಮಕ್ಕಳು ದಾರಿಗೆಡುತ್ತಿರುವುದು ನಿಂತಾಗಲೇ ನನ್ನ ಯೋಗ್ಯತೆ ಬೆಳೆಯುವದು. ಹೀಗಾಗಿಯೇ ನಾವಿಂದು ಎಲ್ಲರ ಅನಾದರಕ್ಕೆ ಕಾರಣರಾಗುತ್ತಿದ್ದೇವೆ. ಕೆಲವರ ತಪ್ಪು ಕುಲಕ್ಕೆ ಕೊಡಲಿಪೆಟ್ಟು ಬಾಕುತ್ತಿರುವದು ಸುಳ್ಳಲ್ಲ.

(೩) ಆದೇ ತಾನೇ ಆ ಹೊಸ ಊರಲ್ಲಿ ಕಾಲಿಟ್ಟ ನಾನು ವರ್ಗದಲ್ಲಿಯ ಮೂವತ್ತಾರು ಮಕ್ಕಳ ಪರಿಚಯವನ್ನು ಇನ್ನೂ ಮಾಡಿಕೊಳ್ಳುತ್ತಿದ್ದಂತೆ, ಬಹು ಚಾಣಾಕ್ಷನಾದ–ರೂಪವಂತ ಚಪಲತೆಯ ಹುಡುಗನ ವೈಖರಿಗೆ ಮರುಳಾಗಿಬಿಟ್ಟೆ. ನನ್ನ ವರ್ಗದ ಆ ಬಾಲಕನು ಮಹಾ ಮಾತುಗಾರ. ನನ್ನೆಲ್ಲ ಯೋಗಕ್ಷೇಮ ತಾನಾಗಿಯೇ ಬಹು ಆಸ್ಥೆಯಿಂದ ಕೇಳಹತ್ತಿದ. ಒಳಗೊಳಗೆ ಸಂಶಯದಿಂದ ಅವನನ್ನು ನಾನು ಹೆಚ್ಚು ತಿಳಿಯಲು ಸಲಿಗೆ ಬೆಳೆಸಲೇ ಬೇಕಾಯಿತು. ಅವನಿಗೆ ಅಭ್ಯಾಸವೆಂದರೆ ಬಲು ಬೇಸರ; ಕ್ರೀಡಾಪ್ರಿಯನವ. ಕೇಳದಿದ್ದರೂ ತನ್ನ ಬಳಗದ ತಾನು ನೋಡಿದ ಸ್ಥಳಗಳ–ಅವರಿವರ ಪರಿಚಯ ಸಹ ಬಣ್ಣಿಸಿ ಹೇಳುವುದರಲ್ಲಿ ಆ ಎಳೆತನದಲ್ಲಿಯೇ ನಿಸ್ಸೀಮನಾಗಿದ್ದ. ಒಂದು ದಿನ ನಾನು "ಯಾರಾದರೂ ಗೋದಿ ಕೊಡ್ತಿದ್ದರೆ ನಿಮ್ಮ ಮನೆಯಲ್ಲಿ ಕೇಳಿ ತಿಳಿಸಿರಿ; ಕೊಳ್ಳುತ್ತೇನೆ" ಎಂದು ಹೇಳಿದೆ. ಅಂದೇ ಸಂಜೆಗೆ ಆ ಚಪಲ ಬಾಲಕನು ಆರು ಸೇರು ಗೋದಿ ತಂದು ನನ್ನ ಕೋಣೆಯಲ್ಲಿಟ್ಟು "ಇವು ನಮ್ಮ ಅತ್ತಿಗೆ ಕೊಟ್ಟಗು; ನಿಮಗೆಂದು ೨ ಸೇರಿನಂತೆ ಕೊಟ್ಟಿದ್ದಾರೆ. ಈಗ ನಾಲ್ಕಾಣೆ ಕೊಡಿರಿ, ಉಳಿದ ಹಣ ನಾಳೆ ಕೊಡಿರಿ" ಎಂದನು. ಆಗ ನನಗೆ ಆ ಕಳ್ಳನ ಗುಟ್ಟು ಗೊತ್ತಾದರೂ ಪೂರ್ಣ ನಂಬಿಗೆಯಾಗಲಿಲ್ಲ. ವರ್ಗದಲ್ಲಿ ಹೇಳಿದ್ದೇ ನನ್ನ ತಪ್ಪಾಯಿತೆಂದು ನೊಂದುಕೊಂಡೆ. ಮರು ದಿನ ಮೂರು ರೂಪಾಯಿ ಅವನ ಕೈಯಲ್ಲಿ ಕೊಟ್ಟು ಸಂಗಡ ಮತ್ತೊಬ್ಬ ಬಾಲಕನನ್ನು ಕಳಿಸಿದ್ದೆ. ನೇರವಾಗಿ ಮನೆಗೆ ಹೋಗದೆ ಜತೆ ಕಳಿಸಿದ ಬಾಲಕ (ಗೆಳೆಯ) ನಿಗೆ ಒಂದಾಣೆ ಕಮಿಶನ್ ಕೊಟ್ಟು ಅತ್ತಿಗೆಗೆ ಹಣ ಕೊಟ್ಟು ಬಂದೆನೆಂದು ಇಬ್ಬರೂ ಹೇಳಿದರು. ಮುಂದೆ ಎರಡು ದಿನಗಳ ನಂತರ ಅವನು ನನ್ನ ವರ್ಗದಲ್ಲಿಯ ಮೇಜಿನ 'ಡ್ರಾ' ದಲ್ಲಿ ಒಂದು ಡಝನ್ ಹಣ್ಣು ತಂದು ಇಟ್ಟಿದ್ದ. ನಾನು ಬಾಳೆಹಣ್ಣು ಪ್ರತಿದಿನ ಕೊಳ್ಳುತ್ತಿದ್ದುದನ್ನು ನೋಡಿದ್ದ ಆ ಭೂಪ; ಅಂತೂ ಗುರುವಿನ ಪ್ರಿಯ ವಸ್ತುವನ್ನು ಅರಿತುಕೊಂಡಿದ್ದ. ಖುರ್ಚಿಯ ಮೇಲೆ ಕುಳಿತು ಡ್ರಾದಲ್ಲಿ 'ಖಡು'ನಿಗಾಗಿ ಕೈಹಾಕಿದಾಗ ಹಣ್ಣಿನ ದರ್ಶನವಾಯಿತು. "ಇದೇನು ಯಾರಿಟ್ಟದ್ದಾರೆ?" ಎಂದು ನಾನು ಅಚ್ಚರಿಯಿಂದ ಅರ್ಧ ಸಿಡುಕಿನಿಂದ ಎಲ್ಲರಿಗೂ ಕೇಳಿದೆ. ಎಲ್ಲರೂ ಮೌನತಾಳಿದರು. ಆಗ ಆ ಬಾಲಕನು "ಗುರುಗಳೇ, ನಾನೇ ಇಟ್ಟಿದ್ದೇನೆ; ನಿಮಗೆ ಕೊಡಲು ನಮ್ಮ ತಂದೆಯವರು ಹೇಳಿದರು. ಯಾಕಂದರೆ ನೀವು ಬಾಳೆಹಣ್ಣಿನ

ಮೇಲೆ ಬಹಳ ಪ್ರೇಮವಂತೆ" ಅವನ ಈ ವಾಕ್‌ಸರಣಿ ಕೇಳಿ ನಾನು ಮುಗ್ಧನಾದೆ. ಅವರ ತಂದೆಯ ಮುಖ ಸಹ ನೋಡದ ಹೊಸಬನಾದ ನನಗೆ ಯಾರು ತಾನೆ ಕಳಿಸುತ್ತಾರೆ ಹಣ್ಣು ? ವರ್ಗದ ಮತ್ತೊಬ್ಬ ಸಭ್ಯ ಬಾಲಕನನ್ನು ಅವನ ತಂದೆಯವರನ್ನು ಕರೆತರಲು ಹೇಳಿದೆನು. " ನಮ್ಮ ಅಪ್ಪ ಊರಲ್ಲಿಲ್ಲ, ಅಲ್ಲರೀ .... ಕರೆಸಬೇಡಿರಿ ! " ಎಂದು ಚಪಲತೆ–ಅಂಜಿಕೆ ಒಟ್ಟಾಗಿ ತೋರಿಸಿದನಾಗ. ನಂತರ ಅವರ ತಂದೆಯವರ ನನ್ನ ಭೆಟ್ಟಿಯಲ್ಲಿ ಎಲ್ಲ ವಿದಿತವಾಯಿತು. ನಾನು ಕೊಂಡ ಗೋದಿ ಕಳುವಿನದಾಗಿತ್ತು! ಹಣ್ಣೂ ಸಹ ಅದೇ ಮಾದರಿಯದು! ಪಾಪ, ಆ ಬಾಲಕನ ಸಹೃದಯರಾದ ಪಾಲಕರು ಕಣ್ಣೀರು ಸುರಿಸುತ್ತ ಎಲ್ಲವನ್ನೂ ನನ್ನೆದುರು ತೋಡಿಕೊಂಡರು. ನಾನು ಬಹುಬಗೆಯಿಂದ ಪ್ರಯತ್ನಿಸಿದರೂ ಆ ಬಾಲಕನ ಚಟಗಳು ನಿಲ್ಲಲಿಲ್ಲ. ಕೊನೆಗೊಮ್ಮೆ ನನ್ನ ಪೆನ್ನನ್ನೇ ಅವನು ಎತ್ತಿದ ! ಸುಶೀಲ--ಸುಸಂಸ್ಕೃತ ಮನೆತನದಲ್ಲಿ ಹುಟ್ಟಿ ಬೆಳೆದ ಆ ಬಾಲಕನ ಪ್ರವೃತ್ತಿ ನನ್ನನ್ನು ಎಚ್ಚರಗೊಳಿಸಿತು. ಅಂದಿನಿಂದಲೇ ಮಕ್ಕಳ ಮನಸ್ಸನ್ನು ಅಭ್ಯಸಿಸಲು ನಾನು ಮೊದಲು ಮಾಡಿದ್ದು. ಕಳೆದ ವರ್ಷ ಅದೇ ಬಾಲಕನು ( ಈಗ ತುಂಬ ಬೆಳೆದಿದ್ದಾನೆ— ಉದ್ದಾಗಿ ದುಂಡಗೆ ) ನಗರದಲ್ಲಿ ದೂರಿನಿಂದಲೇ ಕೂಗುತ್ತ ಓಡಿ ಬಂದು ತಬ್ಬಿಕೊಂಡ. ವಾತ್ಸಲ್ಯದಿಂದ ನಾನೂ ಅಪ್ಪಿಕೊಂಡೆ. ಆದರೆ ಅವನ ಚಪಲತನ ಕಡಿಮೆಯಾಗಿಲ್ಲ. ನನ್ನ ದೃಷ್ಟಿಯಲ್ಲಿ 'ಬಗೆಹರಿಯದೆ ಉಳಿದ ಸಮಸ್ಯೆ'ಯಾಗಿದ್ದಾನೆ ಆ ತುಂಟ!

(೪) ಮಕ್ಕಳ ಕೂಡ ಯಾವ ರೀತಿಯಿಂದಲೂ ಗುಪ್ತ ವ್ಯವಹಾರ ಮಾಡಬಾರದು, ವೈಯಕ್ತಿಕ ಸೇವೆಗೆ ಅವರನ್ನು ತೊಡಗಿಸಿಕೊಳ್ಳಬಾರದೆಂದು ಮನಗಂಡ ನಾನು, ಇತರ ಸಂಕರು ( ಕೆಲವು ಕಡೆ ಕೇಳಿದಂತೆ ) ಅತ್ಯಂತ ಕೀಳು ಕೆಲಸಕ್ಕಾಗಿ–ಹೇಯನಡೆಯಲ್ಲಿ ಮಕ್ಕಳನ್ನು ಆಹುತಿ ತೆಗೆದುಕೊಳ್ಳುವ ದುಷ್ಟ ಪ್ರವೃತ್ತಿಯನ್ನು ಖಂಡಿಸಿ— ನಿಂದೆಗೆ ಗುರಿಯಾಗಿದ್ದೇನೆ. ಪ್ರೇಯಸಿಯರಿಗೆ ಪತ್ರ ಕೊಡಲು ಮಕ್ಕಳನ್ನು ಅಂಚೆಯ ಜವಾನನಂತೆ ಬಳಸುವ ಗುರುಗಳಿಗೆ ಏನೆನ್ನಬೇಕು ? ಎಳೆತನದಲ್ಲಿ ತಿಳಿದೋ ತಿಳಿಯದೆಯೋ ಗುರುಗಳ ಕೈಯಲ್ಲಿ ದುರ್ನಡತೆಯ ಪಾಠಗಳನ್ನು ಕಲಿತು, ಮುಂದೆ ಪ್ರೌಢಾವಸ್ಥೆಯಲ್ಲಿ ದುರ್ಮಾರ್ಗಕ್ಕೆ ಬಿದ್ದು ಪ್ರಾಯಶ್ಚಿತಹೊಂದಿದವರು ತಮ್ಮ ಗುರುಗಳನ್ನು ಮೂದಲಿಸುವ ಕತೆಗಳನ್ನು, ಹೇಳಿಕೆಗಳನ್ನು ಕವಿಯಾರೆ ಕೇಳುತ್ತಿರುವ ನಾವು, ನಮ್ಮ ನಡೆನುಡಿಗಳಿಂದ, ಶೀಲ ಚಾರಿತ್ರ್ಯಗಳಿಂದ ಆದರ್ಶರಾಗಿ– ಮಾದರಿಯ ಜೀವನವನ್ನು ನಾಗಿಸುವಂತಾಗಬೇಕು. ಮಕ್ಕಳ ಭಾವೀ ಜೀವನವನ್ನು, ಅವರ ಭವಿಷ್ಯವನ್ನು ಶುಚಿಗೊಳಿಸುವ ಬಹು ದೊಡ್ಡ ಹೊಣೆಯನ್ನು ನಾವಿಂದು ಹೊತ್ತುಕೊಂಡು ಕಾರ್ಯಪ್ರವೃತ್ತರಾಗಿದ್ದೇವೆ. ನಮ್ಮ ಈ ಪವಿತ್ರ ಸೇವೆಯಿಂದ ನಾಳಿನ ಆದರ್ಶ ನಾಗರಿಕರು ನಿರ್ಮಾಣರಾಗಿ, ಅವರಿಂದ ಸಮಾಜಕ್ಕೂ ತನ್ಮೂಲಕ ರಾಷ್ಟ್ರಕ್ಕೂ ಕಲ್ಯಾಣವಾಗುವಂತೆ ನಾವು ಸತ್ಸೇವೆ ಸಲ್ಲಿಸಬೇಕು. ಗುರುವಿನ ಸ್ಥಾನಮಾನ ಬಹು ದೊಡ್ಡದು. ಈ ಪವಿತ್ರ ಸ್ಥಾನದ ಗೌರವದ ಮಟ್ಟ ಕೆಳಗಿಳಿಯಲು ನಮ್ಮನಮ್ಮ ವೈಯಕ್ತಿಕ ಆಚಾರವೇ ಕಾರಣವಾಗಿದೆಯಲ್ಲದೆ ನಮ್ಮ ಬಡತನವಲ್ಲ; ನಮ್ಮಲ್ಲಿಯ ಅಪ್ರಾಮಾಣಿಕತೆಯೂ ನಮ್ಮ ದುರ್ಭಾಗ್ಯವೂ ಬೆಳೆದಂತೆ ನಾವೂ,– ನಮ್ಮನ್ನೇ ಅವಲಂಬಿಸಿ ಕುಳಿತ ರಾಷ್ಟ್ರದ ಸಜೀವ ಸಂಪತ್ತಾದ ಮಕ್ಕಳೂ ದಾರಿಗಾಣದೆ– ಗೊತ್ತುಗುರಿ ತಪ್ಪಿ ತತ್ತರಿಸಿ ಬೀಳುತ್ತೇವೆ

ಗುರುಗಳಾದ ನಮ್ಮಲ್ಲಿ ಇಂದು ಸತ್ಯವಾಗಿಯೂ ಯಾವ ವಿಷಯದಲ್ಲೂ ಆಳವಾದ ಅಭ್ಯಾಸವಿಲ್ಲ; ಓದುವ ಚಟವಿಲ್ಲ; ಓದಬೇಕೆಂಬ ಲವಲವಿಕೆ, ತಿಳಿದುಕೊಳ್ಳುವ ಇಚ್ಛೆ ನಮಗಿಲ್ಲದಿರುವಾಗ ನಾವು ಇಂದಿನ ಜಾಗ್ರತ ಜನತೆಯ ಮಧ್ಯದಲ್ಲಿ, ನಮ್ಮಿಂದ ಕೇಳಿ ತಿಳಿದುಕೊಳ್ಳಬಲ್ಲ ಸಮಾಜದಲ್ಲಿ ತಲೆ ಎತ್ತಿ ನಿಲ್ಲಲು, ಧೈರ್ಯದಿಂದ ಬದುಕಲು ಅಂಜುವಂತಾಗಿದೆ. ಅಲ್ಲದೆ " ಅಲ್ಪವಿದ್ಯಾ ಮಹಾಗರ್ವಿ " ಗಳಾದರೆ ಯಾರೂ ಸೊಪ್ಪು ಹಾಕುವಂತಿಲ್ಲ. ಇಂದಿನ ಸ್ವತಂತ್ರ–ವಿಚಾರಶೀಲ ದಿನಗಳಲ್ಲಿ ಎಲ್ಲ ರಂಗಗಳಲ್ಲಿ ವಿಚಾರ ಕ್ರಾಂತಿ ನಡೆದು, ಪ್ರತಿಯೊಬ್ಬರು ಸಮರ್ಥರಾಗಿ ಬದುಕಲು, ತಿಳುವಳಿವಂತರಾಗಲು ಶರವೇಗದಿಂದ ಸಾಗಿರುವ ಈ ಕಾಲದಲ್ಲಿ ಗುರುಗಳ ಪಾಂಡಿತ್ಯದ ಕೊರತೆ ಹೇಳ ತೀರದಷ್ಟು ಇದೆ. ಮಕ್ಕಳ ಪ್ರಶ್ನೆಗಳಿಗೆ ಉತ್ತರಕೊಡಲು ಅಸಮರ್ಥರಾಗಿ, ಬೆದರಿಸಿಬಿಡುವ ಸೋದರರನ್ನು ಕಂಡು ಮರುಗಿದ್ದೇನೆ.

ಇದೇ ನಮ್ಮ ಮೂಲ ಗುರುಕುಲ ಕೇಂದ್ರವಾದ ಧಾರವಾಡದ ಕನ್ನಡ ಗಂಡು ಮಕ್ಕಳ ಟ್ರೇನಿಂಗ ಕಾಲೇಜದಿಂದ ಎಂಥೆಂಥ ಪಂಡಿತರು ಹೊರಬಿದ್ದು, ನಾಡು

( ಉಳಿದ ಪುಟಕ್ಕೆ )

ಕೆಲ್ಯಾಣ ಕನ್ನಡ ಗುಡಿಯ ಕಾಣಿಕೆ

**ಸುವರ್ಣ ಸಂಧಿ!** **ಸಚಿತ್ರ ಗ್ರಂಥ!!** **ಸುಂದರ ಮುದ್ರಣ!!!**

# "ಶಿಕ್ಷಣ-ಶಿಕ್ಷಕ-ದರ್ಶನ"

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮನ ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ, ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಂಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ, ಅಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯರ ಬಣ್ಣ ಬಣ್ಣಗಳಲ್ಲಿ ಆಗ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ಬಹುಪ ಪುಟಗಳ ಅಮರ ಸಾಹಿತ್ಯ ಗ್ರಂಥ. ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.

ನಿ. ನಂ ಆಗಸ್ಟ್ ೧೫ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯಕ್ಷತೆಯಲ್ಲಿ ಪ್ರೊ. ಬಿ. ಟಿ. ಬಾಳನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ. ಪ್ರೋತ್ಸಾಹನೆ ಕೊಡಿರಿ.

**ಸಾದಾ ಪ್ರತಿ ೫ ರೂ.** ] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. [ **ಸುಂದರ ಪ್ರತಿ ೪ ರೂ.**

ವಿಳಾಸ :- ಶ್ರೀ ನಿಂಬಾಳ ಕೆಲ್ಯಾಣಪ್ಪ, ಪೋಸ್ಟ:— ತಿಕೋಟಾ, ಜಿಲ್ಲಾ:— ವಿಜಾಪುರ.

# ಸುಬೋಧ ಹಿಂದೀ ಕನ್ನಡ ವ್ಯಾಕರಣ

ಇದನ್ನು ಬರೆದವರು ಹಿಂದೀ ಕ್ಷೇತ್ರದಲ್ಲಿ ಹೆಸರು ಪಡೆದ ಶ್ರೀ ಗುರನಾಥ ಜೋಶಿ ಅವರು. ತಮ್ಮ ಆಳವಾದ ಅನುಭವದಿಂದ ಅಲ್ಲಲ್ಲಿ ಕನ್ನಡ ವ್ಯಾಕರಣಕ್ಕೆ ಹೋಲಿಸಿ ಸುಲಭ ಭಾಷೆಯಲ್ಲಿ ಸರ್ವರಿಗೂ ತಿಳಿಯುವಂತೆ ಬರೆದಿದ್ದಾರೆ ಇದರಲ್ಲಿ ಕೇವಲ ವ್ಯಾಕರಣದ ನಿಯಮಗಳು ಇರದೆ ಹಿಂದೀಯಿಂದ ಕನ್ನಡಕ್ಕೂ ಕನ್ನಡದಿಂದ ಹಿಂದಿಗೂ ಭಾಷಾಂತರ ಮಾಡುವದಕ್ಕೆ ವಾಕ್ಯಗಳೂ ಕೊಡಲ್ಪಟ್ಟಿವೆ. ಇದರಿಂದ ಕಲಿಯಬಯಸುವವರೆಲ್ಲರೂ ಸುಲಭವಾಗಿ ಹಿಂದಿಯನ್ನೂ ಕಲಿಯಬಹುದಾಗಿದೆ. ಈ ಪುಸ್ತಕವನ್ನು ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ, ಪ್ರಿನ್ಸಿಪಾಲ ವಿ. ಕೆ. ಗೋಕಾಕ ಅವರು ಸ್ವಾಗತಿಸಿದ್ದಾರೆ. ಇಂದೇ ಇದನ್ನು ತರಿಸಿಕೊಂಡು ಹಿಂದೀಯನ್ನು ಕಲಿಯಿರಿ ಒಂದುನೂರಾ ಹನ್ನೆರಡು ಪುಟಗಳು! ಬೆಲೆ ಕೇವಲ ೧೪ ಆಣೆ. ವ್ಯಾಪಾರಸ್ಥರಿಗೆ ಯೋಗ್ಯ ಕಮಿಸನ್ನು !

ಕೆಳಗಿನ ಪತ್ತೆಗೆ ಬರೆಯಿರಿ.

**ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ.**

# ಪಿ. ಟಿ. ಸಿ. ಪರೀಕ್ಷೆ ೧೯೫೯, ಧಾರವಾಡ ವಿಭಾಗ

## ಲೇಖಿ ಪರೀಕ್ಷೆಯ ವೇಳಾಪತ್ರಿಕೆ

| ವಾರ | ದಿನಾಂಕ | ವೇಳೆ | | ವಿಷಯ | |
|---|---|---|---|---|---|
| | | ಯಿಂದ | ವರೆಗೆ | | |
| ಬುಧವಾರ | ೨೨-೪-೫೯ | ಮುಂ. | ೮ ರಿಂದ ೧೧ ವರೆಗೆ | ಶಿಕ್ಷಣ ಶಾಸ್ತ್ರ (ಹೊಸ ಕ್ರಮ) | ಶಿಕ್ಷಣ ತತ್ವ (ಹಳೇ ಕ್ರಮ) |
| | | ಮ. | ೩ ರಿಂದ ೫ ವರೆಗೆ | ಸಾಮಾನ್ಯ ವಿಜ್ಞಾನ " | ವಿಜ್ಞಾನ " |
| ಗುರುವಾರ | ೨೩-೪-೫೯ | ಮುಂ. | ೮ ರಿಂದ ೧೦ ವರೆಗೆ | ಸಾಮಾನ್ಯ ಗಣಿತ " | ಗಣಿತ ಕಾಗದ ೧ " |
| | | ಮ. | ೩ ರಿಂದ ೫ ವರೆಗೆ | ಪ್ರಾ. ಭಾಷಾ ಕಾಗದ ೧ " | ಭಾಷಾ ಕಾಗದ ೧ " |
| ಶುಕ್ರವಾರ | ೨೪-೪-೫೯ | ಮುಂ. | ೮ ರಿಂದ ೧೧ ವರೆಗೆ | ಮೂಲೋದ್ಯೋಗ " | ಮೂಲೋದ್ಯೋಗ " |
| | | ಮ. | ೩ ರಿಂದ ೫ ವರೆಗೆ | ಪ್ರಾ. ಭಾಷಾ ಕಾಗದ ೨ " | ಭಾಷಾ ಕಾಗದ ೨ " |
| ಸೋಮವಾರ | ೨೭-೪-೫೯ | ಮುಂ. | ೮ ರಿಂದ ೧೦ ವರೆಗೆ | ಶಾಲಾ ಆಡಳಿತೆ ಸಂಘಟನೆ " | ಗಣಿತ ೨ " |
| | | ಮ. | ೩ ರಿಂದ ೫ ವರೆಗೆ | ಶಿಕ್ಷಣಕಲೆಯ ವಿಧಾನಗಳು " | ಶಿಕ್ಷಣ ತತ್ವ ೨ " |
| ಮಂಗಳವಾರ | ೨೮-೪-೫೯ | ಮುಂ. | ೮ ರಿಂದ ೧೦ ವರೆಗೆ | ಸಾಮಾಜಿಕ ಶಾಸ್ತ್ರ " | ಇತಿಹಾಸ-ಭೂಗೋಲ " ೮ ರಿಂದ ೧೧ ವರೆಗೆ |
| | | ಮ. | ೩ ರಿಂದ ೫ ವರೆಗೆ | ಹಿಂದೀ (ಹೊಸ ಹಾಗು ಹಳೇ ಎರಡೂ ಕ್ರಮಗಳು) | |
| ಬುಧವಾರ | ೨೯-೪-೫೯ | ಮುಂ. | ೮ ರಿಂದ ೧೦ ವರೆಗೆ | ಪ್ರಾದೇಶಿಕ ಭಾಷಾ ಕಾಗದ ಉರ್ದು ಉಮೇದುವಾರರಿಗೆ | |

ಹಳೇ ಕ್ರಮವೆಂದರೆ, ಎಸ್. ಎಸ್. ಸಿ. ಉಮೇದವಾರರಿಗೆ ಮಾತ್ರ.

**ಎಸ್. ಪಿ. ಪಾಟೀಲ**
ಪ್ರಿನ್ಸಿಪಾಲ್, ಗಂ. ಸ. ಟ್ರೇ. ಕಾ., ಧಾರವಾಡ
ಪಿ. ಟಿ. ಸಿ. ಪರೀಕ್ಷೆ ೧೯೫೯, ಅಧ್ಯಕ್ಷರು

Regd. No. B. 5375


ಶ್ರೀ ಅರವಿಂದ ಪ್ರಭಾವಿತೆಯೂ ಶ್ರೀ ತಾಯಿಯವರ ಪ್ರಾಸಾದಿಕತೆಯೂ ಒಂದೆಡೆಗೆ ತೋರುವ ಪವಿತ್ರ ಸಾಹಿತ್ಯದಿಂದ

## ವಾಚನಾಲಯದ ಬೆಲೆ ಹೆಚ್ಚಿಸಬೇಡವೇ ?

**ಹಾಗಿದ್ದರೆ, ಕೆಳಗೆ ಕಾಣಿಸಿದ ಪುಸ್ತಕಗಳನ್ನು ತರಿಸಿಕೊಳ್ಳಿರಿ.**

| | | | |
|---|---|---|---|
| ೧. | ನನ್ನನಲ್ಲ ( ಅಂತರ್ಮುಖಗೊಳಿಸುವ ದಿ. ಮಧುರಚೆನ್ನರ ಸಮಗ್ರ ಕವನ ಸಂಗ್ರಹ | .... | ೧–೧೨– ೦ |
| ೨. | ಆತ್ಮಸಂಶೋಧನ ( ದಿ. ಮಧುರಚೆನ್ನರ ಜೀವನದ ಕಲಶಪ್ರಾಯದ ಪ್ರಾಂಜಲ ಸಾಹಿತ್ಯ ) | .... | ೧– ೮– ೦ |
| ೩. | ಪವಿತ್ರ ಜೀವನ ( ಹೊಸಕಾಲದ ಋಷಿ ಟಾಲಸ್ಟಾಯರ ಕಥಾಸಂಕಲನ ) | .... | ೧– ೨– ೦ |
| ೪. | ಸುಂದರ ಕಥೆಗಳು ( ಮಕ್ಕಳಿಗೂ ಮಕ್ಕಳಂಥವರಿಗೂ ಶ್ರೀ ತಾಯಿಯವರು ಹೇಳಿದುವು ) | .... | ೧– ೪– ೦ |
| ೫. | ಶ್ರೀ ಅರವಿಂದರು ( ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ ) | .... | ೧– ೮– ೦ |
| ೬. | ಶ್ರೀ ಅರವಿಂದರ ಪತ್ರಗಳು ( ಪೂರ್ಣಜೀವನದ ಸಿರಿಮೊಳಕೆ ) | | ೦– ೮– ೦ |
| ೭. | ಸ್ವರ್ಗದೋಲೆಗಳು ( ಕನ್ನಡಿಗರ ಕೈಗೆ ಬಂದ ಸಾಂಸ್ಕೃತಿಕ ಕನ್ನಡಿ ) | .... | ೧– ೮– ೦ |
| ೮. | ಮುಗಿಲ ಜೇನು ( ಮಿಂಚಿನ ಶಲಾಖೆಯಂಥ ಕವನ ಸಂಕಲನ ) | .... | ೧– ೮– ೦ |
| ೯. | ಸಪ್ತಪದಿ (ವಿದ್ಯಾರ್ಥಿಗಳ ಮೆಚ್ಚಿಕೆಯ ಏಕಾಂಕಗಳು ) | .... | ೧– ೪– ೦ |
| ೧೦. | ಭಾರತದ ಭವ್ಯಸಿದ್ಧತೆ ( ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ ) | .... | ೧– ೦– ೦ |
| ೧೧. | ಬೆಟ್ಟದ ಹೊಳೆ ( ಜೀವನ ಪ್ರಚೋದಕವಾದ ಕಾದಂಬರಿ ) | .... | ೧– ೪– ೦ |
| ೧೨. | ಗರತಿಯ ಬಾಳು ( ಹೆಣ್ಣಿನ ಮಾಯೆಯಲ್ಲಿ ಕಪಿಲ ಸಿದ್ಧಮಲ್ಲಿಕಾರ್ಜುನ ) | .... | ೧– ೪– ೦ |
| ೧೩. | ಬಾಳಬಟ್ಟೆ ( ಆಧುನಿಕ ಬಾಳಿನ ಬಂಡಾಟಕ್ಕೆ ಚಿಕಿತ್ಸೆ ) | .... | ೧– ೮– ೦ |
| ೧೪. | ಪೂಜಾ ( ಅತೀಂದ್ರಿಯ ಜಾಗೃತಿಯ ಮಿಸುಕು ) | .... | ೦–೧೨– ೦ |
| ೧೫. | ಜೀವನ ದೃಷ್ಟಿ ( ಭವ್ಯ ಬದುಕಿನ ಬೊಕ್ಕಸ ) | .... | ೧– ೨– ೦ |
| ೧೬. | ಕನ್ನಡ ಕುಲದೀಪ ಬಸವಣ್ಣ ( ಹಿಡಿದರೆ ಹಿಡಿಕೆಯಲ್ಲಿ ಬಿಟ್ಟನೆ ಮನೆತುಂಬ ) | .... | ೧– ೦– ೦ |

ಕನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯ ಬೇಕಾದರೆ ಬರೆಯಿರಿ. ಮೇಲೆ ಕಾಣಿಸಿದ ಪುಸ್ತಕಗಳನ್ನೆಲ್ಲ ತರಿಸಿಕೊಂಡಲ್ಲಿ ಅಂಚೆವೆಚ್ಚ ನಾವೇ ವಹಿಸುವೆವು.

**ಶ್ರೀ ಅರವಿಂದ ಗ್ರಂಥಾಲಯ** ಪೋ:— **ಚಡಚಣ** ಜಿ. ವಿಜಾಪು

---

## ' ಬೇವರಾಟ '

ಶ್ರೀ 'ಜೈರಾಮು ಸುತರ' ಕಾದಂಬರಿ ೭೫ ನ.ಪೈ.

## ' ಸಿವಳ್ಳಿ ಸಿಂಗ್ಲೀಕ '

ಎನ್. ಎಸ್. ರಾಮಸ್ವಾಮಿಯವರ ಹಾಸ್ಯನಾಟಕ ೭೫ ನ. ಪೈ

- ಕೇವಲ ೫ ರೂಪಾಯಿ [ಅಂಚೆಸೇರಿ] ವಾರ್ಷಿಕ ಚಂದಾ ಹಣದಲ್ಲಿ ೨೬ನೆಯ ಮಾಲೆಯ ೨೫–೩೦ನೆಯ ಕುಸುಮ ಪಡೆಯಿರಿ.
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಕೃತಿಗಳು ಲಂಠಾ ಪುಟಗಳಲ್ಲಿ.
- ಏಪ್ರೆಲದಿಂದ ಏಪ್ರೆಲ್ಕ್ಕೆ ಒಂದು ವರುಷ
- ಬಿಡಿ ಕುಸುಮ ಚಂದಾದಾರರಿಗೆ ¾ ಜೆಲೆಯಲ್ಲಿ [ಅಂಚೆಖರ್ಚೆ
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಇಂದೇ ಚಂದಾಹಣ ಕಳಿಸಿ ತಮ್ಮದೇ ಆದ ಶಿಕ್ಷಕರ ಬಳಗವು ಬೆಳೆವಂತೆ ನೆರವಾಗಿರಿ. ಈ ಅತ್ಯಲ್ಪಋಣ ತಮ್ಮ ಶಿಕ್ಷಕ ಮಿತ್ರ ಏಳ್ಗೆಗೆ ಮೀಸಲು. ಚಂದಾದಾರರ ಹೆಸರು ಪುಸ್ತಕದಲ್ಲಿ ಪ್ರಕಟಿಸುವದರಿಂದ ಪೂರ್ತಿ ಹೆಸರು – ವಿಳಾಸ ಬರೆಯಬೇಕು.
- ★ **ನಾವು ನಮ್ಮವರು—** ಪ್ರಾಥಮಿಕ [ ೧ರಿಂದ ೭ ವರ್ಗಗಳ ಶಾಲೆಯ ] ಶಿಕ್ಷಕರ ಕಥೆ ಕವನಗಳನ್ನು ಆಯಾ ಲೇಖಕರ ಫೋಟೊ ಪರಿಚಯಗಳೊಂದಿಗೆ ಹೊರಡಿಸುವ ಪುಸ್ತಕ. ಕೃತಿಕಳಿಸುವ ಶಿಕ್ಷಕರು ವಿವರವಾದ ಪ್ರಕಟಣೆಗೆ ಬರೆಯಬೇಕು. ಪೂರೈಸಲಾಗುವದು.

**ಈಶ್ವರಚಂದ್ರ ಚಿಂತಾಮಣಿಯವರ** **ಪಾಪಪುಣ್ಯ** ಮೂರಂಕಿನ ನಾಟಕ **ಬೆಲೆ ೧=೫೦**

( ಚಂದಾದಾರರಿಗೆ ೧=೪೦ ನ.ಪೈ. ಅಂಚೆಸೇರಿ. ಕೆಲವೇ ಪ್ರತಿ ಉಳಿದಿವೆ )

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**


---

Printed by Shri S. F. Kattimani, at Manohar Power Printing Press, Hubli. Edited and Published by Sjts. S. P. Patil, B. M. Shintri, S. R. Tatti & Smti. P. A. Bhaskar, at the Kannada Jeevan Shikshan Office, Govt. Training College for Men, Dharwar.